
ವಿದ್ಯಾ ಭಂಡಾರ



ಪರವಿದ್ಯಾ ಪ್ರಕಾಶನ
ಶಮ್ಯಾಪ್ರಾಸ, ಮೂಡುಸಗ್ರಿ, ಉಡುಪಿ

ವಿದ್ಯಾಭಂಡಾರ

[ಶ್ರೀ ವಿದ್ಯಾಮಾನ್ಯತೀರ್ಥರ ನೂರು ಚಿಂತನಗಳ ಸಂಗ್ರಹ]

ಸಂಪಾದನ – ಸಂಕಲನ

ಸಗ್ರಿ ರಾಘವೇಂದ್ರ ಉಪಾಧ್ಯಾಯ

ವಿದ್ಯಾಮಾನ್ಯ ಪ್ರಕಾಶನ

ಪರ್ಯಾಯ ಪಲಿಮಾರು ಹೃಷೀಕೇಶ ಮಠ, ಉಡುಪಿ

ಮತ್ತು

ಪರವಿದ್ಯಾ ಪ್ರಕಾಶನ

ಶಮ್ಯಾಪ್ರಾಸ, ಮೂಡುಸಗ್ರಿ, ಉಡುಪಿ

ವಿದ್ಯಾಭಂಡಾರ – ಪಲಿಮಾರು ಭಂಡಾರಕೇರಿ ಮಠಾಧೀಶರಾಗಿದ್ದ ಶ್ರೀ ವಿದ್ಯಾಮಾನ್ಯ ತೀರ್ಥರ ನೂರು ಚಿಂತನೆಗಳ ಸಂಗ್ರಹ; ಸಂಪಾದನ ಮತ್ತು ಸಂಕಲನ– ಸಗ್ರಿ ರಾಘವೇಂದ್ರ ಉಪಾಧ್ಯಾಯ

ಪ್ರಕಾಶನ : **ವಿದ್ಯಾಮಾನ್ಯ ಪ್ರಕಾಶನ**
ಪರ್ಯಾಯ ಪಲಿಮಾರು ಮಠ, ಉಡುಪಿ
ಮತ್ತು
ಪರವಿದ್ಯಾ ಪ್ರಕಾಶನ
'ಶಮ್ಯಾಪ್ರಾಸ'
ಮೂಡು ಸಗ್ರಿ, ಉಡುಪಿ.

ಪ್ರಥಮ ಮುದ್ರಣ : 2002

ಅಕ್ಷರಸಂಯೋಜನೆ : 'ನವದುರ್ಗಾ ಲೇಸರ್‌ಟೆಕ್',
C/o. ಡಾ। ಕೆ. ಪದ್ಮನಾಭ ಕೇಕುಣ್ಣಾಯ, ಉಡುಪಿ–೨. [Ph.531159]

ಮುದ್ರಣ : ಹೊನ್ನಪದ್ಮ ಪ್ರಿಂಟರ್ಸ್,
ಉಡುಪಿ–೧.

ಸಂಪಾದಕೀಯ

ವಿದ್ಯಾಭಂಡಾರದ

ನೂರು ಚಿಂತನಾಭರಣಗಳು



'ನೀವು ವಿದ್ಯಾಭಂಡಾರವೇ ಆಗಿರುವಿರಿ. ಇನ್ನು ನಮ್ಮಿಂದ ಬೇರೇನನ್ನೂ ಅಪೇಕ್ಷಿಸಲಾರಿರಿ!'

ಉತ್ತರಾದಿಮಠಾಧೀಶರಾಗಿದ್ದ ಶ್ರೀ ಸತ್ಯಧ್ಯಾನತೀರ್ಥರು ಭಂಡಾರಕೇರಿ ಮಠಾಧಿಪತಿಗಳಾಗಿದ್ದ ಶ್ರೀ ವಿದ್ಯಾಮಾನ್ಯತೀರ್ಥರಿಗೆ ಹೃತ್ಪೂರ್ವಕವಾಗಿ ನೀಡಿದ್ದ 'ಅರ್ಹತಾಪತ್ರ' ಇದು.

ಶ್ರೀವಿದ್ಯಾಮಾನ್ಯತೀರ್ಥರು ನಾಲ್ಕು ವರ್ಷಗಳ ಅವಧಿಯಲ್ಲಿ ಶ್ರೀ ಸತ್ಯಧ್ಯಾನ ತೀರ್ಥರ ಜೊತೆಗೇ ಇದ್ದು ಅವರಿಂದ ಶ್ರೀಮನ್ನ್ಯಾಯಸುಧಾ ಮುಂತಾದ ಉದ್ಗ್ರಂಥಗಳ ಪಾಠ ಕೇಳಿ, ಅವರ ಜೊತೆಗೇ ಇದ್ದುಕೊಂಡು ನಡೆಸಿದ ಸುಧಾ ಪ್ರವಚನದ ಎರಡು ಮಂಗಲೋತ್ಸವಗಳನ್ನೂ ನಡೆಸಿ, ಮುಂದೆ ತಾವು ಸ್ವತಂತ್ರವಾಗಿ ಪಾಠಪ್ರವಚನಗಳನ್ನು ನಡೆಸಿಕೊಂಡಿರಬೇಕೆಂದು ಹೊರಟುನಿಂತ ಆ ಭಾವುಕತೆಯ ಕ್ಷಣದಲ್ಲಿ ಭಂಡಾರಕೇರಿ ಮಠದ ಬಡತನದ ಸ್ಥಿತಿಯನ್ನರಿತಿದ್ದ ಶ್ರೀ ಸತ್ಯಧ್ಯಾನತೀರ್ಥರು ತಮ್ಮ ಆರ್ಥಿಕ ನೆರವು ಏನಾದರೂ ಬೇಕೇ ಎಂದು ವಿಚಾರಿಸಿದಾಗ, "ನಮಗೆ ಬೇಕಾದದ್ದನ್ನೆಲ್ಲ ಈಗಾಗಲೇ ನೀಡಿರುವಿರಿ; ನಿಮ್ಮ ಅನುಗ್ರಹವೊಂದೇ ಸಾಕು" –ಎಂದು ಶ್ರೀ ವಿದ್ಯಾಮಾನ್ಯತೀರ್ಥರಿಂದ ಹೊರಟ ತೃಪ್ತಿಯ ಉದ್ಗಾರದಿಂದ ಸಂತೃಪ್ತರಾಗಿದ್ದ ಶ್ರೀ ಸತ್ಯಧ್ಯಾನತೀರ್ಥರು ಶಿಷ್ಯ ಶ್ರೀ

ವಿದ್ಯಾಮಾನ್ಯತೀರ್ಥರಿಗೆ ಹಾರ್ದಿಕ ಅಭಿನಂದನೆಯೊಂದಿಗೆ 'ವಿದ್ಯಾಭಂಡಾರ' ಎಂಬ ಬಿರುದನ್ನು ಅನುಗ್ರಹಿಸಿದ್ದರು.

ಶ್ರೀಪಾದರ ವೈಯಕ್ತಿಕ ಸಾಧನೆಯನ್ನು ಅನ್ವರ್ಥಕವಾಗಿ ಸಂಕೇತಿಸುವ ಅವರ ವಿದ್ಯಾಮಾನ್ಯತೀರ್ಥ ಎಂಬ ಹೆಸರಿನ ಏಕದೇಶವನ್ನೂ ಅವರ ಮಠಾಧಿಪತ್ಯವನ್ನು ಸಂಕೇತಿಸುವ 'ಭಂಡಾರಕೇರಿ ಮಠಾಧಿಪತಿ' ಎಂಬ ಉಪಾಧಿಯ ಏಕದೇಶವನ್ನೂ ಸಂಯೋಜಿಸಿ, ಹರಿಗುರುಗಳ ಪ್ರೇರಣಾನುಸಾರವಾಗಿ ಇದ್ದಕ್ಕಿದ್ದಂತೆ ಬಾಯಿ ಯಿಂದ ಹೊರಹೊಮ್ಮಿದ 'ವಿದ್ಯಾಭಂಡಾರ' ಎಂಬ ಬಿರುದು 'ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋಽನುಧಾವತಿ' -ಆದ್ಯ ಋಷಿಗಳ ಮಾತನ್ನು ಅರ್ಥವು ಹಿಂಬಾಲಿಸುವುದೆಂದ ಹೇಳಿಕೆಯಂತೆ ಆದ್ಯ ಋಷಿಗಳಲ್ಲೊಬ್ಬರನ್ನಾಗಿ ಪರಿಗಣಿಸಲು ಯೋಗ್ಯರಾದ ಶ್ರೀ ಸತ್ಯಧ್ಯಾನತೀರ್ಥರ ಆಶೀರ್ವಾದದ ಮಾತಾಗಿ ಹೊರಟಿದ್ದು ಅಕ್ಷರ ಅಕ್ಷರದಲ್ಲಿ ಅನ್ವರ್ಥಕತೆಯನ್ನು ಹೊಂದಿ ಮೆರೆದಿದೆ.

ಹೀಗೆ ಗುರುಗಳಿಂದ ಅಭಿಮಾನಪೂರ್ವಕವಾಗಿ, ಪ್ರೀತಿಪೂರ್ವಕವಾಗಿ ಅನುಗ್ರಹೀತವಾಗಿದ್ದ 'ವಿದ್ಯಾಭಂಡಾರ' ಎಂಬ ಬಿರುದಿಗೆ ಅನುಗುಣವಾಗಿ ಸದ್ವಿದ್ಯಾಕ್ಷೇತ್ರದಲ್ಲಿ ಮೆರೆದಿದ್ದ ಶ್ರೀ ವಿದ್ಯಾಮಾನ್ಯತೀರ್ಥರಿಂದ ವಿದ್ಯಾಕ್ಷೇತ್ರಕ್ಕೆ ಸಂದ ಅನೇಕ ಮುಖದ ಕೊಡುಗೆಗಳಲ್ಲಿ ಬಿಡಿಲೇಖನರೂಪದ ಕೊಡುಗೆ ಉಲ್ಲೇಖಾರ್ಹ. ತತ್ವವಾದ ಮುಂತಾದ ಪತ್ರಿಕೆಗಳಲ್ಲಿ ಅವರ ವಿಚಾರಧಾರೆಗೆ ಸಂಬಂಧಿಸುವ ಲೇಖನಗಳು ಪ್ರಕಟಗೊಂಡಿವೆ. ಅವುಗಳಲ್ಲಿ ಹೆಚ್ಚಿನವು ಸಂಗ್ರಹಾತ್ಮಕ ಲೇಖನಗಳಾದರೂ ಅವುಗಳಲ್ಲಿ ಪ್ರತಿಬಿಂಬಿತಗಳಾದ ಚಿಂತನೆಗಳು ಶ್ರೀಪಾದರದ್ದೇ. ಸತ್ಸಿದ್ಧಾಂತಕ್ಕೆ ಸಂಬಂಧಿಸುವ ಆ ಚಿಂತನೆಗಳಲ್ಲಿ ಕೆಲವು ಸಿದ್ಧಾಂತದ ಪ್ರಮೇಯಗಳ ಪರಿಚಯ ನೀಡುತ್ತಿದ್ದರೆ, ಮತ್ತೆ ಕೆಲವು ಪ್ರಮೇಯ ವಿಶೇಷಗಳ ರಹಸ್ಯವನ್ನು ಸ್ಪಷ್ಟಪಡಿಸುತ್ತಿವೆ. ಇನ್ನು ಕೆಲವು ಸಿದ್ಧಾಂತದ ದಾರ್ಢ್ಯಕ್ಕೆ ಪ್ರಯೋಜಕವಾಗಬಲ್ಲವು. ಹೀಗೆ ಯಾವುದಾದರೊಂದು ರೀತಿಯಿಂದಾದರೂ ಜಿಜ್ಞಾಸುಗಳಿಗೆ ಆಧ್ಯಾತ್ಮಿಕ ಸ್ಫೂರ್ತಿ ನೀಡಿ ಅವರ ಸಾಧನಾಮಯ ಬದುಕಿಗೆ ಮೆರುಗುನೀಡಬಲ್ಲವು. ಆದುದರಿಂದಲೇ ಆಧ್ಯಾತ್ಮಿಕ ಪರಿಭಾಷೆಯಲ್ಲಿ 'ಆಭರಣ' ಎಂದು ಪರಿಗಣಿಸಲರ್ಹವಾದುವು.

ಶ್ರೀ ವಿದ್ಯಾಮಾನ್ಯತೀರ್ಥರ ಭಾವುಕತನದ, ವೈಚಾರಿಕತೆಯ ಹೃದಯ ಕ್ಷೇತ್ರದಿಂದ ಆವಿರ್ಭೂತವಾದ 'ವಿದ್ಯಾಭಂಡಾರ'ದಲ್ಲಿಯ ಎಂಟು ನಿಧಿಗಳನ್ನು ಗುರುತಿಸಿ ಆಯಾ ನಿಧಿಗೆ ಸಂಬಂಧಿಸುವಂತೆ ಚಿಂತನಾಭರಣಗಳನ್ನು ಸಂಗ್ರಹಿಸಿ ಅಲಂಕರಿಸುವ ಕೆಲಸ ಇಲ್ಲಿ ನಡೆದಿದೆ.

ಭಗವಂತನಿಗೆ ಸಂಬಂಧಿಸುವ ಚಿಂತನಾಭರಣಗಳನ್ನು 'ದೇವರು' ಎಂಬ ನಿಧಿಯಲ್ಲೂ ಶ್ರೀ ಮಧ್ವಾಚಾರ್ಯರಿಗೆ ಸಂಬಂಧಿಸುವ ಚಿಂತನಾಭರಣಗಳನ್ನು 'ಮಧ್ವಗುರು' ಎಂಬ ನಿಧಿಯಲ್ಲೂ ಶ್ರೀ ಮಧ್ವಸಿದ್ಧಾಂತಕ್ಕೆ ಸಂಬಂಧಿಸುವ ಸೈದ್ಧಾಂತಿಕ ಚಿಂತನಾಭರಣಗಳನ್ನು 'ಸಿದ್ಧಾಂತ' ನಿಧಿಯಲ್ಲೂ ಸಚ್ಛಾಸ್ತ್ರದ

ಘಟಕಗಳ ಹಿರಿಮೆಗಳಿಗೆ, ಸಂದೇಶಗಳಿಗೆ ಸಂಬಂಧಿಸುವ ಚಿಂತನಾಭರಣಗಳನ್ನು 'ವಾಙ್ಮಯ' ಎಂಬ ನಿಧಿಯಲ್ಲೂ ಸದಾಚಾರಗಳಿಗೆ ಸಂಬಂಧಿಸುವ ಚಿಂತನಾಭರಣ ಗಳನ್ನು 'ಧರ್ಮ' ನಿಧಿಯಲ್ಲೂ ಸಚ್ಛಾಸ್ತ್ರದ ಮಾತುಗಳ ಅರ್ಥಸ್ವಾರಸ್ಯವನ್ನು ಅರ್ಥವೈಶಿಷ್ಟ್ಯವನ್ನು ಪರಿಚಯಿಸಿಕೊಡುವ ಚಿಂತನಾಭರಣಗಳನ್ನು 'ಅರ್ಥ ವಿವರಣೆ' ಎಂಬ ನಿಧಿಯಲ್ಲೂ ಸತ್ಸಿದ್ಧಾಂತದ ಪ್ರಮೇಯಗಳ ಪರಿಶೀಲನೆಯ ಕುರಿತಾದ ಚಿಂತನಾಭರಣಗಳನ್ನು 'ಸ್ವಮತವಿಮರ್ಶೆ' ಎಂಬ ನಿಧಿಯಲ್ಲೂ ಪರಮತಗಳ ಅಸ್ವಾರಸ್ಯವನ್ನು ಎತ್ತಿ ತೋರಿಸುವ ಚಿಂತನಾಭರಣಗಳನ್ನು 'ಪರಮತವಿಮರ್ಶೆ' ಎಂಬ ನಿಧಿಯಲ್ಲೂ ಪೋಣಿಸಿ, ಇಲ್ಲಿ ಆಯಾ ಆಭರಣಗಳ ಸೌಂದರ್ಯವನ್ನು ಸವಿಯಲು ಅನುಕೂಲವಾಗುವಂತೆ ಕ್ರೋಡೀಕರಿಸಲಾಗಿದೆ.

ಕೃತಜ್ಞತೆ:

* ಗುರುಗಳ ಚಿಂತನೆಗಳನ್ನು ಸಾರ್ಥಕ, ಜಿಜ್ಞಾಸುಗಳ ಹೃದಯಕ್ಷೇತ್ರಕ್ಕೆ ಚಿಮ್ಮಿಸುವ 'ವಿದ್ಯಾಭಂಡಾರ'ವನ್ನು ಪ್ರಕಟಿಸಿ ಅನುಗ್ರಹಿಸಿರುವ ಪರ್ಯಾಯ ಪೀಠಾರೂಢ ಶ್ರೀ ಶ್ರೀ ವಿದ್ಯಾಧೀಶತೀರ್ಥರಿಗೆ ಪ್ರಣಾಮಪೂರ್ವಕ ಕೃತಜ್ಞತೆ.
* ಗುರುಗಳ ಚಿಂತನೆಗಳನ್ನು ಸಂಗ್ರಹಿಸುವಲ್ಲಿ ನೆರವು ನೀಡಿದ ನನ್ನ ಚಿರಂಜೀವಿಗಳಾದ ಕುಮಾರಿ ರಾಧಿಕಾ ಹಾಗೂ ಆನಂದತೀರ್ಥ ಇವರಿಗೆ ಗುರುಗಳ ಆಶೀರ್ವಾದವಿಶೇಷ ಇರಲಿ.
* ಕವಚ ಪುಟಗಳಲ್ಲಿ 'ವಿದ್ಯಾಭಂಡಾರ'ಕ್ಕೆ ಮೆರುಗು ದೊರಕುವಂತೆ ಕಲಾ ರಸವನ್ನು ತುಂಬಿದ ಕಲಾವಿದ ಶ್ರೀ ಶೇಷಗಿರಿ ಇವರಿಗೆ,
* ಅಕ್ಷರಸಂಯೋಜನೆ ಮಾಡಿದ ಡಾ। ಪದ್ಮನಾಭ ಕೇಕುಣ್ಣಾಯ ಇವರಿಗೆ,
* ಮುದ್ರಣ ನಡೆಸಿದ ಹೊನ್ನಪದ್ಮ ಪ್ರಿಂಟರ್ಸ್, ಉಡುಪಿ ಇವರಿಗೆ

  ಹೃತ್ಪೂರ್ವಕ ಕೃತಜ್ಞತೆಗಳು.

ಚಿತ್ರಭಾನು, ವೈಶಾಖಶುದ್ಧ ಸಪ್ತಮಿ

ಸಗ್ರಿ ರಾಘವೇಂದ್ರ ಉಪಾಧ್ಯಾಯ
ರಮ್ಯಾಪ್ರಾಸ
ಮೂಡುಸಗ್ರಿ, ಉಡುಪಿ.

ಸರ್ವಜ್ಞಸಿಂಹಾಸನದಿಂದ......



'ವಿದ್ಯಾಮಾನ್ಯಭವನ' ಆಗಿರಿ

ಪರಮತಪಸ್ವಿಗಳಾಗಿದ್ದ, ಉತ್ತಮಜ್ಞಾನಿಗಳಾಗಿದ್ದ, ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರು ನಮ್ಮಿಂದ ಕಣ್ಮರೆಯಾಗಿ ಎರಡು ವರ್ಷಗಳೇ ಸಂದವು.

ಆದರೆ ಅವರ ದಿವ್ಯ ವ್ಯಕ್ತಿತ್ವದ ಛಾಪಾಗಲೀ ಸಂದೇಶಗಳ ಸ್ಫೂರ್ತಿಯಾಗಲೀ ಸದಾಚಾರಗಳ ನಿಷ್ಠೆಯಾಗಲೀ ಇನ್ನೂ ಮಾಸಿಲ್ಲ. ಯಾಕೆ, ಎಂದೆಂದೂ ಮಾಸದು ಕೂಡ. ಅಷ್ಟೊಂದು ಗಾಢವಾದ ಪ್ರಭಾವ ಅವರದ್ದು.

ನಮಗೆ ವಿದ್ಯಾಗುರುಗಳಾಗಿಯೂ ಆಶ್ರಮಗುರುಗಳಾಗಿಯೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ, ಸಾಧನಾಕ್ಷೇತ್ರದಲ್ಲಿ ಕೈಹಿಡಿದು ಮುನ್ನಡೆಸಿರುವ ಗುರುಗಳ ಉಪಕಾರ ವನ್ನು ನಾವೆಂದೂ ತೀರಿಸಲಾರೆವು. ಆದರೆ ಆ ನಿಟ್ಟಿನಲ್ಲಿ ನಾವು ಇಷ್ಟು ಮಾತ್ರ ಮಾಡಬಹುದಾಗಿದೆ– ನಮ್ಮನ್ನು ಆಧ್ಯಾತ್ಮಿಕವಾಗಿ, ಧಾರ್ಮಿಕವಾಗಿ ಮುನ್ನಡೆಸಿದ್ದ ಗುರುಗಳನ್ನು ಎಲ್ಲ ಸಜ್ಜನರ ಹೃದಯಮಂದಿರಗಳಲ್ಲಿ ಮುನ್ನಡೆಸುವುದು. ಅಂದರೆ ಗುರುಗಳ ವಾಙ್ಮಯೀಮೂರ್ತಿಯು ಅಲ್ಲೆಲ್ಲ ಪ್ರತಿಷ್ಠಿತವಾಗುವಂತೆ ಮಾಡುವುದು. ಬಿಡಿ ಲೇಖನರೂಪಗಳಲ್ಲಿ ಹೊರಹೊಮ್ಮಿದ್ದ ಅವರ ವಾಙ್ಮಯವನ್ನು ವಿಭಜಿಸಿ, ಸಂಗ್ರಹಿಸಿ ಪ್ರಕಟಿಸಿರುವ ಉದ್ದೇಶ ಸಜ್ಜನರ ಹೃದಯಮಂದಿರಗಳಲ್ಲಿ ಶ್ರೀಪಾದರ ವಾಙ್ಮಯಮೂರ್ತಿಯ ಪ್ರತಿಷ್ಠಾಪನೆಯೇ ಆಗಿದೆ.

ಸಹೃದಯ ಭಕ್ತರೇ, ಇದೋ ನೋಡಿ ಬ್ರಹ್ಮತೇಜಸ್ಸಿನ ಪುಂಜದಂತಿದ್ದ ನಮ್ಮ ಗುರುಗಳು. ಅವರಿಂದ ನೂರು ಮುಖಗಳಲ್ಲಿ ಹೊರಹೊಮ್ಮಿದ್ದ ಅವರ ವಿಚಾರಧಾರೆಯ ಚಿಂತನಮಂಥನಗಳಿಂದ ಅವರ 'ವಾಙ್ಮಯೀಮೂರ್ತಿ'ಯನ್ನು ನಿಮ್ಮ ನಿಮ್ಮ ಹೃದಯಮಂದಿರದಲ್ಲಿ ಸ್ಥಾಪಿಸಿ ಸ್ಥಿರಪಡಿಸಿಕೊಳ್ಳಿ. ಆ ಮೂಲಕ 'ವಿದ್ಯಾಮಾನ್ಯ ಭವನ' ಆಗಿ ಮೆರೆಯಿರಿ.

ಶ್ರೀ ವಿದ್ಯಾಮಾನ್ಯತೀರ್ಥರ ವಾಙ್ಮಯಕ್ಷೇತ್ರವನ್ನು ಅಗೆದು, ತೋಡಿ 'ವಿದ್ಯಾಭಂಡಾರ'ವನ್ನು ಹೊರತೆಗೆವ ಸಾಧಕರಿಗೆ ಅವರ ಆಶೀರ್ವಾದದ ಶ್ರೀರಕ್ಷೆ ಇರಲಿ.

ಚಿತ್ರಭಾನು ಸಂ।
ವೈಶಾಖಶುದ್ಧ ಪ್ರತಿಪತ್

ಶ್ರೀ ಶ್ರೀ ವಿದ್ಯಾಧೀಶತೀರ್ಥರು
ಪರ್ಯಾಯ ಶ್ರೀ ಪಲಿಮಾರು ಹೃಷೀಕೇಶ ಸಂಸ್ಥಾನ
ಶ್ರೀಕೃಷ್ಣ ಮಠ, ಉಡುಪಿ.

ವಿದ್ಯಾಭಂಡಾರದ

ನೂರು ಆಭರಣಗಳು

ನಿಧಿ - ೧ : ದೇವರು

ನಿಧಿ - ೨ : ಮಧ್ವಗುರು

ನಿಧಿ – ೩ : ಸಿದ್ಧಾಂತ

ನಿಧಿ – ೪ : ವಾಙ್ಮಯ

ನಿಧಿ - ೫ : ಧರ್ಮ

ನಿಧಿ – ೬ : ಅರ್ಥವಿವರಣೆ

ನಿಧಿ – ೭ : ಸ್ವಮತವಿಮರ್ಶೆ

ನಿಧಿ- ೮ : ಪರಮತವಿಮರ್ಶೆ

* * *

ವಿದ್ಯಾಭಂಡಾರ

ನಿಧಿ – ೧

ದೇವರು



"ವೇದಭಾರತಾದಿ ಸಾತ್ವಿಕ ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ಹೇಳಿದಂತೆ ನಾರಾಯಣನೇ ಸರ್ವೋತ್ತಮನು. ಬ್ರಹ್ಮರುದ್ರಾದಿಗಳು ನಾರಾಯಣನ ಪರಿವಾರವೆಂದು ತಿಳಿದು ನಾರಾಯಣನಲ್ಲಿ ಸರ್ವೋತ್ತಮ ಭಕ್ತಿಯನ್ನೂ ದೇವತೆಗಳಲ್ಲಿ ತಾರತಮ್ಯದಿಂದ ಭಕ್ತಿಯನ್ನೂ ಮಾಡಬೇಕು."

ದೇವರು

೧. ೧. ಶ್ರೀವಿಷ್ಣುವೇ ಸರ್ವೋತ್ತಮನು

ರುದ್ರಂ ಸಮಾಶ್ರಿತಾ ದೇವಾ ರುದ್ರೋ ಬ್ರಹ್ಮಾಣಮಾಶ್ರಿತಃ ।
ಬ್ರಹ್ಮಾಮಾಮಾಶ್ರಿತೋ ನಿತ್ಯಂ ನಾಹಂ ಕಂಚಿದುಪಾಶ್ರಿತಃ ॥

ರುದ್ರದೇವರನ್ನು ಸಮಸ್ತ ದೇವತೆಗಳು ಆಶ್ರಯಿಸಿದ್ದಾರೆ. ರುದ್ರದೇವರು ಬ್ರಹ್ಮದೇವರನ್ನು ಆಶ್ರಯಿಸಿದ್ದಾರೆ. ಬ್ರಹ್ಮದೇವರು ನನ್ನನ್ನು ಆಶ್ರಯಿಸಿದ್ದಾರೆ. ನಾನು ಯಾರನ್ನೂ ಆಶ್ರಯಿಸಿಲ್ಲ.

ಸತ್ಯಂ ಸತ್ಯಂ ಪುನಸ್ಸತ್ಯಂ ಉದ್ಧೃತ್ಯ ಭುಜಮುಚ್ಯತೇ ।
ವೇದಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಮ್ ॥

ಭುಜಗಳನ್ನು ಎತ್ತಿ ಸತ್ಯ-ಸತ್ಯ-ಸತ್ಯವೆಂದು ಶಪಥಪೂರ್ವಕವಾಗಿ ಹೇಳುವುದೇನೆಂದರೆ, ವೇದಶಾಸ್ತ್ರಕ್ಕಿಂತ ಉತ್ತಮ ಶಾಸ್ತ್ರವಿಲ್ಲ. ವಿಷ್ಣುವಿಗಿಂತ ಉತ್ತಮ ದೇವತೆ ಇಲ್ಲ ಇತ್ಯಾದಿ ಭಾರತವಾಕ್ಯಗಳಲ್ಲಿ ವಿಷ್ಣುಸರ್ವೋತ್ತಮತ್ವವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ನಾರಾಯಣಪರಾ ವೇದಾಃ ನಾರಾಯಣಪರಾ ಮಖಾಃ ।

ಎಂಬ ಭಾಗವತ ವಚನದಲ್ಲಿ ಎಲ್ಲಾ ವೇದಗಳೂ ನಾರಾಯಣನನ್ನೇ ಪ್ರತಿಪಾದನೆ ಮಾಡುತ್ತವೆ ಎಂದು ಹೇಳಿರುತ್ತದೆ -ಮಹಾಭಾರತದಲ್ಲಿ ಶ್ರೀಕೃಷ್ಣನು ಕೈಲಾಸಯಾತ್ರೆ ಮಾಡಿ ಪುತ್ರನಿಗೋಸ್ಕರ ರುದ್ರದೇವರ ತಪಸ್ಸು ಮಾಡಿದನೆಂದು ಹೇಳಿರುತ್ತದೆ. ಇದರಿಂದ ನಾರಾಯಣನಿಗಿಂತಲೂ ರುದ್ರದೇವರು ದೊಡ್ಡವರು ಎಂದು ಕೆಲವರು ಶಂಕಿಸಬಹುದು. ಆದರೆ ಈ ಶಂಕೆಯು ಗೀತೆಯನ್ನೂ ಸಹ ವಿಚಾರಮಾಡದೆ ಬಂದದ್ದು. ಏಕೆಂದರೆ ಗೀತೆಯಲ್ಲಿ ತಾನೇ ಸ್ವತಃ ತನ್ನ ಅಭಿಪ್ರಾಯವನ್ನು ಹೇಳಿರುತ್ತಾನೆ.

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥

ಇತ್ಯಾದಿ ರೀತಿಯಲ್ಲಿ ಅಂದರೆ ನನಗೆ ಹೊಂದಲಿಕ್ಕೆ ಯೋಗ್ಯವಾದದ್ದು ಏನೂ ಇಲ್ಲ. ನಾನು ಪರಿಪೂರ್ಣನು. ಆದರೂ ಲೋಕಕ್ಕೆ ಕರ್ಮವನ್ನು ಮಾಡಿ ತೋರಿಸುತ್ತೇನೆ. ಶ್ರೇಷ್ಠನಾದ ನಾನು ಕರ್ಮ ಮಾಡಿದರೆ ಎಲ್ಲರೂ ಅದನ್ನು ಅನುಸರಿಸುತ್ತಾರೆ. ನಾನು ಕರ್ಮಮಾಡಿ ತೋರಿಸಿಕೊಡದೇ ಇದ್ದರೆ, ಲೋಕವು ಕರ್ಮಭ್ರಷ್ಟವಾಗಿ ನಾಶವನ್ನು ಹೊಂದಬಹುದು. ಅದಕ್ಕಾಗಿ ನಾನು ಜನರಿಗೋಸ್ಕರ ಕರ್ಮ ಮಾಡುತ್ತೇನೆಂದು ಹೇಳಿದ್ದರಿಂದ ಕೈಲಾಸಯಾತ್ರೆ ಮಾಡಿ ರುದ್ರದೇವರ ತಪಸ್ಸು ಮಾಡಿದ್ದು ನಮಗೆ ರುದ್ರದೇವರ ಪೂಜೆಯು ಕರ್ತವ್ಯವೆಂಬುದನ್ನು ತಿಳಿಸಲಿಕ್ಕೆಂದು ಗೊತ್ತಾಗುತ್ತದೆ. ಆದ್ದರಿಂದಲೇ ಅವತಾರಗಳಲ್ಲಿ ಮಾತ್ರ ವಿಷ್ಣುವು ರುದ್ರದೇವರ ತಪಸ್ಸು

ಮಾಡಿದ್ದಾನೆಯೇ ಹೊರತು ಮೂಲ ರೂಪದಲ್ಲಿ ಮಾಡಲಿಲ್ಲ. ಯಾವ ಸಾತ್ವಿಕ ಪುರಾಣದಲ್ಲೂ ಮೂಲ ರೂಪದಲ್ಲಿದ್ದಾಗ ರುದ್ರದೇವರನ್ನು ಆರಾಧಿಸಿದನೆಂದು ಹೇಳಲಿಲ್ಲ. ಅವತಾರರೂಪವು ಲೋಕಕ್ಕೆ ವಿಡಂಬನೆ ಮಾಡುತ್ತದೆ. ಮೂಲರೂಪದಲ್ಲಿ ಮಾಡುವ ಕಾರ್ಯ, ಲೋಕವಿಡಂಬನವಾಗುವುದಿಲ್ಲ. ಈ ಕಾರಣದಿಂದ ಮೂಲ ರೂಪದಲ್ಲಿ ರುದ್ರದೇವರ ತಪಸ್ಸನ್ನು ವಿಷ್ಣುವು ಮಾಡಲಿಲ್ಲ –ಮೂಲರೂಪದಲ್ಲಿ ರುದ್ರದೇವರು ಶ್ರೀವಿಷ್ಣುವಿನ ಪಾದೋದಕವನ್ನು ಶಿರಸ್ಸಿನಲ್ಲಿ ಧರಿಸಿದ್ದಾರೆ. ಅದು ಲೋಕವಿಡಂಬನವಲ್ಲ. ಲೋಕವಿಡಂಬನವನ್ನು ಅವತಾರದಲ್ಲಿ ಮಾತ್ರ ದೇವತೆಗಳು ಮಾಡುತ್ತಾರೆ. ಆದ್ದರಿಂದ ರುದ್ರದೇವರು ಪಾದೋದಕವನ್ನು ಧರಿಸಿದ್ದು ಸ್ವಾಭಾವಿಕ. ವಿಷ್ಣುಭಕ್ತಿಯುಳ್ಳವರಾದ್ದರಿಂದಲೇ ಎಂದು ತಿಳಿಯಬೇಕು. ಮತ್ತು ಶ್ರೀಕೃಷ್ಣನು ಪುತ್ರನಿಗೋಸ್ಕರ ರುದ್ರದೇವರ ತಪಸ್ಸು ಮಾಡಿದ್ದರಿಂದ ಪುತ್ರಾದಿ ಐಹಿಕ ಫಲಪ್ರದತ್ವವು ಮಾತ್ರ ರುದ್ರದೇವರಿಗೆ, ಮೋಕ್ಷದಾತೃತ್ವವು ರುದ್ರದೇವರಿಗೆ ಇಲ್ಲವೆಂಬ ಪ್ರಮೇಯವು ಸೂಚಿತವಾಗುತ್ತದೆ. ಮೋಕ್ಷವು ಎಲ್ಲ ಪುರುಷಾರ್ಥಕ್ಕಿಂತಲೂ ಶ್ರೇಷ್ಠವಾದುದು. ಅದನ್ನು ಕೊಡತಕ್ಕವನು ಸರ್ವೋತ್ತಮನೇ ಆಗುತ್ತಾನೆ. ವಿಷ್ಣುವು ಒಬ್ಬನೇ ಮೋಕ್ಷವನ್ನು ಕೊಡಬಲ್ಲನು. ಏಕೆಂದರೆ ಭಾಗವತದಲ್ಲಿ ಮುಚುಕುಂದರಾಜನು ದೇವಾಸುರ ಯುದ್ಧದಲ್ಲಿ ದೇವತೆಗಳಿಗೆ ಸಹಾಯ ಮಾಡಿದ್ದಕ್ಕೆ ದೇವತೆಗಳು ಮುಚುಕುಂದ ರಾಜನಿಗೆ ಹೇಳುತ್ತಾರೇನೆಂದರೆ–

ವರಂ ವರಯ ಭದ್ರಂ ತೇ ಋತೇ ಕೈವಲ್ಯಮಾತ್ಮನಃ ।
ಏಕ ಏವೇಶ್ವರಸ್ತಸ್ಯ ಭಗವಾನ್ ವಿಷ್ಣುರವ್ಯಯಃ ॥

ಎಲೈ ಮುಚುಕುಂದ ರಾಜನೇ, ವರವನ್ನು ಕೇಳು ಮೋಕ್ಷವನ್ನು ಮಾತ್ರ ಕೇಳಬೇಡ. ಮೋಕ್ಷವನ್ನು ಕೊಡಲಿಕ್ಕೆ ವಿಷ್ಣುವು ಒಬ್ಬನೇ ಸಮರ್ಥನು –ಎಂದು ದೇವತೆಗಳ ಮಾತು ಸ್ಪಷ್ಟವಾಗಿ ಇದೆ. ಇದರಿಂದ ವಿಷ್ಣುವು ಒಬ್ಬನೇ ಶ್ರೇಷ್ಠ ಪುರುಷಾರ್ಥಕೊಡತಕ್ಕವನಾದ್ದರಿಂದ ಸರ್ವೋತ್ತಮನೆಂದೇ ಸಿದ್ಧವಾಗುತ್ತದೆ. ದೇವತೆಗಳು ಅವತಾರದಲ್ಲಿ ವಿಷ್ಣುವಿನ ಅವತಾರ ಸ್ವರೂಪರಾದ ರಾಮ ಕೃಷ್ಣಾದಿಗಳನ್ನು ಪೂಜಿಸುತ್ತಾರೆ. ಆದ್ದರಿಂದಲೇ ಯುಧಿಷ್ಠಿರನು ರಾಜಸೂಯಯಾಗದ, ಬ್ರಹ್ಮರುದ್ರಾದಿಗಳು ಕೂಡಿರುವ, ಮಹಾಸಭೆಯಲ್ಲಿ ಶ್ರೀಕೃಷ್ಣನಿಗೆ ಅಗ್ರಪೂಜೆಯನ್ನು ಮಾಡಿದನು. ಇದರಿಂದ ದೇವತೆಗಳು ವಿಷ್ಣುಭಕ್ತರೆಂದು ಸಿದ್ಧವಾಗುತ್ತದೆ ಮತ್ತು ಸರ್ವ ಪಾಪಗಳಿಗೆ ಶಿಕ್ಷಕನಾದವನು ಯಮನು ಯುಧಿಷ್ಠಿರ ರೂಪದಿಂದ ಅವತಾರ ಮಾಡಿದ್ದಾನೆ. ಒಂದು ವೇಳೆ ಶ್ರೀಕೃಷ್ಣನು ಚೋರಜಾರತ್ವಾದಿ ದೋಷಗಳುಳ್ಳವನಾಗಿದ್ದರೆ ಶ್ರೀಕೃಷ್ಣನಿಗೆ ಆ ಯಮನ ಅವತಾರರೂಪನಾದ ಧರ್ಮರಾಜನು ಪಾದಪ್ರಕ್ಷಾಲನ ಮಾಡಿ ತಾನು ಧನ್ಯನಾದೆನೆಂದು ತಿಳಿಯಲು ಸಾಧ್ಯವಿತ್ತೆ? ಇಲ್ಲ. ಆದುದರಿಂದ ದೇವತೆಗಳಿಗೂ ಆರಾಧ್ಯನಾದ ನಿರ್ದುಷ್ಟನಾದ ಶ್ರೀಕೃಷ್ಣ ರೂಪಿಯಾದ ವಿಷ್ಣುವೇ ಸರ್ವೋತ್ತಮನೆಂದು ಸಿದ್ಧವಾಯಿತು. ಮತ್ತು ಸಂಧ್ಯಾವಂದನೆಯಲ್ಲಿ ಪೂರ್ವಾದಿ ದಿಕ್ಕುಗಳ ಉಪಸ್ಥಾನ ಮಾಡುವಾಗ ಇಂದ್ರ ಮೊದಲಾದ ದೇವತೆಗಳಿಗೆಲ್ಲಾ ಉಪಸ್ಥಾನ ಮಾಡಿದರೂ ವಿಷ್ಣುವಿಗೆ ಉಪಸ್ಥಾನವಿಲ್ಲ. ಅದೇನೆಂದರೆ, ಇಂದ್ರಾದಿ ದೇವತೆಗಳು ಒಂದೊಂದೇ

ದಿಕ್ಕುಗಳಿಗೆ ನಿಯಾಮಕರು-ಖಂಡಾಧಿಪತಿಗಳು. ಶ್ರೀವಿಷ್ಣುವು ಅಖಂಡಾಧಿಪತಿಯು. ಅದ್ದರಿಂದ ಗಾಯತ್ರಿಪ್ರತಿಪಾದ್ಯತ್ವೇನ ಅವನನ್ನು ಮೊದಲೇ ಧ್ಯಾನಮಾಡಿ ಅನಂತರ ಆ ದಿಕ್ಕುಗಳಿಗೆ ಮಾತ್ರ ನಿಯಾಮಕರಾದ ಇತರ ದೇವತೆಗಳಿಗೆ ನಮಸ್ಕಾರಾದಿಗಳನ್ನು ಮಾಡಲಾಗುತ್ತದೆ. ಆದುದರಿಂದ ಸಂಧ್ಯಾವಂದನೆ ಮಾಡತಕ್ಕವರು ಸರ್ವಮತೀಯರೂ ಕೂಡ ವಿಷ್ಣುವನ್ನೇ ಸರ್ವೋತ್ತಮನೆಂದು ಅಂಗೀಕರಿಸಬೇಕು. ಮತ್ತು ಬ್ರಹ್ಮರುದ್ರಾದಿಗಳು ದೈತ್ಯರಿಗೆ ಅವಧ್ಯತ್ವ ಅಜೇಯತ್ವಾದಿ ವರಗಳನ್ನು ಕೊಟ್ಟರೆ ಶ್ರೀವಿಷ್ಣುವು ತನ್ನ ಅವತಾರದಲ್ಲಿ ಅದನ್ನು ಮೋಘ ಮಾಡಿ ಆ ದೈತ್ಯರನ್ನು ಸಂಹರಿಸುತ್ತಾನೆ. ಇದರಿಂದ ಬ್ರಹ್ಮರುದ್ರಾದಿಗಳಿಗಿಂತಲೂ ಶ್ರೀವಿಷ್ಣುವಿನ ಸಾಮರ್ಥ್ಯವು ಹೆಚ್ಚಿನದ್ದು ಎಂದು ಸಿದ್ಧವಾಗುತ್ತದೆ. ಶ್ರೀವಿಷ್ಣು ತನ್ನ ಅವತಾರದಲ್ಲಿ ಮಹಾಶಕ್ತಿ ಇದ್ದರೂ ತಾನು ಅಶಕ್ತನೆಂದು ದೈತ್ಯರನ್ನು ಮೋಹಿಸುವುದಕ್ಕೋಸ್ಕರ ತೋರಿಸುತ್ತಾನೆ. ಮನುಷ್ಯರಂತೆ ನಟನೆ ಮಾಡುತ್ತಾನೆ. ಅವನ ದೇಹವು ಜ್ಞಾನಾನಂದಾತ್ಮಕವಾದದ್ದು. ಅನಾದಿ ನಿತ್ಯವಾದದ್ದು. ಜನನಮರಣಾದಿಗಳು ಭೇದಭೇದಾದಿಗಳು ಮೊದಲಾದ ಯಾವ ದೋಷವೂ ಅವನ ದೇಹಕ್ಕೆ ಇಲ್ಲ. ಅಜ್ಞಾನಿಗಳಿಗೆ ಅವತಾರದಲ್ಲಿ ಭ್ರಾಂತಿಯಿಂದ ಹಾಗೆ ಕಾಣುತ್ತದೆ. ಜ್ಞಾನಿಗಳಿಗೆ ಶ್ರೀವಿಷ್ಣುವು ನಿರ್ದುಷ್ಟನೆಂದೇ ತಿಳಿಯುತ್ತದೆ. ಆದರೆ ಭಾಗವತದಲ್ಲಿ ಭೀಷ್ಮಾಚಾರ್ಯರು ಪ್ರಾಣಾವಸಾನ ಕಾಲದಲ್ಲಿ ಶ್ರೀಕೃಷ್ಣನನ್ನು ಸ್ತೋತ್ರಮಾಡುತ್ತಾ-

ಮಮ ನಿಶಿತಶರೈರ್ವಿಭಿದ್ಯಮಾನತ್ವಚಿ ವಿಲಸತ್ಕವಚೇಽಸ್ತು ಕೃಷ್ಣ ಆತ್ಮಾ ।

ತನ್ನ ತೀಕ್ಷ್ಣ ಶರಗಳಿಂದ ಭೇದಿಸಲ್ಪಟ್ಟ ಚರ್ಮ ಉಳ್ಳ ಕೃಷ್ಣನು, ಎಂದು ಹೇಳಿದಂತೆ ಕಾಣುತ್ತದೆ. ಹಾಗೆ 'ಕ್ಷತಜಪರಿಪ್ಲುತಃ' ಎಂದು ಶರೀರದ ಗಾಯದಿಂದ ಉಂಟಾದ ರಕ್ತದಿಂದ ಕೂಡಿದ್ದಾನೆ ಶ್ರೀಕೃಷ್ಣನು ಎಂದೂ ಹೇಳಿದ್ದಾರೆಂದು ತೋರುತ್ತದೆ. ಅಜ್ಞಾನಿಗಳಿಗೆ ಈ ರೀತಿ ಭ್ರಾಂತಿ ಬರಬಹುದು. ಮಹಾಜ್ಞಾನಿಗಳಾದ ಭೀಷ್ಮರಿಗೆ ಈ ರೀತಿ ಭ್ರಾಂತಿಬರಲು ಶಕ್ಯವಿಲ್ಲ. ಆದುದರಿಂದ ಅವರು ಹೀಗೆ ಹೇಳಿದ್ದು ಹೇಗೆ ಕೂಡುತ್ತದೆ? ಎಂದು ಕೆಲವರು ಶಂಕಿಸಬಹುದು. ಆದರೆ ಇದರ ಅರ್ಥ ಬೇರೆಯಾಗಿದೆ. 'ವಿಭಿದ್ಯಮಾನತ್ವಚಿ' ಎಂಬುದಕ್ಕೆ 'ಅಭಿದ್ಯಮಾನತ್ವಚಿ' ಎಂದು ಅರ್ಥ. 'ವಿಪ್ರಿಯ' ಎಂಬ ಪದಕ್ಕೆ 'ಅಪ್ರಿಯ' ಎಂದು ಅರ್ಥ ಹೇಳುವುದು ಕಂಡಿದೆ. ಅಂದರೆ ತನ್ನ ತೀಕ್ಷ್ಣ ಶರಗಳಿಂದಲೂ ಕೂಡ ಶ್ರೀಕೃಷ್ಣನ ಶರೀರವು ಭಿದ್ಯಮಾನವಾಗಿಲ್ಲ ಎಂದು ಅಭಿಪ್ರಾಯ. ಇಲ್ಲವಾದರೆ ಇದು ಶ್ರೀಕೃಷ್ಣನ ಸ್ತುತಿಯಾಗಲಾರದು. ಮತ್ತು 'ವಿಲಸತ್ಕವಚೇ' ಎಂದು ಶ್ರೀಕೃಷ್ಣನ ಕವಚವು ಪ್ರಕಾಶಮಾನವಾಗಿರುತ್ತದೆಂದು ಭೀಷ್ಮರು ಹೇಳಿದ್ದಾರೆ. ಕವಚವು ಪ್ರಕಾಶಮಾನವಾಗಿರಬೇಕಾಗಿದ್ದರೆ, ಕವಚ ಭೇದ ಆಗಿಲ್ಲವೆಂದು ಸಿದ್ಧವಾಯಿತು. ಕವಚ ಭೇದಿಸಲ್ಪಟ್ಟಿಲ್ಲವೆಂದ ಮೇಲೆ ಶ್ರೀಕೃಷ್ಣನ ಚರ್ಮ ಭೇದವಾಗಿಲ್ಲವೆಂದೇ ಅರ್ಥಮಾಡುವುದು ಉಚಿತವಾಗಿದೆ. ಗಾಯದ ರಕ್ತವು ಶ್ರೀಕೃಷ್ಣನ ದೇಹದಲ್ಲಿ ಕಾಣುತ್ತದೆಂದು ಹೇಳಿದುದನ್ನು ಹೀಗೆ ಅರ್ಥಮಾಡಬೇಕು. ಯುದ್ಧ ಸ್ಥಳದಲ್ಲಿ ಇರುವ ಇತರರ ಶರೀರ ಭೇದವಾದಾಗ ಅದರಿಂದ ರಕ್ತವು ಆಕಾಶಕ್ಕೆ ಹಾರಿ ಶ್ರೀಕೃಷ್ಣನ ಶರೀರದ ಮೇಲೆ ಬಿದ್ದು ಹರಿಯುತ್ತಾ ಇತ್ತು ಎಂದು ಭೀಷ್ಮರ

ಅಭಿಪ್ರಾಯ. ಅಜ್ಞಾನಿಗಳು ಮಾತ್ರ ಶ್ರೀಕೃಷ್ಣನ ಶರೀರ ಭೇದವಾಗಿ ರಕ್ತ ಸುರಿಯುತ್ತದೆಂದು ಭ್ರಮಿಸಿಕೊಂಡರು. ಶ್ರೀವಿಷ್ಣುವಿನ ಅನುಗ್ರಹದಿಂದ ರಕ್ಷಿತನಾದ ಪ್ರಹ್ಲಾದನ ಶರೀರಕ್ಕೆ ಕೂಡ ದೈತ್ಯರುಗಳು ಛೇದ ಭೇದ ಮಾಡಲು ಶಕ್ತರಾಗಿಲ್ಲ. ಹೀಗಿರುವಾಗ ಸಾಕ್ಷಾತ್ ಶ್ರೀಕೃಷ್ಣನ ಶರೀರಕ್ಕೆ ಛೇದಭೇದ ಮಾಡಲು ಯಾರು ಶಕ್ತರು ಇದ್ದಾರೆ? ತ್ರಿವಿಕ್ರಮಾವತಾರದಲ್ಲಿ ಶ್ರೀವಿಷ್ಣುವಿನ ನಖಘಾತದಿಂದ ಬ್ರಹ್ಮಾಂಡದ ಖರ್ಪರವೇ ಛಿನ್ನವಾಯಿತು. ಅವನ ನಖದ ತುದಿಗೂ ಸಹ ಏನೂ ಆಗಲಿಲ್ಲ. ಹೀಗಿರುವಾಗ ಇತರರ ಶರಗಳು ಶ್ರೀಕೃಷ್ಣನ ಛೇದ ಭೇದಾದಿಗಳಿಗೆ ಹೇಗೆ ಸಮರ್ಥಗಳಾಗಬೇಕು? ಶ್ರೀಕೃಷ್ಣನು ತನ್ನ ಅವತಾರಸಮಾಪ್ತಿ ಕಾಲದಲ್ಲಿ ವ್ಯಾಧನ ಬಾಣದಿಂದ ತಾಡಿತನಾಗಿ ತನ್ನ ಶರೀರವನ್ನೇ ತ್ಯಾಗ ಮಾಡಿದನೆಂದೂ ಅಜ್ಞಾನಿಗಳಿಗೆ ಭ್ರಾಂತಿ ಬರುವಂತೆ ಶ್ರೀಕೃಷ್ಣನು ತೋರಿಸಿದ್ದಾನೆ. ತನ್ನ ದೇಹದಂತೆ ತೋರುವ ಹೊಸದಾದ ಪಾಂಚಭೌತಿಕ ದೇಹವನ್ನು ತತ್ಕಾಲದಲ್ಲಿ ಸೃಷ್ಟಿಮಾಡಿ ಭೂಮಿಯಲ್ಲಿ ಮಲಗಿಸಿಟ್ಟು ತಾನು ಅದೃಶ್ಯನಾದನೇ ಹೊರತು ತನ್ನ ದೇಹಕ್ಕೆ ವ್ಯಾಧನ ಬಾಣವು ಏನನ್ನೂ ಮಾಡಲಿಲ್ಲವೆಂದು ವಾಸ್ತವ ಪ್ರಮೇಯ ಮತ್ತು ಶ್ರೀಕೃಷ್ಣನು ಕಾಮುಕನಂತೆ ಅಜ್ಞಾನಿಗಳಿಗೆ ತೋರಿಸಿದ್ದಾನೇ ಹೊರತು ಅದು ನಿಜವಲ್ಲ. ಏಕೆಂದರೆ ಪರಮವಿರಕ್ತರಾದ ಪರಮ ಹಂಸರಾದ ನಾರದಾದಿಗಳು ಬಂದು ಶ್ರೀಕೃಷ್ಣನನ್ನು ಸರ್ವದಾ ಸೇವೆ ಮಾಡುತ್ತಾರೆ. ಶ್ರೀಕೃಷ್ಣನು ಕಾಮುಕನಾಗಿದ್ದರೆ ಪರಮ ವಿರಕ್ತ ಶಿಖಾಮಣಿಗಳಿಂದ ಸದಾ ಪೂಜಿಸಲ್ಪಡಲಾರನು. ಹಾಗೇ ರಾಮಾವತಾರದಲ್ಲಿ ಶ್ರೀರಾಮನು ಸೀತಾವಿಯೋಗದಿಂದ ಬಹಳವಾಗಿ ದುಃಖ ಮಾಡಿದನೆಂದು ಅಜ್ಞಾನಿಗಳು ಮಾತ್ರ ಭ್ರಮಿಸಿದರು. ಜ್ಞಾನಿಶ್ರೇಷ್ಠನಾದ ಹನುಮಂತನು ಹೇಳಿದ ವಚನ ಭಾಗವತದಲ್ಲಿ ಹೀಗಿದೆ–

> ಮರ್ತ್ಯಾವತಾರಸ್ತ್ವಿಹ ಮರ್ತ್ಯಶಿಕ್ಷಣಂ
> ರಕ್ಷೋ ವಧಾಯೈವ ನ ಕೇವಲಂ ವಿಭೋಃ ॥
> ಕುತೋಽನ್ಯಥಾಸ್ಯುರಮತಃ ಸ್ವ ಆತ್ಮನ್
> ಸೀತಾಕೃತಾನಿ ವ್ಯಸನಾನೀಶ್ವರಸ್ಯ ॥

ಮನುಷ್ಯನಂತೆ ತನ್ನನ್ನು ತೋರಿಸಿಕೊಂಡು ಮನುಷ್ಯರಿಗೆ ಧರ್ಮಶಿಕ್ಷಣ ಮಾಡುತ್ತಾನೆ. ಆ ಶ್ರೀರಾಮನು ಸ್ವರಮಣನು. ಅವನಿಗೆ ಸೀತಾ ವಿಯೋಗವಿಲ್ಲ. ಸೀತಾ ವಿಯೋಗದಂತೆ ತೋರಿಸಿ ದುಃಖಿಯಂತೆ ತೋರಿಸುತ್ತಾನೆ. ಲೋಕದಲ್ಲಿ ಸ್ತ್ರೀಸಂಗಿಗಳಿಗೆ ಈ ತರಹದ ದುಃಖವಾಗುತ್ತದೆಂದು ಶ್ರೀರಾಮನ ಲೋಕ ಶಿಕ್ಷಣವಾಗಿರುತ್ತದೆ ಎಂದು ಹೇಳಿದ್ದರಿಂದ ಜ್ಞಾನಿಗಳು ಶ್ರೀರಾಮನಿಗೆ ದುಃಖ ಉಂಟೆಂದು ತಿಳಿಯುವುದಿಲ್ಲ. ಆದುದರಿಂದ ಶ್ರೀರಾಮಾವತಾರದಲ್ಲಿ ತೋರಿಸಿದ ದುಃಖ ಸುಳ್ಳು ಎಂಬುದು ವಾಸ್ತವ ಪ್ರಮೇಯ ಮತ್ತು ಶ್ರೀರಾಮನು ಮಾಡಿದ ಅನ್ಯಾಯ ಎಂದು ಕೆಲವರು ಶಂಕಿಸುತ್ತಾರೆ. ಸುಗ್ರೀವನ ಭಾರ್ಯೆಯನ್ನು ಅಪಹರಿಸಿದನೆಂಬ ಮಹಾದೋಷಕ್ಕೆ ವಾಲಿಗೆ ಶಿಕ್ಷೆ ಕೊಡುವುದೇ ಉದ್ದೇಶವೆಂದರೆ ಸುಗ್ರೀವನೂ ಕೂಡ ವಾಲಿಯ ಹೆಂಡತಿಯನ್ನು ಇಟ್ಟುಕೊಳ್ಳಲಿಲ್ಲವೇ? ಸುಗ್ರೀವನು ಬದುಕಿದ್ದಾಗಲೇ ಅವನ ಹೆಂಡತಿಯನ್ನು

ವಾಲಿಯು ಅಪಹರಿಸಿದ್ದು, ಸುಗ್ರೀವನು ವಾಲಿಯು ಸತ್ತಮೇಲೆ ಅವನ ಹೆಂಡತಿಯನ್ನು ಅಪಹರಿಸಿದ್ದೆಂದರೆ, ಹೇಗೇ ಆಗಲಿ ಪರದಾರಾಪಹರಣ ಎಂಬ ದೋಷ ಸುಗ್ರೀವನಿಗೆ ಪರಿಹಾರವಾಯಿತೆ? ಅಂತಹ ದೋಷಿಯಾದ ಸುಗ್ರೀವನನ್ನು ಶ್ರೀರಾಮನು ಸಂಹಾರ ಮಾಡಲಿಲ್ಲ ಏಕೆ? ಎಂದು ಶಂಕೆ ಮಾಡುತ್ತಾರೆ. ಇದಕ್ಕೆ ಮಧ್ವಾಚಾರ್ಯರು ಮತ್ತು ತುಲಸೀದಾಸರೂ ಕೂಡ ತಾವು ಬರೆದಿರುವ ರಾಮಾಯಣ ಗ್ರಂಥದಲ್ಲಿ ಈ ರೀತಿ ಸಮಾಧಾನ ಬರೆದಿದ್ದಾರೆ. ಬಾಣತಾಡಿತನಾಗಿ ವಾಲಿಯು ಬಿದ್ದಮೇಲೆ ಶ್ರೀರಾಮನು ವಾಲಿಯ ಹತ್ತಿರ ಹೋಗಿ ನಿನ್ನನ್ನು ಈಗಲೇ ಬದುಕಿಸುತ್ತೇನೆಂದು ಹೇಳುತ್ತಾನೆ. ಆದರೆ ವಾಲಿಯು ಮಾತ್ರ ಅದನ್ನು ಒಪ್ಪಲಿಲ್ಲ. ನಿನ್ನ ಎದುರಿನಲ್ಲಿ ನಿನ್ನ ದರ್ಶನಮಾಡುತ್ತಾ ಪ್ರಾಣವನ್ನು ಬಿಡಬೇಕೆಂದು ನನ್ನ ಆಶೆ. ಆ ರೀತಿ ನನಗೆ ಅನುಗ್ರಹ ಮಾಡಬೇಕೆಂದು ಕೇಳಿದಾಗ ಅವನ ಮನೋಭೀಷ್ಟವನ್ನು ಶ್ರೀರಾಮನು ಪೂರ್ಣ ಮಾಡಿದನು.

ಉಜ್ಜೀವಯಿಷ್ಯ ಇತಿ ನೇಚ್ಛದಸೌ ತ್ವದಗ್ರೇ ।
ಕೋ ನಾಮ ನೇಚ್ಛತಿ ಮೃತಿಂ ಪುರುಷೋತ್ತಮೇತಿ ॥

ಎಂದು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಮೂಲ ರಾಮಾಯಣದ ಅನುಸಾರವಾಗಿ ಶ್ರೀಮದಾಚಾರ್ಯರು ಹೇಳಿದ್ದಾರೆ. ಆದುದರಿಂದ ಶ್ರೀರಾಮನಲ್ಲಿ ಯಾವ ದೋಷವೂ ಇಲ್ಲವೆಂದೇ ಸಿದ್ಧವಾಯಿತು. ಶ್ರೀರಾಮನು ವಾಲಿಯ ಮನೋಭೀಷ್ಟವನ್ನೇ ಪೂರ್ಣ ಮಾಡಿದ್ದಾನೆ ಹೊರತು ವಾಲಿಗೆ ಅನ್ಯಾಯ ಮಾಡಲಿಲ್ಲ. ಮತ್ತು ರಾಮದೇವರು ಅಡಗಿ ಇದ್ದು ವಾಲಿಯನ್ನು ಸಂಹಾರ ಮಾಡಿದ್ದು ವಾಲಿಯ ಭಯದಿಂದಲ್ಲ. ಯಾರಿಂದಲೂ ಹಂದಾಡಿಸಲಿಕ್ಕೂ ಸಾಧ್ಯವಾಗದ ರುದ್ರ ವರದಿಂದ ಅಚ್ಛೇದ್ಯಾಭೇದ್ಯವಾದ ಈಶ ಧನುಸ್ಸನ್ನು ಅನಾಯಾಸದಿಂದ, ಐರಾವತವೆಂಬ ಇಂದ್ರದೇವರ ಆನೆಯು ಕಬ್ಬಿನ ಕೋಲನ್ನು ಮುರಿದಂತೆ ಮುರಿದಿರುವ ರಾಮನಿಗೆ ವಾಲಿಯಿಂದ ಭಯವೇನು?

ಯಾವ ಸಪ್ತ ವೃಕ್ಷಗಳ ಎಲೆಗಳನ್ನು ಕೀಳಲಿಕ್ಕೆ ಬಹಳ ಪ್ರಯತ್ನಮಾಡಿದರೂ ವಾಲಿಗೆ ಸಾಧ್ಯವಾಗಲಿಲ್ಲವೋ ಆ ಏಳು ವೃಕ್ಷಗಳನ್ನು ಒಂದೇ ಬಾಣದಿಂದ ಸೀಳಿದ ರಾಮನಿಗೆ ವಾಲಿಗಿಂತ ಎಷ್ಟೋ ಅಧಿಕ ಬಲ ಇದೆ ಎಂದು ಸುಗ್ರೀವನು ಮೊದಲೇ ನಿರ್ಣಯ ಮಾಡಿದ್ದಾನೆ. ಆದುದರಿಂದ ವಾಲಿಯ ಬಲಕ್ಕೆ ಶ್ರೀರಾಮನು ಹೆದರಿದನು ಎಂದು ತಿಳಿಯುವುದು ಸರಿಯಲ್ಲ. ಮತ್ತೇನೆಂದರೆ, ಶ್ರೀರಾಮನು ವಾಲಿಗೆ ದರ್ಶನ ಕೊಟ್ಟರೆ ಭಕ್ತನಾದ ವಾಲಿಯು ಶ್ರೀರಾಮನಲ್ಲಿ ಪ್ರಣಾಮಮಾಡಿ ಶರಣಾಗತನಾಗುತ್ತಾನೆ. ಅಂಥಾ ವಾಲಿಯನ್ನು ಸಂಹಾರ ಮಾಡುವುದು ಹೇಗೆ? ವಾಲಿಯನ್ನು ಸಂಹಾರಮಾಡದೆ ಇದ್ದರೆ ಸುಗ್ರೀವನಿಗೆ ವಾಲಿಯನ್ನು ಸಂಹಾರ ಮಾಡುತ್ತೇನೆಂಬ ಶ್ರೀರಾಮನ ಪ್ರತಿಜ್ಞೆಯು ಸುಳ್ಳಾಗಲಿಕ್ಕಿಲ್ಲವೇ? ಆದುದರಿಂದ ಶ್ರೀರಾಮನ ಚರಿತ್ರೆಯು ನಿರ್ದುಷ್ಟವಾಗಿದೆ ಎಂದು ತಿಳಿಯಬೇಕು. ಮತ್ತು ರಾಮೇಶ್ವರದಲ್ಲಿ ರಾವಣನ ಸಂಹಾರದಿಂದ ಬಂದಿರುವ ಬ್ರಹ್ಮಹತ್ಯೆಯ ಪರಿಹಾರಕ್ಕೋಸ್ಕರ ಶ್ರೀರಾಮನು

ಲಿಂಗಪ್ರತಿಷ್ಠೆ ಮಾಡಿದನೆಂಬ ಕಥೆಯೂ ತಾಮಸ ಪುರಾಣದಲ್ಲಿ ಹೇಳಿದ್ದು. ವಾಸ್ತವಿಕವಾಗಿ ರಾವಣನು ಬ್ರಾಹ್ಮಣಾಭಾಸನು. ಅವನ ಸಂಹಾರದಿಂದ ಬ್ರಹ್ಮಹತ್ಯೆ ಬರುವಂತಿಲ್ಲ ಎಂದು ಶ್ರೀರಾಮನಿಗೆ ಗೊತ್ತಿದೆ. ಪ್ರಳಯ ಕಾಲದಲ್ಲಿ ವಿಪ್ರೋತ್ತಮನಾದ ಚತುರ್ಮುಖನನ್ನು ಸಂಹಾರ ಮಾಡಿದರೂ ಬ್ರಹ್ಮಹತ್ಯೆಯು ಶ್ರೀರಾಮನಿಗೆ ಬರುವುದಿಲ್ಲ ಎಂದ ಮೇಲೆ ಬ್ರಾಹ್ಮಣಾಭಾಸನಾದ ರಾವಣನ ಸಂಹಾರದಿಂದ ಬ್ರಹ್ಮಹತ್ಯಾ ಬರುವುದಾದರೂ ಹೇಗೆ?

ಆದುದರಿಂದ ಅದರ ತಾತ್ವಿಕ ಅರ್ಥ ಬೇರೆಯೇ ಇದೆ. ಏನೆಂದರೆ, ರುದ್ರ ದೇವರಿಗೆ 'ಬ್ರಹ್ಮದ್ವಿಷೇ ಶರವೇ ಹಂತವಾಉ' ಎಂದು ಹೇಳಿದಂತೆ ಬ್ರಹ್ಮದೇವರ ಪಂಚಮ ಮುಖವನ್ನು ಛೇದಿಸಿ ಬ್ರಹ್ಮಹತ್ಯಾ ದೋಷ ಬಂತು. ಅದನ್ನು ಪರಿಹಾರ ಮಾಡುವುದಕ್ಕೋಸ್ಕರ ರುದ್ರದೇವರು ರಾಮಸೇತುವಿನಲ್ಲಿ ಸೇತುದರ್ಶನ ಮಾಡಿ ಕೊಂಡು ವಾಸಮಾಡಬೇಕು ಎಂದು ಅಪೇಕ್ಷೆಪಟ್ಟಿದ್ದಾರೆ.

ಸೇತುಂ ದೃಷ್ಟ್ವಾ ಸಮುದ್ರಸ್ಯ ಬ್ರಹ್ಮಹತ್ಯಾಂ ವ್ಯಪೋಹತಿ

ಎಂದು ಸೇತುದರ್ಶನ ಮಾಡಿದರೆ ಬ್ರಹ್ಮಹತ್ಯೆ ಪರಿಹಾರವಾಗುತ್ತದೆ. ಆದುದರಿಂದ ಶ್ರೀರಾಮದೇವರು ರುದ್ರದೇವರನ್ನು ಸೇತುವಿನಲ್ಲಿ ಸ್ಥಾಪಿಸಿ ರುದ್ರದೇವರನ್ನು ಪ್ರತಿಷ್ಠೆ ಮಾಡದೇ ಇದ್ದರೆ, ಇನ್ನು ಮೇಲೆ ಬರುವ ಜನರಿಗೆ ಸೇತುವಿನ ಮಾಹಾತ್ಮ್ಯ ಗೊತ್ತಾಗಲಿಕ್ಕಿಲ್ಲ. ಬ್ರಹ್ಮಹತ್ಯೆಯನ್ನು ಪರಿಹಾರ ಮಾಡಿಕೊಂಡ ರುದ್ರದೇವರನ್ನು ಮೇಲಿನ ಜನರು ನೋಡಿದರೆ ಸೇತುವಿನ ಮಾಹಾತ್ಮ್ಯ ಗೊತ್ತಾಗಿ ಮೇಲಿನ ಜನರೂ ಕೂಡ ತಮ್ಮ ಬ್ರಹ್ಮಹತ್ಯೆಯನ್ನು ಸೇತುದರ್ಶನದಿಂದ ಪರಿಹರಿಸಿಕೊಳ್ಳಬಹುದು ಎಂದು ಸೇತುದರ್ಶನದಿಂದ ಬ್ರಹ್ಮಹತ್ಯೆಯನ್ನು ಪರಿಹರಿಸಿಕೊಂಡ ರುದ್ರದೇವರನ್ನು ಅಲ್ಲಿ ಸ್ಥಾಪಿಸಿದರು ಎಂಬುದೇ ಪರಮಾರ್ಥ.

ಕೆಲವರು ಹರಿಹರಬ್ರಹ್ಮರುಗಳಲ್ಲಿ ಐಕ್ಯವನ್ನು ತಿಳಿದಿದ್ದಾರೆ. ಅದು ಇದುವರೆಗೆ ಉದಾಹರಿಸಿದ ವಿಷ್ಣುಸರ್ವೋತ್ತಮತ್ವ ಸಾಧಕ ಪ್ರಮಾಣಗಳಿಂದ ವಿರುದ್ಧವಾದ ಕಾರಣ ಐಕ್ಯವು ಇಲ್ಲ ಎಂದು ಸಜ್ಜನರು ತಿಳಿಯಬೇಕು.

'ವಿರಿಂಚನಾರಾಯಣಶಂಕರಾತ್ಮನೇ'

ಎಂದು ಭಾರತಾದಿಗಳಲ್ಲಿ ಹೇಳಿರುತ್ತದೆ. ಅದನ್ನು ನೋಡಿದರೆ ತ್ರಿಮೂರ್ತಿಗಳಲ್ಲಿ ಭೇದ ಇಲ್ಲವೆಂದು ತೋರುವ ಸಂಭವವಿದೆ. ಆದರ ಅರ್ಥವೇ ಬೇರೆ. ಏನೆಂದರೆ–

ಬ್ರಹ್ಮಣಿ ಬ್ರಹ್ಮರೂಪೋಽಸೌ ಶಿವರೂಪೀ ಶಿವೇ ಸ್ಥಿತಃ ॥

ಇತ್ಯಾದಿ ಪ್ರಮಾಣಾನುಸಾರ ನಾರಾಯಣನು ಬಿಂಬರೂಪಿಯಾಗಿ ಬ್ರಹ್ಮಾದಿಗಳಲ್ಲಿ ಬ್ರಹ್ಮಾದಿಗಳಂತೆ ರೂಪನಾಮಧಾರಿಯಾಗಿ ಅಂತರ್ಯಾಮಿಯಾಗಿ ಇದ್ದಾನೆ. ವಿರಿಂಚನ ಒಳಗೆ ಇರುವ ಬಿಂಬರೂಪಿ ನಾರಾಯಣನಿಗೆ ವಿರಿಂಚನೆಂದೇ ಹೆಸರು. ಶಿವನ ಒಳಗೆ ಅಂತರ್ಯಾಮಿಯಾಗಿ ಇರುವ ನಾರಾಯಣನಿಗೆ ಶಿವನೆಂದು ಹೆಸರು. ಅಂಥ ವಿರಿಂಚ ಶಂಕರರುಗಳಿಗೆ ನಾರಾಯಣನಿಂದ ಐಕ್ಯವಿದೆ ಎಂದು ತಿಳಿಯಬೇಕು. ಅದ್ವೈತ

ಮತಾನುಯಾಯಿಗಳು ಈ ರಹಸ್ಯವನ್ನರಿಯದೆ ಹರಿಹರಬ್ರಹ್ಮರಲ್ಲಿ ಭೇದವನ್ನು ಒಪ್ಪುವುದಿಲ್ಲ. ಭೇದವನ್ನು ಹೇಳುವ ಪ್ರಮಾಣಗಳನ್ನು ಹೇಳಿದರೆ ಅವುಗಳು ವ್ಯಾವಹಾರಿಕ ಭೇದಪರಗಳೆಂದು ಹೇಳುತ್ತಾರೆ. ವ್ಯಾವಹಾರಿಕವೆಂದರೆ ಸುಳ್ಳಿನ ಪ್ರಭೇದ. ಆದ್ದರಿಂದ ಅಂತಹ ಭೇದವನ್ನು ಹೇಳುವ ಪ್ರಮಾಣಗಳು ಪ್ರಮಾಣಗಳಾಗಲಾರವು. ಪ್ರಮಾಣಗಳೆಂಬುದು ಖರೆ ಸತ್ಯವನ್ನೇ ಹೇಳಬೇಕು. ಆದ್ದರಿಂದ ಅದ್ವೈತಿಗಳು ವ್ಯಾವಹಾರಿಕ ಭೇದವನ್ನು ತ್ರಿಮೂರ್ತಿಗಳಲ್ಲಿ ಹೇಳುವುದು ಯುಕ್ತವಲ್ಲ. ಎಲ್ಲಿಯೂ ಶಾಸ್ತ್ರದಲ್ಲಿ ವ್ಯಾವಹಾರಿಕ ಸತ್ಯ ಎಂಬ ಸತ್ಯದ ಪ್ರಭೇದವನ್ನು ಕಂಠೋಕ್ತವಾಗಿ ಹೇಳಲಿಲ್ಲ. ಆದುದರಿಂದ ವ್ಯಾವಹಾರಿಕ ಸತ್ಯವೆಂಬುದು ಅಪ್ರಾಮಾಣಿಕವೇ ಆಗಿರುತ್ತದೆ. ಆದುದರಿಂದ ವೇದ ಭಾರತಾದಿ ಸಾತ್ವಿಕ ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ಹೇಳಿದಂತೆ ನಾರಾಯಣನೇ ಸರ್ವೋತ್ತಮನು. ಬ್ರಹ್ಮರುದ್ರಾದಿಗಳು ನಾರಾಯಣನ ಪರಿವಾರವೆಂದು ತಿಳಿದು ನಾರಾಯಣನಲ್ಲಿ ಸರ್ವೋತ್ತಮ ಭಕ್ತಿಯನ್ನೂ ದೇವತೆಗಳಲ್ಲಿ ತಾರತಮ್ಯದಿಂದ ಭಕ್ತಿಯನ್ನೂ ಮಾಡಬೇಕು.

●

೧. ೨. ಶ್ರೀಹರಿಭಕ್ತಿ

ಶ್ರೀಮನ್ನ್ಯಾಯಸುಧಾಗ್ರಂಥದಲ್ಲಿ ಶ್ರೀಹರಿಭಕ್ತಿಯ ಸ್ವರೂಪವನ್ನು ಈ ರೀತಿ ಹೇಳಿದ್ದಾರೆ.

'ಪರಮೇಶ್ವರಭಕ್ತಿರ್ನಾಮ ನಿರವಧಿಕಾನಂತಾನವದ್ಯಕಲ್ಯಾಣಗುಣತ್ವಜ್ಞಾನಪೂರ್ಣಪೂರ್ವಕಃ ಸ್ವಾತ್ಮಾತ್ಮೀಯಸಮಸ್ತವಸ್ತುಭ್ಯಃ ಅನೇಕಾಗುಣಾಧಿಕಃ ಅಂತರಾಯ ಸಹಸ್ರೇಣಾಪಿ ಅಪ್ರತಿಬದ್ಧಃನಿರಂತರಪ್ರೇಮಪ್ರವಾಹಃ'

ಅಂದರೆ, ಶ್ರೀಹರಿಯು ಅನಂತಗಳಾದ ಮತ್ತು ಜಗತ್ತಿಗೆ ಮಂಗಳವನ್ನುಂಟು ಮಾಡತಕ್ಕ ನಿರ್ದುಷ್ಟಗುಣಗಳಿಂದ ಕೂಡಿದವನು. ಯಾರೂ ಶ್ರೀಹರಿಗಿಂತ ಹೆಚ್ಚಾದ ಗುಣವುಳ್ಳವರು ಇಲ್ಲ. ಈ ಜ್ಞಾನವನ್ನು ಹೊಂದಿದವನಿಗೆ ಶ್ರೀಹರಿಯಲ್ಲಿ ಪ್ರೇಮವು ಉಕ್ಕಿಬರುತ್ತದೆ. ಆ ಪ್ರೇಮವು ತನ್ನಲ್ಲಿ ತನ್ನದರಲ್ಲಿ ತನಗೆ ಇರುವ ಪ್ರೇಮಕ್ಕಿಂತ ಎಷ್ಟೋ ಪಾಲು ಅಧಿಕವಾದುದು. ಅವನು ಶ್ರೀಹರಿಪ್ರೀತಿಗೋಸ್ಕರ ಎಂತಹ ತ್ಯಾಗವನ್ನೂ ಮಾಡಲು ಸಿದ್ಧನಾಗುವನು. ಮತ್ತು ಎಂತಹ ಆಪತ್ತುಗಳು ಬಂದರೂ ಅವನಿಗೆ ಶ್ರೀಹರಿಯಲ್ಲಿ ಪ್ರೇಮವು ಕಡಿಮೆಯಾಗುವುದಿಲ್ಲ.

ಇಂತಹ ಭಕ್ತಿಯು ಎಲ್ಲಾ ಸಜ್ಜೀವರುಗಳಿಗೆ ಸ್ವರೂಪಭೂತವಾಗಿ ಅನಾದಿಯಾಗಿ ಅವ್ಯಕ್ತವಾಗಿ ಇದ್ದದ್ದು, ಕಾಲವಿಶೇಷದಲ್ಲಿ, ಕಾರಣವಿಶೇಷದಿಂದ, ಬಾಲ್ಯದಲ್ಲಿ ಅವ್ಯಕ್ತವಾಗಿ ಇದ್ದ ಪುಂಸ್ತ್ವವು ಯೌವನದಲ್ಲಿ ವ್ಯಕ್ತವಾಗುವಂತೆ ವ್ಯಕ್ತವಾಗುತ್ತದೆ. ಭಗವನ್ಮಹಿಮಶ್ರವಣ ಮನನ ಧ್ಯಾನದರ್ಶನಾದಿಗಳಿಂದ ಆ ಭಕ್ತಿಯು ಸ್ವಲ್ಪಸ್ವಲ್ಪವಾಗಿ ವ್ಯಕ್ತವಾಗುತ್ತ ಪಕ್ವಭಕ್ತಿ ಪರಿಪಕ್ವಭಕ್ತಿ ಅತಿಪರಿಪಕ್ವಭಕ್ತಿ ಎಂಬ ಹೆಸರುಗಳಿಂದ

ಕರೆಯಲ್ಪಡುತ್ತದೆ. ಅತಿಪರಿಪಕ್ವಭಕ್ತಿಯುಳ್ಳವರು ಭಗವಂತನ ವಿಷಯದಲ್ಲಿ ಮಾತನ್ನು ಆಡುವಾಗ ಅವರ ಮಾತು ಗದ್ಗದವಾಗುತ್ತದೆ. ಅವರ ಮನಸ್ಸು ದ್ರವೀಭೂತ ವಾಗುತ್ತದೆ. ಒಮ್ಮೊಮ್ಮೆ ಅವರು ಅಳುತ್ತಾರೆ. ಒಮ್ಮೊಮ್ಮೆ ಅವರು ನಗುತ್ತಾರೆ. ಒಮ್ಮೊಮ್ಮೆ ನಾಚಿಕೆ ಇಲ್ಲದೇ ಗಾನಮಾಡುತ್ತಾರೆ. ಒಮ್ಮೊಮ್ಮೆ ನಾಚಿಕೆ ಇಲ್ಲದೇ ಕುಣಿಯುತ್ತಾರೆ.

ಇಂಥವರ ದರ್ಶನ ಸ್ಪರ್ಶನಾದಿಗಳಿಂದ ಭುವನವೇ ಪವಿತ್ರವಾಗುತ್ತದೆ. ಹೀಗಿರುವಾಗ ಅವರು ತಮ್ಮನ್ನು ಭಕ್ತಿಯಿಂದ ಪವಿತ್ರರನ್ನಾಗಿ ಮಾಡಿಕೊಳ್ಳುತ್ತಾರೆಂದು ಏನು ಹೇಳತಕ್ಕದ್ದು?

ಇಂತಹ ಭಕ್ತಿಯುಳ್ಳವರೇ ಧನ್ಯರು. ಅವರು ಮಾಡತಕ್ಕ ಕರ್ತವ್ಯ ಕರ್ಮವೇನೂ ಇರುವುದಿಲ್ಲ. ಭಕ್ತಿ ಇಲ್ಲದವನು ಮಹಾಕಾರ್ಯವನ್ನು ಮಾಡಿದರೂ ವಿಪುಲ ಧನವನ್ನು ದಾನಮಾಡಿದರೂ ಸ್ವಯಂ ಸತ್ಕುಲಪ್ರಸೂತನಾಗಿದ್ದರೂ ತೇಜಸ್ಸು, ಪ್ರಭಾವ, ಬಲ, ಪೌರುಷ, ಬುದ್ಧಿಶಕ್ತಿಗಳುಳ್ಳವನಾದರೂ ಶ್ರೀಹರಿಯನ್ನು ಪ್ರಸನ್ನೀಕರಿಸುವುದಕ್ಕೆ ಸಮರ್ಥನಾಗುವುದಿಲ್ಲ. ಈ ಸಾಧನಗಳಲ್ಲಿ ಯಾವುದು ಇಲ್ಲದಿದ್ದರೂ ಭಕ್ತಿಯೊಂದು ಇದ್ದರೆ ಹರಿ ಪ್ರಸನ್ನನಾಗುತ್ತಾನೆ. ಇದಕ್ಕೆ ಗಜೇಂದ್ರನೇ ಸಾಕ್ಷಿಯಾಗಿದ್ದಾನೆ. ಅವನಿಗೆ ಧನಾದಿಗಳು ಸತ್ಕುಲಪ್ರಸೂತತ್ವಾದಿಗಳು ಯಾವುದೂ ಇಲ್ಲದಿದ್ದರೂ ಶ್ರೀಹರಿಯು ಅವನನ್ನು ಅವನ ಭಕ್ತಿಗೆ ಪ್ರಸನ್ನನಾಗಿ ಉದ್ಧಾರ ಮಾಡಿದ್ದಾನೆ.

ಆದುದರಿಂದ ಸುರನಾಗಲೀ ಅಸುರನಾಗಲೀ ನರನಾಗಲೀ ವಾನರನಾಗಲೀ ಭಕ್ತಿಯಿಂದ ಶ್ರೀಹರಿಯನ್ನು ಪ್ರಸನ್ನೀಕರಿಸಿ ಆತ್ಮೋದ್ಧಾರವನ್ನು ಮಾಡಿಕೊಳ್ಳಬೇಕು.

ಚಂಡಾಲನು ವಿಶೇಷವಾಗಿ ಭಗವದ್ಭಕ್ತನಾಗಿದ್ದರೆ, ಭಕ್ತಿಶೂನ್ಯನಾದ ಬ್ರಾಹ್ಮಣನಿಗಿಂತಲೂ ಶ್ರೇಷ್ಠನಾಗುತ್ತಾನೆ. ಈ ಮಾತು ಕೇವಲ ಭಕ್ತಿಯ ಪ್ರಶಂಸೆ ಎಂದು ತಿಳಿಯಬಾರದು. ನಿಜವಾದ ತತ್ವವೇ ಆಗಿರುತ್ತದೆ. ಸಮಸ್ತ ಶಾಸ್ತ್ರಾರ್ಥನಿರ್ಣಯವನ್ನು ಮಾಡತಕ್ಕ ಶ್ರೀ ಮಧ್ವಾಚಾರ್ಯರು ಈ ವಿಷಯವನ್ನು –'ಆದರಸ್ತತ್ರ ಕರ್ತವ್ಯಃ ಯತ್ರ ಭಕ್ತಿರ್ಹರೇವರಾ' ಇತ್ಯಾದಿ ವಚನಗಳಿಂದ ನಿರೂಪಿಸಿದ್ದಾರೆ.

ಶ್ರೀಹರಿಭಕ್ತಿ ಇಲ್ಲದವನು ಮಾಡಿದ ಮಹಾಕಾರ್ಯಗಳು ನಿಷ್ಫಲವಾಗುವವು. ಏಕೆಂದರೆ ಅವನಿಗೆ 'ಶ್ರೀಹರಿಯು ನನಗೆ ಶಕ್ತಿಯನ್ನು ಕೊಟ್ಟು ಮಾಡಿಸಿದನು' ಎಂಬ ಜ್ಞಾನವು ಇರುವುದಿಲ್ಲ. 'ನಾನು ಮಾಡಿದೆ' ಎಂಬ ಅಹಂಕಾರವು ಆ ಮಹಾಕಾರ್ಯವನ್ನು ಮಾಡಿದವನಿಗೆ ಬರುತ್ತದೆ. ಅಹಂಕಾರವು ಮದ್ಯದಂತೆ ಅತ್ಯಂತ ಅಪವಿತ್ರವಾದದ್ದು. ಮದ್ಯದಿಂದ ತುಂಬಿಸಿದ ಘಟವನ್ನು ಪವಿತ್ರ ಗಂಗಾಜಲದಲ್ಲಿ ಮುಳುಗಿಸಿ ಇಟ್ಟರೂ ಆ ಘಟವು ಅಪವಿತ್ರವೇ. ಆದುದರಿಂದ ಶ್ರೀಹರಿಭಕ್ತಿ ಇಲ್ಲದವನು ಪೌಂಡರೀಕ ಮಹಾಯಜ್ಞವನ್ನು ಮಾಡಿದ ದುರ್ಯೋಧನನಂತೆ ಅಹಂಭಾವವುಳ್ಳವನಾಗುವ ಪ್ರಯುಕ್ತ ಅವನು ಮಾಡಿದ ಸಕಲ ಮಹಾಕಾರ್ಯಗಳೂ ಕೂಡ ನೀರಿನಲ್ಲಿ ಹೋಮ ಮಾಡಿದಂತೆಯೇ ಸರಿ.

ನಿಷ್ಕಪಟವಾದ ಶ್ರೀಹರಿಭಕ್ತಿಯುಳ್ಳವನು ಶ್ರೀಹರಿಸೇವಾರೂಪ ಮಹಾಕಾರ್ಯವನ್ನು ಮಾಡಬೇಕೆಂದೂ ಸಂಕಲ್ಪಮಾತ್ರವನ್ನು ಮಾಡಿದರೂ ಅದಕ್ಕೆ ಮಹಾಫಲವಿದೆ. ಅವರು ಮಹಾಕಾರ್ಯಕ್ಕೋಸ್ಕರ ಪ್ರಯತ್ನ ಮಾಡಿದ್ದು ವಿಶೇಷ ಫಲಪ್ರದವಾಗುತ್ತದೆ. ಅವರು ಮಹಾಕಾರ್ಯವನ್ನು ಆರಂಭಿಸಿ ಮಧ್ಯದಲ್ಲಿ ಬಿಟ್ಟರೂ ಅವರು ಮಾಡಿದ್ದು ವ್ಯರ್ಥವಾಗುವುದಿಲ್ಲ. ಅವರು ಮಹಾಕಾರ್ಯವನ್ನು ಮಾಡುವಾಗ ಪ್ರಮಾದದಿಂದ ಅಂಗವೈಕಲ್ಯ(ಲೋಪ)ವಾದರೂ ಅದರಿಂದ ಏನೂ ಅವರಿಗೆ ಹಾನಿಯಾಗುವುದಿಲ್ಲ. ಕೃಷಿ ವ್ಯಾಪಾರಾದಿಗಳನ್ನು ಮಾಡಬೇಕೆಂದು ಸಂಕಲ್ಪ ಮಾಡಿದ ಮಾತ್ರಕ್ಕೆ ಅಥವಾ ಅದಕ್ಕೆ ಪ್ರಯತ್ನ ಮಾಡಿದ ಮಾತ್ರಕ್ಕೆ ಅಥವಾ ಆರಂಭಿಸಿ ಅರ್ಧದಲ್ಲಿ ಅದನ್ನು ಬಿಟ್ಟರೆ, ಅಥವಾ ಪ್ರಮಾದದಿಂದ ವ್ಯತ್ಯಾಸವಾಗಿ ಮಾಡಿದರೆ ಏನೂ ಅದರಿಂದ ಫಲವು ಸಿಗಲಾರದು. ಪ್ರತ್ಯುತ ಕಷ್ಟ-ನಷ್ಟ ಮುಂತಾದ ಅನರ್ಥಗಳೇ ಆಗುವವು. ಶ್ರೀಹರಿಭಕ್ತಿಪುರಸ್ಸರವಾಗಿ ಮಾಡತಕ್ಕ ಕರ್ಮಗಳು ಮಾತ್ರ ಹೀಗೆ ಆಗುವುದಿಲ್ಲ. ಆದುದರಿಂದ ಶ್ರೀಹರಿಭಕ್ತಿಯ ಮಹಿಮೆಯು ಅನುಪಮವಾದದ್ದು.

ಶ್ರೀಹರಿಯಲ್ಲಿ ಭಕ್ತಿ ಇಲ್ಲದೇ ಶ್ರೀಹರಿಯಿಂದ ಸಂತತಿ, ಸಂಪತ್ತು ಮೊದಲಾದ ಐಹಿಕ ಫಲಗಳನ್ನು ಅಪೇಕ್ಷಿಸಿ ಮಾಡುವ ಪೂಜೆಯು ಲೋಕದೃಷ್ಟಿಯಿಂದ, ಭಾಗ್ಯದೃಷ್ಟಿಯಿಂದ ಶ್ರೀಹರಿಪೂಜೆಯೆಂದು ಅನಿಸಿಕೊಂಡರೂ ವಸ್ತುತಃ ಅದು ಪೂಜೆಯಲ್ಲ. ಅಂಗಡಿಯಲ್ಲಿ ಸಾಮಾನನ್ನು ಪಡೆಯುವುದಕ್ಕೋಸ್ಕರ ಹಣ ಕೊಟ್ಟದ್ದು ಹೇಗೆ ದಾನವಲ್ಲವೋ ಅದು ಹೇಗೆ ವ್ಯಾಪಾರವೋ ಹಾಗೇ ಇದೂ ಒಂದು ವ್ಯಾಪಾರ.

ಕೇವಲ ಭಕ್ತಿಯಿಂದ ಶ್ರೀಹರಿಪ್ರೀತ್ಯರ್ಥವಾಗಿ ಪೂಜೆಮಾಡಿದರೆ, ತನ್ನನ್ನೇ ಆ ಭಕ್ತನಿಗೆ ಶ್ರೀಹರಿಯು ಕೊಡಲು ಸಿದ್ಧನಾಗುತ್ತಾನೆ.

ಇಂಥಹ ಮಹಾಮಹಿಮೆಯುಳ್ಳ ಶ್ರೀಹರಿಭಕ್ತಿಯು ಎಲ್ಲರಿಗಿಂತಲೂ ಅಧಿಕವಾಗಿ ಜೀವರಾಶಿಯಲ್ಲಿ ಬ್ರಹ್ಮದೇವರು ಮತ್ತು ಅವರಿಗೆ ಸಮಾನರಾದ ಮುಖ್ಯವಾಯುದೇವರಿಗೆ ಮಾತ್ರವಿರುವುದು. ಇತರರಿಗೆ ಈ ಭಕ್ತಿಯು ಕಡಿಮೆಯಾಗುತ್ತಾ ಬಂದು ಮನುಷ್ಯೋತ್ತಮರಲ್ಲಿ ಕೊನೆಗೊಳ್ಳುವುದು.

ಮಧ್ಯಮ ಮನುಷ್ಯರನ್ನು ಆರಂಭಿಸಿ ಮನುಷ್ಯಾಧಮರು, ಅಸುರರು, ರಾಕ್ಷಸರು ಇವರಲ್ಲಿ ಶ್ರೀಹರಿದ್ವೇಷವು ಅಧಿಕವಾಗುತ್ತಾ ಕಲಿಯಲ್ಲಿ ಶ್ರೀಹರಿದ್ವೇಷದ ಪರಾಕಾಷ್ಠಾಪರ್ಯವಸಾನವಾಗುತ್ತದೆ.

ಈ ದ್ವೇಷವು ಅಸಜ್ಜೀವರ ಸ್ವಭಾವಭೂತವಾದದ್ದು. ಹಾಗೇ ಈ ಭಕ್ತಿಯೂ ಸಜ್ಜೀವರ ಸ್ವಭಾವಭೂತವಾದದ್ದು. ಸ್ವಭಾವಭೂತವಾದ ದ್ವೇಷವಾಗಲೀ ಭಕ್ತಿಯಾಗಲೀ ಆಯಾ ಸಾಧನಗಳಿಂದ ಪೂರ್ಣವಾಗಿ ಅಭಿವ್ಯಕ್ತವಾದಮೇಲೆ ಅದರ ಫಲದ ಅನುಭವವು ಆಗುವುದು. ದ್ವೇಷದ ಫಲ ದುಃಖಾನುಭವವು. ಭಕ್ತಿಯ ಫಲ ಆನಂದಾನುಭವವು. ಆ ದುಃಖ ಮತ್ತು ಆನಂದಗಳು ಕೂಡಾ ಆ ಜೀವರ-

ಸ್ವಭಾವಭೂತವಾದದ್ದು. ಸ್ವಭಾವಭೂತವಾದ ಭಕ್ತಿಯ ತಾರತಮ್ಯದಿಂದ ಮೋಕ್ಷದಲ್ಲಿ ಸ್ವಭಾವಭೂತವಾದ ಆನಂದದ ಅಭಿವ್ಯಕ್ತಿಯ ತಾರತಮ್ಯವು ಇರುತ್ತದೆ.

ಒಂದೊಂದು ಜೀವರಿಗೆ ಒಂದೊಂದು ತರಹದ ಭಕ್ತಿ ಮತ್ತು ಒಂದೊಂದು ತರಹದ ಆನಂದದ ಅನುಭವವನ್ನು ಕೊಡತಕ್ಕ ಶ್ರೀಹರಿಯು ವೈಷಮ್ಯಪಕ್ಷಪಾತವೆಂಬ ಮಹಾದೋಷದಿಂದ ದೂಷಿತನಲ್ಲವೋ? ಎಂಬ ಶಂಕೆಗೆ ಈಗ ಅವಕಾಶವಿಲ್ಲ. ಏಕೆಂದರೆ, ಒಬ್ಬನು ತಾಮ್ರ, ಹಿತ್ತಾಳೆ, ಬೆಳ್ಳಿ, ಬಂಗಾರದ ತಂಬಿಗೆಗಳನ್ನು ತೊಳೆಯುತ್ತಾನೆ. ಆಗ ತಂಬಿಗೆಗಳು ಬೇರೆ ಬೇರೆ ಕಾಂತಿಯುಳ್ಳವುಗಳಾಗುತ್ತವೆ. ಆದರೆ ಆ ಮನುಷ್ಯನು ಆ ತಂಬಿಗೆಗಳ ನಾನಾ ವಿಧ ಕಾಂತಿಗಳಿಗೆ ಕಾರಣನಾದರೂ ಆ ಕಾಂತಿಗಳು ಆಯಾ ತಂಬಿಗೆಗಳ ಸ್ವಭಾವಭೂತವಾದ್ದರಿಂದ ವೈಷಮ್ಯವುಳ್ಳವನೆಂದು ಲೋಕದಲ್ಲಿ ವ್ಯವಹರಿಸಲ್ಪಡುವುದಿಲ್ಲ. ಅದರಂತೆ ಆಯಾ ಜೀವರ ಸ್ವಭಾವಭೂತ ಭಕ್ತ್ಯಾದಿ ಗುಣಗಳು ತಾರತಮ್ಯದಿಂದ ವ್ಯಕ್ತವಾಗಲು ಕಾರಣನಾದ ಶ್ರೀಹರಿಯು 'ದೋಷಗಂಧವಿಧುರನು' ಎಂದು ತಿಳಿಯಬೇಕು.

ಕೆಸರಿನಲ್ಲಿ ಬಿದ್ದ ಉತ್ತಮ ರತ್ನವು ಕಪ್ಪು ಅಂಗಾರದಂತೆ ತೋರಿದರೂ ಅದನ್ನು ತೊಳೆದರೆ ಅದು ಹೇಗೆ ಥಳಥಳ ಹೊಳೆಯುತ್ತದೋ ಅದರಂತೆ ಸಂಸಾರಕೂಪದ ಕೆಸರಿನಲ್ಲಿ ಬಿದ್ದ ಸಜ್ಜೀವನು ಸಂಸಾರದಲ್ಲಿ ಸಾಮಾನ್ಯವಾಗಿ ತೋರುತ್ತಿದ್ದರೂ ಶ್ರೀಹರಿಯ ಪ್ರೇಮಪ್ರವಾಹದಿಂದ ತೊಳೆಯಲ್ಪಟ್ಟು ಪರಿಶುದ್ಧನಾದಾಗ ವಿಶೇಷವಾಗಿ ಪ್ರಕಾಶಿಸುತ್ತಾನೆ. ಈ ರೀತಿ 'ಸಜ್ಜೀವರಾಶಿಗಳನ್ನು ಶುದ್ಧೀಕರಿಸಿ ಉದ್ಧರಿಸುವ ಶ್ರೀಹರಿಯು ಎಷ್ಟು ಕರುಣಾಸಮುದ್ರನು' ಎಂದು ಜ್ಞಾನಿಗಳಿಂದ ಸದಾ ಸ್ತುತ್ಯನೇ ಆಗಿರುತ್ತಾನೆ.

ಸಂಸಾರದಲ್ಲಿ ದುಷ್ಟರ ಸಹವಾಸದಿಂದ ಜೀವನು ಮಹಾದುರಾಚಾರಿಯಾದರೂ ಪಶ್ಚಾತ್ತಾಪ ಪುಟ್ಟಿ ಆ ದುರಾಚಾರಗಳನ್ನು ಬಿಟ್ಟು ಶ್ರೀಹರಿಯನ್ನು ಭಜಿಸಿದರೆ ಅಂತಹವನನ್ನು ಕರುಣಾಸಮುದ್ರನಾದ ಶ್ರೀಹರಿಯು ಉದ್ಧಾರಮಾಡುತ್ತಾನೆ. ಮತ್ತು ಮಹಾದುರಾಚಾರಿಯು ಪಶ್ಚಾತ್ತಾಪವಿಲ್ಲದೇ ಕೇವಲ ಭಜನೆ ಮಾಡಿದರೆ ಅದಕ್ಕೆ ಶ್ರೀಹರಿಯು ಪ್ರೀತನಾಗುವುದಿಲ್ಲ.

ಶ್ರೀಹರಿಯು ತನ್ನ ಭಕ್ತರಾದ ದೇವತೆಗಳು ಋಷಿಗಳು ಮನುಷ್ಯೋತ್ತಮರುಗಳಲ್ಲಿ ಅವರ ಗುಣತಾರತಮ್ಯವನ್ನು ಅನುಸರಿಸಿ ತಾರತಮ್ಯದಿಂದ ಭಕ್ತಿಯನ್ನು ಮಾಡದೇ ಇದ್ದರೆ, ಕೇವಲ ತನ್ನಲ್ಲಿ ಮಾತ್ರ ಭಕ್ತಿ ಮಾಡಿದರೆ ಪ್ರೀತನಾಗುವುದಿಲ್ಲ. ತನ್ನ ಭಕ್ತರಲ್ಲಿ ಭಕ್ತಿಯನ್ನು ಮಾಡದೇ ತನ್ನಲ್ಲಿ ಮಾತ್ರ ಭಕ್ತಿಯನ್ನು ಮಾಡಿದರೆ ಅದನ್ನು ಶ್ರೀಹರಿಯು ಸಹಿಸುವುದಿಲ್ಲ.

ಶ್ರೀಹರಿಯ ಭಕ್ತರಾದ ದೇವತೆಗಳನ್ನು ಪೂಜಿಸುವಾಗ ಆ ದೇವತೆಗಳ ಒಳಗೆ ಶ್ರೀಹರಿಯನ್ನೇ ಪೂಜಿಸಬೇಕು. ಇದರಿಂದ ಶ್ರೀಹರಿಯ ಭಕ್ತರಾದ ದೇವತೆಗಳಿಗೆ ಪರಮಪ್ರೀತಿಯಾಗುತ್ತದೆ. ಹಾಗೆ ಮಾಡದೇ ಕೇವಲ ದೇವತೆಗಳನ್ನು ಪೂಜಿಸಿದರೆ ದೇವತೆಗಳಿಗೆ ಪ್ರೀತಿಯಾಗುವುದಿಲ್ಲ. ಮರದ ಬುಡಕ್ಕೆ ನೀರು ಹಾಕಿದರೆ ಕೊಂಬೆಗಳಿಗೆ

ಎಲೆಗಳಿಗೆ ಪ್ರಸನ್ನತೆಯಾಗುತ್ತದೆ. ಕೊಂಬೆಗಳಿಗೆ ಎಲೆಗಳಿಗೇನೇ ನೀರು ಹಾಕಿದರೆ ಅದು ನಿಷ್ಫಲವಾಗುತ್ತದೆ. ಅದರಂತೆಯೆ ಎಲ್ಲಾ ದೇವತೆಗಳಿಗೂ ಶ್ರೀಹರಿಯೇ ಮೂಲ ನಾಗಿದ್ದಾನೆ. ಆದುದರಿಂದ ದೇವತೆಗಳ ಒಳಗೆ ಶ್ರೀಹರಿಯ ಪೂಜೆಯೇ ದೇವತೆಗಳ ಪೂಜೆಯಾಗುತ್ತದೆ.

ಇದೇ ರೀತಿ ಮಾತಾಪಿತೃಗಳನ್ನು ಮಕ್ಕಳು, ಪತಿವ್ರತಾ ಸ್ತ್ರೀಯರು ತಮ್ಮ ಪತಿಯರನ್ನೂ ಪೂಜಿಸಬೇಕು. ಅಂದರೆ ಮಾತಾಪಿತೃಗಳ ಒಳಗೆ ಪತಿಯ ಒಳಗೆ ಶ್ರೀಹರಿಯನ್ನು ಪೂಜಿಸುವುದೇ ಮಾತಾಪಿತೃಗಳ ಮತ್ತು ಪತಿಯ ಪೂಜೆಯೆಂದು ತಿಳಿಯಬೇಕು.

ಇಂತಹ ಶ್ರೀಹರಿಭಕ್ತಿಯು ಸಂಸಾರದಲ್ಲಿ ಮಾತ್ರ ಸಾಧಕರಿಗೆ **ಇರುವುದಿಲ್ಲ**. ಮುಕ್ತಿಯಲ್ಲಿಯೂ ಅದು ಇರುತ್ತದೆ. ಮುಕ್ತಿಯಲ್ಲಿ ಆ ಭಕ್ತಿಯು **ಆನಂದರೂಪ** ವಾಗಿರುವುದರಿಂದ ಅದಕ್ಕೆ ಅಲ್ಲಿ ಬೇರೆ ಫಲವಿಲ್ಲ. ಸ್ವಯಂ **ಅದು ಫಲ**ರೂಪ ವಾದದ್ದು. ಈ ಭಕ್ತಿಯ ಜೊತೆಗೆ ತನ್ನಕ್ಕಿಂತ ಅಧಮ ಸಜ್ಜೀವರಲ್ಲಿ ದಯೆ ಇರಬೇಕು. ತನಗೆ ಸಮಾನ ಸಜ್ಜೀವರಲ್ಲಿ ಮೈತ್ರಿ ಇರಬೇಕು. ಈ ರೀತಿಯಾದ ಭಕ್ತಿಯಿಂದಲೇ ಶ್ರೀಹರಿಯು ಸಂಪ್ರೀತನಾಗುತ್ತಾನೆ.

೧. ೩. ಯೋ ವೈ ಭೂಮಾ ತತ್ಸುಖಮ್

ಛಾಂದೋಗ್ಯೋಪನಿಷತ್ತಿನಲ್ಲಿ ಹೀಗೊಂದು ವ್ಯಾಪ್ತಿಯನ್ನು ತಿಳಿಸಲಾಗಿದೆ –'ಯೋ ವೈ ಭೂಮಾ ತತ್ಸುಖಮ್ । ನಾಲ್ಪೇ ಸುಖಮಸ್ತಿ' –ಗುಣಪೂರ್ಣನಾದ ವನಷ್ಟೇ ಸುಖಿಯಾಗಬಲ್ಲ; ಅಲ್ಪಗುಣಸಂಪನ್ನನಲ್ಲಿ ಸುಖವೇ ಇರಲಾರದು ಎಂಬು ದಾಗಿ. ಇದರಿಂದ ಆಪಾತತಃ ತೋರಬರುವ ಅರ್ಥವಾದರೂ ಅಲ್ಪಗುಣಸಂಪನ್ನರಲ್ಲೂ ಸುಖವಿರುವುದು ಅನುಭವಸಿದ್ಧವಾಗಿರುವುದರಿಂದ, ಗುಣಪೂರ್ಣನಾದವನೇ ಸುಖ ಪೂರ್ಣನಾಗಬಲ್ಲ; ಅಲ್ಪಗುಣಸಂಪನ್ನನಲ್ಲಿ ಅಲ್ಪ ಸುಖ ಇರಬಹುದೇ ಹೊರತು ಪೂರ್ಣಸುಖ ಇರಲಾರದು –ಎಂಬ ಅರ್ಥವನ್ನು ಪರಿಷ್ಕರಿಸಿಕೊಳ್ಳಬೇಕು.

ಈ ವ್ಯಾಪ್ತಿ ಯುಕ್ತಿಸಿದ್ಧವಾದುದೂ ಹೌದು. ಉತ್ಕರ್ಷದಾಯಕ ಧರ್ಮವನ್ನು ಗುಣ ಎಂದು ಪರಿಗಣಿಸುವುದರಿಂದ ಆನಂದಕ್ಕೆ ಪ್ರಯೋಜಕವಾದುದರಿಂದಲೇ ಉತ್ಕರ್ಷವು ಸಿದ್ಧಿಸುವುದರಿಂದ ಪ್ರತಿಯೊಂದು ಗುಣವೂ ಆನಂದಕ್ಕೆ ಪ್ರಯೋಜಕ ವೆಂದು ಪರಿಗಣಿಸಲಾಗುವುದು. ಇಂತಹ ಅನಂತಗುಣಗಳು ಭಗವಂತನಲ್ಲಿ ಇವೆ ಎಂದರೆ ಒಂದೊಂದು ಗುಣದಿಂದ ಒಂದೊಂದು ಆನಂದವು ಸಿದ್ಧಿಸುತ್ತಾ ಅನಂತ ಗುಣಗಳಿಂದ ಅನಂತಾನಂದವೇ ಸಿದ್ಧಿಸುವುದು –ಪೂರ್ಣಜ್ಞಾನಾತ್ಮಕ ಗುಣದಿಂದ ಒಂದು ಆನಂದವಾದರೆ, ಪೂರ್ಣಶಕ್ತ್ಯಾತ್ಮಕ ಗುಣದಿಂದ ಇನ್ನೊಂದು ಆನಂದ. ಹೀಗೆ ಅನಂತಗುಣಗಳಿಂದ ಅನಂತಾನಂದ.

'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ ಯದೇಷ ಆಕಾಶ ಆನಂದೋ ನ ಸ್ಯಾತ್' –ಎಂಬ ತೈತ್ತಿರೀಯೋಪನಿಷತ್ತಿನಲ್ಲಿ ಭಗವಂತನ ಪ್ರೇರಕತ್ವ ಮುಂತಾದವು ಅವನ ಆನಂದೋದ್ರೇಕದಿಂದ ಎಂಬ ಅಭಿಪ್ರಾಯವನ್ನು ಸೂಚಿಸಲಾಗಿದೆ.

ಗುಣಗಳಿಂದ ಆನಂದ ಸಿದ್ಧಿಸುವುದೆಂದು ಛಾಂದೋಗ್ಯೋಪನಿಷತ್ತು ಹೇಳಿದರೆ, ಆನಂದೋದ್ರೇಕದಿಂದ ಭಗವಂತನಲ್ಲಿ ಸ್ರಷ್ಟೃತ್ವಾದಿ ಗುಣಗಳು ಸಿದ್ಧಿಸುವುದೆಂದು ತೈತ್ತಿರೀಯೋಪನಿಷತ್ತು ಹೇಳುತ್ತಿದ್ದು ಗುಣ–ಆನಂದಗಳ ನಡುವೆ ಅನ್ಯೋನ್ಯಾಶ್ರಯತ್ವವು ಇರುವಂತೆ ಕಾಣಿಸುವುದು.

ಆದರೆ ಭಗವಂತನ ಸುಖವು ಸ್ವರೂಪಾತ್ಮಕವಾಗಿದ್ದು ಅವನಂತೆ ಅಖಂಡಾತ್ಮಕವಾಗಿರುವುದಾದರೂ ಭೇದ ಪ್ರತಿನಿಧಿಯಾದ ವಿಶೇಷದ ಸಾಮರ್ಥ್ಯದಿಂದಾಗಿ ಸುಖದಲ್ಲಿ ಭೇದವನ್ನು, ಅಭಿವ್ಯಕ್ತಿಯನ್ನು ಒಪ್ಪಲಾಗುವುದು. ಆದ್ದರಿಂದ ಗುಣಗಳಿಂದ ಅಭಿವ್ಯಕ್ತಗಳಾಗುವ ಆನಂದವೇ ಬೇರೆ, ಸ್ರಷ್ಟೃತ್ವಾದಿ ಗುಣಗಳಿಗೆ ಪ್ರಯೋಜಕಗಳಾಗುವ ಆನಂದೋದ್ರೇಕವೇ ಬೇರೆ –ಎಂದು ಅನ್ಯೋನ್ಯಾಶ್ರಯತ್ವವನ್ನು ಪರಿಹರಿಸಬಹುದಾಗಿದೆ.

ಹೀಗೆ ಗುಣಪೂರ್ಣತ್ವ ಹಾಗೂ ಆನಂದಪೂರ್ಣತ್ವ ವ್ಯಾಪ್ಯವ್ಯಾಪಕ ಭಾವವನ್ನು ಹೊಂದಿದ್ದು, ಆನಂದಪೂರ್ಣತ್ವವು ಗುಣಪೂರ್ಣತ್ವಕ್ಕೆ ಜ್ಞಾಪಕವಾಗುವ ಪ್ರಯುಕ್ತ ಹಿಂದಿನ ಸೂತ್ರಗಳಲ್ಲಿ ಪ್ರತಿಜ್ಞಾತವಾದ ಗುಣಪೂರ್ಣತ್ವಕ್ಕೆ ಪುಷ್ಟಿ ನೀಡುವಂತೆ 'ಆನಂದಮಯೋಽಭ್ಯಾಸಾತ್' –ಎಂಬ ಸೂತ್ರದಲ್ಲಿ 'ಆನಂದಮಯ' ಶಬ್ದವನ್ನು ಬಳಸಿ ಆನಂದಪೂರ್ಣತ್ವವನ್ನು ಸಂದೇಶಿಸಲಾಗಿದೆ.

೧.೪. ದೇವರಿಗೆ ವೈಷಮ್ಯವಿಲ್ಲ

ತತ್ತ್ವಜ್ಞಾನ ಎಲ್ಲರ ಸೊತ್ತಾಗಬಾರದು. ಹಾವಿಗೆ ಹಾಲೆರೆದರೂ ವಿಷವೇ ಆಗುತ್ತದೆ. ದುಷ್ಟರಿಂ**ಕ್ಕೆಗೆ ಸಿಕ್ಕ ತತ್ತ್ವ**ಜ್ಞಾನ ಸಮಾಜಘಾತುಕವಾಗುತ್ತದೆ. ಆದ್ದರಿಂದ ಕೆಲವು ರಹಸ್ಯ ತತ್ತ್ವಗಳನ್ನು **ಗೋಪ್ಯವಾಗಿ ತಿಳಿಸು**ವುದು ಶಾಸ್ತ್ರಪುರಾಣಗಳ ಶೈಲಿ. ಆಚಾರ್ಯರು ತಮ್ಮ ನಿರ್ಣಯದಲ್ಲಿ **ಗುಹ್ಯಭಾಷೆಯಲ್ಲಿದ್ದ** ಇಂತಹ ಅನೇಕ ವಿಷಯಗಳನ್ನು ಸ್ಪಷ್ಟ ಭಾಷೆಯಲ್ಲಿ ನಿರೂಪಿಸಿದ್ದಾರೆ. 'ಸ್ವಭಾ**ವಾಖ್ಯಾ ಯೋಗ್ಯತಾ**ಯಾ ಹರಾಖ್ಯಾ' ಎಂಬಲ್ಲಿ ಸ್ವಭಾವಯೋಗ್ಯತೆಗೆ ಹರ ಶಬ್ದವನ್ನು ಪ್ರಯೋಗಿಸಲಾಗಿದೆ ಎಂದು ತಿಳಿಸಿದ್ದಾರೆ. ಹರವೆಂದರೆ ಲೌಕಿಕ ಭಾಷೆಯಲ್ಲಿ ಬೇರೆಯೇ ಅರ್ಥವಾದರೆ ಗುಹ್ಯಭಾಷೆಯಲ್ಲಿ ಜೀವನ ಸ್ವರೂಪ ಯೋಗ್ಯತೆ ಎಂದು ಅರ್ಥ.

ಭಗವಂತನ ವೈಷಮ್ಯ ದೋಷಪರಿಹಾರಕ್ಕೆ ಇದನ್ನು ಒಪ್ಪದ ಹೊರತು ಬೇರೆ ಮಾರ್ಗವಿಲ್ಲ. ಸತ್ಕಾರ್ಯವಾದವನ್ನು ತಿಳಿಸುವ ಶಾಸ್ತ್ರಗಳು ಜೀವನ ಸುಖದುಃಖ ಮೊದಲಾದ ಯಾವುದೇ ವೈಷಮ್ಯ ಅವನ ಸ್ವರೂಪದಲ್ಲಿದ್ದಂತೆಯೇ ಅಭಿವ್ಯಕ್ತವಾಗುತ್ತದೆಯೇ ಹೊರತು ಇಲ್ಲದೇ ಇರುವ ಯಾವ ಅಂಶವೂ ಹೊರಹೊಮ್ಮ

ಲಾರದು. ಭಗವಂತ ಸರ್ವಸಮರ್ಥನಾದರೂ ಈ ಜೀವಸ್ವರೂಪ ಯೋಗ್ಯತೆಯನ್ನು ಅನ್ಯಥಾ ಮಾಡಲಾರ. ದೀಪದ ಸ್ವಭಾವ ಪ್ರಕಾಶ. ಪ್ರಕಾಶವನ್ನು ನಾಶಮಾಡು ವುದೆಂದರೆ ದೀಪವನ್ನೇ ಆರಿಸಿದಂತೆ. ಜೀವರ ಸ್ವಭಾವವನ್ನು ಬೇರ್ಪಡಿಸುವುದೆಂದರೆ ಅವರ ಸ್ವರೂಪವನ್ನೇ ನಾಶಮಾಡಿದಂತೆ. ಆದ್ದರಿಂದ ಭಗವಂತ ನಮ್ಮಲ್ಲಿ ಮೂಲ ಭೂತವಾಗಿ ಇದ್ದದ್ದನ್ನೇ ಅಭಿವ್ಯಕ್ತಗೊಳಿಸುತ್ತಾನೆ ಹೊರತು ಇಲ್ಲದಿರುವುದನ್ನು ಕೊಡುವುದಿಲ್ಲ.

●

೧. ೫. ಭಕ್ತನಾದವನನ್ನು ದಂಡಿಸಬಹುದೇ?

ತಾನು ಪ್ರತ್ಯಕ್ಷನಾಗಿ ವಾಲಿಯನ್ನು ಸಂಹರಿಸಲು ತೊಡಗಿದಲ್ಲಿ, ತನ್ನನ್ನು ಕಂಡಾಕ್ಷಣ ವಾಲಿಯು ತನ್ನ ಕಾಲಿಗೆ ಎರಗಿಯಾನು. ತನ್ನ ಕಾಲಿಗೆರಗಿದಲ್ಲಿ ಮುಂದೆ ಅವನನ್ನು ಸಂಹರಿಸಲಾಗದು –ಎಂಬುದಾಗಿ ಶ್ರೀರಾಮನು ಅಡ್ಡದಲ್ಲಿ ನಿಂತು ವಾಲಿಗೆ ಬಾಣಪ್ರಯೋಗ ಮಾಡಿದನು. ಶ್ರೀರಾಮನನ್ನು ಕಂಡಾಕ್ಷಣ ಅವನ ಕಾಲಿಗೆ ಬೀಳುವಷ್ಟು ಶ್ರೇಷ್ಠ ಭಕ್ತ ವಾಲಿಯೆಂದಮೇಲೆ ಅಂತಹವನನ್ನು ಶ್ರೀರಾಮನು ಸಂಹರಿಸಿದುದು ಉಚಿತವೇ? ಭಕ್ತನಾದವನನ್ನು ಹಾಗೆ ಹಿಂಸಿಸಬಹುದೆ? ಎಂಬ ಸಂದೇಹ ಸಹಜ.

ಶ್ರೀರಾಮನು ವಾಲಿಯನ್ನು ಯಾವ ಭಾವನೆಯಿಂದ, ಯಾಕಾಗಿ ಸಂಹರಿಸಿದ ನೆಂದು ವಿಶ್ಲೇಷಿಸಿಕೊಂಡಲ್ಲಿ ಈ ಸಂದೇಹವು ಪರಿಹಾರವಾಗಬಲ್ಲುದು. ವಾಲಿಯು ಸುಗ್ರೀವನ ರಾಜ್ಯ, ಪತ್ನ್ಯಾದಿಗಳನ್ನು ಅಪಹರಿಸಿ ಅಪರಾಧವೆಸಗಿದ್ದ ಭಕ್ತನಾದವನಿಂದ ಇಂತಹ ಅಪರಾಧಗಳು ನಡೆಯಬಾರದಾಗಿತ್ತು. ಆದ್ದರಿಂದ ಆ ಅಪರಾಧಕ್ಕಾಗಿ ಅವನಿಗೆ ದಂಡನೆಯಿತ್ತು, ಪಶ್ಚಾತ್ತಾಪವುಂಟಾಗುವಂತೆ ಮಾಡಬೇಕು. ಹಿಂದೆ ಮಾಡಿದ ಅಪರಾಧವು ಹೆಚ್ಚಾಗಿ ಲೇಪಿಸದಂತೆಯೂ ಮುಂದೆ ಅವನಿಂದ ಇಂತಹ ಅಪರಾಧಗಳು ನಡೆಯದಂತೆಯೂ ಆಗಬೇಕಾಗಿದೆ. ಅದಕ್ಕಾಗಿ ಶ್ರೀರಾಮನು ಅವನನ್ನು ಬಾಣದಿಂದ ಹೊಡೆದ. ಶ್ರೀರಾಮನು ಸಂಕಲ್ಪಿಸಿದಂತೆ ರಾಮನಿಂದ ದಂಡಿಸಲ್ಪಟ್ಟ ವಾಲಿಯು ತನ್ನ ತಪ್ಪನ್ನು ವಿಶ್ಲೇಷಿಸಿಕೊಂಡು ಪಶ್ಚಾತ್ತಾಪ ಪಟ್ಟ. ತನ್ನ ದಂಡನೆಯ ಉದ್ದೇಶ ಸಿದ್ಧಿಸಿತೆಂದು ತಿಳಿದ ಶ್ರೀರಾಮನು ವಾಲಿಗೆ ಬದುಕುವ ಬಯಕೆ ಇದ್ದರೆ ಬದುಕಿಸುವುದಾಗಿ ಆಶ್ವಾಸನೆಯಿತ್ತ. ಆದರೆ 'ತ್ವದಗ್ರೇ ಕೋ ನಾಮ ನೇಚ್ಛತಿ ಮೃತಿಂ ಪುರುಷೋತ್ತಮ' –ಪುರುಷಶ್ರೇಷ್ಠನಾದ ನಿನ್ನೆದುರು ಯಾರು ತಾನೇ ಸಾಯಲು ಬಯಸಲಾರ? ಎಂದು ವಾಲಿ ಬದುಕಲು ಇಚ್ಛಿಸುವುದಿಲ್ಲ. ಈ ವಿಚಾರ ಶ್ರೀ ಮಧ್ವಾಚಾರ್ಯರು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಉಲ್ಲೇಖಿಸಿರುವರು. ತುಲಸೀರಾಮಾಯಣದಲ್ಲೂ ಉಲ್ಲೇಖಿಸಲ್ಪಟ್ಟ ಈ ವಿಚಾರ ಬೇರೆ ಪುರಾಣದಲ್ಲೂ ಇದ್ದಿರಲೇ ಬೇಕು. ಹೀಗೆ ಶ್ರೀರಾಮನು ವಾಲಿಯನ್ನು ದಂಡಿಸಿದ್ದು, ವೈದ್ಯ ರೋಗಿಯ ರೋಗನಿವಾರಣೆಗಾಗಿ ಶಸ್ತ್ರಚಿಕಿತ್ಸೆಯನ್ನು ಕೈಗೊಳ್ಳುವಂತೆ ಅಷ್ಟೇ. ●

೧. ೬. ನಿತ್ಯನರಕಪ್ರದಾನವೂ ಗುಣವೇ

ತಾಮಸಜೀವರ ದುಷ್ಟ ಸ್ವಭಾವವು ಅನಾದಿಯಾಗಿ ಅವ್ಯಕ್ತವಾಗಿರುವುದು. ಅದನ್ನು ಅಭಿವ್ಯಕ್ತಗೊಳಿಸಿ, ಆ ಸ್ವಭಾವಕ್ಕನುಗುಣವಾಗಿ ಅವರಿಗೆ ನಿತ್ಯನರಕವನ್ನು ನೀಡುವವನು ಪರಮೇಶ್ವರನೆಂದು ಮಾಧ್ವ ಸಿದ್ಧಾಂತದಲ್ಲಿ ಪ್ರತಿಪಾದಿಸಲಾಗುವುದು. ಇದರಿಂದಾಗಿ ಪರಮೇಶ್ವರನಲ್ಲಿ ಭಕ್ತಿಯ ಬದಲು ದ್ವೇಷ ಉಂಟಾಗುವಂತೆ ಮಾಧ್ವ ಸಿದ್ಧಾಂತದಲ್ಲಿ ಮಾಡಲಾಗಿದೆ ಎಂದು ಶಂಕಿಸಬಾರದು. ಅನಾದಿಯಾಗಿ ಸ್ವಭಾವವು ಅವ್ಯಕ್ತವಾಗಿರುವುದಾದರೂ ಕದಾಚಿತ್ ವ್ಯಕ್ತವಾಗುವಂತಹದ್ದೂ ಅದರ ಸ್ವಭಾವ. ಎಲ್ಲ ಪದಾರ್ಥಗಳ ಸ್ವಭಾವಗಳೂ ಭಗವದಧೀನಗಳೆಂದಮೇಲೆ ಸ್ವಭಾವಗಳ ಕದಾಚಿತ್ ಅಭಿವ್ಯಕ್ತಿಯಾಗುವ ಸ್ವಭಾವವೂ ಅವನ ಅಧೀನವೇ. ಆದ್ದರಿಂದ ಅದನ್ನು ಅವನು ನಡೆಸಲೇ ಬೇಕು. ಇಲ್ಲದಿದ್ದರೆ ಅವನು ಸರ್ವೇಶ್ವರ ಎಂದೇ ಆಗಲಾರ.

'ಆಸುರೀಂ ಯೋನಿಮಾಪನ್ನಾಃ ಮೂಢಾ ಜನ್ಮನಿ ಜನ್ಮನಿ ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್' -ಮುಂತಾದ ಶಾಸ್ತ್ರದಲ್ಲಿ ತಾಮಸ ಜೀವರಿಗೆ ಅವರ ತಾಮಸಸ್ವಭಾವವನ್ನು ಅಭಿವ್ಯಕ್ತಗೊಳಿಸಿ ಅವರನ್ನು ನಿತ್ಯನರಕದಲ್ಲಿ ಹಾಕಿರುವುದನ್ನು ಪ್ರತಿಪಾದಿಸಲಾಗಿದೆ. ಶಾಸ್ತ್ರ ಪ್ರತಿಪಾದಿತವಾದುದಕ್ಕೆ ಶಾಸ್ತ್ರಾಂತರದ ವಿರೋಧ ಬಂದಾಗಷ್ಟೇ ಅದನ್ನು ತ್ಯಜಿಸಬೇಕು. ಬರೇ ಯುಕ್ತಿವಿರೋಧ ಬಂದಾಗಲೂ ಶಾಸ್ತ್ರ ಪ್ರತಿಪಾದಿತವಾದುದನ್ನು ಬಿಡುವುದಾದರೆ, 'ಅಣೋರಣೀಯಾನ್.....' ಇತ್ಯಾದಿ ಶಾಸ್ತ್ರ ಪ್ರತಿಪಾದಿತವಾದುದನ್ನು ಯುಕ್ತಿವಿರೋಧದಿಂದಾಗಿ ತ್ಯಜಿಸಬೇಕಾದೀತು! ಅಲ್ಲದೆ, '....ಈಶೋ ಹ್ಯಸೌ ಗುಣದೋಷಾದಿಸತ್ತ್ವೇ.....' -ಎಂದಿರುವಂತೆ ಧರ್ಮಗಳು, ಗುಣ ಅಥವಾ ದೋಷ ಎನಿಸುವಂತೆ ವ್ಯವಸ್ಥೆಗೊಳಿಸುವವನು ಭಗವಂತನೇ ಅಂದಮೇಲೆ ತಾಮಸರಿಗೆ ನಿತ್ಯನರಕ ಪ್ರಧಾನಗುಣ ಎನಿಸುವಂತೆ ಅವನೇ ವ್ಯವಸ್ಥೆಗೊಳಿಸುವನು.

ದುರ್ಯೋಧನಾದಿ ತಾಮಸ ಜೀವರ ದುಷ್ಟ ಸ್ವಭಾವವನ್ನು ಅಭಿವ್ಯಕ್ತಗೊಳಿಸದಿದ್ದಲ್ಲಿ ಪಾಂಡವಾದಿ ಸಾತ್ತ್ವಿಕ ಜೀವರ ಗುಣೋತ್ಕರ್ಷ ಸಿದ್ಧಿಸುವುದಿಲ್ಲ; ಯಾಕೆಂದರೆ ದುರ್ಯೋಧನಾದಿಗಳು ದುಷ್ಟತನವನ್ನು ತೋರಿಸಿದರೆ ತಾನೇ ಆಗ ಪಾಂಡವಾದಿಗಳ ಒಳ್ಳೆತನದ ಪ್ರದರ್ಶನಕ್ಕೆ ಅವಕಾಶ ದೊರಕುವುದು? ಆದ್ದರಿಂದ ಸಾತ್ತ್ವಿಕರ ಗುಣೋತ್ಕರ್ಷದ ಸಿದ್ಧಿಯ ಉದ್ದೇಶಕ್ಕಾಗಿಯೂ ತಾಮಸರ ಸ್ವಭಾವದ ಅಭಿವ್ಯಕ್ತಿ ಆವಶ್ಯಕ.

ತಾಮಸರ ಸ್ವಭಾವವನ್ನು ಅಭಿವ್ಯಕ್ತಗೊಳಿಸಿ, ಆ ಸ್ವಭಾವಕ್ಕನುಗುಣವಾಗಿ ಅವರು ಶ್ರೀವಿಷ್ಣುವಿನ ಹಾಗೂ ವೈಷ್ಣವರ ದ್ವೇಷವನ್ನು ಮಾಡಿ, ಅದರ ಪರಿಣಾಮವಾಗಿ ನಿತ್ಯನರಕದಲ್ಲಿ ಬೀಳುವುದನ್ನು ಕಾಣುವ ಸಾತ್ತ್ವಿಕರಿಗೆ ತಾವು ಎಂದೆಂದೂ ಅಂತಹ ಪ್ರವೃತ್ತಿಯನ್ನು ನಡೆಸಬಾರದು -ಎಂಬ ಜಾಗೃತಿಯೂ ದೊರೆತಂತಾಗುವುದು.

ಪರಮೇಶ್ವರದ್ವೇಷಿಗಳು ನಿತ್ಯನಕರದಲ್ಲಿ ದುಃಖವನ್ನು ಅನುಭವಿಸುತ್ತಿರುವುದನ್ನು ಕಾಣುವಿಕೆ ಸಜ್ಜೀವರ ಸ್ವರೂಪಾನಂದದ ಅಭಿವ್ಯಕ್ತಿಗೆ ಕಾರಣವಾಗಿರುವುದರಿಂದಲೂ ಅವರಿಗೆ ನಿತ್ಯನರಕದ ಪ್ರದಾನ ಅವಶ್ಯವೆನಿಸಿದೆ.

ಹೀಗೆ ತಾಮಸ ಜೀವಾತ್ಮರ ದುಷ್ಟಸ್ವಭಾವದ ಅಭಿವ್ಯಕ್ತಿ ಹಾಗೂ ಅವರಿಗೆ ನಿತ್ಯನರಕದ ಪ್ರದಾನ ಇವರೆಡೂ ಪರಮೇಶ್ವರನಿಂದ ಸಾತ್ತ್ವಿಕರ ಸಾತ್ತ್ವಿಕಸ್ವಭಾವ ಅಭಿವ್ಯಕ್ತಿಗಾಗಿ, ಅವರಿಗೆ ಜಾಗೃತಿ ನೀಡುವುದಕ್ಕಾಗಿ ಹಾಗೂ ತನ್ನ ಪರಮೇಶ್ವರತ್ವದ ದ್ಯೋತಕವಾಗಿ ನಡೆಸಲ್ಪಡುವ ಗುಣಗಳೇ ಹೀಗೆಂದು ವಿಶ್ಲೇಷಿಷಿಕೊಂಡಾಗ ಇದನ್ನು ನಡೆಸುವ ಅವನಲ್ಲಿ ಸಾತ್ತ್ವಿಕರಿಗೆ ಮಹತ್ತ್ವಬುದ್ಧಿಯೂ, ಭಕ್ತಿಯೂ ಉಂಟಾಗುವುದು ಸಹಜ. ಆದ್ದರಿಂದ ಇಂತಹ ಪ್ರಮೇಯವನ್ನು ಪ್ರತಿಪಾದಿಸಿದ ಶ್ರೀ ಮಾಧ್ವಸಿದ್ಧಾಂತ ದಿಂದಾಗಿ ಸಾತ್ತ್ವಿಕರಲ್ಲಿ ಭಗವದ್ವಿಷಯಕ ಭಕ್ತಿ ಮೂಡುವುದೇ ಹೊರತು ದ್ವೇಷವಲ್ಲ.

●

೧. ೭. ಕುಡಿಹುಬ್ಬು ಕುಣಿತ

ಶ್ರೀಮದಾಚಾರ್ಯರು ದ್ವಾದಶ ಸ್ತೋತ್ರದಲ್ಲಿ ಭಗವಂತನ ಭ್ರೂಭಂಗದ, ಅಂದರೆ 'ಕುಡಿಹುಬ್ಬು ಕುಣಿತ'ದ ಪ್ರಭಾವವನ್ನು 'ಧ್ಯಾಯೇದಜಸ್ರಮೀಶಸ್ಯ.....' ಎಂಬ ಪದ್ಯದಲ್ಲಿ ವರ್ಣಿಸುತ್ತ '.....ಭ್ರೂಭಂಗಂ ಪಾರಮೇಷ್ಠ್ಯಾದಿಪದದಾಯಿ.....' ಎಂದು ಚತುರ್ಮುಖನ ಪದವಿಯನ್ನು ಅವನ ಭ್ರೂಭಂಗ ದೊರಕಿಸಿಕೊಡಬಲ್ಲದೆಂದು ಉಲ್ಲೇಖಿಸಿರುವರು.

ಚತುರ್ಮುಖನ ಪದವಿಯನ್ನು ಅವನಿಗೆ ತಲುಪಿಸುವುದರಲ್ಲಿ ಭಗವಂತನ ಹುಬ್ಬಿನ ಕುಣಿತ ಹೇಗೆ ಪಾತ್ರವಹಿಸಿದೆ ಎಂಬುದನ್ನು ಕೃಷ್ಣಾವತಾರದ ಒಂದು ಘಟನೆಯಿಂದ ಪರಿಶೀಲನೆ ಮಾಡಬಹುದಾಗಿದೆ.

ಇಂದ್ರಪ್ರಸ್ಥದಲ್ಲಿ ಪಾಂಡವರ ರಾಜಸೂಯಯಾಗ ನಡೆದ ಬಳಿಕ, ಧರ್ಮರಾಜ ಸಭಾಂಗಣದಲ್ಲಿ ಕೃಷ್ಣನೊಂದಿಗೆ ಕುಳಿತಿದ್ದನು. ರುಕ್ಮಿಣಿ ಮುಂತಾದ ಶ್ರೀಕೃಷ್ಣನ ಪತ್ನಿಯರೂ, ಭೀಮಸೇನ, ದ್ರೌಪದಿ ಮುಂತಾದವರೂ ಶ್ರೀಕೃಷ್ಣನ ಸಮೀಪದಲ್ಲಿ ಕುಳಿತಿದ್ದರು. ಅದೇ ಸಂದರ್ಭದಲ್ಲಿ ಸುಯೋಧನ ತನ್ನ ತಮ್ಮಂದಿರೊಂದಿಗೆ ಅಲ್ಲಿಗೆ ಬರುವನು. ಭ್ರಮೆಗೆ ಒಳಗಾಗಿ ಸಭಾಂಗಣದ ಪಾರದರ್ಶಕ ಗೋಡೆಗೆ ಮುಖವನ್ನು ತಾಗಿಸಿಕೊಳ್ಳುವನು; ಇಂದ್ರನೀಲಮಣಿಯ ನೆಲವನ್ನು ನೀರೆಂದು ಭ್ರಮಿಸುವನು; ನೀರನ್ನು ನೆಲವೆಂದು ಭ್ರಮಿಸಿ ತಮ್ಮಂದಿರೊಂದಿಗೆ ಆಳವಾದ ನೀರಿನಲ್ಲಿ ಬೀಳುವನು.

ಹೀಗೆ ದುರ್ಯೋಧನ ಹಾಸ್ಯಾಸ್ಪದನಾದಾಗ, ಅಲ್ಲಿ ಎದುರಿಗೆ ಕುಳಿತಿದ್ದ ಶ್ರೀಕೃಷ್ಣ ತನ್ನ ಹುಬ್ಬಿನ ಕುಣಿತದಿಂದ ಭೀಮಸೇನನಿಗೆ ಗಟ್ಟಿಯಾಗಿ ನಗಲು ಸೂಚನೆ ನೀಡುವನು. ಶ್ರೀಕೃಷ್ಣನ ಸೂಚನೆಗನುಗುಣವಾಗಿ ಭೀಮಸೇನ ಗಟ್ಟಿಯಾಗಿ ನಗುವನು. ಭೀಮಸೇನ ನಕ್ಕದ್ದನ್ನು ಕಂಡು ದ್ರೌಪದಿ ಮುಂತಾದವರೂ ಗಟ್ಟಿಯಾಗಿ ನಗುವರು. ಇದರಿಂದ ದುರ್ಯೋಧನನಿಗೆ ತುಂಬ ಅವಮಾನವಾದಂತಾಗುವುದು.

ಅಷ್ಟು ಅವಮಾನಕ್ಕೊಳಗಾದದ್ದರಿಂದಲೇ ಅವನು ಪಾಂಡವರ ಸಂಪತ್ತನ್ನು ಕಿತ್ತುಕೊಳ್ಳಬೇಕೆಂದು ಕಪಟ ಜೂಜಿನ ತಂತ್ರವನ್ನು ಹಮ್ಮಿಕೊಳ್ಳುವನು. ಇದರಿಂದಲೇ ಪಾಂಡವರು ವನವಾಸಕ್ಕೆ ಅಜ್ಞಾತವಾಸಕ್ಕೆ ಒಳಗಾಗುವಂತಾಗಿ ಕೊನೆಗೆ ಮಹಾಭಾರತ ಯುದ್ಧ ನಡೆಯುವಂತಾಯಿತು. ಮಹಾಭಾರತ ಯುದ್ಧದಲ್ಲಿ ಭೀಮಸೇನನಿಂದ ದುರ್ಯೋಧನಾದಿ ದುಷ್ಟರ ಸಂಹಾರ ನಡೆಯುವಂತಾಯಿತು. ದುರ್ಯೋಧನಾದಿಗಳ ದುಷ್ಟರ ಸಂಹಾರ ಭೀಮಸೇನನು ಮುಂದೆ ಪಡೆಯಬೇಕಾದ ಚತುರ್ಮುಖನ ಪದವಿಯ ಪ್ರಾಪ್ತಿಗಾಗಿ ನಡೆಸಬೇಕಾದ ಸಾಧನೆಯ ವ್ಯಾಪ್ತಿಯಲ್ಲಿ ಬರುವಂತಹದ್ದು. ಆದ್ದರಿಂದ ಮಹಾಭಾರತ ಯುದ್ಧ ನಡೆದು ಅದರಲ್ಲಿ ಭೀಮಸೇನನ ಮೂಲಕ ದುರ್ಯೋಧನಾದಿಗಳ ಸಂಹಾರ ನಡೆಯುವುದಕ್ಕೆ ಪ್ರಯೋಜಕವಾದ ಶ್ರೀಕೃಷ್ಣನ 'ಭ್ರೂಭಂಗ' –ಭೀಮಸೇನನು ಆ ಸಾಧನೆಯನ್ನು ನಡೆಸಿ ಕ್ರಮೇಣ ಮುಂದೆ ಚತುರ್ಮುಖನ ಪದವಿಯನ್ನು ಹೊಂದುವುದಕ್ಕೂ ಪ್ರಯೋಜಕವೆನಿಸಿದೆ.

ಹೀಗೆ ಭಗವಂತನ ಭ್ರೂಭಂಗ –ಕೆಲವೊಮ್ಮೆ ಸಾಕ್ಷಾತ್ತಾಗಿ ಚತುರ್ಮುಖಾದಿ ಗಳ ಪದವಿಗಳಿಗೆ ಪ್ರಾಪಕವೆನಿಸಿದರೆ, ಮತ್ತೆ ಕೆಲವೊಮ್ಮೆ ಪರ್ಯಾಯವಾಗಿಯೂ ಪದವಿಗಳಿಗೆ ಪ್ರಾಪಕವೆನಿಸಬಲ್ಲದು.

●

೧. ೮. ನಮ್ಮ ಉದ್ಧಾರದ ದಾರಿ

ರೋಗಿಯು ಜಿಹ್ವಾಚಾಪಲ್ಯಕ್ಕೆ ಬಲಿಬಿದ್ದು ಸಲ್ಲದ ಆಹಾರಪದಾರ್ಥಗಳನ್ನು ತಿಂದು (ಅಪಥ್ಯಾಚರಣೆ ಮಾಡಿ) ರೋಗದ ತೀಕ್ಷ್ಣತೆಯನ್ನು ಹೆಚ್ಚಿಸಿಕೊಂಡು ಅನರ್ಥಕ್ಕೆ ಹೇಗೆ ಒಳಗಾಗುತ್ತಾನೋ ಅದರಂತೆ ಈ ಮಾನವನೂ ವಿಷಯಪದಾರ್ಥ ಗಳ ಭೋಗದ ಬಯಕೆಯಿಂದ ವಿಕೃತ ಆಚಾರ, ತನ್ನ ಬಯಕೆಯ ಪೂರೈಕೆಗಾಗಿ ದುಷ್ಕರ್ಮ(ಭ್ರಷ್ಟಾಚಾರಾದಿ)ಗಳನ್ನು ಮಾಡುತ್ತಾ ಸಂಸಾರತಾಪತ್ರಯಗಳನ್ನು ಹೆಚ್ಚಿಸಿ ಕೊಂಡು ಅನರ್ಥಕ್ಕೊಳಗಾಗುತ್ತಾನೆ. ಅಂತಹ ರೋಗಿಯು ವೈದ್ಯರು ಹೇಳಿದ ಪಥ್ಯಾಚರಣೆ ಮತ್ತು ಔಷಧದ ಪ್ರಯೋಗದಿಂದ ರೋಗದಿಂದ ಮುಕ್ತಿಯನ್ನು ಪಡೆಯಬಹುದು. ಅದರಂತೆ ಮಾನವನು ಸದ್ಗುರುಗಳು ತೋರಿದ ಮಾರ್ಗದ ಅನುಸರಣೆ ಮತ್ತು ಸ್ವವರ್ಣಾಶ್ರಮೋಚಿತ ಸತ್ಕರ್ಮಾಚರಣೆಯಿಂದ ಶುದ್ಧಾಂತಃ ಕರಣನಾಗಿ ತನ್ನನ್ನು ತಾನು ಉದ್ಧರಿಸಿಕೊಳ್ಳಬಹುದು.

ವಿಷಯಸುಖದ ಅಪೇಕ್ಷೆಯಿಂದ ಕೂಡಿದ ಮನಸ್ಸು ಜೀವರಿಗೆ ಅಧೋಗತಿ ಯನ್ನು ತಂದುಕೊಡುವ ಮೂಲಕ ಅವನಿಗೆ ಶತ್ರುವೆನಿಸಿದರೆ, ಭಗವಂತನ ಧ್ಯಾನದಲ್ಲಿ ಆಸಕ್ತವಾದ ಮನಸ್ಸು ಅದೇ ಜೀವನಿಗೆ ಸದ್ಗತಿಗೆ ಕಾರಣವಾಗಿ ಬಂಧುವಾಗಿಯೂ ಪರಿಣಮಿಸಬಹುದು. ಹಾಗಾದರೆ ವ್ಯಕ್ತಿಯ ಉದ್ಧಾರ ಹೇಗೆ–

ಸದಾಚಾರ, ನಿಷ್ಕಾಮಕರ್ಮಾಚರಣೆ ಇವುಗಳಿಂದ ಮಾತ್ರ ಮಾನವನು ಪವಿತ್ರ ನಾಗಬಹುದು. ಇಂತಹ ಶುದ್ಧಾಂತಃಕರಣವುಳ್ಳ ವ್ಯಕ್ತಿಯು ಭಗವಂತನ ಧ್ಯಾನ

ನಡೆಸಬೇಕು. ಏಕಾಂತದಲ್ಲಿ ಜಿಂಕೆಚರ್ಮದ ಮೇಲೆ ಕುಳಿತುಕೊಳ್ಳಬೇಕು. ತನ್ನ ನಾಸಿಕಾಗ್ರದಲ್ಲಿ ದೃಷ್ಟಿಯನ್ನಿರಿಸಿ, ಸಮಾಧಿನಿರತನಾಗಿ ಪರಬ್ರಹ್ಮನ ಚಿಂತನ ನಡೆಸಬೇಕು.

ಪರಬ್ರಹ್ಮ ಚಿಂತನಕ್ರಮ:

ತನ್ನ ಹೃತ್ಕಮಲವನ್ನು ಮೊದಲು ನೆನಪಿಸಿಕೊಳ್ಳುವುದು. ಆ ಕಮಲದಲ್ಲಿ ೮ ದಳಗಳು. ಅದರ ಮೇಲೆ ಸೂರ್ಯ, ಚಂದ್ರ, ಅಗ್ನಿ. ಅದರ ಮೇಲೆ ಒಂದು ಪೀಠ. ಅದರ ಮೇಲೊಂದು ತಾವರೆ. ಆ ತಾವರೆಯಲ್ಲಿ ಶ್ರೀಮನ್ನಾರಾಯಣನು ಶೋಭಿಸುತ್ತಿರುವ ಚಿತ್ರವನ್ನು ಚಿಂತಿಸಿಕೊಳ್ಳುವುದು. ಆ ಶ್ರೀಹರಿಯು, ಸಾವಿರಾರು ಸೂರ್ಯರ ಕಾಂತಿಯವನೂ ಸಚ್ಚಿದಾನಂದಸ್ವರೂಪನೂ ಆಗಿದ್ದಾನೆ. ಸುಂದರವಾದ ನಖಗಳಿಂದ ಕೂಡಿದ ಅವನ ಪಾದಗಳು ಕೆಂಬಣ್ಣದಿಂದ ಕೂಡಿವೆ. ಮೊಣಕಾಲು ಮತ್ತು ತೊಡೆ ಆನೆಯ ಸೊಂಡಿಲಿನಂತೆ ಕೆಳಗಿನಿಂದ ಮೇಲಕ್ಕೆ ದುಂಡಗಾಗಿವೆ. ಸುಂದರವಾದ ಸೊಂಟದಲ್ಲಿ ಪೀತಾಂಬರವನ್ನು ಧರಿಸಿದ್ದಾನೆ. ಆ ಹರಿಯ ನಾಭಿಯು ಅತ್ಯಂತ ಆಳವಾಗಿಯೂ ಉದರವು ವರ್ತುಲಾಕಾರವು ಆಗಿದ್ದು ಅಂತಹ ಮನೋಹರವಾದ ಉದರದ ಮಧ್ಯದಲ್ಲಿ ಮೂರು ರೇಖೆಗಳಿವೆ (ತ್ರಿವಳಿಗಳು). ಎದೆಯ ಭಾಗ ವಿಶಾಲವಾಗಿದ್ದು, ಕುತ್ತಿಗೆಯಲ್ಲಿ ಕೌಸ್ತುಭಮಣಿ ಶೋಭಿಸುತ್ತಿದೆ. ಅವನ ನಾಲ್ಕು ಹಸ್ತಗಳು (ಬಾಹುಗಳು) ಚಕ್ರ, ಶಂಖ, ಗದಾ, ಪದ್ಮಗಳಿಂದ ಶೋಭಿಸುತ್ತಿವೆ. ಸುಂದರವಾದ ಅರಳಿ ನಿಂತಿರುವ ಅನೇಕ ವನಮಾಲೆಗಳನ್ನು ಅಪೂರ್ವವಾದ ವೈಜಯಂತೀಮಾಲೆಯನ್ನೂ ಧರಿಸಿದ್ದಾನೆ. ಅರಳಿದ ಕೆಂದಾವರೆಯಂತಹ ಎರಡು ಕಣ್ಣುಗಳು, ಮಕರಕುಂಡಲಗಳಿಂದ ಕೂಡಿದ ಎರಡು ಕಿವಿಗಳು, ವಿಶಾಲವಾದ ಶಿರಸ್ಸಿನಲ್ಲಿ ಧರಿಸಿರುವ ಹೊಳೆಯುವ ಕಿರೀಟ ಇವುಗಳಿಂದ ಹರಿಯು ರಾರಾಜಿಸುತ್ತಿದ್ದಾನೆ. ೧೦,೦೦೦ ಚಂದ್ರರ ಕಾಂತಿಯಿಂದ ಕೂಡಿರುವ ಅವನ ಮುಖಕಮಲ. ಹೀಗೆ ಪಾದದಿಂದ ಮುಖಪರ್ಯಂತ ಶ್ರೀಹರಿಯ ಚಿಂತನೆಯನ್ನು ನಡೆಸಬೇಕು.

ಆ ಭಗವಂತನು ದೋಷರಹಿತನೂ ಆನಂದಸಾಗರನೂ ಸರ್ವಜ್ಞನೂ ಸರ್ವಸಮರ್ಥನೂ ಸರ್ವನಿಯಾಮಕನೂ ಆಗಿದ್ದಾನೆ ಎಂದು ಅವನನ್ನು ಸ್ಮರಿಸಬೇಕು. ಹೀಗೇ ಏಕೆ ಸ್ಮರಿಸಬೇಕು? ಅದರ ಫಲವೇನು? ಭಗವಂತನು ದೋಷರಹಿತ ಎಂದು ನಾವು ಸ್ಮರಿಸಿದರೆ ನಮ್ಮಲ್ಲಿ ಇರುವ ಅನೇಕ ದೋಷಗಳು ಪರಿಹಾರವಾಗುತ್ತವೆ. ಶ್ರೀಹರಿಯು ಪೂರ್ಣಾನಂದನೂ ಸರ್ವಜ್ಞನೂ ಆಗಿದ್ದಾನೆಂದು ಉಪಾಸನೆ ಮಾಡುವವನು ತನ್ನ ಯೋಗ್ಯತೆಗನುಗುಣವಾಗಿ ಪೂರ್ಣಾನಂದವನ್ನು, ಪೂರ್ಣ ಜ್ಞಾನವನ್ನು ಪಡೆಯುವನು. ಪರಮಾತ್ಮನು ಸರ್ವಸ್ವಾಮಿ ಎಂದು ಉಪಾಸಿಸುವವನು ತನ್ನ ಜೀವನದಲ್ಲಿ ಅನುಭವಿಸಿದ ನೀಚರ ದಾಸ್ಯವನ್ನು ಮೋಕ್ಷದಲ್ಲಿ ಕಳೆದುಕೊಳ್ಳುವನು. ಹೀಗೆ ಸಾಧಕರು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಭಗವಂತನ ಚಿಂತನೆಯಲ್ಲಿ ಸದಾ ನಿರತರಾಗಿರಬೇಕು. ಒಂದು ವೇಳೆ ಜಗತ್ತಿನ ಸ್ವಾಮಿಯಾದ ಆ ಭಗವಂತನನ್ನು ತಿರಸ್ಕರಿಸಿ ಅವಹೇಳನ ಮಾಡಿದರೆ ಆ ವ್ಯಕ್ತಿಯು ಮೋಕ್ಷಮಾರ್ಗದಿಂದ ಜಾರಿ ತಾನೂ

ಅವಹೇಳನಕ್ಕೆ ಗುರಿಯಾಗುತ್ತಾನೆ. ಏಕೆಂದರೆ ಭಗವಂತನನ್ನು ಉಪಾಸಕನು ಯಾವ ಭಾವದಿಂದ ಉಪಾಸನೆ ಮಾಡುತ್ತಾನೋ ಅಂತಹ ಫಲವನ್ನೇ ಪಡೆಯುತ್ತಾನೆ.

ಆದ್ದರಿಂದ ದುರ್ಲಭವಾದ ಮಾನವಜನ್ಮವನ್ನು ಪಡೆದಾಗ ಅದನ್ನು ವ್ಯರ್ಥ ಗೊಳಿಸಬಾರದು. ಭಗವಂತನ ಅನುಗ್ರಹ ಪಡೆದು ಮೋಕ್ಷಸಾಧನೆ ಮಾಡಿಕೊಳ್ಳಬೇಕು. ಭಗವಂತನ ಧ್ಯಾನದಿಂದ ವ್ಯಕ್ತಿ ಮಾಡಿದ ಸರ್ವಪಾಪಗಳೂ ನಾಶವಾಗುತ್ತವೆ. ಹೀಗೆ ನಿರಂತರ ಭಗವಂತನ ಚಿಂತನೆ ನಡೆಸುವ ವ್ಯಕ್ತಿ ಒಂದು ವೇಳೆ ಆಕಸ್ಮಿಕವಾಗಿ ಈ ಧ್ಯಾನಯೋಗದಿಂದ ವಿಚಲಿತನಾದರೂ ಮರಣಾನಂತರ ಉತ್ತಮ ಲೋಕವನ್ನು ಪಡೆದು ಅಲ್ಲಿ ಅಪೂರ್ವ ಸುಖಾದಿಗಳನ್ನು ಅನುಭವಿಸುತ್ತಾನೆ. ಪುನಃ ಭೂಮಿಯಲ್ಲಿ ಶ್ರೇಷ್ಠರಾದ ಯೋಗಿಗಳ ಕುಲದಲ್ಲಿ ಉತ್ತಮ ಜನ್ಮ ಪಡೆದುಕೊಳ್ಳುತ್ತಾನೆ. ಆ ಪುನರ್ಜನ್ಮದಲ್ಲಿ ಪೂರ್ವಜನ್ಮದ ಸಂಸ್ಕಾರದಿಂದ ಬಾಲ್ಯದಿಂದಲೇ ಸಾಧನಾಮಗ್ನ ನಾಗುವನು. ಹೀಗೆ ಬಹು ಜನ್ಮಗಳನ್ನು ಪಡೆದು ತನ್ನ ಸಾಧನೆ ಪೂರ್ಣ ಗೊಳಿಸಿಕೊಂಡ ಮೇಲೆ ಯಾವುದೋ ಒಂದು ಜನ್ಮದಲ್ಲಿ ಶ್ರೀಹರಿಯ ಸಾಕ್ಷಾತ್ಕಾರ ವನ್ನು ಪಡೆಯುತ್ತಾನೆ. ಭಗವಂತನನ್ನು ಕಂಡ ತತ್‌ಕ್ಷಣದಲ್ಲಿ ಪ್ರಾರಬ್ಧಕರ್ಮದ ಹೊರತು ಉಳಿದೆಲ್ಲ ಕರ್ಮಗಳೂ ನಾಶವಾಗುತ್ತವೆ. ಸಾಕ್ಷಾತ್ಕಾರಾನಂತರದಲ್ಲಿ ಮಾಡುವ ಕರ್ಮಗಳ ಯಾವ ಲೇಪವೂ ಆ ಸಾಧಕನಿಗಿರುವುದಿಲ್ಲ. ಪ್ರಾರಬ್ಧ ಕರ್ಮವಶಾತ್ ಪಡೆಯುವ ಪ್ರತಿ ಜನ್ಮದಲ್ಲಿಯೂ ಅವನು ಭಗವದಾರಾಧನೆ ನಡೆಸುತ್ತಾ ಅಸಂಪ್ರಜ್ಞಾನಸ್ಥಿತಿಯನ್ನು ಪಡೆಯುತ್ತಾನೆ.

ಅಸಂಪ್ರಜ್ಞಾನಸ್ಥಿತಿ:

ಸಾವಿರಾರು ಭೇರಿ, ಮೃದಂಗಗಳ ನಾದವೂ ಧ್ಯಾನದಿಂದ ವಿಚಲಿತಗೊಳಿಸ ಲಾರದು ಅಂತಹ ಸ್ಥಿತಿ. ಈ ಸ್ಥಿತಿಯ ಕೊನೆಗೆ ಪ್ರಾರಬ್ಧಕರ್ಮ ಕಳೆದುಕೊಂಡನಂತರ ಯೋಗಪ್ರಭಾವದಿಂದ ಬ್ರಹ್ಮನಾಡೀ ಮೂಲಕ ಶರೀರದಿಂದ ಆ ಸಾಧಕಜೀವಿಯು ಹೊರಬಂದು ಅರ್ಚಿರಾದಿ ದೇವತಾಮಾರ್ಗದಿಂದ ಬ್ರಹ್ಮಲೋಕವನ್ನು ಪಡೆಯು ತ್ತಾನೆ. ಮತ್ತು ಪ್ರಳಯಕಾಲದಲ್ಲಿ ಚತುರ್ಮುಖನೊಂದಿಗೆ ತಾನು ಉಪಾಸನೆ ಮಾಡಿದ ಶ್ರೀಹರಿಯ ಸಾಮಿಪ್ಯವನ್ನು ಹೊಂದುತ್ತಾನೆ. ಇದೇ ಮೋಕ್ಷ. ಇಲ್ಲಿ ಆ ಜೀವಿಯು ಶ್ರೀಹರಿಯ ಅದ್ಭುತವಾದ, ಆನಂದಮಯವಾದ ಸ್ವರೂಪವನ್ನು ಕಾಣುತ್ತಾ, ದುಃಖರಹಿತವಾದ–ಸ್ವರೂಪಭೂತ ಆನಂದವನ್ನು ಅನುಭವಿಸುತ್ತಾ ಅನಂತಕಾಲದ ವರೆಗೆ ನಿತ್ಯತೃಪ್ತನಾಗಿರುತ್ತಾನೆ. ಇದು ಮೋಕ್ಷದಲ್ಲಿ ಜೀವಾತ್ಮರ ಸ್ಥಿತಿ ಮತ್ತು ಆತ್ಮೋದ್ಧಾರ ಎಂದರೆ ಇದೇ. ಆತ್ಮೋದ್ಧಾರಕ್ಕೆ ಮುಖ್ಯ ಕಾರಣವಾದ ತತ್ತ್ವ ಜ್ಞಾನ ಎಂದರೆ: ೧. ಶ್ರೀಹರಿಯು ಜಗಜ್ಜನ್ಮಾದಿಕರ್ತೃವು. ೨. ಸಕಲಗುಣ ಪರಿಪೂರ್ಣನು. ೩. ಶಾಸ್ತ್ರೈಕಗಮ್ಯನು. ೪. ಸಕಲವೈದಿಕ ಶಬ್ದಗಳಿಂದ ಮುಖ್ಯವಾಚ್ಯನು. ೫. ಆನಂದ ಪರಿಪೂರ್ಣನು. ೬. ಕೇವಲ ಆನಂದಸ್ವರೂಪವಾದಕರ, ಚರಣಾದಿಗಳಿಂದ ಕೂಡಿದವನು ಎಂಬಿವೇ ಮೊದಲಾದದ್ದು.

೧. ೯. ಆದದ್ದೆಲ್ಲಾ ಒಳಿತೇ ಆಯಿತು

ತಮ್ಮ ಜೀವನದ ಹೆಚ್ಚಿನ ಅವಧಿಯನ್ನೆಲ್ಲ ಪಾಠಪ್ರವಚನಗಳಿಗಾಗಿಯೇ ಮೀಸಲಾಗಿಟ್ಟಿದ್ದ ಶ್ರೀ ವಿದ್ಯಾಮಾನ್ಯತೀರ್ಥರು ಪ್ರತಿನಿತ್ಯ ರಾತ್ರಿ ತಮ್ಮ ತರ್ಪಣ ಪೂಜಾದಿಗಳು ಮುಗಿದ ಬಳಿಕ ನೆರೆದ ಭಕ್ತಸಮೂಹಕ್ಕೆ ಯಾವುದಾದರೊಂದು ಕಥೆಯನ್ನು ಹೇಳಿ ಆ ಮೂಲಕ ಆಧ್ಯಾತ್ಮಿಕ ಸಂದೇಶಗಳನ್ನು ನೀಡುತ್ತಿದ್ದರು. ಹಾಗೆ ಮತ್ತೆ ಮತ್ತೆ ಹೇಳುತ್ತಿದ್ದ ಒಂದು ರೋಚಕ ಕಥೆ ಹೀಗಿದೆ:

ಎಲ್ಲವೂ ಭಕ್ತರ ಶ್ರೇಯಸ್ಸಿಗಾಗಿಯೇ: '....... ಸೋಽಯಂ ವಿಹಾರಮೇ ತನುಭೃತ್ ಸ್ವಭಾವಸಂಭೂತಯೇ' –ಎಂದಿರುವಂತೆ ಸಾತ್ವಿಕ ಜೀವರ ಸಾತ್ವಿಕಸ್ವಭಾವವನ್ನು ಬೆಳಕಿಗೆ ತರುವುದೇ ಭಗವಂತನ ಜಗತ್‌ಸೃಷ್ಟಿಯ ಉದ್ದೇಶವೆಂದಮೇಲೆ, ಆ ಉದ್ದೇಶದಿಂದ ಸೃಷ್ಟವಾದ ಜಗತ್ತಿನ ಪ್ರತಿಯೊಂದು ಆಗುಹೋಗುಗಳೂ ಸಜ್ಜೀವರ ಉದ್ಧಾರಕ್ಕಾಗಿಯೇ ನಡೆಯುತ್ತಿರುತ್ತವೆ. ತಾತ್ಕಾಲಿಕವಾಗಿ ಅವು ದುಃಖಪ್ರದಗಳಾಗಿ, ಅನಿಷ್ಟಗಳಾಗಿ ಕಂಡರೂ ಕ್ರಮೇಣ ಸಜ್ಜನರ ಶ್ರೇಯಸ್ಸಿಗೇ ಪ್ರಯೋಜಕವಾಗುವವು. ಈ ಹಿನ್ನೆಲೆಯಲ್ಲೇ ದಾಸರು ಉದ್ಘೋಷಿಸಿರುವುದು– 'ಆದದ್ದೆಲ್ಲಾ ಒಳತೇ ಆಯಿತು' ಎಂದು. ಇದು ಶ್ರೀ ಪುರಂದರದಾಸರ ಜೀವನಕ್ಕಷ್ಟೇ ಅಲ್ಲದೆ ಎಲ್ಲ ಸಜ್ಜನರ ಬದುಕಿಗೂ ಸಂಬಂಧಿಸುವ ಸಂದೇಶ.

ಪೂರಕಕಥೆ:

ಈ ಆಧ್ಯಾತ್ಮಿಕ ಸಂದೇಶವನ್ನು ಮನವರಿಕೆಯಾಗುವಂತೆ ಪ್ರತಿಪಾದಿಸಿ, ಇದಕ್ಕೆ ಪೂರಕವಾಗಿ ಶ್ರೀಪಾದರು ರಾಜ–ಮಂತ್ರಿಗಳ ಕಥೆಯನ್ನು ಹೇಳುತ್ತಿದ್ದರು. ರಾಜನೊಬ್ಬನು ಧರ್ಮದಿಂದ ರಾಜ್ಯವಾಳುತ್ತಿದ್ದ. ಅವನಿಗೆ ಒಬ್ಬ ಧಾರ್ಮಿಕ ಮಂತ್ರಿಯಿದ್ದು, ಅವನು ಚೆನ್ನಾಗಿ ಮಾರ್ಗದರ್ಶನ ಮಾಡುತ್ತಿದ್ದ. ದೇವರ ವಿಷಯದಲ್ಲಿ ವಿಶೇಷವಾದ ವಿಶ್ವಾಸವನ್ನು ಹೊಂದಿದ್ದ ಆ ಮಂತ್ರಿ ಯಾವುದೇ ಘಟನೆ ನಡೆದರೂ ಅದು ದೇವರ ಸಂಕಲ್ಪದಿಂದಲೇ ನಡೆದಿರುವುದರಿಂದ ಒಳಿತಿಗಾಗಿಯೇ ಆಗಿರುವಂಥಹದ್ದು ಎಂದು ಭಾವಿಸುತ್ತಿದ್ದ. ಹಾಗೂ 'ಆಗುವುದೆಲ್ಲ ಒಳ್ಳೆಯದಕ್ಕಾಗಿಯೇ.....' ಎಂದು ಉದ್ಗರಿಸುತ್ತಲೂ ಇದ್ದ. ಒಮ್ಮೆ ರಾಜ ಮಾವಿನ ಹಣ್ಣನ್ನು ತಿನ್ನಲು ತೊಡಗಿದ. ತಾನೇ ಚೂರಿಯಿಂದ ಹಣ್ಣನ್ನು ಕೊಯ್ಯಬೇಕೆಂದಾಗ, ಚೂರಿಯ ಇರಿತದಿಂದ ರಾಜನ ಬೆರಳೇ ತುಂಡಾಯಿತು. ಕೂಡಲೇ ಮಂತ್ರಿಯಿಂದ ಬಂದ ಉದ್ಗಾರ: 'ಆಗುವುದೆಲ್ಲಾ ಒಳ್ಳೆಯದಕ್ಕಾಗಿಯೇ'. ಮಂತ್ರಿಯ ಈ ಮಾತನ್ನು ಕೇಳಿ ರಾಜನಿಗೆ ಸಿಟ್ಟುಬಂತು. ತನ್ನ ಬೆರಳು ತುಂಡಾದಾಗ 'ಹಾಗೆ ಆಗಬಾರದಿತ್ತು' –ಎಂದು ಹೇಳುವ ಬದಲು 'ಹಾಗೆ ತುಂಡಾದದ್ದು ಒಳ್ಳೆಯದಕ್ಕಾಗಿಯೇ..' ಎಂಬ ಅಭಿಪ್ರಾಯ ಹೊರಡುವಂತೆ ಹೇಳುತ್ತಿದ್ದಾನಲ್ಲಾ! ಎಂದು ಸಿಟ್ಟಾಗಿ ಮಂತ್ರಿಯನ್ನು ಕಾರಾಗೃಹಕ್ಕೆ ಕಳುಹಿಸಲು ಆದೇಶಿಸುವನು. ಆ ಆದೇಶಕ್ಕನುಗುಣವಾಗಿ ಮಂತ್ರಿ ಕಾರಾಗೃಹಕ್ಕೆ ತೆರಳುತ್ತಿರುವಾಗಲೂ 'ಆಗುವುದೆಲ್ಲ ಒಳ್ಳೆಯದಕ್ಕೇ.....' ಎಂದು ಗೊಣಗುತ್ತಲೇ ಇರುವನು –ಆ ಮಂತ್ರಿ.

ಕೆಲವು ದಿನಗಳ ಬಳಿಕ ಆ ರಾಜ ಕಾಡಿಗೆ ಭೇಟಿಗಾಗಿ ತೆರಳಿರುತ್ತಾನೆ. ಅಲ್ಲಿ ಬಳಲಿ ಒಬ್ಬನೇ ಒಂದು ಕಡೆ ವಿಶ್ರಾಂತಿ ತೆಗೆದುಕೊಳ್ಳುತ್ತಿರುತ್ತಾನೆ. ಅದೇ ಜಾಗಕ್ಕೆ ಕೆಲವು ಸೈನಿಕರು ಬರುವರು. ಅವರೆಲ್ಲ ಸೇರಿ ಈ ರಾಜನನ್ನು ಗಟ್ಟಿಯಾಗಿ ಹಿಡಿದುಕೊಳ್ಳುವರು. 'ಏನು ಮಾಡುತ್ತೀರೋ?' –ಎಂದು ಗೊಂದಲಕ್ಕೊಳಗಾದ ರಾಜನಿಗೆ ಅವರು ತಿಳಿಸುವರು –ನಮ್ಮ ಒಡೆಯ ಕಾಳಿದೇವಿಗೆ ನರಬಲಿ ಕೊಡಲು ಒಬ್ಬನನ್ನು ಕರೆತರಲು ತಿಳಿಸಿದ್ದ. ಅದಕ್ಕಾಗಿ ನಿನ್ನನ್ನು ಕೊಂಡೊಯ್ಯುತ್ತೇವೆಂದು ಆ ರಾಜನಲ್ಲಿ ತಿಳಿಸುವರು. ಆದರೆ ಕೂಡಲೇ ಅವರ ಗಮನಕ್ಕೆ ಬರುವುದು –ಆ ರಾಜನ ಬೆರಳು ತುಂಡಾಗಿದ್ದು ಅವನು ಊನಾಂಗ ಎಂದು. ಊನಾಂಗ ವ್ಯಕ್ತಿಗಳು ಬಲಿಗೆ ಅನರ್ಹರೆಂದು ರಾಜನನ್ನು ಹಾಗೆಯೇ ಬಿಟ್ಟು ಹೋಗುವರು. ರಾಜ ತನ್ನ ಬೆರಳು ತುಂಡಾಗಿದ್ದರಿಂದಲೇ ತಾನು ಬದುಕಿ ಉಳಿಯುವಂತಾಯಿತೆಂದು ವಿವೇಚಿಸುತ್ತಾ ಅರಮನೆಗೆ ತೆರಳುವನು. ಹಾಗಾದರೆ ತನ್ನ ಬೆರಳು ತುಂಡಾದಾಗ ಮಂತ್ರಿ 'ಆಗುವುದೆಲ್ಲಾ ಒಳ್ಳೆಯದಕ್ಕಾಗಿಯೇ' –ಎಂದುದು ಈ ಅಭಿಪ್ರಾಯದಿಂದಲೇ ಇರ ಬೇಕೆಂದು ತೀರ್ಮಾನಿಸಿ, ಕಾರಾಗೃಹದಲ್ಲಿದ್ದ ಮಂತ್ರಿಯನ್ನು ಬಿಡುಗಡೆಗೊಳಿಸುವನು. ಅವನ ಮಾತನ್ನು ಪ್ರಶಂಸಿಸುವನು.

"ನಿನ್ನನ್ನು ಕಾರಾಗೃಹಕ್ಕೆ ಕಳುಹಿಸಿದಾಗಲೂ 'ಆಗುವುದೆಲ್ಲ ಒಳ್ಳೆಯದಕ್ಕಾಗಿಯೇ' ಎಂದಿದ್ದಿ. ಇದಾದರೂ ಹೇಗೆ?" ಎಂದು ವಿಚಾರಿಸುವನು. ಅದಕ್ಕೆ ಮಂತ್ರಿ ತಿಳಿಸುವನು 'ನನ್ನನ್ನು ನೀನು ಕಾರಾಗೃಹಕ್ಕೆ ಕಳುಹಿಸದಿದ್ದರೆ ಯಾವಾಗಲೂ ನಿನ್ನ ಜೊತೆಗೇ ಇರುತ್ತಿದ್ದ ನಾನು ಬೇಟೆಯ ಅವಧಿಯಲ್ಲೂ ಬಲಿಗೆ ನರನನ್ನು ಕೊಂಡೊಯ್ಯಲು ಆ ವ್ಯಕ್ತಿ ನಿನ್ನಲ್ಲಿಗೆ ಬಂದ ಸಂದರ್ಭದಲ್ಲೂ ನಿನ್ನ ಜೊತೆಗೆ ಇರುತ್ತಿದ್ದೆ. ಊನಾಂಗ ಎಂದು ನಿನ್ನನ್ನು ಬಿಟ್ಟ ಅವರು ನಿನ್ನ ಜೊತೆಗಿದ್ದ ನನ್ನನ್ನು ಬಲಿಗಾಗಿ ಕರೆದೊಯ್ಯುತ್ತಿದ್ದರು. ನೀನು ನನ್ನನ್ನು ಕಾರಾಗೃಹಕ್ಕೆ ಹಾಕಿದ್ದರಿಂದ ಈ ಆಪತ್ತಿನಿಂದ ನಾನು ಪಾರಾದಂತಾ ಯಿತು. ಇದನ್ನೇ ನಾನು ಆ ಸಂದರ್ಭದಲ್ಲಿ 'ಆಗುವುದೆಲ್ಲಾ ಒಳ್ಳೆಯದಕ್ಕಾಗಿಯೇ.....' ಅಂದದ್ದು.

ಧೈರ್ಯದಿಂದ ಎದುರಿಸಬೇಕು: ನಾವು ಕೂಡಾ ಜೀವನದಲ್ಲಿ ಅಹಿತ ಘಟನೆಗಳು ನಡೆದಾಗ ಅದನ್ನು ದೇವರು ನಮ್ಮ ಹಿತದೃಷ್ಟಿಯಿಂದಲೇ ನಡೆಸಿರುವ ನೆಂದು ಭಾವಿಸಿ, ಅದಕ್ಕಾಗಿ ವಿಚಲಿತರಾಗದೇ ಅದನ್ನು ಧೈರ್ಯದಿಂದ ಎದುರಿಸ ಬೇಕು.

೧. ೧೦. ಜಗತ್ತು ಬ್ರಹ್ಮನಿಗೆ ಸದೃಶ

'ಯೇನಾಶ್ರುತಂ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತಮ್' –ಎಂಬ ಛಾಂದೋಗ್ಯೋಪನಿಷತ್ತಿನ ಮಾತಿನಲ್ಲಿ ಭಗವಂತನ ಜ್ಞಾನದಿಂದಲೇ ಜಗತ್ತಿನ ಜ್ಞಾನದ ಫಲವೂ ದೊರಕುವುದರಿಂದ ಜಗತ್ತೂ ಜ್ಞಾತವಾದಂತೆಯೇ –ಎಂದು ಸಂದೇಶಿಸಲಾಗಿದೆ.

ಭಗವಂತನ ಜ್ಞಾನದಿಂದಲೇ ಜಗತ್ತೂ ಹೇಗೆ ಜ್ಞಾತವಾದಂತಾಗಬಲ್ಲದೆಂಬುದನ್ನು ಮುಂದೆ ಆರು ದೃಷ್ಟಾಂತಗಳಿಂದ ಸಮರ್ಥಿಸುತ್ತ ಸದೃಶವಾದ ಒಂದು ಪದಾರ್ಥದ ಜ್ಞಾನದಿಂದ ಅದಕ್ಕೆ ಸದೃಶಗಳಾದ ಉಳಿದ ಪದಾರ್ಥಗಳೂ ಜ್ಞಾತವಾಗುವಂತೆ ಭಗವಂತನ ಜ್ಞಾನದಿಂದ ಅವನಿಗೆ ಸದೃಶವಾದ ಜಗತ್ತಿನ ಜ್ಞಾನವೂ ಬಂದಂತಾಗುವುದೆಂದು ಒಂದು ರೀತಿಯಾಗಿ ಪ್ರತಿಪಾದಿಸಲಾಗಿದೆ.

ಯಾವ ಧರ್ಮಗಳಿಂದ ಭಗವಂತನು ಜಗತ್ತಿಗೆ ಸದೃಶನಾಗುವನು? ಸಾಮಾನ್ಯವಾಗಿ ಸತ್ಯತ್ವ ಧರ್ಮದಿಂದ ಭಗವಂತನು ಜಗತ್ತಿಗೆ ಸದೃಶನೆನಿಸುವನೆಂದು ಹೇಳಲಾಗುವುದು. ಆದರೆ ಆ ಒಂದು ಧರ್ಮದಿಂದ ಸಾದೃಶ್ಯ ಇದ್ದಮಾತ್ರಕ್ಕೆ ಅವನ ಜ್ಞಾನದಿಂದ ಜಗತ್ತಿನ ಜ್ಞಾನ ಬರಲು ಸಾಧ್ಯವಿಲ್ಲ. ಅಸಾಧಾರಣ ಧರ್ಮದಿಂದ ಸಾದೃಶ್ಯವಿದ್ದರಷ್ಟೇ ಅಂತಹ ಸಾದೃಶ್ಯವುಳ್ಳ ಒಂದು ಜ್ಞಾನದಿಂದ ಮತ್ತೊಂದರ ಜ್ಞಾನ ಬರಲು ಸಾಧ್ಯ. ಭಗವಂತನಿಗೂ ಜಗತ್ತಿನ ಆಯಾಯ ಪದಾರ್ಥದ ಅಸಾಧಾರಣ ಧರ್ಮದಿಂದಲೇ ಆಯಾಯ ಪದಾರ್ಥದ ಸಾದೃಶ್ಯವಿದೆ.

'ಸರ್ವಭೂತಗುಣೈರ್ಯುಕ್ತಂ ದೈವಂ ಮಾಂ ಜ್ಞಾತುಮರ್ಹಸಿ'

–ಎಂಬ ಮೋಕ್ಷಧರ್ಮದ ಮಾತಿನಲ್ಲಿ (ಗೀ. ಭಾ. ೯–೮) ಭಗವಂತನು ತನ್ನನ್ನು ಸಕಲ ವಸ್ತುಗಳ ಸಾಮರ್ಥ್ಯದಿಂದ ಸಂಪನ್ನನನ್ನಾಗಿ ತಿಳಿಯಬೇಕೆಂದು ಸಂದೇಶಿಸಿರುವನು.

ಪೃಥಿವಿಯಲ್ಲಿ ಸಕಲ ಭೂತಾಧಾರತ್ವ ಇರುವಂತೆ ಭಗವಂತನಲ್ಲೂ ಅಧಿಕ ಪ್ರಮಾಣದಲ್ಲಿ ಆ ಧರ್ಮ ಇದೆ. ಅಂತೆಯೇ ಜಲದಲ್ಲಿರುವ ತರ್ಪಕತ್ವ, ಆಕಾಶದಲ್ಲಿರುವ ಅವಕಾಶಪ್ರದತ್ವ –ಹೀಗೆ ಪ್ರತಿಯೊಂದು ವಸ್ತುವಿನ ಅಸಾಧಾರಣ ಧರ್ಮಕ್ಕೆ ಸದೃಶವಾದ ಧರ್ಮ ಅಧಿಕ ಪ್ರಮಾಣದಲ್ಲಿ ಭಗವಂತನಲ್ಲಿ ಇದ್ದೇ ಇರುವುದು. ಸಕಲ ಪದಾರ್ಥಗಳ ಧರ್ಮಗಳು ಇದ್ದೇ ಇರಬೇಕು ತಾನೇ?

ಹೀಗೆ ಆಯಾಯ ಪದಾರ್ಥದ ಅಸಾಧಾರಣ ಧರ್ಮದಿಂದಲೇ ಆಯಾಯ ಪದಾರ್ಥ, ಅಂತಹ ಪದಾರ್ಥಗಳನ್ನೊಳಗೊಂಡ ಜಗತ್ತು ಭಗವಂತನಿಗೆ ಸದೃಶವೆನಿಸಬಲ್ಲದು. ಆದ್ದರಿಂದಲೇ ಅಂತಹ ಧರ್ಮಗಳನ್ನೊಳಗೊಂಡ ಭಗವಂತನ ಜ್ಞಾನದಿಂದ ಆಯಾಯ ಧರ್ಮದಿಂದ ಸದೃಶವಾದ ಜಗತ್ತೂ ಜ್ಞಾತಪ್ರಾಯವೆಂದೆನಿಸಬಲ್ಲದು.

೧. ೧೧. ಶ್ರೀಕೃಷ್ಣ ಜಾರನಲ್ಲ; ಚೋರನಲ್ಲ

ಶ್ರೀಕೃಷ್ಣನು ಜಾರನು ಚೋರನು ಎಂದು ಕೆಲವರು ಆಕ್ಷೇಪಿಸುತ್ತಾರೆ. ಅರ್ಜುನನನ್ನು ದಿವ್ಯ ಚಕ್ಷುಸ್ಸಿನಿಂದ ಭಗವಂತನನ್ನು ಸಾಕ್ಷಾತ್ಕರಿಸಿ, "ಹೇ ಶ್ರೀಕೃಷ್ಣ ನೀ ಪರಬ್ರಹ್ಮನು, ಪರಮಪವಿತ್ರನು, ಸರ್ವಾಶ್ರಯನು –ಈ ರೀತಿ ಅಸಿತ, ದೇವಲ, ವ್ಯಾಸ ಮುಂತಾದ ಮಹರ್ಷಿಗಳು ಹೇಳುತ್ತಾರೆ. ನೀನು ಕೂಡಾ ಹಾಗೆಯೇ ಹೇಳುತ್ತೀ. ಇದನ್ನು ಸತ್ಯವೆಂದು ನಂಬಿದ್ದೇನೆ" ಎಂದು ಹೇಳಿದನು ಎಂದು ಇದೆ.

ಪರಬ್ರಹ್ಮನು ಪೂರ್ಣಕಾಮನು ಆದ್ದರಿಂದ ಪರಬ್ರಹ್ಮಸ್ವರೂಪನಾದ ಶ್ರೀಕೃಷ್ಣನಿಗೆ ಯಾವ ಸ್ತ್ರೀಕಾಮನೆಯೂ ಇಲ್ಲ. ಸ್ತ್ರೀಕಾಮನಾಲೇಶವೂ ಕೂಡ ಇಲ್ಲದವನು ಜಾರನು ಹೇಗೆ ಆಗಬೇಕು. ಭಕ್ತರ ಮನಸ್ಸಿಗೆ ಆನಂದವನ್ನುಂಟುಮಾಡುವುದು ಅವನ ಸ್ವಭಾವವಾದುದರಿಂದ ತನ್ನ ಅಚಿಂತ್ಯ ಶಕ್ತಿಯಿಂದ ಭಕ್ತರಾದ ಗೋಪಿಕಾಸ್ತ್ರೀಯರಿಗೆ ಮಹಾನಂದವನ್ನುಂಟು ಮಾಡಿದ್ದಾನೆ. ಇಷ್ಟೇ ಜಾರ ಶಬ್ದದ ಅರ್ಥ ಹೊರತು ಅವನು ಸ್ತ್ರೀಸಂಭೋಗ ಮಾಡಿದನೆಂದು ಅರ್ಥವಲ್ಲ. ಹಾಗೆ ಇನ್ನೊಬ್ಬರ ವಸ್ತುವನ್ನು ಅವನ ಒಪ್ಪಿಗೆ ಇಲ್ಲದೆ ಅವನಿಗೆ ಗೊತ್ತಾಗದಂತೆ ತೆಗೆಯುವವನು ಚೋರನು. ಪ್ರಕೃತದಲ್ಲಿ ಜಗತ್ತಿನ ಎಲ್ಲ ವಸ್ತುಗಳು ಪರಬ್ರಹ್ಮಸ್ವರೂಪನಾದ ಶ್ರೀಕೃಷ್ಣನದ್ದೇ ಆಗಿರುತ್ತದೆ. ಯಾವ ವಸ್ತುವನ್ನು ಶ್ರೀಕೃಷ್ಣನು ತೆಗೆದರೂ ಅದೆಲ್ಲವೂ ಆತನ ವಸ್ತುವೇ ಆಗಿರುವಾಗ ಶ್ರೀಕೃಷ್ಣನು ಚೋರನು ಹೇಗೆ ಆಗುವನು. ಆದ್ದರಿಂದ ಯಾರಾದರೂ ಶ್ರೀಕೃಷ್ಣನು ಚೋರನು ಜಾರನು ಆದ್ದರಿಂದ ಪರಬ್ರಹ್ಮನು ಅಲ್ಲವೆಂದು ಆಕ್ಷೇಪಿಸಿದರೆ ಶ್ರೀಕೃಷ್ಣನು ಬ್ರಹ್ಮಸ್ವರೂಪನಾದ್ದರಿಂದ ಚೋರನು ಜಾರನು ಅಲ್ಲವೆಂದು ಉತ್ತರವನ್ನು ಕೊಡಬಹುದು. ಶ್ರೀಕೃಷ್ಣನಲ್ಲಿ ಪರಬ್ರಹ್ಮತತ್ವವು ಇದೆ ಎಂದು ಅರ್ಜುನನ ದಿವ್ಯ ಪ್ರತ್ಯಕ್ಷಪೂರ್ವಕವಾದ ವಚನದಿಂದ ಸಿದ್ಧವಾಗಿರುತ್ತದೆ. ಆದ್ದರಿಂದ ಶ್ರೀಕೃಷ್ಣನು ನಿರ್ದೋಷನು. ಇಂಥ ಪರಬ್ರಹ್ಮಸ್ವರೂಪನಾದ ಶ್ರೀಕೃಷ್ಣನಲ್ಲಿ ಭಕ್ತಿಯನ್ನು ಮಾಡಿ ದರೇನೇ ಜೀವರಾಶಿಗಳ ಉದ್ಧಾರವಾಗಲು ಸಾಧ್ಯ. ಕೆಲವರು ಶ್ರೀಕೃಷ್ಣನ ಭಕ್ತಿಯನ್ನು ಜೀವರು ತಮ್ಮ ಅಜ್ಞಾನಾವಸ್ಥೆಯಲ್ಲಿ ಮಾತ್ರ ಮಾಡಿದರೆ ಸಾಕು. ಜ್ಞಾನಾವಸ್ಥೆಯಲ್ಲಿ ಮಾಡುವುದು ಬೇಡ. ಮತ್ತು ಜೀವರಿಗೆ ಜ್ಞಾನವು ಬಂದ ಗತಿಗೆ ಶ್ರೀಕೃಷ್ಣ ಭಕ್ತಿಯು ನಷ್ಟವಾಗುತ್ತದೆ. ಜ್ಞಾನಕ್ಕೂ ಭಕ್ತಿಗೂ ವಿರೋಧವು ಇದೆ ಎಂದು ಹೇಳುತ್ತಾರೆ. ಇದು ಸರಿಯಲ್ಲ. ಭಾಗವತದಲ್ಲಿ–

ಆತ್ಮಾರಾಮಾ ಹಿ ಮುನಯೋ ನಿಗ್ರಾಹ್ಯಾ ಅಪ್ಯುರುಕ್ರಮೇ ।
ಕುರ್ವಂತ್ಯಹೈತುಕೀಂ ಭಕ್ತಿಂ ಇತ್ಥಂ ಭೂತ ಗುಣೋ ಹರಿಃ ॥

ಎಂದು ಮಹಾಜ್ಞಾನಿಗಳೂ ಕೂಡ ಶ್ರೀಕೃಷ್ಣನಲ್ಲಿ ಭಕ್ತಿಯನ್ನು ಮಾಡುತ್ತಾರೆಂದು ಸಿದ್ಧವಾಗಿರುತ್ತದೆ. ಗೀತೆಯಲ್ಲಿ ಆರ್ತರು ಜಿಜ್ಞಾಸುಗಳು ಅರ್ಥಾರ್ಥಿಗಳು ಜ್ಞಾನಿಗಳೆಂದು ನಾಲ್ಕು ಪ್ರಕಾರವಾಗಿ ಶ್ರೀಕೃಷ್ಣನ ಭಕ್ತರು ಇದ್ದಾರೆಂದು ಹೇಳಿರುತ್ತದೆ. ಹಾಗೆಯೇ–

ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ ।
ಭಕ್ತಿಂಮಯಿ ಪರಾಂಕೃತ್ವಾ ಮಾಮೇವ ಏಷ್ಯತ್ಯ ಸಂಶಯಮ್ ॥

ಎಂಬ ಗೀತೆಯ ವಚನದಿಂದಲೂ ಮಹಾಜ್ಞಾನಿಗಳೂ ಶ್ರೀಕೃಷ್ಣನಲ್ಲಿ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹೊಂದಿದರು ಎಂದು ಸಿದ್ಧವಾಗುತ್ತದೆ. ಶ್ರೀಕೃಷ್ಣನಲ್ಲಿ ಸರ್ವೈಕ್ಯ ವನ್ನು ತಿಳಿಯುವುದೇ ಜ್ಞಾನಾವಸ್ಥೆಯ ಭಕ್ತಿಯ ಸ್ವರೂಪ ಎಂದು ಕೆಲವರು ಹೇಳುತ್ತ ಈ ತಮ್ಮ ಸಿದ್ಧಾಂತಕ್ಕೆ–

ಸ ಸರ್ವವಿದ್ ಭಜತಿ ಮಾಂ ಸರ್ವಭಾವೇನ ಭಾರತ

ಎಂಬ ಗೀತಾವಚನ ಆಧಾರವೆಂದು ಹೇಳುತ್ತಾರೆ. ಆದರೆ ಈ ಗೀತಾದಲ್ಲಿರುವ ಸರ್ವಭಾವೇನ ಎಂಬ ಶಬ್ದಕ್ಕೆ ಸರ್ವೈಕ್ಯವೆಂದು ಅರ್ಥವಾಗುವುದಿಲ್ಲ. ಏಕೆಂದರೆ ಈ ವಾಕ್ಯದ ಪೂರ್ವ ವಾಕ್ಯದಲ್ಲಿ.

ಉತ್ತಮಃ ಪುರುಷಸ್ತ್ವನ್ಯಃ

ಎಂದು ಪುರುಷೋತ್ತಮನಾದ ಶ್ರೀಕೃಷ್ಣನು ಸುವಿಲಕ್ಷಣನು ಎಂದು ಹೇಳಿ ಈ ರೀತಿ ಶ್ರೀಕೃಷ್ಣನನ್ನು ಯಾರು ತಿಳಿಯುತ್ತಾನೋ ಅವನು ಶ್ರೀಕೃಷ್ಣನಲ್ಲಿ ಸರ್ವಭಾವದಿಂದ ಭಕ್ತಿಯನ್ನು ಮಾಡುತ್ತಾನೆಂದು ಹೇಳಿದ್ದರಿಂದ ಸರ್ವಭಾವ ಶಬ್ದಕ್ಕೆ ಸ್ವಾಮಿತ್ವ, ಗುರುತ್ವ, ಮಾತೃತ್ವ, ಪಿತೃತ್ವ ಮುಂತಾದ ಸರ್ವಪ್ರಕಾರದಿಂದ ಎಂದು ಅರ್ಥವೇ ಯೋಗ್ಯವಾದುದು. ಸರ್ವೈಕ್ಯದಿಂದ ಎಂಬ ಅರ್ಥವು ಯೋಗ್ಯವಾಗುವುದಿಲ್ಲ. ಈ ವಾಕ್ಯದ ಭಾಷ್ಯವನ್ನು ಶ್ರೀ ಶಂಕರಾಚಾರ್ಯರು ಬರಿಯುತ್ತ ಜ್ಞಾನಿಗಳು ಶ್ರೀಕೃಷ್ಣನ ಭಕ್ತಿಯನ್ನು ಮಾಡಿ ಕೃತಕಾರ್ಯರಾಗುತ್ತಾರೆ. ಈ ವಿಷಯವು ಸಕಲ ಶಾಸ್ತ್ರದ ಸಾರ ಎಂದು ಹೇಳಿದ್ದರಿಂದ ಜ್ಞಾನಿಗಳೂ ಸಹ ಶ್ರೀಕೃಷ್ಣ ಭಕ್ತಿಯಿಂದಲೇ ಮುಕ್ತಿಯನ್ನು ಹೊಂದುತ್ತಾರೆಂಬ ವಿಷಯದಲ್ಲಿ ಯಾರೂ ವಿಚಾರಿಸಲಿಕ್ಕೆ ಅವಕಾಶವಿಲ್ಲ.

●

೧. ೧೪. ಶ್ರೀಕೃಷ್ಣನು ಪರಬ್ರಹ್ಮನಲ್ಲವೇ?

ವೇದವನ್ನು ವ್ಯಾಖ್ಯಾನಿಸಲು ಬೇಕಾಗುವಷ್ಟು ವಿದ್ವತ್ತೆಯನ್ನು ಪಡೆದಿರುವವರು ದಯಾನಂದ ಸರಸ್ವತಿಯವರು. ಇಂತಹವರೂ ಶ್ರೀಕೃಷ್ಣನ ಸ್ವರೂಪದಲ್ಲಿ ಭ್ರಮೆಗೊಳಗಾಗಿರುವರೆಂಬುದು ಶ್ರೀಮದಾಚಾರ್ಯರು 'ಸರ್ವಥಾಽಪಿ ತು ತ ಏವೋಭಯಲಿಂಗಾತ್' ಎಂಬ ಬ್ರಹ್ಮಸೂತ್ರದಲ್ಲಿ ಎಷ್ಟೇ ಯತ್ನಿಸಿದರೂ ಜ್ಞಾನಯೋಗ್ಯರಷ್ಟೇ ಜ್ಞಾನವನ್ನು ಹೊಂದುವರು (ಸರ್ವಪ್ರಕಾರೇಣ ಉತ್ಸಾಹೇಽಪಿ ಯೇ ಜ್ಞಾನಯೋಗ್ಯಾಸ್ತ ಏವ ಜ್ಞಾನಂ ಪ್ರಾಪ್ನುವಂತಿ ನಾನ್ಯೇ) ಎಂಬುದಾಗಿ ಮಾಡಿರುವ ಸಿದ್ಧಾಂತಕ್ಕೆ ಉತ್ತಮ ನಿದರ್ಶನವಾಗಿದೆ.

ಸತ್ಪುರುಷನು ಸುಳ್ಳು ಹೇಳಿಯಾನೇ? ಶ್ರೀಕೃಷ್ಣನು ಪರಬ್ರಹ್ಮನಲ್ಲ ಎನ್ನುವ ದಯಾನಂದಸರಸ್ವತಿಯವರು ಶ್ರೀಕೃಷ್ಣನು ಒಬ್ಬ ಸತ್ಪುರುಷನಾಗಿರುವನೆಂಬುದಾಗಿ ಯಾದರೂ ಒಪ್ಪುವರು. ಸತ್ಪುರುಷನೆಂದಮೇಲೆ ಅವನು ಸುಳ್ಳುಹೇಳಲಾರ ತಾನೇ? ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ಸಂದೇಶಿಸಿರುವನು–

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾಽಽತ್ಮಾನಂ ಸೃಜಾಮ್ಯಹಮ್ ॥

ಧರ್ಮವು ನಶಿಸಿದಾಗ ನಾನೇ (ಶ್ರೀಕೃಷ್ಣನೇ) ಅವತರಿಸಿ ಬರುವೆನು –ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ –ನನ್ನ (ಶ್ರೀಕೃಷ್ಣನ) ಇಚ್ಛೆಗನುಗುಣ

ವಾಗಿ ನಾನು ಅವತರಿಸುವೆನು. ಹೀಗೆ ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ತಾನು ಅವತರಿಸುವೆನೆಂದು ಹೇಳಿರುವಾಗ, ಅಂತಹ ಶ್ರೀಕೃಷ್ಣನನ್ನು ಸತ್ಪುರುಷನೆಂದು ಒಪ್ಪುವವರು ಅವನ ಅವತಾರವನ್ನು ಒಪ್ಪದಿದ್ದಲ್ಲಿ 'ಸ್ವವ್ಯಾಹತಿ' ದೋಷವು ಬರಲಾರದೇ?

ಎರಡು ಯುಕ್ತಿಗಳು: ಶ್ರೀಕೃಷ್ಣನು ಪರಬ್ರಹ್ಮನಲ್ಲವೆಂಬುದಕ್ಕೆ ಅವರು ತೋರಿಸುವ ಯುಕ್ತಿಗಳು ಎರಡು –'ಶುಕ್ರಮಕಾಯಮವ್ರಣಂ...' ಎಂಬವೇ ಮೊದಲಾದ ಕಡೆಗಳಲ್ಲಿ ಶರೀರ ರಹಿತ (ಅಕಾಯ) ಎಂದು ನಿರೂಪಿಸಲ್ಪಟ್ಟ ಬ್ರಹ್ಮನು ಶರೀರದಿಂದೊಡ ಗೂಡಿದ ಕೃಷ್ಣನು ಹೇಗಾದಾನು. ಆಕಾಶದಂತೆ ವ್ಯಾಪ್ತನಾಗಿರುವ ಪರಬ್ರಹ್ಮನೇ ಶ್ರೀಕೃಷ್ಣನಾದರೆ ಅವನು ದೇವಕಿಯ ಗರ್ಭವನ್ನು ಪ್ರವೇಶಿಸುವುದಾಗಲೀ ಅಲ್ಲಿಂದ ಹೊರಬರುವು ದಾಗಲೀ ಹೇಗೆ?

ಯುಕ್ತಿಗೆ ಎಟುಕದವನು: ಹೀಗೆ ಬರೇ ಯುಕ್ತಿಯ ಆಧಾರದಿಂದಲೇ ಪರಬ್ರಹ್ಮನ ಸ್ವರೂಪವನ್ನು ನಿರ್ಣಯಿಸುವುದಾದರೆ, ಅಂತಹವರನ್ನು ಕುರಿತು ಈ ರೀತಿಯಾಗಿ ಪ್ರಶ್ನಿಸಲಾಗು ವುದು –'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ' ಎಂಬುದಾಗಿ ವೇದವೇ ಸಾರುತ್ತಿರುವುದು. ಚತುರ್ಮುಖನನ್ನು ಸೃಷ್ಟಿಸಿದ ಪರಬ್ರಹ್ಮನೂ ಅವನಿಗೆ ವೇದಗಳನ್ನು ಉಪದೇಶಿಸಿದ ನೆಂಬುದನ್ನು ಅವರೂ ಒಪ್ಪುವರು ತಾನೇ? ಉಚ್ಚಾರಣೆಯ ಮೂಲಕ ಉಪದೇಶ. ಉಚ್ಚಾರಣೆಯಾದರೂ ತುಟಿ ಮೊದಲಾದುವುಗಳ ವ್ಯಾಪಾರ. ಶರೀರವೇ ಇಲ್ಲದ ಪರಬ್ರಹ್ಮನಿಗೆ ತುಟಿ ಮೊದಲಾದವುಗಳೂ ಇಲ್ಲವೆಂದ ಮೇಲೆ ಅವನು ವೇದವನ್ನು ಉಚ್ಚರಿಸಿ ಉಪದೇಶಿಸುವುದಾದರೂ ಹೇಗೆ? ಹೀಗೆ ಬ್ರಹ್ಮನ ಸ್ವರೂಪವನ್ನು ಯುಕ್ತಿಗಳಿಂದ ಸಾಧಿಸಲು ಹೋದರೆ ಯಾವುದೂ ಸಿದ್ಧವಾಗದು. ಯುಕ್ತಿಗಳಿಗೆ ಪೂರ್ವವಾಗಿ ಎಟಕದ ಅವನನ್ನು ಶಾಸ್ತ್ರಗಳು ಪರಿಚಯಿಸುವಂತೆ ಒಪ್ಪಬೇಕಷ್ಟೇ. ಶಾಸ್ತ್ರಗಳಲ್ಲೂ ಮೇಲ್ನೋಟಕ್ಕೆ ಪರಸ್ಪರ ವಿರೋಧ ಕಂಡಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕು. ಪರಬ್ರಹ್ಮನನ್ನು ಕೆಲವೆಡೆ ಶರೀರದಿಂದ ರಹಿತನಾದವನೆಂಬುದಾಗಿ ತಿಳಿಸಿದ ಶಾಸ್ತ್ರವೇ ಮತ್ತೆ ಕೆಲವೆಡೆ ದಿವ್ಯಮಂಗಲ ಶರೀರವುಳ್ಳವನು ಅವನೆಂಬುದಾಗಿ ಸಾರುತ್ತಿರುವುದರಿಂದ ನಮ್ಮಂತಹ ಪಾಂಚಭೌತಿಕ ಶರೀರವಿಲ್ಲವೆಂಬ ಅಭಿಪ್ರಾಯ ದಿಂದಷ್ಟೇ ಶರೀರವಿಲ್ಲವೆಂಬ ಮಾತು ಹೊರಟಿದೆ ಎಂದು ಸಮನ್ವಯಿಸಿಕೊಳ್ಳಬೇಕು. ಹಾಗೆಯೇ 'ಅಣೋರಣೀಯಾನ್ ಮಹತೋ ಮಹೀಯಾನ್' ಎಂದೆನಿಸಿರುವ ಪರಬ್ರಹ್ಮನು ಆಕಾಶದಂತೆ ವ್ಯಾಪ್ತನಾಗಿರುವಂತೆಯೇ ಪರಮಾಣುವಿಗಿಂತಲೂ ಅಣು ವಾಗುವ ಅಚಿಂತ್ಯ ಸಾಮರ್ಥ್ಯವನ್ನು ಹೊಂದಿರುವ ಪ್ರಯುಕ್ತ ಅಂತಹವನಿಗೇನೂ ದೇವಕಿಯ ಗರ್ಭವನ್ನು ಪ್ರವೇಶಿಸುವುದು ಅಸಾಧ್ಯವೆನಿಸದು.

●

ವಿದ್ಯಾಭಂಡಾರ

ನಿಧಿ – ೨

ಮಧ್ವಗುರು



"ಶ್ರೇಷ್ಠ ಗುರುಗಳೆನಿಸಬೇಕಾದವರಲ್ಲಿ ಇರಬೇಕಾದ ಲಕ್ಷಣಗಳಲ್ಲಿ ಎರಡು ಪ್ರಮುಖವಾದವು: ತಾನು ಸಂಶಯಕ್ಕೊಳಗಾಗದಿರುವುದು ಹಾಗೂ ಸಂಶಯಕ್ಕೊಳಗಾದವರ ಸಂಶಯವನ್ನು ಪರಿಹರಿಸುವುದು– 'ಅಸಂಶಯಃ ಸಂಶಯಚ್ಛಿತ್ ಗುರುರುಕ್ತೋ ಮನೀಷಿಭಿಃ' ಗುರುಶ್ರೇಷ್ಠರಾದ ಶ್ರೀ ಮಧ್ವಾಚಾರ್ಯರಲ್ಲಿ ಈ ಎರಡು ಲಕ್ಷಣಗಳು ಎಷ್ಟರ ಮಟ್ಟಿಗೆ ಇವೆ ಎಂಬುದನ್ನು ಅವರ ಪ್ರಸಿದ್ಧ ಹೆಸರುಗಳಾದ ಪೂರ್ಣಪ್ರಜ್ಞ ಹಾಗೂ ಆನಂದತೀರ್ಥ ಎಂಬವುಗಳು ಸಾರುತ್ತಿವೆ".

೨. ೧. ಸಾಂಕೇತಿಕ ಸಂದೇಶ

ಗೀತಾಚಾರ್ಯ 'ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಾಃ' ಎಂಬುದಾಗಿ ಶ್ರೇಷ್ಠರಾದವರು ಸಾಗಿದ ಹಾದಿಯಲ್ಲೇ ಉಳಿದವರು ಹೆಜ್ಜೆಗಳನ್ನಿಡಬೇಕೆಂದು ಸಂದೇಶಿಸಿರುತ್ತಾನೆ.

ಜೀವಶ್ರೇಷ್ಠರಾದವರು ಶ್ರೀಮುಖ್ಯಪ್ರಾಣದೇವರು. ಭಗವಂತನ ಪರಮಪ್ರೀತಿ ಪಾತ್ರರಾದವರು. ಆದುದರಿಂದಲೇ ಭಗವಂತ ಅವರನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡಿದ್ದಾನೆ. (ಅಚ್ಯುತಾಂಕೇ ಸ್ವಾಸೀನಂ) ತಂದೆ ತನ್ನ ಮಗನನ್ನು ಪ್ರೀತಿಯಿಂದ ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳುವಂತೆ.

ಇಂತಹ ಪ್ರಾಣದೇವರು ತಮ್ಮ ಚತುರ್ಹಸ್ತಗಳಿಂದ ತಾವು ಪಾಲಿಸುತ್ತಿರುವ ಆದರ್ಶವನ್ನು ಸಾಂಕೇತಿಕವಾಗಿ ಸಂದೇಶಿಸುತ್ತಿದ್ದಾರೆ.

ಪ್ರಾಣದೇವರ ಕುರಿತಾಗಿ ಹೊರಟಿರುವ ಧ್ಯಾನಶ್ಲೋಕ 'ಧ್ಯಾಯೇದ್ ಗದಾಭಯಕರಂ ಸುಕೃತಾಂಜಲಿಂ ಚ' (ತಂತ್ರಸಾರ ಸಂ. IV 66) ಎಂಬುದಾಗಿ ಪ್ರಾಣದೇವರು ತಮ್ಮ ನಾಲ್ಕು ಕೈಗಳ ಪೈಕಿ ಒಂದರಿಂದ ಗದಾ ಧರಿಸಿರುತ್ತಾರೆ. ಮತ್ತೊಂದರಿಂದ ಅಭಯಪ್ರದಾನ ಮಾಡುತ್ತಿದ್ದಾರೆ, ಇನ್ನೆರಡರಿಂದ ಪ್ರಣಾಮ ಸಲ್ಲಿಸುತ್ತಿದ್ದಾರೆ –ಎಂದು ವರ್ಣಿಸುತ್ತಿದೆ.

ತಮ್ಮೆರಡು ಹಸ್ತಗಳಿಂದ ಸದಾಕಾಲ ಭಕ್ತಿಪೂರ್ವಕ ಪ್ರಣಾಮ ಸಲ್ಲಿಸುತ್ತಿರುವ ಮುಖ್ಯಪ್ರಾಣದೇವರು –ನಾವು ಯಾವಾಗ ಏನು ಮಾಡುವಾಗಲೂ ಭಗವಂತನಿಗೆ ವಿನೀತರಾಗಿದ್ದು ಮಾಡಬೇಕು.

ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ ಚಾಖಿಲಮ್ ।
ತಥಾಪಿ ಮತ್ಕೃತಾ ಪೂಜಾ ತತ್ಪ್ರಸಾದೇನ ನಾನ್ಯಥಾ ॥

ಎಂಬ ಭಾವನೆ ಸದಾಕಾಲ ಜಾಗ್ರತವಾಗಿರಬೇಕು. ಹೀಗೆ 'ಹರಿಪಾದವಿನಮ್ರಧಿಯಾ ಸತತಮ್ –ಎಂದು ನೀಡಿದ ಸಂದೇಶವನ್ನು ಸೂಚಿಸುತ್ತಿದ್ದಾರೆ.

ಪ್ರಾಣದೇವರು ಅಭಯಪ್ರದಾನ ನೀಡುತ್ತಿರುವ ಮತ್ತೊಂದು ಕೈ ಸಾತ್ವಿಕ ದೀನ ಜನರ ಸೇವೆ ಮಾಡುವುದರ ಮೂಲಕ ಅವರಿಗೆ ಅಭಯ ನೀಡಬೇಕೆಂಬುದನ್ನು ಸಂಕೇತಿಸುತ್ತಿದೆ. ನಾನಾಜನಸ್ಯ ಶುಶ್ರೂಷಾ ಕರ್ತವ್ಯಾ ಕರವನ್ಮಿತೇಃ' ಎಂದು ಶ್ರೀಮದಾಚಾರ್ಯರು ನೀಡಿರುವ ಸಂದೇಶದ ಸಂಕೇತವಿದು.

ಪ್ರಾಣದೇವರು ಮತ್ತೊಂದು ಕೈಯಿಂದ ಗದೆಯನ್ನು ಧರಿಸಿರುವರು. ವಿರೋಧ, ಪ್ರತಿಭಟನೆ, ಹಿಂಸೆಗಳಿಗೆ ಸಂಕೇತವಾದ ಆ ಗದಾಧಾರಣೆ ಭಗವದ್‌ದ್ವೇಷಿಗಳನ್ನು, ಧರ್ಮದ್ವೇಷಿಗಳನ್ನು ಪ್ರತಿಭಟಿಸಬೇಕು; ಸದೆಬಡಿಯಬೇಕು ಎಂಬುದನ್ನು ಸಂದೇಶಿಸುತ್ತದೆ.

ಹೀಗೆ ಪ್ರತಿಭಟಿಸುವಾಗ ಅಥವಾ ಸದೆಬಡಿಯುವಾಗ ಯಾವುದೇ ಸ್ವಾರ್ಥದ ಸೋಂಕು ಇರಬಾರದು. ಮುಖ್ಯಪ್ರಾಣದೇವರ ಎರಡನೇ ಅವತಾರ ಭೀಮಸೇನಾವತಾರ. ದುರ್ಯೋಧನ ಭೀಮಸೇನದೇವರಿಗೆ ವೈಯಕ್ತಿಕವಾಗಿ ಎಷ್ಟು ತೊಂದರೆಗಳನ್ನು ಕೊಟ್ಟಿಲ್ಲ! ದ್ರೌಪದಿಯ ಮಾನಭಂಗ, ವನವಾಸ ಇತ್ಯಾದಿ ಕಷ್ಟಗಳ ಪರಂಪರೆಗೆಲ್ಲ ಅವನೇ ತಾನೇ ಮೂಲಕಾರಣ? ಆದರೆ ಭೀಮಸೇನ ಕೊನೆಗೆ ಅವನನ್ನು ನೆತ್ತಿಮೇಲೆ ತುಳಿದು ಹಿಂಸಿಸುತ್ತಿರುವಾಗ ಇಟ್ಟುಕೊಂಡಿದ್ದ ಮುಖ್ಯ ಸೇಡು –ದುರ್ಯೋಧನ ಹಿಂದೊಮ್ಮೆ ಶ್ರೀಕೃಷ್ಣನನ್ನು ಬಂಧಿಸುವ ಕುತಂತ್ರ ಕೈಗೊಂಡಿದ್ದನೆಂಬುದರ ಬಗ್ಗೆ 'ಕೃಷ್ಣಬಂಧೇ ಕೃತೋ ಮಂತ್ರ ಇತಿ ಮೂರ್ಧ್ನಿ ಪದಾಹನತ್' (ಮ. ತಾ. ನಿರ್ಣಯ ೨೮–೭೬) ಎಂಬಲ್ಲಿ ಶ್ರೀಮದಾಚಾರ್ಯರು ಇದನ್ನು ಸ್ಪಷ್ಟೀಕರಿಸಿದ್ದುಂಟು.

ಹೀಗೆ ಧರ್ಮ ಹಾಗೂ ಭಗವದ್ ದ್ವೇಷಿಗಳನ್ನು ಪ್ರತಿಭಟಿಸುವಾಗ ಆಗಲೀ ಸಾತ್ವಿಕ ದೀನರ ಶುಶ್ರೂಷೆ ಮಾಡುವಾಗ ಆಗಲೀ ಯಾವುದೇ ರೀತಿಯ ಸ್ವಾರ್ಥದ ಸಂಪರ್ಕವಿರಬಾರದು. ಕೇವಲ ಭಗವತ್ ಪ್ರೀತಿಯ ಉದ್ದೇಶವಿರಬೇಕಷ್ಟೇ: ಇದನ್ನು ಮುಖ್ಯಪ್ರಾಣದೇವರು ತಮ್ಮೆರಡು ಕೈಗಳಿಂದ ಅಭಯಪ್ರದಾನ ಮತ್ತು ಪ್ರತಿಭಟನೆಗಳನ್ನು ಸಂದೇಶಿಸುತ್ತಿರುವ ಕಾಲದಲ್ಲೇ ಮತ್ತೆರಡು ಕೈಗಳಿಂದ ಭಗವಂತನಿಗೆ ಪ್ರಣಾಮ ಸಲ್ಲಿಸುತ್ತ –ಪ್ರಣಾಮ ಸಲ್ಲಿಸುವಾಗ ಇರುವ ಭಾವನೆಯೇ ಅಭಯಪ್ರದಾನ ಹಾಗೂ ಪ್ರತಿಭಟನೆ ಮಾಡುವ ಕಾಲದಲ್ಲೂ ಇರಬೇಕು ಎಂಬುದಾಗಿ ಸೂಚಿಸಿರುತ್ತಾರೆ.

ಹೀಗೆ ಶ್ರೀಮುಖ್ಯಪ್ರಾಣದೇವರು ತಮ್ಮ ನಾಲ್ಕು ಕೈಗಳಿಂದ ಸಾಂಕೇತಿಕವಾಗಿ ಸಂದೇಶಿಸಿರುವ ಅವರ ಆದರ್ಶದ ಬೆಳಕಲ್ಲೇ ನಾವೂ ಅಡಿಯಿಡಬೇಕು.

●

೨. ೨. ಯಾರು ಹಿತವರು?

ಶಂಕರಾಚಾರ್ಯರು ರಾಮಾನುಜಾಚಾರ್ಯರು ಮತ್ತು ಮಧ್ವಾಚಾರ್ಯರು –ಹೀಗೆ ಮೂವರು ಆಚಾರ್ಯರು ಇರುವುದರಿಂದ ಯಾರ ಉಪದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಸಂದೇಹ ಸಹಜ. ಇದರ ಪರಿಹಾರಕ್ಕಾಗಿಯೇ ಶ್ರೀ ಮಧ್ವಾಚಾರ್ಯರು ತಮ್ಮ ಪ್ರತಿಯೊಂದು ಗ್ರಂಥದ ಕೊನೆಯಲ್ಲೂ ತಾವು ಮುಖ್ಯಪ್ರಾಣನ ಅವತಾರ ಎಂಬುದನ್ನು ಪ್ರಮಾಣಪೂರ್ವಕವಾಗಿ ಪ್ರತಿಪಾದಿಸಿರುವರು.

ಶಂಕರಾಚಾರ್ಯರಾದರೋ ರುದ್ರದೇವರ ಅವತಾರ ಎಂದು ಅವರ ಶಿಷ್ಯರ ನಂಬಿಕೆ. ಹಾಗೆಯೇ ಇಟ್ಟುಕೊಳ್ಳೋಣ. ಹಾಗಾದರೂ ಅವರ ಮತವನ್ನು, ಉಪದೇಶವನ್ನು ಗೌರವಿಸಬಹುದೇ? ವಿಚಾರಿಸೋಣ. ರುದ್ರದೇವರು ತಮ್ಮ ಮೂಲರೂಪದಿಂದಾಗಲೀ ದೈತ್ಯರಿಗೇ ವರವನ್ನು ನೀಡಿರುವವರು, ಅನುಕೂಲಮಾಡಿ ಕೊಟ್ಟಿರುವವರು. ಆದ್ದರಿಂದ ಶಂಕರಾಚಾರ್ಯರಾಗಿ ಉಪದೇಶಿಸಿದ ಸಿದ್ಧಾಂತವು ಆಸುರೀಸ್ವಭಾವದವರಿಗಾಗಿಯೇ –ಎಂದು ಊಹಿಸಿಕೊಳ್ಳಬಹುದಾಗಿದೆ.

ರಾಮಾನುಜಾಚಾರ್ಯರು ಶೇಷನ ಅವತಾರ ಎಂದು ಅವರ ಅನುಯಾಯಿಗಳು ನಂಬಿರುವರು. ಹಾಗೆಯೇ ಇಟ್ಟುಕೊಂಡರೂ ಅವರ ಮತದಲ್ಲಿ ವಿಶ್ವಾಸ ಇಡುವಂತಿಲ್ಲ. ಶೇಷನಿಗೆ ಅಸುರನನ್ನು ಅವರ ಅಭಿಪ್ರಾಯವನ್ನು ನಿಗ್ರಹಿಸಲು ಎಷ್ಟು ಸಾಮರ್ಥ್ಯವಿದೆ? ಮಹಾಭಾರತದಲ್ಲೇ ನೋಡಬಹುದು. ಶೇಷನೇ ಬಲರಾಮನಾಗಿ ಅವತರಿಸಿರುವನು. ಅಂತಹ ಬಲರಾಮನಿಗೆ ಜರಾಸಂಧನನ್ನು ಜಯಿಸಲು ಆಗಲಿಲ್ಲ. ಜರಾಸಂಧ ಅನ್ಯಥಾಜ್ಞಾನದ ಪ್ರತೀಕ ಇದ್ದಂತೆ. ಅವನನ್ನು ಗೆಲ್ಲಲು ಆಗದಿದ್ದ ಬಲರಾಮರೂಪದ ಶೇಷ ಹೇಗೆ ತಾನೇ ಅನ್ಯಥಾಜ್ಞಾನವನ್ನು ನಿಗ್ರಹಿಸಿಯಾನು?

ಶ್ರೀ ಮಧ್ವಾಚಾರ್ಯರಾದರೆ ಆಖಣಾಶ್ಮಸಮರೆಂದು ಪ್ರಸಿದ್ಧರಾದ ಮುಖ್ಯಪ್ರಾಣನ ಅವತಾರರಾಗಿದ್ದು ಜರಾಸಂಧನೇ ಮೊದಲಾದ ಎಲ್ಲ ಅಸುರರ ನಿಗ್ರಹಕ್ಕೂ ಸಮರ್ಥರೆಂಬುದನ್ನು ತಮ್ಮ ಹನುಮಂತ ಹಾಗೂ ಭೀಮಾವತಾರಗಳಲ್ಲಿ ತೋರಿಸಿ ಕೊಟ್ಟಿರುವರು. ಇಂತಹವರು ಅಜ್ಞಾನ ವಿಪರೀತ ಜ್ಞಾನಗಳ ಪರಿಹಾರಕ್ಕೆ ಸಮರ್ಥರಾದವರು. ಸಾತ್ವಿಕರಿಗೆ ಇದನ್ನು ಸ್ಪಷ್ಟೀಕರಿಸುವುದಕ್ಕಾಗಿಯೇ ಶ್ರೀ ಮಧ್ವಾಚಾರ್ಯರು ಪ್ರತಿಯೊಂದು ಗ್ರಂಥದಲ್ಲೂ ತಮ್ಮ ಸ್ವರೂಪವನ್ನು ಪರಿಚಯಿಸಿದ್ದಾರೆ.

●

೧. ೩. ನಿಜವಾದ ತಾಯಿ

ಒಂದು ಮಗುವನ್ನು ಒಬ್ಬ ತಾಯಿ ತನ್ನದೆಂದೂ, ಮತ್ತೊಬ್ಬಳು ತನ್ನದ್ದೆಂದೂ ಜಗಳವಾಡುತ್ತಿದ್ದರು. ಕೊನೆಗೆ ಈ ವಿವಾದದ ನಿರ್ಣಯಕ್ಕಾಗಿ ನ್ಯಾಯಾಧೀಶನನ್ನು ಆಶ್ರಯಿಸಲಾಯಿತು. ಇದರ ತೀರ್ಮಾನಕ್ಕಾಗಿ ಆ ನ್ಯಾಯಾಧೀಶನು ಒಳ್ಳೆಯ ಉಪಾಯವನ್ನು ಅನುಸರಿಸುವನು. "ಮಗು ತಮ್ಮದ್ದೆಂದು ಇಬ್ಬರೂ ಜಗಳವಾಡುತ್ತಿದ್ದೀರಿ, ಇಬ್ಬರಿಗೂ ಅನ್ಯಾಯವಾಗಬಾರದು. ಆದ್ದರಿಂದ ಮಗುವನ್ನು ಸರಿಯಾಗಿ ಅರ್ಧ ಅರ್ಧ ಪಾಲುಮಾಡಿ ಹಂಚಿಕೊಳ್ಳಿರಿ" –ಎಂಬುದಾಗಿ ಆ ಹೆಂಗಸರಲ್ಲಿ ತಿಳಿಸುವನು. ಆಗ ಹೆಂಗಸರಲ್ಲಿ ಒಬ್ಬಳು ಅದನ್ನು ಒಪ್ಪಿಕೊಂಡರೆ ಮತ್ತೊಬ್ಬಳು –ಮಗುವನ್ನು ತುಂಡರಿಸುವುದಂತೂ ಖಂಡಿತ ಬೇಡ. ಬೇಕಾದರೆ ಆಕೆಯೇ ಮಗುವನ್ನು ಇಟ್ಟುಕೊಳ್ಳಲಿ ಎಂದು ಬೇಡಿಕೊಳ್ಳುವಳು. ಇದರಿಂದಾಗಿ ನ್ಯಾಯಾಧೀಶನು ಆಕೆಯೇ ಆ ಮಗುವಿನ ನಿಜವಾದ ತಾಯಿ. ಆದುದರಿಂದಲೇ ಮಗುವಿನ ಮೇಲಿನ ಮಮತೆಯಿಂದಾಗಿ ಮಗುವನ್ನು ಕತ್ತರಿಸುವುದನ್ನು ಆಕೆ

ನಿರಾಕರಿಸಿದಳು. ಮತ್ತೊಬ್ಬಳಿಗೆ ಆ ಮಗುವಿನಲ್ಲಿ ನಿಜವಾದ ಮಮತೆ ಇಲ್ಲದ ಪ್ರಯುಕ್ತ ಮಗುವನ್ನು ತುಂಡರಿಸುವುದಕ್ಕೂ ಆಕೆ ಸಿದ್ಧಳಾಗಿರುವಳೆಂದು ನಿರ್ಣಯಿಸುವನು.

ನಿಜವಾದ ವೈದಿಕರು ಯಾರು? ಎಂದು ನಿಶ್ಚಯಿಸಿಕೊಳ್ಳುವಾಗಲೂ ಈ ಪದ್ಧತಿಯನ್ನೇ ಅಳವಡಿಸಿಕೊಳ್ಳಬಹುದಾಗಿದೆ. ಶ್ರುತಿಗಳು ಅನ್ಯೋನ್ಯವಾಗಿ ಆಪಾತತಃ ವಿರುದ್ಧಗಳಾಗಿರುವಾಗ ಅವುಗಳಲ್ಲಿ ಕೆಲವು ಶ್ರುತಿಗಳು ಅತತ್ತ್ವಾವೇದಕಗಳಾಗಿದ್ದು ಅಪ್ರಮಾಣಗಳು, ಉಳಿದ ಕೆಲವಷ್ಟೇ ತತ್ತ್ವಾವೇದಕಗಳು; ಪ್ರಮಾಣಗಳು –ಎಂದು ಪ್ರತಿಪಾದಿಸುವ ವೈದಿಕರು ನಿಜವಾಗಿ ವೇದವಾಙ್ಮಯದ ಬಗ್ಗೆ ಅಭಿಮಾನಿಗಳೆಂದು ಪರಿಗಣಿಸಲು ಸಾಧ್ಯವೇ? ಮಗುವನ್ನು ಸೀಳಲು ಅನುಮತಿ ಇತ್ತ ತಾಯಿಯಲ್ಲಿ ಮಾತೃಹೃದಯ ಇದೆ ಎನ್ನುವುದಾದರೆ ಅಂತಹ ವೈದಿಕರಲ್ಲೂ ವೇದನಿಷ್ಠೆ ಇದೆ ಎನ್ನಬಹುದಷ್ಟೇ. ಹಾಗೆಯೇ, ಮಾತೃಹೃದಯವನ್ನು ಕಳಕೊಂಡವಳೂ ತಾಯಿ ಅನಿಸುವುದಾದರೆ, ವೇದನಿಷ್ಠೆ ಇಲ್ಲದವರೂ ವೈದಿಕರೆನಿಸಬಹುದಷ್ಟೇ.

ಆದ್ದರಿಂದ ನಿಜವಾಗಿ ಮಾತೃಹೃದಯವನ್ನೊಳಗೊಂಡವಳಷ್ಟೇ ತಾಯಿ ಎನಿಸುವಂತೆ, ನಿಜವಾಗಿ ವೇದನಿಷ್ಠೆ ಉಳ್ಳವರಷ್ಟೇ ವೈದಿಕರು. ಈ ನಿಟ್ಟಿನಲ್ಲಿ ಶ್ರೀ ಮಧ್ವಾಚಾರ್ಯರಷ್ಟೇ ನಿಜವಾದ ವೈದಿಕರು. ಅವರು ವೇದದ ಪ್ರತಿಯೊಂದು ವಾಕ್ಯವೂ ಪ್ರಮಾಣವೆನಿಸುವಂತೆ ಸಮನ್ವಯಿಸಿ ವ್ಯಾಖ್ಯಾನಿಸಿರುವರು. ಆ ಮೂಲಕ ವೈದಿಕ ವಾಙ್ಮಯದ ಮೇಲೆ ತಮಗಿರುವ ಅಪಾರ ಗೌರವಾದರಗಳನ್ನು ವ್ಯಕ್ತಪಡಿಸಿರುವರು. ಇದರಿಂದಾಗಿ ಅವರೇ ನಿಜವಾದ ವೈದಿಕರೆಂಬುದು ಸ್ಪಷ್ಟವಾಗಿಯೇ ಸಿದ್ಧವಾಗುವುದು.

●

೨. ೪. ನಿಜವಾದ ಗುರುಗಳು

ಭಗವಂತನು ತಾನೇ ಎಲ್ಲವನ್ನೂ ನೀಡಲು ಸಮರ್ಥನಾದರೂ ಗುರುಗಳ ಮಾಧ್ಯಮದಿಂದಲೇ ಅವರ ಮೂಲಕವೇ ಅನುಗ್ರಹಿಸುವನು. ಆದ್ದರಿಂದಲೇ ಅರ್ಜುನನಿಗೆ ತಾನೇ ಪಾಶುಪತಾದಿ ಅಸ್ತ್ರವಿದ್ಯೆಯನ್ನು ನೀಡಬಹುದಾಗಿತ್ತಾದರೂ ಅವನಿಗೆ ಗುರುವಾದ ರುದ್ರನ ಮೂಲಕ ಕೊಡಿಸಿದನು. ಆದ್ದರಿಂದ ಸಿದ್ಧಿಗಳಿಸಲು ಗುರುಗಳ ಅವಲಂಬನೆ ಅತ್ಯಾವಶ್ಯಕ.

ಮಧ್ವರೇ ಉತ್ತಮ ಗುರುಗಳು

ಆದರೆ ಗುರುಗಳು ಎಂದಾಕ್ಷಣ ಯಾರ್‍ಯಾರನ್ನೋ ಆಶ್ರಯಿಸಬಾರದು. ಗುರುಗಳು ಶಿಷ್ಯರನ್ನು ಆರಿಸಿಕೊಳ್ಳುವಾಗ ಹೇಗೆ ಜಾಗ್ರತರಾಗಿರಬೇಕೋ ಹಾಗೆಯೇ ಶಿಷ್ಯರು ಗುರುಗಳನ್ನು ಆರಿಸಿಕೊಳ್ಳುವಾಗಲೂ ಎಚ್ಚರಗೊಂಡಿರಬೇಕು–

ಪರೀಕ್ಷ್ಯೈವ ಗುರುಃ ಶಿಷ್ಯಂ ಶಿಷ್ಯೋಽಪಿ ಗುರುಮಾವ್ರಜೇತ್ ।
ಅನ್ಯಥಾ ನರಕಾಯೈವ ಪ್ರಾಯಶ್ಚಿತ್ತಂ ಗುರೋಸ್ತಥಾ ॥

– (ಭಾಗ ತಾ. ನಿ. ೧೧-೩-೪೮)

ಹೀಗೆ ಪರೀಕ್ಷಿಸಿದಲ್ಲಿ ಶ್ರೀಮದಾಚಾರ್ಯರು ಉತ್ತಮ ಗುರುಗಳೆಂದು ತ್ರಿವಿಕ್ರಮಪಂಡಿತಾಚಾರ್ಯರು ಸಿದ್ಧಾಂತಿಸಿರುವರು. 'ಪ್ರತ್ಯಕ್ಷಂ ಚೈತಲ್ಲಕ್ಷಣಂ ದೃಶ್ಯತೇ ಭಗವತಿ ಭಾಷ್ಯಕಾರೇ' –ಎಂಬುದಾಗಿ ಶ್ರೀಮದಾಚಾರ್ಯರು ದೇವೋತ್ತಮರೆಂದೂ ನಿರ್ಣಯಿಸಿದ್ದಾರೆ.

ಶಂಕರರ ಸಮ್ಮತಿ

ತ್ರಿವಿಕ್ರಮಪಂಡಿತಾಚಾರ್ಯರು ನಿರ್ಣಯಿಸಿದರೂ ಬೇರೆ ಬೇರೆ ಆಚಾರ್ಯರು ಬೇರೆಬೇರೆ ಸಿದ್ಧಾಂತವನ್ನು ಪ್ರತಿಪಾದಿಸಿರುವಾಗ ಶ್ರೀಮಧ್ವರ ಸಿದ್ಧಾಂತವನ್ನೇ ಆಶ್ರಯಿಸಬೇಕೆನ್ನುವುದರಲ್ಲಿ ಸಂದೇಹ ಬರಬಹುದಾದರೆ ಹೀಗೆ ನಿರ್ಣಯಿಸಿ ಕೊಳ್ಳಬಹುದು: ಒಂದು ಊರಿಗೆ ಹೋಗುವ ಮಾರ್ಗದ ಬಗ್ಗೆ ಇಬ್ಬರಲ್ಲಿ ವಿಚಾರಿಸುವೆವು. ಆಗ ಆ ಇಬ್ಬರೂ ವಿರುದ್ಧಗಳಾದ ಬೇರೆ ಬೇರೆ ಮಾರ್ಗವನ್ನು ತಿಳಿಸಿದಲ್ಲಿ ನಮಗೆ ಯಾವ ಮಾರ್ಗವನ್ನು ಅವಲಂಬಿಸಬೇಕೆಂಬ ಸಂದೇಹ ಸಹಜ. ಆದರೆ ಅವರಲ್ಲೊಬ್ಬನು ತಾನು ಬೇರೊಂದು ಮಾರ್ಗವನ್ನು ತಿಳಿಸಿದ್ದರೂ ಮತ್ತೊಬ್ಬ ತಿಳಿಸಿದ ಮಾರ್ಗದಿಂದ ಹೋದರೂ ಆ ಗ್ರಾಮ ದೊರಕುವುದೆಂದು ಹೇಳಿದಲ್ಲಿ ನಾವು ಆ ಮಾರ್ಗವನ್ನೇ ಆಶ್ರಯಿಸುವೆವು ತಾನೇ? ಅಂತೆಯೆ ಅಧ್ಯಾತ್ಮವಿದ್ಯೆಯಲ್ಲಿ ಬೇರೆ ಬೇರೆ ಸಿದ್ಧಾಂತಗಳಿದ್ದರೂ ಅದ್ವೈತಸಿದ್ಧಾಂತದ ಶಂಕರರು 'ಅನಾವೃತ್ತಿಃ ಶಬ್ದಾತ್' ಎಂಬ ಅಂತಿಮ ಬ್ರಹ್ಮಸೂತ್ರವನ್ನು ವ್ಯಾಖ್ಯಾನಿಸುವಾಗ ಸಗುಣಬ್ರಹ್ಮನ ಉಪಾಸನೆಯೂ ಸಿದ್ಧಿಪ್ರದ ಎಂದು ಒಪ್ಪಿ ಶ್ರೀಮದಾಚಾರ್ಯರ ಸಿದ್ಧಾಂತವನ್ನು ಪರೋಕ್ಷವಾಗಿ ಒಪ್ಪಿಕೊಂಡಂತೆಯೇ. ಆದ್ದರಿಂದ ಶ್ರೀಮದಾಚಾರ್ಯರ ಸಿದ್ಧಾಂತವನ್ನೇ ಆಶ್ರಯಿಸುವುದು ಸಮುಚಿತ ತಾನೇ? ಶ್ರೀಮದಾಚಾರ್ಯರನ್ನೇ ಗುರುಗಳೆಂದು ಅಂಗೀಕರಿಸುವುದು ಯುಕ್ತ ತಾನೇ?

೨. ೫. ಪೂರ್ಣಪ್ರಜ್ಞ ಮತ್ತು ಆನಂದತೀರ್ಥ

ಶ್ರೇಷ್ಠ ಗುರುಗಳೆನಿಸಬೇಕಾದವರಲ್ಲಿ ಇರಬೇಕಾದ ಲಕ್ಷಣಗಳಲ್ಲಿ 'ಅಸಂಶಯತ್ವ' –ಸಂಶಯವಿಲ್ಲದಿರುವಿಕೆ ಹಾಗೂ 'ಸಂಶಯಚ್ಛಿತ್ತ್ವ' –ಸಂಶಯವನ್ನು ಪರಿಹರಿಸುವಿಕೆ ಎಂಬ ಎರಡು ಲಕ್ಷಣಗಳು ಮುಖ್ಯವಾಗಿ ಪರಿಗಣಿತವಾಗಿವೆ. 'ಅಸಂಶಯಃ ಸಂಶಯಚ್ಛಿತ್ ಗುರುರುಕ್ತೋ ಮನೀಷಿಭಿಃ'.

ತತ್ತ್ವದ ಕುರಿತಾದ ಸಂದೇಹ ಬಹಳ ಅಪಾಯಕಾರಿ. 'ಸಂಶಯಾತ್ಮಾ ವಿನಶ್ಯತಿ' ಎಂದಿದೆ. 'ತತ್ತ್ವೇ ಸಂಶಯಯುಕ್ತಾ ಯೇ ಸರ್ವೇ ತೇ ನಿರಯಂ ಗತಾಃ' –ತತ್ತ್ವದ ಬಗ್ಗೆ ಸಂಶಯಾಪನ್ನರಾದವರು ನರಕದಲ್ಲಿ ಬೀಳಬೇಕಾಗುವುದೆಂದು ಸೂಚಿಸಲಾಗಿದೆ.

ಋಗ್ವೇದದಲ್ಲಿ ಒಂದೆಡೆ (೧-೩೨-೪) ಬರುವ 'ಅಹಿಃ' ಎಂಬ ಶಬ್ದಕ್ಕೆ ಆಧ್ಯಾತ್ಮಿಕಾರ್ಥವನ್ನು ಹೇಳುತ್ತ ಶ್ರೀಮದಾಚಾರ್ಯರು ನಿಶ್ಚಯಾರ್ಥದಲ್ಲಿ 'ಹಿ' ಶಬ್ದವು ಪ್ರಯೋಗಿಸಲ್ಪಡುವುದರಿಂದ ನಿಶ್ಚಯಕ್ಕೆ ವಿರುದ್ಧವಾದ ಸಂಶಯವು ಅಹಿ ಶಬ್ದದ ವಾಚ್ಯವಾಗಿದೆ ಎಂದು ಹೇಳಿ, ಸಂಶಯವು ಲೋಕದಲ್ಲಿ 'ಅಹಿ' ಶಬ್ದದಿಂದ ವ್ಯವಹರಿಸಲ್ಪಡುವ ಸರ್ಪದಷ್ಟೇ ಅಪಾಯಕಾರಿಯಾದುದು ಎಂದು ಸೂಚ್ಯವಾಗಿ ಸಂದೇಶಿಸಿರುವರು.

ಆದ್ದರಿಂದ ಗುರುವಾದವನಲ್ಲಿ ತತ್ತ್ವಜ್ಞಾನದ ಬಗ್ಗೆ ಸಂದೇಹವಿರಬಾರದು. ಹಾಗೆಯೇ ಮತ್ತೊಬ್ಬರ ಸಂದೇಹವನ್ನು ಪರಿಹರಿಸುವ ಸಾಮರ್ಥ್ಯವೂ ಅವನಲ್ಲಿರಬೇಕು.

ಗುರುಶ್ರೇಷ್ಠರಾದ ಶ್ರೀಮದಾಚಾರ್ಯರಲ್ಲಿ ಈ ಎರಡು ಲಕ್ಷಣಗಳು ಎಷ್ಟರ ಮಟ್ಟಿಗೆ ಇವೆ ಎಂಬುದನ್ನು ಅವರ ಪ್ರಸಿದ್ಧ ಹೆಸರುಗಳಾದ ಪೂರ್ಣಪ್ರಜ್ಞ ಹಾಗೂ ಆನಂದತೀರ್ಥ ಎಂಬವುಗಳು ಸಾರುತ್ತಿವೆ.

ಪೂರ್ಣಪ್ರಜ್ಞರೆಂದರೆ ಯಾರ ಪ್ರಜ್ಞೆಯು ಪೂರ್ಣವಾಗಿದೆಯೋ ಅಂತಹವರೆಂದರ್ಥ. 'ದಶಪ್ರಮತಿಂ ಜನಯಂತ ಯೋಷಣಃ' ಎಂಬ ಶ್ರುತಿಯೂ ಕೂಡಾ ಶ್ರೀಮದಾಚಾರ್ಯರನ್ನು 'ದಶಪ್ರಮತಿ' ಹೆಸರಿನಿಂದ ಉಲ್ಲೇಖಿಸಿರುವುದರ ಮೂಲಕ 'ಪೂರ್ಣಪ್ರಜ್ಞ' ಹೆಸರಿನ ಅರ್ಥವನ್ನು ವಿವರಿಸಿದೆ. (ದಶೇತಿ ಸರ್ವಮುದ್ದಿಷ್ಟಂ ಸರ್ವಂ ಪೂರ್ಣಮಿಹೋಚ್ಯತೇ । ಪ್ರಜ್ಞಾ ಪ್ರಮತಿರುದ್ದಿಷ್ಟಾ ಪೂರ್ಣಪ್ರಜ್ಞ ಸತ್ತಃ ಸ್ಮೃತಃ) ಹೀಗೆ ಶ್ರೀಮದಾಚಾರ್ಯರು ಪೂರ್ಣವಾದ ಪ್ರಜ್ಞೆವುಳ್ಳವರಾಗಿದ್ದು ಸಂದೇಹ ವಿದೂರರಾಗಿರುವರು. ಅರೆಬರೆ ಜ್ಞಾನವುಳ್ಳವರಿಗಷ್ಟೇ ಸಂದೇಹ ಹೊರತು ಪೂರ್ಣಜ್ಞಾನವುಳ್ಳವರಿಗೆ ಸಂದೇಹ ಸುಳಿಯಲಾರದು.

ಶ್ರೀಮದಾಚಾರ್ಯರ ಮತ್ತೊಂದು ಪ್ರಸಿದ್ಧ ಹೆಸರು –ಆನಂದತೀರ್ಥ. ತತ್ತ್ವದ ಕುರಿತಾದ ಸಂಶಯಗಳನ್ನೆಲ್ಲ ಪರಿಹರಿಸಿ ಆನಂದವನ್ನುಂಟುಮಾಡುವ ಶಾಸ್ತ್ರವನ್ನು ರಚಿಸಿರುವುದರಿಂದ ಶ್ರೀಮದಾಚಾರ್ಯರು ಆನಂದತೀರ್ಥರೆನಿಸಿರುವರು. ಆಚಾರ್ಯರ 'ಮಧ್ವ' ಎಂಬ ಪ್ರಸಿದ್ಧ ಹೆಸರು ಕೂಡಾ 'ಆನಂದತೀರ್ಥ'ದ ಅರ್ಥವನ್ನೇ ಸಾರುತ್ತಿದೆ. 'ಮಧು' ಅಂದರೆ ಆನಂದ. 'ವ' ಅಂದರೆ ಶಾಸ್ತ್ರ. ಆನಂದಶಾಸ್ತ್ರವನ್ನು ರಚಿಸಿರುವುದರಿಂದಲೇ ಶ್ರೀಮದಾಚಾರ್ಯರು 'ಮಧ್ವ'ರಾಗಿರುವರು –'ಮಧ್ವಿತ್ಯಾನಂದ ಉದ್ದಿಷ್ಟೋ ವೇತಿ ತೀರ್ಥಮುದಾಹೃತಮ್ । ಮಧ್ವ ಆನಂದತೀರ್ಥಃ ಸ್ಯಾತ್.....'.

ಹೀಗೆ ಶ್ರೀಮದಾಚಾರ್ಯರ 'ಅಸಂಶಯತ್ವ' ಲಕ್ಷಣವನ್ನು ಸ್ಪಷ್ಟೀಕರಿಸುವ 'ಪೂರ್ಣಪ್ರಜ್ಞ' ಎಂಬ ಹೆಸರಿನ ವಿವರಣೆ ಸುಮಧ್ವವಿಜಯದ ಮೊದಲ ಎಂಟು ಸರ್ಗಗಳಲ್ಲಿ ಹೆಚ್ಚಾಗಿ ಕಂಡುಬಂದರೆ 'ಸಂಶಯಚ್ಛಿತ್ತ್ವ' ಲಕ್ಷಣವನ್ನು ಸ್ಪಷ್ಟೀಕರಿಸುವ 'ಆನಂದತೀರ್ಥ' ಹೆಸರಿನ ವಿವರವನ್ನು ಸುಮಧ್ವವಿಜಯದ ಮುಂದಿನ ಎಂಟು ಸರ್ಗಗಳಲ್ಲಿ ಕಾಣಬಹುದಾಗಿದೆ.

ಶ್ರೀಮದಾಚಾರ್ಯರು ವಾಸುದೇವನಾಗಿದ್ದಾಗ ಗುರುಗಳೆದುರು ವೇದದ ಓದದ ಭಾಗವನ್ನೂ ಒಪ್ಪಿಸಿದುದು, ಪೂರ್ಣಪ್ರಜ್ಞರೆನಿಸಿದ ಮೇಲೆ ಭಾಗವತದ ಪಂಚಮಸ್ಕಂಧದ ಭಾಗವನ್ನು ಬಾಯಿಪಾಠವಾಗಿ ಹೇಳಿದುದು, ದಕ್ಷಿಣ ಭಾರತದ ಯಾತ್ರೆಯಲ್ಲಿ ವಿದ್ವಾಂಸರ ಸಭೆಯೊಂದರಲ್ಲಿ ಐತರೇಯದ ಸೂಕ್ತವೊಂದನ್ನು ವ್ಯಾಖ್ಯಾನಿಸಿ ಅಲ್ಲಿಯ ವಿದ್ವಾಂಸರಿಂದ ಗೌರವಿಸಲ್ಪಟ್ಟಿದುದು, ಮೊದಲೇ ತಿಳಿದಿದ್ದರೂ ಬದರೀಕಾಶ್ರಮದಲ್ಲಿ ಶ್ರೀವೇದವ್ಯಾಸರಲ್ಲಿ ವಿಶೇಷವಾಗಿ ಅಧ್ಯಯನ ನಡೆಸಿದುದು –ಹೀಗೆ ಸುಮಧ್ವವಿಜಯದ ಮೊದಲ ಎಂಟು ಸರ್ಗಗಳಲ್ಲಿ ಅಲ್ಲಲ್ಲಿ ಉಲ್ಲಿಖಿತ ಗಳಾಗಿರುವ ಘಟನೆಗಳು ಶ್ರೀಮದಾಚಾರ್ಯರ 'ಪೂರ್ಣಪ್ರಜ್ಞತ್ವ'ವನ್ನು ಸಾಧಿಸುತ್ತಿವೆ.

ಶ್ರೀಮದಾಚಾರ್ಯರು ಬದರೀಕಾಶ್ರಮದಲ್ಲಿ ಸೂತ್ರಭಾಷ್ಯವನ್ನು ರಚಿಸಿ ಹಿಂತಿರುಗುವಾಗ ಗೋದಾವರೀತೀರದಲ್ಲಿ ಶೋಭನ ಭಟ್ಟರಿಗೆ ಭಾಷ್ಯದ ಶ್ರವಣ ಮಾಡಿಸಿ ಆನಂದಪಡಿಸಿರುವಂತಹದ್ದು, ಕಾಲಬಲದಿಂದ ಕುಸಮಯದ ಆಗ್ರಹ ಕ್ಕೊಳಗಾಗಿದ್ದ ಗುರುಗಳಾದ ಅಚ್ಯುತಪ್ರೇಕ್ಷಾಚಾರ್ಯರಿಗೆ ಮಾಧ್ವಶಾಸ್ತ್ರವನ್ನು ಶ್ರವಣಮಾಡಿಸಿ ಆನಂದವನ್ನು ಅನುಗ್ರಹಿಸಿರುವಂತಹದ್ದು, ಬೇರೆ ಬೇರೆ ಸಭೆಗಳಲ್ಲಿ ಪ್ರವಚನ ಮಾಡಿ ಅಜ್ಞಾನ ವಿಪರೀತಜ್ಞಾನವನ್ನು ತೊಲಗಿಸಿ ಸಕಲಸಮಯಿಗಳ ಹಸ್ತಾಂಭೋಜವು ಬಂಧಿತವಾಗುವಂತೆ ಮಾಡಿರುವಿಕೆ ಶ್ರೀಮದಾಚಾರ್ಯರ ಪ್ರವಚನದ ಶ್ರವಣದಲ್ಲಿ ಭಾಗವಹಿಸಿದ ಸನಕಾದಿಗಳಿಂದ ಕೂಡಿದ ಶೇಷದೇವರು ಮಧ್ವಶಾಸ್ತ್ರದ ಪಾಠಪ್ರವಚನಗಳ ಫಲವನ್ನು ವರ್ಣಿಸುವುದು, ತ್ರಿವಿಕ್ರಮಪಂಡಿತಾ ಚಾರ್ಯರ ಜೊತೆ ಹದಿನೈದು ದಿನಗಳ ವರೆಗೆ ವಾಗ್ವಾದ ನಡೆಸಿ ಅವರನ್ನು ತಮ್ಮ ಶಿಷ್ಯರನ್ನಾಗಿ ಮಾರ್ಪಡಿಸಿ ಆನಂದಿಸಿರುವಂತಹದ್ದು.....' ಇವೇ ಮೊದಲಾಗಿ ಸುಮಧ್ವವಿಜಯದ ಮುಂದಿನ ಎಂಟು ಸರ್ಗಗಳಲ್ಲಿ ಅಲ್ಲಲ್ಲಿ ಉಲ್ಲೇಖಿಸಲ್ಪಟ್ಟ ಘಟನೆಗಳು ಶ್ರೀಮದಾಚಾರ್ಯರ 'ಆನಂದತೀರ್ಥತ್ವ'ವನ್ನು ಸಮರ್ಥಿಸುತ್ತಿವೆ.

●

೨. ೬. ಅದ್ಭುತ ಪ್ರತಿಭೆ ಹಾಗೂ ಸಾಮರ್ಥ್ಯ

ಸುಮಧ್ವವಿಜಯದ ವೈಶಿಷ್ಟ್ಯ

ಶ್ರೀಮದಾಚಾರ್ಯರ ಚರಿತ್ರೆಯ ಕುರಿತಾದ ಸುಮಧ್ವವಿಜಯ ಸಮಾನ ಕಾಲೀನರು ಬರೆದ ಗ್ರಂಥವಾದುದರಿಂದ ಹೆಚ್ಚು ವಿಶ್ವಾಸಾರ್ಹವೆನಿಸಿದೆ. 'ಹೌದು ನಾನು ಕಂಡಿದ್ದೇನೆ' ಎಂಬುದಾಗಿ ಅನೇಕರ ಮುಖದಿಂದ ಬಂದ ಬಳಿಕವೇ ಅಂತಹ ಘಟನೆಯನ್ನು ಸುಮಧ್ವವಿಜಯದಲ್ಲಿ ಉಲ್ಲೇಖಿಸಿರುವುದಾಗಿ ನಾರಾಯಣಪಂಡಿತಾ ಚಾರ್ಯರೇ 'ಭಾವಪ್ರಕಾಶಿಕಾ' ಎಂಬ ತಮ್ಮ ವ್ಯಾಖ್ಯಾನದಲ್ಲಿ ತಿಳಿಸಿದ್ದಾರೆ. (ಪ್ರಾಯೇಣ ನೈಕಮಾತ್ರೋಕ್ತಾಃ ಕಥಿತಾ ಇಹ ಸರ್ವಶಃ । ಮಯಾ ದೃಷ್ಟಾ ಧ್ರುವಮಿತಿ ಪ್ರೋಕ್ತಾಃ ಪ್ರಾಯೇಣ ಪೂರುಷೈಃ)

ಶಂಕರವಿಜಯ ಶಂಕರಾಚಾರ್ಯರ ೫೦೦ ವರ್ಷಗಳ ಬಳಿಕ ಬರೆದಿರುವಂತಹದ್ದು. ಆದ್ದರಿಂದಲೇ ಒಂದೊಂದು ಶಂಕರವಿಜಯದಲ್ಲಿ ಒಂದೊಂದು ರೀತಿಯಾಗಿ ಇದೆ. ಸುಮಧ್ವವಿಜಯ ಅಂತಹದ್ದಲ್ಲ.

ದುರ್ಬಲರಾಗಿ ಜ್ಞಾನಕಾರ್ಯಕ್ಕೆ ಇಳಿದವರಲ್ಲ

ಜ್ಞಾನಬಲವೇ ಬ್ರಾಹ್ಮಣನ ನಿಜವಾದ ಬಲ. 'ಬಲಂ ವಿಪ್ರೇ ಜ್ಞಾನಂ ಚಾಹುಃ'. ಇಂತಹ ಜ್ಞಾನಬಲ ಶ್ರೀಮದಾಚಾರ್ಯರಲ್ಲಿ ಅಧಿಕ ಪ್ರಮಾಣದಲ್ಲಿ ಇತ್ತು. ಅಂತೆಯೇ ಕ್ಷತ್ರಿಯರಿಗೆ ಇರಬೇಕಾದ ಬಾಹುಬಲದಲ್ಲಿಯೂ ಅವರೇನೂ ಹಿಂದಿರಲಿಲ್ಲ. ಜ್ಞಾನ ಹಾಗೂ ಬಲಗಳು ಮುಖ್ಯವಾಗಿ ಇರುವುದರಿಂದಲೇ 'ವಾಯು' ಎನಿಸಿರುವವರು ತಾನೇ ಅವರು? ಆದ್ದರಿಂದ ದುರ್ಬಲರಾಗಿದ್ದು ಬಲಕಾರ್ಯದಲ್ಲಿ ತೊಡಗಲಾರದೆ ಜ್ಞಾನಕಾರ್ಯಕ್ಕೆ ಇಳಿದವರಲ್ಲ ಅವರು. ಇದನ್ನು ತೋರಿಸಿಕೊಡುವುದಕ್ಕಾಗಿಯೇ ಅವರು ತಮ್ಮ ನಡತೆಯಲ್ಲಿ ಆಗಾಗ್ಗೆ ಬಲಕಾರ್ಯಗಳನ್ನು ನಡೆಸುವರು.

ಅಶ್ರುತ ಪ್ರತಿಭೆ

ಅಶ್ರುತಪ್ರತಿಭಾ ಯಸ್ಯ ಶ್ರುತಿಸ್ಮೃತ್ಯವಿರೋಧಿನೀ ।
ವಿಶ್ರುತಾ ನೃಷು ಜಾತಂ ಚ ತಂ ವಿದ್ಯಾದ್ದೇವಸತ್ತಮಮ್ ॥

ಎಂಬುದಾಗಿ ತ್ರಿವಿಕ್ರಮಪಂಡಿತಾಚಾರ್ಯರು (ತತ್ವಪ್ರದೀಪಿಕಾದಲ್ಲಿ) ದೇವೋತ್ತಮರ ಲಕ್ಷಣವನ್ನು ನಾರಾಯಣ ಶ್ರುತಿಯ ಮೂಲಕ ಉಲ್ಲೇಖಿಸಿ. ಅಂತಹ ಶ್ರುತಿಸ್ಮೃತಿಗಳಿಗೆ ವಿರೋಧಿಯಲ್ಲದ ಅಶ್ರುತ ಪ್ರತಿಭೆ ಶ್ರೀಮದಾಚಾರ್ಯರಲ್ಲಿ ಪ್ರತ್ಯಕ್ಷವಾಗಿ ಕಂಡುಬರುವುದೆಂದು ತಿಳಿಸಿರುವರು.

ಇದನ್ನು ಇನ್ನೂ ಅನೇಕ ದೃಷ್ಟಾಂತಗಳು ಸಮರ್ಥಿಸಬಲ್ಲವು.

೧) ಶ್ರೀಮದಾಚಾರ್ಯರು ಇನ್ನೂ ವಾಸುದೇವ. ಅವರಿಗೆ ಉಪನಯನವೂ ಆಗಿದ್ದಿರಲಿಲ್ಲ. ಅಂದ ಮೇಲೆ ಎಂಟು ವರ್ಷ ವಯಸ್ಸಿಗಿಂತಲೂ ಕಿರಿಯ ವಯಸ್ಸು. ತಾಯಿಯ ಜೊತೆಗೆ ವಾಸುದೇವ 'ನೇಯಂಪಳ್ಳಿ' ಗ್ರಾಮಕ್ಕೆ ಹೋಗಿದ್ದಾನೆ. ಅಲ್ಲಿ ಶಿವ ಎಂಬ ಹೆಸರಿನ ಬ್ರಾಹ್ಮಣ ಪುರಾಣಪ್ರವಚನ ಮಾಡುತ್ತಿದ್ದರು. ನಡುವೆ ಸ್ವಲ್ಪ ತಪ್ಪಾಗಿ ಹೇಳಿದರು. ಕೂಡಲೇ ವಾಸುದೇವ ಸಭೆಯಲ್ಲೇ ಅದನ್ನು ಉಲ್ಲೇಖಿಸಿ, ಜನರ ಆಗ್ರಹದ ಮೇರೆಗೆ ಅದಕ್ಕೆ ಇನ್ನೊಂದು ಅಭಿಪ್ರಾಯವನ್ನು ತಿಳಿಸಿದರು.

೨) ಪೌರಾಣಿಕ ಶ್ರೇಷ್ಠರಾದ ತನ್ನ ತಂದೆಯೇ (ಮಧ್ಯಗೇಹ ಭಟ್ಟರು) ಒಮ್ಮೆ ಪುರಾಣ ಹೇಳುವಾಗ 'ಲಿಕುಚ' ಶಬ್ದದ ಅರ್ಥವನ್ನು ಹೇಳದೆ ಮುಂದುವರಿದದ್ದನ್ನು ಉಲ್ಲೇಖಿಸಿದ್ದ ವಾಸುದೇವ ತಾನು ಅದರ ಅರ್ಥವನ್ನು ತಿಳಿಸಿ ಜನರಿಂದ ಸನ್ಮಾನ ಪಡೆದಿದ್ದ.

೩) ವಾಸುದೇವನ ವೇದಪಾಠದ ಗುರುಗಳಾದ ತೋಟಂತಿಲ್ಲಾಯರು ವಾಸುದೇವ ವೇದಾಧ್ಯಯನದಲ್ಲಿ ಔದಾಸೀನ್ಯ ತೋರಿಸುವನೆಂದು ಭ್ರಮಿಸಿ ಗದರಿಸಿದಾಗ, ಅವರಿಗಷ್ಟೇ ಅಲ್ಲದೆ ವೇದಾಭಿಮಾನಿ ದೇವತೆಗಳಿಗೂ ಕುತೂಹಲವಾಗುವಂತೆ ಪಾಠ ಕೇಳಿದ್ದ ಹಾಗೂ ಕೇಳಬೇಕಾದ ಶ್ರುತಿಗಳನ್ನೆಲ್ಲ ಹೇಳುವನು.

೪) ಆ ತೋಟಂತಿಲ್ಲಾಯರಿಗೇ ವೇದಪಾಠದ ಗುರುದಕ್ಷಿಣೆ ರೂಪದಲ್ಲಿ, ನಿರ್ಜನ ಅರಣ್ಯಕ್ಕೆ ಕರೆದುಕೊಂಡು ಹೋಗಿ ಐತರೇಯೋಪನಿಷತ್ತನ್ನು ಪಾಠ ಹೇಳಿಕೊಡುವನು.

೫) ಆಶ್ರಮವಾದ ಮೇಲೆ ನಡೆದ ಘಟನೆಯಿದು. ಅಚ್ಯುತಪ್ರೇಕ್ಷಾಚಾರ್ಯರು ಒಮ್ಮೆ ಭಾಗವತ ಪಾಠ ಹೇಳುತ್ತಿದ್ದರು. ಒಂದೆಡೆ ಭಾಗವತದ ಬೇರೆ ಬೇರೆ ಪುಸ್ತಕಗಳಲ್ಲಿ ಐದಾರು ಪಾಠಗಳು ಕಂಡುಬಂದವು. ಶ್ರೀಮದಾಚಾರ್ಯರು ಅವುಗಳಲ್ಲಿ ಯಾವುದೋ ಒಂದನ್ನು ಉಲ್ಲೇಖಿಸಿ ಇದೇ ಮೂಲಕಾರರಾದ ಶ್ರೀ ವೇದವ್ಯಾಸರಿಗೆ ಸಮ್ಮತವಾದ ಪಾಠ ಎಂದು ನಿರ್ಣಯಿಸಿ ಹೇಳಿದರು. ಉಳಿದ ಪ್ರಕಾರಗಳೂ ಕೂಡುವಾಗ 'ಇದೇ ಪಾಠ' ಎಂದು ಹೇಗೆ ನಿರ್ಣಯಿಸಿದಿರೆಂದು ಅಚ್ಯುತಪ್ರೇಕ್ಷಾಚಾರ್ಯರು ಕೇಳುವರು. ಯುಕ್ತಿಪೂರ್ವಕವಾಗಿ, ಅದೇ ವೇದವ್ಯಾಸರಿಗೆ ಸಮ್ಮತವಾದ ಪಾಠವೆಂದು ಸಮರ್ಥಿಸಿ ತೋರಿಸುವರು. ನೀವು ಶ್ರೀ ವೇದವ್ಯಾಸರ ಪಾಠವನ್ನು ತಿಳಿದವರಾದರೆ, ಐದನೇ ಸ್ಕಂಧದ ಒಂದು ಗದ್ಯವನ್ನು ಹೇಳಿ ನೋಡೋಣ– ಎನ್ನುವರು ಅಚ್ಯುತಪ್ರೇಕ್ಷಾಚಾರ್ಯರು. ಶುದ್ಧಪಾಠ ಎನಿಸಿರುವ ಪ್ರತಿಯಲ್ಲಿ ಇರುವಂತೆಯೇ ಶ್ರೀಮದಾಚಾರ್ಯರು ಅನುವಾದಿಸಿದಾಗ ಆಶ್ಚರ್ಯಪಟ್ಟ ಗುರುಗಳು 'ಈ ಜನ್ಮದಲ್ಲಿ ಓದದ ಭಾಗ ನಿಮಗೆ ಹೇಗೆ ತೋಚಿತು?' ಎಂದು ಕೇಳುವರು. ಅದಕ್ಕೆ 'ಪೂರ್ವಜನ್ಮಸು ಹಿ ವೇದ ಪುರೇದಂ ಸರ್ವಂ' 'ಹಿಂದಿನ ಜನ್ಮಗಳಲ್ಲೇ ಅವನ್ನೆಲ್ಲಾ ತಿಳಿದಿರುವೆ' ಎಂದು ಉತ್ತರಿಸುವರು ಶ್ರೀಮದಾಚಾರ್ಯರು.

೬) ಶ್ರೀಮದಾಚಾರ್ಯರು ಸಂಚಾರಮಾಡುತ್ತಾ ಪಯಸ್ವಿನೀನದಿಯ ತಟದಲ್ಲಿಯ ದೇವಾಲಯವೊಂದಕ್ಕೆ ಸಂದರ್ಶನವನ್ನೀಯುವರು. ಅಲ್ಲಿ ಷಡಂಗ ಸಹಿತವಾಗಿ ವೇದಾಧ್ಯಯನ ಮಾಡಿರುವ ಬ್ರಾಹ್ಮಣಶ್ರೇಷ್ಠರು ಬಂದು ಶ್ರೀಮದಾಚಾರ್ಯರ ಪ್ರತಿಭೆಯನ್ನು ಪರೀಕ್ಷಿಸಿ 'ದೇವತಾ ಸ್ವಸುಲಭಾ ಪ್ರತಿಭಾ ತೇ ಮಾನುಷೇಷು ಚಪಲೇಷು ಕಥಾ ಕಾ?' –"ನಿಮ್ಮ ಪ್ರತಿಭೆ ದೇವತೆಗಳಲ್ಲೂ ದುರ್ಲಭವಾದುದು. ಮನುಷ್ಯರಲ್ಲಿ ಎಲ್ಲಿಂದ ಬರಬೇಕು!" ಎಂದು ಪ್ರಶಂಸಿಸಿರುವರು.

ಈ ಎಲ್ಲ ದೃಷ್ಟಾಂತಗಳು ಶ್ರೀಮದಾಚಾರ್ಯರಲ್ಲಿ ಶ್ರುತಿಸ್ಮೃತಿ ಅವಿರೋಧಿಯಾದ ಅಶ್ರುತ ಪ್ರತಿಭೆಯನ್ನು ಸಾರುತ್ತ, ಆದರಿಂದ ಅವರು ದೇವೋತ್ತಮರಾಗಿರಲೇ ಬೇಕೆಂದು ದೃಢಪಡಿಸುವವು.

ಅದ್ವೈತಗ್ರಂಥವನ್ನೇಕೆ ಪಾಠ ಹೇಳಿದರು?

ಶ್ರೀಮದಾಚಾರ್ಯರು ಮೊಟ್ಟಮೊದಲು ಅದ್ವೈತಗ್ರಂಥವನ್ನೇ ಪಾಠಹೇಳಿದರು. ಯಾಕೆ? ಆಗ ಇನ್ನೂ ಅವರಿಗೆ ಅದ್ವೈತಶಾಸ್ತ್ರ ಅಸಂಬದ್ಧ ಎಂಬ ವಿಚಾರ ತಿಳಿದಿರಲಿಲ್ಲ ಎಂದು ಭಾವಿಸಬಾರದು. ಅಚ್ಯುತಪ್ರೇಕ್ಷಾಚಾರ್ಯರಿಂದ 'ಇಷ್ಟಸಿದ್ಧಿ' ಗ್ರಂಥದ ಪಾಠವನ್ನು ಕೇಳುತ್ತಿರುವಾಗಲೇ ಅದರ ಮೊದಲ ಪದ್ಯದ ಮೇಲೆ ಮೂವತ್ತೆರಡು ದೋಷಗಳನ್ನು ತೋರಿಸಿಕೊಟ್ಟವರು ಅವರು. ಆದ್ದರಿಂದ ಅದ್ವೈತಶಾಸ್ತ್ರದ ಅಸಂಗತತೆ ತಿಳಿಯದೆ ಅದರ ಪಾಠ ಹೇಳಿದುದಲ್ಲ. ಶ್ರೀಮದಾಚಾರ್ಯರು ಅದ್ವೈತಶಾಸ್ತ್ರವನ್ನು ಚೆನ್ನಾಗಿ ಅಭ್ಯಸಿಸದ ಪ್ರಯುಕ್ತ ಅದನ್ನು ಹಾಗೆ ಖಂಡಿಸಿರುತ್ತಾರೆ ಎಂಬುದಾಗಿ ಶಿಷ್ಯರು ಭ್ರಮಿಸಿಯಾರು! ಹೀಗಾಗಬಾರದು. ಅದ್ವೈತದ ಗ್ರಂಥಗಳೆಲ್ಲ ಅವರಿಗೆ ಚೆನ್ನಾಗಿ ಪರಿಚಿತ. ಆದರೂ ಅದ್ವೈತ ಅಪ್ರಮಿತವಾದುದರಿಂದಲೇ ನಿರಾಕರಿಸುವರೆಂಬ ವಿಶ್ವಾಸ ಶಿಷ್ಯರಲ್ಲಿ ಬರಬೇಕೆಂದು ಅದ್ವೈತಗ್ರಂಥವನ್ನೂ ಸಂಪ್ರದಾಯಪೂರ್ವಕವಾಗಿ ಪಾಠ ಹೇಳಿದರು.

ಪಂಚಭೂತಗಳ ಮೇಲೆ ಸ್ವಾಮ್ಯ

ಶ್ರೀಮದಾಚಾರ್ಯರ ಉತ್ತರ ಭಾರತದ ಯಾತ್ರೆಯಿಂದ ಅವರಿಗೆ ಪಂಚಭೂತಗಳಲ್ಲಿ ಜಲ, ತೇಜಸ್ಸು, ಪೃಥಿವೀ ಹಾಗೂ ವಾಯುಗಳ ಮೇಲೆ ಎಷ್ಟೊಂದು ಸ್ವಾಮ್ಯ ಇತ್ತೆಂಬುದನ್ನು ನೋಡಬಹುದು.

ಗಂಗಾನದಿಯನ್ನು ದಾಟಬೇಕಾದ ಒಂದು ಸಂದರ್ಭ: ದೋಣಿಗಳಿರಲಿಲ್ಲ. ಶ್ರೀಮದಾಚಾರ್ಯರು ಜಲಸ್ತಂಭನ ಮಾಡಿ ನೀರಿನ ಮೇಲೆ ನಡೆದುಕೊಂಡೇ ಹೊರಟರು. ಬಟ್ಟೆಯೂ ಒದ್ದೆ ಆಗದ ಹಾಗೆ ದಾಟಿದರು. ಜಲ ಹಾಗೂ ಅದರ ಅಭಿಮಾನಿಯ ಮೇಲೆ ಇಷ್ಟೊಂದು ಸ್ವಾಮ್ಯ ಶ್ರೀಮದಾಚಾರ್ಯರದ್ದು.

ತೇಜಸ್ಸು ಹಾಗೂ ಅದರ ಅಭಿಮಾನಿಯ ಮೇಲೂ ಹೀಗೆಯೇ. ಒಮ್ಮೆ ರಾತ್ರಿ ಪ್ರವಚನ ನಡೆಸುತ್ತಿದ್ದರು. ಇದ್ದಕ್ಕಿದ್ದಂತೆ ದೀಪ ಆರಿತು. ಶ್ರೀಮದಾಚಾರ್ಯರೇನೂ ಪ್ರವಚನವನ್ನು ನಿಲ್ಲಿಸಲಿಲ್ಲ. ತಮ್ಮ ಕಾಲ ಅಂಗುಷ್ಠದ ಉಗುರಿನ ತುದಿಯಿಂದ ತೇಜಸ್ಸು ವ್ಯಕ್ತವಾಗುವಂತೆ ಮಾಡಿದರು. ಆ ಬೆಳಕಲ್ಲೇ ಪ್ರವಚನವನ್ನು ಮುಂದುವರೆಸಿದರು.

ಗೋವೆಯ ರಾಜನಿಗೆ ಶ್ರೀಮದಾಚಾರ್ಯರನ್ನು ತನ್ನ ರಾಜ್ಯದಲ್ಲೇ ಇರಿಸಿಕೊಳ್ಳಬೇಕೆಂಬ ಹಟ. ಕಲ್ಲಿನ ಗೋಡೆಯ ಕೋಣೆಯೊಂದರಲ್ಲಿ ಶ್ರೀಮದಾಚಾರ್ಯರನ್ನು ಇರಿಸಿ, ಅದರ ಬಾಗಿಲು ಹಾಕಿ ಹೊರಗಿಂದ ಕಾವಲು ಇಟ್ಟನು. ಸ್ವಲ್ಪ ಸಮಯದಲ್ಲೇ ಶ್ರೀಮದಾಚಾರ್ಯರು ಶಿಷ್ಯಸಹಿತರಾಗಿ ದೂರದಲ್ಲಿ ಹೋಗುತ್ತಿರುವುದು ಆ ರಾಜನಿಗೆ

ಕಾಣಿಸುವುದು. ರಾಜನಿಗೆ ಆಶ್ಚರ್ಯ! ಕಲ್ಲಿನ ಗೋಡೆಯ ಕೋಣೆಯಿಂದ ಹೇಗೆ ಪಾರಾದರು? ರಾಜ ತನ್ನ ತಪ್ಪೊಪ್ಪಿಕೊಂಡು ಕ್ಷಮಾಯಾಚನೆ ಮಾಡುವನು. ಪೃಥಿವೀ ತತ್ತ್ವ ಹಾಗೂ ಅವರ ಅಭಿಮಾನಿ ಶ್ರೀಮದಾಚಾರ್ಯರ ಅಧೀನದಲ್ಲಿರುವುದಕ್ಕೆ ಇದೊಂದು ಉತ್ತಮ ನಿದರ್ಶನ

ಗ್ರೀಷ್ಮಋತುವಿನಲ್ಲೊಮ್ಮೆ ಶ್ರೀಮದಾಚಾರ್ಯರು 'ಇಡೆತುದೇ' ಗ್ರಾಮಕ್ಕೆ ಹೋಗಿದ್ದರು. ಗ್ರಾಮದ ಕೆರೆ ಬತ್ತಿಹೋಗಿತ್ತು. ಕೂಡಲೇ ಶ್ರೀಮದಾಚಾರ್ಯರು ಮೋಡವಾಗುವಂತೆ ಮಾಡಿ ಆ ಕೆರೆ ತುಂಬುವಷ್ಟೇ ಮಳೆ ಸುರಿಯುವಂತೆ ಮಾಡಿದರು. ಗಗನದಲ್ಲಿ ವೆ ೀಡವನ್ನು ಸೇರಿಸಲು ಬೇಕಾಗುವಂತೆ ಗಾಳಿ ಬೀಸಿಸುವ ಸಾಮರ್ಥ್ಯವಿದ್ದುದರಿಂದಷ್ಟೇ ಇದು ಸಾಧ್ಯವಾಯಿತು?

೨. ೭. ಸೂರ್ಯದೃಷ್ಟಾಂತದ ಔಚಿತ್ಯ

ತತ್ತ್ವೋದ್ಯೋತದ ಟೀಕೆಯಲ್ಲಿ 'ಅಲ್ಪಾಸ್ಥಿರ ಸುಖಖದ್ಯೋತಿಕಾಸು' –ಎಂದು ಸಂಸಾರಸುಖಕ್ಕೆ ಮಿಣುಕು ಹುಳದ ಸಾಮ್ಯವನ್ನು ಹೇಳಿದಂತೆ, 'ಆಚಾರ್ಯ ಸೂರ್ಯಃ' ಎಂಬುದಾಗಿ ಶ್ರೀಮದಾಚಾರ್ಯರಿಗೆ ಸೂರ್ಯನ ದೃಷ್ಟಾಂತವನ್ನು ಸೂಚಿಸಲಾಗಿದೆ.

ಸಂಸಾರಸುಖ ಮಿಣುಕುಹುಳ ಎಂದಮೇಲೆ ಮೋಕ್ಷಸುಖಕ್ಕೆ ಸೂರ್ಯನ ದೃಷ್ಟಾಂತ ಕೊಡಬೇಕೇ ಹೊರತು ಆಚಾರ್ಯರಿಗೆ ಸೂರ್ಯನ ದೃಷ್ಟಾಂತ ಕೊಡುವುದರಲ್ಲಿ ಏನು ಔಚಿತ್ಯ? ಹೀಗೆಂದು ವಿಚಾರ ನಡೆಸಿದ ದ್ವೈತದ್ಯುಮಣಿಕಾರರು ಒಬ್ಬ ವಿಶಿಷ್ಟ ವ್ಯಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ದೃಷ್ಟಾಂತ ನೀಡಲಾಗಿದೆ ಎಂದು ಅಭಿಪ್ರಾಯ ಪಟ್ಟಿರುವರು. ಹುಟ್ಟು ಕುರುಡನೊಬ್ಬ ರಾತ್ರಿಕಾಲದಲ್ಲಿ ದೃಷ್ಟಿಯನ್ನು ಪಡಕೊಂಡ. ರಾತ್ರಿ ಅಲ್ಲಲ್ಲಿ ಸಂಚರಿಸುವ ಮಿಣುಕು ಹುಳುಗಳು ಅವನಿಗೆ ಕಂಡವು. ಅದುವರೆಗೆ ಕುರುಡನಾಗಿದ್ದ ಅವನಿಗೆ ಆ ಮಿಣುಕುಹುಳದ ಬೆಳಕೇ ತುಂಬ ಚೆಂದವಾಗಿ ಕಂಡವು. ಆಗ ಒಬ್ಬ ಕಣ್ಣಿದ್ದವನು ಮಿಣುಕುಹುಳಗಳ ಬೆಳಕು ಸೂರ್ಯೋದಯವಾಗುತ್ತಲೇ ಮಾಯವಾಗುವುದೆಂದು ತಿಳಿಸುವನು. ಅದಕ್ಕೆ ಆ ಕುರುಡ ಹಾಗಾದರೆ ಸೂರ್ಯೋದಯವೇ ಆಗುವುದು ಬೇಡ ಎಂದ. ಆಚಾರ್ಯರ ತತ್ತ್ವಜ್ಞಾನದ ಪ್ರಚಾರ ಆಗಿ ಅದರ ಅಧ್ಯಯನಾದಿಗಳನ್ನು ನಡೆಸಿದಲ್ಲಿ ಮೋಕ್ಷವು ದೊರಕುವುದು. ಇದರಿಂದಾಗಿ ಸಂಸಾರಸುಖ ಇಲ್ಲದಂತಾಗುವುದು. ಸಂಸಾರಸುಖವನ್ನು ನಾಶಪಡಿಸುವುದಾದರೆ, ಅಂತಹ ತತ್ತ್ವಜ್ಞಾನವೂ ಬೇಡ; ಅದನ್ನು ಪ್ರಚಾರ ಮಾಡುವ ಆಚಾರ್ಯರ ಗೊಡವೆಯೂ ಬೇಡ –ಎಂದು ಯಾರಾದರೂ ಅವಿವೇಕಿಗಳು ಹೇಳಿದಲ್ಲಿ ಅವರು ಮಿಣುಕು ಹುಳಗಳ ಬೆಳಕನ್ನು ಇಲ್ಲದಂತಾಗಿಸುವ ಸೂರ್ಯನೇ ಬೇಡ –ಎನ್ನುವ ಹುಟ್ಟುಕುರುಡನಿಗೆ ಸಮಾನರಾದವರೆಂಬ

ಅಭಿಪ್ರಾಯವನ್ನು ಧ್ವನಿಸುವುದು ಆಚಾರ್ಯರಿಗೆ ಸೂರ್ಯನ ದೃಷ್ಟಾಂತವನ್ನು ಕೊಟ್ಟ ಔಚಿತ್ಯ ಎಂದು.

ಇದರ ಜೊತೆಗೆ ಆಚಾರ್ಯರಿಗೆ ಸೂರ್ಯದೃಷ್ಟಾಂತದ ಔಚಿತ್ಯವನ್ನು ಮತ್ತೊಂದು ದೃಷ್ಟಿಯಿಂದಲೂ ಪರಿಶೀಲಿಸಬಹುದು.

ಸಂಸಾರಸುಖವೆಂಬ ಮಿಣುಕುಹುಳಗಳ ಬೆಳಕನ್ನು ಅಡಗಿಸುವ ಮೋಕ್ಷವನ್ನು ನೀಡಬಲ್ಲ ತತ್ತ್ವಜ್ಞಾನವನ್ನು ಅನುಗ್ರಹಿಸಿರುವ ಆಚಾರ್ಯರು, ಭಗವತ್ತತ್ತ್ವದ ಬಗ್ಗೆ ಶುದ್ಧವಾದ ಬೆಳಕನ್ನು ನೀಡುವ ಪ್ರಯುಕ್ತ ಸೂರ್ಯ ಎಂದೆನಿಸಿರುವರು. 'ನರಸಿಂಹೋಽಖಿಲಾಜ್ಞಾನ ಮತಧ್ವಾಂತ ದಿವಾಕರ' ಎಂದು ಅಜ್ಞಾನ, ವಿಪರೀತಜ್ಞಾನಗಳಿಂದ ಹುಟ್ಟಿಕೊಂಡ ಮತಗಳನ್ನೆಲ್ಲ ಅಂಧಕಾರಕ್ಕೆ ಹೋಲಿಸಲಾಗಿದೆ. ಇಂತಹ ಅಂಧಕಾರವನ್ನು ತೊಲಗಿಸುವ ತತ್ತ್ವಜ್ಞಾನದ ಬೆಳಕನ್ನು ನೀಡಿದ ಶ್ರೀಮದಾಚಾರ್ಯರು ಸೂರ್ಯ ಆಗಲೇಬೇಕು ತಾನೇ?

ರಾಮಾನುಜಾಚಾರ್ಯರಿಂದಲೂ ಭಗವತ್ತತ್ತ್ವದ ಬಗ್ಗೆ, ತತ್ತ್ವಜ್ಞಾನದ ಬಗ್ಗೆ ಸಾಕಷ್ಟು ಬೆಳಕು ಸಂದಿವೆ. ಆದರೆ ಅದು ಚಂದ್ರನ ಬೆಳಕಂತಷ್ಟೇ ಆದ್ದರಿಂದ ಅವರು ಚಂದ್ರ ಎಂದೆನಿಸಬಹುದೇ ವಿನಾ ಸೂರ್ಯನಾಗಲಾರರು.

ಚಂದ್ರನಲ್ಲಿ ಕಳಂಕವಿರುವಂತೆ ರಾಮಾನುಜಾಚಾರ್ಯರ ಸಿದ್ಧಾಂತದಲ್ಲೂ 'ಕಳಂಕ'ವಿದೆ. ಜೀವಾತ್ಮರಲ್ಲಿ ಸ್ವರೂಪಯೋಗ್ಯತೆಯನ್ನು ಒಪ್ಪದ ಅವರು, ಜೀವಾತ್ಮರಲ್ಲಿ ಮೊಟ್ಟಮೊದಲ ಕರ್ಮ ಸ್ವತಂತ್ರವಾಗಿ ನಡೆಯುವಂತಹದ್ದು. ಆಗ ಭಗವಂತನು ಉದಾಸೀನನಾಗಿದ್ದು, ಜೀವಾತ್ಮರು ಕೆಟ್ಟ ಕರ್ಮ ನಡೆಸಿದರೂ ಸುಮ್ಮನಿರುವನು. ಮುಂದೆ ಆಯಾಯ ಜೀವರು ನಡೆಸಿದ ಒಳ್ಳೆಯ ಅಥವಾ ಕೆಟ್ಟ ಕರ್ಮಕ್ಕೆ ಅನುಗುಣವಾಗಿ ಅವರನ್ನು ಒಳ್ಳೆಯ ಅಥವಾ ಕೆಟ್ಟ ಕರ್ಮದಲ್ಲಿ ಪ್ರೇರಿಸುವನು. ಅಂತೂ ಜೀವಾತ್ಮರ ಪ್ರಾರಂಭದ ಕರ್ಮ ಭಗವದಧೀನವಲ್ಲ –ಎಂಬುದು ಅವರ ಸಿದ್ಧಾಂತ. ಹೀಗೆ ಯಾವುದಾದರೂ ಭಗವದಧೀನವಲ್ಲ ಎಂದು ತಿಳಿಯುವುದು ಭಗವಂತನ ವಿರೋಧವನ್ನೆಸಗಿದಂತೆಯೇ ಎಂದು ಭೀಷ್ಮಾಚಾರ್ಯರು ಸಂದೇಶಿಸಿದ್ದಿದೆ– "ವಿರೋಧಕೃದ್ವಿಷ್ಣ್ವಧೀನಾದನ್ಯತ್ಕಿಂಚಿದಪಿ ಸ್ಮರನ್" (ಮಹಾ. ಭಾರ. ತಾ. ನಿ. ೨೯–೪೩) ರಾಮಾನುಜರು ಎಷ್ಟೇ ವಿಷ್ಣುಸರ್ವೋತ್ತಮತ್ವವನ್ನು ಸಾಧಿಸಿದ್ದರೂ ಈ ರೀತಿಯಾದ ವಿರೋಧವನ್ನೆಸಗಿರುವುದರಿಂದ ಅವರ ಸಿದ್ಧಾಂತದಲ್ಲಿ ದೊಡ್ಡ ಕಳಂಕವಿದ್ದಂತೆಯೇ.

ಹಾಗೆಯೇ 'ದ್ವೇಷಾಚ್ಚೈದ್ಯಾದಯೋ ನೃಪಾಃ' ಮುಂತಾದ ಮಾತುಗಳ ಆಧಾರದಲ್ಲಿ ಅವರ ಅನುಯಾಯಿಗಳು ಮೋಕ್ಷಕ್ಕೆ ಭಗವಂತನಲ್ಲಿಯ ದ್ವೇಷವೂ ಸಾಧನವಾಗಬಲ್ಲದೆಂದು ಸಾಧಿಸುವರು. ಇದರಿಂದಾಗಿ ಭಗವದ್ಭಕ್ತಿಯ ಮಹತ್ತ್ವವನ್ನು ಇಳಿಸಿದಂತಾಗುವುದು. ಆ ಮೂಲಕ ಭಗವಂತನ ಮೋಕ್ಷಪ್ರದತ್ವ ಮಹಿಮೆಯನ್ನು ಶಿಥಿಲಗೊಳಿಸಿದಂತಾಗುವುದು.

ಮುಕ್ತ ಜೀವಾತ್ಮರು ಆನಂದದ ವಿಷಯದಲ್ಲಿ ಭಗವಂತನ ಅತ್ಯಂತ ಸಾಮ್ಯ ವನ್ನು ಪಡೆಯುವರೆಂಬ ಅವರ ಮತ್ತೊಂದು ತತ್ತ್ವವು ಭಗವದ್ಭಕ್ತಿಯ ಮಾಲಿನ್ಯಕ್ಕೆ ಕಾರಣಗಳಾದ ನವದ್ವೇಷಗಳಲ್ಲಿ (ಸಾಮ್ಯಾಧಿಕ್ಯೇ ತದನ್ಯೇಷಾಂ-) ಒಂದಾಗಿರುವ ಪ್ರಯುಕ್ತ ಅವರ ಸಿದ್ಧಾಂತಕ್ಕೆ ಮತ್ತೊಂದು ಕಲಂಕ ಬಂದಂತಾಗುವುದು.

ಈ ರೀತಿಯಾಗಿ ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದಿಸಲು ಹೊರಟಿರುವು ದಾದರೂ ರಾಮಾನುಜೀಯಮತವು ಚಂದ್ರನಲ್ಲಿಯ ಕಲಂಕದಂತೆ ಪರೋಕ್ಷವಾಗಿ ವಿಷ್ಣುಸರ್ವೋತ್ತಮತ್ವಕ್ಕೆ ಬಾಧಕಗಳಾದ ಅನೇಕ ತತ್ವಗಳನ್ನು ಒಳಗೊಂಡಿರುವುದರಿಂದ ಅದು ಅಧ್ಯಾತ್ಮವಿದ್ಯೆಯ ಪ್ರಪಂಚದಲ್ಲಿ ಕಲಂಕಯುಕ್ತ ಚಂದ್ರ ಎನಿಸಬಹುದಷ್ಟೇ. ಉಳಿದ ಮತಗಳಂತೂ ಭಗವಂತನ ಮಹಿಮೆಯನ್ನು ಸರಿಯಾಗಿ ಪ್ರತಿಪಾದಿಸದ ಪ್ರಯುಕ್ತ ಸ್ವಯಂ ಅಂಧಕಾರವೇ ಆಗಿವೆ. ಭಗವಂತನ ವ್ಯಕ್ತಿತ್ವದ ಬಗ್ಗೆ ನಿರ್ದುಷ್ಟವಾದ ನಿಖರವಾದ ಬೆಳಕು ಚೆಲ್ಲಬಲ್ಲದ್ದು ಶ್ರೀಮಧ್ವಮತ. ಅದನ್ನು ಪ್ರಚುರಪಡಿಸಿದ ಆಚಾರ್ಯರು ಅಧ್ಯಾತ್ಮವಿದ್ಯೆಯ ಪ್ರಪಂಚದ ಸೂರ್ಯ ಎನಿಸಿರುವರು.

ಶ್ರೀಮಧ್ವಮತದಲ್ಲಿ ನಿತ್ಯನರಕವನ್ನು ಒಪ್ಪಲಾಗಿದೆ, ಇದನ್ನೇ ಕೆಲವರು ಒಂದು ನ್ಯೂನತೆ ಎಂದು ಪರಿಗಣಿಸುವುದಿದೆ. ಇದು ಸೂರ್ಯನ ಉಷ್ಣತ್ವಭಾವವನ್ನು ದೋಷ ಎಂದು ಪರಿಗಣಿಸಿದಂತೆ. ಉಷ್ಣತೆ ಆಪಾತತಃ ದೋಷವೇ ಆದರೂ ಅದರ ಉಪಯೋಗ ಎಷ್ಟಿಲ್ಲ? ಅಂತೆಯೇ ನಿತ್ಯನರಕವನ್ನು ಒಪ್ಪುವುದರಿಂದ ಅನ್ಯಥಾಜ್ಞಾನ ವನ್ನು ಆಶ್ರಯಿಸಬಾರದೆಂದು ಎಚ್ಚರಿಸಿದಂತಾಗುವುದು. ಕರ್ಮವು ಸ್ವರ್ಗಾದಿ ಅನಿತ್ಯಫಲದಾಯಕವಾಗಿದ್ದು, ಜ್ಞಾನವು ಮೋಕ್ಷವೆಂಬ ನಿತ್ಯಫಲ ನೀಡುವುದರಿಂದ ಜ್ಞಾನವನ್ನು ಕರ್ಮಕ್ಕಿಂತ ಶ್ರೇಷ್ಠವೆಂದು ಪರಿಗಣಿಸಲಾಗಿದೆ. ಅದೇ ನ್ಯಾಯದಿಂದ ಕೆಟ್ಟ ಕರ್ಮಕ್ಕಿಂತ ಕೆಟ್ಟ ಜ್ಞಾನವು ಅಧಿಕ ಹೇಯ ಎನಿಸಬೇಕಾದರೆ, ಕೆಟ್ಟ ಕರ್ಮ ನರಕಾದಿ ಅನಿತ್ಯ ಅನಿಷ್ಟ ಫಲದಾಯಕವಾದರೆ, ಕೆಟ್ಟಜ್ಞಾನವು ನಿತ್ಯನರಕರೂಪವಾದ ಅನಿಷ್ಟಕ್ಕೆ ಸಾಧನವೆಂದು ಒಪ್ಪಲೇಬೇಕು ತಾನೇ? -ಎಂದು ಶ್ರೀವಾದಿರಾಜರು ಯುಕ್ತಿಯಿಂ ದಲೂ ನಿತ್ಯನರಕವು ಸಾಧನಾರ್ಹ ಎಂದು ತೋರಿಸಿದ್ದಿದೆ. ಆದ್ದರಿಂದ ನಿತ್ಯನರಕದ ಸಾಧನೆ ಏನೂ ಮಾಧ್ವಸಿದ್ಧಾಂತಕ್ಕೆ ದೋಷ ಎನಿಸದು.

ಆದ್ದರಿಂದ ಮಾಧ್ವಸಿದ್ಧಾಂತ, ಅದನ್ನು ಪ್ರಚುರಪಡಿಸಿದ ಆಚಾರ್ಯರು ಶುಭ್ರ ಬೆಳಕನ್ನು ನೀಡುವ ಸೂರ್ಯನಂತೆ ಎಂಬುದು ಸಮುಚಿತವಾದುದು.

●

೨. ೮. ಅಲ್ಲೇ ತೀರ್ಥಸನ್ನಿಧಿ

ಶ್ರೀಮದಾಚಾರ್ಯರು ಗಂಗಾನದಿಯಲ್ಲಿ ಸ್ನಾನಕ್ಕಾಗಿ ಆ ನದಿ ಇರುವಲ್ಲಿಗೆ ತೆರಳಬೇಕೆಂದು ಸಂಕಲ್ಪಿಸಿದಾಗ ಗಂಗಾನದಿಯೇ ಆಚಾರ್ಯರು ಇದ್ದ ಉಡುಪಿಗೆ ಆಗಮಿಸಿದಳು. ಹಾಗೆಯೇ ಮತ್ತೊಮ್ಮೆ ಹಸ್ತಿನಾಪುರದ ಮಠವೊಂದರಲ್ಲಿ

ಆಚಾರ್ಯರು ಚಾತುರ್ಮಾಸ್ಯವ್ರತವನ್ನು ಕೈಗೊಂಡಿದ್ದಾಗ ಗಂಗಾನದಿ ಅಲ್ಲಿಗೇ ಆಗಮಿಸಿದ್ದಳು.

ಇದರಿಂದ ತಿಳಿದುಬರುವ ಅಂಶವೆಂದರೆ ಸಚ್ಛಾಸ್ತ್ರದ ಪಾಠಪ್ರವಚನ ನಡೆಯುತ್ತಿದ್ದಲ್ಲಿ ಗಂಗಾನದಿಯೇ ಮುಂತಾದ ನದಿಗಳ ಸನ್ನಿಧಾನ ವಿಶೇಷ ಇರುವುದು. ಆದ್ದರಿಂದ ಶಾಸ್ತ್ರಪಾಠ ಪ್ರವಚನ ನಡೆಸುವವರು, ಅದನ್ನು ನಿಲ್ಲಿಸಿ ತೀರ್ಥಯಾತ್ರೆಗೆ ಹೋಗುವ ಆವಶ್ಯಕತೆ ಇಲ್ಲ.

ಮಕ್ಕಳ ರಕ್ಷಣೆಯ ಬಗ್ಗೆ ಭ್ರಮೆ ಸಲ್ಲ:

ಶ್ರೀಮದಾಚಾರ್ಯರು ಮೂರುನಾಲ್ಕು ವರ್ಷದ ಬಾಲಕರಾಗಿದ್ದಾಗ, ಬಂಧುಗಳ ಮನೆಯ ಸಮಾರಂಭವೊಂದು ನಡೆದ ದಿನ ತಂದೆತಾಯಂದಿರಿಗೆ ಹೇಳದೆಯೇ ಅಲ್ಲಿಂದ ಹೊರಟು ಕೊಡವೂರು ದೇವಾಲಯಕ್ಕೂ ಬನ್ನಂಜೆ ದೇವಾಲಯಕ್ಕೂ ಸಂದರ್ಶನ ನೀಡಿ ಉಡುಪಿ ಅನಂತಾಸನನಲ್ಲಿಗೆ ಬಂದರೆಂದು ಉಲ್ಲೇಖಿಸಲ್ಪಟ್ಟಿದೆ. ತಂದೆತಾಯಂದಿರಿಗೆ ತಿಳಿಸದೆ ಹೋಗುವ ಸಾಮಾನ್ಯ ಹುಡುಗನಂತೆ ಆಚಾರ್ಯರು ನಡೆದುಕೊಂಡುದು ಸರಿಯೇ?

'ಸ ರಕ್ಷಿತಾ ರಕ್ಷತಿ ಯೋ ಹಿ ಗರ್ಭೇ' ಎಂದು ಭಾಗವತದಲ್ಲಿ ನಿರೂಪಿತವಾಗಿರುವಂತೆ ಗರ್ಭದಲ್ಲಿ ರಕ್ಷಿಸುವ ಭಗವಂತನೇ ಗರ್ಭದ ಹೊರಗೆ ಬಂದ ಮೇಲೂ ರಕ್ಷಿಸುತ್ತಿರುವವನು. ತಂದೆತಾಯಂದಿರು ಇದನ್ನು ಚೆನ್ನಾಗಿ ಗಮನಿಸಬೇಕು. ಕರ್ತವ್ಯದೃಷ್ಟಿಯಿಂದ ತಮ್ಮ ಮಕ್ಕಳ ರಕ್ಷಣೆಯಲ್ಲಿ ಅವರು ತೊಡಗಿರಬೇಕೇ ಹೊರತು ತಾವೇ ತಮ್ಮ ಮಕ್ಕಳನ್ನು ರಕ್ಷಿಸುವವರೆಂಬ ಭ್ರಮೆಗೆ ಒಳಗಾಗಬಾರದು. ಶ್ರೀಮದಾಚಾರ್ಯರ ತಂದೆತಾಯಂದಿರು ವಾಸುದೇವನ ರಕ್ಷಣೆಯ ಬಗ್ಗೆ ಈ ರೀತಿಯ ಭ್ರಮೆಗೊಳಗಾಗಿದ್ದರು. ಅದನ್ನು ಹೋಗಲಾಡಿಸಿ, ಇತರ ತಂದೆತಾಯಂದಿರೂ ತಮ್ಮ ತಮ್ಮ ಮಕ್ಕಳ ರಕ್ಷಣೆಯ ಕುರಿತು ಇರುವ ಭ್ರಮೆಯನ್ನು ಕಳೆದುಕೊಳ್ಳಬೇಕೆಂದು ಸೂಚ್ಯವಾಗಿ ಸಂದೇಶಿಸುವುದಕ್ಕಾಗಿಯೇ ವಾಸುದೇವ ಸಾಮಾನ್ಯ ಬಾಲಕನಂತೆ ನಡೆದುಕೊಂಡರು.

●

೨. ೯. ಅದ್ವೈತಶಾಸ್ತ್ರಾಧ್ಯಯನಾದಿಗಳ ಉದ್ದೇಶ

'......ಸಚ್ಛಾಸ್ತ್ರಾಣ್ಯೇವ ಸರ್ವದಾ । ಶೃಣುಯಾತ್' –ಯಾವಾಗಲೂ ಸಚ್ಛಾಸ್ತ್ರಶ್ರವಣವನ್ನೇ ನಡೆಸಬೇಕು. '......ದುಶ್ಶಾಸ್ತ್ರಂ ಚ ಪರಿತ್ಯಜೇತ್' ದುಶ್ಶಾಸ್ತ್ರದ ಅಧ್ಯಯನ ಅಧ್ಯಾಪನಗಳನ್ನು ನಡೆಸಬಾರದಷ್ಟೇ ಅಲ್ಲ; ಅದು ತ್ಯಾಜ್ಯ ಎಂಬ ಭಾವನೆಯನ್ನು ಹೊಂದಿರಬೇಕು –ಎಂಬುದಾಗಿ ಶ್ರೀಮದಾಚಾರ್ಯರು ದುಶ್ಶಾಸ್ತ್ರದ ಅಧ್ಯಯನ ಅಧ್ಯಾಪನಗಳ ಬಗ್ಗೆ ಅಭಿಪ್ರಾಯಪಟ್ಟಿರುವರು.

ಆದರೆ ಅವರು ಇನ್ನೂ ಸತ್ಸಿದ್ಧಾಂತವನ್ನು ಸ್ಥಾಪಿಸಿ ಪ್ರಚುರಪಡಿಸುವ ಮುಂಚೆ ಅಚ್ಯುತಪ್ರೇಕ್ಷಾಚಾರ್ಯರಲ್ಲಿ ಅದ್ವೈತಶಾಸ್ತ್ರಾಧ್ಯಯನವನ್ನು ನಡೆಸಿದ್ದೇಕೆ? ಬರೇ ಅಧ್ಯಯನವಷ್ಟೇ ಅಲ್ಲ. ಅದ್ವೈತಶಾಸ್ತ್ರದ ಅಧ್ಯಾಪನವನ್ನೂ ನಡೆಸಿರುವರೆಂದು ಉಲ್ಲೇಖವಿದೆ. ಅದ್ವೈತಶಾಸ್ತ್ರದ ಅಧ್ಯಾಪನವನ್ನು ಯಾಕೆ ನಡೆಸಬೇಕಿತ್ತು? ಸರ್ವಜ್ಞರಾದ ಅವರಿಗೆ ಅದ್ವೈತಶಾಸ್ತ್ರ ದುಶ್ಶಾಸ್ತ್ರವೆನಿಸಿದ್ದು ಹೇಯವಾಗಿದೆ ಎಂಬ ಜ್ಞಾನ ಸಹಜವಾಗಿಯೇ ಇತ್ತು ತಾನೇ? ಆದುದರಿಂದ ತಾವು ಸತ್ಸಿದ್ಧಾಂತವನ್ನು ಸ್ಥಾಪಿಸುವವರೆಗೆ ಅವರಿಗೆ ಅದ್ವೈತಶಾಸ್ತ್ರದ ಹೇಯತಾಜ್ಞಾನವಿದ್ದಿರಲಿಲ್ಲ; ಆದುದರಿಂದ ಅವರ ಅಧ್ಯಯನ ಅಧ್ಯಾಪನಗಳನ್ನೇ ನಡೆಸುತ್ತಿದ್ದರು ಎಂದು ಸಮಾಧಾನಿಸುವಂತಿಲ್ಲ.

ಮಾಯಾಶಾಸ್ತ್ರದ ಪ್ರವಚನವನ್ನು ಆಚಾರ್ಯರು ಯಾಕೆ ನಡೆಸುತ್ತಿದ್ದರು ಎಂಬುದಕ್ಕೆ ಒಂದು ಕಾರಣವನ್ನು ನಾರಾಯಣಪಂಡಿತಾಚಾರ್ಯರು ತಿಳಿಸಿರುವರು–

ಬುಧೋಽಭಿಧಾನಂ ಶ್ರವಣಂ ಬುಧೇತರೋ
ಧ್ರುವಂ ವಿದಧ್ಯಾದ್ವಿಮುಮುಕ್ಷುರಾತ್ಮನಃ ।
ಯತಿರ್ವಿಶೇಷಾದಿತಿ ಲೋಕಚೋದನಾತ್
ಪ್ರವಕ್ತಿ ಮಾಯಾಸಮಯಂ ಸ್ಮ ಪೂರ್ಣಧೀಃ ॥

ಮುಮುಕ್ಷು ಜ್ಞಾನಿಯಾಗಿದ್ದಲ್ಲಿ ಪಾಠಪ್ರವಚನಗಳನ್ನು ನಡೆಸುತ್ತಿರಬೇಕು; ಜ್ಞಾನಿಯಾಗಿಲ್ಲದಿದ್ದಲ್ಲಿ ಶಾಸ್ತ್ರಶ್ರವಣವನ್ನು ನಡೆಸುತ್ತಿರಬೇಕು; ಯತಿಯಾದವನಂತೂ ವಿಶೇಷವಾಗಿ ಶಾಸ್ತ್ರ ಶ್ರವಣಪ್ರವಚನಾದಿಗಳನ್ನು ನಡೆಸುತ್ತಿರಬೇಕು –ಎಂಬ ತತ್ತ್ವದ ಬೋಧನೆಗಾಗಿಯಷ್ಟೇ ಹೇಯವೆಂದೆನಿಸಿದ್ದರೂ ಮಾಯಾಶಾಸ್ತ್ರದ ಪಾಠಪ್ರವಚನಗಳನ್ನೇ ಆಚಾರ್ಯರು ನಡೆಸುತ್ತಿದ್ದರು ಎಂಬುದಾಗಿ.

ಶ್ರೀಮದಾಚಾರ್ಯರು ಅದ್ವೈತಶಾಸ್ತ್ರದ ಅಧ್ಯಯನ ಅಧ್ಯಾಪನಾದಿಗಳನ್ನು ನಡೆಸಿರಲು ಮತ್ತೊಂದು ಕಾರಣವೂ ಇದೆ. ಸತ್ಸಿದ್ಧಾಂತಕ್ಕೆ ತೀರ ವಿರುದ್ಧವಾದ ಅದ್ವೈತಶಾಸ್ತ್ರವನ್ನು ಅವರು ಮುಂದೆ ತಮ್ಮ ಗ್ರಂಥಗಳಲ್ಲಿ ವಿಶೇಷವಾಗಿ ನಿರಾಕರಿಸಲಿದ್ದರೂ ಆ ರೀತಿ ನಿರಾಕರಿಸುವುದಕ್ಕಾಗಿ ಸರ್ವಜ್ಞರಾದ ಅವರು ಅದ್ವೈತಶಾಸ್ತ್ರದ ಅಧ್ಯಯನಾದಿಗಳನ್ನು ನಡೆಸಿ ವಿಶೇಷವಾಗಿ ತಿಳಿದುಕೊಳ್ಳಬೇಕಾದದ್ದೇನೂ ಇಲ್ಲ. ಆದರೂ ಅವರು ಆ ಶಾಸ್ತ್ರದ ಗುರುಮುಖದಿಂದ ಅಧ್ಯಯನಾದಿಗಳನ್ನು ನಡೆಸದೆ ತಮ್ಮ ಸ್ವಾಭಾವಿಕ ಪ್ರತಿಭೆಯಿಂದಲೇ ಅದನ್ನು ನಿರಾಕರಿಸಿದರೆಂದರೆ, ಕೆಲವು ಸಾತ್ವಿಕ ಶಿಷ್ಯರಿಗೂ ಹೀಗೆ ಸಂದೇಹಬರಬಹುದು –'ಮಧ್ವಾಚಾರ್ಯರು ಅದ್ವೈತಶಾಸ್ತ್ರವನ್ನು ನಿರಾಕರಿಸಿರುವುದೇನೋ ನಿಜ. ಆದರೆ ಆ ಶಾಸ್ತ್ರವನ್ನು ಗುರುಮುಖದಿಂದ ಅಧ್ಯಯನ ಮಾಡಿದವರಲ್ಲ. ಆದುದರಿಂದ ಆ ಶಾಸ್ತ್ರ ಯಾವುದೋ ಅಂತರ್ಯವಿಟ್ಟುಕೊಂಡು ತತ್ತ್ವಗಳನ್ನು ಪ್ರತಿಪಾದಿಸಿದ್ದಿರಬಹುದು. ಸಂಪ್ರದಾಯದಿಂದ ಬಂದ ಆ ಅಂತರ್ಯವನ್ನು ಅರಿಯದ ಇವರಾದರೂ ಆಪಾತತಃ ಕಾಣುವ ಯಾವುದೋ ಅಭಿಪ್ರಾಯವನ್ನು ಆರೋಪಿಸಿ ಆ ಶಾಸ್ತ್ರವನ್ನು ಖಂಡಿಸಿರುವರಷ್ಟೇ. ಆದ್ದರಿಂದ ಮೇಲ್ನೋಟದ ಅರ್ಥದಲ್ಲಿ ಅದ್ವೈತಶಾಸ್ತ್ರ ಹೇಯವೆನಿಸಿದರೂ, ಸಂಪ್ರದಾಯಗತವಾದ ನಿಜವಾದ

ಅರ್ಥದಲ್ಲಿ ಅದೇನೂ ಹೇಯವೆನಿಸದು' -ಈ ರೀತಿಯ ಸಂಶಯವನ್ನು ಸಾತ್ತ್ವಿಕ ಶಿಷ್ಯರೂ ತಾಳುವ ಸಾಧ್ಯತೆ ಇದೆ. ಹೀಗಾಗಬಾರದು ಅದಕ್ಕಾಗಿ ಆಚಾರ್ಯರು ಗುರುಮುಖದಿಂದ ಅದ್ವೈತಶಾಸ್ತ್ರವನ್ನು ಅಧ್ಯಯನ ಮಾಡಿದರು. ಅಷ್ಟೇ ಅಲ್ಲ; ಅದರ ಅಧ್ಯಾಪನವನ್ನೂ ನಡೆಸಿದರು. ಗುರುಮುಖದಿಂದಲೇ ಅಧ್ಯಯನ ನಡೆಸಿದಾಗ, ಅಷ್ಟೇ ಅಲ್ಲದೆ, ಅಧ್ಯಾಪನ ನಡೆಸಲು ಬೇಕಾಗುವಷ್ಟೂ ಅದರ ಬಗ್ಗೆ ಪರಿಶೀಲನೆ ನಡೆಸಿದಾಗ ಆ ಶಾಸ್ತ್ರದ ಆಂತರ್ಯ ತಿಳಿಯದೆ ಇರಲು ಸಾಧ್ಯವೇ ಇಲ್ಲತಾನೇ? ಆದ್ದರಿಂದ ಶ್ರೀಮದಾಚಾರ್ಯರು ಅದ್ವೈತಶಾಸ್ತ್ರದ ನಿಜವಾದ ಅಭಿಪ್ರಾಯವನ್ನು ಅರಿತೇ ಆ ಅಭಿಪ್ರಾಯದಿಂದಲೇ ಅದನ್ನು ನಿರಾಕರಿಸಿರುವರು ಎಂದು ಸಾತ್ತ್ವಿಕ ಶಿಷ್ಯರು ದೃಢಪಡಿಸಿಕೊಳ್ಳದಿರರು. ಈ ಉದ್ದೇಶಕ್ಕಾಗಿಯೂ ತಮಗೆ ಆವಶ್ಯಕತೆಯಿಲ್ಲದಿದ್ದರೂ ಶ್ರೀಮದಾಚಾರ್ಯರು ಅದ್ವೈತಶಾಸ್ತ್ರದ ಅಧ್ಯಯನ-ಅಧ್ಯಾಪನವನ್ನು ನಡೆಸಿರುವರು. ಆದ್ದರಿಂದ ಅದ್ವೈತಶಾಸ್ತ್ರದ ನಿಜವಾದ ಅರ್ಥವನ್ನು ತಿಳಿಯದೆಯೇ, ಇನ್ನಾವುದೋ ಅರ್ಥವೆಂದು ಭ್ರಮಿಸಿಕೊಂಡು, ಆ ಅರ್ಥದಲ್ಲಿ ಅದ್ವೈತಶಾಸ್ತ್ರವನ್ನು ನಿರಾಕರಿಸಲಾಗಿದೆ ಎಂದು ಹಾರಿಕೆಯ ಉತ್ತರವನ್ನು ನೀಡುವವರು ಶ್ರೀಮದಾಚಾರ್ಯರ ಈ ಪ್ರವೃತ್ತಿಯನ್ನು ಅವಶ್ಯವಾಗಿ ಪರಿಶೀಲಿಸಬೇಕು.

●

೨. ೧೦. ಶ್ರೀಮಧ್ವಚರಿತಾನುವಾದದ ಸುಮಗಳು

ಪ್ರಾಣಿಗಣಪ್ರಣೇತಾ:

'ವಾಯುರ್ಭೀಮೋ ಭೀಮನಾದೋ ಮಹೌಜಾಃ....' ಎಂಬ ಪ್ರಮಾಣದಲ್ಲಿ 'ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ' -ಸಕಲಪ್ರಾಣಿಗಳಿಗೂ ಪ್ರಾಣನಾಗಿರುವವನು ಎಂದು ಪ್ರತಿಜ್ಞೆಗೈದು. 'ಅನಾವೃತ್ತಿರ್ದೇಹಿನಾಂ ದೇಹಪಾತೇ' -ಜೀವಾತ್ಮರ ದೇಹವು ಪತಿತವಾಗುವಾಗ ಅಲ್ಲಿ ಪ್ರಾಣದೇವನ ಸನ್ನಿಧಾನವೂ ಇರುವುದಿಲ್ಲ -ಅರ್ಥಾತ್ ಅವನ ಸನ್ನಿಧಾನವಿಲ್ಲದಿರುವುದರಿಂದಲೇ ದೇಹವು ಪತಿತವಾಗುವುದು ಎಂದು ವ್ಯತಿರೇಕ ವ್ಯಾಪ್ತಿಯಿಂದ ಸಾಧಿಸಲಾಗಿದೆ.

ಪ್ರಾಣದೇವನ ಈ ಮಹಿಮೆಯನ್ನೇ ಸುಮಧ್ವವಿಜಯದ ೯ನೆಯ ಶ್ಲೋಕದಲ್ಲಿ 'ಪ್ರಾಣೇಶ್ವರಃ ಪ್ರಾಣಿಗಣಪ್ರಣೇತಾ' ಎಂಬ ವಿಶೇಷಣಗಳಿಂದ ಸೂಚಿಸಲಾಗಿದೆ.

ಮುಹೂರ್ತಮದೂಷಣಮ್:

ವಾಸುದೇವನ ತಂದೆ ಒಂದು ನಿರ್ದುಷ್ಟವಾದ ಮುಹೂರ್ತದಲ್ಲಿ ಅವನಿಗೆ ಉಪನಯನವನ್ನು ಮಾಡಿದರೆಂದು ನಿರೂಪಿಸಲಾಗಿದೆ.

ದ್ವಿಜ ಎನಿಸುವ ಬ್ರಾಹ್ಮಣನಿಗೆ ಉಪನಯನ ಸಂಸ್ಕಾರವು ಎರಡನೇ ಜನ್ಮವಿದ್ದಂತೆ. ಮೊದಲ ಜನ್ಮಕ್ಕೆ ಸಂಬಂಧಪಟ್ಟ ಜಾತಕದಲ್ಲಿ ದೋಷಗಳಿತ್ತೆಂದರೆ, ಎರಡನೇ ಜನ್ಮವೆನಿಸುವ ಉಪನಯನವನ್ನು ನಿರ್ದುಷ್ಟವಾದ ಮುಹೂರ್ತದಲ್ಲಿ ನಡೆಸಿ, ಆ

ಮೂಲಕ ಮೊದಲ ಜನ್ಮಕ್ಕೆ ಸಂಬಂಧಿಸಿದ ದೋಷಗಳಿಂದೆಲ್ಲ ದೂರನಾಗಿ ಪ್ರಗತಿಯನ್ನು ಸಾಧಿಸುವಂತೆ ಮಾಡಬಹುದಾಗಿದೆ. ಈ ದೃಷ್ಟಿಯಿಂದಲೂ ಉಪನಯನಕ್ಕೆ ಅತ್ಯುತ್ತಮವಾದ ಮುಹೂರ್ತವನ್ನು ಆರಿಸಿಕೊಳ್ಳುವುದು ಅತ್ಯವಶ್ಯ.

ವಿಲಕ್ಷಣ ಆನಂದ:

ಆನಂದಸ್ವರೂಪಿಯಾದ ಭಗವಂತನ ವಿಶೇಷ ಸನ್ನಿಧಾನಕ್ಕೆ ಪಾತ್ರರಾದ ವ್ಯಕ್ತಿಗಳ ಮುಖದಲ್ಲಿ ವಿಲಕ್ಷಣವಾದ ಆನಂದವು ಪಸರಿಸಿರುವುದು. ಯಥೇಷ್ಟವಾಗಿ ಭೋಜನವನ್ನು ಮಾಡಿದ ವ್ಯಕ್ತಿಯ ಮುಖದಲ್ಲಿ ತೃಪ್ತಿಯ ಆನಂದಲಹರಿ ಹರಿಯುತ್ತಿರುವಂತೆ ಶ್ರೀಮದಾಚಾರ್ಯರು ಭಕ್ತರ ಲಕ್ಷಣಗಳಲ್ಲೆಲ್ಲ ಯಾವಾಗಲೂ ಆನಂದಭರಿತನಾಗಿರುವುದೇ ಶ್ರೇಷ್ಠ ಲಕ್ಷಣವೆಂದು ತಿಳಿಸಿರುವರು.

ಭಗವದ್ಭಕ್ತರ ಮುಖ್ಯವಾದ ಈ ಲಕ್ಷಣವನ್ನು ಶ್ರೀಮದಾಚಾರ್ಯರಲ್ಲಿ ಕಂಡೇ ಜನರು ಆಕರ್ಷಿತರಾಗಿ 'ಸ್ವಭಾವಶೋಭಾ ಅನುಪಮಾ' –ಸ್ವಾಭಾವಿಕ ಸೊಬಗು ಅಸದೃಶ ಎಂದು ಉದ್ಗರಿಸುತ್ತಿದ್ದರು.

ದ್ವಯಂ ಶಂಕರಸ್ಯಾಸ್ತಿ.....

ಕಾಲಡಿಯಲ್ಲಿ ಒಮ್ಮೆ ಹುಟ್ಟಿದ್ದ ಶಂಕರರು ಆಚಾರ್ಯರ ಸಮಾನಕಾಲದಲ್ಲಿ ಪುನಃ ಕುದಿಪುಸ್ತೂರು ಎಂಬ ವಂಶದಲ್ಲಿ ಹುಟ್ಟಿಬಂದಿದ್ದು, ತಿರುವನಂತಪುರದಲ್ಲಿ ಆಚಾರ್ಯರನ್ನು ಭೇಟಿ ಆಗಿ ಅವರೊಡನೆ ವಾದ ನಡೆಸಿರುವರು.

ಹೀಗೆ ಶಂಕರಾಚಾರ್ಯರಿಗೆ ಎರಡು ಜನ್ಮಗಳಿವೆ ಎಂದು ಅವರ ಶಿಷ್ಯರೆ ಹೇಳಿದ್ದನ್ನು 'ಮಣಿಮಂಜರಿ'ಯಲ್ಲಿ ಉಲ್ಲೇಖಿಸಲಾಗಿದೆ –'ದ್ವಯಂ ಶಂಕರಸ್ಯಾಸ್ತಿ ಪದ್ಮಸ್ಯ ಚೈಕಂ.....' (7-28)

ಆಚಾರ್ಯರು ತಮ್ಮ ಗ್ರಂಥಗಳಲ್ಲಿ ಶಾಂಕರಮತವನ್ನು ಖಂಡಿಸಿದ್ದನ್ನು ಶಂಕರಾಚಾರ್ಯರೇ ಬಂದಿದ್ದರೆ ನಿರಾಕರಿಸುತ್ತಿದ್ದರೆಂಬ ಪ್ರಮಾದಕ್ಕೆ ಅವಕಾಶವಿಲ್ಲವೆಂದು ಇದರಿಂದ ಸ್ಪಷ್ಟವಾಗುವುದು.

ಭೀಮನನ್ನು ಪ್ರಶಂಸಿಸಿದಂತೆ:

ಶ್ರೀಕೃಷ್ಣನು ಭೀಮಸೇನನನ್ನು 'ಯತ್ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ । ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್' ನೀನು ನಿನ್ನಲ್ಲಿ ತಿಳಿದುಕೊಂಡಿರುವುದಕ್ಕಿಂತ ಸಾವಿರಪಟ್ಟು ಗುಣಗಳಿವೆ ಎಂದು ನಾನು ಭಾವಿಸುವೆನೆಂದು ಪ್ರಶಂಸಿಸಿರುವಂತೆ, ಬದರಿನಾರಾಯಣನು ಶ್ರೀಮದಾಚಾರ್ಯರ ಗೀತಾಭಾಷ್ಯದ ಮಂಗಲಾಚರಣೆಯಲ್ಲಿ ಪ್ರಯೋಗಿಸಲಾಗಿದ್ದ 'ಶಕ್ತಿತಃ' ಎನ್ನುವ ಪದದ ಬದಲು 'ಲೇಶತಃ' ಎಂದಾಗಬೇಕೆಂದು ಹೇಳುವುದರ ಮೂಲಕ ಗೀತೆಯ ಅನೇಕಾರ್ಥಗಳನ್ನು ತಿಳಿಯುವ ಸಾಮರ್ಥ್ಯ ಆಚಾರ್ಯರಲ್ಲಿದೆ ಎಂದು ಪ್ರಶಂಸಿಸಿರುವನು.

ಉಡುಪಿಗೆ ಸಂಬಂಧಿಸಿದಂತೆ.....:

ಶ್ರೀಮದಾಚಾರ್ಯರು ಬದರಿಯಲ್ಲಿ ಶ್ರೀವೇದವ್ಯಾಸಾಶ್ರಮಕ್ಕೆ ತೆರಳುವ ಮುನ್ನ ಬರಹದ ಮೂಲಕ ನೀಡಿದ 'ನೇದೃಶಂ ಸ್ಥಲಮಲಂ ಶಮಲಘ್ನಂ.....' -ಎಂಬ ಸಂದೇಶಕ್ಕೆ ಬದರಿಗೆ ಸದೃಶವಾದ ಸ್ಥಳ ಮತ್ತೊಂದಿಲ್ಲ ಅಲಕನಂದೆಗೆ ಸದೃಶವಾದ ತೀರ್ಥ ಇನ್ನೊಂದಿಲ್ಲ, ಹಾಗೂ ಬದರಿ ನಾರಾಯಣನಿಗೆ ಸದೃಶನಾದ ದೈವ ಇನ್ನೊಂದಿಲ್ಲ -ಎಂಬ ಅರ್ಥದಂತೆಯೇ 'ಈದೃಶಂ' ಎಂಬುದರಿಂದ ಬುದ್ಧಿಯಲ್ಲಿ ಸನ್ನಿಹಿತವಾದ ಉಡುಪಿಯನ್ನು ಪರಾಮರ್ಶಿಸಿ ಅಂತಹ ಉಡುಪಿಗೆ ಸದೃಶವಾದ ಸ್ಥಳ ಮತ್ತೊಂದಿಲ್ಲ, ಮಧ್ವಸರೋವರಕ್ಕೆ ಸದೃಶವಾದ ತೀರ್ಥ ಇನ್ನೊಂದಿಲ್ಲ. ಉಡುಪಿ ಕೃಷ್ಣನಿಗೆ ಸದೃಶನಾದ ದೈವ ಮತ್ತೊಬ್ಬನಿಲ್ಲ -ಎಂಬ ಅರ್ಥವನ್ನೂ ಇಟ್ಟುಕೊಳ್ಳ ಬಹುದಾಗಿದೆ.

ಮೂರು ಬದರಿಗಳು:

ಈಗಲೂ ಎಲ್ಲರೂ ಹೋಗಿಬರುವ ಬದರಿಕ್ಷೇತ್ರ ಒಂದಾದರೆ, 'ಅಥ ಹೈಮವತೇ ತಟಾಂತರೇ ಬದರೀಷಂಡವಿಶೇಷ ಮಂಡಿತಮ್' -ಎಂದು ಸುಮಧ್ವ ವಿಜಯದಲ್ಲಿ ಉಲ್ಲೇಖಿಸಲ್ಪಟ್ಟಂತೆ ಹಿಮಾಲಯ ಪರ್ವತದ ಉತ್ತರ ಪಾರ್ಶ್ವದಲ್ಲಿ ಮತ್ತೊಂದು ಬದರೀಕ್ಷೇತ್ರವಿದೆ. ಇದಲ್ಲದೆ ಮೇರುಪರ್ವತದ ಸಮೀಪದಲ್ಲಿ ಮತ್ತೊಂದು ಬದರಿ ಇದೆ. ಹೀಗೆ ಒಟ್ಟು ಮೂರು ಬದರಿಗಳಿವೆ ಎಂದು ಶ್ರೀ ವಾದಿರಾಜರು ತಿಳಿಸಿರುವರು.

ವಿಮಲಾನ್ ಮಣೀನಿವ:

ನಾರಾಯಣನು ಶ್ರೀ ಮಧ್ವರಲ್ಲಿ ಕಲಿಕಾಲದಲ್ಲೂ ನಿರ್ಮಲಗಳಾದ ಮಣಿಗಳಂತೆ ಇರುವ ಸಜ್ಜನರನ್ನು ಉದ್ಧಾರಮಾಡಲು ಆದೇಶಿಸುವನು. ನಿರ್ಮಲಮಣಿಗಳ ಹೋಲಿಕೆ ಕೊಡುವುದರಿಂದ ಎಲ್ಲರನ್ನೂ ಉದ್ಧಾರಮಾಡಲು ಹೇಳಲೇ ಇಲ್ಲ; ಶುದ್ಧಗೊಳಿಸಲು ಯೋಗ್ಯಗಳಾದ ಮಣಿಗಳನ್ನು ಶುದ್ಧಗೊಳಿಸಬಹುದೇ ಹೊರತು ಕಲ್ಲು, ಮುಳ್ಳು ಮುಂತಾದವನ್ನೆಲ್ಲ ಶುದ್ಧಗೊಳಿಸಲಾಗದು ತಾನೆ! ಹಾಗೆಯೇ ಉದ್ಧಾರ ಮಾಡಲು ಯೋಗ್ಯರಾದವರನ್ನಷ್ಟೇ ಉದ್ಧಾರಮಾಡಲು ಭಗವಂತನು ಆದೇಶಿಸಿದನು ಎಂದು ಸಿದ್ಧಿಸುವುದು. ಇದರಿಂದಾಗಿ ಮಧ್ವಾಚಾರ್ಯರು ಎಲ್ಲರನ್ನೂ ಯಾಕೆ ಮಾಧ್ವರನ್ನಾಗಿ ಮಾಡಲಿಲ್ಲ ಎಂಬ ಆಕ್ಷೇಪಕ್ಕೆ ಎಡೆ ಇಲ್ಲದಂತಾಗಿದೆ.

ಶಿಷ್ಯರ ಶಿಷ್ಯರ ಶಿಷ್ಯರನ್ನಾದರೂ ಆಶ್ರಯಿಸುವುದು:

ಮುಖ್ಯ ಗುರುಗಳಾದ ಶ್ರೀ ಮಧ್ವಾಚಾರ್ಯರನ್ನು ಆಶ್ರಯಿಸಬೇಕು. ಆದರೆ ಅವರನ್ನು ಆಶ್ರಯಿಸುವ ಅವಕಾಶ ದೊರಕದಿದ್ದಲ್ಲಿ, ಅವರನ್ನು ಆಶ್ರಯಿಸಿದವರನ್ನಾಗಲೀ, ಆಶ್ರಯಿಸಿದವರನ್ನು ಆಶ್ರಯಿಸಿದವರನ್ನಾಗಲೀ ಆಶ್ರಯಿಸಿ ಸಂಸಾರವನ್ನು ದಾಟಬೇಕು.

ದೋಣಿ ಇಲ್ಲದ ಗಂಗಾನದಿಯನ್ನು ದಾಟುವ ಸಂದರ್ಭದಲ್ಲಿ ನೇರವಾಗಿ ಆಚಾರ್ಯರನ್ನು ಆಶ್ರಯಿಸಲು ಉಳಿದೆಲ್ಲ ಶಿಷ್ಯರಿಗೆ ಅವಕಾಶ ದೊರಕಿದ್ದಿಲ್ಲ. ಆದರೆ ಯಾರೋ ಒಬ್ಬ ಅವರನ್ನು ಆಶ್ರಯಿಸಿದ್ದರೆ, ಅವನನ್ನು ಮತ್ತೊಬ್ಬ, ಅವನನ್ನು ಇನ್ನೊಬ್ಬ, ಆತನನ್ನು ಮತ್ತೊಬ್ಬ –ಹೀಗೆಯೇ ಆಚಾರ್ಯರನ್ನು ಆಶ್ರಯಿಸಿದವರನ್ನು ಆಶ್ರಯಿಸುವುದರ ಮೂಲಕ ಎಲ್ಲರೂ ಸುರಕ್ಷಿತವಾಗಿ ಗಂಗಾನದಿಯನ್ನು ದಾಟಿದರು ತಾನೆ?

ಮಧ್ವಾಖ್ಯಂ ಮಂತ್ರಸಿದ್ಧಮ್:

ಶ್ರೀ ಮಧ್ವಾಚಾರ್ಯರು ದೋಣಿಯಿಲ್ಲದೆಯೇ ಗಂಗಾನದಿಯನ್ನು ದಾಟಿ ತುರುಕರಾಜನನ್ನು ಆಶ್ಚರ್ಯಚಕಿತನನ್ನಾಗಿಸಿದ ಘಟನೆಯನ್ನು ಪವಮಾನ(೯-೭-೩)ದ ಒಂದು ಮಂತ್ರ ಉಲ್ಲೇಖಿಸಿದೆ ಎಂದು ಶ್ರೀ ವಾದಿರಾಜರು ತಮ್ಮ ಯುಕ್ತಿಮಲ್ಲಿಕಾದಲ್ಲಿ ವ್ಯಾಖ್ಯಾನಿಸಿರುವರು– 'ಪ್ರಧಾರಾ ಮಧ್ವೋ ಅಗ್ರಿಯೋ ಮಹೀರಪೋ ವಿಗಾಹತೇ । ಹವಿರ್ಹವಿಷ್ಷು ವಂದ್ಯಃ' ಅಗ್ರಿಯಃ –ಸರ್ವಜೀವೋತ್ತಮರಾದ ಮಧ್ವಃ –ಆಚಾರ್ಯರು, ಪ್ರಧಾರಾಃ –ಚೆನ್ನಾಗಿ ಹರಿಯುತ್ತಿರುವ, ಮಹೀಃ –ಪೂಜ್ಯಗಳಾದ, ಅಪಃ –ಗಂಗಾಜಲಗಳನ್ನು, ಹವಿಷ್ಷು –ತುರುಕರಾಜನ ಭಟರಿಂದ ಕರೆಯಲ್ಪಡುತ್ತಿರುವ ಶಿಷ್ಯರಲ್ಲಿ ಹವಿಃ –ತುರುಕರಾಜನ ಭಟರಿಂದ ಕರೆಯಲ್ಪಡುತ್ತಿರುವ, ವಂದ್ಯಃ –ಶಿಷ್ಯರಿಂದ ಸ್ತುತ್ಯರಾದವರಾಗಿ ವಿಗಾಹತೇ –ಪ್ರವೇಶಿಸುವರು.

'ಮಧ್ವಾಖ್ಯಂ ಮಂತ್ರಸಿದ್ಧಂ' –ಎಂಬುದಾಗಿ ವಾಯುಸ್ತುತಿಯಲ್ಲಿ ಮಧ್ವರೂಪ ಮಂತ್ರಪ್ರತಿಪಾದ್ಯವೆಂದು ತ್ರಿವಿಕ್ರಮಪಂಡಿತರು ಸ್ತುತಿಸಿರುವುದರಿಂದ ಮಧ್ವಾವತಾರ ಪವಮಾನ ಪ್ರತಿಪಾದ್ಯ ಎಂಬುದೇನೂ ಅಸಂಗತವೆನಿಸದು.

●

ವಿದ್ಯಾಭಂಡಾರ

ನಿಧಿ – ೩

ಸಿದ್ಧಾಂತ



"ಮಧ್ವಸಿದ್ಧಾಂತದ ಜಗತ್ಸತ್ಯತ್ವ, ಪಂಚಭೇದ, ತಾರತಮ್ಯ, ಜೀವತ್ರೈವಿಧ್ಯ
–ಮುಂತಾದ ಪ್ರಮುಖ ಪ್ರಮೇಯಗಳೆಲ್ಲ ಪ್ರತ್ಯಕ್ಷ ಪ್ರಮಾಣಕ್ಕೆ
ಗೋಚರಿಸುವವು. ಪ್ರತ್ಯಕ್ಷವು ಪ್ರಮಾಣಗಳಲ್ಲೆಲ್ಲ ಪ್ರಮುಖವಾದುದು.
ಪರೀಕ್ಷಿತ ಪ್ರತ್ಯಕ್ಷಕ್ಕಂತೂ ಯಾವುದರಿಂದಲೂ ಬಾಧವಿಲ್ಲ.
'ಸುಪೂರ್ಣಪ್ರಜ್ಞ'ರಾದ ಶ್ರೀ ಮಧ್ವರು ಪರಮಾತ್ಮನನ್ನೂ ಜಗತ್ತಿನ
ತತ್ವಗಳನ್ನೂ ಪರೀಕ್ಷಿತ ಪ್ರತ್ಯಕ್ಷದಿಂದ ಪರಿಶೀಲಿಸಿ ಬೋಧಿಸಿರುವರು."

೩. ೧. ದ್ವೈತಜ್ಞಾನವೇ ತತ್ವಜ್ಞಾನ

ದ್ವೈತಜ್ಞಾನವು ತತ್ವಜ್ಞಾನವೇ? ಅಥವಾ ಅದ್ವೈತಜ್ಞಾನವು ತತ್ವಜ್ಞಾನವೇ? ಅಥವಾ ವಿಶಿಷ್ಟಾದ್ವೈತಜ್ಞಾನವು ತತ್ವಜ್ಞಾನವೇ?

ಅದ್ವೈತಜ್ಞಾನವು ತತ್ವಜ್ಞಾನವಲ್ಲ

ಅದ್ವೈತಜ್ಞಾನವು ತತ್ವಜ್ಞಾನವಲ್ಲ. ಹಾಗೆಂದು ಅದ್ವೈತಿಗಳೇ ಒಪ್ಪುತ್ತಾರೆ. ಅದ್ವೈತಜ್ಞಾನವೇ ತತ್ವಜ್ಞಾನವೆಂದು ಯಾರಾದರೂ ಅದ್ವೈತಿಗಳು ಹೇಳಿದರೆ ಅವರಿಗೆ ಅದ್ವೈತಮತದ ಪ್ರಕ್ರಿಯೆಯ ಪರಿಜ್ಞಾನವಿಲ್ಲ ಎಂದು ತಿಳಿಯಬೇಕು.

ಅದ್ವೈತಮತದಲ್ಲಿ ಆತ್ಮನು ಅಜ್ಞೇಯ- ಜ್ಞಾನಕ್ಕೆ ವಿಷಯನಲ್ಲ. ಅದ್ವೈತವು ಅಂತಹ ಅಜ್ಞೇಯನಾದ ಆತ್ಮನ ಸ್ವರೂಪವು. ಅಂದಮೇಲೆ ಅಜ್ಞೇಯ ಆತ್ಮದ ಸ್ವರೂಪವಾದ ಅದ್ವೈತವೂ ಅಜ್ಞೇಯವೇ, ಅದ್ವೈತವು ಅಜ್ಞೇಯವಾದುದರಿಂದ ಅದ್ವೈತಜ್ಞಾನವೇ ಬರುವಂತಿಲ್ಲ. ಮನುಷ್ಯರಿಗೆ ಕೋಡುಗಳಿವೆಯೆಂಬುದು ಎಷ್ಟು ಅಸತ್ಯವೋ ಅದೇ ರೀತಿಯಾಗಿ ಅದ್ವೈತಜ್ಞಾನವೂ ಅಸತ್ಯವಾದುದು. ಹೀಗಿದ್ದಮೇಲೆ ಅದ್ವೈತಜ್ಞಾನವೇ ತತ್ವಜ್ಞಾನವಾಗುವುದು ಹೇಗೆ?

ಶಾಸ್ತ್ರಾಧ್ಯಯನಾದಿಗಳು ದ್ವೈತದ ಜ್ಞಾನನಿವೃತ್ತಿಗೋಸ್ಕರ ಅವಶ್ಯವೇ ಹೊರತು, ಅದ್ವೈತಜ್ಞಾನಕ್ಕೋಸ್ಕರವಾಗಿ ಅಲ್ಲ ಎಂದು ಅದ್ವೈತಸಿದ್ಧಾಂತ. ಶಾಸ್ತ್ರಾಧ್ಯಯನ ದಿಂದುಂಟಾದ ದ್ವೈತಜ್ಞಾನದ ನಿವೃತ್ತಿಯು ಜ್ಞಾನಾಭಾವರೂಪವಾದುದು. ಅಂದ ಮೇಲೆ ಅದು ತತ್ವಜ್ಞಾನರೂಪವಾಗುವುದು ಹೇಗೆ?

ವಿಶಿಷ್ಟಾದ್ವೈತಜ್ಞಾನವೂ ತತ್ವಜ್ಞಾನವಲ್ಲ

ತತ್ವದರ್ಶನ ಪಡೆದವರು ತತ್ವಜ್ಞಾನಿಗಳು. ತತ್ವಜ್ಞಾನಿಗಳು ಹೇಳಿದುದು ತತ್ವಜ್ಞಾನ. ವಿಶಿಷ್ಟಾದ್ವೈತಸಿದ್ಧಾಂತದಲ್ಲಿ ಈಶ್ವರನು ಅವ್ಯಕ್ತ ಸ್ವರೂಪ. ಯಾರಿಗೂ ಅವನ ದರ್ಶನವಾಗಲಾರದು. ಅರ್ಥಾತ್ ರಾಮಾನುಜಾಚಾರ್ಯರಿಗೂ ಬ್ರಹ್ಮ ದರ್ಶನವಿಲ್ಲ ಎಂದು ರಾಮಾನುಜರೇ ಒಪ್ಪಿದಂತಾಯಿತು. ಜಗತ್ತಿನಲ್ಲಿ ಪರಬ್ರಹ್ಮನೇ ಪ್ರಧಾನ ತತ್ವ. ಈ ತತ್ವದ ದರ್ಶನವಿಲ್ಲದ ಮೇಲೆ ಬ್ರಹ್ಮದರ್ಶನವಿಲ್ಲದವರು ಬ್ರಹ್ಮನ ವಿಷಯದಲ್ಲಿ ಹೇಳಿದ ಮಾತು ಕುರುಡರು ವಸ್ತುವಿನ ರೂಪದ ಬಗ್ಗೆ ಹೇಳಿದ ಮಾತಿನಷ್ಟೇ ಬೆಲೆಯುಳ್ಳದ್ದಾಗುತ್ತದೆ. ಆದುದರಿಂದ ಬ್ರಹ್ಮದರ್ಶನವಿಲ್ಲದ ರಾಮಾನುಜರು ಹೇಳಿದ ವಿಶಿಷ್ಟಾದ್ವೈತಜ್ಞಾನವೂ ತತ್ವಜ್ಞಾನವಲ್ಲ.

ದ್ವೈತಜ್ಞಾನವೇ ತತ್ವಜ್ಞಾನ

ಯೋ ಮಾಮೇವಂ ಅಸಂಮೂಢೋ ಜಾನಾತಿ ಪುರುಷೋತ್ತಮಮ್ ।

ಸ ಸರ್ವವಿತ್ ಭಜತಿ ಮಾಂ ಸರ್ವಭಾವೇನ ಭಾರತ ॥

ಈ ಮೇಲಿನ ಗೀತಾಶ್ಲೋಕದಲ್ಲಿ "ಶ್ರೀಕೃಷ್ಣನು ಪುರುಷೋತ್ತಮನೆಂದು ತಿಳಿದವನು ಸರ್ವಶಾಸ್ತ್ರಾರ್ಥಜ್ಞಾನಿಯು" ಎಂದು ತಿಳಿಸಿರುವುದರಿಂದ ಸರ್ವಶಾಸ್ತ್ರಗಳಿಂದ ಉಂಟಾಗುವ ತತ್ವಜ್ಞಾನವೆಂದರೆ 'ಶ್ರೀಕೃಷ್ಣನಲ್ಲಿ ಪುರುಷೋತ್ತಮತ್ವಜ್ಞಾನವು' ಎಂದು ಸಿದ್ಧವಾಗುತ್ತದೆ. ಇದೇ ದ್ವೈತಜ್ಞಾನ. ಇದೇ ತತ್ವಜ್ಞಾನ.

ಕಂಡು ಹೇಳಿದ್ದು

ಶ್ರೀ ಮಧ್ವಾಚಾರ್ಯರು ರಾಮಾನುಜಾಚಾರ್ಯರಂತೆ ಬ್ರಹ್ಮದರ್ಶನವಿಲ್ಲದವರಲ್ಲ. ಹಾಗೆ ಹೇಳಿದವರೂ ಅಲ್ಲ. 'ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ' ಎಂಬ ಪ್ರಮಾಣಾನುಸಾರವಾಗಿ ಬ್ರಹ್ಮದರ್ಶನವನ್ನು ಒಪ್ಪಿ, ಮುಖ್ಯಪ್ರಾಣಸ್ವರೂಪಿಯಾದ ತಮಗೆ ಎಲ್ಲರಿಗಿಂತಲೂ ವಿಶೇಷವಾದ ಬ್ರಹ್ಮದರ್ಶನವಾಗಿದೆಯೆಂದೂ ತಾವು ಪ್ರತ್ಯಕ್ಷವಾಗಿ ನೋಡಿ ಬ್ರಹ್ಮನ ವಿಷಯವನ್ನು ಹೇಳುತ್ತೇವೆಯೆಂದೂ ಹೇಳಿರುತ್ತಾರೆ. ಆದುದರಿಂದ ಶ್ರೀ ಮಧ್ವಶಾಸ್ತ್ರದಲ್ಲಿ ವಿಶ್ವಾಸಕ್ಕೆ ಉತ್ತಮ ಅವಕಾಶವಿದ್ದಂತೆ ಶ್ರೀ ರಾಮಾನುಜಮತದಲ್ಲಿ ಇಲ್ಲ. ಬ್ರಹ್ಮನನ್ನು ಕಂಡ ಶ್ರೀಮಧ್ವರು ಹೇಳಿದ ದ್ವೈತದ ಜ್ಞಾನ ತತ್ವಜ್ಞಾನವಾಗಲು ಯಾವ ತೊಂದರೆಯೂ ಇಲ್ಲ. ಆದುದರಿಂದ ದ್ವೈತ ಜ್ಞಾನವೇ ತತ್ವಜ್ಞಾನವು.

●

೩. ೨. ಮಾಧ್ವಸಿದ್ಧಾಂತದ ವೈಶಿಷ್ಟ್ಯಗಳು

ಶ್ರೀಮದಾಚಾರ್ಯರ ಸಿದ್ಧಾಂತದ ಪ್ರಮೇಯಗಳನ್ನೂ ಇತರ ಮತೀಯರ ಪ್ರಮೇಯಗಳನ್ನೂ ತುಲನಾತ್ಮಕವಾಗಿ ಪರಿಶೀಲಿಸಿದಾಗ ಶ್ರೀಮದಾಚಾರ್ಯರ ಅವತಾರದ ಆವಶ್ಯಕತೆ ಹಾಗೂ ಅವರು ಸ್ಥಾಪಿಸಿದ ಸಿದ್ಧಾಂತದ ವೈಶಿಷ್ಟ್ಯ ಸ್ಪಷ್ಟವಾಗುವುದು.

ಗುರಿಯಲ್ಲಿಯೇ ವೈಶಿಷ್ಟ್ಯ: ಬ್ರಹ್ಮನಿಂದ ಐಕ್ಯ ಹೊಂದುವುದೇ ಜೀವಾತ್ಮರು ಸಾಧಿಸಬೇಕಾದ ಗುರಿ ಎಂದು ಸಾರುವ ಅದ್ವೈತವಾದಿಗಳಾದ ಶಂಕರಾಚಾರ್ಯರ ಪ್ರಕಾರ ದೋಷಗಳಿಗೆಲ್ಲ ಕೇಂದ್ರಬಿಂದುವಿನಂತಿರುವ ಅಜ್ಞಾನಕ್ಕೆ ಬ್ರಹ್ಮನೇ ಆಶ್ರಯ. ನಿರ್ಗುಣನೆನಿಸುವ ಆತನಲ್ಲಿ ಆನಂದಾದಿ ಕಲ್ಯಾಣಗುಣಗಳು ಯಾವುದೂ ಇಲ್ಲ. 'ವಸ್ತು' ಎಂದೆನಿಸಲು ಅಗತ್ಯವಾಗಿ ಬೇಕೆನಿಸುವ ದೇಶ ಕಾಲಗಳ ಸಂಬಂಧಗಳೂ ಆತನಲ್ಲಿಲ್ಲ. ಪೆಚ್ಚೇಕೆ, 'ಬ್ರಹ್ಮ' ಎಂದು ಕರೆಸಿಕೊಳ್ಳುವ ಯೋಗ್ಯತೆಯೂ ಆತನಲ್ಲಿಲ್ಲ. 'ಯತೋ ವಾಚೋ ನಿವರ್ತಂತೇ' ಎಂಬ ಶ್ರುತಿ ಆತನಲ್ಲಿ ಬ್ರಹ್ಮ ಶಬ್ದದಿಂದ

ಕರೆಸಿಕೊಳ್ಳುವಿಕೆಯನ್ನೂ ನಿಷೇಧಿಸುತ್ತಿದೆ. ಹೀಗೆ 'ಶೂನ್ಯ' ಸ್ವಭಾವದ ಈ 'ಬ್ರಹ್ಮ'ನ ತಾದಾತ್ಮ್ಯವನ್ನು ವಿವೇಕಿಯಾದ ಯಾರು ತಾನೇ ಅಪೇಕ್ಷಿಸಿಯಾರು?

ಅನಂತಕಲ್ಯಾಣಗುಣಪರಿಪೂರ್ಣನಾದವನು ಶ್ರೀಹರಿ. ಅವನ ಅನುಗ್ರಹಕ್ಕೆ ಪಾತ್ರರಾಗುವುದರ ಮೂಲಕ ಸುಖರೂಪವಾದ ಮುಕ್ತಿಯನ್ನು ಗಳಿಸಿಕೊಳ್ಳುವಿಕೆಯೇ ಜೀವನದ ಉದ್ದೇಶ ಎಂದು ಸಾರಿರುವರು ಶ್ರೀಮದಾಚಾರ್ಯರು.

ಸಂಸಾರದಲ್ಲಿ ಮುಳುಗಿದ ಮನಸ್ಸನ್ನು ಒಮ್ಮಿಂದೊಮ್ಮೆಲೇ ಶ್ರೀಹರಿಯಲ್ಲಿ ಹರಿಸಲು ಸಾಧ್ಯವಾಗಲಾರದು. ಹಾಗಂತ ನಿರಾಶರಾಗಬೇಕಿಲ್ಲ. ಆತನ ಪಾದಾರವಿಂದಸ್ಮರಣೆಗಾಗಿ ಯತ್ನಿಸಿದರೂ ಸಾಕು. ಯತ್ನಿಸಬೇಕೆಂದು ಬಯಸಿದರೂ ಸಾಕು. ಇಷ್ಟುಮಾತ್ರಕ್ಕೂ ಫಲವಿದೆ. (ಆರಂಭಮಾತ್ರಮಿಚ್ಛಾ ವಾ ವಿಷ್ಣುಧರ್ಮೇಷು ನ ನಿಷ್ಫಲಾ)

ಹೀಗೆ ಭಗವದನುಗ್ರಹವನ್ನು ಸಂಪಾದಿಸಿಕೊಂಡು ಸುಖಾವಿರ್ಭಾವರೂಪವಾದ ಮುಕ್ತಿಯನ್ನು ಪಡೆಯುವುದೇ ಜೀವನಗುರಿ ಎಂದು ಶ್ರೀಮದಾಚಾರ್ಯರು ಪ್ರತಿಪಾದಿಸಿದ ಉದ್ದೇಶ ಸಕಲರಿಂದ ಅಪೇಕ್ಷಣೀಯವೂ ಪ್ರಾಯೋಗಿಕವೂ ಆಗಿರುತ್ತದೆ.

ಸಾಧನಾನುಷ್ಠಾನದಲ್ಲಿಯ ವೈಶಿಷ್ಟ್ಯ ಫಲ ಹೆಚ್ಚು ಪ್ರಮಾಣದಲ್ಲಿ ದೊರಕಬೇಕೆಂದು ಬಯಸಿ, ಅವರ ಸಾಧನೆಯಲ್ಲಿ ಹೆಚ್ಚೆಚ್ಚಾಗಿ ಯತ್ನಿಸುವ ಪ್ರವೃತ್ತಿ ಕಂಡಿದೆ. ಅದ್ವೈತ ಮತದಲ್ಲಿ ಇಂತಹ ಪ್ರವೃತ್ತಿಗೆ ಅವಕಾಶ ದೊರಕಲಾರದು.

'ಬಿಂಬೈಕ್ಯ'ವನ್ನು ಹೊಂದುವುದೇ ಫಲ ಎನ್ನುವ ಆ ಮತದಲ್ಲಿ ಹೆಚ್ಚಾಗಿ ಸಾಧನಾನುಷ್ಠಾನ ನಡೆಸಿದ ಜ್ಞಾನಿಗಳಿಗೂ ಅಲ್ಪ ಸ್ವಲ್ಪ ಸಾಧನಾನುಷ್ಠಾವನ್ನು ಆಚರಿಸಿದವನಿಗೂ ದೊರಕುವ ಬಿಂಬೈಕ್ಯರೂಪವಾದ ಮುಕ್ತಿಯಲ್ಲಿ ಯಾವುದೇ ರೀತಿಯಾದ ವ್ಯತ್ಯಾಸವಿರಲಾರದು. ಹೀಗಾಗಿ ಹೆಚ್ಚೆಚ್ಚು ಸಾಧನಾನುಷ್ಠಾನದಲ್ಲಿ ತೊಡಗಲು ಉತ್ಸಾಹವೇ ಉಂಟಾಗಲಾರದು. ಐಹಿಕ ಸುಖವನ್ನೆಲ್ಲ ತ್ಯಜಿಸಿ, ಸಾಧನಾನುಷ್ಠಾನಕ್ಕಾಗಿ ಬದುಕನ್ನು ತೇದಿದವನಿಗೂ ಐಹಿಕ ಸುಖದಲ್ಲೇ ಮುಳುಗಿದವನಿಗೂ ಒಂದೇ ರೀತಿಯ ಫಲವಾದರೆ ಐಹಿಕ ಸುಖ ಸಾಧನಗಳ ತ್ಯಾಗವನ್ನಾದರೂ ಯಾಕೆ ಮಾಡಿಯಾರು? ಓದಿದವನಿಗೂ ಓದದವನಿಗೂ ಒಂದೇ ರೀತಿಯ ಪ್ರತಿಫಲ ಲಭಿಸುವುದೆಂದಾದರೆ ಯಾರು ತಾನೇ ಓದಲು ಪ್ರವೃತ್ತಿಸುವರು?

ಶ್ರೀಮದಾಚಾರ್ಯರ ಸಿದ್ಧಾಂತದ ಪ್ರಕಾರ ಸಾಧಕನ ಸಾಧನಾನುಷ್ಠಾನಕ್ಕೆ ಅನುಗುಣವಾಗಿಯೆ ಆತನಿಗೆ ದೊರಕುವ ಮುಕ್ತಿ ಹಾಗೂ ಮುಕ್ತಿಯಲ್ಲಿರುವ ಸುಖದ ಮಟ್ಟ ಇರುವುದು. (ಸಾಧನಸ್ಯೋತ್ತಮತ್ವೇನ ಸಾಧ್ಯಂ ಚೋತ್ತಮ ಮಾಪ್ನುಯು ॥ ಬ್ರಹ್ಮಾದಯಃ ಕ್ರಮೇಣೈವ.... ।) ಶ್ರೀಮದಾಚಾರ್ಯರು ಪ್ರತಿಪಾದಿಸಿದ ಈ ಪ್ರಮೇಯ ಸಾಧಕನಿಗೆ ಹೆಚ್ಚೆಚ್ಚಾಗಿ ಸಾಧನಾನುಷ್ಠಾನದಲ್ಲಿ ತೊಡಗಲು

ಪ್ರೋತ್ಸಾಹವೆನಿಸಿದೆ. ಮುಕ್ತಿಯಲ್ಲಿ ಆದಷ್ಟು ಹೆಚ್ಚು ಪ್ರಮಾಣದ ಸುಖಗಳಿಸುವುದಕ್ಕಾಗಿ ಆದಷ್ಟು ಹೆಚ್ಚಾಗಿ ಸಾಧನಾನುಷ್ಠಾನದಲ್ಲಿ ತೊಡಗೋಣ ಎಂಬುದಾಗಿ.

ಭಗವಂತನ ಪರಮಸಾಮ್ಯವೆಂದರೆ –ಶ್ರೀಮದಾಚಾರ್ಯರು ಸಾಧಿಸಿದ ಪ್ರಮೇಯಗಳಲ್ಲಿ ವಿಷ್ಣುಸರ್ವೋತ್ತಮತ್ವ. ಜಗತ್ಸತ್ಯತ್ವ, ಜೀವೇಶಭೇದ ಇತ್ಯಾದಿಗಳನ್ನು ರಾಮಾನುಜಾಚಾರ್ಯರು ಆಗಾಗಲೇ ಪ್ರತಿಪಾದಿಸಿದ್ದರಾದರೂ ಶ್ರೀಮದಾಚಾರ್ಯರ ಸಾಧನೆಗಳನ್ನು ಅಲ್ಲಗಳೆಯುವಂತಿಲ್ಲ. ರಾಮಾನುಜಾಚಾರ್ಯರ ಮತದ ತತ್ತ್ವ ಮತ್ತು ಪ್ರಕ್ರಿಯೆಗಳಿಗೂ ಶ್ರೀಮದಾಚಾರ್ಯರ ತತ್ತ್ವಪ್ರಕ್ರಿಯೆಗಳಿಗೂ ಎಷ್ಟೆಷ್ಟೋ ವ್ಯತ್ಯಾಸ ವಿದೆ.

ರಾಮಾನುಜಾಚಾರ್ಯರ ಪ್ರಕಾರ ಜೀವಾತ್ಮರು ಪರಮಾತ್ಮನಿಗಿಂತ ಅತ್ಯಂತ ಭಿನ್ನರಾದರೂ ಮುಕ್ತಿಯ ಸ್ಥಿತಿಯಲ್ಲಿ ಪರಮಾತ್ಮನ ಸಂಪೂರ್ಣ ಸಾಮ್ಯವನ್ನು ಹೊಂದುವರು. ಹೀಗೆ ಮುಕ್ತರು ಪರಮಾತ್ಮನಿಗೆ ಅತ್ಯಂತ ಸದೃಶರಾಗುವರೆಂದರೆ, ಅಂತಹ ಮುಕ್ತರ ಬಗ್ಗೆ ಪರಮಾತ್ಮನ ಸ್ವಾಮ್ಯವನ್ನು ನಿರಾಕರಿಸಿದಂತೆ, ಆದ್ದರಿಂದ ಅವರ ಪ್ರಕಾರ ಶ್ರೀವಿಷ್ಣು 'ಸರ್ವಸ್ವಾಮಿ' ಹೇಗೆ ಆದಾನು?

ಅಲ್ಲದೆ, ಎಲ್ಲ ಸಾಧಕರಿಗೂ ಪರಮಾತ್ಮನ ಅತ್ಯಂತ ಸಾಮ್ಯರೂಪವಾದ ಮುಕ್ತಿ ದೊರಕುವುದೆಂದರೆ, ಫಲದಲ್ಲಿ ವೈಷಮ್ಯವಿಲ್ಲವೆಂದಂತಾಯಿತು. ಆದ್ದರಿಂದ ಸಾಧಕನಿಗೆ ಹೆಚ್ಚೆಚ್ಚು ಸಾಧನಾನುಷ್ಠಾನದಲ್ಲಿ ತೊಡಗಲು ಉತ್ಸಾಹ ಉಂಟಾಗಲಾರದು.

'ಯದಾ ಪಶ್ಯಃ ಪಶ್ಯತೇ.....' ಇತ್ಯಾದಿ ಶ್ರುತಿ ಪರಮಾತ್ಮನ ಸಾಕ್ಷಾತ್ಕಾರ ಪಡಕೊಂಡವನು– 'ಪರಮಂ ಸಾಮ್ಯಮುಪೈತಿ' ಎಂಬುದಾಗಿ ಪರಮಸಾಮ್ಯವನ್ನು ಹೊಂದುತ್ತಾನೆಂದು ಹೇಳಿರುವುದೇನೋ ನಿಜ. ಆದರೆ ಒಂದುವೇಳೆ ಅದಕ್ಕೆ ರಾಮಾನುಜಾಚಾರ್ಯರು ವ್ಯಾಖ್ಯಾನಿಸಿರುವಂತೆ ಭಗವಂತನ ಸಂಪೂರ್ಣ ಸಾಮ್ಯವನ್ನು ಹೊಂದುವವನು ಎಂಬ ಅಭಿಪ್ರಾಯವಿದ್ದಲ್ಲಿ 'ಸಂಪೂರ್ಣಂ ಸಾಮ್ಯಮುಪೈತಿ' ಎಂದೇ ಸ್ಪಷ್ಟವಾಗಿ ಶ್ರುತಿ ಸಾರುತ್ತಿತ್ತು.

ಮುಕ್ತನಿಗೆ ದುಃಖಾಭಾವ, ಜನನ ಮರಣಾಭಾವ, ಪ್ರಾಕೃತಿಕ ದೇಹರಾಹಿತ್ಯ –ಇತ್ಯಾದಿ ಧರ್ಮಗಳಲ್ಲಷ್ಟೇ ಭಗವಂತನಿಂದ ಸಾಮ್ಯ ಹೊರತು ಸರ್ವಾತ್ಮನಾ ಸಾಮ್ಯವಿಲ್ಲ. ಅಸ್ತಿತ್ವ ಸತ್ಯತ್ವಾದಿ ವಿಷಯಗಳಲ್ಲಿ ಸಂಸಾರಾವಸ್ಥೆಯಲ್ಲೂ ಸಾಮ್ಯವಿರು ವುದರಿಂದ, ಮುಕ್ತಾವಸ್ಥೆಯಲ್ಲಿ ಸಂಸಾರಿಗಿಂತ ಹೆಚ್ಚಿನ ಸಾಮ್ಯ ದೊರಕುವುದೆಂಬ ದೃಷ್ಟಿಯಿಂದಷ್ಟೇ –'ಪರಮಂ ಸಾಮ್ಯಮುಪೈತಿ' ಎಂದಿದೆ ಶ್ರುತಿ. ಹೊರತು ಸಂಪೂರ್ಣಸಾಮ್ಯ ದೊರಕುವುದೆಂಬ ಅಭಿಪ್ರಾಯದಲ್ಲಿ ಅಲ್ಲ.

ಅಪರೋಕ್ಷಜ್ಞಾನಿಗಳಲ್ಲ: ಸತ್ಯವನ್ನು ಕಣ್ಣಾರೆ ಕಂಡು ತಿಳಿಸಿದವನ ಮಾತು ಹೆಚ್ಚು ವಿಶ್ವಸನೀಯವೆನಿಸಿರುವುದು ಸ್ವಾಭಾವಿಕ. ಒಂದು ಗ್ರಾಮಕ್ಕೆ ಹೋಗುವ ದಾರಿಯ ಬಗ್ಗೆ ಇಬ್ಬರಲ್ಲಿ ವಿಚಾರಿಸಿದಾಗ ಅವರು ಪರಸ್ಪರ ವಿರುದ್ಧವಾಗಿ ಮಾರ್ಗ ದರ್ಶನ ಮಾಡಿದರೆಂದರೆ, ಅವರಲ್ಲಿ ಯಾರು ಆ ಮಾರ್ಗದಿಂದ ಹೋಗಿ ಗ್ರಾಮವನ್ನು ನೋಡಿ

ಬಂದಿರುವನೋ ಅಂತಹವನ ಮಾತಿನಲ್ಲೇ ಹೆಚ್ಚು ವಿಶ್ವಾಸ ಮೂಡುತ್ತದೆಯೋ ಹೊರತು –ಸ್ವತಃ ತಾನು ಆ ಮಾರ್ಗವಾಗಿ ಹೋಗಿ ಕಂಡರಿಯದೇ ಬರೇ ಊಹನೆಯಿಂದಷ್ಟೇ ತಿಳಿಸುವವನ ಮಾತು ನಂಬಲರ್ಹವೆನಿಸಲಾರದು.

ಶಂಕರ ರಾಮಾನುಜರೀರ್ವರೂ ಬ್ರಹ್ಮರೂಪಸತ್ಯವನ್ನು ಅಪರೋಕ್ಷೀಕರಿಸಿ ಕೊಂಡವರಲ್ಲ ಎಂಬುದಾಗಿ ಅವರೇ ಒಪ್ಪಿಕೊಂಡಿರುವರು. ಶಂಕರಾಚಾರ್ಯರ ಪ್ರಕಾರ ಬ್ರಹ್ಮಸಾಕ್ಷಾತ್ಕರಿಸಿಕೊಂಡವನಿಗೆ ಜಗತ್ತೇ ಕಾಣದ ಪ್ರಯುಕ್ತ ಉಪದೇಶವೇ ಕೊಡು ವುದಿಲ್ಲ. ಆದ್ದರಿಂದ ಉಪದೇಶಿಸುತ್ತಿರುವವರೆಲ್ಲ ಬ್ರಹ್ಮಸಾಕ್ಷಾತ್ಕಾರ ಪಡೆಯದವ ರೆಂಬುದು ಅರ್ಥಾತ್ ಸಿದ್ಧ. ಅಂದ ಮೇಲೆ ಶಿಷ್ಯರಿಗೆ ಉಪದೇಶಿಸುತ್ತಿದ್ದ ಶಂಕರಾ ಚಾರ್ಯರೂ ಬ್ರಹ್ಮಸಾಕ್ಷಾತ್ಕಾರ ಪಡೆಯದವರೆಂಬುದು ಸಿದ್ಧ.

ಯಾರಿಗೂ ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲಾಗುವುದೇ ಇಲ್ಲ ಎಂದು ಸಾಧಿ ಸುವ ರಾಮಾನುಜಾಚಾರ್ಯರು ತಮಗೂ ಸಾಕ್ಷಾತ್ಕಾರವಾಗಿಲ್ಲ ಎಂಬುದನ್ನು ಪರೋಕ್ಷವಾಗಿ ಒಪ್ಪಿಕೊಂಡಂತೆಯೇ.

ಆದರೆ ಶ್ರೀಮದಾಚಾರ್ಯರು ಮಾತ್ರ ಸದಾಕಾಲ ಜಗದಾಧಾರನಾದ ಶ್ರೀಹರಿ ಯನ್ನು ಪ್ರತ್ಯಕ್ಷವಾಗಿ ಕಾಣುತ್ತಲೇ ಇರುವುದಾಗಿ ಹೇಳಿಕೊಂಡಿರುತ್ತಾರೆ.

ಹೀಗೆ ಪ್ರತ್ಯಕ್ಷವಾಗಿ ಕಂಡ ಭಗವಂತನ ಬಗ್ಗೆ ಹೇಳುವ ಅವರ ಮಾತುಗಳು ವಿಶ್ವಾಸಾರ್ಹಗಳೆನಿಸಿವೆ.

ಯಥಾರ್ಥಜ್ಞಾನಗಳ ವಿವೇಚನೆ ಆ ಯಥಾರ್ಥ ಜ್ಞಾನವನ್ನು ಒಪ್ಪಿದರೆ ವೇದದಿಂದುಂಟಾಗುವ ಯಥಾರ್ಥಜ್ಞಾನದಲ್ಲೂ, ಅಯಥಾರ್ಥ್ಯ (ಅಪ್ರಾ ಮಾಣ್ಯ) ಸಂದೇಹ ಬರಬಹುದಾದುದರಿಂದ, ಜ್ಞಾನಗಳೆಲ್ಲ ಯಥಾರ್ಥಗಳೇ ಎಂದು ರಾಮಾನುಜರು ಸಾರಿದರೆ, ಶಂಕರಾಚಾರ್ಯರ ಪ್ರಕಾರ ಜ್ಞಾನಗಳೆಲ್ಲ ಅಯಥಾರ್ಥ ಗಳೇ. ಯಾಕೆಂದರೆ ಬ್ರಹ್ಮ ಮಾತ್ರ ಸತ್ಯವೆನ್ನುವ ಅವರ ಪ್ರಕಾರ, ಬ್ರಹ್ಮನಿಗಿಂತ ಭಿನ್ನವಾದುದೆಲ್ಲ 'ಮಿಥ್ಯಾ'ಗಳಾಗಿರುವುದರಿಂದ ಅವನ್ನು ವಿಷಯೀಕರಿಸುವ ಜ್ಞಾನಗಳು ಅಯಥಾರ್ಥಗಳು. ಇನ್ನು 'ಬ್ರಹ್ಮ' ಅಜ್ಞೇಯ(ಜ್ಞಾನಕ್ಕೆ ಅವಿಷಯ)ನಾದ ಬ್ರಹ್ಮ ವಿಷಯಕ ಜ್ಞಾನವೇ ಬರಲಾರದು. ಹೀಗೆ ಯಥಾರ್ಥಜ್ಞಾನಕ್ಕೆ ಅವಕಾಶವೇ ಇಲ್ಲದ ಪ್ರಯುಕ್ತ ಜ್ಞಾನಗಳೆಲ್ಲ ಅಯಥಾರ್ಥಗಳೆಂದಾದವು.

ಆದ್ದರಿಂದ ಈ ಇಬ್ಬರ ಆಚಾರ್ಯರ ದೃಷ್ಟಿಯಲ್ಲೂ ಯಥಾರ್ಥಜ್ಞಾನ ವಿಭಾಗವಿಲ್ಲದ ಪ್ರಯುಕ್ತ 'ಈ ಜ್ಞಾನವನ್ನು ಪಡಕೊಳ್ಳಿ. ಈ ಜ್ಞಾನವನ್ನು ಬಿಡಿ' ಎಂದು ಸಂದೇಶಿಸುವ ಸ್ಥಿತಿಯಲ್ಲಿ ಅವರಿಲ್ಲ. ಇಂತಹವರ ಮಾತು ಎಷ್ಟರ ಮಟ್ಟಿಗೆ ವಿಶ್ವಸನೀಯವೆನಿಸೀತು? 'ಇದು ಪಥ್ಯ; ಇದು ಅಪಥ್ಯ' ಎಂದು ರೋಗಿಗೆ ವಿವೇಚಿಸಿ ಹೇಳಲಶಕ್ಯನಾಗಿದ್ದು 'ಅದೂ ಗ್ರಾಹ್ಯ ಇದೂ ಗ್ರಾಹ್ಯ' ಎಂದು ಆದೇಶಿಸುವ ವೈದ್ಯನ ಮಾತಲ್ಲಿ ಯಾವ ರೋಗಿಗೆ ತಾನೇ ವಿಶ್ವಾಸಮೂಡೀತು?

ಯಥಾರ್ಥಾಯಥಾರ್ಥಜ್ಞಾನಗಳನ್ನು ಲಕ್ಷಣಪೂರ್ವಕವಾಗಿ ವಿಭಾಗಿಸಿ, ಯಥಾರ್ಥಜ್ಞಾನವನ್ನೇ ಗಳಿಸಿಕೊಳ್ಳಲು ಸಂದೇಶಿಸಿದ ಶ್ರೀಮದಾಚಾರ್ಯರ ಮಾತು ವಿಶ್ವಸನೀಯವೆನಿಸಿದೆ.

ಭಕ್ತಿಯಿಂದಲೇ ಮುಕ್ತಿ–ಭಕ್ತಿಯೊಂದೇ ಮುಕ್ತಿಗೆ ಸಾಧನವೆಂದು ಸಾಧಿಸಿ ತೋರಿಸಿದ ಕೀರ್ತಿ ಶ್ರೀಮದಾಚಾರ್ಯರಿಗೆ ಸಲ್ಲಬೇಕು. ರಾಮಾನುಜಾಚಾರ್ಯರು ಭಕ್ತಿಗೆ ಸ್ಥಾನಮಾನ ಕೊಟ್ಟಿರುವರಾದರೂ, ಶಿಶುಪಾಲನ ನಿದರ್ಶನದಿಂದ ದ್ವೇಷದಿಂದಲೂ ಮುಕ್ತಿಸಾಧ್ಯ ಎಂದಿರುವರು. ಆದರೆ ಶಿಶುಪಾಲಾದಿಗಳಲ್ಲಿ ಎರಡು ಜೀವರ ಸಮಾವೇಶವಿದೆ. ಒಬ್ಬ ದೈತ್ಯನಾದರೆ, ಮತ್ತೊಬ್ಬ ಸುಜೀವಿ. ಭಗವಂತನನ್ನು ದ್ವೇಷಿಸುವವನು ದೈತ್ಯ. ಅವನ ಜೊತೆಗಿದ್ದ ಮತ್ತೊಬ್ಬ ಸುಜೀವಿ ಅವನ ಒತ್ತಡಕ್ಕೊಳಗಾಗಿ ಭಗವಂತನನ್ನು ದ್ವೇಷಿಸುವಂತೆ ಕಂಡರೂ ಅದನ್ನು ಲೆಕ್ಕಿಸದೆ ಅವನ ಸ್ವಾಭಾವಿಕವಾದ ಭಕ್ತಿಗೆ ವಶನಾದ ಭಗವಂತ ಶಿಶುಪಾಲಾದಿಗಳಿಗೆ ಮುಕ್ತಿ ಕೊಟ್ಟ. ಹೆಂಗಸೊಬ್ಬಳು ಸಾಕಷ್ಟು ಪತಿವ್ರತೆಯಾಗಿದ್ದರೂ ಪಿಶಾಚಾಕ್ರಾಂತಳಾಗಿ ಪತಿಗೆ ಸಿಕ್ಕಾಪಟ್ಟೆ ಬೈದರೂ ಪತಿ ಅದನ್ನು ಹಚ್ಚಿಕೊಳ್ಳದೆ, ಪತ್ನಿಯಲ್ಲಿಯ ಪ್ರೇಮವನ್ನು ಸ್ವಲ್ಪವೂ ಕಡಿಮೆಮಾಡಿಕೊಳ್ಳದಂತೆ ಭಗವಂತನದ್ದೂ ಪ್ರವೃತ್ತಿ –ಎಂದೆಲ್ಲ ಸಮರ್ಥಿಸಿ ತೋರಿಸಿದ ಶ್ರೀಮದಾಚಾರ್ಯರು ಭಕ್ತಿಯೊಂದೇ ಮುಕ್ತಿಗೆ ಸಾಧನವೆಂಬುದನ್ನು ಚೆನ್ನಾಗಿ ಪ್ರತಿಪಾದಿಸಿರುವರು.

ಏಕಾದಶೀವ್ರತ ಮತ್ತು ಗಂಗಾಸ್ನಾನಗಳ ಮಹಿಮೆಯ ಸ್ಥಾಪನೆ, ಜೀವಾತ್ಮರು ಎಸಗಿದ ಪಾಪಗಳ ಪರಿಮಾರ್ಜನಕ್ಕಾಗಿ ಹಾಗೂ ಪುಣ್ಯಸಂಪಾದನೆಗಾಗಿ ಇರುವ ಸಾಧನೆಗಳಲ್ಲಿ ಎರಡು ಮುಖ್ಯವಾದವು –ಏಕಾದಶೀವ್ರತ ಮತ್ತು ಗಂಗಾಸ್ನಾನ. ಅದ್ವೈತ ಮತ್ತು ವಿಶಿಷ್ಟಾದ್ವೈತಮತಗಳಲ್ಲಿ ಈ ಎರಡು ಸಾಧನಗಳಿಗೆ ಮಹತ್ವದ ಸ್ಥಾನವೇ ಇಲ್ಲ.

ಶ್ರೀಮದಾಚಾರ್ಯರು 'ವರಂ ಸ್ವಮಾತೃಗಮನಂ ವರಂ ಗೋಮಾಂಸಭಕ್ಷಣಂ.... ಇತ್ಯಾದಿ ಮಾತುಗಳಲ್ಲಿ ಏಕಾದಶೀವ್ರತಕ್ಕೆ ಕೊಟ್ಟಿರುವಷ್ಟು ಒತ್ತನ್ನು ಶಂಕರಾಚಾರ್ಯರಾಗಲೀ ರಾಮಾನುಜಾಚಾರ್ಯರಾಗಲೀ ಕೊಟ್ಟಿಲ್ಲ. ಆದ್ದರಿಂದಲೇ ಶಂಕರಾಚಾರ್ಯರ ಅನುಯಾಯಿಗಳಲ್ಲಿ ಏಕಾದಶೀ ದಿನ ಶ್ರಾದ್ಧಾದಿಗಳನ್ನು ನಡೆಸುವ ಪದ್ಧತಿಯೂ ಬಂದಿದೆ. ರಾಮಾನುಜಾಚಾರ್ಯರ ಅನುಯಾಯಿಗಳಲ್ಲಿ ನಿಶ್ಚಕ್ರ ಉಪವಾಸ ಮಾಡುವವರು ಬಹಳ ವಿರಳ.

ರಾಮಾನುಜೀಯ ಶಿಷ್ಯರಲ್ಲಿ ಕೆಲವು ಪಂಗಡದವರು ಗಂಗೆ ಶಿವನಿರ್ಮಾಲ್ಯ ಎಂಬುದಾಗಿ ಗಂಗಾಸ್ನಾನವನ್ನು ಬಹಿಷ್ಕರಿಸಿದ್ದಿದೆ. 'ವಿಶ್ವಗುಣಾದರ್ಶ ಚಂಪೂ'ಕಾರ ಇದನ್ನು ಉಲ್ಲೇಖಿಸಿರುವನು.

ಶಂಕರಾಚಾರ್ಯರ ಅನುಯಾಯಿಗಳಲ್ಲಿ ಶಿವದೀಕ್ಷೆ ಕೈಕೊಂಡ ಕೆಲವರು –ಗಂಗೆ ಶ್ರೀಹರಿಯ ಪಾದೋದಕವೆಂಬುದಾಗಿ ಗಂಗಾಸ್ನಾನವನ್ನು ಮಾಡಲಾರರು. ಹೀಗೆ ಶಿವದೀಕ್ಷೆ ಪಡೆದವರಲ್ಲೊಬ್ಬ ಜರಾಸಂಧ. ಆದ್ದರಿಂದಲೇ ಗಂಗಾಸ್ಪರ್ಶವನ್ನೇ

ವರ್ಜಿಸಿದ್ದ ಆತನನ್ನು ಭೀಮಸೇನ ಒಮ್ಮೆ ಗಂಗೆಗೆ ಎಸೆದ್ದು (ಬಾಹುಭ್ಯಾಂ ಚೈನಂ ಪರಿಗೃಹ್ಯಾಶು ವಿಷ್ಣೋಃ ಪಾದೋತ್ಥಾಯಾಂ ಪ್ರಾಕ್ಷಿಪದ್ದೇವನದ್ಯಾಮ್ –ಮ. ಭಾ. ತಾ. ನಿರ್ಣಯ ೨೦–೨೬)

ಶ್ರೀಹರಿಗೂ ರುದ್ರನಿಗೂ ಅವರವರ ಯೋಗ್ಯತೆಗೆ ತಕ್ಕ ಮಾನ್ಯತೆ ನೀಡ ಬೇಕೆಂದು ಸಾರುವ ಮಾಧ್ವಸಿದ್ಧಾಂತದಲ್ಲಿ ಗಂಗೆ ಶ್ರೀಹರಿಯ ಪಾದಸ್ಪರ್ಶದಿಂದಲೂ ರುದ್ರದೇವರ ಜಟಾಸ್ಪರ್ಶದಿಂದಲೂ ಪರಮಪವಿತ್ರೆ.

ಹೀಗೆ ಈ ಎರಡು ಸಾಧನೆಗಳ ಹಿರಿಮೆಯನ್ನು ಎತ್ತಿತೋರಿಸಿ ಸಾತ್ವಿಕರಿಗೆ ಅವುಗಳ ಅನುಷ್ಠಾನದಲ್ಲಿ ಹೆಚ್ಚು ಶ್ರದ್ಧೆ ಆಸಕ್ತಿ ಉಂಟಾಗುವಂತೆ ಮಾಡಿರುವವರು ಶ್ರೀಮದಾಚಾರ್ಯರು.

'ಅಧ್ಯಾತ್ಮನಿಷ್ಠಾರ್ಥ'ದ ವರ್ಣನೆ –ವೇದ ಮಹಾಭಾರತ ಬರೇ ಇತಿಹಾಸಾದಿ ಗಳ ಚಿತ್ರಣಕ್ಕಷ್ಟೇ ಹೊರಟಿರದೆ, ಇತಿಹಾಸಾದಿ ವರ್ಣನೆಯ ಮೂಲಕ 'ಅಧ್ಯಾತ್ಮಾರ್ಥ'ದ ನಿರೂಪಣೆಯೂ ಅವುಗಳ ಉದ್ದೇಶವಾಗಿದೆ ಎಂದು ತೋರಿಸಿಕೊಟ್ಟವರು ಶ್ರೀಮದಾಚಾರ್ಯರು. ಮಹಾಭಾರತದಲ್ಲಿ ಬರುವ ಪ್ರತಿಯೊಬ್ಬರೂ ಒಂದೊಂದು ಗುಣವನ್ನಾಗಲೀ ದೋಷವನ್ನಾಗಲೀ ಪ್ರತಿನಿಧಿಸುತ್ತಾರೆಂಬುದನ್ನು ತೋರಿಸಿಕೊಟ್ಟ ಶ್ರೀಮದಾಚಾರ್ಯರು 'ಏವಮಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವಮುಚ್ಯತೇ' (ಭಾ. ತಾ. ನಿರ್ಣಯ II-151) ಎಂಬುದಾಗಿ ಸರ್ವಭಾರತವೂ ಅಧ್ಯಾತ್ಮಾರ್ಥದಿಂದಲೂ ಯುಕ್ತವಾದದ್ದೆಂದು ಸಮರ್ಥಿಸಿರುವರು.

ಋಗ್ವೇದದ ಮೊದಲ ಮೂರೇ ಅಧ್ಯಾಯಗಳಿಗೆ ಭಾಷ್ಯ ಬರೆದಿದ್ದರೂ –ಅಷ್ಟರಲ್ಲೇ ವೇದದ ಅಪೂರ್ವಾರ್ಥಗಳನ್ನು ಎತ್ತಿತೋರಿಸಿ ಹೀಗೆ ಪ್ರಮೇಯದಲ್ಲಿಯ ಮಹತ್ವದ ಪ್ರಯುಕ್ತ ವೇದಕ್ಕೆ ಮಹತ್ವ ಎಂಬುದನ್ನು ತೋರಿಸಿಕೊಟ್ಟಿರುತ್ತಾರೆ. ಸಕಲ ಶಬ್ದಗಳನ್ನೂ ಭಗವಂತನಲ್ಲಿ ಸಮನ್ವಯಿಸಿ ತೋರಿಸಿರುವುದು ಶ್ರೀಮದಾಚಾರ್ಯರ ಮತ್ತೊಂದು ವೈಶಿಷ್ಟ್ಯ.

ಭಾಷ್ಯಗಳ ವೈಶಿಷ್ಟ್ಯ ಶಂಕರಾಚಾರ್ಯರೂ ರಾಮಾನುಜಾಚಾರ್ಯರೂ ಭಗವದ್ಗೀತೆ, ಬ್ರಹ್ಮಸೂತ್ರ, ಉಪನಿಷತ್ತುಗಳಿಗೆ (ರಾಮಾನುಜಾಚಾರ್ಯರು ಉಪನಿಷ ದ್ಭಾಷ್ಯ ಬರೆದಿಲ್ಲ) ಭಾಷ್ಯ ರಚಿಸಿರುವರಾದರೂ ಅವುಗಳ ಪೂರ್ವಾಪರ ವಿರೋಧಾ ಧಿಗಳಿಂದ ಕೂಡಿದವುಗಳಾಗಿ ಮೂಲದ ಆಶಯವನ್ನು ವ್ಯಕ್ತಪಡಿಸಲು ಅಸಮರ್ಥ ವೆನಿಸಿದೆ. ಶ್ರೀ ವ್ಯಾಸತೀರ್ಥರು ಅವರ ತಾತ್ಪರ್ಯಚಂದ್ರಿಕಾದಲ್ಲಿ ಸೂತ್ರಭಾಷ್ಯಗಳನ್ನು ವಿವೇಚಿಸಿ ತೋರಿಸಿರುವರು. ಶಂಕರಾಚಾರ್ಯರ ಸೂತ್ರಭಾಷ್ಯವನ್ನು ಅದಕ್ಕೆ ವ್ಯಾಖ್ಯಾನಕಾರನಾದ ಭಾಮತೀಕಾರನೇ ದ್ವಿತೀಯಾಧ್ಯಾಯದ ಒಂದೆಡೆ ಖಂಡಿಸಿದ್ದಿದೆ. ಭಾಮತೀಕಾರನ ಈ ಖಂಡನೆಯನ್ನು 'ಕಲ್ಪತರು' ಟಿಪ್ಪಣಿಯಲ್ಲಿ ವ್ಯಾಕರಣಶಾಸ್ತ್ರದ ನಿದರ್ಶನಕೊಟ್ಟು ಸಮರ್ಥಿಸಿದ್ದಿದೆ. ಹೀಗೆ ಅವರ ಅನುಯಾಯಿಗಳಿಂದಲೇ ಖಂಡಿತವಾದ ಭಾಷ್ಯ ಶಾಂಕರಭಾಷ್ಯ.

ಆದರೆ 'ಪರಶುಕ್ಲತ್ರಯ'ರಲ್ಲಿ ಸೇರಿದ್ದು, ಅಜ್ಞಾನಾದಿದೋಷಗಳಿಲ್ಲದ ಶ್ರೀಮದಾಚಾರ್ಯರು ನಿರ್ದುಷ್ಟ ಭಾಷ್ಯಗಳನ್ನು ರಚಿಸಿ 'ಪ್ರಸ್ಥಾನತ್ರಯ'ದ ಯಥಾರ್ಥಜ್ಞಾನ ಸಾತ್ವಿಕರಿಗೆ ದೊರಕುವಂತೆ ಮಾಡಿರುವರು.

ಹೀಗೆ ಶಂಕರಾಚಾರ್ಯರಾಗಲೀ ರಾಮಾನುಜಾಚಾರ್ಯರಾಗಲೀ ನೀಡದ 'ಕೊಡುಗೆ'ಗಳನ್ನು ಸಾತ್ವಿಕರಿಗೆ ಅನುಗ್ರಹಿಸುವುದಕ್ಕಾಗಿ ಅವತರಿಸಿದವರು ಶ್ರೀಮದಾಚಾರ್ಯರು.

●

೩. ೩. ಅಂತೇ ಸಿದ್ಧಸ್ತು ಸಿದ್ಧಾಂತಃ

ಅಂತೇ ಸಿದ್ಧ ಹೇಗೆ?

'ಅಂತೇ ಸಿದ್ಧಸ್ತು ಸಿದ್ಧಾಂತಃ ಮಧ್ವಸ್ಯಾಗಮ ಏವ ಹಿ' ವಿವಾದದ ಕೊನೆಯಲ್ಲಿ ಸಿದ್ಧವಾದುದು ಸಿದ್ಧಾಂತ. ಶಾಸ್ತ್ರೀಯ ವಿವಾದದಲ್ಲಿ ಕೊನೆಗೆ ಬಂದ ದರ್ಶನ ದ್ವೈತದರ್ಶನ. ಅದನ್ನು ನಿರಾಕರಿಸಿ ಇನ್ನೊಂದು ದರ್ಶನ ಹುಟ್ಟಿಲ್ಲ. ಆದ್ದರಿಂದ ಅದೇ ಸಿದ್ಧಾಂತ. ಆದರೆ ವಲ್ಲಭಾಚಾರ್ಯರ ಸಿದ್ಧಾಂತ ಮಾಧ್ವದರ್ಶನಕ್ಕಿಂತ ಅರ್ವಾಚೀನ. ಹೀಗಿರುವಾಗ ದ್ವೈತದರ್ಶನ ಅಂತೇ ಸಿದ್ಧ ಹೇಗೆ?

ಒಂದು ಸಿದ್ಧಾಂತ ಪ್ರಚಾರದಲ್ಲಿದ್ದಾಗ ಅದನ್ನು ತಿಳಿದಿರುವ ಜನರ ಮಧ್ಯದಲ್ಲಿ ಇನ್ನೊಂದು ಸಿದ್ಧಾಂತ ಜನಪ್ರಿಯವಾದರೆ ಆಗ ಅದು ಅಂತೇ ಸಿದ್ಧ. ಅದ್ವೈತ ವಿಶಿಷ್ಟಾದ್ವೈತದರ್ಶನಗಳು ಪ್ರಚಾರದಲ್ಲಿದ್ದ ದಕ್ಷಿಣ ಭಾರತದಲ್ಲೇ ದ್ವೈತದರ್ಶನ ಸ್ಥಾಪನೆಗೊಂಡಿತು. ಜನ ದರ್ಶನತ್ರಯಗಳನ್ನು ವಿಮರ್ಶಿಸಿ ದ್ವೈತಸಿದ್ಧಾಂತವನ್ನು ಆರಿಸಿಕೊಂಡರು. ಅದೇ ಪ್ರದೇಶದಲ್ಲಿ ದ್ವೈತದರ್ಶನವನ್ನು ಖಂಡಿಸಿ ಮತ್ತೊಂದು ದರ್ಶನ ಹುಟ್ಟಿಲ್ಲ. ಆದ್ದರಿಂದ ಅದು ಅಂತೇ ಸಿದ್ಧ. ವಲ್ಲಭಾಚಾರ್ಯರ ಸಿದ್ಧಾಂತ ಪ್ರಚಾರಗೊಂಡದ್ದು ಬಂಗಾಳದಲ್ಲಿ. ಅಲ್ಲಿಯ ಜನರಿಗೆ ದ್ವೈತದರ್ಶನದ ಅರಿವಿರಲಿಲ್ಲ. ಆದ್ದರಿಂದ ದ್ವೈತದರ್ಶನವನ್ನು ವಿಮರ್ಶಿಸಿ ಅದರಲ್ಲಿ ಅಸ್ವಾರಸ್ಯ ಕಂಡು ವಲ್ಲಭದರ್ಶನ ಸ್ಥಾಪನೆಗೊಂಡಿಲ್ಲ. ಆದ್ದರಿಂದ ಮಧ್ವಸಿದ್ಧಾಂತವೇ 'ಅಂತೇ ಸಿದ್ಧ ಸಿದ್ಧಾಂತ'.

ಶ್ರೀ ವಾದಿರಾಜರ ಈ ಆಕ್ಷೇಪ ಸರಿಯೇ?

'ಜೀವಬ್ರಹ್ಮೈಕ್ಯ' ಪಕ್ಷದಲ್ಲಿ ಜೀವನಲ್ಲಿರುವ ಚಂಡಾಲತ್ವ, ಪಶುತ್ವ, ಮೂರ್ಖತ್ವ ಮೊದಲಾದ ಧರ್ಮಗಳು ಈಶನಲ್ಲಿಯೂ ಬರಬೇಕಾದೀತು ಎಂದಿದ್ದಾರೆ ಶ್ರೀ ವಾದಿರಾಜರು. ಆದರೆ ಚಂಡಾಲತ್ವಾದಿ ಧರ್ಮವಿಶಿಷ್ಟನಾದ ಜೀವನಿಗೂ ಬ್ರಹ್ಮನಿಗೂ ಅದ್ವೈತವಾದ ಐಕ್ಯವನ್ನು ಹೇಳುತ್ತಿಲ್ಲ. ಶುದ್ಧ ಚೇತನನಿಗಷ್ಟೇ ಬ್ರಹ್ಮೈಕ್ಯವನ್ನು ಅದು ಹೇಳುತ್ತದೆ. ಹೀಗಿರುವಾಗ ಮೇಲಿನ ಆಕ್ಷೇಪ ಹೇಗೆ ಸರಿ? ಅಂದರೆ ಐಕ್ಯಪಕ್ಷದಲ್ಲಿ ಎರಡು ಪ್ರಶ್ನೆ. ವಿಶಿಷ್ಟ ಚೇತನರಿಗೆ ಐಕ್ಯವನ್ನು ಹೇಳುವಿರೋ,

ಶುದ್ಧರಿಗೋ? ಜೀವನಲ್ಲಿರುವ ಧರ್ಮಗಳೆಲ್ಲವನ್ನೂ ಅಲ್ಲಗಳೆದು ಶುದ್ಧಕ್ಕೆ ಐಕ್ಯವನ್ನು ಹೇಳಿದರೆ ಅದೂ ಒಂದು ಈಶ್ವರನಿಂದೆಯೇ, ಈಶ್ವರ ಸ್ವಾಮಿ, ಜೀವ ದಾಸ. ಜೀವೇಶ್ವರರಲ್ಲಿರುವ ಸ್ವಾಮಿತ್ವ, ದಾಸತ್ವ ಧರ್ಮಗಳನ್ನು ಅಲ್ಲಗಳೆಯುವುದೆಂದರೆ ನೀನು ಸ್ವಾಮಿಯಲ್ಲ, ನಾನು ನಿನ್ನ ದಾಸನೂ ಅಲ್ಲ ಎಂಬ ಭಾವವನ್ನು ತಾಳುವುದು. ಇದೂ ಒಂದು ಈಶ್ವರನಿಂದೆಯೇ! ಈ ದೋಷಪರಿಹಾರಕ್ಕಾಗಿ ವಿಶಿಷ್ಟೈಕ್ಯವನ್ನು ಹೇಳಿದರೆ, ಶ್ರೀ ವಾದಿರಾಜರು ಹೇಳಿದ ದೋಷ. ಹೀಗೆ 'ತ್ವಂ ಚಂಡಾಲಃ ಪಶುಃ..' ಇತ್ಯಾದಿ ದೋಷ ವಿಶಿಷ್ಟೈಕ್ಯ ಪಕ್ಷದಲ್ಲಿ ಮಾತ್ರ.

●

೩. ೪. ಭೇದಜ್ಞಾನವೇ ವಿದ್ಯೆ

'ಶ್ರೀಹರಿಯು ಸ್ವಾಮಿ, ನಾನು ದಾಸ' ಎಂಬ ಭೇದಜ್ಞಾನವೇ ನಿಜವಾದ ವಿದ್ಯೆ. 'ನಾನೇ ಬ್ರಹ್ಮ' ಎಂಬ ಅದ್ವೈತ ಜ್ಞಾನವಾಗಲಿ 'ಜೀವೇಶರು ಸಮಾನ'ರೆಂಬ ಸಾಮ್ಯಜ್ಞಾನವಾಗಲಿ ವಿದ್ಯೆ ಅಲ್ಲ. 'ಅಧ್ಯಾತ್ಮವಿದ್ಯಾ ವಿದ್ಯಾನಾಮ್' –ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆಯೇ ಶ್ರೇಷ್ಠವಾದ ವಿದ್ಯೆ ಎಂದು ಶ್ರೀಕೃಷ್ಣನು ಗೀತೆಯಲ್ಲಿ ಇದನ್ನೇ ತಿಳಿಸಿದ್ದಾನೆ. ಗೀತೆಯಲ್ಲಿಯೇ ಬರುವ 'ಅಧ್ಯಾತ್ಮಚೇತಸಾ' ಎಂಬ ಪದಕ್ಕೆ ಶ್ರೀ ಶಂಕರರು ತಮ್ಮ ಭಾಷ್ಯದಲ್ಲಿ 'ಶ್ರೀಹರಿಯು ಸ್ವಾಮಿ, ನಾನು ಭೃತ್ಯ' ಎಂಬ ಜ್ಞಾನ ಎಂದು ಅರ್ಥ ಬರೆದಿದ್ದಾರೆ. ಅಧ್ಯಾತ್ಮವಿದ್ಯಾ ಮತ್ತು ಅಧ್ಯಾತ್ಮಚೇತಸಾ –ಈ ಎರಡೂ ಪದಗಳು ಸಮಾನಾರ್ಥಕ. ಆದುದರಿಂದ 'ದ್ವೈತಜ್ಞಾನ'ವೇ ಅಧ್ಯಾತ್ಮವಿದ್ಯೆ; ಅದೇ ನಿಜವಾದ ವಿದ್ಯೆ ಎಂದೂ ಶ್ರೀ ಶಂಕರರೂ ತಿಳಿಸಿದ್ದಾರೆ. ಪ್ರತಿವಾದಿಗಳೂ ನಮ್ಮ ಪರವಾಗಿದ್ದಾರೆ!

ಭಾಗವತದಲ್ಲಿ ಶ್ರೀಕೃಷ್ಣನು ಉದ್ಧವನಿಗೆ ಉಪದೇಶ ನೀಡುವಾಗ 'ವಿದ್ಯಾ ಆತ್ಮನಿ ಭಿದಾಬೋಧಃ' –ಜೀವಾತ್ಮ–ಪರಮಾತ್ಮರಲ್ಲಿರುವ ಭೇದಜ್ಞಾನವೇ ವಿದ್ಯೆ ಎಂದು ತಿಳಿಸಿದ್ದಾನೆ. ಕೆಲವರು ಇಲ್ಲಿ ಭಿದಾ–ಅಬೋಧ ಎಂದು ಪದವಿಭಾಗ ಮಾಡಿ ಭೇದ ಅಜ್ಞಾನವೇ ವಿದ್ಯೆ ಎಂದು ವ್ಯಾಖ್ಯಾನಿಸಿದ್ದಾರೆ. ಶ್ರೀ ಜಯತೀರ್ಥರು ಸುಧಾದಲ್ಲಿ 'ಅಜ್ಞಾನವು ವಿದ್ಯೆ' ಎನಿಸುವುದೇ? ಎಂದು ನಿರಾಕರಿಸುತ್ತಾರೆ. ಮತ್ತೆ ಕೆಲವರು 'ಭಿದಾಬಾಧಃ' ಎಂದು ಪಾಠವನ್ನೇ ಬದಲಿಸಿ ಭೇದದ ಬಾಧಜ್ಞಾನ ಅಂದರೆ 'ಭೇದ ಇಲ್ಲ' ಎಂಬ ಜ್ಞಾನವೇ ವಿದ್ಯೆ ಎಂದು ವ್ಯಾಖ್ಯಾನಿಸಿದ್ದಾರೆ. ಇದೂ ಸರಿಯಲ್ಲ. ಭಾಗವತದಲ್ಲಿಯೇ ಹಿರಣ್ಯಗರ್ಭ ಅಂದರೆ ಚತುರ್ಮುಖ ಬ್ರಹ್ಮದೇವರು 'ಭೇದದೃಷ್ಟ್ಯಾ ಅಭಿಮಾನೇನ ನಿಸ್ಸಂಗೇನಾಪಿ ಕರ್ಮಣಾ' –ಭೇದಜ್ಞಾನ, ಭಕ್ತಿ, ನಿಷ್ಕಾಮಕರ್ಮ ಇವುಗಳಿಂದ ಮುಕ್ತರಾದವರು ಎಂದು ತಿಳಿಸಿದ್ದಾರೆ. ಮೋಕ್ಷದಲ್ಲಿಯೂ ಭೇದವಿದೆಯೆಂದು ಅನೇಕ ಶ್ರುತಿಗಳು ಸಾರುತ್ತಿವೆ. ಶ್ರೇಷ್ಠರಾದ ಹಿರಣ್ಯಗರ್ಭರ ಮೋಕ್ಷವೇ ಭೇದಜ್ಞಾನದಿಂದ ಬಂದದ್ದು ಎಂದಮೇಲೆ 'ಭೇದ ಇಲ್ಲ' ಎಂಬ

ಜ್ಞಾನವೇ ವಿದ್ಯೆ ಎನ್ನುವುದು ಹೇಗೆ? ಇದನ್ನೆ ಆಚಾರ್ಯರು ತಮ್ಮ ದ್ವಾದಶ ಸ್ತೋತ್ರದಲ್ಲಿ ಹೀಗೆ ತಿಳಿಸಿದ್ದಾರೆ–

ಚತುರಾನನಪೂರ್ವವಿಮುಕ್ತಗಣಾಃ
ಹರಿಮೇತ್ಯ ತು ಪೂರ್ವವದೇವ ಸದಾ ।
ನಿಯತೋಚ್ಚವಿನೀಚತಯೈವ ನಿಜಾಂ
ಸ್ಥಿತಿಮಾಪುರಿತಿ ಸ್ಮ ಪರಂ ವಚನಮ್ ॥

ಚತುರ್ಮುಖನೇ ಮುಂತಾದ ಎಲ್ಲ ಮುಕ್ತರು ಶ್ರೀಹರಿಯನ್ನು ಹೊಂದಿ ಸಂಸಾರಾವಸ್ಥೆಯಂತೆಯೇ ತಾರತಮ್ಯದಿಂದ ಕೂಡಿದವರಾಗಿಯೇ ಇರುತ್ತಾರೆಂದು ಉತ್ತಮವಾದ ಭಾಗವತ ವಚನವಿದೆ. ಆದುದರಿಂದ ಇಂತಹ ಅಧ್ಯಾತ್ಮವಿದ್ಯೆಯನ್ನೇ ಕಲಿಯಬೇಕು.

●

೩. ೫. ಭೇದ ಪ್ರತಿನಿಧಿ

'ಯಃ ಸರ್ವಜ್ಞಃ ಸ ಸರ್ವವಿತ್....' ಇತ್ಯಾದಿ ಕೆಲವು ಶ್ರುತಿಗಳು ಭಗವಂತನಲ್ಲಿ ಸರ್ವಜ್ಞತ್ವಾದಿ ಗುಣಗಳಿವೆ ಎಂದು ಸಾರುತ್ತಿದ್ದರೆ, ಮತ್ತೆ ಕೆಲವು 'ನೇಹ ನಾನಾಸ್ತಿ ಕಿಂಚನ' ಇತ್ಯಾದಿ ಶ್ರುತಿಗಳು ಶ್ರೀಹರಿಯಲ್ಲಿ ಯಾವುದೂ ಇಲ್ಲ ಎಂದು ಘೋಷಿಸುತ್ತಿವೆ. ಆದರೆ 'ನೇಹ ನಾನಾಸ್ತಿ' ಇತ್ಯಾದಿ ಶ್ರುತಿಗೆ ಮೇಲ್ನೋಟಕ್ಕೆ ಕಾಣುವ 'ಭಗವಂತನಲ್ಲಿ ಏನೂ ಇಲ್ಲ' ಎಂಬ ಅರ್ಥವನ್ನು ಪರಮತೀಯರಿಗೂ ಒಪ್ಪದಿರಲಾಗದು. ಬ್ರಹ್ಮನಲ್ಲಿ ಏನೂ ಇಲ್ಲ ಎಂದರೆ ಜೀವೈಕ್ಯವೂ ಇಲ್ಲ ಎಂದಂತಾದೀತು ತಾನೆ?

ಶ್ರುತಿಗೂ ಬ್ರಹ್ಮನಲ್ಲಿ ಏನೂ ಇಲ್ಲ ಎಂಬುದಾಗಿ ಬೋಧಿಸುವ ತಾತ್ಪರ್ಯ ಇದ್ದಲ್ಲಿ 'ನೇಹಾಸ್ತಿ ಕಿಂಚನ' ಎಂಬುದಾಗಿಯೇ ಇರುತ್ತಿತ್ತೇ ಹೊರತು 'ಕಿಂಚನ'ಕ್ಕೆ 'ನಾನಾ' ವಿಶೇಷಣ ಕೊಟ್ಟು –'ನೇಹ ನಾನಾಸ್ತಿ ಕಿಂಚನ' ಎಂದು ಇರುತ್ತಿರಲಿಲ್ಲ.

ಆದ್ದರಿಂದ ಶ್ರುತಿಗೆ ಬ್ರಹ್ಮನಲ್ಲಿ ನಾನಾತ್ವದಿಂದ ಕೂಡಿದ (ಅರ್ಥಾತ್ ಬ್ರಹ್ಮನ ಸ್ವರೂಪಕ್ಕಿಂತ ಭಿನ್ನವಾದ) ಕಿಂಚನವನ್ನು ನಿಷೇಧಿಸುವುದರಲ್ಲಿ ತಾತ್ಪರ್ಯವೇ ಹೊರತು ಕಿಂಚನವೂ ಇಲ್ಲ ಎನ್ನುವುದರಲ್ಲಿ ಅಲ್ಲ. ಬ್ರಹ್ಮನಲ್ಲಿ ಇರುವ ಗುಣಧರ್ಮಗಳು ಅವನಿಗಿಂತ ಭಿನ್ನವಾದವುಗಳಲ್ಲ. ಅವನ ಸ್ವರೂಪಾತ್ಮಕಗಳೇ ಆಗಿವೆ –ಎಂಬುದು ಶ್ರುತಿಯ ಇಂಗಿತ.

ಹೀಗೆ ಬ್ರಹ್ಮನ ಸ್ವರೂಪಭೂತಗಳೇ ಆಗಿರುವ ಗುಣ–ಧರ್ಮ–ಕ್ರಿಯೆಗಳನ್ನು ಕೆಲವೆಡೆ (ಆನಂದಂ ಬ್ರಹ್ಮಣಃ –ಇತ್ಯಾದಿ ಪ್ರಮಾಣಗಳಲ್ಲಿ) ಆತನ ಸ್ವರೂಪ ತತ್ತ್ವವಾದಕ್ಕಿಂತ ಭಿನ್ನಗಳಾಗಿರುವಂತೆ ವ್ಯವಹರಿಸಿರುವುದು ಕಂಡಿದೆ. ಈ ಎರಡನ್ನೂ ಬ್ರಹ್ಮನ ಗುಣಾದಿಗಳಿಗೆ ಆತನ ಸ್ವರೂಪತ್ವ ಹಾಗೂ ಆತನ ಸ್ವರೂಪಕ್ಕೂ

ಅವುಗಳಿಗೂ ನಡುವಿನ ಭೇದಪೂರ್ವಕ ವ್ಯವಹಾರಗಳನ್ನೂ ಕೂಡಿಸಬೇಕೆಂದರೆ, ಬ್ರಹ್ಮ ಹಾಗೂ ಆತನ ಗುಣಾದಿಗಳ ನಡುವೆ ಅತ್ಯಂತಾಭೇದವೇ ಇರುವುದಾದರೂ ಭೇದ ಪೂರ್ವಕ ವ್ಯವಹಾರದ ನಿರ್ವಹಣೆಗಾಗಿ ಭೇದದ ಪ್ರತಿನಿಧಿಯೊಂದನ್ನು ಅನಿವಾರ್ಯವಾಗಿ, ಅವಶ್ಯವಾಗಿ ಒಪ್ಪಿಕೊಳ್ಳಬೇಕು. ಹೀಗೆ ಭೇದದ ಪ್ರತಿನಿಧಿಯಾಗಿ ಅಂಗೀಕರಿಸಲ್ಪಟ್ಟ ಶಕ್ತಿಯೇ ಪಾರಿಭಾಷಿಕವಾಗಿ 'ವಿಶೇಷ' ಎನಿಸಿದೆ.

ದ್ವಿತೀಯ ವಸ್ತುಗಳನ್ನೆಲ್ಲ ನಿರಾಕರಿಸುತ್ತಿಲ್ಲ –'ಏಕಮೇವಾದ್ವಿತೀಯಂ ಬ್ರಹ್ಮ' ಎಂಬ ಶ್ರುತಿ ಬ್ರಹ್ಮನಿಗಿಂತ ಎರಡನೇದಾದ ವಸ್ತುಗಳನ್ನೆಲ್ಲ ನಿರಾಕರಿಸುತ್ತಿಲ್ಲ. ಈ ವಾಕ್ಯಕ್ಕಿಂತ ಪೂರ್ವ ವಾಕ್ಯದಲ್ಲೇ 'ಸದೇವ ಸೋಮ್ಯ ಇದಮಗ್ರ ಆಸೀತ್' ಎಂಬುದಾಗಿ 'ಅಗ್ರೇ' ಶಬ್ದದಿಂದ ಕಾಲದ ಇರುವಿಕೆಯನ್ನು ಶ್ರುತಿಯೇ ಒಪ್ಪಿಕೊಂಡಿದೆ. ಇಂತಹ ಶ್ರುತಿ ಮುಂದೆ ಬ್ರಹ್ಮನಿಗಿಂತ ದ್ವಿತೀಯವಾದ ವಸ್ತುವೇ ಇಲ್ಲೆಂದು ಹೇಗೆ ನಿಷೇಧಿಸೀತು?

ಶ್ರುತಿ 'ಅಗ್ರೇ' ಎಂಬುದಾಗಿ ಕಾಲದ ಇರುವಿಕೆಯನ್ನು ಹೇಳಿದ್ದರೂ ಅದರಲ್ಲಿ ಅದಕ್ಕೆ ತಾತ್ಪರ್ಯವಿಲ್ಲ. ಮುಂದೆ 'ಅದ್ವಿತೀಯ' ಶಬ್ದದಿಂದ ನಿರಾಕರಿಸುವುದಕ್ಕಾಗಿ ಅನುವಾದಿಸಿದ್ದಷ್ಟೇ –ಅಂದರೆ, ಹೀಗೆ ನಿಜವಾಗಿ ಇಲ್ಲದ ಕಾಲವನ್ನು ಹೇಳುವ ಶ್ರುತಿ ಅಪ್ರಮಾಣವಾದೀತು!

ಅಲ್ಲದೆ, 'ಏಕಮೇವಾದ್ವಿತೀಯಂ ಬ್ರಹ್ಮ' ಎಂಬ ಶ್ರುತಿ ಅದ್ವಿತೀಯ ಪದದಿಂದ ದ್ವಿತೀಯ ಪದಾರ್ಥಗಳನ್ನೆಲ್ಲ ನಿರಾಕರಿಸುತ್ತಿದೆ ಎಂಬುದು ಶಂಕರಾಚಾರ್ಯರಿಗೂ ಸಮ್ಮತವಾದುದಲ್ಲ. ಅವರು 'ಅದ್ವಿತೀಯ' ಪದಕ್ಕೆ ಬ್ರಹ್ಮನಿಂದ ಉತ್ಪನ್ನವಾದವು ಗಳಾಗಲೀ ಬ್ರಹ್ಮನಿಗೆ ಸದೃಶವಾದ ವಸ್ತುವಾಗಲೀ ಇಲ್ಲ (ಸ್ವಕಾರ್ಯಪತಿತಮನ್ಯ ನ್ನಾಸ್ತಿ । ಸ್ವಪ್ರತಿದ್ವಿಂದ್ವಿವಸ್ತು ನಾಸ್ತಿ) ಎಂಬುದಾಗಿ ಭಾಷ್ಯ ಬರೆದಿರುವರು.

ಆದ್ದರಿಂದ ಬ್ರಹ್ಮನಿಗೆ ಸದೃಶವಾದ ಪದಾರ್ಥವನ್ನು ಶ್ರುತಿ ನಿಷೇಧಿಸುತ್ತದೆಯೇ ಹೊರತು ಬ್ರಹ್ಮನಿಗೆ ಅಧೀನಳಾಗಿರುವ ವಸ್ತುಗಳನ್ನಾಗಲೀ ಬ್ರಹ್ಮನ ಸ್ವರೂಪವೇ ಆಗಿರುವ ಬ್ರಹ್ಮನ ಗುಣ–ಧರ್ಮ–ಕ್ರಿಯೆಗಳನ್ನಾಗಲೀ 'ಏಕಮೇವಾದ್ವಿತೀಯಂ ಬ್ರಹ್ಮ' ಎಂಬ ಶ್ರುತಿ ಅಥವಾ ಬೇರೆ ಯಾವುದೇ ಶ್ರುತಿ ನಿರಾಕರಿಸುತ್ತಿಲ್ಲ.

ಪ್ರತ್ಯುತ ಭಗವಂತನಲ್ಲಿ ಅನಂತ ಗುಣಧರ್ಮಗಳು ಇವೆ ಎಂದು ಸಾರುತ್ತಿದೆ ಶ್ರುತಿ. ಅದೇ ಶ್ರುತಿ 'ನೇಹ ನಾನಾಸ್ತಿ ಕಿಂಚನ' ಇತ್ಯಾದಿ ಕಡೆಗಳಲ್ಲಿ ಆ ಗುಣಧರ್ಮಗಳೆಲ್ಲ ಭಗವಂತನಿಗೆ ಭಿನ್ನವಾದವುಗಳಲ್ಲ; ಆತನ ಸ್ವರೂಪವೇ ಆಗಿವೆ ಎಂಬುದಾಗಿ ಹೇಳುತ್ತ 'ಆನಂದಂ ಬ್ರಹ್ಮಣೋ ವಿದ್ವಾನ್' ಇತ್ಯಾದಿ ಕಡೆಗಳಲ್ಲಿ ಭೇದಪೂರ್ವಕ ವ್ಯವಹಾರಗಳನ್ನು ಮಾಡುತ್ತ ಭಗವಂತನಿಗೂ ಆತನ ಗುಣ–ಧರ್ಮ–ಕ್ರಿಯೆಗಳಿಗೂ ನಡುವೆ ಭೇದ ಇಲ್ಲವಾದರೂ ಭೇದದ ಕಾರ್ಯಗಳನ್ನೆಲ್ಲ ನಿರ್ವಹಿಸುವ ಪ್ರತಿನಿಧಿಯೊಂದನ್ನು ಒಪ್ಪಲೇಬೇಕು ಎಂಬುದಾಗಿ ಸೂಚ್ಯವಾಗಿ ಸಾರುತ್ತಿದೆ. ಅದನ್ನೇ ಶ್ರೀ ಮಧ್ವಾಚಾರ್ಯರು 'ವಿಶೇಷ' ಎಂಬ ಹೆಸರಿನಿಂದ ಪರಿಚಯಿಸಿಕೊಟ್ಟಿರುವರು.

●

೩. ೬. ದತ್ತಸ್ವಾತಂತ್ರ್ಯ-ವಿಧಿ ವಾಕ್ಯಗಳು

ವಿಷ್ಣುರಹಸ್ಯದಲ್ಲಿ ಜೀವಾತ್ಮರಿಗೆ 'ದತ್ತ ಸ್ವಾತಂತ್ರ್ಯ'ವಿದೆ ಎಂಬ ಮಾತು ಬರುವುದು. ಇಲ್ಲಿ ಸ್ವಾತಂತ್ರ್ಯ ಎಂದರೆ ಕರ್ತೃತ್ವ ಎಂದಷ್ಟೇ ಅರ್ಥ. ಜೀವಾತ್ಮರಲ್ಲಿರುವ ಕರ್ತೃತ್ವವು ಭಗವದಧೀನವಾದುದೆಂಬುದಾಗಿ 'ದತ್ತಸ್ವಾತಂತ್ರ್ಯ'ದ ಒಟ್ಟು ಅಭಿಪ್ರಾಯ.

ಕರ್ತೃತ್ವವೆಂದರೆ ಜ್ಞಾನೇಚ್ಛಾಕೃತಿಗಳು. ಇವು ಯಾರ್ಯಾರಿಗೆ ಎಷ್ಟೆಷ್ಟು ಪ್ರಮಾಣ ದಲ್ಲಿ ಭಗವಂತನಿಂದ ಅನುಗೃಹೀತಗಳಾಗಿವೆಯೋ, ಅವರವರಿಗೆ ಅಷ್ಟಷ್ಟು ಪ್ರಮಾಣ ದಲ್ಲಿ ಸ್ವಾತಂತ್ರ್ಯವಿದೆ ಎಂದು ವ್ಯವಹರಿಸಲ್ಪಡುವುದು. ರೂಪಾಯಿ ಪ್ರಮಾಣದ ಸ್ವಾತಂತ್ರ್ಯದಲ್ಲಿ ಒಬ್ಬ ಜೀವಾತ್ಮನಿಗೆ ಎಂಟಾಣೆಯಷ್ಟು, ಮತ್ತೊಬ್ಬನಿಗೆ ನಾಲ್ಕಾಣೆ ಯಷ್ಟು ಹೀಗೆ.

ಕಾರಕಾಂತರಾಪ್ರಯೋಜ್ಯಕಾರಕತ್ವವೇ ಸ್ವಾತಂತ್ರ್ಯವೆಂಬುದು ಸುಧಾಕಾರರ ಪರಿಷ್ಕಾರ. ಅಂದರೆ ಕಾರಕವು ಮತ್ತೊಂದು ಕಾರಕದಿಂದ ಪ್ರಯೋಜ್ಯವಲ್ಲದಿರುವಾಗ ಸ್ವತಂತ್ರವೆನಿಸುವುದು. ಮರ ಕಡಿಯುವಿಕೆಯಲ್ಲಿ ಕೊಡಲಿಯ ವ್ಯಾಪಾರವು ಆ ಕೊಡಲಿ ಹಿಡಿದ ದೇವದತ್ತನ ಅಧೀನವಾಗಿರುವುದರಿಂದ ಕೊಡಲಿಯು ಆ ದೇವದತ್ತ ಪ್ರಯೋಜ್ಯವಾಗಿದೆ ಎಂದು ಅಸ್ವತಂತ್ರವೆನಿಸಿದೆ. ಆದರೆ ದೇವದತ್ತ ಆ ಕ್ರಿಯೆಯಲ್ಲಿ ಸ್ವತಂತ್ರ. ಯಾಕೆಂದರೆ ಅವನ ವ್ಯಾಪಾರವು ಕೊಡಲಿಗೆ ಅಧೀನವಾದುದಲ್ಲ.

ಈ ರೀತಿಯ ಸ್ವಾತಂತ್ರ್ಯವು ಎಲ್ಲ ಜೀವರಲ್ಲಿಯೂ ಇದೆ. ಆದರೆ ಭಗವದಧೀನ. ಆದ್ದರಿಂದ ಸಾಮಾನ್ಯತಃ ಇತರಾನಧೀನ ಕಾರಕತ್ವರೂಪವಾದ ಸ್ವಾತಂತ್ರ್ಯವು ಭಗವಂತನ ಅಸಾಧಾರಣ ಲಕ್ಷಣ ಇನ್ನಾರಲ್ಲಿಯೂ ಇಲ್ಲ. ಅಂದಮೇಲೆ ವಿಧಿ ವಾಕ್ಯಗಳ ಸಾರ್ಥಕ್ಯವೇನು? ವಿಷ್ಣುರಹಸ್ಯದಲ್ಲೇ ತೋರಿಸಿರುವ ಉದಾಹರಣೆ –ಸ್ವಯಂ ಮೊಲೆ ಹಾಲು ಹೀರಲೂ ಅಸಮರ್ಥವಾದ ಹಸುಳೆಗೆ ತಾನೇ ಹಾಲು ಕುಡಿಸುವ ತಾಯಿ ಪುನಃ 'ಕುಡಿ ಕುಡಿ' ಎಂದು ವಿಧಿಸುವುದು ಸಾರ್ಥಕವೆನಿಸುವುದೇ?

ಅಲ್ಲದೆ, ವಿಧಿವಾಕ್ಯಗಳ ಅರ್ಥ ಇಷ್ಟಸಾಧನತಾ. 'ಕಾರ್ಯತಾ ಚ ನ ಕಾಚಿತ್ ಸ್ಯಾತ್ ಇಷ್ಟಸಾಧನತಾಂ ವಿನಾ' ಎಂದು ಆಚಾರ್ಯರು ಹೇಳಿದ್ದಾರೆ. ಇಂತಹ ಇಷ್ಟ ಸಾಧನತಾಜ್ಞಾನವನ್ನು ಉಂಟುಮಾಡುವವನೂ ಭಗವಂತನೇ. 'ಸ ಹಿ ಸರ್ವ ಮನೋವೃತ್ತಿಪ್ರೇರಕಃ ಸಮುದಾಹೃತಃ'. ಹೀಗಿರುವಾಗ ನೇರವಾಗಿ ಜೀವಾತ್ಮರಿಗೆ ಇಷ್ಟಸಾಧನತಾಜ್ಞಾನವನ್ನು ಉಂಟುಮಾಡುವ ಬದಲು ನಡುವೆ ವಿಧಿ ವಾಕ್ಯಗಳ ಆವಶ್ಯಕತೆ ಏನು?

ನಿಜ, ಇಷ್ಟಸಾಧನತಾಜ್ಞಾನವನ್ನು ಕೊಡುವವನು ಅವನೇ. ಆದರೆ ಶಾಸ್ತ್ರದ ವಿಧಿವಾಕ್ಯಗಳನ್ನು ಸಹಕಾರಿಗಳನ್ನಾಗಿ ಬಳಸಿಕೊಳ್ಳುವನು. ಹೇಗೆ ಜೀವಾತ್ಮರಿಗೆ ಭೋಜನದ ಮೂಲಕ ತೃಪ್ತಿಯನ್ನು ನೀಡುವವನು ಅವನೇ ಆದರೂ ಭೋಜನವನ್ನು ಸಹಕಾರಿಯಾಗಿ ಬಳಸಿಕೊಳ್ಳುವನೋ ಅಂತೆ. ಸರ್ವಸಮರ್ಥನಾದ ಅವನಿಗೆ ಭೋಜನವಿಲ್ಲದೆಯೇ ತೃಪ್ತಿಯನ್ನು ನೀಡುವುದಕ್ಕೂ, ವಿಧಿವಾಕ್ಯಗಳಿಲ್ಲದೆಯೇ

ಇಷ್ಟಸಾಧನತಾ ಜ್ಞಾನವನ್ನುಂಟುಮಾಡುವುದಕ್ಕೂ ಸಾಮರ್ಥ್ಯವಿಲ್ಲದಿಲ್ಲ. ಆದರೂ ತನ್ನ ಸಂಕಲ್ಪಾನುಸಾರವಾಗಿ ಹಾಗೆಯೇ ನಡೆದುಕೊಳ್ಳುವನು.

ಮೊಲೆಹಾಲನ್ನು ಕುಡಿಯಲಾಗದ ಹಸುಳೆಗೂ ನಮಗೂ ತುಂಬ ಅಂತರವಿದೆ. ಹಸುಳೆ ತಾಯಿಯ ಮಾತನ್ನು ಗ್ರಹಿಸಲಾರದಾಗಿರುತ್ತದೆ. ನಮಗಾದರೆ ಭಗವಧೀನವಾದ ಜ್ಞಾನೇಚ್ಛಾಕೃತಿಗಳಾದರೂ ಇವೆ ತಾನೇ?

•

೩. ೮. ದಿವ್ಯ ಹಾಗೂ ಸರ್ವಮಾನ್ಯ ಸಾಕ್ಷಿ

ಶ್ರೀವಿಷ್ಣುವು ಸರ್ವೋತ್ತಮನೆಂದು ನಂಬುವವರು, ಉಪಾಸಿಸುವವರು ಬಹಳಷ್ಟು ಕಡಿಮೆ. ರುದ್ರದೇವರ ಸರ್ವೋತ್ತಮತ್ವವನ್ನು ನಂಬುವವರಾದರೂ ಬಹು ಮಂದಿ ಇದ್ದಾರೆ. ಆದ್ದರಿಂದ ಬಹುಮತದ ಆಧಾರವನ್ನಿಟ್ಟುಕೊಳ್ಳುವುದಾದರೆ ರುದ್ರ ಸರ್ವೋತ್ತಮತ್ವವನ್ನೇ ಒಪ್ಪಿಕೊಳ್ಳಬೇಕಾಗುವುದು. ಶಾಸ್ತ್ರದಲ್ಲೂ ರುದ್ರಸರ್ವೋತ್ತಮತ್ವವನ್ನು ಪ್ರತಿಪಾದಿಸುವ ಪುರಾಣಗಳೇ ಹೆಚ್ಚು. ಅಲ್ಲದೆ ರುದ್ರಸರ್ವೋತ್ತಮತ್ವವನ್ನು ಸಾರುವ ಸ್ಕಾಂದಾದಿ ಪುರಾಣಗಳು ಪರಿಮಾಣ ದೃಷ್ಟಿಯಿಂದಲೂ ಬೃಹತ್ತಾದವುಗಳು. ಹೀಗಿರುವಾಗ ರುದ್ರಸರ್ವೋತ್ತಮತ್ವಕ್ಕೇ ಶಾಸ್ತ್ರೀಯ ಬಹುಮತವೂ ದೊರೆತಂತಾಗುವುದು ತಾನೆ? ಹೀಗಿದ್ದರೂ ಯಾಕೆ ವಿಷ್ಣು ಸರ್ವೋತ್ತಮತ್ವವನ್ನೇ ಒಪ್ಪಿಕೊಳ್ಳಬೇಕು? ಎಂಬ ಸಂದೇಹ ಸ್ವಾಭಾವಿಕ.

ಸಾಕ್ಷಿಗಳಲ್ಲಿ ಎಲ್ಲರೂ ಸಮಾನರಾಗಿದ್ದಲ್ಲಿ, ಯಾವ ಪಕ್ಷಕ್ಕೆ ಎಷ್ಟು ಸಾಕ್ಷಿಗಳಿದ್ದಾರೆ ಎಂಬುದಾಗಿ ಸಾಕ್ಷಿಗಳ ಸಂಖ್ಯೆಯನ್ನು, ಬಹುಮತವನ್ನು ಅವಲಂಬಿಸಲಾಗುವುದು. ಆದರೆ ಸಾಕ್ಷಿಗಳಲ್ಲಿ ವಿಶಿಷ್ಟತೆ ಇತ್ತೆಂದರೆ, ಆಗ ಸಾಕ್ಷಿಗಳ ಸಂಖ್ಯೆಗಿಂತಲೂ ಅವರ ವೈಶಿಷ್ಟ್ಯಕ್ಕೇ ಹೆಚ್ಚು ಮಹತ್ವವನ್ನು ನೀಡಲಾಗುವುದು.

ಶಾಸ್ತ್ರದಲ್ಲೆಲ್ಲ ಭಗವದ್ಗೀತೆಗೆ ತುಂಬ ಮಹತ್ವವನ್ನು ನೀಡಲಾಗುವುದು. ಪ್ರತಿಯೊಬ್ಬ ವೈದಿಕನೂ ಲೌಕಿಕನೂ ಗೀತೆಗೆ ಪ್ರಾಮಾಣ್ಯವನ್ನು ಒಪ್ಪಿರುವನು. 'ಶಾಸ್ತ್ರೇಷು ಭಾರತಂ ಸಾರಂ ತತ್ರ ನಾಮಸಹಸ್ರಕಮ್ । ವೈಷ್ಣವಂ ಕೃಷ್ಣಗೀತಾ ಚ.....' ಎಂಬುದಾಗಿ ಶಾಸ್ತ್ರಪ್ರಪಂಚದಲ್ಲೂ ಭಗವದ್ಗೀತೆಗೆ ಪ್ರಾಶಸ್ತ್ಯವನ್ನು ನೀಡಲಾಗಿದೆ. ಇಂತಹ ಗೀತೆಯನ್ನು ರುದ್ರಸರ್ವೋತ್ತಮನೇ? ವಿಷ್ಣುಸರ್ವೋತ್ತಮನೇ? –ಎಂದು ಸಿದ್ಧಾಂತಿಸಲು ಅವಲಂಬಿಸುವುದು ಎಲ್ಲರಿಗೂ ಸಮ್ಮತವಾದುದೇ. ಗೀತೆಯಲ್ಲಿ ಒಂದು ಕಡೆಯಲ್ಲೂ ರುದ್ರಸರ್ವೋತ್ತಮತ್ವದ ಪ್ರಸ್ತಾಪವೇ ಬರಲಿಲ್ಲ. ಬದಲಾಗಿ ಹೆಜ್ಜೆಹೆಜ್ಜೆಗೂ ವಿಷ್ಣುಸರ್ವೋತ್ತಮತ್ವವು ಪ್ರತಿಪಾದಿಸಲ್ಪಟ್ಟಿದೆ.

ಜೊತೆಗೆ, 'ದಿವ್ಯಂ ದದಾಮಿ ತೇ ಚಕ್ಷುಃ....' –ಎಂದು ಶ್ರೀಕೃಷ್ಣನಿಂದ ಅನುಗೃಹೀತವಾದ ದಿವ್ಯದೃಷ್ಟಿವುಳ್ಳ ಅರ್ಜುನನ ಪ್ರತ್ಯಕ್ಷವನ್ನೂ ಗೀತೆಯು ಉಲ್ಲೇಖಿಸಿದೆ.

ಪಿತಾಽಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ।
ನ ತ್ವತ್ ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯ ಪ್ರತಿಮಪ್ರಭಾವ ॥

ಎಂಬುದಾಗಿ ಅರ್ಜುನನು ಶ್ರೀಕೃಷ್ಣನನ್ನು ಸಂಬೋಧಿಸಿಯೇ ಅವನ ಸರ್ವೋತ್ತಮತ್ವವನ್ನು ಸ್ಪಷ್ಟವಾಗಿ ಸಾರಿರುವನು. ಅಲ್ಲದೆ, ಅರ್ಜುನನು ಶ್ರೀಕೃಷ್ಣನೇ ಪರಬ್ರಹ್ಮ, ಪರಾಶ್ರಯ ಎಂಬ ವಿಚಾರದಲ್ಲಿ– 'ಆಹುಸ್ತ್ವಾಂ ಋಷಯಃ ಸರ್ವೇ ದೇವರ್ಷಿರ್ನಾರದಸ್ತಥಾ । ಅಸಿತೋ ದೇವಲೋ ವ್ಯಾಸಃ.....' –ಎಂದು ನಾರದರೇ ಮೊದಲಾದ ಋಷಿಗಳ ಸಂವಾದವನ್ನು ಉಲ್ಲೇಖಿಸಿರುವನು. ಆದ್ದರಿಂದ ಸರ್ವಮಾನ್ಯವಾದ ಭಗವದ್ಗೀತೆಯೂ ಅದರಲ್ಲೂ ದಿವ್ಯದೃಷ್ಟಿವುಳ್ಳ ಅರ್ಜುನನೂ ಸ್ಪಷ್ಟವಾಗಿ ಶ್ರೀವಿಷ್ಣುಸರ್ವೋತ್ತಮತ್ವವನ್ನು ಸಾರುತ್ತಿರುವುದರಿಂದ ರುದ್ರಸರ್ವೋತ್ತಮತ್ವದಲ್ಲಿ ಬಹುಮತವಿರುವುದಾದರೂ ಅದು ಅಪ್ರಯೋಜಕವೆನಿಸುವುದು. 'ಅಸುರಾ ಬಹುಳ ಯಸ್ಮಾತ್.....' ಎಂದು ಶ್ರೀಮದಾಚಾರ್ಯರು ಸಂದೇಶಿಸಿರುವಂತೆ ಅಸುರಾವೇಶಗೊಂಡವರ ಸಂಖ್ಯೆ ಅಧಿಕವಾದುದರಿಂದಷ್ಟೇ ರುದ್ರಸರ್ವೋತ್ತಮತ್ವವು ಬಹುಜನಪ್ರಿಯವಾಗಿದ್ದು, 'ಬಹುಮತ'ವನ್ನು ಗಳಿಸಿದೆ.

ಶ್ರೀವಿಷ್ಣುವು ಸರ್ವೋತ್ತಮನಾಗಿರುವುದಾದರೆ ರುದ್ರನನ್ನು ತಪಸ್ಸುಮಾಡುವುದೇ ಮೊದಲಾದ ವಿಧಿನಿಷೇಧಗಳಿಗೆ ಪಾತ್ರರಾದ ಅಲ್ಪರ ಚಟುವಟಿಕೆಗಳನ್ನು ಯಾಕೆ ಮಾಡಬೇಕು? –ಎಂಬ ಆಕ್ಷೇಪಕ್ಕೂ ಗೀತಾಚಾರ್ಯ ಸಮಾಧಾನ ನೀಡಿರುವನು. 'ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ । ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ –ಎಂಬುದಾಗಿ ದೊಡ್ಡವರ ಆದರ್ಶವನ್ನು ಉಳಿದವರು ಅನುಕರಿಸುವುದರಿಂದ, ತಾಯಿ ರುದ್ರದೇವರ ಉಪಾಸನೆ ಮಾಡಿದಲ್ಲಿ ಉಳಿದವರೂ ಮನೋನಿಯಾಮಕ ರುದ್ರನನ್ನು ಉಪಾಸಿಸಿಯಾರು ಎಂಬ ಉದ್ದೇಶದಿಂದಷ್ಟೇ ರುದ್ರನನ್ನು ಉಪಾಸಿಸಿರುವುದು ಹೊರತು ಬೇರೆ ಯಾವುದೇ ಉದ್ದೇಶದಿಂದ ಅಲ್ಲ. ಯಾಕೆಂದರೆ –'ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ । ನಾನವಾಪ್ತಮವಾಪ್ತವ್ಯಂ.....' ಪರಿಪೂರ್ಣನಾದ ನಾನು ಮಾಡಬೇಕಾದದ್ದಾಗಲೀ ಹೊಂದಬೇಕಾದದ್ದಾಗಲೀ ಯಾವುದೂ ಇಲ್ಲ. ಹೀಗೆಂದು ಭಗವಂತನೇ ತನ್ನ ಪ್ರವೃತ್ತಿಗಳ ಹಿನ್ನೆಲೆಯನ್ನು ತಿಳಿಸಿ, ಆ ಪ್ರಯುಕ್ತ ತನ್ನ ಸರ್ವೋತ್ತಮತ್ವಕ್ಕೆ ಹಾನಿ ಇಲ್ಲ ಎಂದು ಸಂದೇಶಿಸಿರುವನು.

ರುದ್ರನನ್ನು ಸರ್ವೋತ್ತಮನೆಂದು ಉಪಾಸಿಸುವವರು ಹೆಚ್ಚು ಶ್ರೀಮಂತರಾಗಿದ್ದು ವಿಷ್ಣುಸರ್ವೋತ್ತಮತ್ವವನ್ನು ನಂಬಿರುವವರು ದರಿದ್ರರಾಗಿದ್ದಿರಬಹುದು. ಇದರಿಂದ ರುದ್ರನೇ ಸರ್ವೋತ್ತಮ, ವಿಷ್ಣು ಅಲ್ಲ– ಎಂದೇನೂ ತೀರ್ಮಾನಿಸುವಂತಿಲ್ಲ. 'ಯತ್ತದಗ್ರೇ ವಿಷಮಿವ ಪರಿಣಾಮೇಽಮೃತೋ ಪಮಮ್ । ತತ್ಸುಖಂ ಸಾತ್ವಿಕಂ ಪ್ರೋಕ್ತಂ....' ಎಂದಿರುವಂತೆ ಮೊದಲು ವಿಷದಂತೆ ಇದ್ದು ಮತ್ತೆ ಅಮೃತದಂತಿರುವ

ಸುಖ ಸಾತ್ವಿಕಸುಖ ಎನಿಸಿದ್ದು, ಶ್ರೀಹರಿಯು ತನ್ನನ್ನು ನಂಬಿರುವ ಭಕ್ತರು ಇಂತಹ ಸಾತ್ವಿಕ ಸುಖವನ್ನು ಪಡೆಯುವಂತೆ ಅನುಗ್ರಹಿಸುವನು. ಮೊದಲೇ ಸುಖಿಗಳಾಗಿದ್ದರೆ ಆ ಪ್ರಯುಕ್ತ ಅವರು ಗರ್ವಿಗಳಾಗಿ ಮೋಕ್ಷದಿಂದ ವಂಚಿತರಾದಾರೆಂದು, ಅವರಿಗೆ ದಾರಿದ್ರ್ಯಸ್ಥಿತಿ ಕೊಟ್ಟು ಮುಂದೆ ಮುಕ್ತಿಸುಖವನ್ನು ದಯಪಾಲಿಸುವನು. ರುದ್ರನಾದರೂ ಭೋಗಪ್ರದನಾಗಿದ್ದು...... ಯದಗ್ರೇಽಮೃತೋಪಮಮ್ ಪರಿಣಾಮೇ ವಿಷಮಿವ..... ಎಂದು ಆಪಾತತಃ ಅಮೃತದಂತಿರುವ ರಾಜಸಸುಖವನ್ನು ನೀಡುವನಾದರೂ ಆದ್ದರಿಂದಲೇ ತನ್ನ ಭಕ್ತರು ಸಾತ್ವಿಕಸುಖದಿಂದ ವಂಚಿತರಾಗುವಂತೆಯೂ ಮಾಡುವನು. ಆದ್ದರಿಂದ ಇದರಿಂದೇನೂ ರುದ್ರನು ಸರ್ವೋತ್ತಮನೆಂದು ಸಾಧಿಸುವಂತಿಲ್ಲ.

●

೩. ೯. ಭೇದಬೋಧಕವಾಕ್ಯಗಳಿಗೆ ಅಪೂರ್ವತೆ

ಪ್ರಸ್ತಾವ : ಜೀವ-ಬ್ರಹ್ಮ ಭೇದವು ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸಿದ್ಧವಾಗಿರುವುದರಿಂದ ಅಂತಹ ಭೇದವನ್ನು ಶಾಸ್ತ್ರವು ಪ್ರತಿಪಾದಿಸಿದಲ್ಲಿ ಶಾಸ್ತ್ರಕ್ಕೆ ಅಪೂರ್ವತೆ ಕೊಡಲಾರದು ಎಂದು ಕೆಲವರ ಆಕ್ಷೇಪ. ಆದರೆ ಜೀವಧರ್ಮಿಕ ಪರಮಾತ್ಮಪ್ರತಿಯೋಗಿಕ ಭೇದವು ನಮಗೆ ಸಿದ್ಧವಾಗುವುದಾದರೂ ಪರಮಾತ್ಮಧರ್ಮಿಕ ಜೀವಪ್ರತಿಯೋಗಿಕ ಭೇದವು ನಮಗೆ ಸಿದ್ಧವಾಗಿಲ್ಲ. ಯಾಕೆಂದರೆ ಭೇದಜ್ಞಾನವನ್ನು ಕುರಿತು ಧರ್ಮಿಜ್ಞಾನವು ಕಾರಣವಾಗಿದ್ದು ಪರಮಾತ್ಮನ ಜ್ಞಾನವಿಲ್ಲದ ಪ್ರಯುಕ್ತ ಅವನಲ್ಲಿರುವ ಭೇದವು ನಮಗೆ ಅಸಿದ್ಧ. 'ಉತ್ತಮ ಪುರುಷಸ್ತ್ವನ್ಯಃ....' ಇತ್ಯಾದಿ ಕಡೆಗಳಲ್ಲಿ ಅಂತಹ ಪರಮಾತ್ಮಾನುಯೋಗಿಕ ಭೇದವು ಪ್ರತಿಪಾದಿತವಾಗಿದ್ದು, ಆ ಪ್ರಯುಕ್ತ ಶಾಸ್ತ್ರಕ್ಕೆ ಅಪೂರ್ವತೆ ಇಲ್ಲ ಎನ್ನುವಂತಿಲ್ಲ ತಾನೇ?

ಆಕ್ಷೇಪ : ನಿಜ. ಪರಮಾತ್ಮ ಅಪ್ರತ್ಯಕ್ಷನಾದುದರಿಂದ ಅವನಲ್ಲಿರುವ ಜೀವಪ್ರತಿಯೋಗಿಕ ಭೇದವು ಅಸಿದ್ಧ. ಆದರೆ 'ನಾಹಮೀಶ್ವರಃ' -ನಾನು ಈಶ್ವರನಲ್ಲ ಎಂಬ ಪ್ರತ್ಯಕ್ಷದಿಂದ ಜೀವಾನುಯೋಗಿಕ ಪರಮಾತ್ಮ ಪ್ರತಿಯೋಗಿಕ ಭೇದವು ಸಿದ್ಧವಾಗಿರುವುದರಿಂದ ಅರ್ಥಾತ್ ಪರಮಾತ್ಮಾನುಯೋಗಿಕ ಜೀವಪ್ರತಿಯೋಗಿಕ ಭೇದವೂ ಸಿದ್ಧಿಸುವುದು. ಚೈತ್ರನು ಮೈತ್ರನಿಗೆ ಅಣ್ಣ ಎಂದು ಸಿದ್ಧವಾದಲ್ಲಿ, ಅರ್ಥಾತ್ ಮೈತ್ರನು ಚೈತ್ರನಿಗೆ ತಮ್ಮ ಎಂದು ಸಿದ್ಧಿಸುವುದಿಲ್ಲವೇ? ಅಂತೆಯೇ. ಆದುದರಿಂದ ಅಂತಹ ಪರಮಾತ್ಮಾನುಯೋಗಿಕ ಭೇದವನ್ನು ಪ್ರತಿಪಾದಿಸುವ ವಾಕ್ಯಗಳಲ್ಲೂ ಅಪೂರ್ವತೆ ಇರಲಾರದು.

ಸಮಾಧಾನ : ಜೀವಧರ್ಮಿಕ ಪರಮಾತ್ಮಪ್ರತಿಯೋಗಿಕಭೇದದಿಂದ ಪರಮಾತ್ಮಧರ್ಮಿಕ ಜೀವಪ್ರತಿಯೋಗಿಕ ಭೇದವು ಸಿದ್ಧಿಸುವುದು ನಿಜ. ಯಾವ ಪ್ರಮಾಣದಿಂದ? ಅನುಮಾನದಿಂದ. 'ಪರಮಾತ್ಮಾ ಜೀವಪ್ರತಿಯೋಗಿಕ ಭೇದಾನುಯೋಗೀಜೀವಾನುಯೋಗಿಕ ಭೇದಪ್ರತಿಯೋಗಿತ್ವಾತ್' -ಎಂಬ ಅನುಮಾನದಿಂದಷ್ಟೇ ಸಿದ್ಧಿಸುವುದು.

ಆದರೆ ಈ ಅನುಮಾನಕ್ಕೆ ಪ್ರಾಮಾಣ್ಯ ಬರಲು ಕಾರಣ ಶ್ರುತಿಯನ್ನು ಪರಂಪರಯಾ ಉಪಜೀವಿಸಿಕೊಂಡಿರುವುದೇ ಆಗಿದೆ. 'ಯಃ ಸರ್ವಜ್ಞ ಸರ್ವವಿತ್.....' ಇತ್ಯಾದಿ ಶ್ರುತಿಗಳಲ್ಲಿ ಸಿದ್ಧನಾದ ಪರಮಾತ್ಮನನ್ನು ಆಧರಿಸಿರುವ ಪ್ರತ್ಯಕ್ಷವನ್ನು ಇಟ್ಟುಕೊಂಡು ಈ ಅನುಮಾನ ಹೊರಟಿರುವುದು ತಾನೇ? ಹೀಗೆ ತನ್ನನ್ನು ಉಪಜೀವಿಸಿಕೊಂಡು ಹೊರಟ ಪ್ರಮಾಣದಿಂದ ಸಿದ್ಧವಾದ ಅರ್ಥವನ್ನು ಬೋಧಿಸಿದರೂ ಉಪಜೀವ್ಯ ಪ್ರಮಾಣದ ಅಪೂರ್ವತೆ ಹೋಗುವುದಿಲ್ಲ ಎನ್ನುವುದನ್ನು ಒಪ್ಪಲೇಬೇಕು. ಇಲ್ಲದಿದ್ದಲ್ಲಿ ಶ್ರುತಿಯು ಈಶ್ವರನನ್ನು, ಧರ್ಮಾಧರ್ಮ ಸ್ವರೂಪವನ್ನು ಬೋಧಿಸುವುದೆಂದಾಗಲೂ ಅದರಲ್ಲಿ ಅಪೂರ್ವತೆ ಇಲ್ಲ ಎಂದಾದೀತು! ಯಾಕೆಂದರೆ 'ಕ್ಷಿತ್ಯಾದಿಕಂ ಸಕರ್ತೃಕಂ ಕಾರ್ಯತ್ವಾತ್' ಎಂಬ ಅನುಮಾನದಿಂದ ಈಶ್ವರ ಸಿದ್ಧನಾಗಿರುವವನು ತಾನೇ! ಮನ್ವಾದಿ ಸ್ಮೃತಿಗಳಿಂದಲೇ ಧರ್ಮಾಧರ್ಮ ಸ್ವರೂಪವು ಸಿದ್ಧವಾಗಿದೆ ತಾನೇ? ಹೀಗೆ ಅನುಮಾನದಿಂದ ಸಿದ್ಧನಾದ ಈಶ್ವರನನ್ನು ಬೋಧಿಸಿದರೂ ಶ್ರುತಿಯ ಅಪೂರ್ವತೆ ಹೋಗುವುದಿಲ್ಲ. ಮನ್ವಾದಿ ಸ್ಮೃತಿಗಳಲ್ಲಿ ಸಿದ್ಧವಾದ ಧರ್ಮವನ್ನು ಬೋಧಿಸಿದರೂ ಶ್ರುತಿಯ ಅಪೂರ್ವತೆ ಹೋಗುವುದಿಲ್ಲ ಎನ್ನಬೇಕಾದರೆ –ಸ್ವಾನುಪಜೀವಿನಾ ಮಾನಾಂತರೇಣ ಅಗ್ರಾಹ್ಯಾರ್ಥಕತ್ವಂ ಅಪೂರ್ವತ್ವಂ –ತನ್ನನ್ನು ಉಪಜೀವಿಸಿಕೊಂಡಿರದ ಮತ್ತೊಂದು ಪ್ರಮಾಣದಿಂದ ಸಿದ್ಧವಾಗದ ಅರ್ಥವನ್ನು ಬೋಧಿಸಿದಾಗ ಅಪೂರ್ವತೆ ಸಿದ್ಧಿಸುವುದು ಎಂದು ಒಪ್ಪಬೇಕು. ಆದುದರಿಂದ ತನ್ನನ್ನು ಉಪಜೀವಿಸಿಕೊಂಡಿರುವ ಪ್ರಮಾಣದಿಂದ ಸಿದ್ಧವಾದ ಅರ್ಥವನ್ನು ಬೋಧಿಸಿದರೂ ಉಪಜೀವ್ಯ ಪ್ರಮಾಣದ ಅಪೂರ್ವತೆ ಹೋಗಲಾರದು. ಆದುದರಿಂದ ಪ್ರಕೃತ ನೀವು ಅನುಮಾನದಿಂದ ಪರಮಾತ್ಮಧರ್ಮಿಕ ಭೇದವು ಸಿದ್ಧವಾಗುವುದೆಂದು ಹೇಳುವ ಪ್ರಯುಕ್ತ ಆ ಅನುಮಾನವು ಶ್ರುತಿಯನ್ನು ಪರಂಪರಯಾ ಉಪಜೀವಿಸಿಕೊಂಡೇ ಇರುವುದರಿಂದ, ಅಂತಹ ಅನುಮಾನದಿಂದ ಸಿದ್ಧವಾದ ಅರ್ಥವನ್ನು ಬೋಧಿಸಿದಾಗ ಶ್ರುತಿಯ ಅಪೂರ್ವತೆ ಹೋಗಲಾರದು.

ಆಕ್ಷೇಪ : ನಿಜ, ಭೇದವಾಕ್ಯಗಳಿಗೂ ಅಪೂರ್ವತೆ ಇದೆ. ಆ ಪ್ರಯುಕ್ತ ಭೇದದಲ್ಲಿ ಅವುಗಳಿಗೆ ತಾತ್ಪರ್ಯವಿರುವುದರಿಂದಲೇ ಅವು ವ್ಯಾವಹಾರಿಕ ಭೇದವನ್ನು ಸಾಧಿಸಿ ಪ್ರಮಾಣವೆನಿಸಿವೆ. ನಮ್ಮ ಪ್ರಕಾರ ಪ್ರಾತಿಭಾಸಿಕ ವಸ್ತುವನ್ನು ಪ್ರತಿಪಾದಿಸಿದರಷ್ಟೇ ಅಪ್ರಾಮಾಣ್ಯ. ಭೇದವಾಕ್ಯಗಳು ಪ್ರಾತಿಭಾಸಿಕ ಭೇದವನ್ನು ಪ್ರತಿಪಾದಿಸಿದಲ್ಲಿ ಅಪ್ರಮಾಣವೆನಿಸಿಯಾವು! ಆದರೆ ಹಾಗೆ ಒಪ್ಪದೆ, ಅವು ವ್ಯಾವಹಾರಿಕ ಭೇದವನ್ನು ಪ್ರತಿಪಾದಿಸುತ್ತಿದ್ದು ಪ್ರಮಾಣಗಳಾಗಿವೆ ಎಂದೇ ನಾವು ಒಪ್ಪಿರುವೆವು.

ಸಮಾಧಾನ : ವೇದವಾಕ್ಯಗಳಿಗೂ ಅಪೂರ್ವತೆ ಇದೆ. ಭೇದಬೋಧನೆಯಲ್ಲಿ ತಾತ್ಪರ್ಯವಿದೆ ಎಂದಾದರೆ, ಅವುಗಳಿಂದ ಪ್ರತಿಪಾದಿತಗಳಾದ ಭೇದಗಳು ಯಾಕೆ ಪಾರಮಾರ್ಥಿಕಗಳೆನಿಸಲಾರವು? ಅವು ವ್ಯಾವಹಾರಿಕಗಳೆಂದು ಯಾಕೆ ಹೇಳಬೇಕು?

ಆಕ್ಷೇಪ : 'ತತ್ತ್ವಮಸಿ' ಮುಂತಾದ ಅಭೇದ ಬೋಧಕವಾಕ್ಯಗಳ ವಿರೋಧವಿರುವುದರಿಂದ 'ದ್ವಾ ಸುಪರ್ಣಾ' ಇತ್ಯಾದಿ ಭೇದಬೋಧಕ ವಾಕ್ಯಗಳು ಪಾರಮಾರ್ಥಿಕ ಭೇದವನ್ನು ಬೋಧಿಸುವಂತಿಲ್ಲ. ಪರಸ್ಪರ ವಿರುದ್ಧಾರ್ಥಗಳನ್ನು ಬೋಧಿಸಿದಲ್ಲಿ ಅಪ್ರಾಮಾಣ್ಯ ಬಂದೀತು! ಅದಕ್ಕಾಗಿ 'ತತ್ತ್ವಮಸಿ' ವಾಕ್ಯವು ಪಾರಮಾರ್ಥಿಕವಾದ ಅಭೇದವನ್ನು ಬೋಧಿಸುತ್ತಿರಲು 'ದ್ವಾ ಸುಪರ್ಣಾ' ವಾಕ್ಯವು ವ್ಯಾವಹಾರಿಕ ಭೇದವನ್ನು ಪ್ರತಿಪಾದಿಸುತ್ತಿದೆ –ಎಂದು ಒಪ್ಪಲೇ ಬೇಕು ತಾನೇ?

ಸಮಾಧಾನ : ನಿಜ, 'ತತ್ತ್ವಮಸಿ' ವಾಕ್ಯವು ಅಭೇದವನ್ನು ಬೋಧಿಸುತ್ತಿದ್ದಲ್ಲಿ ಅದರ ವಿರೋಧ ಪರಿಹಾರಕ್ಕಾಗಿ 'ದ್ವಾಸುಪರ್ಣಾ' ವಾಕ್ಯ ವ್ಯಾವಹಾರಿಕ ಭೇದವನ್ನು ಪ್ರತಿಪಾದಿಸುತ್ತಿದೆ ಎನ್ನಬೇಕು. ಆದರೆ 'ತತ್ತ್ವಮಸಿ' ವಾಕ್ಯವು ಮುಖ್ಯ ವೃತ್ತಿಯನ್ನು ಆಶ್ರಯಿಸಿ ಭೇದವನ್ನೇ ಪ್ರತಿಪಾದಿಸುತ್ತಿದೆ ಎಂದು ಬರುವುದು ತಾನೇ? 'ಸುಪಾಂ ಸುಲುಕ್, ಎಂಬ ಸೂತ್ರದ ಆಧಾರದಲ್ಲಿ 'ತತ್ತ್ವಮಸಿ' ಎಂಬಲ್ಲಿಯ 'ತತ್' ಶಬ್ದಕ್ಕೆ ತೇನ, ತಸ್ಮೈ, ತಸ್ಮಾತ್, ತಸ್ಯ, ತಸ್ಮಿನ್ ಮುಂತಾದ ಅರ್ಥವನ್ನಿಟ್ಟುಕೊಂಡು ಭೇದ ಪದಾರ್ಥವನ್ನೇ ಹೇಳಲು ಬರುವುದು. ಹೀಗಿರುವಾಗ ಅಮುಖ್ಯವಾದ ಜಹದಜಹಲ್ಲಕ್ಷಣಾವೃತ್ತಿಯನ್ನು ಆಶ್ರಯಿಸಿ 'ತತ್' ಶಬ್ದ ಕೇವಲ ಚೇತನ ಪರಂ, ತ್ವಂ ಶಬ್ದವೀ ಕೇವಲ ಚೇತನ ಪರ, ಆ ಎರಡು ಚೇತನಗಳಿಗೂ ಐಕ್ಯವನ್ನು ಹೇಳಲಾಗುವುದೆಂದು ಯಾಕೆ ಹೇಳಬೇಕು?

ಆಕ್ಷೇಪ : 'ತತ್ತ್ವಮಸಿ' ಎಂಬ ವಾಕ್ಯಕ್ಕೆ ಅರ್ಥೈಸುವಾಗ ಜಹದಜಹಲ್ಲಕ್ಷಣಾ ವೃತ್ತಿಯನ್ನು ಆಶ್ರಯಿಸುವೆವು. ತಾವತಾ ಅಮುಖ್ಯವಾದ ವೃತ್ತಿಯನ್ನು ಆಶ್ರಯಿಸಿದ ಪ್ರಯುಕ್ತ ಏನೂ ನ್ಯೂನತೆ ಇಲ್ಲ. ಯಾಕೆಂದರೆ ಶಾಸ್ತ್ರದ ತಾತ್ಪರ್ಯ ವಿಷಯೀಭೂತವಾದ ಪ್ರಮೇಯದಲ್ಲಿ ಲಕ್ಷಣಾವೃತ್ತಿಯನ್ನು ಆಶ್ರಯಿಸುವುದೂ ದೋಷವೆನಿಸುವುದಿಲ್ಲ. ಐಕ್ಯವು ಶಾಸ್ತ್ರದ ತಾತ್ಪರ್ಯವಿಷಯವಾದುದು. 'ಏಕಮೇವಾದ್ವಿತೀಯಂ ಬ್ರಹ್ಮ' ಎಂಬ ಉಪಕ್ರಮ ವಾಕ್ಯವೇ ಮುಂತಾದ ತಾತ್ಪರ್ಯನಿರ್ಣಾಯಕ ಲಿಂಗಗಳಿಂದಾಗಿ ಐಕ್ಯವು ಶಾಸ್ತ್ರ ತಾತ್ಪರ್ಯ ವಿಷಯ ಎಂದು ಸಿದ್ಧಿಸುವುದು. ಅಂತಹ ಪ್ರಮೇಯದ ವಿಷಯದಲ್ಲಿ ಲಕ್ಷಣಾವೃತ್ತಿಯನ್ನು ಆಶ್ರಯಿಸುವುದೂ ಭೂಷಣವೇ.

ಸಮಾಧಾನ : 'ಏಕಮೇವಾದ್ವಿತೀಯಂ ಬ್ರಹ್ಮ' –ಎಂಬ ಉಪಕ್ರಮ ವಾಕ್ಯದ ಏಕಾದಿ ಶಬ್ದಗಳಿಗೂ ಸಜಾತೀಯ ಭೇದರಹಿತಾದ್ಯರ್ಥಗಳಲ್ಲಿ ಲಕ್ಷಣಾ ಹೇಳಿರುವಿರಿ ತಾನೇ? ಇಲ್ಲಿ ಮತ್ತೊಂದು ಉಪಕ್ರಮ ವಾಕ್ಯವಿಲ್ಲದ ಪ್ರಯುಕ್ತ ಶಾಸ್ತ್ರಕ್ಕೆ ತಾತ್ಪರ್ಯ ವಿಷಯೀಭೂತ ಪ್ರಮೇಯದಲ್ಲಿ ಲಕ್ಷಣಾ ಎನ್ನುವುದರ ಮೂಲಕ ನ್ಯೂನತೆಯನ್ನು ಪರಿಹರಿಸಿಕೊಳ್ಳಲಾಗದು.

ಆಕ್ಷೇಪ : ತಾವೂ ಇಲ್ಲಿಯ ಅದ್ವಿತೀಯಾದಿ ಶಬ್ದಗಳಿಗೆ ಲಕ್ಷ್ಯಾರ್ಥವನ್ನೇ ಹೇಳಿರುವುದು ತಾನೇ? ಅದ್ವಿತೀಯ ಶಬ್ದಕ್ಕೆ ಸದೃಶ ದ್ವಿತೀಯರಹಿತ ಎಂಬ ತಮ್ಮ ಅರ್ಥವೂ ಶಕ್ಯಾರ್ಥವಲ್ಲ. ಆದುದರಿಂದ ಶಕ್ಯಾರ್ಥ ಹೇಳಲು ಬರುವಾಗ ಲಕ್ಷ್ಯಾರ್ಥವನ್ನು

ಹೇಳಿದರಷ್ಟೇ ನ್ಯೂನತೆ. ತಾವೂ ಲಕ್ಷ್ಯಾರ್ಥವನ್ನೇ ಹೇಳುವುದರಿಂದ ನಾವು ಲಕ್ಷಣಾ ವೃತ್ತಿಯನ್ನು ಆಶ್ರಯಿಸುವೆವೆಂದು ನ್ಯೂನತೆ ಹೇಳಲಾಗದು.

ಸಮಾಧಾನ : ಇರಲಿ. ಅದ್ವಿತೀಯ ಶಬ್ದಕ್ಕೆ ನೀವೂ ನಾವೂ ಲಕ್ಷ್ಯಾರ್ಥವನ್ನೇ ಹೇಳುವೆವು. ಆದರೆ ಸದೃಶದ್ವಿತೀಯರಹಿತ ಎಂಬ ನಮ್ಮ ಅರ್ಥದಲ್ಲಿ ನಿರೂಢ ಲಕ್ಷಣಾ ಇದೆ. ಭಾಷ್ಯಕಾರ ಪತಂಜಲಿಯು 'ಅಸ್ಯ ಗೋರ್ದ್ವಿತೀಯೋಽನ್ವೇಷ್ಟವ್ಯಃ' ಮುಂತಾದ ಪ್ರಯೋಗಗಳಲ್ಲಿ ದ್ವಿತೀಯ ಶಬ್ದವನ್ನು ಸದೃಶದ್ವಿತೀಯಾರ್ಥದಲ್ಲೇ ಬಳಸಲಾಗಿದೆ ಎಂದು ಒಪ್ಪಿರುವನು. ಹೀಗೆ ಅದ್ವಿತೀಯ ಶಬ್ದಕ್ಕೆ ನಾವು ಹೇಳುವ ಅರ್ಥವೂ ನೀವು ಹೇಳುವ ಅರ್ಥವೂ ಸಂಭವಿಸುವಾಗ, ಅಲ್ಲದೆ ನಾವು ಹೇಳುವ ಅರ್ಥದಲ್ಲಿ ನಿರೂಢಲಕ್ಷಣಾ ಇರುವುದಾದರೂ ನೀವು ಹೇಳುವ ಅರ್ಥವನ್ನೇ ಯಾಕೆ ಒಪ್ಪಬೇಕು? ಅದು ಶಾಸ್ತ್ರದ ತಾತ್ಪರ್ಯಕ್ಕೆ ವಿಷಯವಾದುದೆಂದು ನಿರ್ಣಯಿಸು ವುದಾದರೂ ಹೇಗೆ?

ಆಕ್ಷೇಪ : ಭಾಷ್ಯಕಾರ ದ್ವಿತೀಯ ಶಬ್ದಕ್ಕೆ ಸದೃಶದ್ವಿತೀಯ ಎಂಬಾರ್ಥವನ್ನು ಹೇಳಿದಾಕ್ಷಣ ನಾವು ದ್ವಿತೀಯ ಶಬ್ದಕ್ಕೆ ಆ ಅರ್ಥದಲ್ಲಿ ನಿರೂಢಲಕ್ಷಣಾ ಇದೆ ಎಂದು ಒಪ್ಪಬೇಕಾಗಿಲ್ಲ.

ಶಾಸ್ತ್ರದಲ್ಲಿ ಬ್ರಹ್ಮನನ್ನು 'ನಿರ್ಗುಣ' ಎಂದು ಅಲ್ಲಲ್ಲಿ ಹೇಳಲಾಗಿದೆ. ನಿರ್ಗುಣ ಎಂದರೆ ಗುಣತ್ವಾವಚ್ಛಿನ್ನಪ್ರತಿಯೋಗಿತಾಕಾಭಾವವಾನ್ –ಯಾವ ಗುಣವೂ ಇಲ್ಲದ ವನು ಎಂದೇ ಅರ್ಥ ಹೊರತು ನೀವು ಹೇಳುವಂತೆ ಪ್ರಾಕೃತ ಗುಣಗಳು ಇಲ್ಲದವ ನೆಂದು ಅರ್ಥದಲ್ಲಿ ಸಂಕೋಚ ಮಾಡುವಂತಿಲ್ಲ. ಆದುದರಿಂದಲೇ 'ತತ್ವಮಸಿ' ಎಂಬ ವಾಕ್ಯದ 'ತತ್' ಪದಕ್ಕೆ ಸರ್ವಜ್ಞತ್ವಾದಿ ವಿಶಿಷ್ಟ ಎಂಬ ಅರ್ಥವನ್ನು ಒಪ್ಪಲಾಗದು. ನಾವು ಹೇಳುವಂತೆ ಲಕ್ಷಣಾವೃತ್ತಿಯನ್ನು ಆಶ್ರಯಿಸಿ, ಕೇವಲ ಚೇತನ ಎಂಬ ಅರ್ಥವನ್ನು ಒಪ್ಪಬೇಕು.

ಸಮಾಧಾನ : 'ನಿರ್ಗುಣ' ಶಬ್ದದ ಅರ್ಥದಲ್ಲಿ ಸಂಕೋಚಮಾಡದೆ ಯಾವುದೇ ಗುಣವು ಬ್ರಹ್ಮನಲ್ಲಿ ಇಲ್ಲ ಎನ್ನುವುದಾದರೆ, ಅವನಲ್ಲಿ ಐಕ್ಯವನ್ನು ಒಪ್ಪಲಾಗದು. ಹೀಗಿರುವಾಗ 'ತತ್ವಮಸಿ' ವಾಕ್ಯವು ಬ್ರಹ್ಮನಲ್ಲಿ ಐಕ್ಯವನ್ನು ಬೋಧಿಸುವುದಾದರೂ ಹೇಗೆ? ಅದು ಐಕ್ಯವನ್ನು ಬೋಧಿಸದಿದ್ದಲ್ಲಿ, ಭೇದವನ್ನು ಬೋಧಿಸುವ 'ದ್ವಾ ಸುಪರ್ಣಾ' ಮುಂತಾದ ವಾಕ್ಯಗಳಿಗೆ ಆ ವಾಕ್ಯದ ವಿರೋಧವಿಲ್ಲ ಎಂದಂತಾಯಿತು. ಆದುದರಿಂದ ಅವು ಪಾರಮಾರ್ಥಿಕ ಭೇದವನ್ನೇ ಬೋಧಿಸಬಹುದು. ನೀವು ಹೇಳುವಂತೆ ಅವು ವ್ಯಾವಹಾರಿಕ ಭೇದವನ್ನಷ್ಟೇ ಬೋಧಿಸುತ್ತಿವೆ –ಎನ್ನುವುದರ ಮೂಲಕ ಅವುಗಳ ಪ್ರಾಮಾಣ್ಯವನ್ನು ಕೂಡಿಸುವ ಆವಶ್ಯಕತೆ ಇಲ್ಲ.

೩. ೧೦. ಪ್ರಮೇಯ ನವಮಾಲಿಕೆ

ಶ್ರೀ ವ್ಯಾಸರಾಜತೀರ್ಥರಿಂದ ರಚಿತವೆಂದು ಪ್ರಸಿದ್ಧವಿರುವ 'ಶ್ರೀಮನ್ಮಧ್ವ ಮತೇ.....' ಎಂಬ ಶ್ಲೋಕವು ಮೇಲ್ನೋಟಕ್ಕೆ ಸರಳವಾಗಿ ಕಾಣುವುದು. ಆದರೆ ಚೆನ್ನಾಗಿ ಪರಿಶೀಲಿಸಿದಾಗ ಅದರಲ್ಲಿ ಪ್ರತಿಪಾದಿಸಿರುವ ಶ್ರೀಮದಾಚಾರ್ಯರ ತತ್ತ್ವಗಳ ಅಸಾಧಾರಣತೆ ಹಾಗೂ ನಮ್ಮ ಸಾಧನಾನುಷ್ಠಾನದಲ್ಲಿ ಅವುಗಳ ಆವಶ್ಯಕತೆಯು ಸ್ಪಷ್ಟವಾಗುವುದು.

ಗೀತೆಯ ಆಧಾರ : ಇಲ್ಲಿ ಪ್ರತಿಪಾದಿತಗಳಾದ ಒಂಭತ್ತು ಮಾಧ್ವಪ್ರಮೇಯಗಳೂ ವೇದಾದಿ ಸಕಲ ಸಚ್ಛಾಸ್ತ್ರಗಳಿಂದಲೂ ಪ್ರತಿಪಾದ್ಯಗಳಾಗಿವೆ. ಆದರೆ ಅವುಗಳ ಆಧಾರ ವಾಗಿ ಗೀತೆಯನ್ನು ಉದಾಹರಿಸುವುದೇ ಸಮುಚಿತ. ಯಾಕೆಂದರೆ ಭಗವದ್ಗೀತೆಯು ಅನೇಕ ದೃಷ್ಟಿಗಳಿಂದ ವೇದಾದಿ ಸಚ್ಛಾಸ್ತ್ರಗಳಲ್ಲೆಲ್ಲ ಉತ್ತಮವೆನಿಸಿದೆ. ವೇದಾದಿ ಸಕಲ ಶಸ್ತ್ರಾರ್ಥವನ್ನೂ ಒಳಗೊಂಡ ಗೀತೆಯು ತತ್ತ್ವಗಳನ್ನು ಪ್ರತ್ಯಕ್ಷವಾಗಿ ಕಾಣುವ ಶ್ರೀಕೃಷ್ಣಪರಮಾತ್ಮನಿಂದ ಉಪದಿಷ್ಟವಾದುದು. ಭಗವಂತನು ತಾನು ಕಂಡಿರುವುದಷ್ಟೇ ಅಲ್ಲದೆ, ಅರ್ಜುನನಿಗೆ 'ದಿವ್ಯಂ ದದಾಮಿ ತೇ ಚಕ್ಷುಃ' ಎಂದು ದಿವ್ಯ ಚಕ್ಷಸ್ಸನ್ನು ಅನುಗ್ರಹಿಸಿ, ತಾನು ನೀಡಿದ ಉಪದೇಶವನ್ನು ಅರ್ಜುನನು ಸಾಕ್ಷಾತ್ಕರಿಸಿಕೊಳ್ಳು ವಂತೆಯೂ ಮಾಡಿರುವನು. ಅರ್ಜುನನಷ್ಟೇ ಅಲ್ಲ, 'ದೃಷ್ಟ್ವಾದ್ಭುತಂ ರೂಪಮುಗ್ರಂ ತವೇದಂ ಲೋಕತ್ರಯಂ ಪ್ರವ್ಯಥಿತಂ ಮಹಾತ್ಮನ್' –ಎಂದಿರುವಂತೆ ಮೂರು ಲೋಕಗಳಲ್ಲಿಯ ಜ್ಞಾನಿಗಳೆಲ್ಲರೂ ಪ್ರತ್ಯಕ್ಷವಾಗಿ ಕಂಡಿದ್ದಾರೆ. ವೇದದಲ್ಲಿ ತತ್ತ್ವಗಳು ಅಸ್ಪಷ್ಟವಾಗಿ ಪ್ರತಿಪಾದಿತಗಳಾಗಿದ್ದರೆ, ಇಲ್ಲಿ ಸ್ಪಷ್ಟವಾಗಿ ಸರಳವಾಗಿ ಸಂದೇಶಿಸ ಲ್ಪಟ್ಟಿವೆ. ಆದ್ದರಿಂದ ನವ ಪ್ರಮೇಯಗಳನ್ನು ಗೀತೆಯ ಆಧಾರದೊಂದಿಗೇ ಸಮರ್ಥಿ ಸುವುದು ಯುಕ್ತ.

ಹರಿಃ ಪರತರ : ಮಣಿಗಳ ಮಾಲೆಯಲ್ಲಿ ನಾಯಕಮಣಿ ಎಂದಿರುವಂತೆ ನವ ಪ್ರಮೇಯಗಳ ಮಾಲಿಕೆಯಲ್ಲಿ ಮೊದಲನೆಯದಾಗಿ ಉಲ್ಲೇಖಿಸಲ್ಪಟ್ಟ 'ಹರಿಃ ಪರತರಃ' –ವಿಷ್ಣುಸರ್ವೋತ್ತಮತ್ವವು ನಾಯಕಮಣಿ ಎನಿಸಿದೆ.

ವಿಷ್ಣುಸರ್ವೋತ್ತಮತ್ವ ಎಂದೇ ಸಾಮಾನ್ಯವಾಗಿ ಪ್ರಸಿದ್ಧವಾಗಿರುವುದಾದರೂ ಇಲ್ಲಿ 'ಹರಿಃ ಪರತರಃ' ಎಂದು ಹರಿ ಶಬ್ದದ ಉಲ್ಲೇಖದಲ್ಲಿ ಔಚಿತ್ಯವಿದೆ. ಪಾಪವನ್ನು ಅಪಹರಿಸುವವನು (ಹರತೀತಿ) ಎಂಬ ಅರ್ಥದಲ್ಲಿ ಭಗವಂತನು ಹರಿ ಎನಿಸುವಂತೆ ರುದ್ರನೂ ಹರ ಎನಿಸಿರುವನು. ಹರ ಶಬ್ದವು ಅಕಾರಾಂತವಾಗಿದ್ದರೆ ಹರಿ ಶಬ್ದವು ಇಕಾರಾಂತವಾಗಿದೆ. ಇಕಾರವಾದರೂ ವರ್ಣಮಾಲೆಯಲ್ಲಿ ಮೂರನೆಯ ವರ್ಣ, ಮೂರನೆಯ ವರ್ಣವಾಗಿರುವ ಇಕಾರವು 'ತೃತೀಯೋಽತಿಶಯೇ' ಎಂಬ ಸೂತ್ರ ಪ್ರಕಾರ ಹರ ಎನಿಸುವ ರುದ್ರನಿಗಿಂತ ಹರಿ ಎನಿಸುವ ಭಗವಂತನು ಉತ್ತಮ ಎಂದು ಸೂಚಿಸಿಕೊಡುವುದು. ಇದರಿಂದ ಸರ್ವೋತ್ತಮತ್ವಸಾಧನೆಗೆ ಪುಷ್ಟಿ ದೊರೆತಂತಾಗು ವುದು. ವೇದಪಠನ, ಅಧ್ಯಯನ, ಅಧ್ಯಾಪನಾದಿಗಳ ಆರಂಭದಲ್ಲಿ 'ಹರಿಃ ಓಂ'

ಎಂದು ಎಲ್ಲರೂ ಹೇಳುವ ಸಂಪ್ರದಾಯವಿದೆ. ಹರಿಃ ಓಂ ಎಂದು ಪಠಿಸುವವರೆಲ್ಲ ಹರಿಗೆ ಓಂಕಾರವಾಚ್ಯತ್ವವನ್ನು, ಓಂಕಾರವಾಚ್ಯತ್ವವಿದ್ದಲ್ಲಿ ಸಮಗ್ರ ವೈದಿಕವಾಙ್ಮಯ ವಾಚ್ಯತ್ವವನ್ನೂ ಸೂಚಿಸಿಕೊಟ್ಟಂತಾಗುವುದು. ಇದರಿಂದಾಗಿ ಸರ್ವೋತ್ತಮತ್ವವನ್ನು ಸಮರ್ಥಿಸಿದಂತಾಗುವುದು.

'ಇಂದ್ರೋ ಮಾಯಾಭಿಃ ಪುರುರೂಪ ಈಯತೇ' ಎಂಬುದಾಗಿ ಭಗವಂತನು ಸ್ವೇಚ್ಛೆಯಿಂದ ಅನೇಕರೂಪವುಳ್ಳವನಾಗುವನೆಂದು ತಿಳಿಸುವ ವೇದವು ಆ ಎಲ್ಲ ರೂಪಗಳು 'ಹರಯಃ ಶತಾದಶ' ಎಂದು ಹರಿ ಎನಿಸಿದೆ ಎಂದಿದೆ. ಆದ್ದರಿಂದ ಭಗವಂತನ ರೂಪಗಳಿಗೆಲ್ಲ 'ಹರಿ' ಎಂಬ ಹೆಸರಿರುವುದರಿಂದಲೂ ಇಲ್ಲಿ ಭಗವಂತನ ಆ ಎಲ್ಲ ರೂಪಗಳ ಪರಾಮರ್ಶಕ್ಕಾಗಿ 'ಹರಿ' ಹೆಸರನ್ನೇ ಉಲ್ಲೇಖಿಸಲಾಗಿದೆ. ಇಲ್ಲಿ ಹರಿಸರ್ವೋತ್ತಮತ್ವದ ಜೊತೆಗೆ ವಾಯು ಜೀವೋತ್ತಮತ್ವವನ್ನೂ ಹೇಳಬೇಕಾಗಿದೆ. ಹರಿ ಶಬ್ದವು ಭಗವದ್ವಾಚಕವಾಗುವಂತೆ ವಾಯುವಾಚಕವೂ ಆಗುವುದು. ಆದ್ದರಿಂದ 'ಹರಿಃ ಪರತರಃ' ಎಂದು ಬಿಟ್ಟರೆ ಒಮ್ಮೆಲೇ ವಿಷ್ಣುಸರ್ವೋತ್ತಮತ್ವವನ್ನು ವಾಯು ಜೀವೋತ್ತಮತ್ವವನ್ನು ಹೇಳಿದಂತಾಗುವುದು ತಾನೇ? ಇದರಿಂದಾಗಿ ಮಾಧ್ವಮತದಲ್ಲಿ ಪ್ರಧಾನ ತತ್ತ್ವಗಳಲ್ಲಿ ಒಂದಾದ ವಾಯು ಜೀವೋತ್ತಮತ್ವವನ್ನೇ ಈ ಶ್ಲೋಕದಲ್ಲಿ ಸಂಗ್ರಹಿಸಿಲ್ಲ ಎಂಬ ಆಕ್ಷೇಪಕ್ಕೂ ಅವಕಾಶವಿಲ್ಲದಂತಾಗುವುದು.

'ಹರಿಃ ಪರತರಃ' –ಎಂಬಲ್ಲಿ 'ಪರತರ' ಎಂಬ ಶಬ್ದವೂ ಹರಿಸರ್ವೋತ್ತಮತ್ವಕ್ಕೂ ವಾಯು ಜೀವೋತ್ತಮತ್ವಕ್ಕೂ ಹೊಂದಿಕೆಯಾಗುವಂತೆಯೇ ಪ್ರಯೋಗಿಸಲ್ಪಟ್ಟಿದೆ. ಉಳಿದವರಿಗೆಲ್ಲ ದುಃಖವಿದ್ದು, ದುಃಖವಿಲ್ಲದ ಪ್ರಯುಕ್ತ 'ಪರ' ಎನಿಸಿರುವವಳು ಲಕ್ಷ್ಮೀದೇವಿ. ಆಕೆಗಿಂತಲೂ ಉತ್ತಮನಾದವನು ಭಗವಂತನೆಂದು 'ಪರತರಃ' ಎಂಬುದಾಗಿ ಹೇಳಲಾಗಿದೆ. ಲಕ್ಷ್ಮೀದೇವಿಗಿಂತಲೂ ಉತ್ತಮನೆಂದು ಹೇಳಿದ್ದರಿಂದ 'ಲಕ್ಷ್ಮೀಪತಿತ್ವ' ಎಂಬ ಅಸಾಧಾರಣ ಧರ್ಮವನ್ನು ಸೂಚಿಸಿಕೊಟ್ಟು, ಸ್ವಯಂವರ ಸಂದರ್ಭದಲ್ಲಿ ಲಕ್ಷ್ಮೀದೇವಿಯು ಇತರರನ್ನೆಲ್ಲ ತಿರಸ್ಕರಿಸಿ ಭಗವಂತನನ್ನು ವರಿಸಿದುದನ್ನು ಜ್ಞಾಪಿಸಿ ಆ ಮೂಲಕ ಭಗವಂತನ ಸರ್ವೋತ್ತಮತ್ವವನ್ನು ಸಮರ್ಥಿಸಿದಂತಾಗುವುದು.

'ಪರತರಃ' ಎಂಬ ಶಬ್ದದ ಪ್ರಯೋಗದಿಂದಾಗಿಯೇ 'ಮತ್ತಃ ಪರತಂ ನಾನ್ಯತ್ ಕಿಂಚಿದಸ್ತಿ ಧನಂಜಯ' –ಎಂಬ ಗೀತಾಚಾರ್ಯನ ಮಾತನ್ನು ಜ್ಞಾಪಿಸಿ ಕೊಟ್ಟಂತೆಯೂ ಆಗುವುದು. ಈ ಮಾತಲ್ಲಿ ಗೀತಾಚಾರ್ಯನು 'ನಾನ್ಯತ್ ಕಿಂಚಿದಸ್ತಿ' ಎಂದು ಹೇಳುವುದರ ಮೂಲಕ ಬೇರೆ ಯಾರೂ ಉತ್ತಮರಾಗಲು ಸಾಧ್ಯವೇ ಇಲ್ಲ ಎಂದು ಸಂದೇಶಿಸಿರುವನು.

ಹರಿಃ ಅಂದರೆ ವಾಯು ಎಂಬಾರ್ಥವನ್ನಿಟ್ಟುಕೊಂಡಾಗ 'ಪರತರಃ' ಎನ್ನುವಲ್ಲಿ ಪರ ಎಂದರೆ ಸರಸ್ವತಿ ಭಾರತಿಯರು ಎಂದರ್ಥ. ಭಗವಂತನು 'ಪರೋವರೀಯಾನ್' ಎಂದೆನಿಸುವಾಗ ಇಲ್ಲಿಯ ಪರ ಶಬ್ದದಿಂದ ಸರಸ್ವತಿ ಭಾರತಿಯರು ವಾಚ್ಯರಾಗಿರುವರು. ಭಗವಂತನ ಕುರಿತು ಯಾವ ಸಂದರ್ಭದಲ್ಲೂ ದ್ವೇಷವಿಲ್ಲದ ಪ್ರಯುಕ್ತ

ರುದ್ರಾದಿಗಳಿಗಿಂತೆಲ್ಲ ಉತ್ತಮರೆನಿಸಿರುವ ಸರಸ್ವತಿ ಭಾರತಿಯರು ಪರರೆನಿಸಿರುವರು. ಅಂತಹವರಿಗಿಂತಲೂ ಉತ್ತಮರಾಗಿರುವವರು ವಾಯುದೇವರು ಎಂಬುದಾಗಿ. 'ಹರಿಃ ಪರತರಃ' ಎಂಬ ಮಾತು ತಿಳಿಸಿಕೊಡುವುದು. ಸರಸ್ವತಿ ಭಾರತಿಯರಿಗಿಂತಲೂ ಉತ್ತಮರಾಗಿರುವುದರಿಂದಲೇ ಜೀವೋತ್ತಮರೆಂದು ಸಿದ್ಧವಾಗುವುದು.

ವಾಯು ಜೀವೋತ್ತಮತ್ವವು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ಅಲ್ಲದಿದ್ದರೂ ಸೂಚ್ಯವಾಗಿ ಪ್ರತಿಪಾದಿತವಾಗಿದೆ. 'ಅಥ ವ್ಯವಸ್ಥಿತಾನ್ ದೃಷ್ಟ್ವಾ ಧಾರ್ತರಾಷ್ಟ್ರಾನ್ ಕಪಿಧ್ವಜಃ' –ಎಂಬಲ್ಲಿ ವಾಯುದೇವರನ್ನು 'ಕಪಿ' ಎಂದು ಉಲ್ಲೇಖಿಸಿರುವುದರ ಮೂಲಕ ಅವರು ಸಮುದ್ರಮಥನ ಸಂದರ್ಭದಲ್ಲಿ ಕಾಲಕೂಟ ವಿಷವನ್ನು ಕುಡಿದು ಅರಗಿಸಿಕೊಂಡ, ಕಾಲಕೂಟ ವಿಷಕ್ಕೆ ಅಭಿಮಾನಿಯಾದ ಕಲಿಯನ್ನು ನಿಗ್ರಹಿಸಿದ ಮಹಿಮೆಯನ್ನು ಸೂಚಿಸಲಾಗಿದೆ. ಕಂ ಎಂದರೆ ಸುಖ. ಕಾಲಕೂಟವೂ ವಾಯು ದೇವರಿಗೆ ಸುಖವೇ ಆಗಿರುವುದರಿಂದ ಇಲ್ಲಿ ಸುಖರೂಪವಾದ ಕಾಲಕೂಟವು ಕಂ ಎನಿಸಿದೆ. ಅದನ್ನು 'ಪಿಬತಿ' ಕುಡಿಯುವವರು ಎಂದರ್ಥ. ವಾಯುದೇವರು ತಮ್ಮ ಅಂಗೈಯಲ್ಲಿ ಮರ್ದಿಸಿಕೊಟ್ಟ ಕಾಲಕೂಟವನ್ನು ಕುಡಿದು ರುದ್ರ ನೀಲಕಂಠನೆನಿಸಿದರೆ ವಾಯುದೇವರು ಹೀಗೆ ಕಾಲಕೂಟ ವಿಷವನ್ನೂ, ಅದಕ್ಕೆ ಅಭಿಮಾನಿಯಾದ ಕಲಿಯನ್ನೂ ಸಹಿಸಿಕೊಂಡರು ಎಂಬ ಸಾಮರ್ಥ್ಯವನ್ನು 'ಕಪಿ' ಹೆಸರಿಂದ ಸೂಚಿಸಿ ಕೊಟ್ಟು, ವಾಯು ಜೀವೋತ್ತಮತ್ವವನ್ನು ಸಾಧಿಸಿದಂತಾಗುವುದು.

ಅಲ್ಲದೆ 'ಬ್ರಹ್ಮಾಣಮೀಶಂ ಕಮಲಾಸನಸ್ಥಂ.....' ಎನ್ನುವಲ್ಲಿ ಚತುರ್ಮುಖನನ್ನು ಆಶ್ರಯಿಸಿಕೊಂಡಿರುವ ರುದ್ರ ಎಂದು ಹೇಳುವುದರ ಮೂಲಕ 'ರುದ್ರಂ ಸಮಾಶ್ರಿತಾಃ ದೇವಾಃ ರುದ್ರೋ ಬ್ರಹ್ಮಾಣಮಾಶ್ರಿತಃ । ಬ್ರಹ್ಮಾ ಮಾಮಾಶ್ರಿತೋ ನಿತ್ಯಂ ನಾಹಂ ಕಂಚಿದುಪಾಶ್ರಿತಃ' ಎಂಬ ಮಾತನ್ನು ಜ್ಞಾಪಿಸಿಕೊಟ್ಟಂತಾಗುವುದು. ಇದರಲ್ಲಿ ಬ್ರಹ್ಮನಿಗೆ ಜೀವೋತ್ತಮತ್ವವು ಸಿದ್ಧವಾಯಿತೆಂದರೆ 'ಪವಮಾನಃ ಪ್ರಜಾಪತಿಃ' ಇತ್ಯಾದಿ ಪ್ರಮಾಣಗಳು ಸಾರುತ್ತಿರುವಂತೆ ಬ್ರಹ್ಮಪದವಿಗೆ ಬರುವ ವಾಯುದೇವರಿಗೂ ಜೀವೋತ್ತಮತ್ವವು ಸಿದ್ಧವಾಗುವುದು.

ರಾಮಾನುಜೀಯರು ವಿಷ್ಣುಸರ್ವೋತ್ತಮತ್ವವನ್ನು ಒಪ್ಪುವರಾದರೂ ವಾಯು ಜೀವೋತ್ತಮತ್ವವನ್ನು ಒಪ್ಪಲಾರರು. ವಾಯುಜೀವೋತ್ತಮತ್ವವನ್ನು ಒಪ್ಪದೆ ವಿಷ್ಣು ಸರ್ವೋತ್ತಮತ್ವವನ್ನು ಒಪ್ಪಿದರೂ ವ್ಯರ್ಥವೇ. 'ಯಸ್ಯ ದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುರೌ ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ.....' ಎಂದಿರುವಂತೆ ಹರಿಭಕ್ತಿಯಂತೆ ಗುರುಭಕ್ತಿಯೂ ಬೇಕು. ವಾಯುಜೀವೋತ್ತಮತ್ವ ವನ್ನೇ ಒಪ್ಪದಿದ್ದರೆ ಗುರುಭಕ್ತಿಗೆ ಅವಕಾಶವಾದರೂ ಹೇಗೆ?

ಸತ್ಯಂ ಜಗತ್ : ನಮ್ಮ ಕಣ್ಣೆದುರು ಕಾಣುವ ಜಗತ್ತು ಸತ್ಯವೆಂದು ಪ್ರತ್ಯಕ್ಷ ದಿಂದಲೇ ಸಿದ್ಧವಾಗುವುದು. ಆದರೆ ಜಗತ್ತು ಎಂದರೆ ಇಷ್ಟೇ ಅಲ್ಲ. ನಮ್ಮ ಕಣ್ಣಿಗೆ ಕಾಣದಿರುವಂತಹ ಎಷ್ಟೆಷ್ಟೋ ಪದಾರ್ಥಗಳಿವೆ. ಅವೆಲ್ಲ ಸೇರಿ ವಿಶ್ವ ಎನಿಸುವುದು. ಇಂತಹ ವಿಶ್ವದ ಸತ್ಯತ್ವವು ಪ್ರತ್ಯಕ್ಷದಿಂದಲೇ ಸಿದ್ಧವಾಗದು. ಆದ್ದರಿಂದ ಅದರ

ಸಮರ್ಥನೆ ಅಪೂರ್ವವೆನಿಸಿದೆ. ವಿಶ್ವವನ್ನು 'ಜಗತ್' ಶಬ್ದದಿಂದ ಉಲ್ಲೇಖಿಸುವುದರ ಮೂಲಕವೇ ಅದು ಸತ್ಯ ಎನ್ನಲು ಯುಕ್ತಿಯನ್ನು ತೋರಿಸಿಕೊಟ್ಟಂತಾಗುವುದು. 'ಗಚ್ಛತೀತಿ ಜಗತ್' –ಚಾಲನೆವುಳ್ಳದ್ದೇ ಜಗತ್ ಎನಿಸಿದೆ. ಹೀಗೆ ಅರ್ಥಕ್ರಿಯಾಕಾರಿತ್ವ ವನ್ನು ತೋರಿಸಿಕೊಟ್ಟು, ಆದ್ದರಿಂದಲೇ ಅದು ಸತ್ಯ ಎಂದು ಸಮರ್ಥಿಸಿದಂತಾಗು ವುದು.

ಭಗವದ್ಗೀತೆಯಲ್ಲಿ 'ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಮ್' ಎಂಬು ದಾಗಿ ಜಗತ್ತನ್ನು ಅಸತ್ಯ ಎನ್ನುವವರು ಆಸುರ ಸ್ವಭಾವದವರೆಂದು ನಿಂದಿಸಿರುವುದ ರಿಂದ ಜಗತ್ತು ಅಸತ್ಯವಲ್ಲ, ಸತ್ಯವೇ ಎಂದು ಸಿದ್ಧಿಸುವುದು. ಅಲ್ಲದೆ, ದಿವ್ಯ ಚಕ್ಷುಸ್ಸು ಪಡೆದ ಅರ್ಜುನನು 'ತತ್ರೈಕಸ್ಥಂ ಜಗತ್ಕೃತ್ಸ್ನಂ ಪ್ರವಿಭಕ್ತಮನೇಕಧಾ ಅಪಶ್ಯದ್ದೇವ ದೇವಸ್ಯ ಶರೀರೇ' –ಎಂದಿರುವಂತೆ ದಿವ್ಯ ಚಕ್ಷುಸ್ಸಿನಿಂದ ಪ್ರತ್ಯಕ್ಷವಾಗಿ ಕಂಡಿದ್ದ ಜಗತ್ತು ಸತ್ಯ ಎಂದು ಸಿದ್ಧವಾಗುವುದು.

ಜಗತ್ಸತ್ಯತ್ವವು ಭಗವಂತನ ಸರ್ವೋತ್ತಮತ್ವವನ್ನು ತಿಳಿಯಲು ಸಹಕಾರಿ ಯಾದುದು. ಜಗಜ್ಜನ್ಮಾದಿಕಾರಣತ್ವವು ಭಗವಂತನ ಲಕ್ಷಣ. ಅಲ್ಲದೆ 'ಬಹುಚಿತ್ರ ಜಗದ್ ಬಹುಧಾಕರಣಾತ್ ಪರಶಕ್ತಿರನಂತಗುಣಃ ಪರಮಃ' ಎಂದಿರುವಂತೆ ಈ ಜಗತ್ತನ್ನು ಕಂಡು ಆ ಮೂಲಕ ಭಗವಂತನ ಮಹಿಮೆಯನ್ನು ಮನವರಿಕೆ ಮಾಡಿ ಕೊಳ್ಳಲು ಸಾಧ್ಯವಾಗುವುದು. ಜಗತ್ತೇ ಸುಳ್ಳೆಂದರೆ ಇದು ಸಾಧ್ಯವೇ? ಅಲ್ಲದೆ ಜಗತ್ತು ಸುಳ್ಳಾದರೆ ಅಲ್ಲಿ ಕರ್ಮಾನುಷ್ಠಾನದಲ್ಲಿ ಪ್ರವೃತ್ತಿ ಕೂಡದು. ಮಕ್ಕಳನ್ನೆಲ್ಲ ಕಳಕೊಂಡವನೊಬ್ಬ ಸ್ವಪ್ನದಲ್ಲಿ ತನ್ನ ಮಕ್ಕಳಿಗೆಲ್ಲ ಆಸ್ತಿ ಹಂಚುವುದೇ ಮೊದಲಾದ ಕರ್ಮಗಳಲ್ಲಿ ತೊಡಗಿದರೂ ಎಚ್ಚೆತ್ತ ಮೇಲೆ ಆ ಕರ್ಮಗಳನ್ನೆಲ್ಲ ತ್ಯಜಿಸುವುದಿಲ್ಲವೇ. ವಿಶ್ವವು ಮಿಥ್ಯಾ ಎಂಬ ಜ್ಞಾನ ಬಂದಲ್ಲೂ ಹೀಗೆಯೇ ಆದೀತು!

ಹೀಗೆ ಜಗತ್ಸತ್ಯತ್ವವು ಜಗಜ್ಜನ್ಮಾದಿಕಾರಣತ್ವ ಲಕ್ಷಣಕ್ಕೆ ಸಹಕಾರಿಯಾಗಿ ಉಪಯುಕ್ತವೆನಿಸುವುದರಿಂದ ರಾಮಾನುಜೀಯರು ಜಗತ್ಸತ್ಯತ್ವವನ್ನು ಒಪ್ಪಿರುವ ರಾದರೂ ಅದು ಅನುಪಯುಕ್ತವೆನಿಸಿದೆ. ಸತ್ಕಾರ್ಯವಾದಿಗಳಾದ ಅವರು ಮೊದಲು ಇರುವ ಮಡಿಕೆಯೇ ಕುಂಬಾರನ ವ್ಯಾಪಾರದ ಬಳಿಕ ಅಭಿವ್ಯಕ್ತವಾಯಿತಷ್ಟೇ ಅನ್ನುವರು. ಆದ್ದರಿಂದ ಅವರ ಪ್ರಕಾರ ಭಗವಂತನಿಗೆ ಮುಖ್ಯವಾಗಿ ಜಗತ್ತಿನ ಸೃಷ್ಟಿಕರ್ತೃತ್ವ ಇಲ್ಲ. ಅಂದಮೇಲೆ ಜಗತ್ ಸತ್ಯತ್ವವನ್ನು ಒಪ್ಪಿದರೂ ಏನು ಪ್ರಯೋಜನ?

ತತ್ವತೋ ಭೇದಃ : ಭಗವದ್ಗೀತೆಯ ಹನ್ನೆರಡನೆ ಅಧ್ಯಾಯದಲ್ಲಿ ಭೇದವನ್ನು ಸ್ಪಷ್ಟವಾಗಿ ಹೇಳಲಾಗಿದೆ. ಕ್ಷರ ಅಕ್ಷರ ಪುರುಷರನ್ನು ಹೇಳಿ 'ಉತ್ತಮಃ ಪುರುಷಸ್ತ್ವನ್ಯಃ' ಎಂಬುದಾಗಿ ಭಗವಂತನಿಗೆ ಜೀವಭೇಧವನ್ನು ತಿಳಿಸಲಾಗಿದೆ. 'ಪರಮಾತ್ಮೇತ್ಯುದಾ ಹೃತಃ' ಎಂಬ ಮಾತಿನಿಂದ ಇತರರ ಭೇದವನ್ನು ಸಮರ್ಥಿಸಲಾಗಿದೆ. 'ಕ್ಷರಃ ಸರ್ವಾಣಿ ಭೂತಾನಿ' ಎಂಬ ಮಾತಿನಿಂದ ಜೀವ–ಜೀವಭೇದ ಸ್ಪಷ್ಟ. ಕ್ಷರ ಶಬ್ದ ದಿಂದಲೇ ಜಡವಾದ ಶರೀರಕ್ಕೂ ಆತ್ಮನಿಗೂ ಭೇದವನ್ನು ತಿಳಿಸಿದಂತಾಗುವುದು.

ಒಂದು ವೇಳೆ ಗೀತೆಯಲ್ಲಿ ಅಭೇದದ ಉಪದೇಶವಿದ್ದರೆ ಅರ್ಜುನನಲ್ಲಿ ದುರ್ಯೋಧನಾದಿಗಳನ್ನು ಸಂಹರಿಸಲು ಹೇಳುವಿಕೆಯಾದರೂ ಹೇಗೆ ಕೂಡೀತು? ಗೀತಾಚಾರ್ಯನು ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯವನ್ನು ಮಾಡಬೇಕೆಂದು ಉಪದೇಶಿಸಿದುದಾದರೂ ಹೇಗೆ?

ಭೇದಶಬ್ದವೂ ವಿಶೇಷವಾಚಕವಾಗಿಯೂ ಇರುವುದರಿಂದ 'ಭಿನ್ನಾಃ' ಎಂಬ ಪದದಿಂದ ಭೇದಪ್ರತಿನಿಧಿಯಾದ ವಿಶೇಷವನ್ನೂ ತೆಗೆದುಕೊಳ್ಳಬೇಕು. ಆದ್ದರಿಂದ ಶ್ರೀಮದಾಚಾರ್ಯರು ಅಸಾಧಾರಣವಾಗಿ ಪ್ರತಿಪಾದಿಸಿರುವ ವಿಶೇಷದ ಪ್ರಸ್ತಾವ ಈ ಶ್ಲೋಕದಲ್ಲಿಲ್ಲ ಎಂಬ ಆಕ್ಷೇಪಕ್ಕೆ ಎಡೆ ಇಲ್ಲ. ವಿಶೇಷವನ್ನು ಒಪ್ಪದಿದ್ದಲ್ಲಿ ಶಾಸ್ತ್ರವೇ ಅಪ್ರಮಾಣವೆನಿಸೀತು. ಶಾಸ್ತ್ರದಲ್ಲಿ ಕೆಲವೆಡೆ 'ಆನಂದೋ ಬ್ರಹ್ಮೇತಿ ವ್ಯಜಾನಾತ್' ಎಂದು ಭಗವಂತನು ಆನಂದ ಸ್ವರೂಪ ಎಂದಿದ್ದರೆ, ಮತ್ತೆ ಕೆಲವೆಡೆ 'ಆನಂದಂ ಬ್ರಹ್ಮಣೋ ವಿದ್ವಾನ್' ಎಂದು ಆನಂದ ಬ್ರಹ್ಮಣ ಗುಣ ಎನ್ನಲಾಗಿದೆ, ಈ ವಿರುದ್ಧ ಹೇಳಿಕೆಯನ್ನು, ವಿಶೇಷವನ್ನು ಒಪ್ಪದೆ ಕೂಡಿಸಲಾಗದು.

ರಾಮಾನುಜೀಯರು ಭೇದವನ್ನು ಒಪ್ಪಿರುವರಾದರೂ ವಿಶೇಷವನ್ನು ಒಪ್ಪಲಾರರು.

ಭೇದವನ್ನು ಒಪ್ಪದಿದ್ದಲ್ಲಿ ಎಲ್ಲರೂ ಒಬ್ಬ ಆತ್ಮನೇ ಆದರೆ ಯಾರೋ ಅಂಧಂತಮಸ್ಸಿಗೆ ಯೋಗ್ಯವಾದ ದುಷ್ಕರ್ಮವನ್ನು ಮಾಡಿದಲ್ಲಿ ಅದರ ಫಲವಾಗಿ ಎಲ್ಲರೂ ಅಂಧಂತಮಸ್ಸಿಗೆ ಹೋಗಬೇಕಾದೀತು! ಅಂತೆಯೇ ಒಬ್ಬನ ಸಾಧನಾನುಷ್ಠಾನದಿಂದಲೇ ಎಲ್ಲರಿಗೂ ಮೋಕ್ಷ ಆದೀತು! ಉಳಿದವರೆಲ್ಲ ಸಾಧನಾನುಷ್ಠಾನದಲ್ಲಿ ಉದಾಸೀನರಾದಾರು!

ಹರೇರನುಚರಾಃ ಅನುಚರರು ಎರಡು ರೀತಿಯಲ್ಲಿರಬಹುದು. ರಾಜನಿಗೆ ಸೇವಕರು ಬಾಹ್ಯ ದಲ್ಲಷ್ಟೇ ಅನುಚರರು. ಜೀವಾತ್ಮರು ಮಾತ್ರ ಭಗವಂತನಿಗೆ ಬಾಹ್ಯದಲ್ಲಿ ಅನುಚರ ರಾಗಿರುವಂತೆ ಆಂತರಿಕವಾಗಿಯೂ ಅನುಚರರು. ಸುಖಂ ದುಃಖಂ ಭವೋಽಭಾವೋ.... ಭವಂತಿ ಭಾವಾ ಭೂತಾನಾಂ ಮತ್ತ ಏವ' ಎಂಬುದಾಗಿ ಗೀತಾಚಾರ್ಯನು ಜಿವಾತ್ಮರಿಗೆ ಸುಖಾದಿಭಾವನೆಗಳನ್ನು ತಾನೇ ನೀಡುವವ ನೆಂದಿರುವನು. 'ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ' ಎಂದು ಸ್ಮರಣೆ ಮೊದಲಾದುವನ್ನೂ ತಾನೇ ನೀಡುವವನೆಂದಿದ್ದಾನೆ. ಆದ್ದರಿಂದ ಜೀವಾತ್ಮರು ಆಂತರಿಕವಾಗಿಯೂ ಭಗವಂತನ ಅನುಚರರೆಂದು ಸಿದ್ಧಿಸುವುದು.

ನಾವೆಲ್ಲ ಭಗವಂತನ ಅನುಚರರು ಎಂಬ ಜ್ಞಾನದಿಂದಾಗಿ ಅಹಂಕಾರವು ತೊಲಗುವುದು. ಭಗವಂತನಿಂದ ಹಾಗೂ ಅವನಿಂದ ನಿಯುಕ್ತರಾದ ತತ್ತ್ವಾಭಿಮಾನಿ ದೇವತೆಗಳಿಂದ ಪ್ರೇರಿತರಾಗಿ ನಾವು ಯಾವುದೇ ಸಾಧನೆಯನ್ನು ನಡೆಸುತ್ತಿದ್ದೇವೆ ಎಂಬ ವಿನಯಭಾವವು ಉದಯಿಸುವುದು. ಉಳಿದೆಲ್ಲ ಗುಣಗಳಿದ್ದರೂ, 'ನಾನೇ ಮಾಡುತ್ತಿದ್ದೇನೆ' ಎಂಬ ಅಹಂಕಾರವಿದ್ದರೆ ಉಳಿದೆಲ್ಲವೂ ವ್ಯರ್ಥವೆನಿಸುವುದು,

ಆದ್ದರಿಂದ ಭಗವದನುಚರತ್ವ ತತ್ತ್ವಕ್ಕೆ ನಮ್ಮ ಸಾಧನಾನುಷ್ಠಾನದಲ್ಲಿ ಮಹತ್ವದ ಪಾತ್ರವಿದೆ.

ರಾಮಾನುಜೀಯರು ಜೀವಾತ್ಮರು ಭಗವಂತನ ಕಿಂಕರರು ಎಂದೇನೋ ಹೇಳುವರು. ಆದರೆ ಭಗವಂತನ ವೈಷಮ್ಯ ನೈರ್ಘೃಣ್ಯ ಪರಿಹಾರಕ್ಕಾಗಿ ಜೀವಾತ್ಮರ ಮೊದಲ ಪ್ರವೃತ್ತಿ ಸ್ವತಂತ್ರವಾದುದು. ಮುಂದೆ ಅಷ್ಟೇ ಅವರವರ ಸತ್‌ಪ್ರವೃತ್ತಿ ದುಷ್ಪ್ರವೃತ್ತಿಗಳಿಗನುಗುಣವಾಗಿ ಭಗವಂತನು ಪ್ರೇರಿಸುವನು ಎನ್ನುವ ಅವರ ಸಿದ್ಧಾಂತ ಪ್ರಕಾರ ಜೀವಾತ್ಮರಿಗೆ ಸರ್ವಾತ್ಮನಾ ಭಗವದನುಚರತ್ವವನ್ನು ಹೇಳಿ ದಂತಾಗುವುದಿಲ್ಲ.

ನೀಚೋಚ್ಚಭಾವಂ ಗತಾಃ ಜೀವಾತ್ಮರಲ್ಲಿ ಅನ್ಯೋನ್ಯವಾಗಿ ತಾರತಮ್ಯವಿದೆ ಎನ್ನುವುದು ಶ್ರೀಮದಾ ಚಾರ್ಯರ ಮತ್ತೊಂದು ತತ್ತ್ವ. ನಮ್ಮಲ್ಲೆಲ್ಲ ತಾರತಮ್ಯವಿದೆ ಎನ್ನುವುದು ನಮಗೆ ಅನುಭವಸಿದ್ಧವಾದುದು. ಆದರೂ ಎಲ್ಲರೂ ಸಮಾನರು-ಎಂದೇ ಹೇಳಬೇಕು. ತಾರತಮ್ಯವಿದೆ ಎಂದು ಹೇಳಬಾರದು ಎಂಬುದು ಕೆಲವರ ಅನಿಸಿಕೆ. ರೋಗಿಯು ಸಾಯುವ ಸ್ಥಿತಿಯಲ್ಲಿದ್ದರೂ ಅದನ್ನು ವೈದ್ಯರು ತಿಳಿಸಬಾರದು. ಅದನ್ನು ತಿಳಿದುಬಿಟ್ಟರೆ ರೋಗಿಯು ಸತ್ತೇ ಹೋದಾನು ತಾನೆ? ಅದರಂತೆ ಎಂಬುದು ಅವರ ಸಮರ್ಥನೆ. ಆದರೆ ಇಲ್ಲಿ ವ್ಯತ್ಯಾಸವಿದೆ. ತಾರತಮ್ಯವಿದೆ ಎಂದು ತಿಳಿದಾಕ್ಷಣ ಏನೂ ತೊಂದರೆ ಇಲ್ಲ. ಬದಲಾಗಿ ತಾರತಮ್ಯದ ಜ್ಞಾನದಿಂದಾಗಿ ನಮಗೆ ಸಾಧನಾನು ಷ್ಠಾನದಲ್ಲಿ ಉತ್ಸಾಹವು ಉಂಟಾಗುವುದು. ಎಲ್ಲರೂ ಸಮಾನರು ಎಂದಾದರೆ ನಾವು ಎಷ್ಟೇ ಸಾಧನೆಗಳನ್ನು ನಡೆಸಿದರೂ ಅದರಿಂದಾಗಿ ನಮಗೆ ದೊರಕುವ ಫಲ ಏನೂ ಸಾಧನೆ ಮಾಡದವನಿಗೆ ಸಮಾನವೆಂದ ಮೇಲೆ ನಾವೇಕೆ ಹೆಚ್ಚು ಹೆಚ್ಚು ಸಾಧನಾನು ಷ್ಠಾನದಲ್ಲಿ ತೊಡಗಬೇಕು? ಕಲ್ಪವಿಡೀ ಸಾಧನಾನುಷ್ಠಾನ ನಡೆಸುವ ಬ್ರಹ್ಮದೇವರಿಗೂ ಸಾಮಾನ್ಯ ಸಾಧಕನಿಗೆ ದೊರಕುವಷ್ಟೇ ಮುಕ್ತಿಯ ಸುಖವೆಂದಾದರೆ ಅವರ ಅಷ್ಟು ಮಟ್ಟದ ಸಾಧನಾನುಷ್ಠಾನಕ್ಕೆ ಏನು ಬೆಲೆ ಬಂದಂತಾಯಿತು! ಎಲ್ಲರೂ ಸಮಾನ ರೆಂದಲ್ಲಿ ಭಗವಂತನಲ್ಲಿ ವೈಷಮ್ಯ ನೈರ್ಘೃಣ್ಯವನ್ನು ಪರಿಹರಿಸುವುದೂ ಅಶಕ್ಯ.

ಭಗವದ್ಗೀತೆಯಲ್ಲಿ

ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋ ಗಚ್ಛಂತಿ ತಾಮಸಾಃ ॥

ಎಂಬಲ್ಲಿ ಸಾತ್ತ್ವಿಕ, ರಾಜಸ ಹಾಗೂ ತಾಮಸ ಎಂಬ ಮೂರು ವಿಧದ ಜೀವಾತ್ಮರನ್ನು ತೋರಿಸಿಕೊಡುವುದರ ಮೂಲಕ ಜೀವಾತ್ಮರಲ್ಲಿಯ ತಾರತಮ್ಯವನ್ನು ಹೇಳಿದಂತಾಗಿದೆ.

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥

ಎಂಬಲ್ಲಿ ಸಾಧಕರಲ್ಲೂ ತಾರತಮ್ಯವಿದೆ ಎಂದು ತೋರಿಸಿಕೊಡಲಾಗಿದೆ.

ತಮ್ಮತಮ್ಮ ಕರ್ಮಾನುಸಾರವಾಗಿ ಪಡೆದ ಆಯಾಯ ದೇಹ ಪ್ರಯುಕ್ತವಾಗಿಯಷ್ಟೇ ಜೀವಾತ್ಮರಲ್ಲಿ ತಾರತಮ್ಯ ಹೊರತು ಜೀವಾತ್ಮರು ಸಹಜವಾಗಿ ಸಮಾನರಾದವರೆಂಬುದು ರಾಮಾನುಜೀಯರ ಸಿದ್ಧಾಂತ.

ಅಲ್ಲದೆ '......ನಿರಂಜನಃ ಪರಮಂ ಸಾಮ್ಯಮುಪೈತಿ' ಮೊದಲಾದ ಮಾತುಗಳ ಆಧಾರದೊಂದಿಗೆ ಮುಕ್ತರು ಆನಂದಾನುಭವಾದಿಗಳಲ್ಲೂ ಭಗವಂತನ ಸಾಮ್ಯ ಹೊಂದುವರೆಂದು ಎಲ್ಲೂ ಶಾಸ್ತ್ರದಲ್ಲಿಲ್ಲ. ಆದ್ದರಿಂದ ದುಃಖಾಭಾವ, ಜನ್ಮಮರಣಾದ್ಯಭಾವ ಮೊದಲಾದ ಧರ್ಮಗಳಲ್ಲಷ್ಟೇ ಮುಕ್ತರಿಗೆ ಭಗವಂತನ ಸಾಮ್ಯ. 'ಆನಂದಮಯೋಽಭ್ಯಾಸಾತ್' ಎಂಬ ಬ್ರಹ್ಮಸೂತ್ರದಲ್ಲಿ ಆನಂದಪರಿಪೂರ್ಣನಾದವನು ಭಗವಂತನೇ ಎಂದು ನಿರ್ಣಯಿಸಲ್ಪಟ್ಟಿದೆ ತಾನೇ? ಅಲ್ಲದೆ 'ಯೋ ವೈ ಭೂಮಾ ತತ್ಸುಖಮ್ । ನಾಲ್ಪೇ ಸುಖಮಸ್ತಿ' ಎಂಬ ಉಪನಿಷತ್ತಿನಲ್ಲಿ ಗುಣಪೂರ್ಣನಾದವನೇ ಸುಖಪೂರ್ಣ. ಗುಣತಃ ಅಪೂರ್ಣನಾದವನಲ್ಲಿ ಸುಖಪೂರ್ಣತೆ ಇರಲಾರದೆಂದು ಹೇಳಿರುವುದರಿಂದ ಮುಕ್ತಾತ್ಮರಲ್ಲೂ ಭಗವಂತನಂತೆ ಆನಂದ ಪೂರ್ಣತ್ವವನ್ನು ಒಪ್ಪಿದಲ್ಲಿ ಗುಣಪೂರ್ಣತ್ವವನ್ನೂ ಒಪ್ಪಬೇಕಾದೀತು!

ಮುಕ್ತಿರ್ನೈಜಸುಖಾನುಭೂತಿಃ ಪಂಜರದಲ್ಲಿ ಬದ್ಧವಾದ ಹಕ್ಕಿಯಂತೆ ಕರ್ಮ ಪ್ರಾಪ್ತವಾದ ಈ ದೇಹದಲ್ಲಿರುವ ಜೀವನು ಇದರಿಂದ ಬಿಡುಗಡೆ ಹೊಂದಿ ಮೇಲೆ ಮೇಲೆ ಸಾಗುತ್ತಿರುವುದೇ ಮುಕ್ತಿ ಎಂದು ಜೈನರು ಹೇಳಿದರೆ, ದೀಪವು ಆರಿದಂತೆ 'ನಿರ್ವಾಣ' ಎನಿಸಿರುವ ಆತ್ಮ ಸ್ವರೂಪದ ನಾಶವೇ ಮುಕ್ತಿ ಎಂದು ಬೌದ್ಧರು ಹೇಳುವರು. ಇಪ್ಪತ್ತೊಂದು ದುಃಖಗಳ ನಾಶವೇ ಮುಕ್ತಿ ಎಂಬುದು ನೈಯಾಯಿಕರ ಆಶಯ. ನಿರ್ಗುಣ ಬ್ರಹ್ಮಭಾವವೇ ಮುಕ್ತಿ ಎನ್ನುವವರು ಅದ್ವೈತಿಗಳು. ಭಗವಂತನಿಂದ ಪರಮಸಾಮ್ಯ ಹೊಂದುವುದೇ ಮುಕ್ತಿ ಎಂಬುದು ರಾಮಾನುಜೀಯರ ಅಭಿಪ್ರಾಯ.

ಶ್ರೀಮದಾಚಾರ್ಯರಾದರೋ '......ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣ ಅಭಿನಿಷ್ಪದ್ಯತೇ.....' ಎಂಬ ಉಪನಿಷತ್ತು ಸಾರುತ್ತಿರುವಂತೆ ಜೀವಾತ್ಮನು ತನ್ನ ಸ್ವರೂಪಭೂತವಾದ ಆನಂದವನ್ನು ಅನುಭವಿಸುವುದೇ ಮುಕ್ತಿ ಎಂದಿರುತ್ತಾರೆ. ಪ್ರಕಾಶಸ್ವರೂಪವಾದ ದೀಪದ ಆವರಣವನ್ನು ತೆಗೆದಾಗ ಸಹಜವಾಗಿ ಬೆಳಗುವಂತೆ ಸುಖಸ್ವರೂಪಿಯಾದ ಜೀವಾತ್ಮರಿಗೆ ಆವರಣವೆನಿಸಿರುವ ಅಜ್ಞಾನವನ್ನು ಭಗವಂತನು ತೊಲಗಿಸಿದಾಗ ಅವರ ಆನಂದದ ಅಭಿವ್ಯಕ್ತಿಯಾಗುವುದು.

ಜೈನ, ಬೌದ್ಧ, ನೈಯಾಯಿಕ ಹಾಗೂ ಅದ್ವೈತಿಗಳ ಮುಕ್ತಿಯಲ್ಲಿ ಸುಖದ ಸಂಪರ್ಕವೇ ಇಲ್ಲ. ನೈಯಾಯಿಕರ ಇಪ್ಪತ್ತೊಂದು ದುಃಖಗಳಲ್ಲಿ ಸುಖಾದಿಗಳೂ ಸೇರಿವೆ. ಆದ್ದರಿಂದ ಸುಖಾದಿಗಳ ನಾಶವು ಮುಕ್ತಿಯಲ್ಲಿದೆ ಎನ್ನುವವರು ಅವರು. ನಿರ್ಗುಣಬ್ರಹ್ಮಭಾವವೇ ಮುಕ್ತಿ ಎನ್ನುವ ಅದ್ವೈತಿಗಳ ಪ್ರಕಾರವೂ ಸುಖಾದಿ ಯಾವ ಗುಣಕ್ಕೂ ಮುಕ್ತಿಯಲ್ಲಿ ಅವಕಾಶವಿಲ್ಲ. ಇಂತಹ ಮುಕ್ತಿಯನ್ನು ಯಾರು ತಾನೇ ಅಪೇಕ್ಷಿಸಿಯಾರು? ಅದರ ಬದಲು ಸಂಸಾರವೇ ಆಗಬಹುದು. ಇಲ್ಲಿ ಸ್ವಲ್ಪವಾದರೂ

ಸುಖವಿದೆ, ದೇವತೆಗಳಿಗಂತೂ ಸಂಸಾರದಲ್ಲೂ ಅಧಿಕ ಸುಖವಿದೆ. ಹಾಗಿರುವಾಗ ಅಂತಹ ದೇವತೆಗಳಾದರೂ ಮುಕ್ತಿಗಾಗಿ ಯಾಕೆ ಯತ್ನಿಸಿಯಾರು?

ಭಗವಂತನ ಪರಮಸಾಮ್ಯವೇ ಮುಕ್ತಿ ಎಂಬ ರಾಮಾನುಜೀಯರ ವಾದ ಶಾಸ್ತ್ರಸಮ್ಮತವಲ್ಲವೆಂದು ಹಿಂದೆಯೇ ತೋರಿಸಲಾಗಿದೆ. ಭಗವದ್ಗೀತೆಯಲ್ಲಿ 'ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯಮಶ್ನುತೇ' ಎಂಬುದಾಗಿ ಮುಕ್ತಸುಖವನ್ನು ಅಕ್ಷಯ ಎಂದು ವಿಶೇಷಿಸಿರುವ ಮೂಲಕ ಮುಕ್ತಿ ಎಂದರೆ ಸ್ವರೂಪಸುಖಾನುಭವ ಎಂದಂತಾಗುವುದು. ಸಂಸಾರಸುಖ ಕ್ಷಯವೆನಿಸಿದ್ದು, ಸುಖವು ಅಕ್ಷಯವೆನಿಸ ಬೇಕಾದರೆ ಅದು ಸ್ವರೂಪಭೂತವೇ ಆಗಿದ್ದಿರಬೇಕು ತಾನೇ?

ಅಮಲಾ ಭಕ್ತಿಶ್ಚ ತತ್ಸಾಧನಮ್

ನಿರ್ಮಲವಾದ ಅಂದರೆ ನವವಿಧವಾದ ದ್ವೇಷದಿಂದ ರಹಿತವಾದ ಭಕ್ತಿಯೇ ಮುಕ್ತಿಗೆ ಸಾಧನವೆನಿಸಿದೆ. ಭಗವದ್ಗೀತೆಯಲ್ಲಿ–

ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಂ ಏವಂವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥

ಇತ್ಯಾದಿ ಮಾತುಗಳಲ್ಲಿ ಭಕ್ತಿಯೇ ಮೋಕ್ಷಸಾಧನವೆಂದು ಸ್ಪಷ್ಟವಾಗಿ ಹೇಳಲಾಗಿದೆ.

ವಿವೇಕಚೂಡಾಮಣಿ ಎಂಬ ಗ್ರಂಥದಲ್ಲಿ 'ಮೋಕ್ಷಸಾಧನಸಾಮಗ್ರ್ಯಾಂ ಭಕ್ತಿರೇವ ಗರೀಯಸೀ' ಎಂದಿರುವ ಶಂಕರಾಚಾರ್ಯರು ಈ ದೃಷ್ಟಿಯಲ್ಲಿ ತುಂಬಾ ಉಪಕಾರ ಮಾಡಿರುವರು. ಆದರೆ ಅದಕ್ಕೆ ಹೊರಟ ವ್ಯಾಖ್ಯಾನದಲ್ಲಿ ನಿರ್ಗುಣಬ್ರಹ್ಮ ಭಾವಾನು ಸಂಧಾನವೇ ಭಕ್ತಿ ಎನ್ನಲಾಗಿದೆ. ಈ ರೀತಿಯ ಭಕ್ತಿಯನ್ನಿಟ್ಟುಕೊಂಡರೆ ಗೀತೆಗೆ ವಿರುದ್ಧವಾಗುವುದು.

ಗೀತೆಯಲ್ಲಿ–

ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥

ಎಂಬುದಾಗಿ ಆರ್ತ ಜಿಜ್ಞಾಸು ಹಾಗೂ ಅರ್ಥಾರ್ಥಿಗಳನ್ನು ಜ್ಞಾನಿಯಂತೇ ಭಕ್ತ ರೆಂದು ಪರಿಗಣಿಸಲಾಗಿದೆ. ನಿರ್ಗುಣಬ್ರಹ್ಮಭಾವಾನುಸಂಧಾನವಿರುವ ಜ್ಞಾನಿಯಾ ದರೂ ಭಕ್ತನೆನಿಸಬಹುದು. ಆದರೆ ಆರ್ತ, ಅರ್ಥಾರ್ಥಿ ಮೊದಲಾದವರಲ್ಲಿ ನಿರ್ಗುಣಬ್ರಹ್ಮ ಭಾವಾನುಸಂಧಾನವಿರದ ಪ್ರಯುಕ್ತ ಹೇಗೆ ತಾನೆ ಭಕ್ತರೆನಿಸಿಯಾರು?

ಅಲ್ಲದೆ, ಭಾಗವತದಲ್ಲಿ 'ಆತ್ಮಾರಾಮಾ ಹಿ ಮುನಯೋ ನಿರ್ಗ್ರಾಹ್ಯಾ ಅಪ್ಯುರು ಕ್ರಮೇ ಕುರ್ವಂತ್ಯಹೈತುಕೀಂ ಭಕ್ತಿಂ ಇತ್ಥಂಭೂತಗುಣೋ ಹರಿಃ' ಎಂಬುದಾಗಿ 'ಇತ್ಥಂ ಭೂತಗುಣಃ' ಹಿಂದೆ ಹೇಳಿದ ರೀತಿಯಲ್ಲಿ ಜ್ಞಾನಿಗಳ ಮನಸ್ಸನ್ನು ಆಕರ್ಷಿಸುವಷ್ಟು ಗುಣಪೂರ್ಣನಾದ ಭಗವಂತನಲ್ಲಿ ಭಕ್ತಿಯನ್ನು ಮಾಡುವರು ಎಂದೇ ಇದೆ. ನಿರ್ಗುಣ ಬ್ರಹ್ಮಭಾವಾನುಸಂಧಾನರೂಪವಾದ ಭಕ್ತಿ ಆದರೆ ಈ ಮಾತು ಕೂಡಲಾರದು.

ಭಾಗವತದ ಸಪ್ತಮಸ್ಕಂಧದಲ್ಲಿ ಹೇಳುವ ಶ್ರವಣ, ಕೀರ್ತನಾದಿ ನವವಿಧ ಭಕ್ತಿಯೂ ಈ ಅರ್ಥದಲ್ಲಿ ಹೊಂದುವುದಿಲ್ಲ. ಆದ್ದರಿಂದ ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿರುವಂತೆ ಮಾಹಾತ್ಮ್ಯ ಜ್ಞಾನಪೂರ್ವಕವಾದ ಸುದೃಢ ಸ್ನೇಹವೇ ಭಕ್ತಿ ಎನ್ನಬೇಕು. ಇಂತಹ ಭಕ್ತಿಯೇ ಮೋಕ್ಷಸಾಧನವೆನಿಸಿದೆ.

'ಭಕ್ತಿಶ್ಚತತ್ಸಾಧನಮ್' –ಎಂಬಲ್ಲಿಯ ಚಕಾರಕ್ಕೆ 'ಅವ್ಯಯಾನಾಂ ಅನೇಕಾರ್ಥತ್ವಂ' ಎಂಬ ನಿಯಮಾನುಸಾರವಾಗಿ ಅವಧಾರಣೆಯೇ ಅರ್ಥ. ಆದ್ದರಿಂದ 'ಭಕ್ತಿರೇವ ಸಾಧನಮ್' ಎಂದಂತಾಗುವುದು. ರಾಮಾನುಜೀಯರು ದ್ವೇಷವೂ ಮುಕ್ತಿಗೆ ಸಾಧನವೆನ್ನುವರು. ಶ್ರೀಮದಾಚಾರ್ಯರ ಪ್ರಕಾರ ಹಾಗಿಲ್ಲ ಎಂದು ಸೂಚಿಸಿದಂತಾಗುವುದು.

ಅಕ್ಷಾದಿತ್ರಿತಯಂ ಪ್ರಮಾಣಮ್: ಪ್ರತ್ಯಕ್ಷ, ಅನುಮಾನ ಹಾಗೂ ಆಗಮ ಎಂಬುದಾಗಿ ಮೂರು ಪ್ರಮಾಣಗಳನ್ನು ಒಪ್ಪಲಾಗಿದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು 'ದಿವ್ಯಂ ದದಾಮಿ ತೇ ಚಕ್ಷುಃ' ಎಂದು ಅರ್ಜುನನಿಗೆ ತನ್ನ ವಿಶ್ವರೂಪ ಕಾಣಲು ದಿವ್ಯಚಕ್ಷುಸ್ಸನ್ನು ಅನುಗ್ರಹಿಸಿದ್ದರಿಂದ ಪ್ರತ್ಯಕ್ಷಕ್ಕೆ ಪ್ರಾಮಾಣ್ಯವನ್ನು ಒಪ್ಪಿದಂತೆಯೇ. ಮುಂದೆ 'ಬ್ರಹ್ಮಸೂತ್ರಪದೈಶ್ಚೈವ ಹೇತುಮದ್ಭಿಃ ವಿನಿಶ್ಚಿತೈಃ' ಎಂಬುದಾಗಿ ಬ್ರಹ್ಮಸೂತ್ರಗಳಿಗೆ ನಿಶ್ಚಾಯಕತ್ವಕ್ಕೆ ಪೋಷಕವಾಗಿ ಹೇತುಮತ್ವವಿಶೇಷಣವನ್ನು ಉಲ್ಲೇಖಿಸಿರುವುದರಿಂದ ಅನುಮಾನರೂಪವಾದ 'ಹೇತು'ವಿಗೂ ಪ್ರಾಮಾಣ್ಯವನ್ನು ಒಪ್ಪಿದಂತೆ. 'ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ' ಎಂಬಲ್ಲಿ ಶಾಸ್ತ್ರ ಪ್ರಾಮಾಣ್ಯವನ್ನು ಸ್ಪಷ್ಟವಾಗಿಯೇ ಸಮರ್ಥಿಸಲಾಗಿದೆ.

ಮೇಲ್ನೋಟಕ್ಕೆ ಅದ್ವೈತಿಗಳೂ ವಿಶಿಷ್ಟಾದ್ವೈತಿಗಳೂ ಈ ಮೂರು ಪ್ರಮಾಣಗಳನ್ನು ಒಪ್ಪಿದಂತೆ ಕಾಣುವುದು. ಆದರೆ ಪ್ರತ್ಯಕ್ಷಸಿದ್ಧವಾದ ಜಗತ್ತೆ ಮಿಥ್ಯಾ ಎನ್ನುವ ಅದ್ವೈತಿಗಳಾಗಲಿ, ಸತ್ಕಾರ್ಯವಾದಾನುಸಾರವಾಗಿ ಪ್ರತ್ಯಕ್ಷಸಿದ್ಧವಾದ ಜಗತ್ ಸೃಷ್ಟಿಯನ್ನೇ ಮುಖ್ಯವಾಗಿ ಒಪ್ಪದ ವಿಶಿಷ್ಟಾದ್ವೈತಿಗಳಾಗಲೀ ಪ್ರತ್ಯಕ್ಷಕ್ಕೆ ಎಷ್ಟರ ಮಟ್ಟಿಗೆ ಪ್ರಾಮಾಣ್ಯವನ್ನು ಒಪ್ಪಿದಂತಾಗುವುದು? ಪ್ರತ್ಯಕ್ಷಕ್ಕೆ ಪ್ರಾಮಾಣ್ಯವನ್ನು ಒಪ್ಪದ ಮೇಲೆ ಅದನ್ನು ಅವಲಂಬಿಸಿ ಹೊರಡುವ ಅನುಮಾನವಾದರೂ ಅವರ ಪ್ರಕಾರ ಹೇಗೆ ಪ್ರಮಾಣವೆನಿಸೀತು? ವೇದವನ್ನು ತತ್ವಾವೇದಕ ಅತತ್ವಾವೇದಕವೆಂದು ವಿಭಜಿಸಿ ಕೆಲವು ಭಾಗಕ್ಕೆ ಅಪ್ರಾಮಾಣ್ಯವನ್ನು ಅದ್ವೈತಿಗಳು ಹೇಳಿದರೆ, ವಿಶಿಷ್ಟಾದ್ವೈತಿಗಳು ವೇದದ ಕೆಲವು ಭಾಗವಷ್ಟೇ ಭಗವತ್ಪರವಾಗಿದ್ದು ಉಳಿದ ಭಾಗ ಕರ್ಮ, ದೇವತಾದಿಪರ ಎನ್ನುತ್ತ ವೇದಕ್ಕೆ ಭಗವತ್ಪರವಾಗಿದ್ದಷ್ಟು ಪ್ರಾಮಾಣ್ಯವನ್ನು ಎಲ್ಲ ಭಾಗಕ್ಕೆ ಒಪ್ಪಲಾರರು. ಸಮಸ್ತ ವೈದಿಕವಾಙ್ಮಯವೂ ಭಗವತ್ಪರ ಎನ್ನುವ ಶ್ರೀ ಮಧ್ವಾಚಾರ್ಯರ ಪ್ರಕಾರ ಶಾಸ್ತ್ರವು ಉತ್ತಮ ಪ್ರಮಾಣವೆನಿಸಿದೆ.

ಅಖಿಲಾಮ್ನಾಯೈಕವೇದ್ಯೋ ಹರಿಃ "ವೇದೈಶ್ಚ ಸರ್ವೈರಹಮೇವ ವೇದ್ಯಃ" ಎಂಬುದಾಗಿ ಗೀತಾಚಾರ್ಯನು ಸಂದೇಶಿಸಿರುವಂತೆ ಸಮಗ್ರ ವೈದಿಕವಾಙ್ಮಯಕ್ಕೂ

ಮುಖ್ಯವಾಗಿ ಭಗವತ್ತತ್ತ್ವವನ್ನು ಅಕ್ಷರಸಮನ್ವಯ, ಪದಸಮನ್ವಯ, ವಾಕ್ಯಸಮನ್ವಯಾದಿಗಳಿಂದ ಸಮನ್ವಯಿಸಿ ಸಮರ್ಥಿಸಿರುವ ಕೀರ್ತಿ ಶ್ರೀ ಮಧ್ವಾಚಾರ್ಯರಿಗೇ ಸಲ್ಲಬೇಕಾದುದು. ಹೀಗೆ ಶ್ರೀ ಮಧ್ವಾಚಾರ್ಯರ ಈ ನವತತ್ವಗಳೂ ಅಸಾಧಾರಣ ಹಾಗೂ ಅತ್ಯುಪಯುಕ್ತಗಳು.

●

೩. ೧೧. ರಾಮಾಯಣ ನೀಡಿದ ನವರತ್ನಗಳು

ಶ್ರೀರಾಮನ ಕಥೆಯು ಮಧ್ವಮತದ ನವರತ್ನಗಳನ್ನು ತೋರಿಸಿಕೊಟ್ಟಿದೆ. 1. 'ಶ್ರೀಮನ್ಮಧ್ವಮತೇ ಹರಿಃ ಪರತರಃ' ಶ್ರೀರಾಮಚಂದ್ರನು ಚತುರ್ಮುಖ, ರುದ್ರ ಮುಂತಾದವರ ವರದಿಂದ ಅವಧ್ಯರಾದ ಮಾರೀಚಾದಿ ರಾಕ್ಷಸರನ್ನು ಸಂಹಾರಮಾಡಿ ಚತುರ್ಮುಖನೇ ಮೊದಲಾದ ದೇವತೆಗಳಿಗಿಂತಲೂ ತಾನು ಉತ್ತಮನೆಂದು ತೋರಿಸಿದ್ದಾನೆ. 2. 'ಸತ್ಯಂ ಜಗತ್' ಶ್ರೀರಾಮ ಹತ್ತುಸಾವಿರ ವರ್ಷಗಳ ಕಾಲ ರಾಜ್ಯಭಾರ ನಡೆಸಿದ. ಸಜ್ಜನರಿಗೆ ಬಂದ ತೊಂದರೆಗಳನ್ನೆಲ್ಲ ನಿವಾರಣೆಮಾಡಿದ. ಜಗತ್ತು ಸತ್ಯವಾದುದರಿಂದಲೇ ಅದನ್ನು ಶ್ರೀರಾಮ ರಕ್ಷಿಸಿದ. ಹೀಗೆ ಅವನಿಂದ ರಕ್ಷಿಸಲ್ಪಟ್ಟಿರುವುದರಿಂದ ಜಗತ್ತು ಸತ್ಯವೆಂದು ತಿಳಿಯುತ್ತದೆ. 3. ತತ್ವತೋ ಭೇದಃ 'ನ ಲಕ್ಷ್ಮಣಂ ಚಾಪಿ ಜಹಾತಿ ಕರ್ಹಿಚಿತ್' ಶ್ರೀರಾಮ ಎಂದೂ ಲಕ್ಷ್ಮಣನನ್ನು ಬಿಟ್ಟಿರುತ್ತಿರಲಿಲ್ಲ. ಲಕ್ಷ್ಮಣ ಶೇಷಾವತಾರಿ. ಸೃಷ್ಟಿಯ ಆರಂಭದಲ್ಲಿ ಸಂಕರ್ಷಣನಾಮಕ ಶೇಷನೇ ನರರಿಗೆ ಅಭಿಮಾನಿಯಾದ ಸಂಕರ್ಷಣೋ ನಾಮ ಜೀವೋ ಜಾಯತೇ– ಎಂದು ಪಂಚರಾತ್ರಾಗಮದಲ್ಲಿದೆ. ಆದ್ದರಿಂದ ಲಕ್ಷ್ಮಣ ನರರ ಪ್ರತಿನಿಧಿ. ಅವನೊಂದಿಗೆ ಸದಾ ಇರುವ ಶ್ರೀರಾಮ 'ದ್ವಾಸುಪರ್ಣಾ ಸಯುಜಾ ಸಖಾಯಾ' ಎಂಬ ಶ್ರುತಿಯ ಅರ್ಥವಾಗಿ ತಾನಿದ್ದು ಜೀವೇಶ್ವರಭೇದವನ್ನು ಸ್ಪಷ್ಟಪಡಿಸುತ್ತಿದ್ದಾನೆ. 5. ಹರೇರನುಚರಾಃ –ಕಪಿಗಳು ಸ್ವಭಾವತಃ ಚಂಚಲಬುದ್ಧಿಯುಳ್ಳವು. ಅಂಥಹಾ ಕೋಟಿಗಟ್ಟಲೆ ಕಪಿಗಳನ್ನು ಸಂಘಟಿಸಿ ಅವುಗಳಿಂದ ಸಮುದ್ರಕ್ಕೆ ಸೇತುವೆಯನ್ನು ರಚಿಸಿ ಪರಾಕ್ರಮಿಗಳಾದ ರಾಕ್ಷಸರ ಸಂಹಾರವನ್ನು ಶ್ರೀರಾಮ ಮಾಡಿದ. ಇದರಿಂದ ಜೀವರೆಲ್ಲರೂ ಶ್ರೀಹರಿಯ ಇಚ್ಛೆಗೆ ಅಧೀನವಾದ ಇಚ್ಛೆಯುಳ್ಳವರಾಗಿದ್ದು ಅವನ ಅನುಚರರಾಗಿದ್ದಾರೆಂದು ತಿಳಿಯುತ್ತದೆ. 6. ನೀಚೋಚ್ಚಭಾವಂ ಗತಾಃ –ಜೀವಾತ್ಮರಲ್ಲಿ ತಾರತಮ್ಯವಿದೆ. ಸೀತಾನ್ವೇಷಣೆಗಾಗಿ ಹೊರಟ ಕಪಿಗಳು ಸೀತೆಯು ಲಂಕೋದ್ಯಾನದಲ್ಲಿದ್ದಾಳೆಂದು ತಿಳಿದು ಸಮುದ್ರಲಂಘನೆಗಾಗಿ ತಮ್ಮ ತಮ್ಮ ಸಾಮರ್ಥ್ಯವನ್ನು ಹೇಳಿಕೊಳ್ಳುತ್ತಾರೆ. ಮೈಂದ, ದ್ವಿವಿದ, ತಾರ ಮುಂತಾದ ಕಪಿಗಳು ಹತ್ತು ಯೋಜನದಿಂದ ಆರಂಭಿಸಿ ಎಂಭತ್ತು ಯೋಜನೆಗಳವರೆಗೂ ಹಾರುವ ತಮ್ಮ ಸಾಮರ್ಥ್ಯವನ್ನು ಹೇಳಿಕೊಳ್ಳುತ್ತಾರೆ. ನಾನು ನೂರು ಯೋಜನದೂರ ಹಾರಬಲ್ಲೆನಾದರೂ, 'ನ ತತೋऽಭಿಯಾನೇ' –ಹಿಂತಿರುಗಿ ಬರಲಾರೆ ಎಂದ ಅಂಗದ. ತಮ್ಮ ಅಸಾಮರ್ಥ್ಯವನ್ನು ಮನಗಂಡ ಕಪಿಗಳೆಲ್ಲರೂ 'ತ್ವಮೇಕ ಏವಾತ್ರ ಪರಂ ಸಮರ್ಥಃ' ಎಂದು ಹನುಮಂತನನ್ನು ಹುರಿದುಂಬಿಸುತ್ತಾರೆ. ಇದರಿಂದ ಜೀವರಲ್ಲಿ ತಾರತಮ್ಯವು

ಸಹಜವೆಂದು ಸಿದ್ಧವಾಗುತ್ತವೆ. 7. 'ಮುಕ್ತಿಃ ನೈಜಸುಖಾನುಭೂತಿಃ' –ಸುಖದುಃಖ ಗಳೆರಡನ್ನೂ ಕಳೆದುಕೊಳ್ಳುವ ಸ್ಥಿತಿಯಾಗಲೀ ಬ್ರಹ್ಮನೊಂದಿಗೆ ಐಕ್ಯವನ್ನು ಹೊಂದುವುದಾಗಲೀ ಮೋಕ್ಷವಲ್ಲ. ನಮ್ಮ ಸ್ವರೂಪಸುಖವನ್ನು ಅನುಭವಿಸುವುದೇ ಮೋಕ್ಷ. ಮೋಕ್ಷದಲ್ಲಿ ಈ ಸುಖ ಭಗವದ್ದರ್ಶನದಿಂದ ವ್ಯಕ್ತವಾಗುತ್ತದೆ. ಇದೇ ವಿಧದ ಆನಂದ ಶ್ರೀರಾಮನನ್ನು ನೋಡಿ ಅಯೋಧ್ಯೆಯ ಪ್ರಜೆಗಳಿಗಾಯಿತು. 'ಸ್ವಾನಂದ ತೃಪ್ತಾ ಇವ ಸಂಬಭೂವುಃ' ರಾಮ ತಮ್ಮ ಬಂಧುಬಳಗದಲ್ಲಿ ಸೇರಿರದಿದ್ದರೂ ಅವನನ್ನು ನೋಡಿ ಪ್ರಜೆಗಳಿಗೆ ಉಂಟಾದ ಸಂತಸ ಅನಿಮಿತ್ತವಾದುದು. ಇದರಿಂದ ಇಂಥದೇ ಒಂದು ಸುಖ ಮೋಕ್ಷದಲ್ಲೂ ಭಗವದ್ದರ್ಶನದಿಂದ ಉಂಟಾಗುತ್ತದೆ ಎಂದು ತಿಳಿಯಬಹುದು. 8. 'ಅಮಲಾ ಭಕ್ತಿಶ್ಚ ತತ್ಸಾಧನಂ' –ನಿರ್ಮಲ ಭಕ್ತಿಯು ಮೋಕ್ಷಕ್ಕೆ ಕಾರಣ. ಹನುಮಂತ ಸೀತಾನ್ವೇಷಣೆಯೇ ಮುಂತಾದ ರಾಮ ಕಾರ್ಯವನ್ನು ನೆರವೇರಿಸಿದ್ದ. ಅದಕ್ಕೆ ಪ್ರತಿಫಲವಾಗಿ ಶ್ರೀರಾಮ 'ನಿನಗೆ ಏನು ಬೇಕೆ'ಂದು ಕೇಳಿದಾಗ 'ಪ್ರವರ್ಧತಾಂ ಭಕ್ತಿರಲಂ ಕ್ಷಣೇ ಕ್ಷಣೇ' –ನನಗೆ ನಿನ್ನಲ್ಲಿ ನಿರ್ವ್ಯಾಜ್ಯವಾದ ಭಕ್ತಿಯು ಪ್ರತಿಕ್ಷಣದಲ್ಲೂ ಹೆಚ್ಚುವಂತೆ ಅನುಗ್ರಹಿಸು ಎಂದು ಬೇಡಿಕೊಳ್ಳುತ್ತಾನೆ. ಜೀವೋತ್ತಮ ರಾದ ವಾಯುದೇವರೇ ಭಕ್ತಿಯನ್ನು ಬೇಡಿದ್ದರಿಂದ ನಮ್ಮ ಶ್ರೇಯಸ್ಸಿಗೆ ಅದೇ ಮುಖ್ಯ ಸಾಧನವೆಂದು ತಿಳಿಯಬಹುದು. 9. 'ಅಕ್ಷಾದಿ ತ್ರಿತಯಂ ಪ್ರಮಾಣಂ' –ಆಗಮ, ಪ್ರತ್ಯಕ್ಷ, ಯುಕ್ತಿ ಇವು ಮೂರು ಪ್ರಮಾಣಗಳು, ರಾಮರಾಜ್ಯದಲ್ಲಿ ಪ್ರಜೆಗಳೆಲ್ಲರೂ ತ್ರಿಕರಣಗಳಿಂದ ವಿಷ್ಣುವನ್ನೇ ಆರಾಧಿಸುತ್ತಿದ್ದರು. ಧರ್ಮಪರಾಯಣ ರಾಗಿದ್ದರು– 'ಜನೋಽಖಿಲೋ ವಿಷ್ಣುಪರೋ ಬಭೂವ ನ ಧರ್ಮಹಾನಿಶ್ಚ ಬಭೂವ ಕಸ್ಯಚಿತ್ ॥' ಆದ್ದರಿಂದ ಅವರೆಲ್ಲರೂ ಸುಖದಿಂದ ತೃಪ್ತರಾಗಿದ್ದರು. ಸಮಸ್ತ ರೋಗಾದಿಭಿಃ ಉಜ್ಝಿತಾಶ್ಚ ಸರ್ವೇ ಸಹಸ್ರಾಯುಷ ಊರ್ಜಿತಾ ಧನ್ಯೈಃ –ಹೀಗೆ ವೇದೋಕ್ತಧರ್ಮಾನುಷ್ಠಾನದಿಂದ ಸಮೃದ್ಧಿಯನ್ನು ಸಾಧಿಸಿ ತೋರಿಸಿ 'ವೇದವು ಪ್ರಮಾಣ' ಎಂಬುದನ್ನು ಸಾಬೀತುಪಡಿಸಿದ ರಾಮ. ಇದರಂತೆ ಪ್ರತ್ಯಕ್ಷವು ಪ್ರಮಾಣವಾದುದರಿಂದಲೇ ಪ್ರತ್ಯಕ್ಷದಿಂದ ಸಿದ್ಧವಾದ ಜಗತ್ಸತ್ಯತ್ವವನ್ನು ನಂಬಿ ಅದರ ರಕ್ಷಣೆಯನ್ನು ರಾಮ ಮಾಡಿದ. ಪ್ರತ್ಯಕ್ಷ ಆಗಮಗಳು ಪ್ರಮಾಣವಾದರೆ ಅದನ್ನು ಅವಲಂಬಿಸಿರುವ ಯುಕ್ತಿಯೂ ಪ್ರಮಾಣವಾಗಿರಬೇಕು. 9. 'ಅಖಿಲಾ ಮ್ನಾಯೈಕ ವೇದ್ಯೋ ಹರಿಃ' –ವೇದವೇದ್ಯನಾದ ಶ್ರೀಮನ್ನಾರಾಯಣನು ಶ್ರೀರಾಮನಾಗಿ ಅವತರಿಸಿದಾಗ ವೇದವು ರಾಮಾಯಣವಾಗಿ ವಾಲ್ಮೀಕಿಯಿಂದ ಹೊರ ಹೊಮ್ಮಿತು.

ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ ಸಾಕ್ಷಾತ್ ರಾಮಾಯಣಾತ್ಮನಾ ॥

ರಾಮಾಯಣದಲ್ಲಿ ಶ್ರೀರಾಮನೇ ಪ್ರತಿಪಾದ್ಯನಾದುದರಿಂದ ವೇದದಲ್ಲೂ ಅವನೇ ಪ್ರತಿಪಾದ್ಯ. ಹೀಗೆ ಅಖಿಲ ಆಗಮುಗಳಿಂದಲೂ ಪ್ರತಿಪಾದ್ಯ ಶ್ರೀಮನ್ನಾರಾ ಯಣ ಎಂದು ಸಿದ್ಧವಾಗುತ್ತದೆ.

●

೩. ೧೨. ಮಧ್ವಮತದಲ್ಲಷ್ಟೇ

ನಮ್ಮಲ್ಲಿ ಅನೇಕರಿಗೆ ಒಂದು ಸಂದೇಹ –ಹರಿಸರ್ವೋತ್ತಮತ್ವ, ಜಗತ್‌ಸತ್ಯತ್ವ, ಭೇದ ಮುಂತಾದ ಪ್ರಮೇಯಗಳನ್ನೆಲ್ಲ ರಾಮಾನುಜರೇ ಹೇಳಿದ್ದಾರೆ. ಅಂದಮೇಲೆ ಮಧ್ವರ ಪ್ರತಿಪಾದನೆಯಲ್ಲಿ ಹೊಸತನ ಏನಿದೆ? ಶ್ರೀಮನ್ಮಧ್ವಮತದಲ್ಲಿ ಹರಿಯು ಸರ್ವೋತ್ತಮ, ಜಗತ್ ಸತ್ಯ ಎಂದೆಲ್ಲ ಹೇಳುವುದು ಮಧ್ವಮತದ ವೈಶಿಷ್ಟ್ಯವೇ?

ರಾಮಾನುಜರ ಸಿದ್ಧಾಂತ ಪ್ರಕ್ರಿಯೆಗಳನ್ನೆಲ್ಲ ವಿಮರ್ಶಿಸಿದಾಗ ಅವರ ಪ್ರತಿಪಾದನೆಯಲ್ಲಿರುವ ಲೋಪದೋಷಗಳೆಲ್ಲ ಮನವರಿಕೆಯಾದಾಗ ಈ ಸಂದೇಹ ಬಗೆಹರಿಯುತ್ತದೆ. ಶ್ರೀಮನ್ಮಧ್ವಮತೇ ಎಂಬಲ್ಲಿ ಮಧ್ವಮತಕ್ಕೆ ಶ್ರೀಮತ್ ಎಂಬ ವಿಶೇಷಣವನ್ನು ಕೊಟ್ಟಿರುತ್ತಾರೆ. 'ಶ್ರೀ' ಎಂದರೆ ಸಂಪತ್ –'ದೈವೋ ವಿದ್ಯಾ ಹಿರಣ್ಯಾದಿ' –ವಿದ್ಯೆಯೇ ದೈವೀ ಸಂಪತ್. ಆದ್ದರಿಂದ ಮೋಕ್ಷಸಂಪತ್ತಿಗೆ ಸಾಧನವಾದ ವಿದ್ಯೆಯನ್ನು ನೀಡುವ ಮತ ಶ್ರೀಮನ್ಮಧ್ವಮತ.

ರಾಮಾನುಜಮತದಲ್ಲಿ ಮುಕ್ತರಿಗೆ ಮತ್ತು ಪರಮಾತ್ಮನಿಗೆ ಸಾಮ್ಯವನ್ನು ಹೇಳಲಾಗಿದೆ. ಆದುದರಿಂದ ಮುಕ್ತರಿಗೆ ಕೂಡ ಆನಂದಪೂರ್ಣತೆ ಬಂದಂತಾಗಿ ಅವರಿಗೆ ಗುಣಪೂರ್ಣತೆಯು ಬಂತು. 'ಯೋ ವೈ ಭೂಮಾ ತತ್ಸುಖಂ' ಎಂಬ ಶ್ರುತಿ ತಿಳಿಸುವಂತೆ ಗುಣಪೂರ್ಣತ್ವವಿಲ್ಲದೆ ಆನಂದಪೂರ್ಣತ್ವ ಬರಲಾರದು. ಪರಮಾತ್ಮನಿಗೆ ಸಮನಾದ ಮುಕ್ತನು ಆನಂದಪೂರ್ಣನೆಂದಾದ ಮೇಲೆ ಗುಣಪೂರ್ಣನೂ ಆಗಲೇಬೇಕು. ಭಗವಂತನಂತೆ ಮುಕ್ತಜೀವನೂ ಗುಣಪೂರ್ಣನೆಂದಾದ ಮೇಲೆ ಭಗವಂತನೊಬ್ಬನೆ ಸರ್ವೋತ್ತಮ ಎನ್ನಲು ಹೇಗೆ ಸಾಧ್ಯ? ಆದುದರಿಂದ ರಾಮಾನುಜರ ಪ್ರಕ್ರಿಯೆಯಂತೆ ಹರಿಸರ್ವೋತ್ತಮತ್ವ ಸಿದ್ಧವಾಗುವುದಿಲ್ಲ. ಶ್ರೀಮಧ್ವ ಮತದಲ್ಲಿ ಮುಕ್ತ ಪರಮಾತ್ಮರಿಗೆ ಭೇದವೊಪ್ಪಿರುವುದರಿಂದ ಮುಕ್ತನು ಆ ಹರಿಯಷ್ಟು ಆನಂದಪೂರ್ಣನಲ್ಲ –ನಾಲ್ಪೇ ಸುಖಮಸ್ತಿ' ಎಂದು ಶ್ರುತಿ ಹೇಳುವಂತೆ ಮುಕ್ತರು ಗುಣಪೂರ್ಣರಲ್ಲ. ಆದುದರಿಂದ ಹರಿಯೊಬ್ಬನೇ ಸರ್ವೋತ್ತಮ ಎಂದು ಮಧ್ವಮತದಲ್ಲಿಯೇ ಸಾಧಿಸಲು ಸಾಧ್ಯ.

ರಾಮಾನುಜಮತದಲ್ಲಿ ಪಂಚಭೂತಗಳಲ್ಲೆಲ್ಲ ಒಂದರಲ್ಲಿ ಇನ್ನೊಂದರ ಅಂಶಗಳು ಸೇರಿವೆಯಾದ್ದರಿಂದ ಎಲ್ಲ ವಸ್ತುಗಳೂ ಎಲ್ಲವೂ ಆಗಿವೆ ಎಂದೆಲ್ಲ ಹೇಳುತ್ತಾರೆ. ಹೀಗೆ ಜಗತ್ಸ್ವರೂಪವರ್ಣನೆಯೇ ಅಪ್ರಾಮಾಣಿಕವಾಗಿರುವಾಗ ಅದರ ಸತ್ಯತೆಯನ್ನು ಸಾಧಿಸುವುದೆಂತು?

ಊರ್ಧ್ವಂ ಗಚ್ಛಂತಿ ಸತ್ವಸ್ಥಾಃ ಮಧ್ಯೇ ತಿಷ್ಠಂತಿ ರಾಜಸಾಃ ।
ಅಧೋಗಚ್ಛಂತಿ ತಾಮಸಾಃ....... ॥

ಎಂದು ಗೀತೆಯಲ್ಲಿ ತಿಳಿಸುವ ಜೀವತ್ರೈವಿಧ್ಯವನ್ನು ರಾಮಾನುಜರು ಒಪ್ಪಿಲ್ಲ. ಅಂದಮೇಲೆ ಜೀವಭೇದ ತಾರತಮ್ಯವೂ ರಾಮಾನುಜರ ಮತದಲ್ಲಿ ಸಿದ್ಧವಾಗಿಲ್ಲ.

'ತತ್ವತೋ ಭೇದಃ' -ಎಂಬ ಪದವನ್ನು ತತ್ವತಃ ಅಭೇದಃ ಎಂದೂ ವಿಭಾಗ ಮಾಡಲು ಬರುವುದು. ಹಾಗೆ ಮಾಡಿದಾಗ ಪರಮಾತ್ಮನ ರೂಪಗಳಿಗೆ ಅತ್ಯಂತಾಭೇದ ಎಂಬ ಮತ್ತೊಂದು ಮಧ್ವಮತಪ್ರಮೇಯವೂ ತಿಳಿಯುವುದು. ರಾಮಾನುಜರು ಭಗವಂತನಿಗೆ ಶುದ್ಧ ಸತ್ವಾತ್ಮಕಶರೀರವನ್ನು ಒಪ್ಪಿ ಅವನ ಬೇರೆ ಬೇರೆ ರೂಪಗಳಿಗೆ ಶರೀರಭೇಧವನ್ನು ಒಪ್ಪಿರುತ್ತಾರೆ. ಶ್ರೀಮಧ್ವರು ಭಗವಂತನಿಗೆ ಅಪ್ರಾಕೃತ ಶರೀರವನ್ನು ಒಪ್ಪಿ ಭಗವದ್ರೂಪಗಳಿಗೆ ಅಭೇದವನ್ನು ಹೇಳುವರು. ಆದುದರಿಂದ ಈ ಪ್ರಮೇಯವೂ ಶ್ರೀಮಧ್ವಮತದಲ್ಲಿಯೇ ಸಿಗುವಂಥದು.

ಇಲ್ಲಿ ಅಭೇದ ಎನ್ನುವ ಪದಕ್ಕೆ 'ಅಬ್ರಾಹ್ಮಣಃ' ಎಂಬ ಪದಕ್ಕೆ ಬ್ರಾಹ್ಮಣನಿಗಿಂತ ಭಿನ್ನ, ಬ್ರಾಹ್ಮಣನಿಗೆ ಸದೃಶ ಎಂದರ್ಥ ಇರುವಂತೆ ಭೇದಕ್ಕಿಂತ ಭಿನ್ನ, ಭೇದಸದೃಶ ಎಂದರ್ಥವಾಗುವುದು. ಭೇದಕ್ಕಿಂತ ಭಿನ್ನವಾಗಿ ಭೇದಸದೃಶವಾದದ್ದು 'ವಿಶೇಷ'. ಇದನ್ನು ಮಧ್ವರೊಬ್ಬರೇ ಒಪ್ಪಿರುವುದು. ರಾಮಾನುಜರು ಇದನ್ನು ಒಪ್ಪಿಲ್ಲ.

'ಜೀವಗಣಾಃ ಹರೇರನುಚರಾಃ' -ಎಲ್ಲ ಜೀವರು ಹರಿಯ ಅಧೀನರು'. ಇದು ಇನ್ನೊಂದು ಪ್ರಮೇಯ. ಹರಿಯ ಸರ್ವೋತ್ತಮತ್ವವೇ ರಾಮಾನುಜರ ಮತದಲ್ಲಿ ಸಿದ್ಧವಾಗದಿರುವಾಗ ಜೀವರು ಹರಿಯಧೀನರೆಂದೂ ಸಿದ್ಧವಾಗದು.

ಹರಿ ಶಬ್ದಕ್ಕೆ ವಾಯು ಎಂದೂ ಅರ್ಥವಿದೆ. ಆದುದರಿಂದ ಎಲ್ಲ ಜೀವರೂ ವಾಯುದೇವರ ಅಧೀನರು ಎಂಬ ಮತ್ತೊಂದು ಪ್ರಮೇಯವೂ ಇಲ್ಲಿ ಸೂಚಿತವಾಯಿತು. ಇದರಿಂದ ವಾಯುಜೀವೋತ್ತಮತ್ವವೂ ಸಿದ್ಧವಾಯಿತು. ಎಲ್ಲ ಜೀವರೂ ಸರ್ವೋತ್ತಮ ಹರಿಯ ಅಧೀನರು. ಹಾಗೆಯೇ ಜೀವೋತ್ತಮರಾದ ವಾಯುದೇವರ ಅಧೀನರೂ ಆಗಿರುವರು -ಎಂಬ ಈ ಎರಡೂ ಪ್ರಮೇಯಗಳನ್ನು ರಾಮಾನುಜರು ಒಪ್ಪಿಲ್ಲ.

'ನೀಚೋಚ್ಚಭಾವಂ ಗತಾಃ' -ಜೀವರ ತಾರತಮ್ಯವೂ ಶ್ರೀಮಧ್ವಮತದಲ್ಲಿ ಮಾತ್ರ. ರಾಮಾನುಜರು 'ಪರಮಂ ಸಾಮ್ಯಮುಪೈತಿ' ಎಂಬ ಶ್ರುತಿ ಉದಾಹರಿಸಿ ಸಾಮ್ಯವನ್ನು ಹೇಳುವರು. ಹೀಗೆ ಸಾಮ್ಯವನ್ನು ಹೇಳಿದಾಗ ಸುಖತಾರತಮ್ಯವನ್ನು ಮಾಡುವ ಭಗವಂತನಲ್ಲಿ ವೈಷಮ್ಯ ನೈರ್ಘೃಣ್ಯ ಮುಂತಾದ ದೋಷಗಳು ಬರುವುದರಿಂದ ಭಗವಂತನ ನಿರ್ದೋಷತ್ವವನ್ನು ಸಾಧಿಸಲಾಗದು. ಮಧ್ವಮತದಲ್ಲಿ ತಾರತಮ್ಯವನ್ನು ಒಪ್ಪಿರುವುದರಿಂದ ಜೀವರ ಸ್ವರೂಪ ತಾರತಮ್ಯವನ್ನು ಅನುಸರಿಸಿ ಸುಖತಾರತಮ್ಯ ಮಾಡುವುದರಿಂದ ಭಗವಂತನಲ್ಲಿ ಯಾವ ದೋಷಗಳಿಗೂ ಅವಕಾಶವಿಲ್ಲದೆ ನಿರ್ದೋಷನೆಂಬುದು ಸಿದ್ಧವಾಗುವುದು.

ಶ್ರೀಕೃಷ್ಣಗೀತೆಯಲ್ಲಿ 'ಮಾಮಾತ್ಮಪರದೇಹೇಷು ಪ್ರದ್ವಿಷಂತೋ ಅಭ್ಯಸೂಯಕಾಃ..... ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ' -ನನ್ನ ದ್ವೇಷಿಗಳು ನನ್ನನ್ನು ಹೊಂದದೆ ಅಧೋಗತಿಗೇ ಹೋಗುತ್ತಾರೆಂದು ಹೇಳಿರುತ್ತಾನೆ. ಹಾಗಾದರೆ ಶ್ರೀಕೃಷ್ಣನ ವಚನದಂತೆ ಕೆಲವರಿಗೆ ಮೋಕ್ಷ ಎಂದಿಗೂ ಇಲ್ಲ ಎಂದು ಹೇಳಿದಂತಾಯಿತು. ಆದರೆ ರಾಮಾನುಜರ ಮತದಲ್ಲಿ ಎಲ್ಲರಿಗೂ ಮೋಕ್ಷವನ್ನು

ಒಪ್ಪುವರು. ಇದು ಶ್ರೀಕೃಷ್ಣನ ಅಭಿಪ್ರಾಯಕ್ಕೆ ವಿರುದ್ಧ. ಶ್ರೀಕೃಷ್ಣನ ಮಾತಿನಂತೆ ಕೆಲವರಿಗೆ ಮೋಕ್ಷ ಏಕೆ ದೊರಕಲಾರದು? ಎಂದು ಪ್ರಶ್ನಿಸಿದರೆ ಹೀಗೆ ಉತ್ತರಿಸಬೇಕಾಗುವುದು –ದೇವರು ಜೀವರ ಸ್ವರೂಪದಲ್ಲಿ ಇದ್ದ ಸುಖವನ್ನೇ ವ್ಯಕ್ತಗೊಳಿಸುವನು. ಯಾರ ಸ್ವರೂಪದಲ್ಲಿ ಸುಖವಿಲ್ಲವೋ ಅವರಿಗೆ ಅವರ ನೈಜಸುಖಾನುಭೂತಿರೂಪ ಮೋಕ್ಷ ಬರುವಂತಿಲ್ಲ. ಆದ್ದರಿಂದಲೇ 'ಮುಕ್ತಿರ್ನೈಜಸುಖಾನುಭೂತಿ' ಸ್ವರೂಪಸುಖಾಭಿವ್ಯಕ್ತಿಯೇ ಮುಕ್ತಿ ಎಂದರು ಶ್ರೀಮಧ್ವರು. ರಾಮಾನುಜರು ಇದನ್ನು ಒಪ್ಪಿಲ್ಲ.

'ಅಮಲಾ ಭಕ್ತಿಶ್ಚ ತತ್ಸಾಧನಂ' ನಿರ್ಮಲ ಭಕ್ತಿಯೇ ಮುಕ್ತಿ ಸಾಧನವು. ರಾಮಾನುಜರು ದ್ವೇಷದಿಂದಲೂ ಮೋಕ್ಷ ಎಂದೊಪ್ಪಿರುವುದರಿಂದ ಈ ಪ್ರಮೇಯವೂ ಮಧ್ವಮತದ್ದೇ ಆದ ಅಸಾಧಾರಣ ಪ್ರಮೇಯ.

'ಅಕ್ಷಾದಿತ್ರಿತಯಂ ಪ್ರಮಾಣಂ' ಇದೂ ಶ್ರೀ ಮಧ್ವಮತದಲ್ಲಿಯೇ. ರಾಮಾನುಜರು ಶ್ರೀಹರಿಯ ವಿಷಯದಲ್ಲಿ ಜ್ಞಾನಿಪ್ರತ್ಯಕ್ಷವನ್ನು ಪ್ರಮಾಣವೆಂದೊಪ್ಪಿಲ್ಲ. ಪರಮಾತ್ಮನ ಕುರಿತು ಪ್ರತ್ಯಕ್ಷವನ್ನೇ ಒಪ್ಪಿಲ್ಲ. ಪಟುಧ್ಯಾನವೇ 'ದರ್ಶನ'ಪದದಿಂದ ಅಭಿಪ್ರೇತ ವಾದದ್ದು ಎಂದು ರಾಮಾನುಜರ ಸಿದ್ಧಾಂತ.

'ಅಖಿಲಾಮ್ನಾಯೈಕವೇದ್ಯೋ ಹರಿಃ' –ಶ್ರೀಹರಿಯು ಸಕಲ ವೇದ ಪ್ರತಿಪಾದ್ಯ ಎಂಬ ಈ ಪ್ರಮೇಯವೂ ಶ್ರೀಮಧ್ವಮತದಲ್ಲಿಯೇ ಇರುವಂಥದು. ಏಕೆಂದರೆ ರಾಮಾನುಜರು ಕರ್ಮಕಾಂಡದಿಂದ ಭಗವಂತ ಪ್ರತಿಪಾದ್ಯನಲ್ಲ ಎಂದು ಹೇಳುವರು.

ಹೀಗೆ ವಿಮರ್ಶೆ ಮಾಡಿದಾಗ ಶ್ರೀ ಮಧ್ವರು ನಿರೂಪಿಸಿದ ಯಾವ ತತ್ವಗಳೂ ರಾಮಾನುಜರು ಹೇಳಿಲ್ಲ ಎನ್ನುವುದು ಸ್ಪಷ್ಟವಾಗುವುದು. ಆದುದರಿಂದ 'ಶ್ರೀಮನ್ಮಧ್ವಮತೇ ಏವ ಹರಿಃ ಪರತರಃ' –ಶ್ರೀಮನ್ಮಧ್ವಮತದಲ್ಲಿಯೇ ಹರಿ ಸರ್ವೋತ್ತಮ. ಈ ರೀತಿಯಾಗಿ ಅನ್ವಯಿಸಿ ಸಮಗ್ರ ಶ್ಲೋಕವನ್ನು ಅರ್ಥೈಸಿಕೊಳ್ಳಬೇಕು. ●

೩. ೧೩. ಜಗತ್‌ಸತ್ಯತ್ವ ಪ್ರತಿಪಾದನೆಯ ಫಲ

'ಆನಂದತೀರ್ಥಮತಮುಜ್ಝಿತದೋಷಜಾತಂ......' ಎಂಬುದಾಗಿ ಶ್ರೀಮದಾಚಾರ್ಯರು ಪ್ರಚುರಪಡಿಸಿರುವ ಮತದಲ್ಲಿ ಯಾವುದೇ ದೋಷವಿಲ್ಲ ಎಂದು ಸಾರಲಾಗಿದೆ.

ಆದರೆ ಆನಂದತೀರ್ಥರ ಮತದಲ್ಲಿ ಜಗತ್ತಿನ ಸತ್ಯತ್ವವನ್ನು ಪ್ರತಿಪಾದಿಸಲಾಗುವುದು. ಪ್ರತಿಯೊಬ್ಬರ ಅನುಭವಕ್ಕೆ ಗೋಚರವಾಗುವ ಜಗತ್ತಿನ ಸತ್ಯತ್ವವನ್ನು ಪ್ರತಿಪಾದಿಸಿದಲ್ಲಿ ಅಪೂರ್ವತೆಗೆ ಭಂಗಬಾರದೇ? ಅಂದರೆ ಆನಂದತೀರ್ಥರ ಮತ ಪ್ರತಿಪಾದಿಸುವ ಜಗತ್ ಸತ್ಯತ್ವ ವಿಷಯದಲ್ಲಿ ಅಪೂರ್ವತೆ ಇಲ್ಲ ಎಂಬ ದೋಷ ಇಲ್ಲವೇ? ಎಂಬ ಸಂದೇಹ ಬಂದರೆ ಆಶ್ಚರ್ಯವಿಲ್ಲ.

ಶ್ರೀಮಧ್ವಮತದಲ್ಲಿ ಸತ್ಯ ಎಂದು ಸಮರ್ಥಿತವಾಗುವ ಜಗತ್ತಿನಲ್ಲಿ ಕಣ್ಣಿಗೆ ಕಾಣುವ ಪದಾರ್ಥಗಳು ಮಾತ್ರ ಸೇರಿರುವುದಲ್ಲ. ಇಂದ್ರಿಯಗಳಿಗೆ ಗೋಚರಿಸದ ಧರ್ಮ, ಅಧರ್ಮ, ಪುಣ್ಯ, ಪಾಪ, ವರ್ಣಾಶ್ರಮಧರ್ಮ –ಮುಂತಾದವೂ ಜಗತ್ತಿನಲ್ಲಿ ಸೇರಿವೆ. 'ಜಗನ್ಮಿಥ್ಯಾ' ಎಂದು ವಾದಿಸುವ ಅದ್ವೈತಿಗಳು ಧರ್ಮಾಧರ್ಮ, ಪುಣ್ಯಪಾಪಾದಿಗಳನ್ನು ಮಿಥ್ಯಾ ಎಂದು ಸಾಧಿಸುವರು. ಧರ್ಮಾಧರ್ಮಾದಿಗಳು 'ಸುಳ್ಳು' ಎಂದು ಸಾಧಿತವಾದಲ್ಲಿ ಅವುಗಳ ವಿಷಯದಲ್ಲಿ ಅವಿಶ್ವಾಸ ಮೂಡಿ, ನಾಸ್ತಿಕ್ಯವಾದದ ದುಷ್ಪರಿಣಾಮಗಳು ಕಾಣಿಸಿಕೊಂಡಾವು! ಹೀಗಾಗಬಾರದೆಂದು ಶ್ರೀಮದಾಚಾರ್ಯರು ಜಗತ್ ಸತ್ಯತ್ವವನ್ನು ಸಮರ್ಥಿಸಿ, ಧರ್ಮಾಧರ್ಮಾದಿಗಳಲ್ಲಿ ವಿಶ್ವಾಸ ಮೂಡುವಂತೆ ಮಾಡಿರುವರು. ಹೀಗೆ ಅತೀಂದ್ರಿಯಗಳಾದ ಧರ್ಮಾಧರ್ಮಾದಿಗಳನ್ನೂ ಒಳಗೊಂಡ ಜಗತ್ತಿಗೆ ಸತ್ಯತ್ವದ ಸಮರ್ಥನೆಯಿಂದ ಅಪೂರ್ವತೆಗೂ ಭಂಗವಿಲ್ಲ; ಸಾರ್ಥಕ್ಯವೂ ಇದ್ದೇ ಇದೆ.

ಮಿಥ್ಯಾ ಎಂದರೆ ಅನಿತ್ಯ ಆಗಲಾರದು: ಅದ್ವೈತಶಾಸ್ತ್ರದಲ್ಲಿ ಅನಿತ್ಯ ಎಂಬ ಅಭಿಪ್ರಾಯವನ್ನಿಟ್ಟುಕೊಂಡು ಜಗತ್ತನ್ನು ಮಿಥ್ಯಾ ಎಂದಿರುವುದೆಂದು ಕೆಲವರು ಸಮಾಧಾನಿಸುವುದಿದೆ. ಆದರೆ ಮಿಥ್ಯಾ ಎಂಬುದಕ್ಕೆ ಅನಿತ್ಯ ಎಂಬ ಅರ್ಥವನ್ನು ಒಪ್ಪಿದಲ್ಲಿ, ಅದ್ವೈತಿಗಳು ಬ್ರಹ್ಮನ ಸರ್ವಜ್ಞತ್ವಾದಿ ಗುಣಗಳೂ ಮಿಥ್ಯಾ ಎಂದು ಹೇಳುತ್ತಿದ್ದು, ಅವರ ಪ್ರಕಾರ ಆ ಸರ್ವಜ್ಞತ್ವಾದಿ ಗುಣಗಳೆಲ್ಲ ಅನಿತ್ಯಗಳೆಂದಂತಾದೀತು!

ಅಲ್ಲದೆ, ಜಗತ್ತಿನಲ್ಲಿ ದೇಶಕಾಲಗಳೂ ಸೇರಿದ್ದು, ಜಗತ್ತು ಮಿಥ್ಯಾ ಎಂದರೆ ದೇಶಕಾಲಗಳೂ ಮಿಥ್ಯಾ ಎಂದಂತಾಗಿ, ಅನಿತ್ಯಗಳು ಅಂದರೆ ಒಂದು ಕಾಲದಲ್ಲಿ ದೇಶಕಾಲಗಳೂ ಇಲ್ಲ ಎಂದಂತಾಯಿತು. ದೇಶಕಾಲಗಳು ಇಲ್ಲ ಎಂದಾದರೆ ದೇಶಕಾಲಗಳ ಸಂಬಂಧರೂಪವಾದ ಅಸ್ತಿತ್ವ ಬ್ರಹ್ಮನಿಗೆ ಕೊಡುವುದಿಲ್ಲ ಎಂದು ಬ್ರಹ್ಮನೂ ಶೂನ್ಯ ಎಂದಾದಾನು!

ಅದ್ವೈತಮತದಲ್ಲಿ ಎಲ್ಲರಿಗೂ 'ಬ್ರಹ್ಮ' ಆಗುವ ಅವಕಾಶ ಇದೆ ಎಂದು ಪ್ರಲೋಭನೆಯನ್ನು ಒಡ್ಡುವುದುಂಟು. ಆದರೆ ಆ 'ಬ್ರಹ್ಮ' 'ನಿರ್ಗುಣ' 'ನಿರಾಕಾರ' 'ನಿಷ್ಕ್ರಿಯ' –ಎಂದ ಮೇಲೆ ಶೂನ್ಯ ಸ್ವಭಾವದ ಅಂತಹ ಬ್ರಹ್ಮ ಆಗುವುದೇನೂ ಪುರುಷಾರ್ಥ ಎನಿಸದು!

ಸಮಾನತೆಯ ಸಂದೇಶದಿಂದ ಸಾಧನೆಗೆ ಚ್ಯುತಿ: ರಾಮಾನುಜೀಯ ಮತದಲ್ಲಿ ಎಲ್ಲ ಜೀವರಿಗೆ ಸಮಾನತೆಯನ್ನು ಪ್ರತಿಪಾದಿಸಿ ರುವುದು ಮೇಲ್ನೋಟಕ್ಕೆ ಆಕರ್ಷಕವೆನಿಸಬಲ್ಲದು. ಆದರೆ ಜೀವರ ಸಮಾನತೆ ಸಂಸಾರಾವಸ್ಥೆಯಲ್ಲಿ ಮಾತ್ರವಲ್ಲ; ಮೋಕ್ಷಾವಸ್ಥೆಯಲ್ಲಿಯೂ ಇದೆ ಎಂದು ಒಪ್ಪಲಾಗುವ ಆ ಮತದ ಪ್ರಕಾರ ಸಾಧಕರ ಸಾಧನೆಗೆ ಕೊಡಲಿ ಏಟು ಕೊಟ್ಟಂತಾಗಿದೆ. ಎಷ್ಟೇ ಸಾಧನೆ ನಡೆಸಿದರೂ ಮೋಕ್ಷದಲ್ಲಿ

ಎಲ್ಲರಿಗೂ ಒಂದೇ ಪ್ರಮಾಣದ ಸುಖ ಎಂದರೆ ಯಾರು ತಾನೇ ಅಧಿಕಸಾಧನೆಗಾಗಿ ಪರಿಶ್ರಮಪಟ್ಟಾನು?

ಶ್ರೀ ಮಧ್ವಮತದಲ್ಲಾದರೂ ಪ್ರತಿಯೊಬ್ಬ ಜೀವನಲ್ಲೂ ತಾರತಮ್ಯವನ್ನು ಒಪ್ಪಿಕೊಂಡು, 'ಸಾಧನಸ್ಯೋತ್ತಮತ್ವೇನ ಸಾಧ್ಯಂ ಚೋತ್ತಮಾಮಾಪ್ನುಯುಃ' –ಎಂಬುದಾಗಿ ಸಾಧನೆಯ ಪ್ರಮಾಣಕ್ಕನುಗುಣವಾಗಿ ಮೋಕ್ಷದ ಸುಖದಲ್ಲೂ ಏರುಪೇರುಗಳಿವೆ –ಎಂದು ಸಂದೇಶಿಸಿರುವುದರಿಂದ ಹೆಚ್ಚಿನ ಸಾಧನೆಗೆ ಪುಷ್ಟಿ ನೀಡಿದಂತಾಗಿದೆ.

ಹೀಗೆ ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ ತಾರತಮ್ಯ ತತ್ವದಿಂದಾಗಿ ಸಾಧಕರ ಸಾಧನೆಗೂ ಹೆಚ್ಚೆಚ್ಚು ಸ್ಫೂರ್ತಿ ಸಂದಂತಾಗಿದೆ.

●

೩. ೧೪. ಬಿಂಬಪ್ರತಿಬಿಂಬಭಾವದ ರಹಸ್ಯ

ಬ್ರಹ್ಮನು ಬಿಂಬನು ಜೀವರುಗಳು ಅವನ ಪ್ರತಿಬಿಂಬರುಗಳು ಎಂದು ಶ್ರುತಿ, ಸೂತ್ರ, ಸ್ಮೃತಿ–ವಚನಗಳಿಂದ ಸಿದ್ಧವಾಗಿರುತ್ತದೆ. ಈ ತತ್ವವನ್ನು ದ್ವೈತಿಗಳು ಅದ್ವೈತಿಗಳು ಇಬ್ಬರೂ ಅಂಗೀಕರಿಸಿದ್ದಾರೆ. ನಮ್ಮ ಮುಖವು ಬಿಂಬವು. ನಮ್ಮ ಎದುರಿನಲ್ಲಿ ಇರುವ ಕನ್ನಡಿ ಮುಂತಾದ ಉಪಾಧಿಗಳಲ್ಲಿ ತೋರತಕ್ಕದ್ದು ನಮ್ಮ ಮುಖದ ಪ್ರತಿಬಿಂಬವು ಎಂದು ಲೋಕದಲ್ಲಿ ಕರೆಯಲ್ಪಡುತ್ತದೆ. ಈ ಲೋಕಸಿದ್ಧವಾದ ಪ್ರತಿಬಿಂಬವು ಬಿಂಬಕ್ಕಿಂತ ಭಿನ್ನವಾಗಿ ಸತ್ಯವಾಗಿ ಇದೆಯೋ ಅಥವಾ ಇಲ್ಲವೋ ಎಂಬ ಒಂದು ವಿವಾದವು ದ್ವೈತಾದ್ವೈತ ಮತೀಯರಲ್ಲಿ ಕಾಣುತ್ತದೆ. ದ್ವೈತಿಗಳು ಪ್ರತಿಬಿಂಬವು ಬಿಂಬಕ್ಕಿಂತ ಭಿನ್ನವಾಗಿ ಸತ್ಯವಾಗಿ ಇದೆ ಎಂದು ಹೇಳಿದರೆ ಅದಕ್ಕೆ ವಿರುದ್ಧವಾಗಿ ಅದ್ವೈತಿಗಳು ಹೇಳುತ್ತಾರೆ ತೇಜೋಮಯವಾದ ಚಕ್ಷುರಿಂದ್ರಿಯದಿಂದ ಹೊರಡುವ ರಶ್ಮಿಗಳು ಸ್ವಚ್ಛಗಳಾದ ಕನ್ನಡಿ ಮುಂತಾದ ಉಪಾಧಿಗಳಿಂದ ಯುಕ್ತವಾದರೆ ಅದರಲ್ಲಿ ಕೆಲವು ರಶ್ಮಿಗಳು ತಿರುಗಿ ಬಂದು ನಮ್ಮ ಮುಖ ಸಂಬದ್ಧಗಳಾಗುವುದರಿಂದ ನಮ್ಮ ಮುಖವನ್ನೇ ತೋರಿಸುವವು. ಕೆಲವು ರಶ್ಮಿಗಳು ತಿರುಗಿ ಬಾರದೆ ಕನ್ನಡಿಯಿಂದ ಸಂಬದ್ಧವಾಗಿ ಇದ್ದು ಕನ್ನಡಿಯನ್ನು ತೋರಿಸುವವು. ಈ ರೀತಿ ನಮ್ಮ ಮುಖವೂ ಕನ್ನಡಿಯೂ ಪ್ರತ್ಯೇಕವಾಗಿ ತೋರಬೇಕಾಗಿದ್ದರೂ ಕನ್ನಡಿಯಲ್ಲಿ ಮುಖವು ಉಂಟು ಎಂದು ತಿಳಿವಳಿಕೆಯಾಗುವುದು ಕನ್ನಡಿ ಎಂಬ ಉಪಾಧಿ ನಿಮಿತ್ತದಿಂದ ಉಂಟಾಗುವ ಭ್ರಮವು. ಆದುದರಿಂದ ಈ ಭ್ರಮಕ್ಕೆ ವಿಷಯವಾದ ಪ್ರತಿಬಿಂಬವು ಬಿಂಬಕ್ಕಿಂತ ಬೇರೆಯಾಗಿ ಇಲ್ಲ ಎಂದು ಅದ್ವೈತಿಗಳ ವಾದದ ಸರಣಿ. ಈ ರೀತಿಯಾದ ಪ್ರಕ್ರಿಯೆಯನ್ನು ಅದ್ವೈತಿಗಳು ಕಲ್ಪಿಸಲಿಕ್ಕೆ ಪ್ರಮಾಣವು ಯಾವುದು ಎಂದು ದ್ವೈತಿಗಳು ಅದ್ವೈತಿಗಳನ್ನು ಕೇಳುತ್ತಾರೆ. ಪ್ರತಿಬಿಂಬವು ಬಿಂಬಕ್ಕಿಂತ ಭಿನ್ನವಾಗಿ ಸತ್ಯವಾಗಿ ಇದೆ ಎಂಬುದಕ್ಕೆ ಏನು ಪ್ರಮಾಣ ಎಂದು ಯಾರೂ ದ್ವೈತಿಗಳನ್ನು ಕೇಳುವುದಿಲ್ಲ. ಎಲ್ಲರಿಗೂ ಬಿಂಬಪ್ರತಿಬಿಂಬಗಳು ಬೇರೆಯಾಗಿ ಸತ್ಯವಾಗಿ ತೋರುವುದು ಅನುಭವಸಿದ್ಧವಾಗಿದೆ. ಈ ಅನುಭವಗಳನ್ನು

ಭ್ರಾಂತಿ ಎಂದು ಅದ್ವೈತಿಗಳು ಹೇಳುತ್ತಾರೆ. ಆಗ ಈ ಅನುಭವವು ಭ್ರಾಂತಿ ಎಂಬುದಕ್ಕೆ ಏನು ಪ್ರಮಾಣ ಎಂದು ಪ್ರಶ್ನೆಯನ್ನು ಮಾಡಲು ಅವಕಾಶ ಇದೆ. ಲೋಕದಲ್ಲಿ ಮುತ್ತಿನ ಚಿಪ್ಪನ್ನು ನೋಡಿ ಇದು ಬೆಳ್ಳಿ ಎಂದು ತಿಳಿವಳಿಕೆಯಾಗುವುದು ಭ್ರಾಂತಿ ಎಂಬುದಕ್ಕೆ ಪರೀಕ್ಷಾನಂತರ ಇದು ಬೆಳ್ಳಿಯು ಅಲ್ಲ ಎಂದು ಉಂಟಾಗುವ ಪ್ರತ್ಯಕ್ಷ ರೂಪವಾದ ಬಾಧಜ್ಞಾನವೇ ಪ್ರಮಾಣವೆಂದು ಎಲ್ಲರೂ ಒಪ್ಪಿದ್ದಾರೆ. ಅದರಂತೆ ಪ್ರತಿಬಿಂಬವನ್ನು ಪರೀಕ್ಷಿಸಿದಾಗ ಇದು ಬಿಂಬಕ್ಕಿಂತ ಬೇರೆಯಾಗಿ ಸತ್ಯವಾಗಿ ಇಲ್ಲವೆಂದು ಪ್ರತ್ಯಕ್ಷರೂಪವಾದ ಬಾಧಜ್ಞಾನವು ಈ ವರೆಗೆ ಯಾರಿಗೂ ಉಂಟಾಗಲಿಲ್ಲ. ಆದುದರಿಂದ ಪ್ರತಿಬಿಂಬವು ಬಿಂಬಕ್ಕಿಂತ ಬೇರೆಯಾಗಿ ಸತ್ಯವಾಗಿ ತೋರುವುದು ಭ್ರಾಂತಿ ಎಂದು ಅದ್ವೈತಿಗಳು ಹೇಳುವುದಕ್ಕೆ ಏನು ಪ್ರಮಾಣ ಎಂಬ ಪ್ರಶ್ನೆಯು ಅದ್ವೈತಿಗಳ ಮೇಲೆ ಈ ವರೆಗೂ ಹಾಗೆಯೇ ಉಳಿದಿದೆ.

ಪ್ರತಿಬಿಂಬವು ಬಿಂಬಕ್ಕಿಂತ ಬೇರೆಯಾಗಿ ಸತ್ಯವಾಗಿ ಇರುವುದಾದರೆ ಅದು ಯಾವ ವಸ್ತುವಿನ ವಿಕಾರ ಎಂದು ಕೆಲವರು ಕೇಳುತ್ತಾರೆ. ಪ್ರತಿಬಿಂಬವು ಕನ್ನಡಿ ಮುಂತಾದ ಉಪಾಧಿಯ ವಿಕಾರ ಎಂದು ದ್ವೈತಿಗಳು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ತೇಜೋಮಯವಾದ ಚಕ್ಷುಸ್ಸಿನಿಂದ ಹೊರಟ ರಶ್ಮಿಗಳಲ್ಲಿ ಕೆಲವು ಮಾತ್ರ ತಿರುಗಿ ಬಂದವು. ಎಲ್ಲವೂ ತಿರುಗಿ ಬಂದಿಲ್ಲ. ಏಕೆ ಎಂದು ಪ್ರಶ್ನೆಯನ್ನು ಮಾಡಿದರೆ ಅದಕ್ಕೆ ಕಾರಣವನ್ನು ಅದ್ವೈತಿಗಳು ಈ ವರೆಗೂ ಹೇಳಲಿಲ್ಲ. ಮತ್ತು ಉದ್ದವಾದ ಉಪಾಧಿಯಲ್ಲಿ ಮುಖವು ಉದ್ದವಾಗಿಯೂ ಉರುಟಾದ ಉಪಾಧಿಯಲ್ಲಿ ಮುಖವು ಉರುಟಾಗಿಯೂ ಕಾಣುತ್ತದೆ. ಉಪಾಧಿ ಸಂಬದ್ಧಗಳಾದ ರಶ್ಮಿಗಳು ತಿರುಗಿ ಬಂದು ಮುಖಸಂಬದ್ಧಗಳಾಗಿ ಮುಖವನ್ನೇ ತೋರಿಸುವುದಾದರೆ ಒಂದು ಕಡೆ ಮುಖವು ಉದ್ದವಾಗಿ ಮತ್ತೊಂದು ಕಡೆ ಉರುಟಾಗಿ ತೋರಲು ಕಾರಣವಿಲ್ಲ. ಪ್ರತಿಬಿಂಬವು ಉಪಾಧಿಯ ಪರಿಣಾಮವಾಗಿ ಬಿಂಬಕ್ಕಿಂತ ಬೇರೆಯಾಗಿ ಇರುವ ವಸ್ತು ಎಂಬ ವಾದದಲ್ಲಿ ಉಪಾಧಿಯು ಉದ್ದವಾಗಿ ಇರುವ ಕಾರಣ ಅದರ ವಿಕಾರವಾಗಿ ಇರುವ ಪ್ರತಿಬಿಂಬವು ಉದ್ದವಾಯಿತು. ಉಪಾಧಿಯು ಉರುಟಾಗಿದ್ದರೆ ಅದರ ವಿಕಾರವಾಗಿರುವ ಪ್ರತಿಬಿಂಬವು ಉರುಟಾಗಿ ಇರುವುದು ಎಂದು ಸಮಾಧಾನವು ಇದ್ದ ಕಾರಣ ದ್ವೈತಿಗಳ ಮೇಲೆ ಆ ಪ್ರಶ್ನೆಯು ಇರುವುದಿಲ್ಲ. ಅದ್ವೈತಿಗಳು ಪ್ರತಿಬಿಂಬವು ಕೆಲವು ಕಡೆ ಉರುಟಾಗಿ ಕೆಲವು ಕಡೆ ಉದ್ದವಾಗಿ ಏಕೆ ತೋರುತ್ತದೆ ಎಂಬ ಪ್ರಶ್ನೆಗೆ ಈ ವರೆಗೂ ಉತ್ತರವನ್ನು ಹೇಳಲಿಲ್ಲ. ಮತ್ತು ಕನ್ನಡಿಯಲ್ಲಿ ಪ್ರತಿಬಿಂಬವು ಇಲ್ಲವಾದರೆ ಕನ್ನಡಿಯಲ್ಲಿ ಪ್ರತಿಬಿಂಬವು ಕಾಣುವಾಗ ಅದರ ಎದುರು ಕೆಮರಾವನ್ನು ಇಟ್ಟು ಫೋಟೋವನ್ನು ತೆಗೆದಾಗ ಕನ್ನಡಿಯಲ್ಲಿ ಪ್ರತಿಬಿಂಬ ಇರುವಂತೆ ಫೋಟೋ ಬೀಳುವುದು ಕೂಡುವುದಿಲ್ಲ.

ಕನ್ನಡಿಯಲ್ಲಿ ಪ್ರತಿಬಿಂಬವನ್ನು ನೋಡತಕ್ಕ ಪುರುಷನು ನನ್ನ ಮುಖವು ಎಷ್ಟು ಸುಂದರವಾಗಿ ಇದೆ ಎಂದು ಹೇಳುತ್ತಾನೆ. ಇದರಿಂದ ಆ ಪುರುಷನಿಗೆ ಕನ್ನಡಿಯಲ್ಲಿ ಇರುವುದು ತನ್ನ ಮುಖವೇ ಹೊರತು ಬೇರೆಯಲ್ಲವೆಂದು ಪ್ರತ್ಯಕ್ಷಾನುಭವ ಇದೆ

ಎಂದು ತಿಳಿಯುತ್ತದೆ. ಈ ಪ್ರತ್ಯಕ್ಷಾನುಭವರೂಪವಾದ ಬಾಧಜ್ಞಾನರೂಪಾಧಾರದಿಂದ ಬಿಂಬಕ್ಕಿಂತ ಬೇರೆಯಾದ ಪ್ರತಿಬಿಂಬವು ಸತ್ಯವಾಗಿ ಇಲ್ಲವೆಂದು ಸಿದ್ಧವಾಗುತ್ತದೆಂದು ಅದ್ವೈತಿಗಳು ಹೇಳುವುದು ಯುಕ್ತವಾಗುವುದಿಲ್ಲ. ತನ್ನ ಫೋಟೋವನ್ನು ನೋಡತಕ್ಕ ಪುರುಷನೂ ಕೂಡ ತನ್ನ ಮುಖವು ಎಷ್ಟು ಸುಂದರವಿದೆ ಎಂದು ಹೇಳುತ್ತಾನೆ. ಇದರಿಂದ ಫೋಟೋ ಕೂಡಾ ಮುಖಕ್ಕಿಂತ ಬೇರೆಯಾಗಿ ಸತ್ಯವಾಗಿ ಇಲ್ಲ ಎಂದು ಆಗಬೇಕಾದೀತು.

ಮನುಸ್ಮೃತಿಯಲ್ಲಿ -

ನೇಕ್ಷೇತೋದ್ಯಂತಮಾದಿತ್ಯಂ ನಾಸ್ತಮ್ಯಂತಂ ಕದಾಚನ ।
ನೋಪರಕ್ತಂ ನ ವಾರಿಸ್ಥಂ ನ ಮಧ್ಯಂ ನಭಸೋಗತಂ ॥

ಸೂರ್ಯನು ಉದಯಿಸುತ್ತಿರುವಾಗ ಅಸ್ತಮಯವನ್ನು ಹೊಂದುತ್ತಿರುವಾಗ ಗ್ರಹಣವುಳ್ಳವನು ಆಗುವಾಗ ನೀರಿನಲ್ಲಿರುವಾಗ ಆಕಾಶದ ಮಧ್ಯದಲ್ಲಿ ಇರುವಾಗ ಸೂರ್ಯನನ್ನು ನೋಡಬಾರದು ಎಂದು ವಚನವು ಇದೆ. ಈ ವಚನದಲ್ಲಿ ನೀರಿನಲ್ಲಿರತಕ್ಕವನು ಸೂರ್ಯನು ಎಂದು ಹೇಳಿದ್ದರಿಂದ ಬಿಂಬಾತಿರಿಕ್ತ ಪ್ರತಿಬಿಂಬವು ಇಲ್ಲ ಎಂದು ಸಿದ್ಧವಾಗುತ್ತದೆ ಎಂದು ಅದ್ವೈತಿಗಳು ಹೇಳುವುದು ಕೂಡುವುದಿಲ್ಲ. ಚಂದ್ರನಿಗೆ ಸದೃಶವಾದ ಮುಖವನ್ನು ಕವಿಗಳು ವರ್ಣಿಸುವಾಗ ಮುಖವನ್ನು ಚಂದ್ರ ಎಂದು ಹೇಳುವುದು ಉಂಟು. ಅದರಂತೆ ಈ ಮನುಸ್ಮೃತಿ ವಚನದ ಅಭಿಪ್ರಾಯವೆಂದು ಹೇಳಬೇಕು. 'ಆದಿತ್ಯೋ ಯೂಪಃ' ಎಂಬ ವೇದವಾಕ್ಯಕ್ಕೆ ಯಜ್ಞಸ್ತಂಭವು ಆದಿತ್ಯನು ಎಂದು ಅರ್ಥವಲ್ಲ. ಆ ಅರ್ಥವು ಪ್ರತ್ಯಕ್ಷವಿರುದ್ಧವಾಗುತ್ತದೆ. ಆದುದರಿಂದ ಯಜ್ಞಸ್ತಂಭವು ಆದಿತ್ಯನಂತೆ ಹೊಳೆಯುತ್ತದೆ. ಆದ್ದರಿಂದ ಆದಿತ್ಯನಿಗೆ ಸದೃಶವಾದದ್ದು ಎಂದು ಆ ವೇದವಾಕ್ಯಕ್ಕೆ ಅರ್ಥವನ್ನು ಹೇಳಬೇಕೆಂದು ಎಲ್ಲ ವಾದಿಗಳು ಒಪ್ಪಿದ್ದಾರೆ. ಅದರಂತೆ ನೀರಿನಲ್ಲಿರುವ ಸೂರ್ಯನ ಪ್ರತಿಬಿಂಬ ಮತ್ತು ಸೂರ್ಯ ಈ ಎರಡು ವಸ್ತುಗಳು ಬೇರೆ ಬೇರೆ ಎಂದು ಪ್ರತ್ಯಕ್ಷ ಇದ್ದ ಕಾರಣ ಈ ಪ್ರತ್ಯಕ್ಷಕ್ಕೆ ವಿರುದ್ಧವಾಗಿ ಮನುಸ್ಮೃತಿವಚನಕ್ಕೆ ಅರ್ಥವನ್ನು ಹೇಳಬಾರದು. ಈ ರೀತಿ ಸಾಧಕ ಬಾಧಕಗಳನ್ನು ವಿಚಾರಮಾಡುವಾಗ ಬಿಂಬಕ್ಕಿಂತ ಪ್ರತಿಬಿಂಬವು ಬೇರೆ. ಅದು ಸತ್ಯ ಎಂದು ಸಿದ್ಧವಾಗುತ್ತದೆ. ಅದರಂತೆ ಬಿಂಬ-ಪ್ರತಿಬಿಂಬ ಭಾವವುಳ್ಳ ಜೀವ ಬ್ರಹ್ಮರುಗಳು ಕೂಡ ಬೇರೆ ಬೇರೆ ಎಂದು ಸಿದ್ಧವಾಗುತ್ತದೆ. ಮನುಸ್ಮೃತಿಯಲ್ಲಿ ನೀರಿನಲ್ಲಿ ಇರುವ ಸೂರ್ಯನ ಪ್ರತಿಬಿಂಬವನ್ನು ಸೂರ್ಯ ಎಂದು ಹೇಳಿದಂತೆ ಬ್ರಹ್ಮನ ಪ್ರತಿಬಿಂಬನಾದ ಜೀವನನ್ನು ಬ್ರಹ್ಮ ಎಂದು 'ತತ್ವಮಸಿ' ಶ್ರುತಿಯು ಹೇಳುತ್ತದೆ. ಆದ್ದರಿಂದ ಜೀವಬ್ರಹ್ಮರಿಗೆ ಭೇದವನ್ನು ಹೇಳಿದರೆ 'ತತ್ವಮಸಿ' ಶ್ರುತಿಯ ವಿರೋಧವು ಬರುವುದಿಲ್ಲ ಎಂದು ಸಿದ್ಧವಾಗುತ್ತದೆ.

ಜೀವಬ್ರಹ್ಮರುಗಳಿಗೆ ಬಿಂಬಪ್ರತಿಬಿಂಬಭಾವವನ್ನು ಹೇಳುವ ಶ್ರುತ್ಯಾದಿ ವಚನಗಳು ಬಹ್ವರ್ಥಗರ್ಭಿತಗಳಾಗಿ ಇವೆ.

1. ಲೋಕದಲ್ಲಿ ಬಿಂಬ-ಪ್ರತಿಬಿಂಬಗಳು ಪರಸ್ಪರ ಭಿನ್ನಗಳಾಗಿದ್ದ ಕಾರಣ ಅದರಂತೆ ಜೀವಬ್ರಹ್ಮರು ಪರಸ್ಪರ ಭಿನ್ನರು.

2. ಲೋಕದಲ್ಲಿ ಪ್ರತಿಬಿಂಬವು ಚಲನವುಳ್ಳದ್ದಾಗಬೇಕಾದರೆ ಬಿಂಬದಲ್ಲಿ ಚಲನವಾಗಬೇಕು. ಆದ್ದರಿಂದ ಪ್ರತಿಬಿಂಬವು ಬಿಂಬದ ಅಧೀನವಾಗಿದೆ. ಅದರಂತೆ ಜೀವನಲ್ಲಿ ಆಗುವ ಎಲ್ಲ ಪ್ರವೃತ್ತಿಗಳು ಬ್ರಹ್ಮನ ಪ್ರವೃತ್ತಿಯ ಅಧೀನಗಳು. ಆದ್ದರಿಂದ ಜೀವನು ಬ್ರಹ್ಮನ ಅಧೀನನು.

3. ಲೋಕದಲ್ಲಿ ಬಿಂಬದ ಆಕಾರದಂತೆ ಆಕಾರವುಳ್ಳದ್ದು ಪ್ರತಿಬಿಂಬವು. ಅದರಂತೆ ಪರಮಾತ್ಮನು ಮತ್ಸ್ಯಕೂರ್ಮಾದಿ ಅನಂತರೂಪವುಳ್ಳವನಾದ್ದರಿಂದ ಅನಂತ ಜೀವರೂ ಮತ್ಸ್ಯಕೂರ್ಮಾದಿ ರೂಪಗಳಿಂದ ಇದ್ದಾರೆ.

4. ಲೋಕದಲ್ಲಿ ಬಿಂಬದಲ್ಲಿ ಸೌಂದರ್ಯಾದಿ ಗುಣಗಳು ಇದ್ದರೆ ಮಾತ್ರ ಪ್ರತಿಬಿಂಬದಲ್ಲಿ ಸೌಂದರ್ಯಾದಿಗಳು ಇರುವವು. ಬಿಂಬದಲ್ಲಿದ್ದ ಎಲ್ಲಾ ಗುಣಗಳು ಪ್ರತಿಬಿಂಬದಲ್ಲಿ ಇರುವುದಿಲ್ಲ. ಇದಕ್ಕೆ ಉದಾಹರಣೆ ಮುಖದಲ್ಲಿ ಸುವಾಸನೆಯು ಇದ್ದರೂ ಅದರ ಪ್ರತಿಬಿಂಬದಲ್ಲಿ ಅದು ಇರುವುದಿಲ್ಲ. ಮುಖದ ಚಕ್ಷುಸ್ಸಿನಿಂದ ರಶ್ಮಿಗಳು ಹೊರಡುವುದಿಲ್ಲ. ಪ್ರತಿಬಿಂಬದಲ್ಲಿ ಗುಣಗಳು ಇರಬೇಕಾದರೆ ಬಿಂಬದಲ್ಲಿ ಗುಣಗಳು ಇರಬೇಕೆಂದು ನಿಯಮವು ಇದ್ದಂತೆ ಪ್ರತಿಬಿಂಬದಲ್ಲಿ ದೋಷವು ಇರಬೇಕಾದರೆ ಬಿಂಬದಲ್ಲಿ ಆ ದೋಷವು ಇರಬೇಕೆಂದು ನಿಯಮವು ಇಲ್ಲ. ಅದರಂತೆ ಜೀವನದಲ್ಲಿ ಜ್ಞಾನಾನಂದಾದಿ ಗುಣಗಳು ಇರಲೇಬೇಕು. ಜೀವನಲ್ಲಿ ದೋಷವು ಇದ್ದರೂ ಪರಮಾತ್ಮನಲ್ಲಿ ದೋಷವು ಇರಬೇಕಾಗಿಲ್ಲ. ಪರಮಾತ್ಮನಲ್ಲಿದ್ದ ಎಲ್ಲಾ ಗುಣಗಳು ಜೀವನಲ್ಲಿ ಇರಬೇಕಾಗಿಲ್ಲ.

5. ಪ್ರತಿಬಿಂಬದ ಎದುರಿನಲ್ಲಿ ಬಿಂಬವು ಲೋಕದಲ್ಲಿ ಇದ್ದದ್ದೂ ಕಾಣುತ್ತದೆ. ಅದರಂತೆ ಹೃದಯಾಕಾಶದಲ್ಲಿ ಜೀವನ ಎದುರಲ್ಲಿ ಬ್ರಹ್ಮನು ಇದ್ದಾನೆ.

6. ಲೋಕದಲ್ಲಿ ಬಿಂಬ, ಉಪಾಧಿ ಮತ್ತು ಬಿಂಬೋಪಾಧಿ ಸನ್ನಿಧಿಗಳ ಪೈಕಿ ಯಾವುದಾದರೊಂದು ಹೋದರೆ ಪ್ರತಿಬಿಂಬ ನಷ್ಟವಾಗುತ್ತದೆ. ಅವುಗಳು ಇರುವ ತನಕ ಪ್ರತಿಬಿಂಬವು ಇರುತ್ತದೆ. ಅದರಂತೆ ಬಿಂಬಭೂತ ಪರಮಾತ್ಮ ಜೀವಸ್ವರೂಪ ದೇಹವೆಂಬ ಉಪಾಧಿ ಮತ್ತು ಅವುಗಳ ಸನ್ನಿಧಾನ ಇರುವವರೆಗೆ ಜೀವನು ಇರುವನು. ಅವುಗಳು ಅನಾದಿನಿತ್ಯಗಳಾದ್ದರಿಂದ ಜೀವನೂ ಅನಾದಿನಿತ್ಯನು.

7. ಲೋಕದಲ್ಲಿ ಪ್ರತಿಬಿಂಬವು ಸುಂದರವಾಗಬೇಕಾದರೆ ಬಿಂಬಕ್ಕೆ ಅಲಂಕಾರವನ್ನು ಮಾಡಬೇಕು ಹೊರತು ಪ್ರತಿಬಿಂಬಕ್ಕೆ ಸಾಕ್ಷಾತ್ ಅಲಂಕಾರವು ಶಕ್ಯವಿಲ್ಲ. ಅದರಂತೆ ಜೀವನು ಆನಂದವನ್ನೇ ಅನುಭವಿಸಬೇಕಾದರೆ ಪರಮಾತ್ಮನನ್ನು ಪೂರ್ಣಾನಂದ ಎಂದು ಉಪಾಸನೆ ಮಾಡಬೇಕು ಹೊರತು ಜೀವನಿಗೆ

ಆನಂದವಾಗಬೇಕಾದರೆ ಜೀವನನ್ನು ಮಾತ್ರ ಉಪಚರಿಸಿದರೆ ಪ್ರಯೋಜನ ವಿಲ್ಲ.

8. ಲೋಕದಲ್ಲಿ ಕನ್ನಡಿಯಲ್ಲಿ ಮಾಲಿನ್ಯಾದಿ ದೋಷವಿರುವ ಪ್ರಯುಕ್ತ ಪ್ರತಿಬಿಂಬ ದಲ್ಲಿ ಮಾಲಿನ್ಯಾದಿ ದೋಷವು ಔಪಾಧಿಕವಾಗಿದೆ. ಆ ದೋಷವನ್ನು ಬಿಂಬವು ಪರಿಹರಿಸಲಿಕ್ಕೆ ಸಮರ್ಥವು. ಉಪಾಧಿಯನ್ನು ವಸ್ತ್ರಾದಿಗಳಿಂದ ಒರೆಸಿ ಸ್ವಚ್ಛಮಾಡಿದಾಗ ಪ್ರತಿಬಿಂಬವು ನಿರ್ದೋಷವಾಗುತ್ತದೆ. ಪ್ರತಿಬಿಂಬಕ್ಕೇನೇ ತನ್ನ ದೋಷದ ಪರಿಹಾರವನ್ನು ಮಾಡಲು ಶಕ್ತಿಯು ಇಲ್ಲ. ಅದರಂತೆ ಆನಂದಾದಿ ಗುಣಸ್ವರೂಪನಾದ ಜೀವನಲ್ಲಿ ಅಂತಃಕರಣಾದಿ ಉಪಾಧಿಯ ನಿಮಿತ್ತದಿಂದ ದುಃಖಾದಿಗಳು ಕಾಣುತ್ತದೆ. ಆ ದೋಷಗಳನ್ನು ಜೀವನು ಸ್ವತಃ ಪರಿಹರಿಸಿಕೊಳ್ಳಲು ಶಕ್ತನಲ್ಲ. ಪರಮಾತ್ಮನು ಮಾತ್ರ ಆ ದೋಷಗಳ ಪರಿಹಾರಕ್ಕೆ ಸಮರ್ಥನು.

9. ಲೋಕದಲ್ಲಿ ಸೂರ್ಯನ ಪ್ರತಿಬಿಂಬವನ್ನು ಮನುಸ್ಮೃತಿಯಲ್ಲಿ ಹೇಳಿದಂತೆ ಸೂರ್ಯನಿಂದ ಏಕೀಭೂತ (ಅದು ಸೂರ್ಯ) ಎಂದು ಹೇಳಿದರೂ ಅದರ ಅಭಿಪ್ರಾಯ ಅದು ಸೂರ್ಯಸದೃಶ ಎಂದೇ. ಅದರಂತೆ ತತ್ತ್ವಮಸ್ಯಾದಿ ಶ್ರುತಿಯಲ್ಲಿ ಬ್ರಹ್ಮನಿಂದ ಜೀವನಿಗೆ ಐಕ್ಯವನ್ನು ಹೇಳಿದಂತೆ ಕಂಡರೂ ಅದಕ್ಕೆ ಐಕ್ಯವನ್ನು ಹೇಳುವ ಅಭಿಪ್ರಾಯವು ಇಲ್ಲ. ಜೀವನು ಬ್ರಹ್ಮನಿಗೆ ಸದೃಶನೆಂದೇ ಅಭಿಪ್ರಾಯವನ್ನು ಹೇಳಬೇಕು. ಇತ್ಯಾದಿ ರಹಸ್ಯಾರ್ಥಗಳು ಜೀವಬ್ರಹ್ಮರಿಗೆ ಬಿಂಬಪ್ರತಿಬಿಂಬ ಭಾವವನ್ನು ಹೇಳುವ ಶ್ರುತ್ಯಾದಿಗಳಿಗೆ ಇರುವವು.

ಜೀವಬ್ರಹ್ಮರಿಗೆ ಬಿಂಬಪ್ರತಿಬಿಂಬಭಾವವನ್ನು ಶ್ರುತ್ಯಾದಿಗಳಲ್ಲಿ ಹೇಳಿದ್ದರಿಂದ ಜೀವಬ್ರಹ್ಮರಿಗೆ ಅಭೇದವು ಸಿದ್ಧಿಸುತ್ತದೆಂದು ಅದ್ವೈತಿಗಳು ಹೇಳುವುದು ಅವರ ಮತಕ್ಕೆ ವಿರುದ್ಧವಾದದ್ದು. ಏಕೆಂದರೆ ಅವರು ಸಾಕಾರಬ್ರಹ್ಮನಿಗೆ ಮಾತ್ರ ಚಕ್ಷುರಾದಿ ಇಂದ್ರಿಯಗಳನ್ನು ಒಪ್ಪುತ್ತಾರೆ. ನಿರಾಕಾರಬ್ರಹ್ಮನಿಂದ ಜೀವರಿಗೆ ಐಕ್ಯವನ್ನು ಹೇಳುತ್ತಾರೆ. ನಿರಾಕಾರಬ್ರಹ್ಮನು ಸತ್ಯನು. ಅವನು ಸತ್ಯನಾದ್ದರಿಂದ ಅವನಿಂದ ಜೀವರಿಗೆ ಐಕ್ಯವೂ ಸತ್ಯವಾಗುತ್ತದೆ. ಸಾಕಾರಬ್ರಹ್ಮನು ಅವರ ಮತದಲ್ಲಿ ಮಿಥ್ಯಾ ಆದ್ದರಿಂದ ಆ ಬ್ರಹ್ಮನಿಂದ ಜೀವರಿಗೆ ಐಕ್ಯವನ್ನು ಹೇಳಿದರೆ ಆ ಜೀವಬ್ರಹ್ಮೈಕ್ಯವು ಸುಳ್ಳು ಆಗುತ್ತದೆ. ನಿರಾಕಾರಬ್ರಹ್ಮನು 'ಅಚಕ್ಷುಃಶ್ರೋತ್ರಂ ತದಪಾಣಿಪಾದಂ' ಇತ್ಯಾದಿ ಶ್ರುತಿಯಲ್ಲಿ ಚಕ್ಷುರಿಂದ್ರಿಯರಹಿತನೆಂದು ಹೇಳಲ್ಪಟ್ಟ ಕಾರಣ ಅವನ ಪ್ರತಿಬಿಂಬನು ಜೀವನು ಆಗಲು ಶಕ್ಯವಿಲ್ಲ. ಕಣ್ಣಿನಿಂದ ರಶ್ಮಿಗಳು ಹೊರಟು ಅವಿದ್ಯೆ ಎಂಬ ಉಪಾಧಿಗೆ ತಾಗಿ ಅವುಗಳು ತಿರುಗಿ ಬಂದು ಬ್ರಹ್ಮನನ್ನೆ ತೋರಿಸಿದಾಗ ಜೀವಬ್ರಹ್ಮ ನಿಗೆ ಬಿಂಬಪ್ರತಿಬಿಂಬಭಾವವು ಬರುವುದು. ಆದ್ದರಿಂದ ಸಾಕಾರ ಬ್ರಹ್ಮನಿಗೂ ಜೀವನಿಗೂ ಬಿಂಬಪ್ರತಿಬಿಂಬಭಾವವನ್ನು ಒಪ್ಪಿ ಆ ಬಿಂಬ ಪ್ರತಿಬಿಂಬ ಭಾವದಿಂದ ಸಾಕಾರಬ್ರಹ್ಮನಿಂದ ಜೀವರಿಗೆ ಐಕ್ಯವನ್ನು ಸಾಧಿಸಿದರೆ ಅಂಥ ಐಕ್ಯವನ್ನು ಅವರು ಒಪ್ಪಲಿಲ್ಲವಾದ್ದರಿಂದ ತಾವು ಒಪ್ಪದೆ ಇದ್ದ ಐಕ್ಯವನ್ನು ಸಾಧಿಸಿದಂತೆ ಆಯಿತು.

ಸಾಕಾರಬ್ರಹ್ಮ ಜೀವರುಗಳಿಗೆ ಇರುವ ಬಿಂಬಪ್ರತಿಬಿಂಬ ಭಾವದಿಂದ ನಿರಾಕಾರಬ್ರಹ್ಮ ಜೀವರುಗಳಿಗೆ ಐಕ್ಯವನ್ನು ಸಾಧಿಸುವುದು ವ್ಯಧಿಕರಣವಾಗಿ ಅಸಂಗತವಾಗುವುದು. ಆದ್ದರಿಂದ ಜೀವಬ್ರಹ್ಮರಿಗೆ ಜೀವಪ್ರತಿಬಿಂಬ ಭಾವವು ಶ್ರೀ ಮಧ್ವಸಿದ್ಧಾಂತವನ್ನೇ ಪುಷ್ಟೀಕರಿಸುತ್ತದೆ.

೩. ೧೫. ದಿವ್ಯದರ್ಶನದಿಂದ ಪಾರಮಾರ್ಥಿಕತ್ವಸಿದ್ಧಿ

ಶ್ರೀಕೃಷ್ಣನ ಅನುಗ್ರಹದಿಂದ ಪಡೆದುಕೊಂಡ ದಿವ್ಯಚಕ್ಷುಸ್ಸಿನಿಂದ ಅರ್ಜುನನು ಜಗತ್ತಿನ ಸತ್ಯತ್ವ, ಭೇದ, ತಾರತಮ್ಯಾದಿಗಳನ್ನು ಕಂಡದ್ದೇನೋ ನಿಜ. ಆದರೆ ಅಷ್ಟು ಮಾತ್ರಕ್ಕೆ ಅವೆಲ್ಲ ಪಾರಮಾರ್ಥಿಕ ಸತ್ಯಗಳೆನಿಸಬೇಕಿಲ್ಲ. ವ್ಯಾವಹಾರಿಕಗಳೇ ಆಗಿದ್ದರೂ ಸೂಕ್ಷ್ಮಗಳಾದ ಪ್ರಯುಕ್ತ ಅಂತಹವುಗಳನ್ನು ವಿಷಯೀಕರಿಸುವ ದರ್ಶನ ದಿವ್ಯದರ್ಶನವೆನಿಸಬಹುದಾಗಿದೆ. ವ್ಯಾವಹಾರಿಕಗಳೇ ಆಗಿದ್ದು ಸೂಕ್ಷ್ಮಗಳೆನಿಸಿರುವ ಪುಣ್ಯ, ಪಾಪ, ದೇವತೆಗಳು ಮುಂತಾದವುಗಳನ್ನು ವಿಷಯೀಕರಿಸುವ ಜ್ಞಾನ ದಿವ್ಯಜ್ಞಾನವೆನಿಸುವಂತೆ. ಆದ್ದರಿಂದ ದಿವ್ಯದರ್ಶನಕ್ಕೆ ಗೋಚರಿಸಿರುವವೆಂದಾಕ್ಷಣ ವಿಷ್ಣುಪಾರಮ್ಯಾದಿಗಳೆಲ್ಲ ಪಾರಮಾರ್ಥಿಕವೆನಿಸಬೇಕಿಲ್ಲ–ಎಂದು ಪರಮತೀಯರು ಸಮರ್ಥಿಸುವ ಸಾಧ್ಯತೆ ಇದೆ.

ಆದರೆ ಕೃಷ್ಣನು ವಿಶ್ವರೂಪಿಯಾದ ತನ್ನನ್ನು ತಿಳಿದುಕೊಳ್ಳಲು, ಸಾಕ್ಷಾತ್ಕರಿಸಿಕೊಳ್ಳಲು ಹಾಗೂ ತನ್ನಿಂದ ಮೋಕ್ಷವನ್ನು ಪಡೆದುಕೊಳ್ಳಲು ಭಕ್ತನು ಭಕ್ತಿಯಿಂದ ಸಮರ್ಥನಾಗುವನು ಎಂದು ಸಂದೇಶಿಸಿರುವನು–

> ಭಕ್ತ್ಯಾ ತ್ವನನ್ಯಯಾ ಶಕ್ತ ಅಹಂ ಏವಂ ವಿಧೋಽರ್ಜುನ ।
> ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥

ಹೀಗೆ ಮೋಕ್ಷಕ್ಕೆ ಸಾಧನವಾದ ವಿಶ್ವರೂಪದರ್ಶನಕ್ಕೆ ವಿಷಯಗಳಾದ ವಿಷ್ಣುವಿನ ಪಾರಮ್ಯಾದಿಗಳು ಪಾರಮಾರ್ಥಿಕ ಸತ್ಯಗಳಾಗಿದ್ದಿರಬೇಕೇ ಹೊರತು ವ್ಯಾವಹಾರಿಕಗಳೆನಿಸಿದರೆ ಸಾಲದು.

ವಿಶ್ವರೂಪದರ್ಶನಕ್ಕೆ ಗೋಚರಿಸಿದವುಗಳ ಜ್ಞಾನಾದಿಗಳಿಂದ ಮೋಕ್ಷವನ್ನು ಮಂದಾಧಿಕಾರಿಗಳಿಗಷ್ಟೇ ಹೇಳಿರುವುದು. ಆದ್ದರಿಂದ ಉತ್ತಮಾಧಿಕಾರಿಗಳ ದೃಷ್ಟಿಯಲ್ಲಿ ಅವೆಲ್ಲ ವ್ಯಾವಹಾರಿಕಗಳೇ ಯಾಕೆ ಆಗಬಾರದು? ಎಂದು ಪುನಃ ಪ್ರತಿವಾದಿಗಳು ಶಂಕಿಸಬಹುದು.

ಆದರೆ ವಿಶ್ವರೂಪವಿಷಯಕಪ್ರತ್ಯಕ್ಷ ಪಾರಮಾರ್ಥಿಕ ವಿಷಯಗಳನ್ನೇ ವಿಷಯೀಕರಿಸುವುದೆಂಬುದಕ್ಕೆ ಏನಾದರೂ ಬಾಧಕವಿದ್ದರೆ ಆ ಪ್ರತ್ಯಕ್ಷ ವ್ಯಾವಹಾರಿಕ ವಿಷಯಗಳನ್ನಷ್ಟೇ ವಿಷಯೀಕರಿಸುವ ಗೌಣಪ್ರತ್ಯಕ್ಷ ಎಂದು ಒಪ್ಪಬಹುದು. ಆದರೆ ಅಂತಹ ಬಾಧಕವೇನೂ ಇಲ್ಲ. 'ದೃಷ್ಟಸ್ಯ ವಸ್ತುನೋ ಬಲವದ್‌ದೃಷ್ಟಿಂ ವಿನಾ ನಾನ್ಯದ್ ಬಾಧಕಮ್' ಎಂದು ಆಚಾರ್ಯರು ಸಂದೇಶಿಸುವಂತೆ ಪ್ರತ್ಯಕ್ಷಕ್ಕೆ ಬಲಿಷ್ಠವಾದ ಮತ್ತೊಂದು ಪ್ರತ್ಯಕ್ಷ ಬಾಧಕವಾದೀತೇ ವಿನಾ ಮತ್ತೊಂದು ಪ್ರಮಾಣ ಬಾಧಕ

ವೆನಿಸದು. ಶ್ರೀವಿಷ್ಣುವಿನ ಪಾರಮ್ಯ, ಪಂಚಭೇದ, ತಾರತಮ್ಯಾದಿಗಳು ವ್ಯಾವಹಾರಿಕಗಳಷ್ಟೇ ಎಂದು ತಿಳಿಸುವ ಪ್ರತ್ಯಕ್ಷ ಯಾರಿಗೂ ಯಾವಾಗಲೂ ಬರಲಾರದು. ಆದ್ದರಿಂದ ಶ್ರೀವಿಷ್ಣುವಿನ ಉತ್ಕರ್ಷಾದಿಗಳನ್ನು ಗೋಚರಿಸುವ ಅರ್ಜುನನ ಪ್ರತ್ಯಕ್ಷ ಪಾರಮಾರ್ಥಿಕ ತತ್ತ್ವಗಳನ್ನೇ ವಿಷಯೀಕರಿಸಿದೆ ಎಂದು ಒಪ್ಪಿಕೊಳ್ಳಲೇಬೇಕು. ಆದ್ದರಿಂದ ಶ್ರೀ ಮಧ್ವಸಿದ್ಧಾಂತವು ಪ್ರತಿಪಾದಿಸುತ್ತಿರುವ ಶ್ರೀವಿಷ್ಣುವಿನ ಪಾರಮ್ಯ, ಜಗತ್ಸತ್ಯತ್ವ, ಪಂಚಭೇದ, ತಾರತಮ್ಯ –ಮುಂತಾದ ತತ್ತ್ವಗಳು ಪಾರಮಾರ್ಥಿಕಗಳೆಂದು ಸಿದ್ಧಿಸುವುದು.

೩. ೧೬. ಸರ್ವೇ ಕರ್ಮವಶಾ ವಯಮ್

ನಮಗೆ ಜೀವನದಲ್ಲಿ ಏನೇನೋ ಕ್ಲೇಶಗಳು, ಆಪತ್ತುಗಳು, ರೋಗರುಜಿನಗಳು ಬರುತ್ತಿರುತ್ತವೆ. ಇವೆಲ್ಲ ನಾವು ಹಿಂದಿನ ಜನ್ಮಗಳಲ್ಲಿ ಎಸಗಿದ್ದ ಪಾಪಕರ್ಮಗಳ ಫಲಗಳೇ ಆಗಿರುವುದರಿಂದ ಇವುಗಳಿಗೆಲ್ಲ ನಾವೇ ಹೊಣೆಗಾರರು ಎಂದು ಮನವರಿಕೆ ಮಾಡಿಕೊಂಡರೆ ಸ್ವಲ್ಪ ಸಮಾಧಾನ ಆಗುವುದು. ಅಲ್ಲದೆ, ಮುಂದಿನ ಜನ್ಮಗಳಲ್ಲಾದರೂ ಇಂತಹ ದುಃಖದುಮ್ಮಾನಗಳು ಬಾರದಿರಲಿ ಎಂದು ಪಾಪಕರ್ಮಗಳನ್ನು ಮಾಡದಿರಲು ಸ್ಫೂರ್ತಿ ದೊರಕುವುದು.

ಮಹಾಭಾರತದಲ್ಲಿ (ಅನುಶಾಸನಪರ್ವ –1ನೇ ಅಧ್ಯಾಯ) ಗೌತಮೀ ಎಂಬ ಬ್ರಾಹ್ಮಣಳು ತನ್ನ ಪುತ್ರ ಸರ್ಪ ಕಚ್ಚಿ ಸತ್ತಾಗ ಈ ರೀತಿಯ ವಿವೇಚನೆಯಿಂದಲೇ ಸಮಾಧಾನಪಟ್ಟುಕೊಂಡದ್ದು ಉಲ್ಲೇಖಿಸಲ್ಪಟ್ಟಿದೆ.

ಗೌತಮೀ ಎಂಬ ವೃದ್ಧ ಬ್ರಾಹ್ಮಣಿಯ ಪುತ್ರ ಸರ್ಪ ಕಚ್ಚಿ ಮೃತನಾದ. ಇದನ್ನು ಕಂಡ ಒಬ್ಬ ಬೇಡ ಆ ಪುತ್ರನನ್ನು ಕಚ್ಚಿ ಕೊಂದ ಸರ್ಪವನ್ನು ಕಟ್ಟಿ ತಂದು ಗೌತಮಿಯಲ್ಲಿ ಅದನ್ನು ಕೊಂದು ಹಾಕಲು ತಿಳಿಸುವನು. ಆದರೆ ಗೌತಮಿ ಆ ಪಾಪಕಾರ್ಯವನ್ನೆಸಗಲು ಒಪ್ಪುವುದಿಲ್ಲ. ಸರ್ಪವನ್ನು ಕೊಂದರೆ ತನ್ನ ಮಗನೇನೂ ಬದುಕಲಾರ ತಾನೆ? 'ಹತ್ವಾ ಚೈನಂ ನಾಮೃತಃ ಸ್ಯಾದಯಂ ಮೇ' –ಎಂದು ಸಮರ್ಥಿಸುವಳು.

ಅವರಲ್ಲಿ ಈ ಬಗ್ಗೆ ವಾದವಿವಾದ ನಡೆಯುತ್ತಿದ್ದಾಗ ಆ ಸರ್ಪ ಮನುಷ್ಯನಂತೆ ಮಾತನಾಡುತ್ತದೆ. ಅಸ್ವತಂತ್ರನಾದ ತನ್ನನ್ನು ಮೃತ್ಯುದೇವತೆ ಪ್ರೇರಿಸಿ ಹೀಗೆ ಕಡಿಸಿದ್ದು. ಮಡಕೆ ಮಾಡುವುದರಲ್ಲಿ ದಂಡ ಚಕ್ರಾದಿಗಳು ಹೇಗೋ ಹಾಗೆ ತಾನು ಆ ಪುತ್ರನನ್ನು ಕೊಲ್ಲುವುದರಲ್ಲಿ ಅಸ್ವತಂತ್ರನಾದುದರಿಂದ ದೋಷಿ ಎನಿಸಲಾರೆ ಎಂದು ಪ್ರತಿಪಾದಿಸುವುದು–

ಸರ್ವ ಏತೇ ಹ್ಯಸ್ವತಂತ್ರಾ ದಂಡಚಕ್ರಾದಯೋ ಯಥಾ ।
ತಥಾಹಮಪಿ ತಸ್ಮಾನ್ಮೇ ನೈಷ ದೋಷೋ ಮತಸ್ತವ ॥

ಹೀಗೆ ಆ ಸರ್ಪ ಮತ್ತು ಬೇಡರ ನಡುವೆ ವಾಗ್ವಾದ ನಡೆಯುತ್ತಿದ್ದಾಗ ಮೃತ್ಯು ದೇವತೆ ಬರುವುದು. ತಾನು ಸರ್ಪವನ್ನು ಕಚ್ಚಿ ಕೊಲ್ಲಲು ಪ್ರಚೋದಿಸಿರುವುದಾದರೂ ತಾನೇನೂ ಅದಕ್ಕೆ ಹೊಣೆಗಾರ ಅಲ್ಲ ಎಂದ ಆ ಮೃತ್ಯುದೇವತೆ ಗಾಳಿ ಹೇಗೆ ಮೋಡಗಳನ್ನು ಆ ಕಡೆ ಸೆಳೆಯುವುದೋ ಹಾಗೆ ಕಾಲದೇವತೆಯ ಸೆಳೆತಕ್ಕೆ ಒಳಪಟ್ಟು, ಅಸ್ವತಂತ್ರನಾಗಿ ತಾನು ಹಾಗೆ ಸರ್ಪವನ್ನು ಪ್ರಚೋದಿಸಿದ್ದು ಎಂದು ಸಮರ್ಥಿಸುವನು–

ಯಥಾ ವಾಯುರ್ಜಲಧರಾನ್ ವಿಕರ್ಷತಿ ತತಸ್ತತಃ ।
ತದ್ವಜ್ಜಲದವತ್ ಸರ್ಪ ಕಾಲಸ್ಯಾಹಂ ವಶಾನುಗಃ ॥

ಹೀಗೆ ಮೃತ್ಯುದೇವತೆ ಮತ್ತು ಬೇಡ ಇವರ ನಡುವೆ ವಾಗ್ವಾದ ನಡೆಯುತ್ತಿದ್ದಾಗ ಕಾಲದೇವತೆಯೇ ಅಲ್ಲಿಗೆ ಬರುವನು. ತಾವು ಯಾರೂ ಆ ಹುಡುಗನ ಮರಣಕ್ಕೆ ಪ್ರಯೋಜಕರಲ್ಲ –ಎಂದ ಕಾಲದೇವತೆ ಹಿಂದೆ ಎಸಗಿದ ಕರ್ಮಕ್ಕನುಗುಣವಾಗಿ ಆ ಹುಡುಗ ಮೃತನಾಗಿದ್ದಾನೆ. ಆದ್ದರಿಂದ ಇವನ ನಾಶಕ್ಕೆ ಮುಖ್ಯ ಕಾರಣ ಇವನ ಕರ್ಮವೇ ಆಗಿದೆ ಎಂದು ಪ್ರತಿಪಾದಿಸುವನು.

ನಾವೆಲ್ಲ ಕರ್ಮಕ್ಕೆ ಅಧೀನರಾದವರು 'ಸರ್ವೇ ಕರ್ಮವಶಾ ವಯಮ್' –ಎಂದು ಸಾರಿದ ಕಾಲದೇವತೆ ಹೇಗೆ ಕುಂಬಾರನು ಮಣ್ಣಿನಿಂದಷ್ಟೇ ತನಗೆ ಇಚ್ಛೆ ಬಂದ ಪಾತ್ರೆಯನ್ನು ರಚಿಸುವನೋ ಹಾಗೆ ಮನುಷ್ಯ ತಾನು ಮಾಡಿದ ಶುಭಾಶುಭ ಕರ್ಮಗಳ ಫಲವನ್ನಷ್ಟೇ ಹೊಂದುವನು ಎಂದು ಸಮರ್ಥಿಸುವನು.

ಯಥಾ ಮೃತ್‌ಪಿಂಡತಃ ಕರ್ತಾ ಕುರುತೇ ಯದ್ ಯದಿಚ್ಛತಿ ।
ಏವಮಾತ್ಮಕೃತಂ ಕರ್ಮ ಮಾನವಃ ಪ್ರತಿಪದ್ಯತೇ ॥

ಕಾಲದೇವತೆಯ ಈ ಪ್ರತಿಪಾದನೆಯನ್ನು ಕೇಳಿ ಗೌತಮೀ ಸಮಾಧಾನ ತಂದುಕೊಂಡಳು. ಯುಧಿಷ್ಠಿರನಿಗೆ ಈ ಆಖ್ಯಾಯಿಕೆಯನ್ನು ಉಪದೇಶಿಸಿದ ಭೀಷ್ಮರೂ ಜೀವನದಲ್ಲಿ ಕರ್ಮದ ಪ್ರಭಾವವನ್ನು ವಿವೇಚಿಸಿಕೊಂಡು ಸಮಾಧಾನ ತಾಳಲು ಅವನಿಗೆ ತಿಳಿಸಿ ಹೇಳುವರು.

ಜನಮೇಜಯ ತನ್ನ ತಂದೆ ಪರೀಕ್ಷಿದ್ರಾಜನನ್ನು ತಕ್ಷಕ ಕಚ್ಚಿ ಕೊಂದಿತೆಂದು ಸಿಟ್ಟಿಗೆದ್ದ ಸರ್ಪಸತ್ರದಲ್ಲಿ ತೊಡಗಿದಾಗ ಬೃಹಸ್ಪತ್ಯಾಚಾರ್ಯರು ಅವನನ್ನು ಸಮಾಧಾನಿಸುವುದು ಇದೇ ರೀತಿಯ ಉಪದೇಶದಿಂದ–

ಜೀವಿತಂ ಮರಣಂ ಜಂತೋರ್ಗತಿಃ ಸ್ವೇನೈವ ಕರ್ಮಣಾ ।
ರಾಜಂಸ್ತತೋಽನ್ಯೋ ನಾನ್ಯಸ್ಯ ಪ್ರದಾತಾ ಸುಖದುಃಖಯೋಃ ॥

— ಭಾಗ ೧೨-೬-೨೫

ಜೀವಿಯು ತನ್ನ ಪ್ರಾರಬ್ಧಕರ್ಮಕ್ಕನುಗುಣವಾಗಿಯೇ ಜನನ–ಮರಣಗಳನ್ನು ಹೊಂದುವುದು. ಸುಖದುಃಖಗಳನ್ನು ಹೊಂದುವಲ್ಲಿ ಕರ್ಮದ್ದೇ ದೊಡ್ಡ ಪಾತ್ರ. ಸರ್ಪ, ಕಳ್ಳ, ಬೆಂಕಿ, ಮಿಂಚು, ಹಸಿವು, ನೀರಡಿಕೆ ಮುಂತಾದವುಗಳಿಂದ ಜೀವಿಯು

ಮರಣ ಹೊಂದುವುದೆಂದರೆ ತನ್ನ ಪ್ರಾರಬ್ಧಕರ್ಮದ ಫಲವನ್ನು ಅನುಭವಿಸಿದ್ದಾನೆ ಎಂದೇ ಅರ್ಥ– '.....ಭುಂಕ್ತ ಆರಬ್ಧಕರ್ಮ ತತ್'.

ಹೀಗೆ ನಮ್ಮ ಶಾಸ್ತ್ರದಲ್ಲಿ 'ಕರ್ಮಸಿದ್ಧಾಂತ' ಹಾಗೂ 'ಪುನರ್ಜನ್ಮಸಿದ್ಧಾಂತ'ಗಳ ಆಧಾರದಲ್ಲಿ ಮನುಷ್ಯ ಬದುಕಿನಲ್ಲಿ ಸಮಾಧಾನವನ್ನು ತಂದುಕೊಳ್ಳಲು ಬೇಕಾದ ಸಂದೇಶಗಳನ್ನು ನೀಡಲಾಗಿದೆ. ಪುನರ್ಜನ್ಮಸಿದ್ಧಾಂತವನ್ನೂ ಕರ್ಮಸಿದ್ಧಾಂತವನ್ನೂ ಒಪ್ಪಿಕೊಳ್ಳಲಾಗದ ಕ್ರಿಶ್ಚಿಯನ್ ಮತ, ಮಹಮ್ಮದೀಯರ ಮತ –ಮುಂತಾದವುಗಳಿಂದ ಈ ಬಗೆಯ ಸಮಾಧಾನಕ್ಕೆ ಅವಕಾಶವಿಲ್ಲ.

●

೩. ೧೭. ಮಕ್ಕಳನ್ನು ಯಾವ ಶಾಲೆಗೆ ಸೇರಿಸುವಿರಿ?

ನಿಮ್ಮ ಮಕ್ಕಳನ್ನು ನೂತನವಾಗಿ ಒಂದು ಶಾಲೆಗೆ ಸೇರಿಸಬೇಕಾಗಿದೆ ಎನ್ನಿ. ಸಮೀಪದಲ್ಲಿ ಎರಡು ಶಾಲೆಗಳಿವೆ. ಒಂದು ಶಾಲೆಯಲ್ಲಿ ಓದಿದವರಿಗೂ ಓದದವರಿಗೂ ಒಂದೇ ರೀತಿಯಾಗಿ ಅಂಕಗಳನ್ನು ಕೊಡಲಾಗುವುದು. ಮತ್ತೊಂದರಲ್ಲಿ ವಿದ್ಯಾರ್ಥಿಯ ಓದಿಗೆ ಅನುಗುಣವಾಗಿಯೇ ಅಂಕಗಳನ್ನು ನೀಡಲಾಗುವುದು. ಹೀಗಿದ್ದಲ್ಲಿ ನೀವು ನಿಮ್ಮ ಮಕ್ಕಳನ್ನು ಯಾವ ಶಾಲೆಗೆ ಸೇರಿಸುವಿರಿ? ಓದದವನಿಗೂ ಓದಿದವನಷ್ಟೇ ಅಂಕಗಳನ್ನು ನೀಡುವ ಶಾಲೆಗೋ ಅಥವಾ ಓದಿದವನಿಗಷ್ಟೇ ಅವನ ಓದಿಗನುಗುಣವಾಗಿ ಅಂಕಗಳನ್ನು ನೀಡುವ ಶಾಲೆಗೋ?

ನಿಮ್ಮ ಮಕ್ಕಳು ವಿದ್ಯಾವಂತರಾಗಬೇಕೆಂದು ಬಯಸುವವರಾದರೆ ಖಂಡಿತಾ ನೀವು ಎರಡನೇ ಶಾಲೆಗೆ, ಅಂದರೆ ಅಧ್ಯಯನಕ್ಕೆ ಅನುಗುಣವಾಗಿ ಅಂಕಗಳನ್ನು ನೀಡುವ ಶಾಲೆಗೆ ನಿಮ್ಮ ಮಕ್ಕಳನ್ನು ಸೇರಿಸುವಿರಿ, ಅಲ್ಲವೇ? ಯಾಕೆ? ಇಂತಹ ಶಾಲೆಯಲ್ಲಿ ಓದು ಪ್ರವೃತ್ತಿಗೆ ಸರಿಯಾದ ಪ್ರೋತ್ಸಾಹ ದೊರಕುವುದರಿಂದ ನಿಮ್ಮ ಮಕ್ಕಳು ಉತ್ತಮ ವಿದ್ಯಾವಂತರಾಗಬಲ್ಲರೆಂಬ ದೃಷ್ಟಿಯಿಂದ.

ಇದೇ ನೀತಿಯನ್ನು ನೀವು ಯಾವ ಮತವನ್ನು ಆಶ್ರಯಿಸಬೇಕೆಂಬ ವಿಚಾರದಲ್ಲೂ ಅಳವಡಿಸಿಕೊಳ್ಳಿ. ಎಷ್ಟು ಸಾಧನೆ ಮಾಡಿದರೂ 'ಬ್ರಹ್ಮಭಾವ' ರೂಪವಾದ ಒಂದೇ ರೀತಿಯ ಮೋಕ್ಷಫಲವನ್ನು ಹೊಂದುವರೆಂದು ಬೋಧಿಸುವ 'ಅದ್ವೈತಮತ' ಒಂದೆಡೆ ಆದರೆ, ಕಲ್ಪಕಾಲ ಸಾಧನೆ ನಡೆಸಿದವನಿಗೂ ಸಾವಿರಾರು ಜನ್ಮಗಳಲ್ಲಿ ಸಾಧನೆ ನಡೆಸಿದವನಿಗೂ ಮೋಕ್ಷದಲ್ಲಿ ಸಮಾನ ಪ್ರಮಾಣದ ಆನಂದಾನುಭವ ಎನ್ನುವ ವಿಶಿಷ್ಟಾದ್ವೈತಮತ ಇನ್ನೊಂದೆಡೆ. ಸಾಧನೆ ನಡೆಸುವುದನ್ನು ನಡೆಸದೆ ಇರುವುದನ್ನು ನಡೆಸಿದ ಸಾಧನೆಯಲ್ಲಿಯ ಏರುಪೇರನ್ನು ಪರಿಗಣಿಸದೆ ಒಂದೇ ರೀತಿಯ ಫಲವು ಎಲ್ಲರಿಗೂ ದೊರಕುವುದೆಂದು ಸಾರುವ ಈ ಎರಡು ಮತಗಳೂ ಓದದವನಿಗೂ ಓದಿದವನಂತೆಯೇ ಅಂಕಗಳನ್ನು ನೀಡುವ ಶಾಲೆಯಂತೆ. ಸಾಧನೆಯ ಪ್ರವೃತ್ತಿಗೆ ಹಿಂಜರಿತವನ್ನೀಡುವ ಈ ಮತಗಳನ್ನು ವಿವೇಕಿಯಾದವನು ಖಂಡಿತಾ ಆಶ್ರಯಿಸಲಾರ.

ಮುಕ್ತಿಯೋಗ್ಯರಿಗಷ್ಟೇ ಮುಕ್ತಿ. ಅದೂ 'ಸಾಧನಸ್ಯೋತ್ತಮತ್ವೇನ ಸಾಧ್ಯಂ ಚೋತ್ತಮಮಾಪ್ನುಯುಃ' ಸಾಧನದ ತಾರತಮ್ಯಕ್ಕನುಗುಣವಾಗಿ ಸಾಧ್ಯವಾದ ಮೋಕ್ಷದ ಸುಖದಲ್ಲೂ ತಾರತಮ್ಯವಿದೆ ಎಂದು ಪ್ರತಿಪಾದಿಸುವ ಶ್ರೀಮದಾಚಾರ್ಯರ ದ್ವೈತಮತ ಆ ಎರಡು ಮತಗಳಿಗಿಂತಲೂ ವಿಶಿಷ್ಟವಾದುದು. ಹೆಚ್ಚು ಹೆಚ್ಚು ಸಾಧನಾನುಷ್ಠಾನದಲ್ಲಿ ತೊಡಗುವಂತೆ ಪ್ರೋತ್ಸಾಹ ನೀಡುವ ಶ್ರಮಕ್ಕನುಗುಣವಾಗಿ ಫಲಪ್ರಾಪ್ತಿಗೆ ಅವಕಾಶವಿರುವ ಶ್ರೀ ಮಧ್ವಮತವೇ ವಿವೇಕಿಗಳಿಗೆ ಆಶ್ರಯಣೀಯ.

ಸ್ವಾರ್ಜಿತ ಹೊರತು ಪಿತ್ರಾರ್ಜಿತವಲ್ಲ

ತಂದೆಯಾದವನು ಮಕ್ಕಳಿಗೆ ಆಸ್ತಿಯ ವಿಭಾಗ ಮಾಡುವಾಗ, ಸಮಾನವಾಗಿ ನಡೆದುಕೊಳ್ಳಬೇಕು. ಕಲಿತ ಮಗನಿಗೆ ಒಂದು ಪ್ರಮಾಣದಲ್ಲಿ, ಕಲಿಯದ ಮಗನಿಗೆ ಮತ್ತೊಂದು ಪ್ರಮಾಣದಲ್ಲಿ ಆಸ್ತಿಯನ್ನು ವಿಭಜಿಸುವ ಪಕ್ಷಪಾತಧೋರಣೆ ಅವನದಾಗಿರಬಾರದು. ಅಂತೆಯೇ ದೇವರೂ ಮುಕ್ತಾತ್ಮರಿಗೆಲ್ಲ ಒಂದೇ ಪ್ರಮಾಣದಲ್ಲಿ ಮುಕ್ತಿಸುಖವನ್ನು ನೀಡಬೇಕು. ಹೊರತು ಮಧ್ವಮತದಲ್ಲಿ ನಿರೂಪಿಸಿದಂತೆ ಮುಕ್ತಿ ಸುಖಪ್ರಮಾಣದಲ್ಲಿ ತಾರತಮ್ಯವನ್ನು ತೋರುಸುವುದು ಸಮುಚಿತವಲ್ಲ ಎಂದು ಕೆಲವರು ವಾದಿಸುವುದುಂಟು.

ಆದರೆ ಆಸ್ತಿ ಪಿತ್ರಾರ್ಜಿತವಾಗಿದ್ದರೆ ಮಾತ್ರ ಅದನ್ನು ಮಕ್ಕಳಿಗೆ ಸಮನಾಗಿ ಹಂಚಬೇಕೆಂದಿರುವುದೇ ಹೊರತು ಸ್ವಾರ್ಜಿತವಾಗಿದ್ದರೆ ಅದನ್ನು ಸ್ವೇಚ್ಛಾನುಸಾರವಾಗಿ ಹಂಚಬಹುದು. ಅಂತೆಯೇ ಭಗವಂತನು ಮುಕ್ತಾತ್ಮರಿಗೆ ಅನುಗ್ರಹಿಸುವ ಮೋಕ್ಷಸುಖ ಭಗವಂತನ 'ಸ್ವಾರ್ಜಿತ ಆಸ್ತಿ'ಯಂತೆ ಇರುವಂತಹದ್ದು. ಆದ್ದರಿಂದ ಅಂತಹ ಸುಖವನ್ನು ಅವನು ಸಾಧಕರ ಸಾಧನಾನುಷ್ಠಾನಕ್ಕೆ ಅನುಗುಣವಾಗಿ ಅನುಗ್ರಹಿಸಿದಲ್ಲಿ ಲೌಕಿಕವಾಗಿಯೂ ಅನುಚಿತವೆನಿಸದು.

•

೩. ೧೮. ಪಾರ್ಥಾದ್ಯಾಃ ಯತ್ರ ಸಾಕ್ಷಿಣಃ ಪ್ರತ್ಯಕ್ಷಃ ಮಧ್ವಸಿದ್ಧಾಂತಃ

ಇತರ ಮತಗಳು, ಶಾಸ್ತ್ರಗಳು ಅಪ್ರತ್ಯಕ್ಷಗಳು; ಅಂದರೆ ಪ್ರತ್ಯಕ್ಷ ಪ್ರಮಾಣಕ್ಕೆ ನಿಲುಕುವವುಗಳಲ್ಲ. ಆದರೆ ಮಧ್ವಸಿದ್ಧಾಂತ ಪ್ರತ್ಯಕ್ಷಸಿದ್ಧವಾದುದು– 'ಪ್ರತ್ಯಕ್ಷಃ ಮಧ್ವಸಿದ್ಧಾಂತಃ' ಮಧ್ವಸಿದ್ಧಾಂತದ ಜಗತ್ಸತ್ಯತ್ವ, ಪಂಚಭೇದ, ತಾರತಮ್ಯ ಮುಂತಾದ ಪ್ರಮುಖ ಪ್ರಮೇಯಗಳೆಲ್ಲ ಪ್ರತ್ಯಕ್ಷ ಪ್ರಮಾಣಕ್ಕೆ ಗೋಚರಿಸುವವು. ಪ್ರತ್ಯಕ್ಷವು ಪ್ರಮಾಣಗಳಲ್ಲೆಲ್ಲ ಪ್ರಮುಖವಾದುದು. ಪರೀಕ್ಷಿತ ಪ್ರತ್ಯಕ್ಷಕ್ಕಂತೂ ಯಾವುದರಿಂದಲೂ ಬಾಧವಿಲ್ಲ. 'ಸುಪೂರ್ಣಪ್ರಜ್ಞ'ರಾದ ಶ್ರೀ ಮಧ್ವರು ಪರಮಾತ್ಮನನ್ನೂ ಜಗತ್ತಿನ ತತ್ವಗಳನ್ನೂ ಪರೀಕ್ಷಿತ ಪ್ರತ್ಯಕ್ಷದಿಂದ ಪರಿಶೀಲಿಸಿ ಬೋಧಿಸಿರುವರು.

ಅಲ್ಲದೆ, 'ಪಾರ್ಥಾದ್ಯಾಃ ಯತ್ರ ಸಾಕ್ಷಿಣಃ' –ಎಂದಿರುವಂತೆ ಭಗವಂತನ ವಿಶ್ವರೂಪವನ್ನು ಕಂಡು ಅರ್ಜುನ, ವಾಸುದೇವರೂಪಿ ಪರಮಾತ್ಮನನ್ನು ಸಾಕ್ಷಾತ್ಕರಿಸಿ ಕೊಂಡು 'ಯೋಽಂತಃ ಪ್ರವಿಶ್ಯ....' ಮುಂತಾದ ಸ್ತುತಿಗಳನ್ನು ಸಲ್ಲಿಸಿರುವ ಧ್ರುವ, ನರಸಿಂಹಾವತಾರದಲ್ಲಿ ವಿರುದ್ಧ ಧರ್ಮಧರ್ಮಿತ್ವ, ಸರ್ವಾಂತರ್ಯಾಮಿತ್ವ ಮುಂತಾದುವನ್ನು ಕಂಡಿದ್ದ ಪ್ರಹ್ಲಾದ ಮುಂತಾದವರೂ ಮಧ್ವಸಿದ್ಧಾಂತದ ಹರಿ ಸರ್ವೋತ್ತಮತ್ವ, ಸರ್ವಪ್ರೇರಕತ್ವ, ಸರ್ವಾಂತರ್ಯಾಮಿತ್ವ –ಮುಂತಾದ ಪ್ರಮೇಯ ಗಳನ್ನು ಸಾಕ್ಷಾತ್ಕರಿಸಿಕೊಂಡಿದ್ದು 'ಪ್ರತ್ಯಕ್ಷಃ ಮಧ್ವಸಿದ್ಧಾಂತಃ' –ಎಂಬುದಕ್ಕೆ ಸಾಕ್ಷಿಗಳೆನಿಸಿರುವರು.

●

ವಿದ್ಯಾಭಂಡಾರ

ನಿಧಿ – ೪

ವಾಙ್ಮಯ



"ಸಕಲ ವೈದಿಕ ವಾಙ್ಮಯವೂ ಶ್ರೀಹರಿಯ ಪಾರಮ್ಯವನ್ನು ಸಾರುವುದಕ್ಕಾಗಿಯೇ ಹೊರಟಿದೆ. ಶ್ರೀ ಮಧ್ವರು ತಮ್ಮ ಸರ್ವಮೂಲ ಗ್ರಂಥಗಳಲ್ಲಿ ಸಮಗ್ರ ವೈದಿಕ ವಾಙ್ಮಯಕ್ಕೆ ಶ್ರೀಹರಿಯ ಪಾರಮ್ಯದ ಪ್ರತಿಪಾದನೆಯಲ್ಲಿ 'ಏಕವಾಕ್ಯತೆ' ಸಿದ್ಧಿಸುವಂತೆ ಸಮನ್ವಯಮಾಡಿ ತೋರಿಸಿರುವರು."

೪. ೧.

ಗುಹ್ಯತಮಶಾಸ್ತ್ರದಲ್ಲಿ 'ಗೂಹಿತ'ಗಳಾದ ಪ್ರಮೇಯರತ್ನಗಳು

ಭಗವದ್ಗೀತೆ ಕೆಲವೆಡೆ ಸರಳ ನಿರೂಪಣೆಗಳಿಂದ ಕೂಡಿದ್ದರೆ, ಮತ್ತೆ ಕೆಲವೆಡೆ ಅರ್ಥಗರ್ಭಿತ ಮಾತುಗಳಿಂದ ಕೂಡಿದ್ದೂ ಇದೆ. ಆದ್ದರಿಂದಲೇ ಗೀತಾಚಾರ್ಯ ಇದನ್ನು 'ಪರಮ ಗುಹ್ಯ' (ಯ ಇದಂ ಪರಮಂ ಗುಹ್ಯಂ..... ಗೀತೆ ೧೮-೬೮) ಎಂದು ಉಪದೇಶಿಸಿರುವನು. ತಪಸ್ಸು, ಭಕ್ತಿ ಹಾಗೂ ಶ್ರವಣೇಚ್ಛೆಗಳಂತಹ ದೊಡ್ಡ ಗುಣಗಳಿಲ್ಲದವನಿಗೆ ಅರಗಿಸಿಕೊಳ್ಳಲಾಗದ ಪ್ರಯುಕ್ತ ಅಂತಹವನಿಗೆ ಉಪದೇಶಿಸ ಬಾರದೆಂದು ಎಚ್ಚರಿಸಿರುವನು. (ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ । ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ- ಗೀತೆ ೧೮-೬೭)

ಪರಮ ಗುಹ್ಯದಲ್ಲೂ ಗುಹ್ಯತಮ

ಹೀಗೆ ಶ್ರದ್ಧಾಳುಗಳಿಂದಷ್ಟೇ ಜೀರ್ಣಿಸಿಕೊಳ್ಳಲು ಯೋಗ್ಯವಾಗಿದ್ದು 'ಪರಮ ಗುಹ್ಯ'ವೆನಿಸಿರುವ ಗೀತಾಶಾಸ್ತ್ರದಲ್ಲೂ, ಹದಿನೈದನೇ ಅಧ್ಯಾಯ 'ಗುಹ್ಯತಮ' ವೆನಿಸಿದೆ. (ಇತಿ ಗುಹ್ಯತಮಂ ಶಾಸ್ತ್ರಂ.... -ಗೀತೆ ೧೫-೨೦). ಶಂಕರಾಚಾರ್ಯರು ಸಹ ಈ ಅಧ್ಯಾಯದಲ್ಲಿ ಸಕಲ ಗೀತಾರ್ಥವೇ ಯಾಕೆ, ಸಕಲ ಶಾಸ್ತ್ರಾರ್ಥವೂ ಸಂಗೃಹೀತ ವಾಗಿದೆ ಎಂದು ತಮ್ಮ ಭಾಷ್ಯದಲ್ಲಿ ಪ್ರತಿಪಾದಿಸಿರುವರು. (ಸರ್ವೋ ಹಿ ಗೀತಾ ಶಾಸ್ತ್ರಾರ್ಥೋಽಸ್ಮಿನ್ನಧ್ಯಾಯೇ ಸಮಾಸೇನೋಕ್ತಃ । ನ ಕೇವಲಂ, ಸರ್ವಶ್ಚ ವೇದಾರ್ಥ ಇಹ ಪರಿ ಸಮಾಪ್ತಃ...)

ಇಂತಹ ಗುಹ್ಯತಮ ಅಧ್ಯಾಯದ ಉಪಸಂಹಾರದ 'ದ್ವಾವಿಮೌ ಪುರುಷೌ ಲೋಕೇ....' ಇತ್ಯಾದಿ ಐದು ಶ್ಲೋಕಗಳಲ್ಲಿ 'ತತ್ವವಾದ'ದ ನವಪ್ರಮೇಯರತ್ನಗಳೂ ಗೂಹಿತಗಳಾಗಿವೆ. ತತ್ವವಾದದ ನವಪ್ರಮೇಯಗಳನ್ನು ಸಂಗ್ರಹಿಸಿರುವ ಶ್ರೀ ವ್ಯಾಸರಾಜರ ಪದ್ಯ ಮಂಡಿಸುತ್ತಿರುವಂತೆ ಒಂದೊಂದೇ ತತ್ವವನ್ನು ಉಲ್ಲೇಖಿಸಿ, ಅದು ಯಾವ ಮಾತಲ್ಲಿ ಹೇಗೆ ಧ್ವನಿತವಾಗಿದೆ ಎಂಬುದನ್ನು ಪರಿಶೀಲಿಸೋಣ.

೧) ಶ್ರೀಮನ್ಮಧ್ವಮತೇ ಹರಿಃ ಪರತರಃ...

'ನ ಹರೇಃ ಪರಮೋ ನ ಹರೇಃ ಸದೃಶಃ ಪರಮಃ ಸ ತು ಸರ್ವಚಿದಾತ್ಮ ಗಣಾತ್' ಎಂಬುದಾಗಿ ಶ್ರೀಮದಾಚಾರ್ಯರು ಎದೆ ತಟ್ಟಿ ಸಾರಿದ ತತ್ವವನ್ನು ಗೀತಾಚಾರ್ಯನೂ ಅಷ್ಟೇ ದೃಢತೆಯಿಂದ, ಸ್ಪಷ್ಟತೆಯಿಂದ ಉದ್ಘೋಷಿಸಿದ್ದಾನೆ- '.....ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।' ಲಕ್ಷ್ಮೀಸಹಿತರಾದ ಚೇತನರ ನ್ನೆಲ್ಲ ಕ್ಷರಾಕ್ಷರರಲ್ಲಿ ಸೇರಿಸಿ ಅಂತಹವರಿಗಿಂತೆಲ್ಲ ಶ್ರೀಹರಿ ಉತ್ತಮನಾಗಿರುವನೆಂದು

ಪ್ರತಿಪಾದಿಸುತ್ತಿರುವ ಇಲ್ಲಿ, ವೇದದ ಸಮ್ಮತಿಯನ್ನು ಉಲ್ಲೇಖಿಸಲಾಗಿದೆ. ಲೋಕ ತ್ರಯದ ಧಾರಣೆ ಪೋಷಣೆ ಮಾಡುತ್ತಿರುವವನೂ ಶ್ರೀಹರಿಯೇ. ಆದುದರಿಂದಲೂ ಲೋಕತ್ರಯದಲ್ಲಿ ಸೇರಿದವರಿಗಿಂತೆಲ್ಲ ಅವನು ಉತ್ತಮನಾಗಿದ್ದಾನೆ. (ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ) ಎಂಬುದಾಗಿ ಯುಕ್ತಿಪೂರ್ವಕ ವಾಗಿಯೂ ಸಮರ್ಥಿಸಲಾಗಿದೆ. ಹೀಗೆ ಪುರುಷೋತ್ತಮನೆಂದು ಪ್ರತಿಪಾದಿಸಲ್ಪಟ್ಟವನು ಶ್ರೀಹರಿ ಎಂದು ಸ್ಪಷ್ಟವಾಗಿ ಇಲ್ಲಿ ಹೇಳಿಲ್ಲವಾದರೂ, ಮುಂದೆ ಗೀತಾಚಾರ್ಯ ಕ್ಷರಾಕ್ಷರಗಳಿಗಿಂತ ಉತ್ತಮನಾದವನು ತಾನೇ ಎಂಬುದಾಗಿಯೂ ಆದ್ದರಿಂದಲೇ ಪೌರುಷಯಾಪೌರುಷೇಯ ಗ್ರಂಥಗಳು ತನ್ನನ್ನು ಪುರುಷೋತ್ತಮನೆಂದು ಸಾರುತ್ತಿರು ವುದಾಗಿಯೂ (ಯಸ್ಮಾತ್ ಕ್ಷರಮತೀತೋಽಹಂ ಅಕ್ಷರಾದಪಿ ಚೋತ್ತಮಃ । ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ) ಸಂದೇಶಿಸಿರುವುದರಿಂದ ಅಂತಹ ಶ್ರೀಕೃಷ್ಣನನ್ನೇ (ತನ್ನನ್ನೇ) ಕ್ಷರಾಕ್ಷರಗಳಿಗಿಂತೆಲ್ಲ ಉತ್ತಮನನ್ನಾಗಿ ಮೊದಲೂ ಪರಿಚಯಿಸಿಕೊಡಲಾಗಿದೆ ಎಂದು ನಿರ್ಧರಿಸಬಹುದು.

೨) ಸತ್ಯಂ ಜಗತ್ತತ್ವತೋ....:

'ಜಗತ್ ಪ್ರವಾಹರೂಪೇಣ ಸರ್ವದೈವ ವ್ಯವಸ್ಥಿತಮ್' (೩-೫-೪ ಬೃಹದ್ಭಾಷ್ಯ) ಎಂಬುದಾಗಿ ಜಗತ್ತು ನದಿಯಲ್ಲಿಯ ನೀರಿನ ಪ್ರವಾಹದಂತೆ ಯಾವತ್ತೂ ಇರುವಂತಹದು. ಹೊರತು ಅವಿದ್ಯಾಕಲ್ಪಿತವಾಗಿದ್ದು ಜ್ಞಾನವನ್ನು ಪಡ ಕೊಂಡು ಅವಿದ್ಯೆಯನ್ನು ಕಳಕೊಂಡಾಗ ಅದರ ಜೊತೆಗೇನೇ ಕಣ್ಮರೆಯಾಗು ವಂತಹದ್ದಲ್ಲ ಎಂದು ಪ್ರತಿಪಾದಿಸುವ ಶ್ರೀಮದಾಚಾರ್ಯರು ಸತ್ಯೋ ವಿಷ್ಣುಃ ಶ್ರೀಶ್ಚ ಸತ್ಯಾ ಜೀವಾಃ ಸತ್ಯಾ ಜಡಂ ತಥಾ' ಎಂಬುದಾಗಿ ಸತ್ಯತ್ವದ ಅಂಶದಲ್ಲಿ ಜಗತ್ತನ್ನೂ ಶ್ರೀವಿಷ್ಣುವಿನ ಸಾಲಿಗೇನೇ ಸೇರಿಸಿರುತ್ತಾರೆ. ವಿಷ್ಣು ಎಷ್ಟು ಸತ್ಯನೋ, ಜಗತ್ತೂ ಅಷ್ಟೇ ಮಟ್ಟಿಗೆ ಸತ್ಯ ಎಂಬುದಾಗಿ. ಇದನ್ನು ಗೀತಾಚಾರ್ಯ ತಾನು ಲೋಕತ್ರಯವನ್ನು ಪ್ರವೇಶಿಸಿ ಧಾರಣಪೋಷಣ ಮಾಡುತ್ತಿರುವುದಾಗಿ (ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ) ಸಂದೇಶಿಸಿರುವುದರ ಮೂಲಕ ಸೂಚಿಸಿಕೊಟ್ಟಿರುವನು. 'ಅವ್ಯಯ' 'ಈಶ್ವರ' ಅಂತೆಲ್ಲ ಅನಿಸಿರುವ ಭಗವಂತ ಪ್ರವೇಶಿಸಿರುವ ಜಗತ್ತು ಅದೆಂತು ಅವಿದ್ಯಾಕಲ್ಪಿತವಾದೀತು? ಒಂದು ವೇಳೆ ಮಾಯಿಕ ಪದಾರ್ಥಗಳಂತೆ ಅವಿದ್ಯಾಕಲ್ಪಿತವಾಗಿದ್ದಲ್ಲಿ ಅಂತಹದ್ದನ್ನು ಭಗವಂತ ಯಾಕೆ ಪ್ರವೇಶಿಸಿಯಾನು?

ಆದ್ದರಿಂದ ಭಗವಂತನಿಂದ ಅನುಪ್ರವಿಷ್ಟವಾದ ಪ್ರತಿಯೊಂದು ಪದಾರ್ಥವೂ ಅವನಷ್ಟೇ ಪಾರಮಾರ್ಥಿಕ ಸತ್ಯ.

೩) ತತ್ವತೋ ಭೇದೋ....

'ತತ್ವವಾದ' 'ದ್ವೈತವಾದ' ಎಂದೆನಿಸಲು ಕಾರಣವಾದ ಪ್ರಮೇಯ ಭೇದ ಅರ್ಥಾತ್ ದ್ವೈತ. ಭೇದಗಳ ಪೈಕಿ ಜೀವೇಶಭೇದವೇ ಪ್ರಮುಖವಾಗಿದ್ದರೂ (ಜೀವೇಶಾಭೇದ ಈಶನಲ್ಲಿ ಹೆಚ್ಚಿನ ಲೋಪದೋಷಗಳಿಗೆ ಕಾರಣವಾದುದರಿಂದ

ಉಳಿದೆಲ್ಲ ಭೇದಗಳಿಗಿಂತ ಜೀವೇಶ ಭೇದಕ್ಕೆ ಪ್ರಾಮುಖ್ಯ) ಇದೊಂದೇ ಭೇದವಲ್ಲ. ಜೀವೇಶ ಭೇದ, ಜೀವ-ಜಡಭೇದ, ಜೀವ-ಜೀವ ಭೇದ, ಜಡೇಶಭೇದ ಹಾಗೂ ಜಡ-ಜಡ ಭೇದ -ಹೀಗೆ ಪಂಚಭೇಧಗಳು ದ್ವೈತಸಿದ್ಧಾಂತದ ಪ್ರಮೇಯಗಳು.

(ಪ್ರಮೇಯ ನವರತ್ನಮಾಲಿಕಾ ಪದ್ಯದಲ್ಲಿಯ 'ಭೇದ' ಶಬ್ದ ಜಾತ್ಯೇಕ ವಚನ ವಾದದ್ದು ಈ ಐದೂ ಭೇದಗಳನ್ನು ಸಂಗ್ರಹಿಸಿದೆ. ಆದ್ದರಿಂದಲೇ 'ಭಿನ್ನಾ ಜೀವ ಗಣಾಃ' ಎಂಬುದಾಗಿ ಜೀವಭೇದವನ್ನು ಮಾತ್ರ ಸಂಗ್ರಹಿಸುವ ಪಾಠಕ್ಕಿಂತ 'ಭೇದೋ ಜೀವಗಣಾಃ' ಎಂಬ ಪಾಠವೇ ಸಮುಚಿತವಾದದ್ದು) 'ಉತ್ತಮಃ ಪುರುಷಸ್ತ್ವನ್ಯಃ' ಎಂಬಲ್ಲಿ ಕ್ಷರಾಕ್ಷರ ಜೀವರ ಹಾಗೂ ಪುರುಷೋತ್ತಮನೆನಿಸಿದ ಶ್ರೀಹರಿಯ ಭೇದ ವನ್ನೂ, 'ಯೋ ಲೋಕತ್ರಯಮಾವಿಶ್ಯ ಬಿಭರ್ತಿ' ಎಂಬುದಾಗಿ ಲೋಕತ್ರಯವನ್ನು ಶ್ರೀಹರಿ ಪ್ರವೇಶಿಸಿ ಧರಿಸಿಕೊಂಡಿರುವುದಾಗಿ ಸಂದೇಶಿಸಿರುವುದರ ಮೂಲಕ ಲೋಕ ತ್ರಯದಲ್ಲಿ ಸೇರಿಕೊಂಡ ಜಡಗಳ ಹಾಗೂ ಶ್ರೀಹರಿಯ ಭೇದವನ್ನು, 'ದ್ವಾವಿಮೌ ಪುರುಷೌ ಲೋಕೇ' 'ಕ್ಷರಃ ಸರ್ವಾಣಿ ಭೂತಾನಿ' ಎಂಬುದಾಗಿ ಪುರುಷರಲ್ಲಿ ದ್ವಿತ್ವಸಂಖ್ಯೆಯನ್ನೂ, ಭೂತಗಳಲ್ಲಿ ಬಹುವಚನವನ್ನು ಪ್ರಯೋಗಿಸಿರುವುದರ ಮೂಲಕ ಜೀವ-ಜೀವ ಭೇದವನ್ನು 'ಪುರುಷೌ ಲೋಕೇ' ಎಂಬುದಾಗಿ ಜೀವರಿಗೆ ಜಡಾತ್ಮಕವಾದ ಲೋಕವನ್ನು ಆಧಾರವಾಗಿ ನಿರೂಪಿಸಿರುವುದರಿಂದ ಜೀವ-ಜಡ ಭೇದವನ್ನು 'ಅತೋऽಸ್ಮಿ ಲೋಕೇ ವೇದೇ ಚ' ಎಂಬುದಾಗಿ ಜಡಗಳಾದ ಪೌರುಷೇಯಾಪೌರುಷೇಯಾಗಮಗಳನ್ನು ಪ್ರತ್ಯೇಕವಾಗಿ, ಉಲ್ಲೇಖಿಸಿ ಜಡ- ಜಡ ಭೇದವನ್ನು ಗೀತಾಚಾರ್ಯ ಸೂಚಿಸಿರುವನು.

ಗುಹ್ಯತಮ ಶಾಸ್ತ್ರದಲ್ಲಿ ಇದೂ ಅಪರೋಕ್ಷಜ್ಞಾನಕ್ಕೆ ಸಾಧನವಾಗಿ (ಏತದ್ ಬುದ್ಧ್ವಾ ಬುದ್ಧಿಮಾನ್ ಸ್ಯಾತ್) ಹೇಳಿದ ಈ ಭಾಗದಲ್ಲಿ ಸೂಚಿತಗಳಾದ ಈ ಭೇದಗಳು ಬರೇ ವ್ಯಾವಹಾರಿಕಗಳೆಂದು ತಳ್ಳಿಹಾಕುವಂತಿಲ್ಲ. ಔಪಾಧಿಕಗಳೆಂದು ವ್ಯಾಖ್ಯಾನಿಸುವಂತಿಲ್ಲ. ಆದ್ದರಿಂದ 'ತತ್ತ್ವತೋ ಭೇದಃ'ವನ್ನೇ ಶ್ರೀಕೃಷ್ಣ ಇಲ್ಲಿ ಸಂದೇಶಿಸಿ ರುವನೆಂದು ಒಪ್ಪಬೇಕು.

ಳ) ಜೀವಗಣಾಃ ಹರೇರನುಚರಾಃ

ಸ್ವತಂತ್ರ ತತ್ತ್ವ ಭಗವಂತನೊಬ್ಬನೇ. (ಸ್ವತಂತ್ರೋ ಭಗವಾನ್ ವಿಷ್ಣುಃ) ಎಂದು ಸಾರುವ ಶ್ರೀಮದಾಚಾರ್ಯರ ಪ್ರಕಾರ ಉಳಿದೆಲ್ಲ ಜಗತ್ತು ಅಸ್ವತಂತ್ರವಾಗಿದ್ದು, (ಅಸ್ವತಂತ್ರಂ ದ್ವಿಧೇತರತ್) ಶ್ರೀಹರಿಯ ಅನುಚರ 'ಸ್ವಾಮೀ ಮೇ ವಿಷ್ಣುರಿತ್ಯೇವ ನಿತ್ಯದೋಪಾಸ್ಯಮಂಜಸಾ' (೪-೧-೩ ಅನುವ್ಯಾಖ್ಯಾನ) ಎಂದು ಶ್ರೀಮದಾ ಚಾರ್ಯರು ಸಂದೇಶಿಸಿರುವರು. ಇದನ್ನು ಗೀತಾಚಾರ್ಯ 'ಬಿಭರ್ತ್ಯವ್ಯಯ ಈಶ್ವರಃ' ಎಂಬುದಾಗಿ ಲೋಕತ್ರಯವನ್ನು ಧರಿಸುವ ಪುರುಷೋತ್ತಮನನ್ನು 'ಈಶ್ವರ' ಎಂದು ಅನ್ವರ್ಥಕವಾಗಿ ಎಂದು ಹೆಸರಿಸುವುದರ ಮೂಲಕ ಭಗವಂತನಿಗೂ ಅವನಿಂದ ಭೃತವಾಗುವ ಲೋಕತ್ರಯಕ್ಕೂ ನಡುವೆ ಸ್ವಾಮಿ-ಭೃತ್ಯಭಾವ ಸಂಬಂಧವಿದೆ ಎಂಬುದನ್ನು ಸೂಚ್ಯವಾಗಿ ಸಂದೇಶಿಸಿರುವನು.

೫) ಜೀವಗಣಾಃ.....ನೀಚೋಚ್ಚಭಾವಂ ಗತಾಃ

ಜೀವಾತ್ಮರು ತಾರತಮ್ಯದಿಂದ ಕೂಡಿರುವವರು. ಈ ತಾರತಮ್ಯ ಮುಕ್ತಿ ಅವಸ್ಥೆಯಲ್ಲೂ ಅಳಿಯುವಂತಹದಲ್ಲ. (ಮುಕ್ತಾನಾಂ ಚ ನ ಹೀಯಂತೇ ತಾರತಮ್ಯಂ ಚ ಸರ್ವದಾ –ಮಹಾಭಾರತನಿರ್ಣಯ ೧-೭೧) ಆಚಾರ್ಯಮಧ್ವರ ಈ ಸಂದೇಶವನ್ನು ಗೀತಾಚಾರ್ಯ 'ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋऽಕ್ಷರ ಉಚ್ಯತೇ' ಎಂಬುದಾಗಿ ಲಕ್ಷ್ಮೀದೇವಿ ಹಾಗೂ ಇತರ ಚೇತನರಿಗೆ ಕ್ಷರತ್ವಾಕ್ಷರತ್ವ, ಕೂಟಸ್ಥತಾಕೂಟಸ್ಥತ್ವ –ಇತ್ಯಾದಿ ಧರ್ಮಗಳಲ್ಲಿರುವ ತಾರತಮ್ಯವನ್ನು ಉಲ್ಲೇಖಿಸುವುದರ ಮೂಲಕ, ಹೀಗೆಯೇ ಪ್ರತಿಯೊಬ್ಬ ಜೀವಾತ್ಮನಲ್ಲೂ ಒಂದಲ್ಲ ಒಂದು ಗುಣ-ಧರ್ಮದಲ್ಲಿ ವೈಷಮ್ಯ ಇದ್ದೇ ಇದೆ ಎಂಬುದಾಗಿ ಧ್ವನ್ಯವಾಗಿ ಸಂದೇಶಿಸಿರುವನು.

೬) ಮುಕ್ತಿರ್ನೈಜಸುಖಾನುಭೂತಿ

ಪರಮ ಪುರುಷಾರ್ಥವೆನಿಸಿದ 'ಮುಕ್ತಿ' ಎಂದರೆ 'ಮುಕ್ತಿರ್ಹಿತ್ವಾऽನ್ಯಥಾ ರೂಪಂ ಸ್ವರೂಪೇಣ ವ್ಯವಸ್ಥಿತಿಃ' ಎಂದು ಭಾಗವತ ಸಾರುತ್ತಿರುವಂತೆ ಕೃತ್ರಿಮ ರೂಪವನ್ನು ಕಳೆದುಕೊಂಡು ಚಿದಾನಂದರೂಪವಾದ ಸ್ವಾಭಾವಿಕ ಸ್ವರೂಪವನ್ನು ಪಡೆದುಕೊಳ್ಳುವುದೇ ಆಗಿದೆ. (ನಿಶ್ಶೇಷದುಃಖಮೋಕೇನ ಸುಖೈಕಾನುಭವಸ್ತು ಯಃ । ಮೋಕ್ಷ ಇತ್ಯುಚ್ಯತೇ ವೇದ್ಯೈಃ –ಬೃಹದ್ಭಾಷ್ಯ) ಮುಕ್ತಿಯ ಈ ರೀತಿಯ ಲಕ್ಷಣವನ್ನು ಗೀತಾಚಾರ್ಯ 'ಗುಹ್ಯತಮ' ಶಾಸ್ತ್ರವನ್ನು ತಿಳಿದವನಿಗೆ ಮುಕ್ತಿ ದೊರಕುವುದೆಂಬುದನ್ನು 'ಕೃತಕೃತ್ಯಶ್ಚ ಭಾರತ' ಎಂಬುದಾಗಿ ಕೃತಕೃತ್ಯ ಶಬ್ದದಿಂದ ನಿರೂಪಿಸುವುದರ ಮೂಲಕ ಸೂಚಿಸಿರುವನು. ಮನುಷ್ಯನ ಅಂತಿಮ ಬಯಕೆಯೆಂದರೆ 'ಸುಖಮೇವ ಮೇ ಸ್ಯಾತ್ ದುಃಖಂ ಮನಾಗಪಿ ಮಾ ಭೂತ' ಎಂಬಂತೆ ದುಃಖದ ಸೋಂಕಿಲ್ಲದ ಸುಖ ದೊರೆಯಲೆಂಬುದಾಗಿದೆ. ಈ ಬಯಕೆ ಕೈಗೂಡಿದಾಗಲೇ ಮನುಷ್ಯ 'ಕೃತಕೃತ್ಯ' ಧನ್ಯ ಅಂತ ಅನಿಸುವನು. ಮುಕ್ತಿ ಶ್ರೀಮದಾಚಾರ್ಯರು ಪ್ರತಿಪಾದಿಸುವಂತೆ ದುಃಖದ ಲೇಪವಿಲ್ಲದ ಸ್ವರೂಪಾನಂದಾನುಭವವಾಗಿದ್ದಲ್ಲಿ ಮಾತ್ರ ಮೋಕ್ಷಾವಸ್ಥೆಯಲ್ಲಿ ನಿರ್ದುಃಖಾನಂದ ಪಡೆಯಬೇಕೆಂಬ ಬಯಕೆ ಈಡೇರಿ ಕೃತಕೃತ್ಯ ಎನಿಸಬಹುದಾಗಿದೆ. ಆದ್ದರಿಂದ ಗೀತಾಚಾರ್ಯ ಮುಕ್ತನಾಗುವನೆಂಬುದನ್ನು 'ಕೃತಕೃತ್ಯ'ನಾಗುವನೆಂಬುದಾಗಿ ಹೇಳಿ ಮುಕ್ತಿ ಅಂದರೆ ಕೃತಕೃತ್ಯತೆಯ ಸ್ಥಿತಿ. ಅರ್ಥಾತ್ ಸ್ವರೂಪಾನಂದದ ಆವಿರ್ಭಾವ ಎಂಬುದನ್ನು ಸೂಚಿಸಿರುವನು.

ವಿಮಲಾ ಭಕ್ತಿಶ್ಚ ತತ್ಸಾಧನಮ್–

ಸ್ವರೂಪಾನಂದಾನುಭವಾತ್ಮಕವಾದ ಮೋಕ್ಷವನ್ನು ಗಳಿಸುವುದರಲ್ಲಿ ಮುಖ್ಯ ಸಾಧನವಾದರೂ ಯಾವುದು? ಭಗವದ್ಭಕ್ತಿಯೇ ಪ್ರಮುಖಸಾಧನ ('...ಭಕ್ತಿರ್ಮೋಕ್ಷಾಯ ಕೇವಲಾ –ಮ. ಭಾರ. ತಾ. ನಿರ್ಣಯ ೧-೧೦೫) ಉಳಿದ ತೀರ್ಥಯಾತ್ರೆಯೇ ಮೊದಲಾದ ಯಾವುದೇ ಸಾಧನೆಗಳಿದ್ದರೂ ಅವೆಲ್ಲ ಭಕ್ತಿಯ ಗಳಿಕೆಗಾಗಿಯಷ್ಟೇ

(ಭಕ್ತ್ಯರ್ಥಾನ್ಯಖಿಲಾನ್ಯೇವ.... ಮ. ಭಾ. ತಾ. ನಿ. ೧–೧೦೫) ಭಕ್ತಿಯಾದರೂ ಮೌಢ್ಯಪೂರ್ವಕವಾಗಿ ಪ್ರೇಮಿಸುವುದಲ್ಲ, ಮತ್ತೆ ಮಹಾತ್ಮ್ಯಜ್ಞಾನ ಪೂರ್ವಕವಾದ ಸುದೃಢವಾಗಿ ಪ್ರೇಮಿಸುವುದು. (ಜ್ಞಾನಪೂರ್ವಃ ಪರಸ್ನೇಹೋ ನಿತ್ಯೋ ಭಕ್ತಿರಿತೀರ್ಯತೇ –ತಾ. ನಿ. ೧–೧೦೬) ಗೀತಾಚಾರ್ಯ ಪ್ರೇಮದ ಹಿನ್ನಲೆ ಯಾಗಿರುವ ಜ್ಞಾನಕ್ಕೇನೇ ಹೆಚ್ಚು ಒತ್ತುಕೊಟ್ಟು '.....ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ' ಎಂಬುದಾಗಿ ಕೃತಕೃತ್ಯತೆ ಪಡೆಯಲು ಬುದ್ಧಿವಂತ(ಅಪರೋಕ್ಷ ಜ್ಞಾನಿಯಾಗು ವುದೇ)ನಾಗುವುದೇ ಮುಖ್ಯ ಎಂದು ಸಾರಿದ್ದರೂ, ಅಂತಹ ಬುದ್ಧಿಮತ್ತೆಯಾದರೂ 'ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ' –ಎಂದು ಹಿಂದೆ ತಾನೇ ತಿಳಿಸಿರುವಂತೆ ಸರ್ವ ಪ್ರಕಾರಗಳಿಂದ ಸೇವಿಸಲು ಬೇಕಾದ ಸ್ನೇಹದಿಂದ ಕೂಡಿಯೇ ಇರುವುದರಿಂದ, ಜ್ಞಾನ ಮತ್ತು ಸ್ನೇಹಗಳ ಮಿಶ್ರಣವಾದ ಭಕ್ತಿಯೇ ಕೃತಕೃತ್ಯತೆ ಪಡೆಯಲು ಪ್ರಧಾನ ಸಾಧನವೆಂಬುದಾಗಿ ಸೂಚಿಸಿದಂತೆಯೇ.

ಆ ಭಕ್ತಿಯಾದರೂ ನಿರ್ಮಲವಾಗಿದ್ದಿರಬೇಕು. ಜೀವಾಭೇದಾದಿ ರೂಪದಲ್ಲಿರುವ ಒಂಭತ್ತು ವಿವಿಧ ದ್ವೇಷದ ಸಂಪರ್ಕ ಅದಕ್ಕಿರಬಾರದು. (ಏತೈರ್ವಿಹೀನಾ ಯಾ ಭಕ್ತಿಃ ಸಾ ಭಕ್ತಿರಿತಿ ನಿಶ್ಚಿತಾ –ತಾ. ನಿ. I–೧೧೪) ಈ ದ್ವೇಷಗಳ ಸಂಸರ್ಗವಾದರೂ ಮಾಹಾತ್ಮ್ಯಜ್ಞಾನವನ್ನು ಗಳಿಸುವ ಸಂದರ್ಭದಲ್ಲೇ ಸಂಭವಿಸುವಂತಹದ್ದು. ಆದ್ದ ರಿಂದಲೇ ಗೀತಾಚಾರ್ಯ 'ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮ್' ಎಂಬುದಾಗಿ ಮೋಹವಿಲ್ಲದೆ ತನ್ನನ್ನು ಭಜಿಸುವುದಾಗಿ ತಿಳಿಸಿರುವನು. ಭಕ್ತಿ ಸರ್ವತೋಽಧಿಕವಾದ ಸ್ನೇಹವಾಗಿದ್ದಿರಬೇಕೆಂಬುದನ್ನು ಸರ್ವ ಭಾವೇನ ಭಜತಿ –ಸಕಲ ಪ್ರಕಾರಗಳಿಂದ ಸೇವಿಸುವನು ಎಂಬ ಮಾತಲ್ಲಿ ಸೂಚಿಸಿ ರುವನು.

ಅಂತೂ ಒಟ್ಟಾಗಿ ಶ್ರೀಮದಾಚಾರ್ಯರು ಪ್ರತಿಪಾದಿಸಿದ ಭಕ್ತಿಯ ಲಕ್ಷಣ ಗಳನ್ನೂ ಅಂತಹ ಲಕ್ಷಣಗಳಿಂದ ಕೂಡಿದ ಭಕ್ತಿಯೇ ಮುಕ್ತಿಗೆ ಪ್ರಮುಖ ಸಾಧನ ವೆಂಬುದನ್ನೂ ಗೀತಾಚಾರ್ಯ ಸೂಚ್ಯವಾಗಿ ಸಂದೇಶಿಸಿರುವರು.

೮) ಅಕ್ಷಾದಿ ತ್ರಿತಯಂ ಪ್ರಮಾಣಮ್

ಮೇಲಿನ ಪ್ರಮೇಯಗಳನ್ನು ಸಾಧಿಸಲು ಬಳಸಲಾಗುವ ಪ್ರಮಾಣಗಳೆಂದರೆ ಮೂರು ಮಾತ್ರ –'ಪ್ರತ್ಯಕ್ಷಮನುಮಾನಂ ಚ ವಾಕ್ಯಂ ಚೇತಿ ತ್ರಿಧಾ ಪ್ರಮಾ' ಪತ್ಯಕ್ಷ ಅನುಮಾನ ಹಾಗೂ ಆಗಮಗಳೆಂಬುದಾಗಿ. ಇವುಗಳನ್ನು ಪ್ರಮಾಣಗಳೆಂದು ಒಪ್ಪಿರುವುದಾಗಿ ಗೀತಾಚಾರ್ಯ ಹೀಗೆ ಸೂಚಿಸಿರುವನು–

'ದ್ವಾವಿಮೌ ಪುರುಷೌ ಲೋಕೇ' –ಎಂಬುದಾಗಿ ಲೋಕದಲ್ಲಿಯ ಕ್ಷರಾಕ್ಷರ ಪುರುಷರುಗಳನ್ನು ಇದಂ ಶಬ್ದದಿಂದ ನಿರ್ದೇಶಿಸುವುದರ ಮೂಲಕ ಐಹಿಕ ವಿಚಾರ ಗಳಲ್ಲಿ ಪ್ರತ್ಯಕ್ಷಕ್ಕೆ ಪ್ರಾಮಾಣ್ಯವನ್ನು ಒಪ್ಪಿರುವನು.

'ಪರಮಾತ್ಮೇತ್ಯುದಾಹೃತಃ' ಎಂಬುದಾಗಿ ಹಾಗೂ 'ಅತೋऽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ' ಎಂಬುದಾಗಿ ತಾನು ಪರಮಾತ್ಮ ಹಾಗೂ ಪುರುಷೋತ್ತಮ ಆಗಿರುವುದಕ್ಕೆ ಪೌರುಷೇಯಾಪೌರುಷೇಯ ಆಗಮಗಳನ್ನು ಉದಾಹರಿಸಿರುವುದರಿಂದ ಅವುಗಳಿಗೆ ಪ್ರಾಮಾಣ್ಯವನ್ನು ಒಪ್ಪಿರುವನು.

'ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ' ಎಂಬುದಾಗಿ ಶ್ರೀಹರಿ ಕ್ಷರಾಕ್ಷರಗಳಿಗಿಂತ ಅನ್ಯ ಹಾಗೂ ಉತ್ತಮನಾಗಿರುವುದನ್ನು ಯುಕ್ತಿಯಿಂದಲೂ ಸಮರ್ಥಿಸಲಾಗಿದೆ. ಯಾರು ಯಾರ ಧಾರಣ ಪೋಷಣೆ ಮಾಡುವನೋ ಮಾಡಿಸಿ ಕೊಳ್ಳುವವನಿಗಿಂತ ಅನ್ಯ ಮತ್ತು ಉತ್ತಮ ಎಂಬುದು ಸಿದ್ಧವಾದುದು. ಪರಮಾತ್ಮ ನೆನಿಸಿದ ಶ್ರೀಹರಿಯಾದರೂ ಕ್ಷರಾಕ್ಷರಗಳನ್ನೊಳಗೊಂಡ ಲೋಕತ್ರಯದ ಧಾರಕ ಹಾಗೂ ಪೋಷಕ ಅಂದ ಮೇಲೆ ಅವುಗಳಿಗಿಂತ ಅನ್ಯ ಮತ್ತು ಉತ್ತಮ. ಹೀಗೆ 'ಪರಮಾತ್ಮೇತ್ಯುದಾಹೃತಃ' ಎಂಬುದಾಗಿ ಶ್ರೀಹರಿ ಪುರುಷೋತ್ತಮನಾಗಿ ಆಗಮ ಸಿದ್ಧವಾಗಿರುವುದೆಂಬುದಾಗಿ ಸಾರಿ, ಮುಂದೆ 'ಯೋ ಲೋಕತ್ರಯಮಾವಿಶ್ಯ...' ಎಂಬುದಾಗಿ ಯುಕ್ತಿಯನ್ನೂ ಉದಾಹರಿಸಿ, ಅನುಮಾನಕ್ಕೂ ಪ್ರಾಮಾಣ್ಯವನ್ನು ಒಪ್ಪಿರುವನು. ಆದರೆ ಅನುಮಾನವಾದರೂ '.....ನಾನುಮಾಗಮವರ್ಜಿತಾ । ಕ್ವಚಿನ್ನಿರ್ಣೇತಿ ಹೇತುಃ ಸ್ಯಾತ್....' (ಬೃಹದ್ಭಾಷ್ಯ) ಎಂದು ಶ್ರೀಮದಾಚಾರ್ಯರು ಅಭಿಪ್ರಾಯ ಪಡುವಂತೆ ಆಗಮದ ಬೆಂಬಲವಿದ್ದಾಗಷ್ಟೇ ಪ್ರಮಾಣವಾಗುವುದೆಂಬು ದನ್ನು ಸೂಚಿಸಲು ಗೀತಾಚಾರ್ಯ ಮೊದಲನೆಯದಾಗಿ 'ಪರಮಾತ್ಮೇತ್ಯುದಾಹೃತಃ' ಎಂಬುದಾಗಿ ಆಗಮಸಿದ್ಧತ್ವವನ್ನು ಪ್ರತಿಜ್ಞೆ ಮಾಡಿ ಆಮೇಲೆ ಆ ವಿಷಯದಲ್ಲಿ ಅನುಮಾನವನ್ನು ಉದಾಹರಿಸಿರುವುದು ಗಮನೀಯ.

ಹೀಗೆ ಗೀತಾಚಾರ್ಯ ಪ್ರಮೇಯಗಳ ಸಾಧನೆಯಲ್ಲಿ ಪ್ರತ್ಯಕ್ಷ ಆಗಮ ಹಾಗೂ ಅನುಮಾನಗಳನ್ನು ಬಳಸಿಕೊಂಡು, ಅವು ಮೂರೂ ಪ್ರಮಾಣಗಳೆಂಬುದಾಗಿ ಸೂಚ್ಯ ವಾಗಿ ಸಂದೇಶಿಸಿರುವನು.

೯) ಅಖಿಲಾಮ್ನಾಯೈಕವೇದ್ಯೋ ಹರಿಃ

ಸಕಲ ವೇದಗಳೂ ತಮ್ಮ ಸ್ವರವರ್ಣಾದಿ ಸಕಲಾವಯವಗಳಿಂದಲೂ ಶ್ರೀಹರಿಯನ್ನೇ ಪ್ರತಿಪಾದಿಸುತ್ತಿವೆ. ಅದು ಸರ್ವೋತ್ತಮನನ್ನಾಗಿಯೇ ಸಾರುತ್ತಿವೆ. (.....ಇತ್ಯಶೇಷಕ್ರಿಯಾನಾಮಶಬ್ದೈರೇಕೋ ಜನಾರ್ದನಃ । ಉಚ್ಯತೇ ಮುಖ್ಯತೋ ಪದ ವರ್ಣ ಸ್ವರಾದಿಭಿಃ । –ಅನುವ್ಯಾಖ್ಯಾನ) ಈ ಪ್ರಮೇಯಗಳನ್ನು 'ಅತೋऽಸ್ಮಿ ಲೋಕೆ ವೇದೇ ಚ ಪ್ರಥಿತಃ ಪುರುಷೋತ್ತಮಃ' ಎಂಬ ಮಾತಲ್ಲಿ ಹುದುಗಿಡಲಾಗಿದೆ. ಪ್ರಸಿದ್ಧನಾಗಬೇಕೆಂದರೆ ಅಲ್ಲಿಯ ಪ್ರತಿಯೊಬ್ಬರಿಗೂ ಪರಿಚಿತನಾಗಿದ್ದಿರಬೇಕು ತಾನೇ? ಅಂತೆಯೇ ಶ್ರೀಕೃಷ್ಣ ಲೋಕ ಎನಿಸುವ ಪೌರುಷೇಯಾಗಮದಲ್ಲೂ ವೇದ ಎನಿಸುವ ಅಪೌರುಷೇಯಾಗಮದಲ್ಲೂ ಪ್ರಸಿದ್ಧನಾಗಿರುವನೆಂದರೆ ಆ ಗ್ರಂಥಗಳ ಅವಯ ವಗಳಿಗೆಲ್ಲ ಪರಿಚಿತ ಎಂದರ್ಥ. ಅದೂ ಹೇಗ್ಹೇಗೋ ಪರಿಚಿತನಲ್ಲ. ಮತ್ತೆ 'ಪುರುಷೋತ್ತಮ' ಎಂಬುದಾಗಿಯೇ ಪರಿಚಿತ. ಅರ್ಥಾತ್ ಶ್ರೀಹರಿಯನ್ನು

ಲೋಕವೇದಗಳ ಪ್ರತಿಯೊಂದು ಸ್ವರಾಕ್ಷರಾದಿಗಳೂ 'ಪುರುಷೋತ್ತಮ' 'ಪುರುಷೋತ್ತಮ' ಎಂಬುದಾಗಿ ಉದ್ಘೋಷಿಸುತ್ತಿವೆ –ಎಂಬುದಾಗಿ ಗೀತಾಚಾರ್ಯ ಸೂಚಿಸಿದ ಸಂದೇಶ.

ಹೀಗೆ ಆಚಾರ್ಯಮಧ್ವರಿಂದ ಪ್ರತಿಪಾದಿತಗಳಾದ ನವ ಪ್ರಮೇಯರತ್ನಗಳನ್ನೂ ಗೀತಾಚಾರ್ಯ ತನ್ನ 'ಗುಹ್ಯತಮ' ಶಾಸ್ತ್ರದಲ್ಲಿ ಹುದುಗಿಸಿರುವನು. ಸಾತ್ವಿಕರು ಅವುಗಳನ್ನು ಪತ್ತೆಹಚ್ಚಿ, ಆ ಮೂಲಕ ಭಗವಂತನ ಸಾಕ್ಷಾತ್ಕಾರ ಪಡೆದುಕೊಂಡು ಕೃತಕೃತ್ಯರಾಗಬೇಕೆಂಬುದು (....ಏತದ್ ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ....) ಗೀತಾಚಾರ್ಯನ ಆಶಯ.

●

೪. ೩. ಭಾಗವತ ತಾತ್ಪರ್ಯನಿರ್ಣಯ

ಕ್ಷೀರಸಮುದ್ರಮಥನದ ಸಂದರ್ಭದಲ್ಲಿ ಕಾಲಕೂಟವಿಷ ಉದ್ಭವವಾಯಿತು. ಈ ವಿಷಬಾಧೆಯಿಂದ ದೇವತೆಗಳೆಲ್ಲರೂ ಪೀಡಿತರಾದರು. ಆಗ ವಾಯುದೇವರು ಭಗವದಾಜ್ಞಾನುಸಾರವಾಗಿ ಆ ವಿಷವನ್ನು ಪಾನ ಮಾಡಿ ಜೀರ್ಣಿಸಿಕೊಂಡರು. ಅನಂತರದಲ್ಲಿ ಸ್ವಲ್ಪ ವಿಷವನ್ನು, ಅದರ ಸಾರವನ್ನೆಲ್ಲ ತಿಕ್ಕಿ ತೆಗೆದು ರುದ್ರದೇವರಿಗೆ ಕೊಟ್ಟರು. ಆದರೆ ಅದನ್ನೂ ಸಹಿಸಲಾಗದೆ, ಅದು ಗಂಟಲಲ್ಲೇ ಉಳಿದು 'ನೀಲಕಂಠ' ಎನಿಸಿದರು –ರುದ್ರದೇವರು.

ಪರೀಕ್ಷಿತ್ ಮಹಾರಾಜನಿಗೆ ಕೂಡ ತಕ್ಷಕನ ವಿಷದ ಬಾಧೆಯಿತ್ತು. ಅದಕ್ಕಾಗಿ ಶುಕಾಚಾರ್ಯರ ಭಾಗವತೋಪದೇಶ –ರುದ್ರನ ಅವತಾರರಾದ ಅವರೊಳಗೆ ವಾಯುದೇವರು ದೇವತೆಗಳಿಗೊದಗಿಬಂದ ವಿಷಬಾಧೆಯನ್ನು ಪರಿಹರಿಸಿದರು. ರಾಜ ವಿಷ ತಿಂದು ಮೃತನಾದರೂ ಅಮೃತನಾದ ವಿಷವೂ ಭಾಗವತ ಶ್ರವಣದಿಂದ ಅಮೃತವಾಯಿತು. ಅಮೃತತ್ವವನ್ನು ನೀಡಿತು.

ಆ ರಾಜನಿಗೆ ತಕ್ಷಕನೆಂಬ ಅಹಿಯ –ಸರ್ಪದ– ವಿಷಬಾಧೆಯಿದ್ದರೆ ನಮಗೂ ಅಹಿಯಬಾಧೆಯಿದೆ. ಆಚಾರ್ಯಮಧ್ವರು ಅಹಿ ಎಂದರೆ ಸಂಶಯ ಎಂದು ತಿಳಿಸಿದ್ದಾರೆ. 'ಹಿ' ಎಂದರೆ ನಿಶ್ಚಯ. ಅಹಿ ಎಂದರೆ ನಿಶ್ಚಯಕ್ಕೆ ವಿರುದ್ಧವಾದ ಸಂಶಯ ಎಂದರ್ಥ. ಅರ್ಥಾತ್ ಅಜ್ಞಾನ, ಸಂಶಯ, ವಿಪರೀತಜ್ಞಾನಗಳೆಂಬ ಸರ್ಪದ ವಿಷ ಕಲಿಪ್ರಭಾವದಿಂದ ನಮ್ಮೊಳಗೂ ಇದೆ. ಇದರ ಪರಿಹಾರಕ್ಕೆ ಭಾಗವತವೂ ಸಮರ್ಥವಾಗಿಲ್ಲ. ಅನೇಕ ಅಪವ್ಯಾಖ್ಯಾನಗಳಿಂದ ಅಪಾರ್ಥವನ್ನೇ ಕೆಲವೆಡೆ ಆಪಾತತಃ ತಿಳಿಸುತ್ತಿದ್ದು ಅದೂ ಸಂಶಯಾದಿನಿವಾರಕವಾಗಿಲ್ಲ. ನಮ್ಮ ಬಗೆಯಲ್ಲಿ ತುಂಬಿರುವ ಈ ಬಗೆಯ ವಿಷದ ಪರಿಹಾರಕ್ಕೆ ಕೂಡ ವಾಯುದೇವರೇ ಬೇಕು. ವಾಯುದೇವರದೇ ಅವತಾರರಾದ ಶ್ರೀ ಮಧ್ವರು ಬರೆದ ಭಾಗವತತಾತ್ಪರ್ಯನಿರ್ಣಯದ ಸಂಪೂರ್ಣ ಸಹಾಯದೊಂದಿಗೆ ಮಾತ್ರ ಭಾಗವತದ ಅಂತರ್ಯವನ್ನು ಅರಿಯಲು ಸಾಧ್ಯ.

ಅದಕ್ಕೆ ಉದಾಹರಣೆಯನ್ನು ನೋಡೋಣ–

ಭಾಗವತದ ಏಕಾದಶಸ್ಕಂಧದಲ್ಲಿ 'ಪರಸ್ವಭಾವಕರ್ಮಾಣಿ ನ ಪ್ರಶಂಸೇತ್ ನ ಗರ್ಹಯೇತ್' ಎಂಬುದು ಒಂದು ಶ್ಲೋಕ. ಇಲ್ಲಿ ಮೇಲ್ನೋಟಕ್ಕೆ, ಪರರು ಅಂದರೆ ಇತರರು ಒಳ್ಳೆಯ ಸ್ವಭಾವದವರಾದರೂ ಪ್ರಶಂಸಿಸಬಾರದು. ಕೆಟ್ಟ ಸ್ವಭಾವದವ ರಾದರೂ ನಿಂದಿಸಲೂ ಬಾರದು. ಅಂತೆಯೇ ಇತರರು ಒಳ್ಳೆಯ ಕೆಲಸವನ್ನು ಮಾಡಿದರೂ ಹೊಗಳಬಾರದು. ಕೆಟ್ಟ ಕೆಲಸ ಮಾಡಿದರೆ ನಿಂದಿಸಲೂಬಾರದು ಎಂದು ಅರ್ಥ ತೋರುತ್ತದೆ. ಆದರೆ ಆಚಾರ್ಯರು ಇಲ್ಲಿ ಪ್ರಮಾಣವನ್ನುದಾಹರಿಸಿ ಸರಿಯಾದ ಬೆಳಕು ನೀಡುತ್ತಾರೆ– 'ನ ಪ್ರಶಂಸೇತ ನಿಂದ್ಯಾಂಸ್ತು ಪ್ರಶಂಸ್ಯಾನ್ನೈವ ನಿಂದಯೇತ್ । ಉಭಯಂ ಯಃ ಕರೋತ್ಯೇತದ್ ಅಸತ್ಯಾತ್ ಸ ಪತತ್ಯಧಃ ॥ ಯಃ ಪ್ರಶಂಸ್ಯಾನ್ನ ಪ್ರಶಂಸೇನ್ನಿಂದ್ಯೋ ಯೇನ ನ ನಿಂದ್ಯತೇ । ಸೋಽಪಿ ತದ್ವದಧೋ ಯಾತಿ ಯತೋಽರಿವದುದಾಸಕಃ (ಭಾ. ತಾ. ನಿ.)' –ಯಾರು ನಿಂದನೆಗೆ ಅರ್ಹರೋ ಅವರನ್ನು ಪ್ರಶಂಸಿಸಬಾರದು. ಯಾರು ಪ್ರಶಂಸೆಗೆ ಅರ್ಹರೋ ಅವರನ್ನು ನಿಂದಿಸಬಾರದು. ನಿಂದ್ಯರನ್ನು ಪ್ರಶಂಸಿಸಿದರೆ ಅವಿದ್ಯಮಾನ– ಪ್ರಶಂಸೆ ಇಲ್ಲದಿದ್ದ ಗುಣವನ್ನು ಇದೆಯೆಂದು ಪ್ರಶಂಸಿಸಿದಂತಾಗುವುದು. ಪ್ರಶಂಸ್ಯರನ್ನು ನಿಂದಿಸಿದರೆ ಇಲ್ಲದಿದ್ದ ದೋಷವನ್ನು ಇದೆಯೆಂದು ಹೇಳಿ ನಿಂದೆ ಮಾಡಿದಂತಾಗುವುದು. ಹೀಗಾಗಿ ಇವೆರಡೂ ಅಸತ್ಯವಚನದಲ್ಲಿ ಕೊನೆಗೊಳ್ಳುವುದರಿಂದ ನಿಂದ್ಯಪ್ರಶಂಸೆ, ಪ್ರಸಂಸ್ಯನಿಂದಾ ಇವೆರಡನ್ನು ಮಾಡಿದವನು ಅಧೋಗತಿಯನ್ನು ಹೊಂದುವನು.

ಪ್ರಶಂಸೆಗೆ ಯೋಗ್ಯರಾದವರನ್ನು ನಿಂದೆ ಮಾಡುವುದು ಹೇಗೆ ತಪ್ಪೋ ಹಾಗೆಯೇ ಪ್ರಶಂಸೆ ಮಾಡದಿರುವುದೂ ತಪ್ಪು. ನಿಂದಾಯೋಗ್ಯರನ್ನು ಪ್ರಶಂಸೆ ಮಾಡುವುದು ಹೇಗೆ ತಪ್ಪೋ ಅಂತೆಯೇ ನಿಂದಿಸದಿರುವುದೂ ತಪ್ಪು. ಅಸತ್ಯವನ್ನು ಹೇಳುವುದು ದೋಷವಾಗುವಂತೆ ಸತ್ಯವನ್ನು ಹೇಳದಿರುವುದೂ ಅಸತ್ಯಕ್ಕೆ ಪೋಷಕ ವಾದುದರಿಂದ ದೋಷವೆನಿಸುವುದು. ಆದುದರಿಂದ ಅಸತ್ಯವನ್ನು ನಿರಾಕರಿಸದೆ, ಸತ್ಯವನ್ನು ಹೇಳದೆ ತಟಸ್ಥನಾಗಿರುವುದೂ ತಪ್ಪು. (ದ್ರೌಪದೀ ವಸ್ತ್ರಾಪಹಾರ ಸಮಯದಲ್ಲಿ ದುರ್ಯೋಧನನ ದೋಷವನ್ನು ಪ್ರತಿಭಟಿಸದೇ ಮೌನ ತಾಳಿದ ದ್ರೋಣಾದಿಗಳಂತೆ) ಇದು ಮೇಲಿನ ಭಾಗವತ ಶ್ಲೋಕದ ಅಭಿಪ್ರಾಯ.

ದ್ವಿತೀಯ ಸ್ಕಂಧದಲ್ಲಿ 'ಕರ್ತೃತ್ವಂ ಪ್ರತಿಷೇಧಾರ್ಥಂ ಮಾಯಯಾಽಽರೋಪಿತಂ ಹಿ ತತ್' ಎಂಬ ಪದ್ಯದಲ್ಲಿ ಮೇಲ್ನೋಟಕ್ಕೆ ಪರಮಾತ್ಮನಿಗೆ ಕರ್ತೃತ್ವವಿಲ್ಲ. ಕರ್ತೃತ್ವ ವನ್ನು ಹೇಳಿರುವುದು 'ನೇಹ ನಾನಾಸ್ತಿ ಕಿಂಚನ' ಎಂಬ ಶ್ರುತಿಯಲ್ಲಿ ನಿಷೇಧಿಸು ವುದಕ್ಕಾಗಿ ಮಾತ್ರ. ಏಕೆಂದರೆ ಆ ಕರ್ತೃತ್ವ ಮಾಯಾಕಲ್ಪಿತ ಎಂಬ ಅರ್ಥವು ಕಂಡುಬರುತ್ತದೆ. ಆಚಾರ್ಯರು ಪ್ರಮಾಣದ ಮೂಲಕ ಕೊಡುವ ಅರ್ಥನಿರ್ಣಯ ಹೀಗಿದೆ. 'ಪ್ರತಿಷೇಧಾಯ ಬಂಧಸ್ಯ ಜೀವಾನಾಂ ಪರಮೇಶಿತುಃ । ಸ್ವೇಚ್ಛಯೈವ ತು ಕರ್ತೃತ್ವಂ ನಿತ್ಯಾರೂಢಂ ಚಿದಾತ್ಮಕಮ್' ಜೀವರ ಬಂಧದ ಪ್ರತಿಷೇಧಕ್ಕಾಗಿ– ಪರಿಹಾರಕ್ಕಾಗಿ ಭಗವಂತನು ಜಗಜ್ಜನ್ಮಾದಿಕರ್ತೃತ್ವವನ್ನು ಮಾಯೆಯಿಂದ ಸ್ವ

ಇಚ್ಛೆಯಿಂದ ತನ್ನಲ್ಲಿರಿಸಿಕೊಂಡಿರುವನು. ಅದು ನಿತ್ಯವಾದದ್ದು. ಜೀವರ ಬಂಧ ಮೋಚನಕ್ಕಾಗಿ ಶ್ರುತಿಗಳು ಶ್ರೀ ಜಗತ್ಕರ್ತೃತ್ವವನ್ನು ಹೇಳುತ್ತಿದೆ.

ಈ ರೀತಿ ಆಚಾರ್ಯರ ತಾತ್ಪರ್ಯನಿರ್ಣಯದ ಮಾರ್ಗದರ್ಶನವಿಲ್ಲದಿದ್ದರೆ ಭಾಗವತದ ಆಂತರ್ಯ ಅರಿಯಲು ಸಾಧ್ಯವಿಲ್ಲ. ನಮ್ಮ ಹೃದಯದ ಅಜ್ಞಾನ, ಭ್ರಮೆ, ಸಂಶಯಗಳೆಂಬ ವಿಷದ ಬಾಧೆಯನ್ನು ಕಳೆಯಲೂ ವಾಯುದೇವರ ಅವತಾರವಾದ ಶ್ರೀ ಮಧ್ವರೇ ಸಮರ್ಥರು.

●

೪. ೪. ಪುರುಷಸೂಕ್ತದ ನಾಯಕಮಣಿ

ಪುರುಷಸೂಕ್ತವು ಭಗವಂತನ ಗುಣಗಳನ್ನೇ ಸ್ತುತಿಸುತ್ತಿದ್ದು, ಅಂತಹ ಗುಣ ಮಣಿಗಳ ಒಂದು ಸುಂದರವಾದ ಹಾರ. 'ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್' –ಎನ್ನುವ ಮಾತು ಆ ಹಾರದ ನಾಯಕಮಣಿ, ಮಣಿಗಳ ಹಾರದಲ್ಲಿ ನಾಯಕಮಣಿಯಾಗಿ ರಾರಾಜಿಸುತ್ತಿರುವ ಮಣಿಯು ಮಣಿಶ್ರೇಷ್ಠ ವಾಗಿದ್ದಿರಬೇಕೇ ಹೊರತು ಯಾವುದೋ ಅಪ್ರಯೋಜಕ ಕಲ್ಲನ್ನು ಆ ಸ್ಥಾನದಲ್ಲಿ ಪೋಣಿಸುವಂತಿಲ್ಲ. ಅಂತೆಯೇ ಪುರುಷಸೂಕ್ತವೆಂಬ ಭಗವದ್ಗುಣ–ಮಣಿಗಳ ಹಾರದಲ್ಲಿ ನಾಯಕಮಣಿಯಾಗಿ ಮೆರೆಯುತ್ತಿರುವ 'ಪುರುಷ ಏವೇದಂ....' ಈ ಮಾತು ಪುರುಷಸೂಕ್ತದ ಇತರ ಮಾತುಗಳಂತೆ ಭಗವಂತನ ಗುಣಗಾನ ನಡೆಸುತ್ತಿರಬೇಕು. ನಾರಾಯಣಪ್ರತಿಪಾದಕ –ಪುರುಷಸೂಕ್ತ ಯಾರೋ ಪುರುಷ ಅನಿಸುವವನನ್ನು ಪ್ರತಿಪಾದಿಸುತ್ತಿದೆಯೇ ಹೊರತು ನಾರಾಯಣನ ಗುಣಗಾನ ಮಾಡುತ್ತಿಲ್ಲ ಎಂದು ಹೇಳುವಂತಿಲ್ಲ. ಪುರುಷಸೂಕ್ತದಲ್ಲಿ ಸ್ತುತಿಸಿರುವಂತೆಯೇ ಸಹಸ್ರಶೀರ್ಷತ್ವಾದಿಗಳನ್ನು ಉಲ್ಲೇಖಿಸಿ ಸ್ತುತಿಸುತ್ತಿರುವ 'ನಾರಾಯಣಪನ್ನ'ದಲ್ಲಿ 'ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಂ । ವಿಶ್ವಂ ನಾರಾಯಣಂ ದೇವಂ.....' ಎಂಬುದಾಗಿ ಸಹಸ್ರಶೀರ್ಷತ್ವಾದಿ ಮಹಿಮೆಗಳನ್ನೊಳಗೊಂಡಿರುವವನು ಶ್ರೀಮನ್ನಾರಾ ಯಣನೇ ಎಂದು ನಾರಾಯಣನಾಮದ ಉಲ್ಲೇಖಪೂರ್ವಕವಾಗಿಯೇ ಸಂದೇಶಿಸ ಲಾಗಿದೆ. ಅಲ್ಲದೆ, ಭಗವಂತನು ಕೃಷ್ಣಾವತಾರ ತಾಳಲು ದೇವತೆಗಳಿಂದ ಸಹಿತನಾಗಿ ಚತುರ್ಮುಖನು ಕ್ಷೀರಸಾಗರದ ದಡದಲ್ಲಿ ಭಗವಂತನನ್ನು ಪುರುಷಸೂಕ್ತದಿಂದ ಸ್ತುತಿಸುವನು ಎಂದಿದೆ– 'ತತ್ರ ಗತ್ವಾ ಜಗನ್ನಾಥಂ ದೇವದೇವಂ ವೃಷಾಕಪಿಮ್ । ಪುರುಷಂ ಪುರುಷಸೂಕ್ತೇನ ಉಪತಸ್ಥೇ ಸಮಾಹಿತಃ' ಭಗವಂತನು ಪುರುಷಸೂಕ್ತ ಪ್ರತಿಪಾದ್ಯನಲ್ಲದಿದ್ದರೆ ಅವನನ್ನು ಪುರುಷಸೂಕ್ತದಿಂದ ಸ್ತುತಿಸುವುದರಲ್ಲೇನೂ ಔಚಿತ್ಯ ವಿರಲಾರದು ತಾನೇ? ಹಾಗೆಯೇ, ಕಾಲಿಂದೀನದಿಯಲ್ಲಿ ಅಘಮರ್ಷಣಸೂಕ್ತವನ್ನು ಪಠಿಸುತ್ತ ಮುಳುಗಿದ ಅಕ್ರೂರನು ನೀರಿನಲ್ಲಿ ರಾಮಕೃಷ್ಣರನ್ನು ಕಂಡು ರಥದಲ್ಲಿ ಇರುವರೋ ಇಲ್ಲವೋ ಎಂದು ಪರೀಕ್ಷಿಸಲು ಅಲ್ಲಿಯೂ ಇರುವುದನ್ನು ಕಾಣುವನು. ಪುನಃ ನೀರಲ್ಲಿ ಮುಳುಗಿ ಶೇಷಶಾಯಿಯಾದ ಭಗವಂತನನ್ನು ಕಾಣುವನು.

ಭಕ್ತ್ಯುದ್ರೇಕದಿಂದ ಅಕ್ರೂರನು ಭಗವಂತನನ್ನು ಸ್ತುತಿಸುತ್ತ ಪುರುಷಸೂಕ್ತದಲ್ಲಿ 'ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ......' ಎಂದು ವಿರಾಡ್ರೂಪಿ ಭಗವಂತನ ಬೇರೆ ಬೇರೆ ಅವಯವಗಳಿಂದ ಅಗ್ನ್ಯಾದಿಗಳು ಪ್ರಾದುರ್ಭವಿಸಿದರೆಂದು ಹೇಳಲಾದ ಮಹಿಮೆಯನ್ನೇ 'ಅಗ್ನಿರ್ಮುಖಂ ತೇಽವನಿರಂಘ್ರಿರೀಕ್ಷಣಂ ಸೂರ್ಯೋ ನಭೋ ನಾಭಿರಥೋ ದಿಶಃ ಶ್ರುತಿಃ.....' ಎಂಬುದಾಗಿ ಉಲ್ಲೇಖಿಸಿರುವನು. ಇದರಿಂದ ಸ್ಪಷ್ಟವಾಗುವುದು –ಪುರುಷಸೂಕ್ತ ಭಗವಂತನನ್ನೇ ಪ್ರತಿಪಾದಿಸುತ್ತಿದೆ ಎಂಬುದಾಗಿ. ಮುಕ್ತಿಗೆ ಕಾರಣ– ಪುರುಷಸೂಕ್ತ ಮಹಿಮೆಗಳನ್ನು ಪ್ರತಿಪಾದಿಸುತ್ತಿರುವುದೇನೋ ನಿಜ. ಆದರೆ ಅವೆಲ್ಲ ಅವಿದ್ಯಾಕಲ್ಪಿತಗಳಾಗಿದ್ದು ಮಿಥ್ಯಾಭೂತಗಳಾದವು, ಹೊರತು ಪಾರಮಾರ್ಥಿಕ ಸತ್ಯಗಳಲ್ಲ ಎಂದೂ ವಾದಿಸುವಂತಿಲ್ಲ. ಯಜುರ್ವೇದದ ಪುರುಷ ಸೂಕ್ತದ ಕೊನೆಗೆ ಒಂದು ಮಾತು ಹೀಗಿದೆ –ತಮೇವಂ ವಿದ್ವಾನಮೃತ ಇಹ ಭವತಿ– ಪುರುಷನಾಮಕ ಭಗವಂತನನ್ನು ಹೀಗೆ ಅಂದರೆ ಹಿಂದೆ ಹೇಳಿದಂತೆ ಸಹಸ್ರ ಶೀರ್ಷತ್ವಾದಿ ಮಹಿಮೋಪೇತನನ್ನಾಗಿ ತಿಳಿದವನು ಮುಕ್ತನಾಗುವನು ಎಂಬುದಾಗಿ. ಹಾಗಾದರೆ ಸಹಸ್ರಶೀರ್ಷತ್ವಾದಿ ಮಹಿಮೆಗಳ ಜ್ಞಾನವು ಮುಕ್ತಿಗೆ ಕಾರಣ ಎಂದಂತಾಯಿತು. ಮಿಥ್ಯಾಭೂತಗಳಾದ ಮಹಿಮೆಗಳ ಜ್ಞಾನ ಮುಕ್ತಿಗೆ ಕಾರಣ ಆಗಲಾರದು. ಆದ್ದರಿಂದ ಸಹಸ್ರಶೀರ್ಷತ್ವಾದಿ ಮಹಿಮೆಗಳ ಜ್ಞಾನದಿಂದ ಮುಕ್ತಿ ಆಗುವುದೆಂಬುದನ್ನು ಒಪ್ಪಿಕೊಂಡರೆ ಸಹಸ್ರಶೀರ್ಷತ್ವಾದಿ ಮಹಿಮೆಗಳು ಪಾರಮಾರ್ಥಿಕಸತ್ಯಗಳೇ ಎಂದು ಅವಶ್ಯವಾಗಿ ಒಪ್ಪಲೇಬೇಕು.

ಹೀಗೆ ಪುರುಷಸೂಕ್ತ ಭಗವಂತನ ಪಾರಮಾರ್ಥಿಕ ಸತ್ಯಗಳನ್ನೇ ಸ್ತುತಿಸುತ್ತಿರುವುದರಿಂದ ಅಂತಹ ಪುರುಷಸೂಕ್ತದಲ್ಲಿ ಬಂದಿರುವ 'ಪುರುಷ ಏವೇದಂ....' ಎಂಬ ಮಾತು ಭಗವಂತನ ಮಹಿಮೆಗಳನ್ನೇ ಹೇಳುತ್ತಿರಬೇಕು.

ಐಕ್ಯವಾದಿಗಳು ಐಕ್ಯಪ್ರತಿಪಾದನೆಗಾಗಿ ಹೊರಟ ಮಾತು ಇದು ಎನ್ನುವರು. ಆದರೆ ಇಲ್ಲಿ ಸಕಲ ಚೇತನರಿಗಷ್ಟೇ ಐಕ್ಯವನ್ನು ಹೇಳುತ್ತಿರುವುದಲ್ಲ. 'ಇದಂ ಸರ್ವಂ' ಎಂಬುದಾಗಿ ಚೇತನಾಚೇತನವನ್ನೊಳಗೊಂಡ ಸರ್ವಕ್ಕೂ ಪುರುಷನ ಐಕ್ಯವನ್ನು ಹೇಳಲಾಗಿದೆ. ಇದು ಐಕ್ಯವಾದಿಗಳಿಗೂ ಸಮ್ಮತವಲ್ಲ. ಅವರು ಸಕಲ ಚೇತನರ ಐಕ್ಯವನ್ನು ಬ್ರಹ್ಮನಿಗೆ ಹೇಳುವರೆ ಹೊರತು ಜಡಗಳ ಐಕ್ಯವನ್ನು ಹೇಳಲಾರರು. ಅಲ್ಲದೆ, ಇಲ್ಲಿ ಯದ್ಭೂತಂ ಯಚ್ಚ ಭವ್ಯಂ.... ಎಂಬುದಾಗಿ ಹಿಂದಿನ ಹಾಗೂ ಮುಂದಿನ ಪದಾರ್ಥಗಳ ಐಕ್ಯವನ್ನು ಹೇಳಲಾಗಿದೆ. ಅನಾದಿನಿತ್ಯನಾದ ಬ್ರಹ್ಮನಿಗೆ ಹಿಂದೆ ಆಗಿಹೋದ, ಮುಂದೆ ಬರಲಿರುವ ಪದಾರ್ಥಗಳ ಐಕ್ಯ ಹೇಗೆ ತಾನೇ ಕೂಡೀತು? ಸಮಾನಕಾಲೀನಗಳಿಗೆ ಐಕ್ಯವೇ ಹೊರತು ಬೇರೆ ಬೇರೆ ಕಾಲದಲ್ಲಿ ಇರುವವುಗಳಿಗೆ ಐಕ್ಯ ಕೂಡಾಲಾರದು ತಾನೇ?

ಆದ್ದರಿಂದ ಪ್ರಾರಂಭದಲ್ಲಿ ಸಹಸ್ರಶೀರ್ಷತ್ವಾದಿ ಗುಣಗಳನ್ನು, ಮುಂದೆ 'ಉತಾಮೃತತ್ವಸ್ಯೇಶಾನೋ....' ಇತ್ಯಾದಿಯಾಗಿ ಮುಕ್ತ ಸ್ವಾಮಿತ್ವಾದಿ ಗುಣಗಳನ್ನೂ ಹೇಳಲಾಗಿದ್ದು ಇವುಗಳ ಮಧ್ಯದಲ್ಲಿರುವ ಪುರುಷ ಏವೇದಂ ಸರ್ವಂ– ಎನ್ನುವ

ಮಾತೂ ಭಗವಂತನ ಅಸಾಧಾರಣ ಗುಣಗಳನ್ನು ಹೇಳಲು ಹೊರಟಿದೆ ಎನ್ನುವುದು ಅತ್ಯಂತ ಸಮುಚಿತವಾದುದು.

ಅಸಾಧಾರಣ ಗುಣಗಳ ಪ್ರತಿಪಾದನೆ : ಭಗವಂತನ ಅಸಾಧಾರಣ ಗುಣಗಳಾದ ಸ್ವಾತಂತ್ರ್ಯ ಸರ್ವಾಧಾರತ್ವ ಸರ್ವೋತ್ಪಾದಕತ್ವ ಮುಂತಾದವುಗಳನ್ನು ಈ ಮಾತು ಸಾರುತ್ತಿದೆ. 'ಪುರುಷ ಏವೇದಂ ಸರ್ವಂ' ಇವೆಲ್ಲವೂ ಪುರುಷನೇ ಅಂದರೆ 'ಯದಧೀನಾ ಯಸ್ಯ ಸತ್ತಾ ತತ್ತದಿತ್ಯೇವ ಭಣ್ಯತೇ' –ಯಾವ ಪದಾರ್ಥದ ಇರುವಿಕೆ ಯಾರಿಗೆ ಅಧೀನವಾಗಿದೆಯೋ ಅವನು ಆ ಪದಾರ್ಥದ ನಾಮದಿಂದಲೇ ಕರೆಸಿಕೊಳ್ಳಲ್ಪಡುವನು ಎಂಬ ನ್ಯಾಯದಂತೆ ಎಲ್ಲವೂ ಭಗವದಧೀನವಾಗಿದೆ ಎಂದು ಅದರ ಅಭಿಪ್ರಾಯ. ಇಡೀ ರಾಷ್ಟ್ರವು ರಾಜನಿಗೆ ಅಧೀನವಾಗಿದೆ ಎಂಬ ಅಭಿಪ್ರಾಯ ದಲ್ಲಿ 'ರಾಜಾ ರಾಷ್ಟ್ರಂ' ಎಂದು ವ್ಯವಹರಿಸುವಂತೆ. ಹೀಗೆ ಈ ಮಾತು ಭಗವಂತನ ಅಸಾಧಾರಣವಾದ ಸ್ವಾತಂತ್ರ್ಯವನ್ನು ಸಾರುತ್ತಿದೆ.

ಹಾಗೆಯೇ 'ಪುರುಷೇ ಏವೇದಂ ಸರ್ವಂ' ಎಂಬುದಾಗಿ ಪರಚ್ಛೇದವನ್ನು ಒಪ್ಪಿ ಕೊಂಡು ಇವೆಲ್ಲವೂ ಭಗವದಾಶ್ರಿತವಾಗಿದೆ –ಎಂದು ಭಗವಂತನ ಸರ್ವಾಧಾರತ್ವ ವನ್ನು ಇಲ್ಲಿ ಹೇಳಲಾಗಿದೆ.

ಅಥವಾ ಇಲ್ಲಿ 'ಪುರುಷಾತ್' ಎಂಬ ಪಂಚಮೀ ವಿಭಕ್ತಿಯೇ ವಿಪರಿಣಾಮ ಹೊಂದಿ ಪ್ರಥಮಾವಿಭಕ್ತ್ಯಂತವಾಗಿ ಇಲ್ಲಿ ಪಠಿಸಲಾಗಿದೆ ಎಂದಿಟ್ಟುಕೊಳ್ಳಬಹುದು. 'ಸಪ್ತಸು ಪ್ರಥಮಾ ತತ್ರ ಸ್ವಾತಂತ್ರ್ಯಂ ಯದ್ ವಿವಕ್ಷಿತಮ್' ಎಂದು ಶಬ್ದನಿರ್ಣಯ ಸಾರುತ್ತಿರುವಂತೆ ಸರ್ವ ಸೃಷ್ಟಿಯಲ್ಲಿ ಭಗವಂತನ ಸ್ವಾತಂತ್ರ್ಯವನ್ನು ಸೂಚಿಸುವುದಕ್ಕಾಗಿ ಯಷ್ಟೇ ಇಲ್ಲಿ ಪಂಚಮೀವಿಭಕ್ತಿಯ ಬದಲಾಗಿ ಪ್ರಥಮಾವಿಭಕ್ತಿಯನ್ನು ಪ್ರಯೋಗಿಸ ಲಾಗಿದೆ. ಆದ್ದರಿಂದ 'ಪುರುಷ ಏವೇದಂ ಸರ್ವಂ–ಪುರುಷಾದೇವ ಇದಂ ಸರ್ವಂ' –ಇವೆಲ್ಲವೂ ಪುರುಷನಿಂದಲೇ ಉಂಟಾಗಿರುವಂತಹದ್ದೆಂದು ಸರ್ವೋತ್ಪಾದಕತ್ವವನ್ನು ಹೇಳಲಾಗಿದೆ.

ಭಗವಂತನ ಪೂರ್ಣಾವತಾರಗಳನ್ನು 'ಸರ್ವ' ಶಬ್ದದಿಂದ ಪರಾಮರ್ಶಿಸಿ ಅವುಗಳಿಗೆ ಪುರುಷನಾಮಕ ಮೂಲರೂಪದಿಂದ ಅತ್ಯಂತಾಭೇದವನ್ನು ಹೇಳಲು ಹೊರಟ ಮಾತು ಇದು ಎಂದೂ ಹೇಳಬಹುದು.

ಅಂತೂ ಈ ಮಾತು ಭಗವಂತನ ಅಸಾಧಾರಣ ಗುಣವನ್ನು ಸ್ತುತಿಸಲು ಹೊರಟಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಶಾಸ್ತ್ರಸಿದ್ಧವಾದ ಅವನ ಗುಣ ಗಾನ ಇದರಿಂದ ನಡೆಯುವಂತೆ ಇದನ್ನು ವ್ಯಾಖ್ಯಾನಿಸಿಕೊಳ್ಳಬೇಕೇ ಹೊರತು ದೋಷದೂಷಿತರಾದ ಸರ್ವರ ಐಕ್ಯವನ್ನು ಹೇಳಿ ಆ ಪ್ರಯುಕ್ತ ಅವನು ಅತ್ಯಂತ ದುಷ್ಟ ಎಂದಾಗುವಂತೆ ವ್ಯಾಖ್ಯಾನಿಸಬಾರದು.

ಶ್ರೀಮದ್ವಾದಿರಾಜರು ಈ ರೀತಿಯಾಗಿ ಪುರುಷಸೂಕ್ತಾರ್ಥದ ವಿಮರ್ಶೆಯನ್ನು ನಡೆಸಿರುವರು. ನಾವು ಪ್ರತಿನಿತ್ಯ ಪಠಿಸುವಾಗ ಈ ಅರ್ಥಾನುಸಂಧಾನಪೂರ್ವಕವಾಗಿ ಪಠಿಸಬೇಕು.

●

೪. ೫. ವೇದಾದಿಗಳೂ ಅಪ್ರಮಾಣವಾದಾವು!

'ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಮ್' –ಎಂದಿರುವಂತೆ ಸಮಗ್ರ ಪಂಚರಾತ್ರವೂ ಶ್ರೀಮನ್ ನಾರಾಯಣನಿಂದಲೇ ಉಪದಿಷ್ಟವಾಗಿದ್ದು, ಶ್ರೀವಿಷ್ಣು ಸರ್ವೋತ್ತಮತ್ವವನ್ನು ಸಾಧಿಸುತ್ತಿರುವ ಪರಮಪ್ರಮಾಣ ಗ್ರಂಥ. ಪೂರ್ಣ ಗ್ರಂಥವನ್ನು ಕಾಣುವ ಭಾಗ್ಯ ನಮಗಿಲ್ಲ. ಅದರ ಹೆಚ್ಚಿನ ಭಾಗವೆಲ್ಲ ಈಗ ಅನುಪಲಬ್ಧವಾಗಿದ್ದು ಕೆಲವು ಭಾಗವಷ್ಟೇ ಉಳಿದುಕೊಂಡಿದೆ.

ಇಂತಹ ಪಂಚರಾತ್ರವನ್ನು ಅದ್ವೈತಿಗಳು ಅಪ್ರಮಾಣವೆನ್ನುವರು. 'ಉತ್ಪತ್ತ್ಯ ಸಂಭವಾತ್' ಎಂಬ ಬ್ರಹ್ಮಸೂತ್ರದ ಶಾಂಕರಭಾಷ್ಯದಲ್ಲಿ ಜೀವನಿಗೆ ಪರಮಾತ್ಮನಿಂದ ಉತ್ಪತ್ತಿಯನ್ನು ಹೇಳುವ ಪಂಚರಾತ್ರದ 'ವಾಸುದೇವಾತ್ ಸಂಕರ್ಷಣ ಉತ್ಪದ್ಯತೇ! ಸಂಕರ್ಷಣಾಚ್ಚ ಪ್ರದ್ಯುಮ್ನಃ ಪ್ರದ್ಯುಮ್ನಾಚ್ಚಾನಿರುದ್ಧ ಇತಿ' ಎಂಬ ಮಾತನ್ನು ಉಲ್ಲೇಖಿಸಿ, ನಿತ್ಯರಾದ ಜೀವರಿಗೆ ಉತ್ಪತ್ತಿಯನ್ನು ಹೇಳುತ್ತಿರುವುದರಿಂದ ಪಂಚ ರಾತ್ರವು ಅಪ್ರಮಾಣವೆಂದು ಸಿದ್ಧಾಂತಿಸಲಾಗಿದೆ. ಹಾಗೆಯೇ 'ವಿಪ್ರತಿಷೇಧಾಚ್ಚ' ಎಂಬ ಸೂತ್ರದ ಭಾಷ್ಯದಲ್ಲಿ ಪರಮಾತ್ಮನು ಗುಣಸ್ವರೂಪಿಯು, ಗುಣವುಳ್ಳವನೂ ಎಂದು ಹೇಳುವ ಪಂಚರಾತ್ರದ 'ಗುಣಗುಣಿತ್ವಾದಿಕಲ್ಪನಾದಿಲಕ್ಷಣ ಜ್ಞಾನೈಶ್ವರ್ಯ ಶಕ್ತಿ ಬಲವೀರ್ಯತೇಜಾಂಸಿ ಗುಣಾಃ, ಆತ್ಮಾನ ಏವೈತೇ ಭಗವಂತೋ ವಾಸುದೇವಾಃ' ಎಂಬ ಮಾತನ್ನು ಉಲ್ಲೇಖಿಸಿ, ಹೀಗೆ ಪರಸ್ಪರ ವಿರುದ್ಧವಾದುದನ್ನು ಹೇಳುವುದರಿಂದ ಪಂಚರಾತ್ರವು ಅಪ್ರಮಾಣವೆಂದು ನಿರ್ಣಯಿಸಲಾಗಿದೆ. ಆದರೆ ಈ ಯುಕ್ತಿಗಳಿಂದಾಗಿ ಪಂಚರಾತ್ರವನ್ನು ಅಪ್ರಮಾಣವೆನ್ನುವುದಾದರೆ ವೇದಗೀತೆಗಳೂ ಅಪ್ರಮಾಣ ವೆಂದಾದವು! ವೇದದಲ್ಲೂ ಜೀವಾತ್ಮರ ಜನ್ಮದ ಕುರಿತಾಗಿ ಸಾಕಷ್ಟು ಮಾತುಗಳಿವೆ. 'ಉತ್ಪದ್ಯಂತೇ ಚಿದಾತ್ಮಾನೋ ನಿತ್ಯಾನ್ನಿತ್ಯಾಃ ಪರಾತ್ಮನಃ' (ವ್ಯೋಮ ಸಂಹಿತಾ) ಹಾಗೆಯೇ ಭಗವದ್ಗೀತೆಯಲ್ಲೂ.... 'ಧ್ರುವಂ ಜನ್ಮ ಮೃತಸ್ಯ ಚ' ಮೊದಲಾದ ಕಡೆ ಜೀವನಿಗೆ ಜನ್ಮವನ್ನು ಹೇಳಲಾಗಿದೆ. ಇಷ್ಟು ಮಾತ್ರಕ್ಕೆ ವೇದ, ಗೀತೆಗಳೂ ಅಪ್ರಮಾಣಗಳೆನ್ನುವುದಿದೆಯೆ? ಅಥವಾ ಅಲ್ಲಿ ಹೇಳುವ ಉತ್ಪತ್ತಿ 'ಅಭೂತ್ವಾಭವನ' ರೂಪವಾದದ್ದಲ್ಲ, ಶರೀರ ಪ್ರಾಪ್ತಿ ರೂಪವಾದ ಉತ್ಪತ್ತಿ. ಇದರಿಂದಾಗಿ ಗೀತೆ, ವೇದಗಳು ಅಪ್ರಮಾಣವಲ್ಲವೆನ್ನುವುದಾದರೆ, ಪಂಚರಾತ್ರವನ್ನೂ ಅದೇ ರೀತಿಯಾಗಿ ಪ್ರಮಾಣವನ್ನೆಬಹುದು ತಾನೆ? ಹಾಗೆಯೇ ಪಂಚರಾತ್ರದಲ್ಲಿ ಇರುವಂತೆ ಮೇಲ್ನೋಟಕ್ಕೆ' ಪರಸ್ಪರ ವಿರುದ್ಧವಾಗಿ ಕಾಣುವ ಮಾತುಗಳು ವೇದ ಮತ್ತು ಗೀತೆಯಲ್ಲೂ ಇವೆ. ವೇದದಲ್ಲಿ ಕೆಲವೆಡೆ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂದು

ಬ್ರಹ್ಮನಿಗೆ 'ಗುಣಸ್ವರೂಪತ್ವವನ್ನು ಹೇಳಿದರೆ ಮತ್ತೆ ಕೆಲವೆಡೆ 'ಆನಂದಂ ಬ್ರಹ್ಮಣೋ ವಿದ್ವಾನ್' ಎಂದು ಬ್ರಹ್ಮನಿಗೆ ಆನಂದಾದ್ಯಾಶ್ರಯತ್ವವನ್ನು ಹೇಳಲಾಗಿದೆ. ಗೀತೆಯಲ್ಲೂ 'ನಿರ್ಗುಣಂ ಗುಣಭೋಕ್ತೃ ಚ' 'ಮತ್‌ಸ್ಥಾನಿ ಸರ್ವ ಭೂತಾನಿ.....' 'ನಚ ಮತ್‌ಸ್ಥಾನಿ ಭೂತಾನಿ....' ಇತ್ಯಾದಿ ಪರಸ್ಪರ ವಿರುದ್ಧ ಹೇಳಿಕೆಗಳು ಸಾಕಷ್ಟು ಇವೆ. ಇವುಗಳನ್ನು ಭೇದಪ್ರತಿನಿಧಿಯಾದ ವಿಶೇಷವನ್ನು ಒಪ್ಪುವುದರಿಂದಲೋ, ಬೇರೆ ಬೇರೆ ಅಭಿಪ್ರಾಯವನ್ನು ನಿರೂಪಿಸುವುದರಿಂದಲೋ ಸಮನ್ವಯಿಸಿಕೊಳ್ಳಬೇಕೆಂದರೆ, ಪಂಚರಾತ್ರದಲ್ಲೂ ಹಾಗೆ ಸಮನ್ವಯಿಸಿಕೊಳ್ಳಬಹುದು ತಾನೆ?

ಹಾಗೆಯೇ ಭಗವದ್ಗೀತೆಯು ಪಂಚರಾತ್ರದ ಸಂಕ್ಷೇಪರೂಪದಲ್ಲಿರುವಂತಹದ್ದೆಂದು ಬ್ರಹ್ಮವೈವರ್ತ ತಿಳಿಸಿದೆ. 'ಬ್ರಹ್ಮರುದ್ರೇಂದ್ರಸೂರ್ಯಾಣಾಂ ಯದ್ ದತ್ತಂ ವಿಷ್ಣುನಾ ಪುರಾ! ಪಂಚರಾತ್ರಾತ್ಮಕಂ ಜ್ಞಾನಂ ವ್ಯಾಸೋಽಧಾತ್ ಪಾಂಡವೇಷು ತತ್! ತೇಷಾಮೇವ ಚ ವಾರ್ಷ್ಣೇಯಃ ಸೇನಾಮಧ್ಯೇಽರ್ಜುನಾಯ ಚ! ಪ್ರಾದಾತ್ ಗೀತೇತಿ ನಿರ್ದಿಷ್ಟಂ ಸಂಕ್ಷೇಪೇಣಾಯುಯುತ್ಸವೇ'. ಆದ್ದರಿಂದ ಪಂಚರಾತ್ರವು ಅಪ್ರಮಾಣವೆಂದಲ್ಲಿ, ಅದರ ಸಂಕ್ಷೇಪರೂಪವಾದ ಗೀತೆಯಾದರೂ ಹೇಗೆ ತಾನೇ ಪ್ರಮಾಣವೆನಿಸೀತು? ಹಾಗೆಯೇ 'ವೇದಾರ್ಥಪೂರ್ವಕಂ ಜ್ಞೇಯಂ ಪಂಚರಾತ್ರಂ ಯತೋಽಖಿಲಮ್' –ಎಂದು ಬ್ರಹ್ಮ ವೈವರ್ತ ಸಾರುತ್ತಿರುವಂತೆ ಸಮಸ್ತ ಪಂಚರಾತ್ರವೂ ವೇದಾರ್ಥಪೂರ್ವಕವಾಗಿದ್ದು, ಅಂತಹ ಪಂಚರಾತ್ರ ಅಪ್ರಮಾಣವೆಂದಲ್ಲಿ ವೇದವೂ ಅಪ್ರಮಾಣವೆನಿಸೀತು! ಆದ್ದರಿಂದ ಗೀತೆ ಹಾಗೂ ವೇದಗಳಿಗೆ ಪ್ರಾಮಾಣ್ಯವನ್ನು ಒಪ್ಪುವಂತೆ ಪಂಚರಾತ್ರಕ್ಕೂ ಪ್ರಾಮಾಣ್ಯವನ್ನು ಒಪ್ಪಲೇ ಬೇಕು.

●

೪. ೬. ಶ್ರೀಕೃಷ್ಣ ಮತ್ತು ಬ್ರಹ್ಮಸೂತ್ರ

ದ್ವಾಪರ ಯುಗದಲ್ಲಿ ಒಮ್ಮೆ ಭೀಕರ ಬರಗಾಲ ಬಂತು. ಆಗ ಗೌತಮರ ಆಶ್ರಮದಲ್ಲಿ ಮಾತ್ರ ಅವರ ತಪಃಪ್ರಭಾವದಿಂದ ಸುಸಮೃದ್ಧಿಯು ಇತ್ತು. ಎಲ್ಲ ಸಜ್ಜನರ ಸ್ತೋಮವು ತಮ್ಮ ಊರನ್ನು ಬಿಟ್ಟು ಗೌತಮಾಶ್ರಮವನ್ನಾಶ್ರಯಿಸಿ ಸುಖವಾಗಿ ಬಹುಕಾಲ ಬದುಕಿತು. ಕೆಲವು ಸಮಯದ ಅನಂತರ ಎಲ್ಲಾ ಕಡೆಗಳಲ್ಲಿಯೂ ಸುಭಿಕ್ಷೆಯಾಗಲು ಆರಂಭವಾಯಿತು. ಎಲ್ಲರಿಗೂ ತಮ್ಮ ತಮ್ಮ ಊರುಗಳಿಗೆ ಹೋಗಬೇಕೆಂದು ಅಪೇಕ್ಷೆಯಾಯಿತು. ಗೌತಮರು ಅನುಜ್ಞೆಯನ್ನು ಕೊಡಲಿಲ್ಲ. ಆಗ ಬ್ರಾಹ್ಮಣವರ್ಗವು 'ವಿನಾಶಕಾಲೇ ವಿಪರೀತಬುದ್ಧಿಃ' ಎಂಬಂತೆ ಒಂದು ಮಾಯಾಗೋವನ್ನು ನಿರ್ಮಿಸಿ ಗೌತಮರ ಹತ್ತಿರ ಹೋಗುವಂತೆ ಮಾಡಿತು. ಗೌತಮರು ಅದನ್ನು ಮುಟ್ಟಿದರು. ಅವರು ಮುಟ್ಟಿದ ಕ್ಷಣದಲ್ಲಿ ಅದು ಸತ್ತು ಬಿದ್ದಿತು. ಬ್ರಾಹ್ಮಣವರ್ಗವು ಗೌತಮರು ಗೋಹತ್ಯೆಯನ್ನು ಮಾಡಿದರು ಎಂದು ಅಪವಾದವನ್ನು ಹೇಳಿ ಅವರನ್ನು ಪರಿತ್ಯಾಗಮಾಡಿ ತಮ್ಮ ದೇಶಕ್ಕೆ ತೆರಳಿತು. ಗೌತಮರು ಗೋಹತ್ಯೆಯಿಂದ ತಪ್ತರಾಗಿ ರುದ್ರದೇವರ ಕುರಿತು ತಪಸ್ಸು ಮಾಡಿದರು.

ರುದ್ರದೇವರು ಪ್ರತ್ಯಕ್ಷರಾದರು. ತಾನು ಕೊಂದ ಗೋವು ಬದುಕಲಿ ಎಂದು ರುದ್ರ ದೇವರಲ್ಲಿ ಕೇಳಿದರು. ರುದ್ರದೇವರು ತನ್ನ ಜಟೆಯಲ್ಲಿದ್ದ ಗಂಗೆಯನ್ನು ಗೌತಮರಿಗೆ ಕೊಟ್ಟರು. ಗೌತಮರು ಆ ಗಂಗೆಯನ್ನು ತಂದು ಆ ಗೋವಿಗೆ ಪ್ರೋಕ್ಷಿಸಿದರು. ಗೋವು ಬದುಕಿತು. ಬಹಳ ಸಂತೋಷಪಟ್ಟರು. ಗೋವಿಗೆ ಪ್ರೋಕ್ಷಣೆಮಾಡಿದ ಗಂಗೆಯು ದೊಡ್ಡ ನದಿಯಾಗಿ ಪ್ರವಹಿಸಿತು. ಆ ನದಿಯು ಗೋದಾವರಿ ಎಂದು ಪ್ರಸಿದ್ಧವಾಯಿತು. ಗೌತಮರಿಗೆ ಗೋವನ್ನು ಕೊಟ್ಟದ್ದರಿಂದ ಗೋದಾ ಎಂದು ಆ ವಾರಿಗೆ ಹೆಸರನ್ನು ಗೌತಮರು ಕೊಟ್ಟರು. ಗೋದವಾರಿ ಗೋದಾವರೀ ಎಂದು ಆಯಿತು. ಅನಂತರ ಈ ಗೋವು ಯಾರದ್ದು ಎಂದು ದಿವ್ಯದೃಷ್ಟಿಯಿಂದ ತಿಳಿದರು. ಇದು ಬ್ರಾಹ್ಮಣರ ಕುತಂತ್ರವೆಂದು ತಿಳಿದು ಬ್ರಾಹ್ಮಣವರ್ಗಕ್ಕೆ ಇದ್ದ ಎಲ್ಲಾ ಜ್ಞಾನ ನಾಶವಾಗಲಿ ಅಜ್ಞಾನಾಂಧಕಾರವು ವ್ಯಾಪಿಸಲಿ ಎಂದು ಶಪಿಸಿದರು. ಬ್ರಾಹ್ಮಣ ರೆಲ್ಲರೂ ವಿದ್ಯಾವಿಹೀನರಾದರು. ಲೋಕದಲ್ಲಿ ಜ್ಞಾನೋಪದೇಶಕರು ಇಲ್ಲದಂತಾಗಿ ಸಜ್ಜನರೆಲ್ಲರೂ ಜ್ಞಾನವಿಹೀನರಾಗಿ ಧರ್ಮಮಾರ್ಗಭ್ರಷ್ಟರಾದರು. ಆಗ ದೇವತೆಗಳು ಸಜ್ಜನರಲ್ಲಿ ಕರುಣೆಯಿಂದ ಶ್ರೀಹರಿಯನ್ನು ಭೂಮಿಯಲ್ಲಿ ಅವತರಿಸಿ ಸಜ್ಜನೋದ್ಧಾರ ಮಾಡಬೇಕೆಂದು ಪ್ರಾರ್ಥಿಸಿದರು. ಶ್ರೀಹರಿಯು ಬಾದರಾಯಣರೂಪದಿಂದ ಪ್ರಾದು ರ್ಭಾವ ಹೊಂದಿ ವೇದವಿಭಾಗ ಮಾಡಿ ವೇದಾರ್ಥ ನಿರ್ಣಾಯಕ ಬ್ರಹ್ಮಸೂತ್ರವನ್ನು ರಚಿಸಿದರು. ಆ ಬ್ರಹ್ಮಸೂತ್ರ ದಿಂದ ಸಕಲ ಸಜ್ಜನರ ಅಜ್ಞಾನಾಂಧಕಾರ ದೂರ ವಾಯಿತು. ಈ ಬ್ರಹ್ಮಸೂತ್ರಗಳು ಒಟ್ಟು ೫೬೪ ಮಾತ್ರ. 'ಅನಂತಾ ವೈ ವೇದಾಃ' ವೇದಗಳು ಅನಂತಗಳು. ಅನಂತ ವೇದಗಳಲ್ಲಿ ಅನಂತಶಬ್ದಗಳು ಇವೆ. ಆ ಎಲ್ಲ ಶಬ್ದಗಳಿಗೂ ಭಗವಂತನಲ್ಲಿ ಸಮನ್ವಯ ಸಮರ್ಥನವೂ ಅನಂತವೇದಾರ್ಥ ನಿರ್ಣಯವೂ ಈ ಸಣ್ಣ ಬ್ರಹ್ಮಸೂತ್ರದಲ್ಲಿ ಇದೆ. ಈ ಬ್ರಹ್ಮಸೂತ್ರವೇ ಉಪ ನಿಷತ್ತಿನಲ್ಲಿ ಪರವಿದ್ಯೆ ಎಂಬ ಶಬ್ದದಿಂದ ಕರೆಯಲ್ಪಡುತ್ತದೆ. ಇಂತಹ ಅದ್ಭುತವಾದ ಚತುರಧ್ಯಾಯಾತ್ಮಕ ಬ್ರಹ್ಮಸೂತ್ರದ ಪ್ರಾದುರ್ಭಾವವಾದದ್ದು ಹಿಂದೆ ದೇವಕೀ ವಸುದೇವ ದಂಪತಿಗಳ ಎದುರಿನಲ್ಲಿ ಸೆರೆಮನೆಯಲ್ಲಿ ಸರ್ವಜಗದಾಧಾರನಾದ ಸರ್ವವ್ಯಾಪಕ ಪರದೇವತೆಯಾದ ಶ್ರೀವಿಷ್ಣುವು ಅದ್ಭುತ ಚತುರ್ಭುಜ ಬಾಲರೂಪ ದಿಂದ ಪ್ರಾದುರ್ಭವಿಸಿದಂತೆಯೇ ಎಂದು ಜ್ಞಾನಿಗಳ ದೃಷ್ಟಿಯಲ್ಲಿ.

'ಸರ್ವತಃ ಪಾಣಿಪಾದಂ ತತ್ ಸರ್ವತೋಕ್ಷಿಶಿರೋಮುಖಂ' –ಈ ಗೀತೆಯಲ್ಲಿ ಹೇಳಿದಂತೆ ಶ್ರೀಕೃಷ್ಣನ ಪಾಣಿಯು ಎಲ್ಲವನ್ನೂ ನೋಡುತ್ತದೆ. ಎಲ್ಲವನ್ನೂ ಕೇಳುತ್ತದೆ, ಮಾತನಾಡುತ್ತದೆ. ಇದರಂತೆ ಅವನ ಪಾದವೂ ಕೂಡ. ಅವನ ಎಲ್ಲ ಅವಯವಗಳಲ್ಲಿ ಇತರ ಅವಯವಗಳ ಶಕ್ತಿಯು ಇದೆ. ಇದೇ ರೀತಿಯಲ್ಲಿ ಬ್ರಹ್ಮಸೂತ್ರದ ಪ್ರಥಮಾ ಧ್ಯಾಯವು ಸಮನ್ವಯಾಧ್ಯಾಯ ಸ್ವರೂಪಮಾತ್ರವಲ್ಲ; ಅವಿರೋಧಾಧ್ಯಾಯ ಸಾಧನಾ ಧ್ಯಾಯ ಫಲಾಧ್ಯಾಯ ರೂಪವೂ ಆಗಿದೆ. ಕೊನೆಯದಾದ ಫಲಾಧ್ಯಾಯವು ಸಮನ್ವಯಾಧ್ಯಾಯ ಅವಿರೋಧಾಧ್ಯಾಯ ಸಾಧನಾಧ್ಯಾಯರೂಪವೂ ಆಗಿದೆ. ಈ ರೀತಿ ಎಲ್ಲ ಅಧ್ಯಾಯಗಳು ಇತರ ಎಲ್ಲ ಅಧ್ಯಾಯ ಸ್ವರೂಪಗಳು. ಎಲ್ಲ ಪಾದಗಳೂ ಇತರ ಎಲ್ಲಾ ಪಾದಗಳ ಸ್ವರೂಪಗಳು ಆಗಿವೆ. ಜ್ಞಾನಿಗಳ ದೃಷ್ಟಿಯಲ್ಲಿ.

ಶ್ರೀಕೃಷ್ಣನು ಅರ್ಜುನನಿಗೆ ದಿವ್ಯಚಕ್ಷುಸ್ಸನ್ನು ಅನುಗ್ರಹಿಸಿದನು. ಈ ಚಕ್ಷುಸ್ಸಿನಿಂದ ಅರ್ಜುನನು–

ತತ್ರೈಕಸ್ಥಂ ಜಗತ್ಕೃತ್ಸ್ನಂ ಪ್ರವಿಭಕ್ತಮನೇಕಧಾ ।
ಅಪಶ್ಯದ್ದೇವದೇವಸ್ಯ ಶರೀರೇ ಪಾಂಡವಸ್ತದಾ ॥

ಎಂದು ಹೇಳಿದಂತೆ ಶ್ರೀಕೃಷ್ಣನ ಶರೀರದಲ್ಲಿ ಚರಾಚರಾತ್ಮಕ ಸರ್ವಜಗತ್ತನ್ನು ನೋಡಿದನು. ಇದರಂತೆ ಶ್ರೀಮದಾಚಾರ್ಯರು ಶ್ರೀ ಜಯ ತೀರ್ಥರಿಗೆ ಅನುವ್ಯಾಖ್ಯಾನ ಭಾಷ್ಯಗಳೆಂಬ ಎರಡು ದಿವ್ಯಚಕ್ಷುಸ್ಸುಗಳನ್ನು ಕೊಟ್ಟು ಅನುಗ್ರಹಿಸಿದರು. 'ಗ್ರಂಥೋಽಯಮಪಿ ಬಹ್ವರ್ಥಃ ಭಾಷ್ಯಂ ಚಾತ್ಯರ್ಥವಿಸ್ತರಂ' ಎಂದು ಹೇಳಿದಂತೆ ಬ್ರಹ್ಮಸೂತ್ರಗಳಿಗೆ ಇರುವ ಅನಂತ ವೇದಾರ್ಥನಿರ್ಣಾಯಕತ್ವವನ್ನು ಈ ದಿವ್ಯಚಕ್ಷುಸ್ಸುಗಳು ತೋರಿಸಿಕೊಡುವಂತವುಗಳು. ಈ ಎರಡು ಚಕ್ಷುಸ್ಸುಗಳಿಂದ ಬ್ರಹ್ಮಸೂತ್ರಗಳಿಗಿರುವ ಅನಂತ ವೇದಾರ್ಥಗಳ ನಿರ್ಣಾಯಕತ್ವವನ್ನು ನೋಡಿದರು. ತಾವು ನೋಡಿದ್ದನ್ನು ಎಲ್ಲ ಶ್ರೀಮನ್ನ್ಯಾಯಸುಧಾದಲ್ಲಿ ಬರೆದಿದ್ದಾರೆ ಶ್ರೀ ಜಯತೀರ್ಥರು. ಈ ವಿಷಯವು ಜ್ಞಾನಿಗಳಾದ ಶ್ರೀ ರಾಘವೇಂದ್ರ ಸ್ವಾಮಿಗಳಿಗೆ ತಿಳಿದಿದೆ. ಅವರು ಶ್ರೀಮನ್ನ್ಯಾಯಸುಧಾ ಟಿಪ್ಪಣಿ ಪರಿಮಳವನ್ನು ಬರೆಯುತ್ತಾ ಹೇಳುತ್ತಾರೆ–

ಪ್ರತ್ಯಕ್ಷರಂ ಪ್ರತಿಪದಂ ಅನೇಕಾಕೂತಗರ್ಭಿತಾ ।
ಪ್ರತಿಭಾತಿ ಸುಧಾಽಥಾಪಿ ಗ್ರಂಥಾಲ್ಪತ್ವಾಯ ನೋಚ್ಯತೇ ॥

ಸುಧಾದ ಪ್ರತ್ಯಕ್ಷರ ಪ್ರತಿಪದಗಳು ಅನೇಕಾಭಿಪ್ರಾಯಗಳನ್ನೊಳಗೊಂಡಿವೆ. ಇದನ್ನೆಲ್ಲ ನಾವು ಬರೆದರೆ ನಮ್ಮ ಗ್ರಂಥವು ಬಹು ದೊಡ್ಡದಾದೀತು. ಆ ಭಯದಿಂದ ಸುಧಾದ ಎಲ್ಲ ಅರ್ಥವನ್ನು ನಾವು ಬರೆಯುವುದಿಲ್ಲವೆಂದು ಬರೆದಿದ್ದಾರೆ.

ಬಾಲಶ್ರೀಕೃಷ್ಣನು ಮಣ್ಣು ತಿಂದರೂ ನಾನು ಮಣ್ಣು ತಿಂದಿಲ್ಲವೆಂದು ಯಶೋದೆಯ ಹತ್ತಿರ ಹೇಳಿದ್ದಾನೆ. ಶ್ರೀಕೃಷ್ಣನು ಮಿಥ್ಯಾವಾದಿಯು ಎಂದು ಅಜ್ಞಾನಿಗಳ ದೃಷ್ಟಿಯಲ್ಲಿ. ಇದೇ ರೀತಿಯಲ್ಲಿ ಬ್ರಹ್ಮಸೂತ್ರವು ಮಿಥ್ಯಾಭೂತ ಸಗುಣಬ್ರಹ್ಮನನ್ನು ಮಿಥ್ಯಾಭೂತ ಜೀವೇಶ್ವರಭೇದವನ್ನು ಹೇಳುತ್ತದೆ ಎಂಬುದು ಕೇವಲ ಅಜ್ಞಾನಿಗಳ ದೃಷ್ಟಿಯಲ್ಲಿ. ವಸ್ತುತಸ್ತು ಜ್ಞಾನಿಗಳ ದೃಷ್ಟಿಯಲ್ಲಿ ಶ್ರೀಕೃಷ್ಣನು ಸುಳ್ಳು ಹೇಳಲಿಲ್ಲ. ಅಖಿಲ ಭೂಮಂಡಲಾಧಿಪತಿಯು ಭೂಮಿಯಲ್ಲಿದ್ದ ಯಾವುದೇ ವಸ್ತುವನ್ನು ಯಾರಿಗೂ ಗೊತ್ತಿಲ್ಲದೆ ತೆಗೆದರೂ ಅವನನ್ನು ಕಳ್ಳನೆಂದು ಹೇಗೆ ಹೇಳಲಾಗದೋ ಹಾಗೆಯೇ ಇಡೀ ಪೃಥಿವಿಯು ಯಾವ ಕೃಷ್ಣನ ಉದರದಲ್ಲಿ ಸದಾ ಇದೆಯೋ ಅವನಿಗೆ ಮಣ್ಣು ತಿನ್ನುವ ಆಶೆಯು ಎಲ್ಲಿದೆ? ಆದುದರಿಂದ ಎಲ್ಲ ಬಾಲಕರಂತೆ ಮಣ್ಣು ತಿನ್ನುವ ಆಶೆಯಿಂದ ಮಣ್ಣು ತಿನ್ನಲೇ ಇಲ್ಲ. ಆದುದರಿಂದ ಶ್ರೀಕೃಷ್ಣನು ಸುಳ್ಳು ಹೇಳಿದ್ದೆಂಬುದು ಕೇವಲ ಅಜ್ಞಾನಿಗಳ ದೃಷ್ಟಿಯಲ್ಲಿ. ಹಾಗೆಯೇ ಬ್ರಹ್ಮಸೂತ್ರಗಳು ಉಪನಿಷತ್ತಿನಲ್ಲಿ ಪರವಿದ್ಯೆ ಎಂದು ಹೇಳಲ್ಪಟ್ಟಿವೆ. ನಿರವಧಿಕವಾದ ಆಪ್ತಿಯು ಅನಂತ ಶ್ರುತಿಗಳು ಅನಂತ ಯುಕ್ತಿಗಳು ಮೂಲವಾಗಿ ಉಳ್ಳ ಬ್ರಹ್ಮಸೂತ್ರವು ಸರ್ವೋತ್ತಮ ಪ್ರಮಾಣವು. ಅದು ಹೇಳಿದ್ದು ಎಲ್ಲವೂ ಜ್ಞಾನಿಗಳ

ದೃಷ್ಟಿಯಿಂದ ಪಾರಮಾರ್ಥಿಕ ಸತ್ಯವು. ಆದುದರಿಂದ ಬ್ರಹ್ಮಸೂತ್ರದಲ್ಲಿ ಹೇಳಿದ ಗುಣಪೂರ್ಣ ಬ್ರಹ್ಮನಾಗಲೀ ಜೀವೇಶ್ವರಭೇದವಾಗಲೀ ಸುಳ್ಳಲ್ಲ.

ಶ್ರೀಕೃಷ್ಣನು ಸಚ್ಚಿದಾನಂದವಿಗ್ರಹವುಳ್ಳವನಾದರೂ ಮನುಷ್ಯರ ಶರೀರದಂತೆ ತನ್ನ ಶರೀರವನ್ನು ತೋರಿಸಿಕೊಳ್ಳುತ್ತಾನೆ. ಅವನು ನಿಖಿಲಗುಣಪೂರ್ಣನು, ಸರ್ವದೋಷ ರಹಿತನು, ಸಾಕ್ಷಾತ್ ಮನ್ಮಥನು, ಮಹಾಲಕ್ಷ್ಮೀದೇವೀಪತಿಯು ಎಂಬುದು ಜ್ಞಾನಿಗಳಿಗೆ ಮಾತ್ರ ಗೊತ್ತು. ಇದರಂತೆ ಬ್ರಹ್ಮಸೂತ್ರವೂ ಕೂಡ. ಕಬ್ಬಿನ ಕೋಲನ್ನು ಹೊರಗಿನ ಭಾಗ ಮಾತ್ರ ನೆಕ್ಕಿದವನು ಇದು ನೀರಸವೆಂದು ಹೇಳಿದರೆ ಅದರ ಒಳಗೆ ಏನಿದೆಯೆಂದು ವಿಮರ್ಶೆಮಾಡಿದವನು ಅಮೃತರಸವು ಅದರಲ್ಲಿದೆಯೆಂದು ಹೇಳುತ್ತಾನೆ. ಅದರಂತೆ ಬ್ರಹ್ಮಸೂತ್ರವನ್ನು ಆಪಾತದೃಷ್ಟಿಯಿಂದಲೇ ಭಾಷ್ಯಕಾರರೆಲ್ಲ ನೋಡಿದರು. ಅವರಿಗೆ ಬ್ರಹ್ಮಸೂತ್ರದ ಅಂತರಾರ್ಥ ತಿಳಿದಿಲ್ಲ. ಶ್ರೀ ಮಧ್ವಾ ಚಾರ್ಯರು ಮಾತ್ರ ಬ್ರಹ್ಮಸೂತ್ರಕಾರರಾದ ಶ್ರೀ ಬಾದರಾಯಣರಲ್ಲಿ ಬ್ರಹ್ಮಸೂತ್ರದ ಅಂತರಾರ್ಥವನ್ನು ಕೇಳಿದ್ದಾರೆ. ಜಗದ್ಗುರುಗಳಾದ ಬಾದರಾಯಣರು ತನಗೆ ಸಾಕ್ಷಾತ್ ಗುರುಗಳೆಂದು ಶ್ರೀ ಮಧ್ವಾಚಾರ್ಯರು ತಮ್ಮ ಗ್ರಂಥದಲ್ಲಿ ಹೇಳಿದ್ದಾರೆ. ಶ್ರೀ ಮಧ್ವಾಚಾರ್ಯರು ಮುಖ್ಯಪ್ರಾಣದೇವರ ತೃತೀಯಾವತಾರಭೂತರು. ಅಂತಹ ಮಹಾಜ್ಞಾನಿಗಳಿಗೆ ಮಾತ್ರ ಬ್ರಹ್ಮಸೂತ್ರದ ಪರಮ ಗುಹ್ಯವಾದ ಅಂತರಾರ್ಥವು ಗೊತ್ತಾಗಲು ಸಾಧ್ಯ. ಆದುದರಿಂದ ಅವರೊಬ್ಬರೇ ಬ್ರಹ್ಮಸೂತ್ರವು ಶ್ರೀವಿಷ್ಣುವಿನ ಗುಣಪೂರ್ಣತ್ವ, ನಿರ್ದೋಷತ್ವ, ಜ್ಞಾನಾನಂದಾತ್ಮಕ ಪರಮಸುಂದರವಿಗ್ರಹ, ಲಕ್ಷ್ಮೀ ಪತಿತ್ವ ಮುಂತಾದ ಅಮೃತದಂತಿರುವ ಶ್ರೇಷ್ಠವಾದ ಅರ್ಥವನ್ನು ಪ್ರತಿಪಾದಿಸುತ್ತದೆಂದು ಹೇಳಿದರು.

ಕಂಸನು ಪೂತನೆಗೆ ಹೇಳಿದ. ನೀನು ನಂದಗೋಕುಲದಲ್ಲಿರುವ ಕೃಷ್ಣನಿಗೆ ವಿಷವನ್ನು ಕುಡಿಸಿ ಕೊಲ್ಲು. ಅನಂತರ ನೀನೇ ನನ್ನ ರಾಜ್ಯದಲ್ಲಿ ರಾಜ್ಞಿಯಾಗಿ ಸುಖವಾಗಿರು ಎಂದು. ಪ್ರಕೃತಿಯೇ ಕರ್ತ್ರೀ ಈಶ್ವರನು ಬೇಡವೆಂದು ಸಾಂಖ್ಯಮತವು ಹೇಳುತ್ತದೆ. ಅದರಂತೆ ಶ್ರೀಕೃಷ್ಣನು ಬೇಡ ಪೂತನೆಯೇ ರಾಜ್ಞಿಯಾಗಿರಲಿ ಎಂದು ಹೇಳಿದ ಕಂಸನನ್ನು ಶ್ರೀಕೃಷ್ಣನು ಕೊಂದನು ಪೂತನೆಯನ್ನೂ ಕೊಂದನು. ಇದರಂತೆ ಬ್ರಹ್ಮಸೂತ್ರವು 'ಓಂ ರಚನಾನುಪಪತ್ತೇಶ್ಚ ನಾನುಮಾನಂ ಓಂ' ಎಂದು ನಿರೀಶ್ವರಸಾಂಖ್ಯಮತವನ್ನು ನಿರಾಸ ಮಾಡಿರುತ್ತದೆ. ಅಚೇತನವಾದ್ದರಿಂದ ಪ್ರಕೃತಿಯು ಕರ್ತೃ ಅಲ್ಲ. ಜಗದೀಶ್ವರನೇ ಸರ್ವಕರ್ತಾ ಎಂದು ಸಿದ್ಧಮಾಡಿರುತ್ತದೆ.

ನರಕಾಸುರನು ಹದಿನಾರು ಸಹಸ್ರ ಕನ್ಯೆಯರನ್ನು ತನ್ನ ರಾಜ್ಯದಲ್ಲಿ ತಂದಿಟ್ಟು ಕೊಂಡು ಆ ಕನ್ಯೆಯರ ಆರಾಧನೆ ಮಾಡುತ್ತಿದ್ದ. ಶಾಕ್ತಮತವು ಶಕ್ತಿಯೇ ಪರದೇವತೆಯೆಂದು ಹೇಳುತ್ತದೆ. ಆ ದೇವತೆಯ ಸಾನ್ನಿಧ್ಯವುಳ್ಳ ಕನ್ಯೆಯರನ್ನು ಆರಾಧಿಸುವುದೇ ಶಕ್ತಿಯ ಆರಾಧನೆಯೆಂದೂ ಹೇಳುತ್ತದೆ. ಈ ಶಾಕ್ತಮತವನ್ನನುಸರಿಸುತ್ತಿದ್ದ ನರಕಾಸುರನನ್ನು ಶ್ರೀಕೃಷ್ಣನು ಸಂಹರಿಸಿ ಆ ಕನ್ಯೆಯರೆಲ್ಲರನ್ನೂ ದ್ವಾರಕಾಕ್ಕೆ ಕಳುಹಿಸಿ ಅವರಿಂದ ತಾನು ವಿವಾಹಿತನಾದನು. ಶಕ್ತಿಯು ಪರದೇವತೆಯಲ್ಲ. ಶಕ್ತಿಗೂ ಪತಿಯಾದ ವಿಷ್ಣುವೇ ಪರದೇವತೆಯೆಂಬುದನ್ನು ಶ್ರೀಕೃಷ್ಣನು ತೋರಿಸಿದನು. ಇದರಂತೆ

ಬ್ರಹ್ಮಸೂತ್ರವು 'ಓಂ ಉತ್ಪತ್ತ್ಯಸಂಭವಾತ್ ಓಂ' ಎಂದು ಕೇವಲ ಸ್ತ್ರೀಯರಿಂದ ಅಪತ್ಯೋತ್ಪತ್ತಿಯು ಆಗಲು ಸಾಧ್ಯವಿಲ್ಲ. ಆದುದರಿಂದ ಶಕ್ತಿಯೇ ಜಗಜ್ಜನನೀ ಎಂಬುದು ಯುಕ್ತವಲ್ಲ. ಮಹಾಶಕ್ತಿ ಸ್ವರೂಪಳಾದ ಮಹಾಲಕ್ಷ್ಮೀದೇವಿಯ ಪತಿಯಾದ ನಾರಾಯಣನು ಜಗಜ್ಜನಕನೆಂದು ಸಿದ್ಧಮಾಡಿರುತ್ತದೆ.

ಜರಾಸಂಧನು ಶೈವಮತಸ್ವರೂಪನು 'ಶೈವಾಗಮಾಖಿಲವಿದತ್ರ ಚ ಸುಸ್ಥಿರೋಸೌ' ಜರಾಸಂಧನು ಶೈವಾಗಮಗಳೆಲ್ಲವನ್ನೂ ಮುಖಪಾಠ ಮಾಡಿದ್ದಾನೆ. ಅದರಲ್ಲಿ ಮಹಾದಾರ್ಢ್ಯವುಳ್ಳವನು 'ಶಿವಾಗಮೇಷು ಶಿಷ್ಯಕಾಃ ಸಸಾಲ್ವಪೌಂಡ್ರ ಚೇದಿಪಾಃ' ಶೈವರಾದ ಸಾಲ್ವ ಪೌಂಡ್ರಾದಿಗಳಿಗೆ ಜರಾಸಂಧನು ಆದಿಗುರುವೆಂದು ಶೈವಾಗಮವೇ ಹೇಳುತ್ತದೆ. ಶೈವಯಾಗಕ್ಕಾಗಿ ನರಪಶುಗಳನ್ನು ಸಂಗ್ರಹಿಸಿದ್ದಾನೆ. ಇಂಥವನನ್ನು ವೈಷ್ಣವಾಗ್ರೇಸರನಾದ ಶ್ರೀಭೀಮಸೇನನಿಂದ ಶ್ರೀಕೃಷ್ಣನು ಕೊಲ್ಲಿಸಿ ಶಿವನು ಸರ್ವೋತ್ತಮನಲ್ಲ ವಿಷ್ಣುವೇ ಸರ್ವೋತ್ತಮನು ಎಂಬ ತತ್ತ್ವವನ್ನು ಸಿದ್ಧಮಾಡಿದನು. ಅದರಂತೆ ಬ್ರಹ್ಮಸೂತ್ರವು 'ಓಂ ಪತ್ಯುರಸಾಮಂಜಸ್ಯಾತ್ ಓಂ' ಎಂದು ಪಶುಪತಿಯು ದೋಷಿಯಾದ್ದರಿಂದ ಅವನು ಜಗತ್ಕಾರಣನಲ್ಲ. ನಿರ್ದೋಷನಾದ ಗುಣಪೂರ್ಣನಾದ ನಾರಾಯಣನೇ ಜಗತ್ಕಾರಣನು ಎಂದು ಸಿದ್ಧಮಾಡಿರುತ್ತದೆ.

ಶ್ರೀಕೃಷ್ಣನು ಬಲರಾಮನಿಂದ ರುಕ್ಮಿಯನ್ನು ಸಂಹಾರ ಮಾಡಿದನು. ಈ ರುಕ್ಮಿಯು ಸತ್ ಸ್ಯಾತ್ ಅಸತ್ ಸ್ಯಾತ್ ಎಂದು ಹೇಳುವ ಜೈನಮತದವನಂತೆ ಇದ್ದನು. ತನ್ನ ತಂಗಿಯಾದ ರುಕ್ಮಿಣಿಯಲ್ಲಿ ಸ್ನೇಹವಿದ್ದ ಕಾರಣ ಅವನಿಗೆ ಕೃಷ್ಣನೂ ಕೃಷ್ಣಪ್ರಿಯರಾದ ಪಾಂಡವರೂ ಬೇಕು. ಅಸಜ್ಜನರಾದ ಜರಾಸಂಧಾದಿಗಳೂ ಬೇಕು. ಇಂತವನನ್ನು ಬಲರಾಮನಿಂದ ಶ್ರೀಕೃಷ್ಣನು ಸಂಹರಿಸಿ 'ಸತ್ ಸ್ಯಾತ್ ಅಸತ್ ಸ್ಯಾತ್' ಎಂಬ ಜೈನಮತ ಅಸಮಂಜಸವೆಂದು ತಿಳಿಸಿದನು. ಇದರಂತೆ ಬ್ರಹ್ಮಸೂತ್ರವು 'ಓಂ ನೈಕಸ್ಮಿನ್ನಸಂಭವಾತ್ ಓಂ' ಎಂದು ಒಂದು ವಸ್ತುವಿನಲ್ಲಿ ಸತ್ ಸ್ಯಾತ್ ಅಸತ್ ಸ್ಯಾತ್ ಇತ್ಯಾದಿ ಪರಸ್ಪರ ವಿರುದ್ಧ ಪ್ರಕಾರಗಳು ಇರುವುದು ಕೂಡಲಾರದು ಎಂದು ಹೇಳಿ ಜೈನಮತವನ್ನು ಖಂಡಿಸಿರುತ್ತದೆ.

ಕಾಲಯವನನು ಕೃಷ್ಣನೂ ಮತ್ತು ಯಾದವರೂ ಜಗತ್ತಿನಲ್ಲಿ ಇಲ್ಲದಂತೆ ಎಂದು ಮಾಡುವೆನೆಂದು (ಈ ರೀತಿ) ಕಾಲವನ್ನು ನಿರೀಕ್ಷಿಸುತ್ತಿದ್ದನು. ಅದುದರಿಂದ ಅವನಿಗೆ ಕಾಲಯವನ ಎಂದು ಹೆಸರು. ಆದುದರಿಂದ ಇವನು ಶೂನ್ಯವಾದಿಯಂತೆ ಇದ್ದನು. ಇವನನ್ನು ಶ್ರೀಕೃಷ್ಣನು ಸಂಹರಿಸಿ ಶೂನ್ಯವಾದವು ಅಪ್ರಾಮಾಣಿಕವೆಂದು ತಿಳಿಸಿದನು. ಇದರಂತೆ ಬ್ರಹ್ಮಸೂತ್ರವೂ ಕೂಡ 'ಓಂ ನಾಸತೋಽದೃಷ್ಟತ್ವಾತ್ ಓಂ' ಎಂದು ಶೂನ್ಯದಿಂದ ಜಗತ್‌ಸೃಷ್ಟಿಯಾಗಲು ಸಾಧ್ಯವಿಲ್ಲ. ಶೂನ್ಯ ಒಂದೇ ತತ್ತ್ವವೆಂಬುದು ಅಪ್ರಾಮಾಣಿಕವೆಂದು ನಿರ್ಣಯಿಸಿರುತ್ತದೆ.

ಶ್ರೀಕೃಷ್ಣನು ಪೌಂಡ್ರಕ ವಾಸುದೇವನನ್ನು ಸಂಹರಿಸಿದನು. ಅವನ ನಾನು ಭಗವಾನ್ ವಾಸುದೇವನು, ಜಗತ್ಪತಿಯು ಎಂದು ಅಭಿಮಾನವುಳ್ಳವನಾಗಿದ್ದನು. ಬಂಗಾರದಿಂದ ಗರುಡನನ್ನು ಚಕ್ರಶಂಖಗಳನ್ನು ಮಾಡಿಸಿ, ಗರುಡಾರೂಢನಾಗಿ

ಚಕ್ರಶಂಖಿಗಳನ್ನು ಧರಿಸಿ 'ಶ್ರೀವತ್ಸಾರ್ಥೇ ದಗ್ಧವಕ್ಷಸ್ಥಲಂ ಚ' ಶ್ರೀವತ್ಸ ಚಿಹ್ನೆಗಾಗಿ ತನ್ನ ಎದೆಯನ್ನು ಸುಟ್ಟುಕೊಂಡಿದ್ದನು. ಇವನನ್ನು ಶ್ರೀಕೃಷ್ಣನು ಸಂಹರಿಸಿದ್ದರಿಂದ ಅದ್ವೈತವಾದವು ಯುಕ್ತವಲ್ಲವೆಂದು ಶ್ರೀಕೃಷ್ಣನು ತೋರಿಸಿದನು. ಪೌಂಡ್ರಕನು ಜಗತ್ಪತಿತ್ವವಿಶಿಷ್ಟನಿಂದ ಐಕ್ಯವನ್ನು ತಿಳಿದಿದ್ದಾನೆ. ಅದ್ವೈತವಾದದಲ್ಲಿ ಹಾಗಿಲ್ಲ. ಅದ್ವೈತವಾದದಲ್ಲಿ ವಿಶಿಷ್ಟೈಕ್ಯವು ಇಲ್ಲ. ಶುದ್ಧ ಚೈತನ್ಯೈಕ್ಯವನ್ನು ಅದ್ವೈತವಾದಿಗಳು ಹೇಳುತ್ತಾರೆಂಬುದು ಯುಕ್ತವಲ್ಲ. 'ಪರಾಭಿಧ್ಯಾನಾತ್ತು ತಿರೋಹಿತಂ' ಎಂಬ ಬ್ರಹ್ಮಸೂತ್ರದ ಅದ್ವೈತಭಾಷ್ಯದಲ್ಲಿ ವಿಶಿಷ್ಟೈಕ್ಯವನ್ನು ಸಮರ್ಥಿಸಿದ್ದು ಕಾಣುತ್ತದೆ. ಹಾಗೆಯೇ ಗೀತೆಯ ಅದ್ವೈತಭಾಷ್ಯದಲ್ಲಿ ಚತುರ್ವಿಧ ಭಕ್ತರಲ್ಲಿ ಜ್ಞಾನಿಭಕ್ತನ ಸ್ವರೂಪವನ್ನು ಹೇಳುವಾಗ 'ಅಹಂ ಭಗವಾನ್ ವಾಸುದೇವಃ' ಎಂಬ ಜ್ಞಾನಿಯನ್ನೇ ಭಕ್ತನೆಂದು ಹೇಳಿರುತ್ತದೆ. ಭಕ್ತನೆಂದರೆ ಸೇವಕ ಎಂದು ಅರ್ಥ. ಸೇವ್ಯಸೇವಕಭಾವವು ವಿಶಿಷ್ಟ ಚೇತನರಿಗೆ ಇರುತ್ತದೆ. ಅಂತಹ ಭಕ್ತನು ಅದ್ವೈತ ಜ್ಞಾನವುಳ್ಳವನು ಎಂದು ಹೇಳಿದ್ದರಿಂದ ವಿಶಿಷ್ಟೈಕ್ಯವನ್ನು ಅದ್ವೈತವಾದವು ಹೇಳುತ್ತದೆಂದು ಸಿದ್ಧವಾಯಿತು. ಅದ್ವೈತಜ್ಞಾನಿತ್ವ ಭಕ್ತತ್ವಗಳು ಏಕಕಾಲೀನಗಳಲ್ಲವೆಂದು ಹೇಳಿದರೆ ಭಕ್ತರು ಚತುರ್ವಿಧರು ಎಂದು ಹೇಳಿದ್ದು ಕೂಡುವುದಿಲ್ಲ. ಜಿಜ್ಞಾಸುತ್ವಾವಸ್ಥೆಯಲ್ಲಿ ಮಾತ್ರ ಭಕ್ತನಾಗುತ್ತಾನೆ. ಜ್ಞಾನಾವಸ್ಥೆಯಲ್ಲಿ ಭಕ್ತನಲ್ಲವೆಂದು ಹೇಳಿದರೆ ಅವನು ಜಿಜ್ಞಾಸು ಭಕ್ತನಾದನು, ಜ್ಞಾನಿಭಕ್ತನೆಂಬ ನಾಲ್ಕನೇ ಪ್ರಕಾರಕ್ಕೆ ಅವಕಾಶವೇ ಇಲ್ಲ. ಆದುದರಿಂದ ಪ್ರಸಿದ್ಧ ಅದ್ವೈತವಾದವೇ ಪೌಂಡ್ರಕ ವಾಸುದೇವನ ಅದ್ವೈತವಾದವು ಆಗುತ್ತದೆ. ಬ್ರಹ್ಮಸೂತ್ರವೂ 'ಓಂ ನ ಭಾವೋನುಪಲಬ್ಧೇಃ ಓಂ' ಎಂದು ವಿಜ್ಞಾನಾದ್ವೈತ ವಾದವನ್ನು ಖಂಡಿಸಿರುತ್ತದೆ. ಇದರಿಂದ ಸಮಾನ ನ್ಯಾಯವುಳ್ಳ ಬ್ರಹ್ಮಾದ್ವೈತ ವಾದವನ್ನು ಖಂಡಿಸಿದಂತೆ ಆಯಿತು. ಶಂಕರಾಚಾರ್ಯರು ಕಾಶ್ಮೀರದಲ್ಲಿದ್ದ ಒಂದು ಪ್ರಸಿದ್ಧ ದೇವಾಲಯಕ್ಕಾಗಿ ಹೊರಟರು. ಆ ದೇವಾಲಯದ ಬ್ರಾಹ್ಮಣರು 'ವಿಜ್ಞಾನವಾದಸ್ಯ ಚ ಕಿಂ ವಿಭೇದಕಂ ಭವನ್ಮತಾತ್ ಬ್ರೂಹಿ ತತಃ ಪರಂ ವ್ರಜ' ವಿಜ್ಞಾನವಾದಿ ಬೌದ್ಧಮತಕ್ಕೂ ವಿಜ್ಞಾನಾತ್ಮಕ ಬ್ರಹ್ಮಾದ್ವೈತವಾದಕ್ಕೂ ಏನು ವ್ಯತ್ಯಾಸವೆಂಬುದನ್ನು ಹೇಳಿ ಅನಂತರ ದೇವಾಲಯವನ್ನು ಪ್ರವೇಶ ಮಾಡೆಂದು ಶಂಕರಾಚಾರ್ಯರನ್ನು ಕೇಳಿದರು. ಆಗ ಶಂಕರಾಚಾರ್ಯರು ವಿಜ್ಞಾನವಾದಿ ಬೌದ್ಧರು ವಿಜ್ಞಾನವನ್ನು ಕ್ಷಣಿಕವೆಂದು ಹೇಳುತ್ತಾರೆ. ನಾನು ವಿಜ್ಞಾನ ಸ್ವರೂಪ ಬ್ರಹ್ಮನನ್ನು ಸ್ಥಿರವೆಂದು ಹೇಳುತ್ತೇನೆ. ಈ ರೀತಿ ಬೌದ್ಧಮತಕ್ಕೂ ನನ್ನ ಮತಕ್ಕೂ ವ್ಯತ್ಯಾಸವಿದೆ ಯೆಂದು ಹೇಳಿ ದೇವಾಲಯವನ್ನು ಪ್ರವೇಶಮಾಡಿದರೆಂದು ಶಂಕರವಿಜಯದಲ್ಲಿ ಇತಿಹಾಸವು ಇದೆ. ವಸ್ತುತಃ ಶಂಕರಾಚಾರ್ಯರು ಹೇಳಿದ ವೈಲಕ್ಷಣ್ಯವು ಯುಕ್ತವಲ್ಲ. ಬ್ರಹ್ಮರೂಪ ವಿಜ್ಞಾನವು ಇವರ ಮತದಲ್ಲಿ ನಿಧರ್ಮಕವಾದ್ದರಿಂದ ಅದರಲ್ಲಿ ಸ್ಥಿರತ್ವವೆಂಬ ಧರ್ಮವೂ ಇಲ್ಲ. ವಿಜ್ಞಾನವಾದಿಯು ವಿಜ್ಞಾನವನ್ನು ನಿರ್ಧರ್ಮಕ ವೆಂದು ಹೇಳುವುದರಿಂದ ಅದರಲ್ಲಿ ಕ್ಷಣಿಕತ್ವವೂ ಇಲ್ಲ. ಆದುದರಿಂದ ಆ ಎರಡು ಮತಗಳಲ್ಲಿ ಪಾರಮಾರ್ಥಿಕ ವೈಲಕ್ಷಣ್ಯವು ಇಲ್ಲ. ಬ್ರಹ್ಮಾದ್ವೈತಿಗಳು ವೇದಪ್ರಮಾಣ ವೆಂದು ಹೇಳಿದರೂ ವೇದಪ್ರಾಮಾಣ್ಯ ಮಿಥ್ಯಾ ಎಂದು ಹೇಳುತ್ತಾರೆ. ಆದುದರಿಂದ

ವಿಜ್ಞಾನವಾದಿ ಬೌದ್ಧಮತದ ಖಂಡನೆಯ ನ್ಯಾಯದಿಂದ ಬ್ರಹ್ಮಾದ್ವೈತಮತದ ಖಂಡನೆಯೂ ಬ್ರಹ್ಮಸೂತ್ರದಲ್ಲಿ ಮಾಡಲ್ಪಟ್ಟಿದೆ.

ಹಂಸ ಡಿಭಿಕರು ಇಬ್ಬರು ಅಣ್ಣತಮ್ಮಂದಿರು. ಪ್ರಾಯಃ ಐಕಮತ್ಯದಿಂದ ವೈದಿಕ ಮತಕ್ಕೆ ಅಕ್ಷಪಾದಕಣಾದರಂತೆ ವಿರೋಧಿಗಳಾಗಿದ್ದರು. ಇವರನ್ನು ಶ್ರೀಕೃಷ್ಣನು ಸಂಹರಿಸಿ ನೈಯಾಯಿಕ ವೈಶೇಷಿಕಮತಗಳು ಅಪ್ರಾಮಾಣಿಕಗಳೆಂದು ತಿಳಿಸಿದ್ದಾನೆ. ಇದರಂತೆ ಬ್ರಹ್ಮಸೂತ್ರವು 'ಓಂ ಮಹದ್ದೀರ್ಘವದ್ವಾ ಹ್ರಸ್ವಪರಿಮಂಡಲಾಭ್ಯಾಂ ಓಂ' ಈ ಸೂತ್ರದಿಂದ ನೈಯಾಯಿಕರು ವೈಶೇಷಿಕರು ಅನುಪಪನ್ನ ಭಾಷಿಗಳೆಂದು ಸಮರ್ಥಿಸಿ ಅವರ ಮತದಿಂದ ವೈದಿಕಮತಕ್ಕೆ ಬಾಧವು ಇಲ್ಲವೆಂದು ಸಿದ್ಧಮಾಡಿರುತ್ತದೆ.

ದುರ್ಯೋಧನ ಪ್ರಭೃತಿಗಳು ಪರಮ ನಾಸ್ತಿಕರು. 'ನಾಸ್ತಿಕ್ಯನೀತಿಮತುಲಾಂ ಗುರುದೇವತಾದಿಸಸ್ತ್ವಂಜಸೈವ ಜಗೃಹುಃ ಧೃತರಾಷ್ಟ್ರಪುತ್ರಾಃ' ಇಂತವರನ್ನು ಪರಮಾಸ್ತಿಕನಾದ ಭೀಮಸೇನನಿಂದ ಶ್ರೀಕೃಷ್ಣನು ಕೊಲ್ಲಿಸಿದನು. ಅದರಂತೆ ಬ್ರಹ್ಮ ಸೂತ್ರವು 'ಓಂ ಅಭ್ಯುಪಗಮೇऽಪ್ಯರ್ಥಾಭಾವಾತ್ ಓಂ' ಎಂದು ಚಾರ್ವಾಕಮತ ವನ್ನು ಖಂಡಿಸಿರುತ್ತದೆ.

ಶ್ರೀಕೃಷ್ಣನು ಜರಾಸಂಧ ಕಾಲಯವನ ಪ್ರಭೃತಿಗಳು ಕೋಟಿಸೈನ್ಯದಿಂದ ತನ್ನ ಸೈನ್ಯಕ್ಕೆ ಬಾಧವು ಬರಬಾರದೆಂದು ತನ್ನ ಸೈನ್ಯವನ್ನು ಮಧುರೆಯಿಂದ ಹೊರಡಿಸಿ ಸಮುದ್ರ ಮಧ್ಯದ ದ್ವಾರಕಾರೂಪ ಸ್ಥಳಾಂತರವನ್ನು ಹೊಂದಿಸಿದನು. ಅದರಂತೆ ಬ್ರಹ್ಮಸೂತ್ರವು 'ಅನಾದಿರ್ವಾ ಅಯಮಾಕಾಶಃ' ಎಂಬ ಶ್ರುತಿಗೆ 'ಆತ್ಮನ ಆಕಾಶಃ ಸಂಭೂತಃ' ಎಂಬ ಶ್ರುತಿಯಿಂದ ಬಾಧಪರಿಹಾರವಾಗುವುದಕ್ಕಾಗಿ ಅವ್ಯಾಕೃತಾಕಾಶ ವೆಂಬ ವಿಷಯಾಂತರವನ್ನು ಕೊಟ್ಟಿದೆ.

ಸಕಲ ರಾಜ್ಯಸಂಪತ್ತನ್ನು ತ್ಯಾಗಮಾಡಿ ವನದಲ್ಲಿ ಹನ್ನೆರಡು ವರ್ಷ ವಾಸ ಮಾಡುತ್ತಾ ವೈರಾಗ್ಯದಿಂದ ಇದ್ದು ಮಾರ್ಕಂಡೇಯಾದಿ ಜ್ಞಾನಿಗಳಿಂದ ಹರಿಕಥಾಶ್ರವಣ ಮಾಡುತ್ತಾ ಪರಮಭಕ್ತರಾಗಿ ದೇವರನ್ನೇ ಉಪಾಸನೆ ಮಾಡುತ್ತಾ ಪಾಂಡವರು ಇದ್ದರು. ಅವರಿಗೆ ಶ್ರೀಕೃಷ್ಣನು ವಿಶ್ವರೂಪದ ದರ್ಶನವನ್ನು ಅನುಗ್ರಹಿಸಿದನು. ಅವರ ಶತ್ರುಗಳನ್ನು ನಾಶಮಾಡಿಸಿದನು. ಅರ್ಜುನನು ವಿಶ್ವರೂಪವನ್ನು ನೋಡುವಾಗ ಎಲ್ಲ ಪಾಂಡವರೂ ಆ ದರ್ಶನವನ್ನು ಪಡೆದಿದ್ದಾರೆ. ಇದರಿಂದ ಯೋಗ್ಯ ಜೀವರು ವಿರಕ್ತರಾಗಿ ಪರಮಭಕ್ತರಾಗಿ ಭಗವಂತನ ಧ್ಯಾನವನ್ನು ಮಾಡಿದರೆ ಅವರಿಗೆ ತನ್ನ ದರ್ಶನವನ್ನು ಕೊಟ್ಟು ಅವರಿಗೆ ಶತ್ರುವಾಗಿರುವ ಕಾಮಾದಿಗಳನ್ನೂ ಸಕಲಾನಿಷ್ಟಕರ್ಮ ಗಳನ್ನೂ ನಾಶಮಾಡುತ್ತೇನೆಂದು ತಿಳಿಸಿದನು. ಅದರಂತೆ ಬ್ರಹ್ಮಸೂತ್ರವು ತೃತೀಯಾ ಧ್ಯಾಯದಲ್ಲಿ ವೈರಾಗ್ಯ, ಭಕ್ತಿ, ಉಪಾಸನಾಪಾದಗಳಿಂದ ವೈರಾಗ್ಯಾದಿ ಸಾಧನಗಳನ್ನು ಹೇಳಿ ಜ್ಞಾನಪಾದದಿಂದ ಆ ಸಾಧನದಿಂದ ಪರಬ್ರಹ್ಮಸಾಕ್ಷಾತ್ಕಾರವನ್ನೂ ಕಾಮಾದಿಗಳ ಸಕಲ ಅನಿಷ್ಟಕರ್ಮಗಳ ನಾಶವನ್ನೂ ಹೇಳುತ್ತದೆ.

ಅನಂತರ ಭಗವಂತನ ಪರಮಭಕ್ತರಾದ ಪಾಂಡವರು ಶ್ರೀಕೃಷ್ಣನ ಪರಮಾನು ಗ್ರಹದಿಂದ ಬಹುಕಾಲ ಅಖಂಡಭೂಮಂಡಲಾಧಿಪತ್ಯರೂಪ ಸಾಮ್ರಾಜ್ಯವನ್ನು

ಅನುಭವಿಸಿದರು. ಇದರಂತೆ ಬ್ರಹ್ಮಸೂತ್ರವು ಎಲ್ಲ ಸಾಧನಗಳನ್ನು ಮಾಡಿ ಭಗವದನುಗ್ರಹವನ್ನು ಪೂರ್ಣವಾಗಿ ಸಂಪಾದಿಸಿದ ಸಜ್ಜೀವರಿಗೆ ಪುನರಾವೃತ್ತಿ ರಹಿತವಾದ ಮೋಕ್ಷ ಸಾಮ್ರಾಜ್ಯವನ್ನು ಹೇಳುತ್ತದೆ. 'ಓಂ ಅನಾವೃತ್ತಿಃ ಶಬ್ದಾತ್ ಅನಾವೃತ್ತಿಃ ಶಬ್ದಾತ್ ಓಂ' ಎಂದು.

೪. ೭. ಶ್ರೀಮದನುವ್ಯಾಖ್ಯಾನವು

ಓಂಕಾರದ ಉಚ್ಚಾರಣ ಪೂರ್ವಕವಾಗಿ ಬ್ರಹ್ಮಸೂತ್ರದ ಪಠನವನ್ನು ತಿಳಿಸಿ ಆ ಓಂಕಾರದ ಅರ್ಥವನ್ನು ಅದರ ಪ್ರಯೋಜನವನ್ನು ಶ್ರೀಮದನುವ್ಯಾಖ್ಯಾನವು ಹೇಳುತ್ತದೆ. ಭಗವದ್ಗೀತೆಯಲ್ಲಿ ಜ್ಞಾನಯಜ್ಞವು ದ್ರವ್ಯಯಜ್ಞಕ್ಕಿಂತ ಶ್ರೇಷ್ಠವೆಂದು, ಯಜ್ಞಾದಿಗಳನ್ನು ಮಾಡುವವರು ಮೊದಲು ಓಂಕಾರದ ಉಚ್ಚಾರಣೆಯನ್ನು ಅವಶ್ಯ ಮಾಡಬೇಕೆಂದೂ ಬ್ರಹ್ಮವಾದಿಗಳು ಯಾವಾಗಲೂ ಯಜ್ಞಾದಿಗಳನ್ನು ಮಾಡುವಾಗ ಆರಂಭದಲ್ಲಿ ಓಂಕಾರೋಚ್ಚಾರಣವನ್ನು ಮಾಡುತ್ತಾರೆಂತಲೂ,

ಶ್ರೇಯಾನ್ ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ ।
ತಸ್ಮಾದೋಮಿತ್ಯುದಾಹೃತ್ಯ ಯಜ್ಞದಾನತಪಃಕ್ರಿಯಾಃ ॥

'ಪ್ರವರ್ತಂತೇ ವಿಧಾನೋಕ್ತಾಃ ಸತತಂ ಬ್ರಹ್ಮವಾದಿನಾಂ'

ಎಂಬ ಶ್ಲೋಕಗಳಿಂದ ಹೇಳಲ್ಪಟ್ಟಿದೆ. ಬ್ರಹ್ಮಸೂತ್ರದ ಪಠನಾದಿಗಳ ಹೊರತು ಜ್ಞಾನಯಜ್ಞವೆಂಬುದು ಬೇರೆ ಯಾವುದು ಇದೆ? ಆದುದರಿಂದ ಬ್ರಹ್ಮಸೂತ್ರದ ಆದಿಯಲ್ಲಿ ಅವಶ್ಯವಾಗಿ ಓಂಕಾರೋಚ್ಚಾರಣವು ಬೇಕು ಎಂದು ಸಿದ್ಧ. ಹೀಗೆ ಇದ್ದರೂ ಇತರ ಭಾಷ್ಯಕಾರರು ಯಾರೂ ಬ್ರಹ್ಮಸೂತ್ರದ ಆದಿಯಲ್ಲಿ ಓಂಕಾರದ ಪಠನವನ್ನು ಅಂಗೀಕರಿಸಲಿಲ್ಲ ವೆಂಬುದು ಆಶ್ಚರ್ಯ. ಬಹುಶಃ ಅವರು ಯಾರೂ ಬ್ರಹ್ಮವಾದಿಗಳು ಅಲ್ಲ. ಆದುದರಿಂದ ಅವರು 'ಸತತಂ ಬ್ರಹ್ಮವಾದಿನಾಂ' ಎಂದು ಗೀತೆಯಲ್ಲಿ ಹೇಳಿದ ಬ್ರಹ್ಮವಾದಿಗಳ ಲಕ್ಷಣವಾದ ಓಂಕಾರ ಪಾಠವನ್ನು ಮಾಡುತ್ತಾ ಇಲ್ಲವೆಂದೇ ಸಂಭಾವನೆಯು. ಹಾಗೆಯೇ ಶ್ರೀಮದಾಚಾರ್ಯರು ಮಾತ್ರ ನಿಜವಾಗಿ ಬ್ರಹ್ಮವಾದಿಗಳಾದುದರಿಂದ ಅವರು ಬ್ರಹ್ಮವಾದಿಗಳ ಲಕ್ಷಣವಾದ ಓಂಕಾರ ಪಠನವನ್ನು ಸೂತ್ರಾರಂಭದಲ್ಲಿ ಮಾಡಿದ್ದಾರೆಂದು ತಿಳುವಳಿಕೆಯೂ ಬರುವುದು ಸಹಜ.

ಶ್ರೀಮದನುವ್ಯಾಖ್ಯಾನವು ಪ್ರಥಮ ಸೂತ್ರದ ಅತಃ ಶಬ್ದದ ಅರ್ಥವನ್ನು ಹೇಳುವ ಸಂದರ್ಭದಲ್ಲಿ ಭಗವತ್ಪ್ರಸಾದವು ಮೋಕ್ಷಕ್ಕೆ ಮುಖ್ಯ ಸಾಧನವೆಂದು ಹೇಳಿ ಅದರ ಸಮರ್ಥನವನ್ನು ಮಾಡಿದ್ದು ಕಾಣುತ್ತದೆ. ಭಗವದ್ಗೀತೆಯ ಕೊನೆಯಲ್ಲಿ 'ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್' ಎಂದು ಭಗವಂತನ ಪ್ರಸಾದದಿಂದ ಪರಮಶಾಂತಿ ಪ್ರಾಪ್ತಿ ಮತ್ತು ಶಾಶ್ವತ ಸ್ಥಾನಪ್ರಾಪ್ತಿಯ ಸ್ವರೂಪವಾದ ಮೋಕ್ಷವನ್ನು ಹೇಳುತ್ತದೆ. 'ನಾನ್ಯಃ ಪಂಥಾ ಅಯನಾಯ ವಿದ್ಯತೇ' ಎಂದು ಶ್ರುತಿಯು ಜ್ಞಾನ ಹೊರತು ಬೇರೆ ಸಾಧನವು ಮೋಕ್ಷಕ್ಕೆ ಇಲ್ಲವೆಂದು ಹೇಳುತ್ತದೆ. ಈ

ರೀತಿ ವಿಪ್ರತಿಪತ್ತಿಯು ಇದ್ದಕಾರಣ ಈ ವಿಪ್ರತಿಪತ್ತಿಯನ್ನು ನಿರಾಸಮಾಡಿ ಸಮರ್ಥನ ಮಾಡುವುದು ಅತ್ಯಾವಶ್ಯಕ. ಮೋಕ್ಷಸಾಧನವು ಸಾಧಕನಿಷ್ಠ ಭಗವನ್ನಿಷ್ಠ ಎಂದು ಎರಡು ಪ್ರಕಾರವುಳ್ಳದ್ದು. ಸಾಧಕನಲ್ಲಿರುವ ಸಾಧನಗಳ ಮಧ್ಯದಲ್ಲಿ ಜ್ಞಾನ ಹೊರತು ಬೇರೆ ಸಾಕ್ಷಾತ್ ಸಾಧನವು ಇಲ್ಲವೆಂದು 'ನಾನ್ಯಃ ಪಂಥಾಃ' ಎಂಬ ಶ್ರುತಿಯು ಹೇಳುತ್ತದೆ. ಪ್ರಸಾದರೂಪವಾದ ಸಾಧನವು ಭಗವನ್ನಿಷ್ಠವಾಗಿದೆ. ಸಾಧಕನಿಷ್ಠವಲ್ಲ. ಭಗವನ್ನಿಷ್ಠ ಆ ಪ್ರಸಾದಕ್ಕೆ ಸಾಧಕನು ವಿಷಯನಾಗುತ್ತಾನೆ. ಆದುದರಿಂದ ಭಗವತ್ಪ್ರಸಾದದಿಂದ ಮೋಕ್ಷವನ್ನು ಹೊಂದುತ್ತಾನೆಂದು ಎರಡು ಪ್ರಮಾಣಗಳ ಅವಿರೋಧವನ್ನು ಶ್ರೀಮದನುವ್ಯಾಖ್ಯಾನದಲ್ಲಿ ತೋರಿಸಲಾಗಿದೆ. ಇತರ ಭಾಷ್ಯಕಾರರು ಯಾರೂ ಈ ವಿಚಾರವನ್ನು ತಮ್ಮ ಭಾಷ್ಯದಲ್ಲಿ ಮಾಡಲಿಲ್ಲ. ಭಗವತ್ಪ್ರಸಾದವು ಮೋಕ್ಷಸಾಧನವೆಂದು ಹೇಳಲೇ ಇಲ್ಲ. ಮೋಕ್ಷಶಾಸ್ತ್ರದಲ್ಲಿ ಮೋಕ್ಷದ ಮುಖ್ಯ ಸಾಧನ ವಿಮರ್ಶವು ಆವಶ್ಯಕವಾದ ಕಾರಣ ಅದನ್ನು ಶ್ರೀಮದನುವ್ಯಾಖ್ಯಾನದಲ್ಲಿ ಮಾತ್ರ ಮಾಡಿದರು ಶ್ರೀಮದಾಚಾರ್ಯರು. ಇತರ ಭಾಷ್ಯಕಾರರು ಮೋಕ್ಷಶಾಸ್ತ್ರದಲ್ಲಿ ಅದರ ಪ್ರಸ್ತಾವವನ್ನೇ ಮಾಡಿಲ್ಲ. ಇದೊಂದು ಬಹಳ ಆಶ್ಚರ್ಯವಿಷಯವೆಂದು ನಮಗೆ ಅನಿಸುತ್ತದೆ. ಭಗವತ್ಪ್ರಸಾದವು ಮೋಕ್ಷಕ್ಕೆ ಸಾಧನವೆಂದು ಸಮರ್ಥಿಸುವುದು ಶುದ್ಧ ಪರಮ ಭಾಗವತರ ಲಕ್ಷಣ. ಶ್ರೀಮದಾಚಾರ್ಯರು ಶುದ್ಧ ಭಾಗವತಧರ್ಮನಿರತ ಶ್ರೀ ಭೀಮಸೇನ ಸ್ವರೂಪರು. ಆದುದರಿಂದ ಅವರು ಅದನ್ನು ಹೇಳಿದರು. ಇತರ ಭಾಷ್ಯಕಾರರು ಯಾರೂ ಭಾಗವತಧರ್ಮನಿರತರಲ್ಲವಾದುದರಿಂದ ಅವರು ಅದನ್ನು ಹೇಳಲಿಲ್ಲ ಎಂದು ತಿಳಿಯಬಹುದು.

ಶ್ರೀಮದನುವ್ಯಾಖ್ಯಾನದಲ್ಲಿ ಮೋಕ್ಷಯೋಗ್ಯತೆಯುಳ್ಳ ಸಾತ್ವಿಕ ಜೀವರಿಗೆ ಮಾತ್ರ ಮೋಕ್ಷವು ಲಭ್ಯವೆಂದು ಸಮರ್ಥಿಸಲಾಗಿದೆ. ಎಲ್ಲರಿಗೂ ಪರಬ್ರಹ್ಮಭಾವರೂಪವಾದ ಮೋಕ್ಷವು ಲಭ್ಯವೆಂದು ಹೇಳುವ ಶಂಕರಾಚಾರ್ಯರಾಗಲೀ ಎಲ್ಲರಿಗೂ ಪರಬ್ರಹ್ಮನ ಪರಮಸಾಮ್ಯರೂಪವಾದ ಮೋಕ್ಷವು ಲಭ್ಯವೆಂದು ಹೇಳುವ ರಾಮಾನುಜಾಚಾರ್ಯರಾಗಲೀ ಮೋಕ್ಷಯೋಗ್ಯತೆಯು ಮೋಕ್ಷಸಾಧನವೆಂದು ಹೇಳುವುದಿಲ್ಲ. ಶ್ರೀಮದಾಚಾರ್ಯರು ಶ್ರೀಮದನುವ್ಯಾಖ್ಯಾನದಲ್ಲಿ ಹೇಳಿದ್ದನ್ನು ಗೀತೆಯಲ್ಲಿ–

> ಊರ್ಧ್ವಂ ಗಚ್ಛಂತಿ ಸತ್ವಸ್ಥಾಃ ಮಧ್ಯೇ ತಿಷ್ಠಂತಿ ರಾಜಸಾಃ ।
> ಜಘನ್ಯಗುಣವೃತ್ತಿಸ್ಥಾಃ ಅಧೋ ಗಚ್ಛಂತಿ ತಾಮಸಾಃ ।

> 'ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್'

ಎಂಬಲ್ಲಿ ಹೇಳಿರುತ್ತದೆ. ಮೋಕ್ಷಯೋಗ್ಯತೆಯು ಮೋಕ್ಷಕ್ಕೆ ಕಾರಣವೆಂದು ಹೇಳುವುದು ಯುಕ್ತಿಯುಕ್ತವೂ ಆಗಿರುತ್ತದೆ. ಅದು ಹೇಗೆಂದರೆ ಈ ವರೆಗೆ ಅನಾದಿಕಾಲದಿಂದ ಸಂಸಾರದಲ್ಲಿ ಬಳಲಿಕೊಂಡು ಇರುವವರು ಯಾರೂ ಚತುರ್ಮುಖನ ಸ್ಥಾನವನ್ನಾಗಲೀ ಮಹೇಂದ್ರನ ಸ್ಥಾನವನ್ನಾಗಲೀ ಬ್ರಹ್ಮರ್ಷಿ–ವಸಿಷ್ಠರ ಸ್ಥಾನವನ್ನಾಗಲೀ ಆದ್ಯ ಶಂಕರಾಚಾರ್ಯ ಆದ್ಯ ರಾಮಾನುಜಾಚಾರ್ಯರ ಸ್ಥಾನವನ್ನಾಗಲೀ ಹೊಂದಲಿಲ್ಲ. ಅದು ಏಕೆ? ಸಂಸಾರದಲ್ಲಿ ಇಷ್ಟು ಕಷ್ಟದಲ್ಲಿರುವಾಗ ಪರಮಭಾಗ್ಯವುಳ್ಳ ಸ್ಥಾನವನ್ನು

ಹೊಂದುವ ಇಚ್ಛೆಯೂ ಯಾರಿಗೂ ಬಂದಿಲ್ಲವೆಂದಾಗಲೀ ಅದಕ್ಕೆ ಯಾರೂ ಪ್ರಯತ್ನವನ್ನು ಮಾಡಲೇ ಇಲ್ಲವೆಂದಾಗಲೀ ಹೇಳುವುದು ಅಶಕ್ಯ. ಅದನ್ನು ಹೊಂದಲು ಮಹಾಪ್ರಯತ್ನವನ್ನೂ ಮಾಡಬೇಕಾಗುತ್ತದೆ. ಅತ್ಯಾಯಾಸಸಾಧ್ಯವಾದದ್ದು ಅದು. ಆದ್ದರಿಂದ ಅದಕ್ಕೆ ಯಾರೂ ಪ್ರಯತ್ನವನ್ನೇ ಮಾಡುವುದಿಲ್ಲವೆಂದು ಹೇಳುವುದಾದರೆ ಇಂತಹ ವಿಚಾರದವರು ಪರಬ್ರಹ್ಮಭಾವರೂಪ ಮತ್ತು ಪರಬ್ರಹ್ಮನ ಪರಮಸಾಮ್ಯರೂಪವಾದ ಮೋಕ್ಷಕ್ಕೆ ಪ್ರಯತ್ನವನ್ನು ಮಾಡುತ್ತಾರೋ ಇಲ್ಲವೋ? ಎಂದೂ ಅವರು ಮೋಕ್ಷಕ್ಕಾಗಿಯೂ ಪ್ರಯತ್ನ ಮಾಡುವುದಿಲ್ಲವಾದರೆ ಅವರಿಗೆಲ್ಲ ರಿಗೂ ಮೋಕ್ಷವು ಲಭ್ಯವೆಂಬುವುದು ಹೇಗೆ ಕೂಡುತ್ತದೆ? 'ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ' ಎಂಬ ಸೂತ್ರವು ಮೋಕ್ಷಕ್ಕಾಗಿ ಮಹಾಪ್ರಯತ್ನವನ್ನು ಮಾಡ ಬೇಕೆಂದು ಹೇಳುತ್ತದೆ. ಆದುದರಿಂದ ಎಲ್ಲರೂ ಮಹಾಪ್ರಯತ್ನ ಮಾಡುತ್ತಾರೆ. ಪ್ರಯತ್ನದಿಂದ ಮೋಕ್ಷವನ್ನು ಹೊಂದಿಯೇ ಹೊಂದುತ್ತಾರೆಂದು ಹೇಳಬೇಕು. ಎಲ್ಲರೂ ಮೋಕ್ಷಕ್ಕಾಗಿ ಪ್ರಯತ್ನವನ್ನು ಮಾಡುವುದಾದರೆ ಪರಬ್ರಹ್ಮಭಾವರೂಪ ಮೋಕ್ಷಕ್ಕೆ ಮಾಡುವ ಪ್ರಯತ್ನಕ್ಕಿಂತಲೂ ಅಲ್ಪ ಪ್ರಯತ್ನದಿಂದ ಲಭ್ಯವಾದ ಚತುರ್ಮುಖಾದಿ ಸ್ಥಾನಗಳಿಗೆ ಏಕೆ ಅವರು ಪ್ರಯತ್ನಮಾಡಲಿಲ್ಲ? ಏಕೆ ಆ ಪದಗಳನ್ನು ಈ ವರೆಗೂ ಹೊಂದಲಿಲ್ಲ? ಚತುರ್ಮುಖಾದಿ ಸ್ಥಾನವನ್ನು ಹೊಂದ ಬೇಕಾದರೆ ಯೋಗ್ಯತೆಯು ಅವಶ್ಯ; ಮೋಕ್ಷವನ್ನು ಹೊಂದಲಿಕ್ಕೆ ಯೋಗ್ಯತೆಯು ಆವಶ್ಯಕವಲ್ಲವೆಂದು ಹೇಳುವುದಾದರೆ ಮಂತ್ರಿಗಳಾಗಲಿಕ್ಕೆ ಯೋಗ್ಯತೆಯು ಬೇಕು. ಪ್ರಧಾನಮಂತ್ರಿಯಾಗಲಿಕ್ಕೆ ಯೋಗ್ಯತೆಯು ಬೇಡವೆಂದು ಹೇಳಿದಂತೆ ಆಗುತ್ತದೆ. ಆದುದರಿಂದ ಈ ಯುಕ್ತಿಯಿಂದ ಮೋಕ್ಷ ಯೋಗ್ಯತೆಯುಳ್ಳ ಜೀವರೇ ಮೋಕ್ಷವನ್ನು ಹೊಂದುತ್ತಾರೆಂದು ಹೇಳಬೇಕು.

ಈ ರೀತಿ ಗೀತಾಪ್ರಮಾಣ ಮತ್ತು ಯುಕ್ತಿಗಳಿಂದ ಸಿದ್ಧವಾಗುವ ಮೋಕ್ಷ ಯೋಗ್ಯರಿಗೆ ಮಾತ್ರ ಮೋಕ್ಷವು ಲಭ್ಯ; ಇತರರಿಗೆ ಅಲಭ್ಯವೆಂದು ತತ್ವವನ್ನು ಶ್ರೀಮದಾಚಾರ್ಯರೊಬ್ಬರೇ ಹೇಳುತ್ತಾರೆ. ಇತರ ಯಾವ ಭಾಷ್ಯಕಾರರೂ ಹೇಳುವುದಿಲ್ಲ. ಇದು ಬಹಳ ಆಶ್ಚರ್ಯ. ಇದರ ಕಾರಣ ಹೀಗಿರಬೇಕು. ಮೋಕ್ಷ ಯೋಗ್ಯರಿಗೆ ಮಾತ್ರ ಮೋಕ್ಷವೆಂದು ಹೇಳಿದರೆ ಸಾರ್ವಜನಿಕ ಅನುರಾಗವು ತಮ್ಮ ಮೇಲೆ ಇಲ್ಲವೆಂದಾದೀತು ಎಂಬ ಭಾವದಿಂದ ಅವರು ಹಾಗೆ ಹೇಳುತ್ತಾ ಇಲ್ಲ ಎಂಬುದು ಕಾರಣವಾಗಿರಬೇಕು. ಇದೇ ಕಾರಣವಾದರೆ ಇತರ ಭಾಷ್ಯಕಾರರೆಲ್ಲ ಮಹಾವಂಚಕರಾದರು.

ಒಬ್ಬ ವೈದ್ಯನು ರೋಗಪರಿಹಾರಸಾಧನವಾದ ಕಹಿ ಔಷಧವನ್ನು ಹೇಳಿದರೆ ಯಾರೂ ತನ್ನ ಹತ್ತಿರ ಬರಲಿಕ್ಕಿಲ್ಲವೆಂಬ ಕಾರಣದಿಂದ ಸಿಹಿ ಔಷಧವನ್ನೇ ಕೊಡತಕ್ಕವನಾದರೆ ಅವನು ಲೋಕವಂಚಕನು ಹೇಗೆ ಆಗುತ್ತಾನೋ ಹಾಗೆಯೇ ಇತರ ಭಾಷ್ಯಕಾರರು ವಂಚಕರೆಂದಾಗಿ ಅವರೆಲ್ಲರೂ ಆಪ್ತರಲ್ಲವೆಂದೂ ಶ್ರೀಮದಾ ಚಾರ್ಯರೊಬ್ಬರೇ ಪರಮಾಪ್ತರೆಂದೂ ಸಿದ್ಧವಾಗುವುದಿಲ್ಲವೇ?

ಶ್ರೀಮದನುವ್ಯಾಖ್ಯಾನದ ಒಂದೊಂದು ವಾಕ್ಯವೂ ಭೀಮಸೇನನ ಗದೆಯು ಇದ್ದಂತೆ. ಶ್ರೀ ಭೀಮಸೇನನಿಗೆ ಒಂದೊಂದು ಧಾರ್ತರಾಷ್ಟ್ರನನ್ನು ಕೊಲ್ಲಲಿಕ್ಕೆ ಬೇರೆ ಬೇರೆ ಗದೆಯು ಬೇಡ. ಒಂದೇ ಗದೆಯಿಂದ ನೂರು ಧಾರ್ತರಾಷ್ಟ್ರರನ್ನೂ ಕೊಂದನು. ಹಾಗೆಯೇ ನೂರಾರು ಪೂರ್ವಪಕ್ಷಗಳನ್ನು 'ಪ್ರತ್ಯಕ್ಷವಚ್ಚ ಪ್ರಾಮಾಣ್ಯಂ' ಇತ್ಯಾದಿ ಒಂದೊಂದೇ ವಾಕ್ಯಗಳು ನಿರಾಸ ಮಾಡುತ್ತವೆ. ಶ್ರೀ ಭೀಮಸೇನನ ಗದೆಯನ್ನು ಯಾರಾದರೂ ತುಂಡುಮಾಡಿದರೆಂದು ಮಹಾಭಾರತದಲ್ಲಿ ಉಲ್ಲೇಖವು ಕಾಣು ವುದಿಲ್ಲ. ಆದುದರಿಂದ ಅದು ಅಚ್ಛೇದ್ಯಾಭೇದ್ಯ. ಅದರಂತೆ ಶ್ರೀಮದನು ವ್ಯಾಖ್ಯಾನ ಖಂಡನವೆಂಬ ಗ್ರಂಥವನ್ನು ಈವರೆಗೆ ನಾವು ಯಾರೂ ಕೇಳಲಿಲ್ಲ. ಆದುದರಿಂದ ಶ್ರೀ ಭೀಮಸೇನನ ಗದೆಯಂತೆ ಶ್ರೀಮದನುವ್ಯಾಖ್ಯಾನವೂ ಅಚ್ಛೇದ್ಯಾಭೇದ್ಯವು.

ಶ್ರೀ ಭೀಮಸೇನನು ದುರ್ಯೋಧನನನ್ನು ಕೊಲ್ಲುವಾಗ 'ಕೃಷ್ಣಬಂಧೇ ಕೃತೋ ಮಂತ್ರಃ ಇತಿ ಮೂರ್ಧ್ನಿ ಪದಾಕ್ರಮತ್' ಎಂದು ಕೃಷ್ಣನನ್ನು ಕಟ್ಟಿಹಾಕುವ ಯೋಚನೆಯನ್ನು ಮಾಡಿದ್ದರಿಂದ ನಿನ್ನ ತಲೆಯನ್ನು ಚೂರುಮಾಡುತ್ತೇನೆಂದು ಹೇಳಿದನು. ಹೊರತು ತನ್ನ ಹೆಂಡತಿಯ ಸೀರೆಯ ಅಪಹಾರ ಮಾಡಿದಿ ಎಂಬ ಕಾರಣವನ್ನು ಹೇಳಿ ದುರ್ಯೋಧನನನ್ನು ನಿಗ್ರಹಿಸುತ್ತಿಲ್ಲ. ಅಂದರೆ ಭೀಮಸೇನನ ಪ್ರವೃತ್ತಿ ಸ್ವಾರ್ಥಕ್ಕಲ್ಲ. ಕೇವಲ ಭಗವತ್ಪ್ರೀತ್ಯರ್ಥವಾಗಿ. ಹಾಗೆಯೇ ಶ್ರೀಮದನು ವ್ಯಾಖ್ಯಾನದಲ್ಲಿ ಶ್ರೀಮದಾಚಾರ್ಯರು ಬಂಧಮಿಥ್ಯಾತ್ವವನ್ನು ಖಂಡಿಸುವುದು ಬಂಧಸತ್ಯತ್ವರೂಪ ತಮ್ಮ ಸಿದ್ಧಾಂತ ಸಿದ್ಧಿಗಾಗಿ ಎಂದು ಹೇಳದೆ ಭಗವತ್ಪ್ರಸಾದಕ್ಕಾಗಿ ಬ್ರಹ್ಮಜಿಜ್ಞಾಸು ಮಾಡಬೇಕೆಂಬ ಪ್ರಮೇಯಸಿದ್ಧಿಗಾಗಿ ಎಂದು ಹೇಳಿದ್ದಾರೆ. ಮಿಥ್ಯಾ ಭೂತವಾದ ಬಂಧದ ನಿವೃತ್ತಿಯೇ ಮೋಕ್ಷ. ಇಂತಹ ಮೋಕ್ಷಕ್ಕೆ ಜ್ಞಾನವೊಂದೇ ಸಾಕು. ಈಶ್ವರಪ್ರಸಾದವು ಬೇಡವೆಂದು ಶಂಕೆಯು ಬಂತು. ಅದರ ನಿರಾಸವೇ ಬಂಧಸತ್ಯತ್ವ ಸ್ಥಾಪನೆಮಾಡುವ ಅನುವ್ಯಾಖ್ಯಾನದ ಗುರಿಯು. ಸ್ವಮತಸ್ಥಾಪನೆ ರೂಪ ಸ್ವಾರ್ಥಸಾಧನವು ಗುರಿ ಅಲ್ಲ. ಆದುದರಿಂದ 'ಸೋನುವ್ಯಾಖ್ಯಾ ಸತಾಂ ಸುಧಾ' ಎಂದು ಸುಮಧ್ವವಿಜಯದಲ್ಲಿ ಹೇಳಿದಂತೆ ಅನುವ್ಯಾಖ್ಯಾನವು ಭೂಸುರರಿಗೆ ಅಮೃತಾಹಾರರೂಪವಾದುದು.

ಅನುವ್ಯಾಖ್ಯಾನದ ಗಾಂಭೀರ್ಯ

'ಅಜ್ಞಾನಾಭಾವತಃ ಶಾಸ್ತ್ರಂ ಸರ್ವಂ ವ್ಯರ್ಥೀಭವಿಷ್ಯತಿ' ಅಜ್ಞಾನಿಯು ಶಾಸ್ತ್ರಕ್ಕೆ ಅಧಿಕಾರಿಯು. ಅದ್ವೈತಮತದ ರೀತಿಯಿಂದ ಅಜ್ಞಾನವು ಕೂಡುವುದಿಲ್ಲ. ಆದುದ ರಿಂದ ಆ ಮತದ ಪ್ರಕಾರ ಶಾಸ್ತ್ರಕ್ಕೆ ಅಧಿಕಾರಿಯು ಇಲ್ಲ. ಆದುದರಿಂದ ಶಾಸ್ತ್ರಗಳೆಲ್ಲ ಆ ಮತದ ಪ್ರಕಾರ ವ್ಯರ್ಥವೆಂಬ ದೋಷವು ಅದ್ವೈತಮತಕ್ಕೆ ಸುಧಾಗ್ರಂಥದಲ್ಲಿ ಹೇಳಲ್ಪಟ್ಟಿದೆ.

1) ಅದ್ವೈತಮತದಲ್ಲಿ ಬ್ರಹ್ಮನಿಗೆ ಜ್ಞೇಯತ್ವವು ಅಂಗೀಕೃತವಾಗಿಲ್ಲ. ಆ ಮತದಲ್ಲಿ ಬ್ರಹ್ಮನು ನಿರ್ಗುಣನು. ನಿರ್ಗುಣನಿಗೆ ಜ್ಞೇಯತ್ವ ರೂಪಗುಣವು ಕೂಡುವುದಿಲ್ಲ. ಆದುದರಿಂದ ಆ ಮತದ ಪ್ರಕಾರ ಶಾಸ್ತ್ರವನ್ನು ಪಠಿಸಿದರೂ ಬ್ರಹ್ಮ

ಜ್ಞಾನವು ಉಂಟಾಗುವುದಿಲ್ಲ. ಆದುದರಿಂದ ಆ ಮತದ ಪ್ರಕಾರ ಎಲ್ಲ ಶಾಸ್ತ್ರವು ವ್ಯರ್ಥವಾಯಿತು. ಈ ಅರ್ಥವೂ ಈ ಅನುವ್ಯಾಖ್ಯಾನಶ್ಲೋಕದಿಂದ ಸಿಗುತ್ತದೆ. 'ಅಃ ಇತಿ ಬ್ರಹ್ಮ' ಶ್ರುತಿಪ್ರಕಾರ ಗುಣಪೂರ್ಣನಾದ ಬ್ರಹ್ಮನು ಅಕಾರವಾಚ್ಯನು. ಅವನ ಜ್ಞಾನದ ಅಭಾವವು ಅದ್ವೈತಮತಪ್ರಕಾರ ಇರುವುದರಿಂದ ಎಂದು ಅಜ್ಞಾನಾಭಾವತಃ ಎಂಬ ಪದಕ್ಕೆ ಅರ್ಥ.

2) ಅದ್ವೈತಾದಿಮತದವರು ಯಾರೂ ಭೇದ ಪ್ರತಿನಿಧಿ ವಿಶೇಷವನ್ನು ಒಪ್ಪಲಿಲ್ಲ. ಭೇದ ಪ್ರತಿನಿಧಿಯಾದ ವಿಶೇಷವು ಇದ್ದರೆ ಜ್ಞಾನಾನಂದಾದಿ ಗುಣವುಳ್ಳವನು ಬ್ರಹ್ಮನು. ಹಾಗೆಯೇ ಜ್ಞಾನಾನಂದಾದಿ ಗುಣಸ್ವರೂಪನು ಎಂದು ಶಾಸ್ತ್ರಗಳಲ್ಲಿ ಹೇಳಿದ್ದು ಕೂಡುತ್ತದೆ. ಭೇದಪ್ರತಿನಿಧಿಯಾದ ವಿಶೇಷದಿಂದ ಅದನ್ನು ಕೂಡಿಸಲಿಕ್ಕೆ ಆಗುತ್ತದೆ. ಶಾಸ್ತ್ರದಲ್ಲಿ ಹೇಳಿದ್ದನ್ನು ಕೂಡಿಸದೆ ಇದ್ದರೆ ಶಾಸ್ತ್ರವು ಅಪ್ರಮಾಣವಾಗಿ ವ್ಯರ್ಥವಾಗುತ್ತದೆ. ಈ ಅರ್ಥವೂ ಅಜ್ಞಾನಾಭಾವತಃ ಎಂಬುದರಿಂದ ಲಭ್ಯವಾಗುತ್ತದೆ. ಹೇ ಅಜ್ಞ ಎಂದು ಸಂಬುದ್ಧ್ಯಂತ ಪದವಾದ ಮೇಲೆ ಅನಾಭಾವತಃ ಎಂದು ಇನ್ನೊಂದು ಪದ. ಇಲ್ಲಿ 'ನ' ಎಂದರೆ ಭೇದ 'ಅನ' ಎಂದರೆ ಭೇದವಲ್ಲದ ಭೇದ ಸದೃಶವಾದ ವಿಶೇಷವೆಂದು ಅರ್ಥ.

3) ಒಬ್ಬನು ಸಕಲಶಾಸ್ತ್ರಗಳನ್ನು ಅಧ್ಯಯನ ಮಾಡಿದರೂ ಶ್ರೀಮುಖ್ಯಪ್ರಾಣಾವತಾರಭೂತರಾದ ಶ್ರೀ ಮಧ್ವಾಚಾರ್ಯರ ಅನುಗ್ರಹಪಾತ್ರನಾಗಲಿಲ್ಲ. ಇಂತಹವನ ಸಕಲ ಶಾಸ್ತ್ರಾಧ್ಯಯನವು ವ್ಯರ್ಥ. ಅವನಿಗೆ ಗುರುಗಳ ಅನುಗ್ರಹವು ಇಲ್ಲವಾದುದರಿಂದ ಶಾಸ್ತ್ರದಿಂದ ಯಥಾರ್ಥಜ್ಞಾನವು ಉಂಟಾಗುವುದಿಲ್ಲ. ಯಥಾರ್ಥಜ್ಞಾನವು ಉಂಟಾಗದೆ ಇದ್ದರೆ ಶಾಸ್ತ್ರಾಧ್ಯಯನದಿಂದ ಏನು ಪ್ರಯೋಜನ? ಈ ಅರ್ಥವೂ ಈ ಶ್ಲೋಕದಿಂದ ಸಿಗುತ್ತದೆ. 'ಅಜ್ಞ' ಎಂದು ಸಂಬೋಧನ ಅನಂತರ ಅನಾಭಾವತಃ ಎಂದರೆ ಅನುಗ್ರಾಹ್ಯತಾ ಸಂಬಂಧೇನ ಅನಸ್ಯ ಮುಖ್ಯಪ್ರಾಣಸ್ಯ ಅಭಾವತಃ ಎಂದು ಅರ್ಥ.

4) ಜಗತ್ತಿನಲ್ಲಿ ಅಜ್ಞಾನಿಗಳು ಜ್ಞಾನಿಗಳು ಇಬ್ಬರು ಇದ್ದರೇನೇ ಶಾಸ್ತ್ರವು ಸಾರ್ಥಕ. ಎಲ್ಲರೂ ಜ್ಞಾನಿಗಳೇ ಆದರೆ ಶಾಸ್ತ್ರವು ಏಕೆ? ಎಲ್ಲರೂ ಅಜ್ಞಾನಿಗಳೇ ಆದರೆ ಉಪದೇಶಕರು ಯಾರು? ಉಪದೇಶಕರು ಇಲ್ಲವಾದರೆ ಶಾಸ್ತ್ರದಿಂದ ಜ್ಞಾನವು ಉಂಟಾಗುವುದಿಲ್ಲ. ಆಗಲೂ ಶಾಸ್ತ್ರವು ವ್ಯರ್ಥ. ಆದುದರಿಂದ ಶಾಸ್ತ್ರವು ಸಾರ್ಥಕವಾಗಬೇಕಾದರೆ ಅಜ್ಞಾನಿಗಳು ಜ್ಞಾನಿಗಳು ಇಬ್ಬರೂ ಬೇಕು. ಈ ಅರ್ಥವೂ ಈ ಶ್ಲೋಕದಿಂದ ಸ್ಫುರಿತವಾಗುತ್ತದೆ. ಅಜ್ಞಶ್ಚ ಅನಶ್ಚ ಅಜ್ಞಾನಂ ತಯೋರಭಾವತಃ ಎಂದು ವಿಗ್ರಹ. ಇಲ್ಲಿ ಅಜ್ಞ ಶಬ್ದಕ್ಕೆ ಅಜ್ಞಾನಿ ಎಂಬ ಅರ್ಥವು ಪ್ರಸಿದ್ಧ. ಅನವೆಂದರೆ ಮುಖ್ಯಪ್ರಾಣದೇವರ ಸನ್ನಿಧಾನವುಳ್ಳ ಜ್ಞಾನಿ ಎಂದು ಅರ್ಥ. ಜ್ಞಾನಿಗಳು ಮುಖ್ಯಪ್ರಾಣದೇವರ ಅನುಗ್ರಹಪಾತ್ರರು. ಅವರಲ್ಲಿ ಮುಖ್ಯಪ್ರಾಣದೇವರ ವಿಶೇಷ ಸನ್ನಿಧಾನವು ಇರುತ್ತದೆ. ಅವರು ಮುಖ್ಯಪ್ರಾಣನ ಪ್ರತಿಮಾಭೂತರು. ಆದುದರಿಂದ ಔಪಚಾರಿಕವಾಗಿ ಅವರು 'ಅನ' ಶಬ್ದದಿಂದ ಕರೆಯಲ್ಪಡುವರು.

5) ಜಗತ್ತಿನಲ್ಲಿ ಎಷ್ಟೋ ಜನರು ಶಾಸ್ತ್ರವನ್ನು ಓದುತ್ತಾರೆ. ಅನುಷ್ಠಾನವನ್ನು ಮಾಡುವುದಿಲ್ಲ. ಶಾಸ್ತ್ರೋಕ್ತಾನುಷ್ಠಾನವು ಇಲ್ಲದೆ ಶಾಸ್ತ್ರಾಧ್ಯಯನಮಾತ್ರವಾದರೆ ಅವರಿಗೆ ಆ ಶಾಸ್ತ್ರವು ವ್ಯರ್ಥ. ಈ ಅರ್ಥವೂ ಈ ಶ್ಲೋಕದಿಂದ ಸಿಗುತ್ತದೆ. ಅಜ್ಞ ಎಂಬುದು ಸಂಬೋಧನ. 'ಅನ ಚೇಷ್ಟಾಯಾಂ' ಎಂಬ ಧಾತು ವ್ಯಾಖ್ಯಾನದ ಪ್ರಕಾರ ಅನವೆಂದರೆ ಶಾಸ್ತ್ರೋಕ್ತಾನುಷ್ಠಾನ. ಇದರ ಅಭಾವದಿಂದ ಎಂದು ಅಜ್ಞಾನಾ ಭಾವತಃ ಎಂಬುದಕ್ಕೆ ಅರ್ಥ. ಇದೇ ರೀತಿ ಅನುವ್ಯಾಖ್ಯಾನಕ್ಕೆ ಬಹು ಅರ್ಥಗಳು ತೋರುತ್ತವೆ. ಸುಧಾದಲ್ಲಿ ಒಂದು ಶ್ಲೋಕಕ್ಕೆ ಬಹ್ವರ್ಥಗಳನ್ನು ಹೇಳಿದ್ದಾರೆ. ಸುಧಾದಲ್ಲಿ ಅನೇಕಾರ್ಥವನ್ನು ಹೇಳಿದ್ದು ನಮಗೆ ಮಾರ್ಗದರ್ಶಕ. ಸುಧಾದಲ್ಲಿ ಮಾಡಿದ ಮಾರ್ಗದರ್ಶನದಿಂದ ಈ ಅರ್ಥಗಳು ಹೊಳೆದವು.

●

೪. ೮. ಶ್ರೀಮನ್ನ್ಯಾಯಸುಧಾ

ಅನುವ್ಯಾಖ್ಯಾರಥಾರೂಢಃ ಬ್ರಹ್ಮಸೂತ್ರಸುಸಾರಥಿಃ ।
ವೇದಾಶ್ವಸ್ತರ್ಕಗಾಂಡೀವೀ ಧ್ವಜಮಧ್ವಃ ಸುಧಾರ್ಜುನಃ ॥

ನ್ಯಾಯಸುಧಾ ಗ್ರಂಥವು ಅರ್ಜುನನಂತೆ ಶೋಭಿಸುತ್ತದೆ. ಅರ್ಜುನನು ಅಭೇದ್ಯರಥಾರೂಢನಾಗಿದ್ದಂತೆ ನ್ಯಾಯಸುಧಾ ಟೀಕಾ ತನಗೆ ಮೂಲವಾದ ಅಭೇದ್ಯವಾದ ಅನುವ್ಯಾಖ್ಯಾನವನ್ನು ಆಶ್ರಯಿಸಿರುತ್ತದೆ. ಸರ್ವಜ್ಞನಾದ ಶ್ರೀಕೃಷ್ಣನು ಅರ್ಜುನನಿಗೆ ಸಾರಥಿಯಾಗಿ ಮಾರ್ಗದರ್ಶಿಯಾಗಿದ್ದಂತೆ ನ್ಯಾಯಸುಧಾಕ್ಕೆ ಸರ್ವ ಶಾಸ್ತ್ರಾರ್ಥ ನಿರ್ಣಾಯಕವಾದ ಬ್ರಹ್ಮಸೂತ್ರವು ಮಾರ್ಗದರ್ಶಿಯಾಗಿದೆ. ಅರ್ಜುನನ ರಥದ ಪುರೋಗಾಮಿಗಳಾಗಿ ಅಭೇದ್ಯ ಕುದುರೆಗಳು ಇರುವಂತೆ ನ್ಯಾಯಸುಧಾದ ಪ್ರಮೇಯಗಳನ್ನು ಸಾಧಿಸಲಿಕ್ಕೆ ಅಪೌರುಷೇಯಗಳಾಗಿರುವುದರಿಂದ ಅಭೇದ್ಯಗಳಾಗಿರುವ ವೇದಗಳು ಯುಕ್ತಿಗಳಿಗಿಂತ ಪುರೋಗಾಮಿಗಳಾಗಿರುವವು. ಅರ್ಜುನನ ಕೈಯಲ್ಲಿ ಅಭೇದ್ಯ ಗಾಂಡೀವ ಧನುಸ್ಸು ಇದ್ದಂತೆ ನ್ಯಾಯಸುಧಾದಲ್ಲಿ ಅಭೇದ್ಯತರ್ಕಗಳಿವೆ. ಅರ್ಜುನನ ಧ್ವಜದಲ್ಲಿದ್ದ ಹನುಮಂತನು ಅರ್ಜುನನ ಶತ್ರುಪರಾಭವಕ್ಕೆ ಸಹಕಾರಿಯಾದಂತೆ ನ್ಯಾಯಸುಧಾಕಾರರ ಮನಸ್ಸಿನಲ್ಲಿ ಸದಾ ಸನ್ನಿಹಿತರಾದ ಶ್ರೀಮಧ್ವ ಗುರುಗಳು ವಾಕ್ಯಾರ್ಥಸ್ಮರಣವನ್ನು ಕೊಟ್ಟು ಪರಮತಖಂಡನಕ್ಕೆ ಸಹಕರಿಸುತ್ತಾರೆ.

ಅರ್ಜುನನು ಆಕಾಶದಲ್ಲಿ ಹಾರುತ್ತಿರುವ ಪಕ್ಷಿಯ ಕಣ್ಣಿನ ರೆಪ್ಪೆಗೆ ಬಾಣವನ್ನು ಪ್ರಯೋಗಿಸಿ ಆ ರೆಪ್ಪೆಯೊಂದನ್ನೇ ಕೆಳಗೆ ಬೀಳಿಸಿದನು. ಅರ್ಜುನನ ಸೂಕ್ಷ್ಮದೃಷ್ಟಿಯ ಪರಿಚಯವು ಈ ಸಂದರ್ಭದಲ್ಲಿ ಎಲ್ಲರಿಗೂ ಆಯಿತು. ಇದರಂತೆ ಶ್ರೀ ಸುಧಾಕಾರರು ತಮ್ಮ ಸೂಕ್ಷ್ಮದೃಷ್ಟಿಯಿಂದ ಪಂಚಾಖ್ಯಾತಿ ಘಟ್ಟದಲ್ಲಿ ತಾವು ಹೇಳಿದ ಎಲ್ಲಾ ವಿಷಯಗಳನ್ನು ಶ್ರೀಮದಾಚಾರ್ಯರ ಅನುವ್ಯಾಖ್ಯಾನದ 'ವಿಜ್ಞಾತಸ್ಯಾನ್ಯಥಾ ಸಮ್ಯಗ್ವಿಜ್ಞಾನಂ ಹ್ಯೇವ ತನ್ಮತಮ್' ಎಂಬ ಶ್ಲೋಕದಲ್ಲಿರುವ ಒಂದೇ ಒಂದು 'ಹಿ' ಶಬ್ದದಿಂದ ತಿಳಿದು ಗ್ರಂಥದಲ್ಲಿ ಬರೆದಿದ್ದಾರೆ. ಮತ್ತು ಅನುವ್ಯಾಖ್ಯಾನದ ಪ್ರತಿ

ಶ್ಲೋಕಗಳಲ್ಲಿ ಪ್ರಾಯಃ 'ಚ, ತು, ಏವ, ಅಪಿ' ಶಬ್ದಗಳು ತುಂಬಾ ಇವೆ. ಇವುಗಳು ನಿರರ್ಥಕಗಳೇ ಎಂದು ಇತರರು ನೋಡಿದರೆ ಶ್ರೀನ್ಯಾಯಸುಧಾಕಾರರು ತಮ್ಮ ಸೂಕ್ಷ್ಮ ದೃಷ್ಟಿಯಿಂದ ಬಹು ವಿಶೇಷಾರ್ಥಗಳನ್ನು ಬರೆದು ಅವು ಸಾರ್ಥಕಗಳೇ ನಿರರ್ಥಕಗಳಲ್ಲವೆಂದು ತಿಳಿಸುತ್ತಾರೆ. ಅನುವ್ಯಾಖ್ಯಾನದ ಶ್ಲೋಕಗಳಿಗೆ ಬಹ್ವರ್ಥಗಳಿವೆ ಎಂದು ಅನುವ್ಯಾಖ್ಯಾನದಲ್ಲಿಯೇ 'ಗ್ರಂಥೋಯಮಪಿ ಬಹ್ವರ್ಥಃ' ಎಂದು ಹೇಳಿರುತ್ತದೆ. ಆದರೆ ಯಾರಿಗೂ ಆ ಬಹ್ವರ್ಥಗಳು ತೋರಲಾರವು. ಸುಧಾಕಾರರು ಮಾತ್ರ ಆ ಶ್ಲೋಕಗಳಿಗೆ ಬಹ್ವರ್ಥಗಳನ್ನು ಹೇಳುತ್ತಾರೆ. ಇತರ ಮತೀಯ ಭಾಷ್ಯಗಳಿಗೆ ಪ್ರಸಿದ್ಧ ಟೀಕಾಕಾರರಾಗಿರುವವರು ಯಾರೂ ತಮ್ಮ ಮೂಲಗ್ರಂಥಗಳಿಗೆ ಇಷ್ಟು ಬಹ್ವರ್ಥಗಳನ್ನು ಹೇಳಲಿಲ್ಲ. ಶ್ರೀಸುಧಾಕಾರರು ಹೇಳುವ ಬಹ್ವರ್ಥಗಳನ್ನು ಇತರ ಟೀಕಾಕಾರರು ನೋಡಿದರೆ ತಮ್ಮ ಮೂಗಿಗೆ ತಮ್ಮ ಬೆರಳನ್ನಿಟ್ಟುಕೊಂಡು ಆಶ್ಚರ್ಯ ಪಡದೇ ಇರಲಾರರು.

ಶ್ರೀಮನ್ನ್ಯಾಯಸುಧಾಕಾರರಿಗೆ ಅನುವ್ಯಾಖ್ಯಾನವನ್ನು ರಚಿಸಿದ ಶ್ರೀ ಮಧ್ವಾಚಾರ್ಯರಲ್ಲಿ ಪರಮಗುರುಭಕ್ತಿಯು ಇದೆ. 'ಪರಂ ಶ್ರೀಮತ್ಪೂರ್ಣಪ್ರಮತಿಗುರುಕಾರುಣ್ಯಸರಣಿಂ ಪ್ರಪನ್ನಾಃ ಮಾನ್ಯಾಃ ಸ್ಮಃ' ಎಂದು ಅವರು ಹೇಳುವ ಮಾತಿನಿಂದ ಇದು ತಿಳಿಯುತ್ತದೆ. ಇತರ ಮತೀಯ ಯಾವ ಟೀಕಾಕಾರರಿಗೂ ಇವರಿಗೆ ಇರುವಂತೆ ಗುರುಭಕ್ತಿಯು ಇಲ್ಲವೆಂದೇ ಹೇಳಬಹುದು. ಗುರುಗಳಲ್ಲಿ ಪರಮಭಕ್ತಿಯು ಇದ್ದವರಿಗೆ ಗುರುಗಳು ಹೇಳಿದ ವಾಕ್ಯದ ಎಲ್ಲ ಅರ್ಥಗಳೂ ತೋರುತ್ತವೆಯೆಂದು,

> ಯಸ್ಯ ದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುರೌ ।
> ತಸ್ಯೈತೇ ಕಥಿತ್ಯಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ಎಂಬ ಪ್ರಮಾಣವಾಕ್ಯವು ಹೇಳುತ್ತದೆ. ಈ ಪ್ರಮಾಣವಾಕ್ಯದ ಅರ್ಥಕ್ಕೆ ಶ್ರೀಮನ್ನ್ಯಾಯಸುಧಾಕಾರರೇ ಪ್ರಥಮ ಉದಾಹರಣ ಭೂತರಾಗಿದ್ದಾರೆ.

ಜನ್ಮಾದ್ಯಧಿಕರಣದ ಅನುವ್ಯಾಖ್ಯಾನದಲ್ಲಿ-

> ಸೃಷ್ಟಿಃ ಸ್ಥಿತಿಶ್ಚ ಸಂಹಾರೋ ನಿಯತಿರ್ಜ್ಞಾನ ಮಾವೃತಿಃ ।
> ಬಂಧಮೋಕ್ಷಾವಪಿ ಹ್ಯಾಸು ಶ್ರುತಿಷೂಕ್ತಾ ಹರೇಃ ಸದಾ ॥

ಎಂಬ ಶ್ಲೋಕವು ಇದೆ. ಈ ಶ್ಲೋಕಕ್ಕೆ ಶ್ರೀನ್ಯಾಯಸುಧಾಕಾರರು ಹೇಗೆ ಅರ್ಥ ವಿವರಣೆಯನ್ನು ಮಾಡುತ್ತಾರೆಂಬುದನ್ನು ತಿಳಿಸುವೆವು. ಜಗತ್ ಸೃಷ್ಟ್ಯಾದಿಗಳು ಶ್ರೀಹರಿಯಿಂದ ಆಗುವವೆಂದು ಶ್ರುತಿಗಳಲ್ಲಿ ಹೇಳಲ್ಪಟ್ಟಿದೆಯೆಂದು ಈ ಶ್ಲೋಕದ ಸಾಮಾನ್ಯಾರ್ಥವು. ಇಷ್ಟೇ ಅರ್ಥವು ಈ ಶ್ಲೋಕಕ್ಕಾದರೆ ಈ ಶ್ಲೋಕದಲ್ಲಿ ಅಪೂರ್ವತೆಯು ಇಲ್ಲ. ಶ್ರುತಿಗಳಲ್ಲಿ ಶ್ರೀಹರಿಗೆ ಜನ್ಮಾದಿಕಾರಣತ್ವವು ಹೇಳಲ್ಪಟ್ಟಿದೆಯೆಂಬ ವಿಷಯವು ಭಾಷ್ಯದಲ್ಲಿ ಹೇಳಲ್ಪಟ್ಟಿದೆ. ಪುನಃ ಅದನ್ನು ಅನುವ್ಯಾಖ್ಯಾನದಲ್ಲಿಯೂ ಏಕೆ ಹೇಳಬೇಕು? ಇದರ ಅರ್ಥವಿವರಣೆಯನ್ನು ಮಾಡುವ ಸುಧಾಗ್ರಂಥವನ್ನು ನೋಡಿದರೆ ಈ ಶ್ಲೋಕದ ಗಾಂಭೀರ್ಯವು ಎಷ್ಟು ಇದೆಯೆಂದು ತಿಳಿಯುತ್ತದೆ. ಶ್ರೀಸುಧೆಯಲ್ಲಿ ಈ ಶ್ಲೋಕವು ಭಾಮತಿಯ ಮತ್ತು ರಾಮಾನುಜ

ಭಾಷ್ಯದಲ್ಲಿರುವ ತಪ್ಪನ್ನು ತಿದ್ದಲಿಕ್ಕೆ ಹೊರಟಿದೆಯೆಂದು ವ್ಯಾಖ್ಯಾನ ಮಾಡುತ್ತಾರೆ. ಪರಬ್ರಹ್ಮನಿಗೆ ಜಗತ್ತಿನ ಜನ್ಮಾದಿಗಳೇ ಲಕ್ಷಣವೋ ಅಥವಾ ಜಗಜ್ಜನ್ಮಾದಿಕಾರಣತ್ವವು ಲಕ್ಷಣವೋ? ಜನ್ಮಾದಿಗಳು ಜಗತ್ತಿನಲ್ಲಿವೆ. ಪರಬ್ರಹ್ಮನಲ್ಲಿ ಅವುಗಳಿಲ್ಲ. ಅದರ ಲಕ್ಷಣವು ಅದರಲ್ಲಿರಬೇಕು. ಅದರಲ್ಲಿರದ ಧರ್ಮವು ಅದರ ಲಕ್ಷಣವು ಹೇಗಾಗುತ್ತದೆ. ಜನ್ಮಾದಿ ಕಾರಣತ್ವವು ಲಕ್ಷಣವೆಂದು ಹೇಳುವುದಾದರೆ ಲಕ್ಷಣವು ಪ್ರಸಿದ್ಧವಾಗಿರಬೇಕು. ಜನ್ಮಾದಿ ಕಾರಣತ್ವವು ಯಾರಲ್ಲಿ ಉಂಟೆಂದು ಯಾರಿಗೂ ಲೋಕದಲ್ಲಿ ಗೊತ್ತಾಗಲಿಲ್ಲ. ಈ ಶಂಕೆಯನ್ನು ಪರಿಹರಿಸುವುದಕ್ಕಾಗಿ ಜನ್ಮಾದಿಕಾರಣತ್ವವೇ ಲಕ್ಷಣ. ಈ ಲಕ್ಷಣವು ಶ್ರುತಿಪ್ರಸಿದ್ಧವಾದುದರಿಂದ ಜನ್ಮಾದಿಕಾರಣತ್ವವು ಬ್ರಹ್ಮಲಕ್ಷಣವೆಂದು ಹೇಳಬೇಕು. ಭಾಮತಿಕಾರರು ಜನ್ಮಾದಿಕಾರಣತ್ವವು ಅಪ್ರಸಿದ್ಧವೆಂಬ ಕಾರಣದಿಂದ ಅದನ್ನು ಲಕ್ಷಣವೆಂದು ಹೇಳದೆ ಜಗದುತ್ಪತ್ತಿಯನ್ನು ಬ್ರಹ್ಮಲಕ್ಷಣವೆಂದು ಹೇಳಿ ಅದು ಬ್ರಹ್ಮನಲ್ಲಿಲ್ಲವಾದರೂ ಸೂರ್ಯನ ದೇಶಾಂತರ ಪ್ರಾಪ್ತಿಯು ಸೂರ್ಯಗತಿಗೆ ಲಕ್ಷಣವಾಗುವಂತೆ ಜಗದುತ್ಪತ್ತಿಯು ಲಕ್ಷಣವಾಗುತ್ತದೆಂದು ಬರೆದಿದ್ದಾರೆ. ಈ ರೀತಿ ಭಾಮತಿಕಾರರು ಹೇಳಿದ್ದು ತಪ್ಪು. ಶ್ರುತಿಯಲ್ಲಿ ಜನ್ಮಾದಿಕಾರಣತ್ವವನ್ನು ಲಕ್ಷಣವನ್ನಾಗಿ ಹೇಳಿರುವಾಗ ಶ್ರುತ್ಯುಕ್ತಲಕ್ಷಣವನ್ನು ಬಿಟ್ಟುಬಿಡುವುದು ವೈದಿಕರಿಗೆ ಭೂಷಣವಲ್ಲ ವೆಂದು ಅನುವ್ಯಾಖ್ಯಾನದಲ್ಲಿ ಹೇಳಿ ಭಾಮತಿಯನ್ನು ನಿರಾಸ ಮಾಡಿದ್ದಾರೆ. ರಾಮಾನುಜಭಾಷ್ಯದಲ್ಲಿ ಜನ್ಮಕಾರಣತ್ವವು ಇರುವಾಗ ಸ್ಥಿತಿಕಾರಣತ್ವ ಸಂಹಾರ ಕಾರಣತ್ವವು ಇಲ್ಲ. ಆದುದರಿಂದ ಇವುಗಳು ಏಕಕಾಲದಲ್ಲಿ ಬ್ರಹ್ಮನಲ್ಲಿಲ್ಲದಿದ್ದರೂ ಭಿನ್ನಭಿನ್ನ ಕಾಲಗಳಲ್ಲಿ ಎಲ್ಲ ಲಕ್ಷಣಗಳೂ ಬ್ರಹ್ಮನಲ್ಲಿ ಅವಿರುದ್ಧಗಳೆಂದು ಹೇಳಿದ್ದಾರೆ. ಇದು ತಪ್ಪು ಮಾತು. ಕಾರಣತ್ವವು ಶಕ್ತಿರೂಪ. ಪರಮಾತ್ಮನ ಎಲ್ಲ ಶಕ್ತಿಗಳೂ ಎಲ್ಲಾ ಕಾಲದಲ್ಲಿಯೂ ಇವೆ. ಆದುದರಿಂದ ಶಕ್ತಿರೂಪವಾದ ಜನ್ಮಕಾರಣತ್ವವಿರುವಾಗ ಶಕ್ತಿರೂಪವಾದ ಸ್ಥಿತಿಲಯ ಕಾರಣತ್ವವೂ ಏಕೆ ಇರಬಾರದೆಂದು ಅನುವ್ಯಾಖ್ಯಾನದಲ್ಲಿ 'ಸದಾ' ಪದವನ್ನು ಪ್ರಯೋಗಿಸಿ ರಾಮಾನುಜಭಾಷ್ಯವು ತಪ್ಪೆಂದು ತಿಳಿಸಿದ್ದಾರೆ. ರಾಮಾನುಜಭಾಷ್ಯದಲ್ಲಿ ಇನ್ನೊಂದು ತಪ್ಪು ಮಾತನ್ನಾಡಿದ್ದಾರೆ. ಸೂತ್ರದಲ್ಲಿ ಜನ್ಮಕಾರಣತ್ವಾದ್ಯನೇಕ ಲಕ್ಷಣಗಳನ್ನು ಹೇಳಿದರೆ ಒಂದು ಲಕ್ಷಣವೇ ಸಾಕು ಅನೇಕ ಲಕ್ಷಣ ಏಕೆ ಎಂಬ ಶಂಕೆಯು ಬರುತ್ತದೆ. ಆದುದರಿಂದ ಸೂತ್ರಕಾರರು ಅನೇಕ ಲಕ್ಷಣವನ್ನು ಹೇಳದೆ ಜನ್ಮಕಾರಣತ್ವ ಸ್ಥಿತಿಕಾರಣತ್ವ ಲಯಕಾರಣತ್ವಗಳ ಸಮುದಾಯ ವನ್ನು ಲಕ್ಷಣವನ್ನಾಗಿ ವಿವಕ್ಷೆ ಮಾಡಿದ್ದಾರೆ. ಆದುದರಿಂದ ಜನ್ಮಾದಿ ಎಂದು ಸೂತ್ರದಲ್ಲಿ ಸಮುದಾಯೈಕವಚನವಿದೆ ಎಂದು ಬರೆದಿದ್ದಾರೆ. ಇದೂ ತಪ್ಪು. ಏಕೆಂದರೆ ಶ್ರುತಿಯಲ್ಲಿ ಹೇಳಿದ ಲಕ್ಷಣವನ್ನು ಸೂತ್ರಕಾರರು ಹೇಳುವುದು ಉಚಿತ. ಶ್ರುತಿಗಳಲ್ಲಿ ಎಲ್ಲಿಯೂ ಜನ್ಮಕಾರಣತ್ವಾದಿಗಳ ಸಮುದಾಯವನ್ನು ಲಕ್ಷಣವನ್ನಾಗಿ ಹೇಳಲಿಲ್ಲ. ಶ್ರುತಿಯಲ್ಲಿ ಸಮುದಾಯ ಪದವನ್ನಾಗಲೀ ತತ್ಸೂಚಕ ಪದವನ್ನಾಗಲೀ ಹೇಳಲಿಲ್ಲ. ಸೂತ್ರಕಾರರು ಜನ್ಮಾದಿಯೆಂದು ಏಕವಚನವನ್ನು ಪ್ರಯೋಗಿಸಿದರೂ ಅದು ಸಮುದಾಯಲಕ್ಷಣವೆಂಬ ಅಭಿಪ್ರಾಯದಿಂದಲ್ಲ. ಯಾರಿಗೆ ಛತ್ರಾದಿಯು ಉಂಟೋ ಅವನು ರಾಜನೆಂದು ರಾಜನಿಗೆ ಲಕ್ಷಣವನ್ನಾಗಿ ಹೇಳುವಾಗ ಏಕವಚನ

ಪ್ರಯೋಗಮಾಡಿದರೂ ಅಲ್ಲಿ ಛತ್ರವೂ ರಾಜನಿಗೆ ಪ್ರತ್ಯೇಕ ಲಕ್ಷಣವಾಗುವಂತೆ ಇಲ್ಲಿಯೂ ಪ್ರತ್ಯೇಕ ಲಕ್ಷಣವಾದರೂ ಏಕವಚನ ಕೂಡುತ್ತದೆ. ಆದರೆ ಒಂದು ಲಕ್ಷಣವು ಸಾಕಾಗಿರುವಾಗ ಅನೇಕ ಲಕ್ಷಣಗಳನ್ನು ಸೂತ್ರಕಾರರಾಗಲೀ ಶ್ರುತಿಯಲ್ಲಾಗಲೀ ಏಕೆ ಹೇಳಬೇಕು ಎಂಬ ಶಂಕೆಗೂ ಅನುವ್ಯಾಖ್ಯಾನದಲ್ಲಿ "ಆಸು ಶ್ರುತಿಷೂಕ್ತಾಃ" ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಜಿಜ್ಞಾಸಾವಿಧಾಯಕ ಶ್ರುತಿಗಳು ಬೇರೆಬೇರೆ ಉಪನಿಷತ್ತುಗಳಲ್ಲಿವೆ. ಅಲ್ಲಿ ಜಿಜ್ಞಾಸ್ಯವನ್ನು ಜೀವಭಿನ್ನನೆಂದು ತಿಳಿಯಲಿಕ್ಕೆ ಲಕ್ಷಣವು ಬೇಕು. ಜನ್ಮಾದಿಕಾರಣ ತ್ವರೂಪ ಎಂಟು ಲಕ್ಷಣಗಳನ್ನು ತಿಳಿದರೆ ಆ ಎಂಟು ಲಕ್ಷಣಗಳ ಪೈಕಿ ಯಾವುದಾದರೊಂದು ಲಕ್ಷಣವು ಆ ಜಿಜ್ಞಾಸಾವಿಧಾಯಕ ವಾಕ್ಯದಲ್ಲಿ ಇದ್ದೇ ಇರುತ್ತದೆ. ಆದುದರಿಂದ ಜಿಜ್ಞಾಸ್ಯದಲ್ಲಿ ಜೀವಭೇದಸಿದ್ಧಿಯಾಗದೇ ಇರುವುದಿಲ್ಲ. ಆದುದರಿಂದ ಅನೇಕ ಲಕ್ಷಣೋಕ್ತಿಗೆ ವೈಯರ್ಥ್ಯವು ಇಲ್ಲವೆಂದು ಸುಧಾದಲ್ಲಿ "ಆಸು ಶ್ರುತಿ ಷೂಕ್ತಾಃ" ಎಂಬುದರ ವಿವರಣವನ್ನು ಮಾಡಿದ್ದಾರೆ. ಈ ರೀತಿಯಾಗಿ ಅಪೂರ್ವಾರ್ಥವನ್ನು ಅನುವ್ಯಾಖ್ಯಾನದ ಶ್ಲೋಕವು ಹೇಳುತ್ತದೆಂದು ತಿಳಿವಳಿಕೆಯನ್ನು ಸುಧಾಕಾರರು ನಮಗೆ ತಿಳಿಸಿ ಮಹೋಪಕಾರ ಮಾಡಿದ್ದಾರೆ. ಇದೇ ರೀತಿ ಎಲ್ಲಾ ಅನುವ್ಯಾಖ್ಯಾನ ಶ್ಲೋಕಗಳಿಗೆ ಅಸಂಗತವಾಗಿ ತೋರತಕ್ಕದ್ದಕ್ಕೆ ಉತ್ತಮ ಸಂಗತಿಯನ್ನು ಹೇಳುವುದು, ಒಂದು ಶ್ಲೋಕದಿಂದ ಅನೇಕ ಶಂಕಾನಿವಾರಣೆಯಾಗುವುದನ್ನು ತೋರಿಸುವುದು ಇದೇ ಮೊದಲಾದ ಶ್ರೀ ಜಯತೀರ್ಥರ ಕೃತಿಯು ಅತ್ಯದ್ಭುತ. ದೇವತೆಗಳಿಂದಲೂ ಅತ್ಯಂತ ಅಭಿನಂದನೀಯ. "ನ ಭೂತೋ ನ ಭವಿಷ್ಯತಿ". "ಸುಧಾ ವಾ ಪಠನೀಯಾ ವಸುಧಾ ವಾ ಪಾಲನೀಯಾ" ಇದನ್ನು ಓದಿದಾಗ ಸಕಲರಾಜ್ಯದ ಆಧಿಪತ್ಯವು ಸಿಕ್ಕಿದಾಗ ಎಷ್ಟು ಆನಂದ ಆಗುತ್ತದೋ ಅಷ್ಟು ಆನಂದ ಆಗುತ್ತದೆ. ಮತ್ತು ಪಠಿಸುವವರಿಗೆ ವಿಶೇಷ ಸಂಪತ್ತು ಸಿಗುತ್ತದೆ. ಇದನ್ನು ತಿಳಿಸುವುದಕ್ಕಾಗಿ ಆದಿಯಲ್ಲಿ ಶ್ರೀಶಬ್ದವನ್ನು "ಭೂತಿರ್ಮಹಾಲಕ್ಷ್ಮೀಃ" ಎಂದು ಅಂತ್ಯದಲ್ಲಿಯೂ ಹೇಳಿದ್ದಾರೆ.

೪. ೯. ಶುಕಮುನಿಗಳಂತೆ ಸ್ತುತಿಸಲರಿಯೆ

ಶ್ರೀ ಪುರಂದರದಾಸರು 'ಕರುಣಿಸೋ ರಂಗ ಕರುಣಿಸೋ.....' –ಎಂಬ ಪದ್ಯದಲ್ಲಿ 'ಶುಕಮುನಿಗಳಂತೆ ಸ್ತುತಿಸಲರಿಯೇ ಎನ್ನುವುದರ ಮೂಲಕ ಶುಕಮುನಿಗಳು ಭಗವಂತನನ್ನು ವಿಶೇಷವಾಗಿ ಸ್ತುತಿಸಿರುವರೆಂದು ಸೂಚಿಸಿರುವರು. ಶುಕಮುನಿಗಳು ಭಾಗವತದಲ್ಲಿ ಭಗವಂತನನ್ನು ವಿಶೇಷವಾಗಿ ಸ್ತುತಿಸಿರುವರು.

ಭಾಗವತದ ಒಂದು ಮಾತನ್ನು ಪರಿಶೀಲಿಸಿದೆವೆಂದರೂ ಅವರ ಸ್ತುತಿಯ ಮಹತ್ತ್ವ ತಿಳಿದೀತು.

> ತ್ವಮಾದ್ಯಃ ಪುರುಷಃ ಸಾಕ್ಷಾದೀಶ್ವರಃ ಪ್ರಕೃತೇಃ ಪರಃ ।
> ಮಾಯಾಂ ವ್ಯುದಸ್ಯ ಚಿಚ್ಛಕ್ತ್ಯಾ ಕೈವಲ್ಯೇ ಸ್ಥಿತ ಆತ್ಮನಿ ॥ — ಭಾಗ. 1-7-22

ಅರ್ಜುನ ಶ್ರೀಕೃಷ್ಣನ ಸ್ತುತಿಯಾಗಿ ಸಲ್ಲಿಸಿರುವ ಪದ್ಯವಿದೆಂದು ಭಾಗವತದಲ್ಲಿ ಉಲ್ಲೇಖಿಸಲ್ಪಟ್ಟ ಇದರಲ್ಲಿ ಅನೇಕ ಪ್ರಮುಖ ತತ್ತ್ವಗಳು ಪ್ರತಿಪಾದಿಸಲ್ಪಟ್ಟಿವೆ. ಆದುದರಿಂದಲೇ ಶ್ರೀ ವಾದಿರಾಜರು ತಮ್ಮ ಯುಕ್ತಿಮಲ್ಲಿಕಾದಲ್ಲಿ ಇದನ್ನು ಕಮ್ಮಿ ಅಂದರೆ ಐವತ್ತು ಬಾರಿಯಾದರೂ ಉಲ್ಲೇಖಿಸಿರುವರು. ಅನೇಕ ಪ್ರಮೇಯಗಳ ಸಮರ್ಥನೆಗೆ ಈ ಪದ್ಯವನ್ನೇ ಉದಾಹರಿಸಿರುವರು. ಅವರಿಗೆ ಅನೇಕ ಪ್ರಮೇಯಗಳು ಇದರಲ್ಲಿ ಕಂಡಿವೆ.

'ತ್ವಮಾದ್ಯಃ ಪುರುಷಃ' –ಎಂಬ ಭಾಗದಲ್ಲಿ ಶ್ರೀವಿಷ್ಣುವಿನ ಸರ್ವೋತ್ತಮತ್ವವು ಸಮರ್ಥಿತವಾಗಿದೆ. ಅಲ್ಲದೆ, 'ಇವನು ಜ್ಯೇಷ್ಠಪುತ್ರ' ಅಂದಾಗ ಅನೇಕ ಪುತ್ರರಿದ್ದು, ಅವರಲ್ಲಿ ಇವನು ಜ್ಯೇಷ್ಠನು ಎಂದು ತಿಳಿಯುವಂತೆ, ಭಗವಂತನು ಆದ್ಯ ಪುರುಷನೆನಿಸಬೇಕಾದರೆ ಇತರ ಅನೇಕ ಪುರುಷರಿರುವರೆಂದು ಏಕಜೀವವಾದವು ನಿರಾಕೃತವಾದಂತಾಗುವುದು.

'ಮಾಯಾಂ ವ್ಯುದಸ್ಯ ಚಿಚ್ಛಕ್ತ್ಯಾ' ಎಂಬ ಭಾಗದಲ್ಲಿ ಭಗವಂತನು ತನ್ನ ಚಿದ್ರೂಪದಿಂದಲೇ ಅಜ್ಞಾನವನ್ನು ನಿರಾಸಮಾಡಿಕೊಂಡಿರುವನೆಂದು ಹೇಳಿರುವುದರ ಮೂಲಕ, ಜೀವಾತ್ಮರೂ ಚಿದ್ರೂಪರೇ ಆದರೂ ಅಂತಹ ಸ್ವರೂಪಾತ್ಮಕ ಚಿಚ್ಛಕ್ತಿಯಿಂದ ಅಜ್ಞಾನವನ್ನು ನಾಶಮಾಡಿಕೊಳ್ಳದ ಪ್ರಯುಕ್ತ ಭಗವಂತನಿಗೂ ಅವರಿಗೂ ಭೇದ ಉಂಟೆಂದು ಸೂಚಿಸಿದಂತಾಗುವುದು.

ಅಜ್ಞಾನವು ಶಾಸ್ತ್ರಜನ್ಯವಾದ ವೃತ್ತಿಜ್ಞಾನದಿಂದಲೇ ಹೋಗುವುದು ಹೊರತು ಸ್ವರೂಪಜ್ಞಾನದಿಂದ ಹೋಗುವುದಿಲ್ಲ ಎಂದು ವಾದಿಸುವವರಿದ್ದಾರೆ. ಇಲ್ಲಿ ಭಗವಂತನು ತನ್ನ ಸ್ವರೂಪಾತ್ಮಕವಾದ ಚಿಚ್ಛಕ್ತಿಯಿಂದಲೇ ಅಜ್ಞಾನವನ್ನು ಕಳೆದು ಕೊಂಡಿರುವನೆಂದು ಹೇಳಿರುವ ಪ್ರಯುಕ್ತ ಆ ವಾದವನ್ನು ನಿರಾಕರಿಸಿದಂತಾಗಿದೆ.

ಭಗವಂತನು ನಮಗೆ ಈಶ್ವರನು. ಸ್ವಾಮಿಯು– ಸ್ವಾಮಿ ಆದವನಿಗೂ ಅವನ ಸ್ವಾಮ್ಯಕ್ಕೊಳಗಾದ ಪ್ರಪಂಚಕ್ಕೂ ನೇರವಾದ ಸಂಪರ್ಕ ಇರಬೇಕೆಂದಿಲ್ಲ. ನಮ್ಮ ದೇಶದ ಮಂತ್ರಿ, ಮುಖ್ಯಮಂತ್ರಿ ಮುಂತಾದವರು ನಮಗೆ ಒಡೆಯರಾದರೂ ನಮಗೆ ಅವರ ನೇರ ಸಂಪರ್ಕ ಇಲ್ಲ ತಾನೇ? ಅಂತೆಯೇ ಭಗವಂತನು ತತ್ತ್ವಾಭಿಮಾನಿ ದೇವತೆಗಳೇ ಮುಂತಾದವರ ಮೂಲಕ ನಮಗೆ ಒಡೆಯನಾಗಿರುವುದೇ ಹೊರತು ಸಾಕ್ಷಾತ್ ನಮಗೆ ಒಡೆಯನಲ್ಲ. ಅವನ ಸಾಕ್ಷಾತ್ ನಿಯಂತ್ರಣಕ್ಕೊಳಗಾಗಿ ನಾವು ಇಲ್ಲ– ಎಂಬುದನ್ನು 'ಸಾಕ್ಷಾದೀಶ್ವರಃ' ಎಂಬ ಮಾತಿನಿಂದ ನಿರಾಕರಿಸಲಾಗಿದೆ. ಭಗವಂತನು ಪ್ರತಿಯೊಬ್ಬರ ಶರೀರದಲ್ಲೂ ಇದ್ದು ನೇರವಾಗಿ ನಮ್ಮನ್ನು ನಿಯಂತ್ರಿಸು ತ್ತಿದ್ದಾನೆ. ತತ್ತ್ವಾಭಿಮಾನಿ ದೇವತೆಗಳೇ ಮೊದಲಾದವರ ಮೂಲಕವೂ ನಿಯಮಿಸುತ್ತಿದ್ದಾನೆ.

'ಪ್ರಕೃತೇಃ ಪರಃ' –ಪ್ರಕೃತಿಗಿಂತಲೂ ಉತ್ತಮನಾಗಿರುವವನು ಎಂಬ ವಿಶೇಷಣ ದಿಂದ, ಪ್ರಕೃತಿಯ ಸಂಪರ್ಕ ಪ್ರಯುಕ್ತವಾದ ದೋಷಗಳಿಂದ ದೂರನಾಗಿರುವವನು ಎಂದು ಹೇಳಿದಂತಾಗುವುದು. ಅಲ್ಲದೆ, ಪ್ರಕೃತ್ಯಾತ್ಮಕವಾದ ಜಗತ್ತು ಸತ್ಯವಾಗಿದ್ದು

ಅದಕ್ಕಿಂತಲೂ ಉತ್ತಮನಾಗಿರುವವನು ಎಂದು ಸೂಚಿತವಾಗುವುದು. ಮಿಥ್ಯಾ ಆಗಿದ್ದರೆ, ಅಂತಹ ಜಗತ್ತಿಗಿಂತ ಉತ್ತಮತ್ವವನ್ನು ಹೇಳುವ ಆವಶ್ಯಕತೆಯೇ ಇಲ್ಲ ತಾನೇ?

ಜಡ ಶರೀರಾದಿಗಳ ಮಿಶ್ರಣವಿಲ್ಲದ ಪ್ರಯುಕ್ತ 'ಕೈವಲ್ಯ' ಎಂದೆನಿಸಿರುವ ತನ್ನ ಸ್ವರೂಪದಲ್ಲಿಯೇ ಭಗವಂತನು ಸ್ಥಿತವಾಗಿರುವನು. 'ಕೈವಲ್ಯೇ ಸ್ಥಿತ ಆತ್ಮನಿ' ಎಂಬ ಮಾತಿನಿಂದಾಗಿ ಸತ್ಸಿದ್ಧಾಂತದಲ್ಲಿ ಪ್ರತಿಪಾದಿತವಾದ ವಿಶೇಷ ಎಂಬ ಪದಾರ್ಥವನ್ನು ಸೂಚಿಸಿಕೊಟ್ಟಂತಾಗುವುದು. ಆಶ್ರಯವಾದ ಪದಾರ್ಥಕ್ಕೂ ಅದನ್ನು ಆಶ್ರಯಿಸಿಕೊಂಡು ಇರುವ ಪದಾರ್ಥಕ್ಕೂ ಭೇದ ಇರಬೇಕೆಂಬುದು ಸಾಮಾನ್ಯ ನಿಯಮ. ಭಗವಂತನಾದರೂ ತನ್ನ ಸ್ವರೂಪದಲ್ಲಿಯೇ ಇದ್ದಾನೆ –ಎಂದರೆ ಇದು ಹೇಗೆ ಸಾಧ್ಯ? ಅವನ ಸ್ವರೂಪಕ್ಕೂ ಅವನಿಗೂ ಭೇದವಿಲ್ಲ ತಾನೆ? ಹೀಗಿರುವಾಗ ಅವನ ಸ್ವರೂಪ ಆಶ್ರಯ, ಅವನು ಆಶ್ರಯಿಸುವುದಾದರೂ ಹೇಗೆ? ಎಂಬ ಸಂದೇಹ ಬರುವುದು ಸಹಜ. ಇದನ್ನು ಸತ್ಸಿದ್ಧಾಂತದಲ್ಲಿ ಪ್ರತಿಪಾದಿಸಲಾದ 'ಅಭೇದೇಽಪಿ ಭೇದಕಾರ್ಯಕಾರೀ ವಿಶೇಷಃ' –ಭೇದವಿಲ್ಲದ ಪದಾರ್ಥದಲ್ಲೂ ಭೇದದ ವ್ಯವಹಾರವನ್ನು ನಿರ್ವಹಿಸುವ ವಿಶೇಷವನ್ನು ಒಪ್ಪಿಕೊಂಡೇ ಪರಿಹರಿಸಬೇಕಾಗಿದೆ. ಆದ್ದರಿಂದ ತನ್ನ ಸ್ವರೂಪದಲ್ಲಿ ಸ್ಥಿತನಾಗಿರುವನೆಂಬ ಭಾಗವತದ ಮಾತೇ ಆ ವ್ಯವಹಾರದ ನಿರ್ವಾಹಕವಾಗಿ ವಿಶೇಷವನ್ನು ಸೂಚ್ಯವಾಗಿ ಸಂದೇಶಿಸುವುದು.

ಹೀಗೆ ಈ ಶ್ಲೋಕದ ಒಂದೊಂದು ವಿಶೇಷಣವನ್ನು ವಿಶ್ಲೇಷಿಸಿಕೊಂಡರೂ ಸಿದ್ಧಾಂತದ ಬೇರೆ ಬೇರೆ ಪ್ರಮೇಯವನ್ನು ಸಾಕ್ಷಾತ್ ಅಥವಾ ಪರಂಪರಯಾ ಸಾಧಿಸುತ್ತಿರುವುದು ಕಂಡುಬರುವುದು.

ಭಾಗವತದ ಪ್ರತಿಯೊಂದು ಶ್ಲೋಕವೂ ಹೀಗೆ ವಿಶೇಷವಾಗಿ ಭಗವಂತನ ಮಹಿಮೆಯನ್ನು, ಗುಣಗಳನ್ನು ಪ್ರತಿಪಾದಿಸುತ್ತಿರುವುದರಿಂದಲೇ ಪುರಂದರದಾಸರು 'ಶುಕಮುನಿಗಳಂತೆ ಸ್ತುತಿಸಲರಿಯೇ.....' ಎಂದು ನಿವೇದಿಸಿಕೊಂಡಿರುವರು.

●

೪. ೧೦. ಹನೂಮಚ್ಚರಿತ್ರೆಯ ಆಂತರಿಕಾರ್ಥ

ಶ್ರೀಮದ್ರಾಮಾಯಣದಲ್ಲಿ ಹನುಮಂತನ ಪಾತ್ರ ಹಿರಿಯದಾದದ್ದು. ಲೋಕ ದೃಷ್ಟಿಯಿಂದ ಶ್ರೀರಾಮನಿಂದ ಆಗಲಿ ಲಂಕೆಯಲ್ಲಿದ್ದ ಸೀತಾದೇವಿಗೆ ಶ್ರೀರಾಮನ ಸಂದೇಶವನ್ನು ತಲುಪಿಸಿ, ಮುಂದೆ ಸಂಭವಿಸಿದ ಯುದ್ಧದಲ್ಲಿ ಪ್ರಧಾನ ಪಾತ್ರ ವಹಿಸಿದ್ದರಿಂದಾಗಿ ಸೀತಾದೇವಿಯನ್ನು ಶ್ರೀರಾಮನ ಜೊತೆಗೂಡಿಸಿದ ಕೀರ್ತಿ ಹನುಮಂತನಿಗೆ ಸಲ್ಲುತ್ತದೆ. ಹನುಮಂತನ ಭಗವದ್ಭಕ್ತಿ, ಧೈರ್ಯ, ಸಾಮರ್ಥ್ಯ ಮೊದಲಾದ ಮಹಾಗುಣಗಳನ್ನು ಎತ್ತಿ ತೋರಿಸುವ ಈ ಮಹಿಮೆಯನ್ನೇ ಬಳಿತ್ಥಾ ಸೂಕ್ತವೂ ಹನುಮಂತಾವತಾರದ ಪ್ರಸ್ತಾಪದಲ್ಲಿ ಉಲ್ಲೇಖಿಸಿದೆ. (....ಸಾಧತೇ ಮತಿರ್ಋತಸ್ಯ ಧೇನಾ ಅನಯಂತ ಸಸ್ರುತಃ ।)

ರಾಮಾಯಣದಲ್ಲಿ ಬರುವ ಹನುಮಂತನ ಈ ಮಹಿಮೆ ಐತಿಹಾಸಿಕ ವಾಗಿರುವುದರ ಜೊತೆಗೆ ಆಂತರಿಕಾರ್ಥವುಳ್ಳದ್ದೂ ಆಗಿದೆ. ಮುಂದೆ ತಾಳಲಿರುವ ಶ್ರೀಮನ್ಮಧ್ವಾವತಾರದ ಪ್ರಮುಖ ಸಾಧನೆಯನ್ನು ಈ ಘಟನೆ ಸಾಂಕೇತಿಕವಾಗಿ ಬೋಧಿಸುತ್ತಿದೆ.

ಹನುಮಂತ ಸಮುದ್ರ ಹಾರಿ ಸೀತಾದೇವಿಯನ್ನು ಶ್ರೀರಾಮನಿಗೆ ದೊರಕಿಸಿ ಕೊಟ್ಟ. ಅಂತೆಯೇ ಶ್ರೀಮದಾಚಾರ್ಯರು ಶಬ್ದಸಾಗರವಾದ ವೇದವನ್ನು ಉಪ ಕ್ರಮಾದಿ ತಾತ್ಪರ್ಯ ನಿರ್ಣಾಯಕಲಿಂಗಗಳಿಂದ ದಾಟಿ ಅರ್ಥಾತ್ ವಿಮರ್ಶಿಸಿ ಭಗವದ್ಭಕ್ತಿಯನ್ನು ಸಜ್ಜೀವಿಗಳಿಗೆ ಒದಗಿಸಿಕೊಟ್ಟಿರುವರು. ಗೃಹಸ್ಥನಿಗೆ ಗೃಹಿಣೀ ಇಲ್ಲೆಂದರೆ ಉಳಿದೆಲ್ಲ ಭೋಗ–ಭಾಗ್ಯಗಳಿದ್ದರೂ ವ್ಯರ್ಥವಾದಂತೆ, ಸಜ್ಜೀವಿಗಳಿಗೆ ಭಗವದ್ಭಕ್ತಿಯಿಲ್ಲದೆ ಉಳಿದ ಆಚಾರವಿಚಾರಗಳು ಎಷ್ಟೇ ಇದ್ದರೂ ಅವೆಲ್ಲ ವ್ಯರ್ಥ. 'ಕಿಂ ಸ್ಯಾತ್ ವರ್ಣಾಶ್ರಮಾಚಾರೈಃ ಕಿಂ ದಾನೈಃ ಕಿಂ ತಪಃ ಶ್ರುತೈಃ....? ಎಂಬುದಾಗಿ ಭಕ್ತಿಯಿಲ್ಲದ ದಾನಾದಿ ಸಾಧನೆಗಳೆಲ್ಲ ವ್ಯರ್ಥವೆಂದು ಸಾರಲಾಗಿದೆ. ಹೀಗೆ ಗಾರ್ಹಸ್ಥ್ಯಕ್ಕೆ ಅತ್ಯಾವಶ್ಯಕವೆನಿಸಿದ ಗೃಹಿಣಿಯನ್ನು (ಸೀತಾದೇವಿ) ಶ್ರೀರಾಮನಿಗೆ ಹನುಮಂತ ದೊರಕಿಸಿದ್ದರೆ, ಸಜ್ಜೀವಿಗಳ ಬದುಕಿನ ಸಾರ್ಥಕ್ಯಕ್ಕೆ ಆವಶ್ಯಕವಾದ ಭಗವದ್ಭಕ್ತಿಯನ್ನು ಶ್ರೀಮದಾಚಾರ್ಯರು ಹೊಂದಿಸಿರುವರು.

ಸೀತಾದೇವಿ ಶ್ರೀರಾಮನಿಂದ ನಿತ್ಯಾವಿಯೋಗಿನೀ. ಅಂತಹ ಸೀತಾದೇವಿಯನ್ನು ರಾವಣ ಸಂನ್ಯಾಸವೇಷದಲ್ಲಿ ಬಂದು ಅಪಹರಿಸಿಕೊಂಡು ಹೋದ (ಲೋಕದ ದೃಷ್ಟಿಯಲ್ಲಿ). ಸಜ್ಜೀವಿಗಳ ಸ್ವಭಾವಸಿದ್ಧವಾದ ಭಗವದ್ಭಕ್ತಿಯನ್ನು ಸಜ್ಜೀವಿಗಳಿಂದ ಬೇರ್ಪಡಿಸುವುದಕ್ಕಾಗಿ 'ಮಣಿಮಾನ್' ದೈತ್ಯ ಸಂನ್ಯಾಸವೇಷದಲ್ಲಿ ಬಂದು, ಬ್ರಹ್ಮ ನಿರ್ಗುಣ–ನಿರಾಕಾರ ಅಂತೆಲ್ಲ ತನ್ನದೇ ಆದ ವ್ಯಾಖ್ಯಾನದಿಂದ ಭಗವದ್ಭಕ್ತಿ ಮಸುಕಾಗುವಂತೆ ಮಾಡಿದ. ಭಗವಂತನ ಗುಣಪೂರ್ಣತ್ವದಲ್ಲೇ ವೇದಕ್ಕೆ ತಾತ್ಪರ್ಯ ಎಂದು ಬೋಧಿಸಿದ ಶ್ರೀಮದಾಚಾರ್ಯರು ಸಜ್ಜೀವಿಗಳಲ್ಲಿ ಭಗವದ್ಭಕ್ತಿ ಚಿಗುರುವಂತೆ ಮಾಡಿರುವರು.

ಮೇಲ್ನೋಟಕ್ಕೆ ಶಂಕರಾಚಾರ್ಯರೂ ಭಕ್ತಿಗೆ ಪ್ರಾಶಸ್ತ್ಯವನ್ನು ನೀಡಿದಂತಿದೆ. 'ಭಜ ಗೋವಿಂದಂ....' ಎಂದು ಸಂದೇಶಿಸಿರುವರು. ಅಲ್ಲದೆ 'ವಿವೇಕಚೂಡಾಮಣಿ' ಯಲ್ಲಿ 'ಮೋಕ್ಷಸಾಧನಸಾಮಗ್ರ್ಯಾಂ ಭಕ್ತಿರೇವ ಗರೀಯಸೀ' (ಮೋಕ್ಷಸಾಧನಗಳಲ್ಲೆಲ್ಲ ಭಕ್ತಿಯೇ ಶ್ರೇಷ್ಠವಾದುದು) ಎಂದು ಬೋಧಿಸಿರುವರು. ಆದರೆ ಅವರ ಪ್ರಕಾರ ಭಕ್ತಿ ವಿಲಕ್ಷಣವಾದುದು. ಪರಿಭಾಷಿಕವಾದುದು. ವ್ಯಾಖ್ಯಾನಕಾರರು ಇದನ್ನು ಹೀಗೆ ಸ್ಪಷ್ಟೀಕರಿಸಿರುವರು –'ನಿರ್ಗುಣನಿರಾಕಾರಾತ್ಮಾನುಸಂಧಾನಮೇವ ಭಕ್ತಿಃ' (ನಿರ್ಗುಣ ನಿರಾಕಾರ ಸ್ವರೂಪಿಯಾದ ಬ್ರಹ್ಮನೇ ತಾನು ಎಂದು ಭಾವಿಸುವಿಕೆ) ಶ್ರೀಮದಾಚಾರ್ಯರು ಸಂದೇಶಿಸಿರುವಂತೆ ಮಾಹಾತ್ಮ್ಯಜ್ಞಾನಪೂರ್ವಕವಾದ ಸುದೃಢ ಸ್ನೇಹಾತ್ಮಕವಾದುದಲ್ಲ. ಶಂಕರಾಚಾರ್ಯರು ಗ್ರಂಥಾರಂಭದ ಮಂಗಲಾಚರಣೆಯಲ್ಲಿ ಸಲ್ಲಿಸಿರುವ ನಮಸ್ಕಾರಕ್ಕೆ 'ನಾನೂ ನೀನೂ ಒಂದೇ' ಎಂಬ ಐಕ್ಯಾನುಸಂಧಾನ

ಅರ್ಥವೇ ಹೊರತು ಗೌರವ ಬುದ್ಧಿಪೂರ್ವಕವಾದುದಲ್ಲ ಎಂಬುದಾಗಿ ವ್ಯಾಖ್ಯಾನ ಕಾರರು ವ್ಯಾಖ್ಯಾನಿಸಿರುವರು.

ಶಂಕರ ಮತಾನುಯಾಯಿಗಳಲ್ಲಿ ಕೆಲವರು ವಾಸ್ತವಿಕ ಭಕ್ತಿವುಳ್ಳವರಾಗಿದ್ದರೆ ಅದಕ್ಕೆ ಕಾರಣ ಜನ್ಮಾಂತರದ ಸಂಸ್ಕಾರ. ಆ ಸಂಸ್ಕಾರ ಪ್ರಬಲವಾಗಿರುವ ಪ್ರಯುಕ್ತ ಅದ್ವೈತ ಶಾಸ್ತ್ರವನ್ನು ಎಷ್ಟು ಅಭ್ಯಸಿಸಿದರೂ, ಅದು ಭಕ್ತಿಯನ್ನು ಪೂರ್ಣವಾಗಿ ನಾಶಪಡಿಸುವುದಿಲ್ಲ. ಹೀಗೆ ಭಾಗವತ ವೈರಾಗ್ಯವನ್ನು ಬೋಧಿಸುತ್ತಿದ್ದರೂ, ಅದನ್ನು ಅಭ್ಯಸಿಸುವವರು ಜನ್ಮಾಂತರಗಳ ಸಂಸ್ಕಾರದಿಂದಾಗಿ ವಿಷಯಾಸಕ್ತಿಯಿಂದ ಪೂರ್ಣವಾಗಿ ಬಿಡುಗಡೆ ಹೊಂದಲಾರರೋ ಅಂತೆ.

ಒಟ್ಟಲ್ಲಿ ಶಂಕರಾಚಾರ್ಯರು ವೇದ ಪ್ರತಿಪಾದಿಸುತ್ತಿರುವ ಭಗವದ್ಗುಣಗಳೆಲ್ಲ ಅಸತ್ಯವಾದವುಗಳೆಂದು ಪ್ರತಿಪಾದಿಸುವುದರ ಮೂಲಕ ಭಗವಂತನ ಬಗ್ಗೆ ಗೌರವ ಬುದ್ಧಿ ಅಳಿಯುವಂತೆ ಮಾಡಿ ಭಗವದ್ಭಕ್ತಿಯನ್ನು ಸಜ್ಜನರಿಂದ ಅಪಹರಿಸಿ, ಅಡಗಿಸಿರುವರು. ಅದನ್ನು ಪುನಃ ಬೆಳಕಿಗೆ ತಂದವರು ಶ್ರೀಮದಾಚಾರ್ಯರು.

ಸಮುದ್ರಲಂಘನೆಯಲ್ಲಿ ತೊಡಗಿರುವ ಹನುಮಂತನನ್ನು 'ಮೈನಾಕ' ಸ್ವಾಗತಿಸಿ ಸತ್ಕರಿಸಿರುವನು. ಅಂತೆಯೇ ವೇದಾರ್ಥ ವಿಚಾರದಲ್ಲಿ ತೊಡಗಿರುವ ಶ್ರೀಮದಾ ಚಾರ್ಯರಿಗೆ ಜಯಸಿಂಹರಾಜ ಭೇಟಿಯಾಗಿ ವೇದವಾಕ್ಯಾರ್ಥ ವಿಚಾರ ನಡೆಸಲು ಅನುಕೂಲಿಸಿರುವನು.

ಮುಂದೆ ಸಾಗಿದ ಹನುಮಂತನನ್ನು ನಾಗಜನನೀ ಕದ್ರೂ ನುಂಗಿರುವಳು. ಆದರೆ ಬಲಿಷ್ಠನಾದ ಹನುಮಂತ ಉಪಾಯದಿಂದ ಹೊರಬಂದ. ಹಾಗೆ ಶ್ರೀಮದಾ ಚಾರ್ಯರ ರೂಪಾಂತರದಂತಿರುವ '....ರೂಪಮನ್ಯದಿವ ಧನ್ಯಮಾತ್ಮನಃ' (ಸುಮಧ್ವ ವಿಜಯ 9-11) ಅವರ ಗ್ರಂಥಸಮೂಹವನ್ನು ಪದ್ಮತೀರ್ಥನು ಅಪಹರಿಸಿದನು. ಸ್ವಸಾಮರ್ಥ್ಯದಿಂದ ಶ್ರೀಮದಾಚಾರ್ಯರು ಅದನ್ನು ವಶೀಕರಿಸಿಕೊಂಡರೂ ಕೂಡಾ.

ಮೇಲೆ ಹಾರುವವರನ್ನು ನೆರಳಿನ ಮೂಲಕ ತನ್ನೆಡೆಗೆ ಸೆಳೆದುಕೊಳ್ಳುವ ಸಿಂಹಿಕಾ ಹನುಮಂತನನ್ನೂ ಸೆಳೆದುಕೊಂಡಿರುವಳು. ಹನುಮಂತ ಆಕೆಯನ್ನು ಅನಾಯಾಸವಾಗಿ ಸಂಹರಿಸಿರುವನು. 'ಎಲ್ಲರೂ ಒಂದೇ' ಎಂಬುದಾಗಿ ಮೇಲ್ನೋಟಕ್ಕೆ ಎಲ್ಲರಿಗೂ ಆಕರ್ಷಕವಾಗಿ ಕಾಣುವ 'ಐಕ್ಯವಾದ' ಅಂತಹ ಸಿಂಹಿಕೆ. ಶ್ರೀಮದಾ ಚಾರ್ಯರು 'ಭೇದವಾದ' ಹಾಗೂ 'ತಾರತಮ್ಯವಾದ'ವನ್ನು ಪ್ರತಿಪಾದಿಸಿ ಐಕ್ಯವಾದವನ್ನು ನಿರಾಕರಿಸಿರುವರು.

ಹೀಗೆ ಅನೇಕ ವಿಘ್ನಗಳನ್ನು ಅನಾಯಾಸವಾಗಿ ದಾಟಿಕೊಂಡು ಲಂಕೆಗೆ ಪ್ರವೇಶಿಸಿದ ಹನುಮಂತ ಸೀತಾನ್ವೇಷಣೆಯಲ್ಲಿ ತೊಡಗಿರುವನು. ಯಾಕೆ? ಸರ್ವಜ್ಞ ನಾದ ಹನುಮಂತನಿಗೆ ಸೀತಾದೇವಿ ಅಶೋಕವನದಲ್ಲಿದ್ದಾಳೆಂಬುದು ತಿಳಿಯದುದಲ್ಲ. ಮತ್ತೆ ಯಾವುದೇ ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂದರೆ, ಮೊದಲು ಶ್ರವಣ, ಮನನ, ವಿಚಾರಾದಿಗಳನ್ನು ನಡೆಸಲೇಬೇಕು. (ಆತ್ಮಾವಾರೇ ದ್ರಷ್ಟವ್ಯೋ ಶ್ರೋತವ್ಯೋ

ಮಂತವ್ಯೋ ನಿದಿಧ್ಯಾಸಿತವ್ಯಃ) ಎಂಬ ಪ್ರಮೇಯವನ್ನು ಸಾಂಕೇತಿಕವಾಗಿ ಸಂದೇಶಿಸುವುದಕ್ಕಾಗಿ, ಮೊದಲು ಸೀತೆಯನ್ನು ಹುಡುಕಿದಂತೆ ಮಾಡಿ, ಆಮೇಲೆ ಇವಳೇ ಸೀತೆ ಹೌದೇ ಅಲ್ಲವೇ ಎಂದು ವಿಚಾರಿಸಿದಂತೆ ಮಾಡಿ, ಬಳಿಕ ಈಕೆಯೇ ಸೀತೆ ಎಂದು ನಿರ್ಧರಿಸಿರುವರು. ಶ್ರೀಮದಾಚಾರ್ಯರು ಶಾಸ್ತ್ರ ವಿಷಯದಲ್ಲಿ ವಿಚಾರಾದಿಗಳನ್ನು ನಡೆಸಿದ್ದಾರೆಂದಾಕ್ಷಣ –ಅವರಿಗೆ ಮೊದಲು ಸಿದ್ಧಾಂತ ನಿಶ್ಚಿತವಾಗಿಲ್ಲ ಎಂದರ್ಥವಲ್ಲ. ಉಪನಿಷತ್ತಿನ ಸಂದೇಶಾನುಸಾರವಾಗಿ ಉಪಕ್ರಮಾದಿಲಿಂಗಗಳ ಮೂಲಕ ಶ್ರುತಿ ತಾತ್ಪರ್ಯವನ್ನು ನಿರ್ಣಯಿಸಿರುತ್ತಾರಷ್ಟೇ.

ಮುಂದೆ ಹನುಮಂತ ಬರೇ ತನ್ನ ಬಾಲದ ಬೆಂಕಿಯಿಂದ ಇಡೀ ಲಂಕೆಯನ್ನು ಸುಟ್ಟ. ಶ್ರೀಮದಾಚಾರ್ಯರಾದರೂ ಬರೇ ಒಂದು ಪುಟ್ಟ ವಾಕ್ಯದಿಂದ ಇಡೀ ಅದ್ವೈತ ಶಾಸ್ತ್ರವನ್ನೇ ಸುಟ್ಟಿರುವರು. ಆ ವಾಕ್ಯ ಹೀಗಿದೆ –'ಅಜ್ಞಾನಾಸಂಭವಾದೇವ ತನ್ಮತಮಖಿಲಮಪಾಕೃತಮ್' (ಭಾವಾತ್ಮಕವಾದ ಅಜ್ಞಾನವನ್ನು –ಅವಿದ್ಯೆ ಇತ್ಯಾದಿಯಾಗಿಯೂ ವ್ಯವಹರಿಸಲ್ಪಡುವಂತಹದ್ದನ್ನು –ಅದ್ವೈತಮತದಲ್ಲಿ ಕೂಡಿಸಲಾಗದ ಪ್ರಯುಕ್ತ ಅಂತಹ ಅಜ್ಞಾನದ ಮೇಲೆ ಆಧಾರಿತವಾಗಿರುವ ಅದ್ವೈತಮತ ಕುಸಿದುಬಿದ್ದಂತೆ.)

ಬಳಿಕ ಸಮುದ್ರಕ್ಕೆ ಸೇತುವೆ ಕಟ್ಟಿದ ಬಳಿಕ ನಡೆದ ಯುದ್ಧದಲ್ಲಿ ಇಂದ್ರಜಿತ್ ಮೋಹನಾಸ್ತ್ರವನ್ನು ಪ್ರಯೋಗಿಸಿ ಕಪಿಗಳನ್ನೆಲ್ಲ ಮೂರ್ಛಿತರನ್ನಾಗಿಸಿರುವನು. ಆಗ ಗಂಧಮಾದನ ಪರ್ವತದಿಂದ ಮೃತಸಂಜೀವಿನಿಯನ್ನು ತಂದ ಹನುಮಂತ ಕಪಿಗಳಿಗೆ ಚೇತರಿಕೆಯನ್ನು ತಂದುಕೊಟ್ಟಿರುವನು. ಶ್ರೀಮದಾಚಾರ್ಯರ ಅವತಾರದ ಮುಂಚೆ ವೇದವಾಕ್ಯಗಳೂ ಮೂರ್ಛಿತಗಳಾಗಿದ್ದವು. ಭಗವಂತನ ಗುಣಗಾನ ಮಾಡುತ್ತಿರುವ ವೇದಭಾಗವೆಲ್ಲ ಅಸತ್ಯಗಳಾದ ಭಗವದ್ಗುಣಗಳನ್ನು ಪ್ರತಿಪಾದಿಸುತ್ತಿದ್ದು ಅತತ್ತ್ವಾವೇದಕಗಳಾಗಿವೆ ಎಂದು ಸಾರುತ್ತಿರುವ ಮಾಯಾವಾದದ ಪ್ರಕಾರ ವೇದ ಅಪ್ರಮಾಣ. ಅಪ್ರಮಾಣವಾದ ವೇದ ಇದ್ದರೂ ಸತ್ತಂತೆ. ಇಂತಹ ವೇದವಾಕ್ಯಗಳಿಗೆ ಪ್ರಾಮಾಣ್ಯವನ್ನು ಸಮರ್ಥಿಸಿ ಜೀವಂತಿಕೆಯನ್ನು ತಂದುಕೊಟ್ಟವರು ಶ್ರೀಮದಾಚಾರ್ಯರು. ವೇದಪ್ರಾಮಾಣ್ಯ ಸಮರ್ಥನೆಗಾಗಿ ಬಳಸಿಕೊಂಡ ಮೃತಸಂಜೀವಿನಿಯೆಂದರೆ ಭೇದಪ್ರತಿನಿಧಿಯಾದ ವಿಶೇಷ. ಇದು ಇಲ್ಲದ ಹೊರತು ಕೆಲವೆಡೆ (ಆನಂದೋ ಬ್ರಹ್ಮೇತಿ ವ್ಯಜಾನಾತ್) ಭಗವದ್ಗುಣಗಳು ಭಗವತ್ಸ್ವರೂಪವೆಂದೂ ಇನ್ನು ಕೆಲವೆಡೆ (ಆನಂದಂ ಬ್ರಹ್ಮಣೋ ವಿದ್ವಾನ್) ಭಗವದ್ಗುಣಗಳು ಭಗವತ್ಸಂಬಂಧಿಗಳೆಂದು ಸಾರುತ್ತಿರುವ ವೇದವಾಕ್ಯಗಳಿಗೆ ಪ್ರಾಮಾಣ್ಯವನ್ನು ಕೂಡಿಸಲೇ ಆಗಲಾರದು.

ಈ ವಿಶೇಷವಾದರೂ ಮೃತಸಂಜೀವಿನೀ ಗಂಧಮಾದನವನ್ನು ಬಿಟ್ಟು ಬೇರೆ ಪರ್ವತಗಳಲ್ಲಿ ದೊರಕಲಾರದಂತೆ, 'ಬ್ರಹ್ಮತರ್ಕ'ವನ್ನು ಬಿಟ್ಟು ಉಳಿದೆಲ್ಲೂ ಕಾಣಸಿಗಲಾರದು. ಇಂತಹ ಬ್ರಹ್ಮತರ್ಕವನ್ನು ಶೋಧಿಸಿ ಪಡೆದಿರುವ ವಿಶೇಷದ ಮೂಲಕ ವೇದವಾಕ್ಯಗಳಿಗೆಲ್ಲ ಪ್ರಾಮಾಣ್ಯವನ್ನು ಸಮರ್ಥಿಸಿರುವ ಶ್ರೀಮದಾಚಾರ್ಯರು

ವೇದವಾಕ್ಯಗಳನ್ನೆಲ್ಲ ಬದುಕಿಸಿದ್ದಾರೆ. ಅಂತಹ ವೇದವಾಕ್ಯಗಳನ್ನು ವಿಚಾರಿಸಿ ಭಗವದ್ಭಕ್ತಿಯನ್ನು ಸಜ್ಜೀವಿಗಳಿಗೆ ತಲುಪಿಸಿರುವರು.

ಹೀಗೆ ಹನುಮಂತನ ಚರಿತೆಯ ಮುಖ್ಯ ಘಟನೆಗಳಿಗೆ ಹೋಲುವ ಶ್ರೀಮದಾಚಾರ್ಯರ ಚರಿತೆ ಹನುಮಚ್ಚರಿತೆಯ ಅಧ್ಯಾತ್ಮಿಕಾರ್ಥ ಎಂದು ಭಾವಿಸಬಹುದು.

ಶ್ರೀಮದ್ವಾದಿರಾಜರು, ಶ್ರೀ ಮಧ್ವರು ಶೋಧಿಸಿದ ವಿಶೇಷಕ್ಕೆ ಹನುಮಂತ ಶೋಧಿಸಿದ ಮೃತ ಸಂಜೀವಿನಿಯ ರೂಪಕವನ್ನು ನೀಡಿರುವುದರ ಮೂಲಕ ಈ ಆಂತರಿಕಾರ್ಥವನ್ನು ಸೂಚಿಸಿರುವರು.

●

೪. ೧೧. ಎಂಟು ವಿಶೇಷಣಗಳಿಗೂ ಅನ್ವಯ

'.....ಗ್ರಂಥೋऽಯಮಪಿ ಬಹ್ವರ್ಥೋ....' ಎಂಬುದಾಗಿ ಶ್ರೀಮದಾಚಾರ್ಯರೇ ತಿಳಿಸಿರುವಂತೆ ಅನುವ್ಯಾಖ್ಯಾನವು ಅನೇಕ ಅರ್ಥಗಳನ್ನೊಳಗೊಂಡಿದೆ. ಮನನ ಮಾಡಿದಂತೆ ಹೆಚ್ಚೆಚ್ಚು ಅರ್ಥಗಳನ್ನು ಕಂಡುಕೊಳ್ಳಬಹುದು.

ಉದಾಹರಣೆಗೆ ಪ್ರಾರಂಭದ ಮಂಗಲಾಚರಣೆಯ ಪದ್ಯವನ್ನೇ ನೋಡಬಹುದು. ಇದರಲ್ಲಿಯ 'ಅಶೇಷ ವಿಶೇಷತೋऽಪಿ' ಎಂಬ ಮಾತನ್ನು ಶ್ರೀ ಜಯತೀರ್ಥರು 'ವಂದ್ಯಂ' 'ಪ್ರಿಯತಮಂ' 'ಆಪ್ತತಮಂ' ಎಂಬ ವಿಶೇಷಣಗಳಿಗೆ ಸಂಬಂಧಿಸಿದಂತೆ ವ್ಯಾಖ್ಯಾನಿಸಿ ದಿಕ್‌ಪ್ರದರ್ಶನ ಮಾಡಿದ್ದಾರೆ. ಆ ದಿಕ್‌ಪ್ರದರ್ಶನಕ್ಕನುಗುಣವಾಗಿ 'ಅಶೇಷವಿಶೇಷತೋऽಪಿ' ಎಂಬ ಮಾತನ್ನು ಪದ್ಯದಲ್ಲಿಯ 'ನಾರಾಯಣಂ' ಮೊದಲಾದ ಎಂಟು ವಿಶೇಷಣಗಳಿಗೂ ಸಂಬಂಧಿಸಿದಂತೆ ಅರ್ಥವಿಶೇಷವನ್ನು ವಿಶ್ಲೇಷಿಸಿಕೊಳ್ಳಬಹುದಾಗಿದೆ.

ಪದ್ಯದ ಮೊದಲ ವಿಶೇಷಣವು 'ನಾರಾಯಣಂ' ಇದಕ್ಕೆ ಗುಣಪೂರ್ಣ ದೋಷದೂರ –ಎಂಬಿವೇ ಮೊದಲಾದ ಅರ್ಥವನ್ನಿಟ್ಟುಕೊಂಡು ಇದು ವಿಶೇಷಣ ವಾಚಕ ಎಂದಲ್ಲಿ ಮುಂದಿನ 'ನಿಖಿಲಪೂರ್ಣಗುಣೈಕದೇಹಂ....' ಇತ್ಯಾದಿ ಗುಣ ಪೂರ್ಣತ್ವಾದಿಗಳನ್ನು ತಿಳಿಸುವ ವಿಶೇಷಣಗಳಿಗೆ ಪುನರುಕ್ತಿ ರೂಪವಾದ ದೋಷ ಬಂದೀತು. ಅದಕ್ಕಾಗಿ 'ನಾರಾಯಣಂ' ಎಂದರೆ ನಾರಾಯಣ ಎಂಬ ಹೆಸರಿನಿಂದ ಪ್ರತಿಪಾದ್ಯನಾದವನನ್ನು (ನಾರಾಯಣ ಪದವಾಚ್ಯಂ) ಎಂಬ ಅರ್ಥವನ್ನಿಟ್ಟು ಕೊಳ್ಳಬೇಕು. ಈ ಅರ್ಥವುಳ್ಳ 'ನಾರಾಯಣ' ವಿಶೇಷಣಕ್ಕೆ 'ಅಶೇಷವಿಶೇಷತೋऽಪಿ' ಎಂಬ ಮಾತನ್ನು ಅನ್ವಯಿಸಿಕೊಂಡಾಗ ಭಗವಂತನು ಉಳಿದವರೆಲ್ಲರಿಗಿಂತೆಲ್ಲ ವಿಶೇಷವಾಗಿ ನಾರಾಯಣ ಶಬ್ದದಿಂದ ವಾಚ್ಯನಾಗಿರುವನು ಎಂಬ ಅರ್ಥವು ಫಲಿಸುವುದು. ಅಪ್ಪಯ್ಯ ದೀಕ್ಷಿತರು ಕಷ್ಟ ಬಿಟ್ಟಂತೆ ಏನಾದರೂ ಮಾಡಿ 'ನಾರಾಣಾಂ ಅಯನಂ' ಗುಣಗಳ ಆಶ್ರಯ ಎಂಬ ಅರ್ಥವನ್ನಿಟ್ಟುಕೊಂಡು ರುದ್ರಾದಿಗಳಲ್ಲಿ ಕೂಡಿಸಬಹುದು. ಆದರೆ 'ನಾರಾಯಣ' ಹೆಸರು ರುದ್ರಾದಿಗಳ ಸಂಜ್ಞೆಯಾಗಿರದ ಪ್ರಯುಕ್ತ 'ಪೂರ್ವ ಪದಾತ್ ಸಂಜ್ಞಾಯಾಂ.....' ಎಂಬ ಅನುಶಾಸನದ ಪ್ರಕಾರ ಸಂಜ್ಞೆ ಇದ್ದಾಗಷ್ಟೇ

ಬರಬಹುದಾದ 'ಣತ್ವ' ಸಹಿತವಾಗಿ 'ನಾರಾಯಣ' ಹೆಸರನ್ನು ರುದ್ರಾದಿಗಳಲ್ಲಿ ಕೂಡಿಸಲಾಗದು. ಆದ್ದರಿಂದಲೇ ಭಗವಂತನು ರುದ್ರಾದಿಗಳಿಗಿಂತೆಲ್ಲ (ಅಶೇಷೇಭ್ಯಃ) ವಿಶೇಷವಾಗಿ (ವಿಶೇಷತಃ) ನಾರಾಯಣ ಪದದ ವಾಚ್ಯನಾಗಿರುವನು.

'ನಿಖಿಲ ಪೂರ್ಣಗುಣೈಕದೇಹಂ' ಎನ್ನುವುದು ಮಂಗಲಪದ್ಯದ ಎರಡನೇ ವಿಶೇಷಣ. ಇದಕ್ಕೂ 'ಅಶೇಷವಿಶೇಷತೋಽಪಿ' ಎಂಬ ಮಾತನ್ನು ಅನ್ವಯಿಸಿಕೊಳ್ಳ ಬಹುದು.

ಭಗವಂತನು ನಿಖಿಲ ಗುಣಪೂರ್ಣವಾದ ದೇಹವುಳ್ಳವನೆಂದಾಗ ಲಕ್ಷ್ಮೀ ದೇವಿಯೂ ಗುಣಪೂರ್ಣ ದೇಹವುಳ್ಳವಳಲ್ಲವೇ? ಹೀಗಿರುವಾಗ ಭಗವಂತನಿಗಷ್ಟೇ ಯಾಕೆ ತತ್ತ್ವಯುಕ್ತ ಮಹತ್ತ್ವ? ಎಂದು ಉದಯಿಸಬಹುದಾದ ಸಂದೇಹವನ್ನು 'ಅಶೇಷವಿಶೇಷತೋಽಪಿ' ಎಂಬ ಮಾತು ಪರಿಹರಿಸಬಲ್ಲದು. ನಿಜ, ಲಕ್ಷ್ಮೀದೇವಿಯೂ ಗುಣಪೂರ್ಣದೇಹವುಳ್ಳವಳಾಗಿದ್ದಿರಬಹುದು. ಆದರೆ ಭಗವಂತನು ಆಕೆಗಿಂತಲೂ ವಿಶೇಷವಾಗಿ (ಅನಾಮಕ ಭಗವತಃ ಶೇಷಃ ತತ್ಪತ್ನೀ ಲಕ್ಷ್ಮೀಃ । ತದಪೇಕ್ಷಯಾ ವಿಶೇಷತೋಽಪಿ....) ಗುಣಪೂರ್ಣದೇಹವುಳ್ಳವನು. ಅಂದರೆ ಲಕ್ಷ್ಮೀದೇವಿಯು ಗುಣ ಪೂರ್ಣದೇಹವುಳ್ಳವಳಾಗಿದ್ದರೆ, ಭಗವಂತನು ನಿಖಿಲಪೂರ್ಣಗುಣೈಕದೇಹವುಳ್ಳವನು.

ಪದ್ಯದ ಮೂರನೆ ವಿಶೇಷಣ 'ನಿರ್ದೋಷಂ' ಇದಕ್ಕೂ ಅಶೇಷವಿಶೇಷತೋಽಪಿ ಎಂಬ ಮಾತನ್ನು ಸಮನ್ವಯಿಸಿದಾಗ ಅಶೇಷ ಜೀವಾತ್ಮರಲ್ಲಿ ವಿಶೇಷರೆನಿಸಿರುವ ವಾಯುದೇವರಿಗಿಂತಲೂ ನಿರ್ದುಷ್ಟನಾಗಿರುವವನು ಭಗವಂತನೆಂಬ ಅರ್ಥವು ಫಲಿಸುವುದು. ವಾಯುದೇವರು ಋಜುಗಳೆನಿಸಿ ಇತರ ಜೀವಾತ್ಮರಿಗಿಂತೆಲ್ಲ ನಿರ್ದುಷ್ಟರಾಗಿರುವರೇನೋ ನಿಜ. ಆದರೆ ಅಂತಹವರಲ್ಲೂ ಅಸ್ವಾತಂತ್ರ್ಯವೇ ಮೊದಲಾದ ದೋಷಗಳಿವೆ. ಅಂತಹ ದೋಷಗಳೂ ಭಗವಂತನಲ್ಲಿ ಇಲ್ಲದ ಪ್ರಯುಕ್ತ ಭಗವಂತನು ಅವರಿಗಿಂತಲೂ ನಿರ್ದುಷ್ಟನೆನಿಸಿರುವನು (ಅಶೇಷೇಭ್ಯಃ ಜೀವೇಭ್ಯಃ ವಿಶೇಷಃ ವಾಯುಃ ತದಪೇಕ್ಷಯಾಽಪಿ ನಿರ್ದುಷ್ಟಃ) ಆದ್ದರಿಂದಲೇ ದುಷ್ಟನೆನಿಸಲು ನಿಮಿತ್ತಗಳಾದ ಅಸ್ವಾತಂತ್ರ್ಯವೇ ಮೊದಲಾದ ಧರ್ಮಗಳಿಂದೆಲ್ಲ ನಿರ್ದುಷ್ಟನಾಗಿರು ವವನು. (ಅಶೇಷಾಶ್ಚ ತೇ ವಿಶೇಷಾಶ್ಚ ದುಷ್ಟತ್ವ ಪ್ರಯೋಜಕ ಧರ್ಮಾಃ । ತೇಭ್ಯಃ ಸರ್ವೇಭ್ಯೋಽಪಿ ನಿರ್ದುಷ್ಟಃ)

ಪದ್ಯದಲ್ಲಿಯ ನಾಲ್ಕನೆಯ ವಿಶೇಷಣವಾದ 'ಆಪ್ತತಮಮಪ್ಯಖಿಲೈಃ ಸುವಾಕ್ಯೈಃ' ಎಂಬುದಕ್ಕೂ 'ಅಶೇಷವಿಶೇಷತೋಽಪಿ' ಎಂಬ ಮಾತು ಅನ್ವಯಿಸುವುದು. ಸುವಾಕ್ಯಗಳೆಂದರೆ ವೇದವಾಕ್ಯಗಳು. ಅವು ಯಾಕೆ ಸುವಾಕ್ಯಗಳೆನಿಸಿವೆ ಎಂಬುದನ್ನು 'ಅಶೇಷ ವಿಶೇಷತಃ' ಎಂಬ ಮಾತು ತಿಳಿಸುವುದು. ಸುವಾಕ್ಯಗಳೆನಿಸಲು ಬೇಕಾದ ನಿರ್ದುಷ್ಟತ್ವ, ಸರ್ವಾರ್ಥ ಪ್ರತಿಪಾದಕತ್ವವೇ ಮೊದಲಾದ ಅಶೇಷ ವಿಶೇಷ(ಧರ್ಮ) ಗಳಿಂದಲೂ ಸುವಾಕ್ಯಗಳೆನಿಸಿರುವವು ವೇದಗಳು. ಹಾಗೆಯೇ ವೇದಾರ್ಥ ನಿರ್ಣಾಯಕವಾದ ಬ್ರಹ್ಮಸೂತ್ರವೂ 'ಸುವಾಕ್ಯ'ವೆನಿಸಿದೆ. ಯಾಕೆ? –ಅಶೇಷ ವಿಶೇಷತೋಽಪಿ ಅಂದರೆ ಬ್ರಹ್ಮಸೂತ್ರದ ನಾಲ್ಕು ಅಧ್ಯಾಯಗಳಲ್ಲಿ ಒಂದೊಂದರಲ್ಲಿ

ಸಮನ್ವಯವೇ ಮೊದಲಾದ ವಿಶೇಷವಿದೆ ಎಂಬುದು ಪ್ರಸಿದ್ಧ. ಆದರೆ ಇಷ್ಟೇ ಅಲ್ಲ, ಪ್ರತಿಯೊಂದು ಅಧ್ಯಾಯದಲ್ಲೂ ಪ್ರತಿಯೊಂದು ವಿಶೇಷವೂ ಇದೆ. ಸಮನ್ವಯಾಧ್ಯಾಯದಲ್ಲಿ ಅವಿರೋಧಾದಿಗಳೂ ಇವೆ. ಅವಿರೋಧಾಧ್ಯಾಯದಲ್ಲಿ ಸಮನ್ವಯಾದಿಗಳೂ ಇವೆ. ಹೀಗೆಯೇ ಸಾಧನಾಧ್ಯಾಯ, ಫಲಾಧ್ಯಾಯಗಳಲ್ಲೂ ಸಮನ್ವಯಾದಿಗಳೂ ಇವೆ. ಶ್ರೀಮದಾಚಾರ್ಯರೇ ಅನುವ್ಯಾಖ್ಯಾನದಲ್ಲಿ ತಿಳಿಸಿದ್ದಾರೆ. '.....ಪ್ರತ್ಯೇಕಂ ಚತುರಾತ್ಮಕಾಃ । ಪಾದಾಃ ಸರ್ವೇ.....' ಹೀಗೆ ಸಮನ್ವಯ, ಅವಿರೋಧ, ಸಾಧನ ಹಾಗೂ ಫಲ ಎಂಬ ಅಶೇಷ ವಿಶೇಷಗಳಿಂದಲೂ ಸುವಾಕ್ಯವೆನಿಸಿರುವವು ಬ್ರಹ್ಮಸೂತ್ರಗಳು. ಇವುಗಳಿಂದ ಪ್ರತಿಪಾದ್ಯ ಭಗವಂತ.

'ಅಸ್ಯೋದ್ಭವಾದಿದಂ' ಎಂಬುದು ಐದನೆಯ ವಿಶೇಷಣವು ಭಗವಂತನು ಜಗತ್ತಿಗೆ ಸೃಷ್ಟ್ಯಾದಿಗಳನ್ನು ನೀಡುವನೆಂದು ಸಾರುತ್ತಿದೆ. ಇದಕ್ಕೂ 'ಅಶೇಷವಿಶೇಷತೋಽಪಿ' ಎಂಬ ಮಾತನ್ನು ಅನ್ವಯಿಸಿಕೊಂಡಾಗ ಎಲ್ಲ ಧರ್ಮಗಳಿಂದಲೂ ಜಗತ್ತಿಗೆ ಸೃಷ್ಟ್ಯಾದಿಗಳನ್ನು ನೀಡುವನೆಂಬ ಅರ್ಥವು ಫಲಿಸುವುದು. ಜಗತ್ತಲ್ಲಿ ತಂದೆ ತಾಯಂದಿರು ಸಾಕ್ಷಾತ್ ಸೃಷ್ಟಿಮಾಡುವವರಾದರೆ ಅಜ್ಜ ಅಜ್ಜಿಯಂದಿರು ಪರಂಪರೆಯ ಸೃಷ್ಟಿಸುವವರು. ಹೀಗೆ ಜಗತ್ತಲ್ಲಿ ಸಾಕ್ಷಾತ್ ಹಾಗೂ ಪರಂಪರೆಯ ಸೃಷ್ಟ್ಯತ್ವವು ಕಂಡಿದೆ. ಸಾಕ್ಷಾತ್ ಸ್ರಷ್ಟೃಗಳಾದ ತಂದೆತಾಯಂದಿರು ಪರಂಪರೆಯ ಸ್ರಷ್ಟೃಗಳೆನಿಸರು. ಪರಂಪರೆಯ ಸ್ರಷ್ಟೃಗಳಾದ ಅಜ್ಜ ಅಜ್ಜಿಯಂದಿರು ಸಾಕ್ಷಾತ್ ಸ್ರಷ್ಟೃಗಳೆನಿಸರು. ಆದರೆ ಭಗವಂತನು ಈ ಜಗತ್ತಿಗೆ ಸಾಕ್ಷಾತ್ ಹಾಗೂ ಪರಂಪರೆಯ ಸ್ರಷ್ಟೃ. ತಂದೆಯೂ ಹೌದು; ಪಿತಾಮಹನೂ ಹೌದು. ಹೇಗೆ ತನ್ನ ಕ್ರೋಧದಿಂದ ಜನಿಸಿದ ರುದ್ರನಿಗೆ ತಂದೆ ಎನಿಸಿರುವಂತೆಯೇ ತನ್ನ ಪುತ್ರ ಚತುರ್ಮುಖನಿಂದ ಜನಿಸಿದ ರುದ್ರನಿಗೆ ಪಿತಾಮಹ ಎಂದೂ ಎನಿಸಿರುವನೋ ಹಾಗೆಯೇ ಸಕಲ ಜಗತ್ತಿಗೂ. ಹೀಗೆ ಭಗವಂತನು ಪಿತೃತ್ವದಿಂದಲೂ ಪಿತಾಮಹತ್ವದಿಂದಲೂ ಸ್ರಷ್ಟೃ ಆಗಿರುವುದರಿಂದ 'ಅಶೇಷವಿಶೇಷತೋಽಪಿ ಅಸ್ಯೋದ್ಭವಾದಿದಂ' ಎನಿಸಿರುವನು.

ಆರನೆಯ ವಿಶೇಷಣ 'ವಂದ್ಯಂ' ಭಾಗವತದಲ್ಲಿ 'ಬ್ರಹ್ಮವರ್ಚಸಕಾಮಸ್ತು ಯಜೇತ ಬ್ರಹ್ಮಣಸ್ಪತಿಂ....' ಎಂದಿರುವಂತೆ ಇತರ ದೇವತೆಗಳೆಲ್ಲ ಯಾವುದಾದರೊಂದು ಫಲವಿಶೇಷಕ್ಕಾಗಿಯಷ್ಟೇ ಸ್ತುತ್ಯನೆನಿಸಿದರೆ ಭಗವಂತನಾದರೂ 'ಅಕಾಮಃ ಸರ್ವಕಾಮೋ ವಾ ಮೋಕ್ಷಕಾಮ ಉದಾರಧೀಃ । ......ಯಜೇತ ಪುರುಷಂ ಪರಮ್' ಎಂದು ಹೇಳಿರುವಂತೆ ಮೋಕ್ಷಪರ್ಯಂತವಾದ ನಿಖಿಲ ಫಲವಿಶೇಷಗಳಿಗಾಗಿಯೂ ವಂದ್ಯನಾಗಿರುವವನು ಭಗವಂತನು (ಅಶೇಷ ಫಲ ವಿಶೇಷಾನ್ ಅಪೇಕ್ಷ್ಯ ವಂದ್ಯಂ) ಎಂಬುದಾಗಿ 'ವಂದ್ಯಂ' ವಿಶೇಷಣಕ್ಕೆ 'ಅಶೇಷ ವಿಶೇಷತೋಽಪಿ' ಎಂಬ ಮಾತನ್ನು ಅನ್ವಯಿಸಿಕೊಂಡಾಗ ಸಿದ್ಧಿಸುವುದು. 'ಮಮ ಪ್ರಿಯತಮಂ' ಏಳನೆಯ ವಿಶೇಷಣ ಭಗವಂತನು ರುದ್ರಾದಿಗಳೆಲ್ಲರಿಗೂ ಪ್ರಿಯನೇ, ಆದರೆ ಒಮ್ಮೊಮ್ಮೆ ರುದ್ರಾದಿಗಳೂ ಭಗವದ್ವಿಮುಖರಾಗುವುದುಂಟು. ಆದರೆ ವಾಯುದೇವರು ಮಾತ್ರ ಎಂದೆಂದೂ ಭಗವದ್ವಿಮುಖರಾಗದೆ ರುದ್ರಾದಿಗಳೆಲ್ಲರಿಗಿಂತಲೂ ಹೆಚ್ಚು ಭಗವಂತನನ್ನು ಪ್ರೀತಿಸುವ

ಪ್ರಯುಕ್ತ ಭಗವಂತ ಅವರಿಗೆ ಪ್ರಿಯತಮ' ಎನಿಸಿರುವರು. ಇದನ್ನೇ 'ಅಶೇಷ ವಿಶೇಷತೋಽಪಿ' ಎಂಬ ಮಾತಿನಿಂದ ವಿವರಿಸಲಾಗಿದೆ. ಇಲ್ಲಿ 'ನಞ್ ಇವಯುಕ್ತಂ ಅನ್ಯಸದೃಶಾಧಿಕರಣೇ' ಎಂಬ ಭಾಷ್ಯಕಾರನ ಮಾತಂತೆ 'ನ ಶೇಷಃ ಅಶೇಷಃ' ಎಂಬುದಾಗಿ ಶೇಷನಿಗಿಂತ ಭಿನ್ನನಾಗಿದ್ದು ಅವನಿಗೆ ಸದೃಶನಾದ ರುದ್ರನು ಅಶೇಷನು. 'ವಿಃ' ಅಂದರೆ ಗರುಡನು. ಶೇಷ ಅಂದರೆ ಶೇಷನು ಇವರೆಲ್ಲರಿಗಿಂತಲೂ ವಾಯು ದೇವರಿಗೆ ಹೆಚ್ಚು ಪ್ರಿಯನಾಗಿರುವ ಭಗವಂತನನ್ನು 'ಮಮ ಪ್ರಿಯತಮಂ' ಎಂದು ಉಲ್ಲೇಖಿಸಿರುವರು ಶ್ರೀಮದಾಚಾರ್ಯರು.

ಪದ್ಯದಲ್ಲಿ 'ಸನ್ನಮಾಮಿ' ಎಂಬುದು ಕ್ರಿಯಾಪದ. ಇದಕ್ಕೆ ಶ್ರದ್ಧಾ, ಭಕ್ತಿಪೂರ್ವಕ ವಾಗಿ, ಚೆನ್ನಾಗಿ ಪ್ರಣಮಿಸುವೆನೆಂಬ ಅರ್ಥ. ಉಳಿದವರನ್ನು ಪ್ರಣಮಿಸುವಾಗಲೂ ಭಕ್ತಿ ಶ್ರದ್ಧೆಗಳು ಇದ್ದೇ ಇರುವವು. ಆದರೆ ಭಗವಂತನಿಗೆ ಸಮರ್ಪಿಸಬೇಕಾದ ಪ್ರಣಾಮ ಆ ಪ್ರಣಾಮದಂತಿರಬಾರದು ತಾನೇ? ಉಳಿದವರಿಗಿಂತಲೂ ವಿಶೇಷವಾಗಿ, ವಿಲಕ್ಷಣನಾಗಿ –ಅಧಿಕ ಶ್ರದ್ಧಾಭಕ್ತಿ ಸಹಿತವಾಗಿ ಪ್ರಣಮಿಸುವೆನೆಂದರ್ಥವು 'ಅಶೇಷ ವಿಶೇಷತೋಽಪಿ' ಎಂಬ ಮಾತನ್ನು ಸನ್ನಮಾಮಿ ಎಂಬ ಕ್ರಿಯಾಪದದಲ್ಲಿರುವ 'ಸತ್' ವಿಶೇಷಣಕ್ಕೆ ಅನ್ವಯಿಸಿಕೊಂಡಾಗ ಫಲಿಸುವುದು.

ಹೀಗೆ 'ಅಶೇಷವಿಶೇಷತೋಽಪಿ' ಎನ್ನುವ ಮಾತನ್ನು ಪದ್ಯದಲ್ಲಿಯ ಎಂಟು ವಿಶೇಷಣಗಳಿಗೂ ಅನ್ವಯಿಸಿಕೊಂಡು ಅರ್ಥವಿಶೇಷಗಳನ್ನು ಪಡೆದುಕೊಳ್ಳಬಹು ದಾಗಿದೆ.

೪. ೧೨. ಸುಧಾಮಂಗಲಾಚರಣೆಯ ವೈಶಿಷ್ಟ್ಯ

ಪಂಚರೂಪಗಳ ಸ್ಮರಣೆ

ವಾಸುದೇವಾದಿ ರೂಪೇಣ ಚತುರ್ಮೂರ್ತಿಶ್ಚ ಸರ್ವಶಃ ।
ಅಥವಾ ಪಂಚಮೂರ್ತಿಃ ಸ ಪ್ರೋಕ್ತೋಽಧಿಕರಣಂ ಪ್ರತಿ ॥

'ಪ್ರತಿಸೂತ್ರಂ ಪ್ರತಿಪದಂ ಪ್ರತ್ಯಕ್ಷರಮಥಾಪಿ ವಾ'

ಎಂಬುದಾಗಿ ಬ್ರಹ್ಮಸೂತ್ರದ ಪ್ರತಿಯೊಂದು ಅಧಿಕರಣ, ಸೂತ್ರ, ಶಬ್ದ, ಅಕ್ಷರಗಳಲ್ಲಿ ಭಗವಂತನ ವಾಸುದೇವಾದಿ ರೂಪಗಳು ಪ್ರತಿಪಾದಿಸಲ್ಪಟ್ಟಿವೆ ಎನ್ನಲಾಗಿದೆ. ಭಗವಂತನ ಈ ಪಂಚರೂಪಗಳ ಸ್ಮರಣೆಯನ್ನೂ ಶ್ರೀಮನ್ನ್ಯಾಯಸುಧಾದ 'ಶ್ರಿಯಃ ಪತ್ಯೇ....' ಎಂಬ ಮಂಗಲಾಚರಣೆಯಲ್ಲಿ ಮಾಡಲಾಗಿದೆ. 'ಜಗಜ್ಜನ್ಮಸ್ಥೇಮಪ್ರಲಯ ರಚನಾಶೀಲವಪುಷೇ' –ಎಂಬ ವಿಶೇಷಣದಿಂದ ಜಗತ್ತಿನ ಸೃಷ್ಟಿಗೆ ಕಾರಣನಾದ ಪ್ರದ್ಯುಮ್ನನನ್ನೂ, ಸ್ಥಿತಿಗೆ ಕಾರಣನಾದ ಅನಿರುದ್ಧನನ್ನೂ, ಸಂಹಾರಕ್ಕೆ ಕಾರಣನಾದ ಸಂಕರ್ಷಣನನ್ನೂ ಸ್ಮರಿಸಿದಂತಾಗುವುದು. 'ಹರಯೇ' ಎಂಬ ವಿಶೇಷಣದಿಂದ ಭಕ್ತರ ಸಂಸಾರತಾಪವನ್ನು ಅಪಹರಿಸುವವನೆಂಬ ಅಭಿಪ್ರಾಯದಲ್ಲಿ ಮುಕ್ತಿಪ್ರದನಾದ

ವಾಸುದೇವನನ್ನು ಸ್ತುತಿಸಿದಂತಾಗುವುದು. 'ಶ್ರಿಯಃ ಪತ್ಯೇ' ಎನ್ನುವುದರಿಂದಲೂ ಮೂಲರೂಪಿ ನಾರಾಯಣನನ್ನು ಸ್ತುತಿಸಿದಂತಾಗುವುದು. ದೋಷವಿಲ್ಲದಿರುವುದರಿಂದ 'ನಾರಾ' ಎನಿಸಿರುವ ಲಕ್ಷ್ಮೀದೇವಿಗೆ ಆಶ್ರಯನಾಗಿರುವುದರಿಂದಲೂ ಶ್ರೀಹರಿಯು ನಾರಾಯಣ ಎನಿಸಿರುವನು. 'ಶ್ರಿಯಃ ಪತ್ಯೇ' ಶಬ್ದ ಈ ಅರ್ಥದಲ್ಲೇ ನಾರಾಯಣ ರೂಪಕ್ಕೆ ಸ್ಮಾರಕವೆನಿಸಿದೆ.

ಹರಿರೂಪದ ಉಲ್ಲೇಖದ ಔಚಿತ್ಯ

'ಶ್ರಿಯಃ ಪತ್ಯೇ....' ಎಂಬ ಸುಧಾದ ಮಂಗಲಾಚರಣೆಯಲ್ಲಿ '....ನಮೋಽಶೇಷಾಮ್ನಾಯಸ್ಮೃತಿಹೃದಯದೀಪ್ತಾಯ ಹರಯೇ' –ಎಂಬುದಾಗಿ ಭಗವಂತನನ್ನು ಹರಿ ಎಂಬ ಹೆಸರಿಂದ ಉಲ್ಲೇಖಿಸಿದುದು ಉದ್ದೇಶಪೂರ್ವಕವಾಗಿಯೇ. '....ದೇವತಾ ಭಗವಾನ್ ಹರಿಃ' ಎಂದು ತಂತ್ರಸಾರಸಂಗ್ರಹದಲ್ಲಿ ನಿರೂಪಿತವಾಗಿರುವಂತೆ ವ್ಯಾಹೃತಿ ದೇವತೆ ಶ್ರೀಹರಿ. ಸಕಲ ವೈದಿಕವಾಙ್ಮಯವೂ ವ್ಯಾಹೃತಿಯ ವ್ಯಾಖ್ಯಾನವೇ ಆಗಿರುವುದರಿಂದ ವ್ಯಾಹೃತಿಯ ದೇವತೆಯಾದ ಶ್ರೀಹರಿಯೇ ಆ ಸಕಲ ವಾಙ್ಮಯದಲ್ಲೂ ಪ್ರತಿಪಾದ್ಯನಾಗಿರಬೇಕು ತಾನೇ? ಆದ್ದರಿಂದಲೇ ಶ್ರೀ ಜಯತೀರ್ಥರು 'ಅಶೇಷಾಮ್ನಾಯಸ್ಮೃತಿಹೃದಯದೀಪ್ತಾಯ' ಎಂದು ಭಗವಂತನಿಗೆ ಸಕಲ ವೈದಿಕ ವಾಙ್ಮಯಪ್ರತಿಪಾದ್ಯತ್ವವನ್ನು ಪ್ರತಿಜ್ಞೆಮಾಡಿ, ಅದರ ಸಮರ್ಥನೆಗಾಗಿಯೇ ಅಶೇಷಾಮ್ನಾಯಗಳಿಗೆ ವ್ಯಂಜಕವಾದ ವ್ಯಾಹೃತಿಯಿಂದ ಪ್ರತಿಪಾದ್ಯನಾದ ಭಗವಂತನ ಶ್ರೀಹರಿ ರೂಪವನ್ನೇ ಉಲ್ಲೇಖಿಸಿರುವರು.

ಸೂರ್ಯನ ಹೋಲಿಕೆಯ ಸ್ವಾರಸ್ಯ

ಶ್ರೀ ಜಯತೀರ್ಥರು ನ್ಯಾಯಸುಧಾದಲ್ಲಿ ಶ್ರೀ ವೇದವ್ಯಾಸರನ್ನು '....ತೇನ ವ್ಯಾಸದಿವಾಕರೇಣ ಸತತಂ ಮಾ ತ್ಯಾಜಿ....' ಎಂದು ಸೂರ್ಯನ ರೂಪಕ ಕೊಟ್ಟು ಸ್ತುತಿಸಿರುತ್ತಾರೆ. ಇದರ ಸ್ವಾರಸ್ಯವನ್ನು ಗುರುತಿಸಬೇಕು. ಗಾಯತ್ರಿಯಲ್ಲೂ 'ಸೃಷ್ಟಿಕರ್ತ' ಎನ್ನುವ ಅರ್ಥದಲ್ಲಿ ಪ್ರಸಿದ್ಧಗಳಾದ ಸ್ರಷ್ಟೃ, ಜನಿತೃ ಮೊದಲಾದ ಶಬ್ದಗಳನ್ನೆಲ್ಲ ಬಿಟ್ಟು 'ಸವಿತೃ' ಶಬ್ದದ ಪ್ರಯೋಗವೂ ಸಾಮಾನ್ಯವಾಗಿ ಸವಿತೃ ಶಬ್ದವಾಚ್ಯನಾದ ಸೂರ್ಯನ ಗುಣಗಳಂತೆ ಭಗವಂತನ ಗುಣಗಳೆಂದು ತಿಳಿದುಕೊಳ್ಳಬೇಕೆಂದು.

ಸೂರ್ಯ ಬೆಳಗ್ಗೆ ಕಾಣಿಸಿಕೊಳ್ಳುತ್ತಾನೆ. ಅವನು ಪ್ರತ್ಯಕ್ಷನಾಗುವುದೇ ಹೊರತು ಹುಟ್ಟುವುದಿಲ್ಲ. ಸಂಜೆ ಅಪ್ರತ್ಯಕ್ಷನಾಗುತ್ತಾನೆಯೇ ಹೊರತು ನಾಶಹೊಂದುವುದಿಲ್ಲ. ಅಂತೆಯೇ ಭಗವಂತನಿಗೂ ಹುಟ್ಟು, ನಾಶಗಳಿಲ್ಲ. ಪ್ರಾದುರ್ಭಾವ, ಅದೃಶತ್ವಗಳಷ್ಟೇ. ರಾತ್ರಿ ಸೂರ್ಯ ಕಾಣದಿರಲು ಪರ್ವತ ಅಡ್ಡವಾಗಿರುವಂತೆ, ಭಗವಂತ ಕಾಣದಿರಲು ಪ್ರಕೃತಿಯೇ ಪ್ರತಿಬಂಧಕ.

ಭಗವಂತ ಬೇರೆ ಯಾರ ಆಧಾರವೂ ಇಲ್ಲದೆ ತನ್ನಿಂದಲೇ ಧರಿಸಿಕೊಳ್ಳಲ್ಪಟ್ಟಿರುವವನು. ಎಲ್ಲರಿಗೂ ಆಧಾರನಾಗಿದ್ದು, ಯಾರ ಆಧಾರದ ಅಪೇಕ್ಷೆಯೂ ಇಲ್ಲದೆ

ಆಗಸದಲ್ಲಿ ರಾರಾಜಿಸುತ್ತಿರುವ ಸೂರ್ಯನಿಂದ ಭಗವಂತನ ಈ ಗುಣವನ್ನು ಪರಿಚಯಿಸಿಕೊಳ್ಳಬಹುದು.

ಸೂರ್ಯನ ತಾಪ ಮುಂದೆ ಬೆಳೆಗೆ ಅನುಕೂಲವಾಗಿರುವಂತೆ ಭಗವಂತನು ಆಗಾಗ್ಗೆ ನೀಡುವ ತಾಪವೂ ನಮ್ಮ ಒಳ್ಳೆಯದಕ್ಕಾಗಿಯೇ. ಅಂತಹ ತಾಪವಿಲ್ಲದಿದ್ದಲ್ಲಿ ನಾವು ಖಂಡಿತಾ ಮುಕ್ತಿಗೆ ಯತ್ನಿಸುತ್ತಲೇ ಇರುತ್ತಿರಲಿಲ್ಲ. ಅದಕ್ಕಾಗಿಯೇ ತಾನೇ 'ವಿಪದಃ ಸಂತು ನಃ ಶಶ್ವತ್' ಎಂದು ಜ್ಞಾನಿಗಳು ಕೇಳಿಕೊಳ್ಳುತ್ತಿರುವುದು?

ಬೇರೆ ಬೇರೆ ಮಣಿಗಳಲ್ಲಿ ಸಹಜವಾಗಿ ಬೇರೆ ಬೇರೆ ಗುಣಗಳಿರುವುದರಿಂದಲೇ ಸೂರ್ಯನ ಬೆಳಕಿಂದ ಅವುಗಳಲ್ಲಿ ಬೇರೆ ಬೇರೆ ಪರಿಣಾಮ ಕಾಣಿಸಿಕೊಳ್ಳುವಂತೆ ಜೀವರಲ್ಲೂ ಬೇರೆ ಬೇರೆ ಯೋಗ್ಯತೆಯಿರುವುದರಿಂದಲೇ ಅವರಿಂದ ಬೇರೆ ಬೇರೆ ಕರ್ಮ ಮಾಡಿಸಿ, ಅದಕ್ಕೆ ತಕ್ಕ ಫಲ ನೀಡುವ ಭಗವಂತ ಪಕ್ಷಪಾತಿ ಎನಿಸುವುದಿಲ್ಲ.

●

೪. ೧೩. ಮೂರು ಕೃತಿಗಳ ಅಧ್ಯಯನ ಅತ್ಯವಶ್ಯ

ಶ್ರೀ ಮಧ್ವಾಚಾರ್ಯರ ಸರ್ವಮೂಲದ ಎಲ್ಲ ಗ್ರಂಥಗಳನ್ನೂ ಅವುಗಳಿಗೆ ಟೀಕೆ, ಟಿಪ್ಪಣಿಗಳಾಗಿ ಹೊರಟ ಕೃತಿಗಳನ್ನೂ ಅಧ್ಯಯನ ಮಾಡಬೇಕು. ಒಂದೊಮ್ಮೆ ಅಷ್ಟು ಕೃತಿಗಳ ಅಧ್ಯಯನ ಸಾಧ್ಯವೇ ಇಲ್ಲ ಎಂದಲ್ಲಿ ಮೂರು ಕೃತಿಗಳ ಅಧ್ಯಯನವನ್ನಾದರೂ ಅವಶ್ಯವಾಗಿ ನಡೆಸಲೇ ಬೇಕು. ಮಹಾಭಾರತತಾತ್ಪರ್ಯನಿರ್ಣಯ, ಸುಮಧ್ವವಿಜಯ ಹಾಗೂ ತೀರ್ಥಪ್ರಬಂಧ ಇವೇ ಆ ಮೂರು ಗ್ರಂಥಗಳು.

ಮಹಾಭಾರತತಾತ್ಪರ್ಯನಿರ್ಣಯ : ಹೆಚ್ಚಿನ ಅಧ್ಯಾತ್ಮಿಕ ವಿದ್ಯೆಯ ಅಧ್ಯಯನ ಇಲ್ಲದವನಿಗೂ ಆಧ್ಯಾತ್ಮಿಕ ತತ್ವಗಳ ಸಾಮಾನ್ಯ ಪರಿಚಯ ಬೇಕೇ ಬೇಕು. ಇದಕ್ಕಾಗಿ ಮಹಾಭಾರತತಾತ್ಪರ್ಯನಿರ್ಣಯದ ಅಧ್ಯಯನವನ್ನು ನಡೆಸಲೇ ಬೇಕು. ಈ ಕೃತಿಯಲ್ಲಿ ಮಹಾಭಾರತ ಮಾತ್ರವಲ್ಲದೆ, ರಾಮಾಯಣ–ಭಾಗವತ–ಹರಿವಂಶ–ಪಂಚರಾತ್ರ–ವಿಷ್ಣುಪುರಾಣ ಮುಂತಾದ ಎಲ್ಲ ಸದ್ ಗ್ರಂಥಗಳಲ್ಲಿ ಪ್ರಸ್ತುತಗಳಾದ ಆಧ್ಯಾತ್ಮಿಕ ತತ್ವಗಳನ್ನೆಲ್ಲ ಸಂಗ್ರಹಿಸಲಾಗಿದೆ. ಆದುದರಿಂದ ಇದರ ಅಧ್ಯಯನ ನಡೆಸಿದಲ್ಲಿ ಅಧ್ಯಾತ್ಮಿಕ ತತ್ವಗಳನ್ನೆಲ್ಲ ಸಾಮಾನ್ಯವಾಗಿ ಪರಿಚಯಿಸಿಕೊಂಡಂತಾಗಿ ಅವುಗಳ ವಿಷಯದಲ್ಲಿ ಕಾಲ್ಜಾರಲು ಅವಕಾಶವಿಲ್ಲ.

ಸುಮಧ್ವವಿಜಯ : 'ಮುಕುಂದಭಕ್ತ್ಯೈ ಗುರುಭಕ್ತಿಜಾಯೈ....' ಎಂದಿರುವಂತೆ ಹರಿಭಕ್ತಿಗೆ ಸ್ಫೋರಕವಾದದ್ದು ಗುರುಭಕ್ತಿ. ಅಂತಹ ಗುರುಭಕ್ತಿ ಪ್ರವೃದ್ಧವಾಗಬೇಕೆಂದರೆ, ದೃಢವಾಗಬೇಕೆಂದರೆ ಗುರುಗಳ ಮಹಿಮೆಯನ್ನು ಲೀಲೆಗಳನ್ನು ತಿಳಿದುಕೊಳ್ಳಬೇಕು. ಗುರುಗಳಾದ ಶ್ರೀ ಮಧ್ವಾಚಾರ್ಯರ ಮಹಿಮೆಗಳನ್ನು, ಲೀಲೆಗಳನ್ನು ವಿಸ್ತಾರವಾಗಿ ತಿಳಿಸತಕ್ಕ 'ಸುಮಧ್ವವಿಜಯ'ದ ಅಧ್ಯಯನ ಈ ದೃಷ್ಟಿಯಿಂದ ಅತ್ಯವಶ್ಯ.

ತೀರ್ಥಪ್ರಬಂಧ : ತೀರ್ಥಕ್ಷೇತ್ರಗಳಿಗೆ ಯಾತ್ರೆ ಮಾಡುವುದೂ ಸಾಧಕನ ಒಂದು ಸಾಧನೆ. ಆದರೆ ಎಲ್ಲ ಕ್ಷೇತ್ರಗಳಿಗೆ ಎಲ್ಲರಿಗೆ ಹೋಗಲಿಕ್ಕಾಗಲಾರದು. ಅಂತಹವರು ಶ್ರೀ ವಾದಿರಾಜತೀರ್ಥರ ತೀರ್ಥಪ್ರಬಂಧವನ್ನು ಅಧ್ಯಯನ ಮಾಡಿದರೆಂದರೆ ಎಲ್ಲ ಕ್ಷೇತ್ರಗಳ, ಅಲ್ಲಿಯ ತೀರ್ಥಗಳ, ಅಧಿದೈವಗಳ ಮಹಿಮೆಗಳ ಪರಿಚಯ ದೊರಕುವುದು. ಇದರಿಂದಾಗಿ ಆನುಸಂಧಾನಿಕವಾಗಿ ತೀರ್ಥಯಾತ್ರೆಯನ್ನು ಇದ್ದಲ್ಲಿಯೇ ನಡೆಸಬಹುದಾಗಿದೆ. ಈ ಉದ್ದೇಶದಿಂದ ಸಾಧಕನಾದವನು ತೀರ್ಥಪ್ರಬಂಧದ ಅಧ್ಯಯನವನ್ನು ಅವಶ್ಯವಾಗಿ ನಡೆಸಬೇಕು.

ಹೀಗೆ ಪ್ರತಿಯೊಬ್ಬ ಸಾಧಕನೂ ತತ್ವಗಳ ಮಾಹಿತಿಗಾಗಿ ಗುರುಭಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕಾಗಿ ಹಾಗೂ ತೀರ್ಥಕ್ಷೇತ್ರಗಳ ಪರಿಚಯಕ್ಕಾಗಿ –ಮಹಾಭಾರತತಾತ್ಪರ್ಯನಿರ್ಣಯ, ಸುಮಧ್ವವಿಜಯ ಹಾಗೂ ತೀರ್ಥಪ್ರಬಂಧ ಈ ಮೂರು ಕೃತಿಗಳ ಅಧ್ಯಯನವನ್ನು ನಡೆಸಲೇ ಬೇಕು.

●

೪. ೧೪. ಐತರೇಯೋಪನಿಷತ್ತಿನ ಉಪಕ್ರಮಸಂದೇಶ

ಪ್ರಸಿದ್ಧಗಳಾದ ದಶೋಪನಿಷತ್ತುಗಳ ಮಧ್ಯದಲ್ಲಿ ಐತರೇಯೋಪನಿಷತ್ತು ಶ್ರೀವಿಷ್ಣುವಿನ ಪರಮ ರಹಸ್ಯಗಳಾದ ಮಹಾತ್ಮೆಗಳನ್ನು ಪ್ರತಿಪಾದಿಸುತ್ತದೆಂದು ಶಾಸ್ತ್ರವಚನವು ಇದೆ. ಸಾಕ್ಷಾತ್ ನಾರಾಯಣದೇವರು ಚತುರ್ಮುಖಬ್ರಹ್ಮಪುತ್ರರಾದ ವಿಶಾಲನಾಮಕ ಮುನಿಶ್ರೇಷ್ಠರಿಂದ ಇತರಾದೇವಿಯಲ್ಲಿ ಅವಳ ತಪಸ್ಸಿಗೆ ಮೆಚ್ಚಿ ಅವತರಿಸಿದರು. ಅವರು ಬ್ರಹ್ಮಾದಿದೇವತೆಗಳು ಮತ್ತು ಮಹಾಮುನಿಗಳಿಂದ ನಡೆಸಲ್ಪಡುವ ಯಜ್ಞಕ್ಕೆ ಹೋದರು. ಅವರ ವಿಲಕ್ಷಣ ತೇಜಸ್ಸನ್ನು ನೋಡಿ ರುದ್ರಾದಿ ದೇವತೆಗಳು ಮೂರ್ಛಿತರಾದರು. ಅವರನ್ನು ಬ್ರಹ್ಮದೇವರು ಸ್ತುತಿಸಿದರು. ಬ್ರಹ್ಮದೇವರಿಂದ ಸ್ತುತರಾದ ಎಲ್ಲ ದೇವತೆಗಳು ಭಗವಾನ್ ಐತರೇಯರ ದಾಸತ್ವವನ್ನು ಹೊಂದಿದರು. ಮಹಾತ್ಮರಾದ ಎಲ್ಲ ದೇವತೆಗಳು ಯಾರ ದಾಸತ್ವವನ್ನು ಹೊಂದಿದರೊ ಆ ಐತರೇಯರು ಆ ಕಾರಣದಿಂದ ಮಹಿದಾಸರೆಂದು ಪ್ರಖ್ಯಾತರಾದರು. ಎಲ್ಲ ದೇವತೆಗಳು ಕೂತಿರುವ ಸಭೆಯಲ್ಲಿ ಲಕ್ಷ್ಮೀದೇವಿಯರಿಗೆ ದಿವ್ಯವಾದ ಶ್ರುತಿಯನ್ನು ಅವರು ಉಪದೇಶಿಸಿದರು. ಲಕ್ಷ್ಮೀದೇವಿಯರಿಗೆ ಪರಮಸಂತೋಷದಿಂದ ಭಗವಾನ್ ಮಹಿದಾಸರು ದಿವ್ಯಶ್ರುತಿಯನ್ನು ಉಪದೇಶಿಸುತ್ತಿರುವಾಗ ಎಲ್ಲ ದೇವತೆಗಳು ಅದನ್ನು ಕೇಳಿದರು. ಅನಂತರ ಚತುರ್ಮುಖಬ್ರಹ್ಮದೇವರು ಋಗ್ವೇದಿಗಳಾದ ಋಷಿಗಳಿಗೆ ಆ ಶ್ರುತಿಯನ್ನು ಉಪದೇಶಿಸಿದರು. ಮಹಾಮಹಾತ್ಮ್ಯವುಳ್ಳವನಾದ್ದರಿಂದ ಶ್ರೀಹರಿಗೆ ಮಹಾಭೂತಿ ಎಂದು ಹೆಸರು ಇದೆ. ಐತರೇಯರಾದ ಭಗವಾನ್ ಮಹಿದಾಸರು ಉಪದೇಶಿಸಿದ್ದರಿಂದ ಈ ಶ್ರುತಿಗೆ ಐತರೇಯೀ ಎಂದು ಹೆಸರು ಇದೆ. ಇಷ್ಟು ವಿಷಯವು ಋಕ್ ಸಂಹಿತಾ ಎಂಬ ಗ್ರಂಥದಲ್ಲಿ ಹೇಳಲ್ಪಟ್ಟಿದೆ ಎಂದು ಶ್ರೀಮದಾನಂದತೀರ್ಥ ಭಗವತ್ಪಾದರು ತಮ್ಮ ಭಾಷ್ಯದಲ್ಲಿ ಬರೆದಿದ್ದಾನೆ.

ಈ ಉಪನಿಷತ್ತಿನ ಆರಂಭವಾಕ್ಯ-

ಹರಿಃ ಓಂ ಏಷ ಪಂಥಾ ಏತತ್ಕರ್ಮ ಏತದ್ಬ್ರಹ್ಮ
ಏತತ್ಸತ್ಯಂ ತಸ್ಮಾನ್ನ ಪ್ರಮಾದ್ಯೇತ್
ತನ್ನಾತೀಯಾತ್ ನಹ್ಯತ್ಯಾಯನ್ ಪೂರ್ವೇ
ಯೇಽತ್ಯಾಯನ್ ತೇ ಪರಾ ಬಭೂವುಃ ॥

ಪುರುಷೋತ್ತಮನಾದ ಶ್ರೀಹರಿಯು ಸಾತ್ವಿಕ ಜೀವರುಗಳು ತನ್ನನ್ನು ಹೊಂದುವುದಕ್ಕೆ ತಾನೇ ಮುಖ್ಯ ಸಾಧನವಾದದ್ದರಿಂದ ಮಾರ್ಗ ಎಂದು ಕರೆಯಲ್ಪಡುತ್ತಾನೆ. ಬ್ರಹ್ಮಜ್ಞಾನವೊಂದೇ ಬ್ರಹ್ಮಪ್ರಾಪ್ತಿಗೆ ಮುಖ್ಯ ಸಾಧನವೆಂದು ಕೆಲವು ವಾದಿಗಳು ಹೇಳುತ್ತಾರೆ. ಅದು ಯುಕ್ತವಲ್ಲ. ಬ್ರಹ್ಮನಿಗಿಂತ ಇತರವಾದದ್ದು ಎಲ್ಲವೂ ಅಸ್ವತಂತ್ರವಾದ್ದರಿಂದ ಬ್ರಹ್ಮಜ್ಞಾನವೂ ಬ್ರಹ್ಮನಿಗಿಂತ ಇತರವಾದ್ದರಿಂದ ಅಸ್ವತಂತ್ರವಾಗಿದೆಯಾದ ಕಾರಣ ಸ್ವತಂತ್ರವಾದದ್ದು ಒಂದೇ ಮುಖ್ಯ ಸಾಧನವಾಗುವುದಕ್ಕೆ ಅರ್ಹವಾಗುವುದರಿಂದ ಸ್ವತಂತ್ರನಾದ ಶ್ರೀಹರಿಯು ಒಬ್ಬನೇ ಅವನ ಪ್ರಾಪ್ತಿಗೆ ಮುಖ್ಯ ಸಾಧನವೆಂದು ಹೇಳುವುದು ಯುಕ್ತವಾಗುತ್ತದೆ. ಆದುದರಿಂದ ಈ ಶ್ರುತಿಯು ಶ್ರೀಹರಿಯನ್ನೇ ಅವನ ಪ್ರಾಪ್ತಿಗೆ ಮುಖ್ಯ ಸಾಧನವೆಂದು ಹೇಳುತ್ತದೆ. 'ತಮೇವಂ ವಿದ್ವಾನ್' ಇತ್ಯಾದಿ ಶ್ರುತಿಗಳಲ್ಲಿ ಬ್ರಹ್ಮಜ್ಞಾನಕ್ಕಿಂತ ಬೇರೆ ಯಾವುದೂ ಮುಖ್ಯ ಸಾಧನವಲ್ಲವೆಂದು ಹೇಳಿದಂತೆ ತೋರುವುದಾದರೂ ಆ ಶ್ರುತಿಗಳಿಗೆ ಯುಕ್ತಿಯುಕ್ತವಾಗಿ ಹೇಳುವ ಈ ಶ್ರುತಿಯ ಆಧಾರದಿಂದ ಯೋಗ್ಯವಾದ ಬೇರೆ ಅರ್ಥವನ್ನು ತಿಳಿದುಕೊಳ್ಳಬೇಕು. ಆ ಅರ್ಥ ಯಾವುದೆಂದರೆ –ಮುಮುಕ್ಷು ಸಂಬಂಧಿಯಾದ ಬ್ರಹ್ಮನ ಪ್ರಸಾದವನ್ನು ಸಾಧಿಸಬೇಕು. ಆ ಪ್ರಸಾದದ್ವಾರಾ ಬ್ರಹ್ಮನು ಮೋಕ್ಷ ಸಾಧನನಾಗುತ್ತಾನೆ ಎಂದು ಅರ್ಥವನ್ನು ತಿಳಿಯಬೇಕು.

ಕರ್ಮದಿಂದ ಸ್ಪರ್ಶಾದಿ ಸುಖವು ಕರ್ಮದಿಂದಲೇ ನರಕಾದಿ ದುಃಖವು ಪ್ರಾಪ್ತವಾಗುತ್ತದೆಂಬ ಶಾಸ್ತ್ರವಚನಗಳ ರಹಸ್ಯಾರ್ಥವೆಂದರೆ ಪರಮಾತ್ಮನೇ ಎಲ್ಲರ ಸುಖ ದುಃಖಗಳಿಗೆ ಮುಖ್ಯ ಕಾರಣನು. ಕರ್ಮವು ಮುಖ್ಯ ಕಾರಣವಲ್ಲ. ಕರ್ಮವು ಸ್ವತಂತ್ರವು. ಪರಮಾತ್ಮನು ಸ್ವತಂತ್ರನು. ಸ್ವತಂತ್ರವಾದದ್ದೇ ಮುಖ್ಯ ಕಾರಣವು. ಕರ್ಮ ಶಬ್ದಕ್ಕೆ ಪರಮಾತ್ಮನು ಮುಖ್ಯಾರ್ಥನು. ಪುಣ್ಯಪಾಪಗಳು ಕರ್ಮಶಬ್ದಕ್ಕೆ ಮುಖ್ಯಾರ್ಥವಲ್ಲ. ಕರ್ಮ ಶಬ್ದಕ್ಕೆ ಮಹಾಯೋಗ ವಿದ್ವದ್ರೂಢಿಗಳು ಪರಮಾತ್ಮನಲ್ಲಿಯೇ ಇವೆ. ಆದುದರಿಂದ ಪರಮಾತ್ಮನೇ ಕರ್ಮ ಶಬ್ದದ ಪರಮ ಮುಖ್ಯಾರ್ಥನು. ಕರ್ತೃತ್ವ ಮಾತೃತ್ವ ಸರ್ವವನ್ನು ಮಾಡುವುದು ಸರ್ವವನ್ನು ತಿಳಿಯುವುದು ಎಂಬುದೇ ಕರ್ಮ ಶಬ್ದದ ಯೋಗಾರ್ಥವಾಗಿರುತ್ತದೆ. ಕೆಲವು ವಾದಿಗಳು ಕರ್ಮವು ಸುಖದುಃಖಗಳಿಗೆ ಕಾರಣವೆಂಬ ಶಾಸ್ತ್ರವಚನಕ್ಕೆ ಪರಮಾತ್ಮನೇ ಸುಖದುಃಖ ಕಾರಣವೆಂಬ ರಹಸ್ಯವಾದ ಅರ್ಥವನ್ನು ಹೇಳುವುದಿಲ್ಲ. ನಾವು ಮಾಡುವ ಕರ್ಮವೇ ಸುಖದುಃಖಗಳಿಗೆ ಕಾರಣವೆಂದು ಅವರು ಹೇಳುತ್ತಾರೆ. ಅದು ಯುಕ್ತವಲ್ಲ. ಏಕೆಂದರೆ ನಾವು ಹಿಂದಿನ ಜನ್ಮದಲ್ಲಿ ಕರ್ಮವನ್ನು ಮಾಡುವೆವು, ಅದು ಈ ಜನ್ಮದಲ್ಲಿ ನಮಗೆ ಸುಖಾದಿಗಳನ್ನು

ಕೊಡುವುದು ಹೇಗೆ? ದುಃಖವು ಕಾರಣವಾಗಬೇಕಾದರೆ ಕಾರ್ಯಕ್ಕಿಂತ ವ್ಯವಹಿತ ವಾಗಬಾರದು. ಆದುದರಿಂದ ಪರಮಾತ್ಮನೇ ಹಿಂದಿನ ಜನ್ಮದ ನಮ್ಮ ಕರ್ಮಗಳನ್ನು ತಿಳಕೊಂಡು ಕರ್ಮಾನುಗುಣ ಫಲವನ್ನು ಕೊಡುತ್ತಾನೆಂದು ಹೇಳುವುದು ಯುಕ್ತವು. ಆದುದರಿಂದ ಕರ್ಮವು ಫಲವನ್ನು ಕೊಡುತ್ತದೆಂಬ ಶಾಸ್ತ್ರವಚನದ ಮುಖ್ಯಾರ್ಥ ವನ್ನು ಸ್ವೀಕರಿಸುವುದು ಆವಶ್ಯಕ ಎಂದು ಈ ಐತರೇಯಶ್ರುತಿಯು 'ಏತತ್ ಕರ್ಮ' ಎಂಬ ವಾಕ್ಯದಿಂದ ಹೇಳುತ್ತದೆ.

ಪರಮಾತ್ಮನು ಒಬ್ಬನೇ ಗುಣಪೂರ್ಣನು. ಅಪೂರ್ಣರಾದ ನಾವು ನಮಗೆ ಯೋಗ್ಯವಾದ ಗುಣಗಳನ್ನು ಹೊಂದಬೇಕಾದರೆ ಆ ಗುಣಪೂರ್ಣನನ್ನು ಆಶ್ರಯಿಸಲೇ ಬೇಕು. ಲೋಕದಲ್ಲಿ ದರಿದ್ರರಾದವರು, ಧನಿಕರನ್ನು ಆಶ್ರಯಿಸಿಯೇ ಧನವನ್ನು ಪಡೆಯಬೇಕಾಗುತ್ತದೆಯಲ್ಲವೇ! ಎಷ್ಟೋ ಜೀವರುಗಳು ಗುಣಪೂರ್ಣನಾದ ಪರಮಾತ್ಮನನ್ನು ಆಶ್ರಯಿಸದೆಯೇ ತಮಗೆ ಬೇಕಾಗುವ ಗುಣಗಳನ್ನು ಪಡೆಯಲು ಪ್ರಯತ್ನಿಸುತ್ತಾ ಇದ್ದಾರೆ. ಅದು ಯುಕ್ತವಲ್ಲ ಎಂಬ ಅಭಿಪ್ರಾಯದಿಂದ ಈ 'ಏತತ್ ಬ್ರಹ್ಮ' ಎಂಬುದಾಗಿ ಹೇಳುತ್ತಾ ಇದೆ. ಇದರ ಅರ್ಥವೇನೆಂದರೆ ಇವನು ಒಬ್ಬನೇ ಗುಣಪೂರ್ಣನು ಎಂದು.

ನಾವು ಅಪಾರ ದೋಷಗಳುಳ್ಳವರು. ನಮ್ಮ ದೋಷಗಳನ್ನು ಪರಿಹರಿಸಿ ಕೊಳ್ಳಬೇಕಾದರೆ ನಿರ್ದೋಷನಾದ ಪರಮಾತ್ಮನನ್ನೇ ಆಶ್ರಯಿಸಬೇಕು. ಅವನನ್ನು ಆಶ್ರಯಿಸದೇ ಇದ್ದರೆ ನಮ್ಮ ದೋಷಗಳು ಪರಿಹಾರವಾಗುವುದು ಸಾಧ್ಯವಿಲ್ಲ. ಲೋಕದಲ್ಲಿ ರೋಗಾದಿಗಳಿಂದ ಉಂಟಾಗುವ ದುಃಖಾದಿ ದೋಷಗಳನ್ನು ಪರಿಹರಿಸಿ ಕೊಳ್ಳುವುದಕ್ಕೋಸ್ಕರ ಪರಮಾತ್ಮನನ್ನು ಆಶ್ರಯಿಸದೆ ಡಾಕ್ಟರ್‌ಗಳೇ ಮೊದಲಾದ ವರನ್ನು ಆಶ್ರಯಿಸುತ್ತಾ ಇರುವುದು ಕಾಣುತ್ತದೆ. ಅದು ಯುಕ್ತವಲ್ಲ ಎಂದು ಹೇಳುವುದಕ್ಕಾಗಿ ಈ ಶ್ರುತಿಯು 'ಏತತ್ ಸತ್ಯಂ' ಎಂದು ಹೇಳುತ್ತದೆ. ಈ ಪರಮಾತ್ಮನು ನಿರ್ದೋಷನು ಎಂದು ಅದರ ಅರ್ಥವಾಗಿರುತ್ತದೆ.

ಇಂತಹ ಪರಮಾತ್ಮನನ್ನು ನಾವು ಎಂದೂ ಮರೆಯಬಾರದು. ದುಷ್ಕರ್ಮವನ್ನು ಮಾಡಬಾರದು ಎಂದು ನಿಷೇಧಿಸಿ, ಸತ್ಕರ್ಮವನ್ನೇ ಮಾಡುತ್ತಾ ಇರಬೇಕೆಂದು ವಿಧಿಸುತ್ತಿರುವ ಶಾಸ್ತ್ರಗಳ ತಾತ್ಪರ್ಯವೇನೆಂದರೆ –ದುಷ್ಕರ್ಮವನ್ನು ಮಾಡಿದವರು ಆ ದುಷ್ಕರ್ಮದ ಪ್ರಭಾವದಿಂಥ ಪರಮಾತ್ಮನನ್ನು ಮರೆತುಬಿಡುತ್ತಾರೆ. ಸತ್ಕರ್ಮಗಳನ್ನೆ ಮಾಡುತ್ತಾ ಇದ್ದರೆ ಅದರ ಪ್ರಭಾವದಿಂದ ಪರಮಾತ್ಮನ ಸ್ಮರಣವು ನಮಗೆಲ್ಲರಿಗೂ ಬೇಕು. ಅದರಿಂದಲೇ ನಮ್ಮ ಉದ್ಧಾರವಾಗಬೇಕು. ಎಂಬ ಅಭಿಪ್ರಾಯದಿಂದ ಶಾಸ್ತ್ರವು ದುಷ್ಕರ್ಮದ ನಿಷೇಧವನ್ನು ಸತ್ಕರ್ಮದ ವಿಧಿಯನ್ನೂ ಮಾಡುತ್ತಾ ಇದೆ.

ಇಂತಹ ಪರಮಾತ್ಮನನ್ನು ಬಿಟ್ಟು ಇತರರನ್ನು ಮೊರೆ ಹೊಂದಬಾರದು. ಇತರರಿಗೆ ನಮ್ಮನ್ನು ಉದ್ಧಾರ ಮಾಡುವ ಶಕ್ತಿಯು ಇಲ್ಲ. ಪರಮಾತ್ಮನನ್ನು ಮೊರೆಹೊಂದಿದರೆ ಇವನು ಶರಣಾಗತರನ್ನು ಉದ್ಧಾರಮಾಡುವುದು ನಿಶ್ಚಿತವಾಗಿದೆ. ಹಿಂದಿನ ಬ್ರಹ್ಮಾದಿಗಳು ಈ ಪರಮಾತ್ಮನನ್ನು ಮೊರೆಹೊಂದಿ ಶ್ರೇಷ್ಠ ಮುಕ್ತಿ ರೂಪ

ಪುರುಷಾರ್ಥವನ್ನು ಹೊಂದಿದ್ದಾರೆ. ಯಾರು ಈ ಪರಮಾತ್ಮನ ಸ್ಮರಣೆಯನ್ನೇ ಬಿಟ್ಟರೊ ಅವರು ಪರಾಭೂತರಾದರು. ಅಂಧಂತಮಸ್ಸಿನಲ್ಲಿ ಪತಿತರಾದರು.

ಪರಮಾತ್ಮನ ಭಕ್ತರುಗಳಾದ ಬ್ರಹ್ಮಾದಿ ದೇವತೆಗಳು ಮತ್ತು ಗುರುಗಳು ತಂದೆ-ತಾಯಿ ಮೊದಲಾದ ಹಿರಿಯರುಗಳಿಗೆ ಮುಮುಕ್ಷುವಾದವನು ನಮ್ರೀಭೂತ ನಾಗಬೇಕು. ಆದರೆ ಅವರ ಅಂತರ್ಯಾಮಿಯಾಗಿ ಇರುವ ಪರಮಾತ್ಮನನ್ನು ಸ್ಮರಿಸಿಕೊಂಡು ಅವರಿಗೆ ಶರಣಾಗತನಾಗಬೇಕು. ಪರಮಾತ್ಮನ ಭಕ್ತರನ್ನು ಬಿಟ್ಟು ಕೇವಲ ಪರಮಾತ್ಮನನ್ನು ಶರಣಾಗತರಾಗತಕ್ಕವರು ಪರಮಾತ್ಮನ ಪ್ರಿಯರಾಗುವುದಿಲ್ಲ. ಸರ್ವೋತ್ತಮತ್ವ ಬುದ್ಧಿಯಿಂದ ಪರಮಾತ್ಮನನ್ನು ಮಾತ್ರ ಮುಮುಕ್ಷುವಾದವನು ಶರಣಾಗತನಾಗಬೇಕು ಎಂದು ಈ ಉಪನಿಷತ್ತಿನ ತಾತ್ಪರ್ಯ.

ಪಿಶಾಚಗಳು ರಾಕ್ಷಸರು ಅಸುರರು ಈ ಮೂರು ವರ್ಗದವರು ಪರಮಾತ್ಮ ನನ್ನು ಬಿಟ್ಟರು. ಇದರಿಂದ ಅವರು ಅಧೋಗತಿಯನ್ನು ಹೊಂದಿದರು. ಈ ಸಂದರ್ಭದಲ್ಲಿ ಉಪನಿಷತ್ತಿನಲ್ಲಿ ಅಸುರರಿಗೆ ಈರಪಾದ ಎಂಬ ಹೆಸರು ಇದೆ ಎಂದು ಹೇಳಿರುತ್ತದೆ. ಈರ ಎಂದರೆ ಸರ್ವಪ್ರೇರಕರಾದ ಮುಖ್ಯಪ್ರಾಣದೇವರು. ಅವರ ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ ಈ ನಾಲ್ಕು ಗುಣಗಳ ಪೈಕಿ ಐಶ್ವರ್ಯವನ್ನು ಮಾತ್ರ ಹೊಂದಿದವರು ಅಸುರರು. ಈ ಕಾರಣದಿಂದ ಅಸುರರಿಗೆ ಈರಪಾದ ಎಂಬ ಹೆಸರು ಉಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ. ಇದರಿಂದ ನಾವು ತಿಳಿಯಬೇಕಾದದ್ದು ಏನೆಂದರೆ ನಾವು ಕೇವಲ ಐಶ್ವರ್ಯವನ್ನೇ ಮುಖ್ಯವಾಗಿ ಇಟ್ಟುಕೊಂಡು ಧರ್ಮ ಜ್ಞಾನ ವೈರಾಗ್ಯಗಳನ್ನು ಬಿಟ್ಟರೆ ನಾವು ಕೂಡ ಅಸುರ ವರ್ಗಕ್ಕೆ ಸೇರತಕ್ಕವರೆಂದೂ ಅಧೋಗತಿಗೆ ಹೋಗಬೇಕಾಗಬಹುದೆಂದೂ ತಿಳಿದು ಐಶ್ವರ್ಯವನ್ನು ಅಭಿವೃದ್ಧಿ ಮಾಡುವುದರ ಜೊತೆಗೆ ಧರ್ಮಜ್ಞಾನವೈರಾಗ್ಯಗಳನ್ನು ಅಭಿವೃದ್ಧಿ ಮಾಡುವವರಾಗ ಬೇಕು ಎಂದು ಉಪನಿಷತ್ತು ಸೂಚಿಸುತ್ತದೆ.

ದೇವತೆಗಳು ಋಷಿಗಳು ಮನುಷೋತ್ತಮರು ಈ ಮೂರು ವರ್ಗದವರು ಪರಮಾತ್ಮನನ್ನು ಆಶ್ರಯಿಸಿಕೊಂಡೇ ಇರತಕ್ಕವರು. ದೇವತೆಗಳು ಮುಖ್ಯಪ್ರಾಣ ದೇವರ ಅಂತರ್ಯಾಮಿಯಾದ ಪರಮಾತ್ಮನನ್ನು ಆಶ್ರಯಿಸಿದ್ದಾರೆ. ಋಷಿಗಳು ಸೂರ್ಯಾಂತರ್ಗತ ಪರಮಾತ್ಮನನ್ನು ವೇದಾಧ್ಯಯನದಿಂದ ತೃಪ್ತಿಪಡಿಸುತ್ತಾರೆ. ಮನುಷ್ಯೋತ್ತಮರು ಅಗ್ನಿಯಲ್ಲಿ ಅಂತರ್ಯಾಮಿಯಾಗಿ ಇರುವ ಪರಮಾತ್ಮನನ್ನು ಹೋಮ ಹವನಾದಿ ಕರ್ಮಗಳಿಂದ ತೃಪ್ತಿಪಡಿಸಿದರೆ ಮಾತ್ರ ಮುಕ್ತಿಗೆ ಅರ್ಹ ರಾಗುತ್ತಾರೆಯಾದಕಾರಣ ಅಗ್ನಿಯ ಅಂತರ್ಯಾಮಿಯಾದ ಪರಮಾತ್ಮನನ್ನು ಹೋಮ ಹವನಾದಿಗಳಿಂದ ತೃಪ್ತಿಪಡಿಸುತ್ತಾ ಇದ್ದಾರೆ.

ಪರಮಾತ್ಮನ ತ್ಯಾಗ ಮಾಡುವುದು ನಾಲ್ಕು ಪ್ರಕಾರವುಳ್ಳದ್ದು. ಪರಮಾತ್ಮನೇ ಇಲ್ಲವೆಂದಾಗಲೀ ಅವನು ಇತರ ದೇವತೆಗಳಿಗೆ ಸಮಾನನೆಂದಾಗಲೀ ಅವನು ಇತರ ದೇವತೆಗಳಿಂದ ಕಡಿಮೆ ಎಂದಾಗಲೀ ನಿರ್ಗುಣನೆಂದಾಗಲೀ ಜೀವರಿಂದ ಏಕೀಭೂತ ನೆಂದಾಗಲೀ ತಿಳಿಯುವುದು ಒಂದು ಪ್ರಕಾರದ ಪರಮಾತ್ಮನ ತ್ಯಾಗ. ಪರಮಾತ್ಮನ

ಪರಿವಾರಭೂತರಾದ ರಮಾಬ್ರಹ್ಮಾದಿಗಳನ್ನು ಪರಿವಾರತ್ವೇನ ಆಶ್ರಯಿಸದೇ ಇರುವುದು ಅಥವಾ ತಾರತಮ್ಯಕ್ಕೆ ವ್ಯತ್ಯಾಸವಾಗಿ ಅವರನ್ನು ಉಪಾಸನೆ ಮಾಡುವುದು ಎರಡನೇ ಪರಮಾತ್ಮನ ತ್ಯಾಗ. ಆಜ್ಞಾರೂಪಗಳಾದ ಶಾಸ್ತ್ರದ ವಿಧಿನಿಷೇಧಗಳನ್ನು ಉಲ್ಲಂಘಿಸುವುದು ಮೂರನೇ ಪರಮಾತ್ಮನ ತ್ಯಾಗ. ತತ್ವಜ್ಞಾನಾಯೋಗ್ಯರಿಗೆ ಪರಮಾತ್ಮನನ್ನು ಉಪದೇಶಿಸುವುದು ನಾಲ್ಕನೇ ಪರಮಾತ್ಮನ ತ್ಯಾಗ. ಈ ನಾಲ್ಕು ತ್ಯಾಗಗಳಲ್ಲಿ ಪ್ರಥಮ ಎರಡು ತ್ಯಾಗಗಳಿಂದ ನಿತ್ಯನರಕ ಪ್ರಾಪ್ತಿಯಾಗುತ್ತದೆ. ಆದುದರಿಂದ ಉತ್ತಮವಾದ ಮನುಷ್ಯ ಜನ್ಮವನ್ನು ಹೊಂದಿದ ಈ ಸಜ್ಜೀವನು ಪರಮ ಪ್ರಮಾಣಗಳಾದ ಸರ್ವವೇದಗಳಿಂದ ಪ್ರತಿಪಾದ್ಯನಾದ ಸರ್ವೋತ್ತಮನಾದ ಶ್ರೀಹರಿಯನ್ನು ಸರ್ವೋತ್ತಮತ್ವಬುದ್ಧಿಯಿಂದ ಅವನ ಪರಿವಾರಭೂತರಾದ ದೇವತೆಗಳನ್ನು ಪರಿವಾರತ್ವಬುದ್ಧಿಯಿಂದ ಶ್ರೀಮುಖ್ಯಪ್ರಾಣ ದೇವರನ್ನು ಮುಖ್ಯ ಗುರುತ್ವಬುದ್ಧಿಯಿಂದ ಆಶ್ರಯಿಸಿ ಜನ್ಮಸಾರ್ಥಕ್ಯವನ್ನು ಹೊಂದಬೇಕು.

●

೪. ೧೫. ಪ್ರಕರಣಗಳು: ಬೆಂಕಿಯ ಕಿಡಿಗಳು

ತ್ರಿವಿಕ್ರಮಪಂಡಿತಾಚಾರ್ಯರು ಶ್ರೀಮದಾಚಾರ್ಯರ ಗ್ರಂಥಗಳನ್ನು ಸ್ತುತಿಸುತ್ತ –ವಾದಾದಯಃ ಪ್ರಕರಣಸ್ಫುಲಿಂಗಾಃ –ಎಂಬುದಾಗಿ ಪ್ರಕರಣ ಗ್ರಂಥಗಳನ್ನು ಬೆಂಕಿಯ ಕಿಡಿಗಳೆಂದಿರುವರೆಂದು ನಾರಾಯಣಪಂಡಿತಾಚಾರ್ಯರು ಉಲ್ಲೇಖಿಸಿರುವರು.

ಪ್ರಕರಣಗಳು ಅಗ್ನಿಯ ಕಿಡಿಗಳೆಂದರೆ ಅಗ್ನಿ ಯಾವುದೆಂಬ ಪ್ರಶ್ನೆ ಸಹಜ. ಪ್ರಕರಣ ಗ್ರಂಥಗಳು ಯಾರ ಮೂಲಕ ಹೊರಟಿವೆಯೋ ಅಂತಹ ವಾಯುದೇವರೇ ಅಗ್ನಿ. ಅವರು ತಮ್ಮ ಅವತಾರತ್ರಯದಲ್ಲೂ ಅಗ್ನಿಯ ಸ್ವಭಾವವನ್ನು ತೋರಿಸಿದ್ದಿದೆ. ಹನುಮಂತನ ಅವತಾರದಲ್ಲಿ ತನ್ನ ಬಾಲದ ಬೆಂಕಿಯಿಂದ ಇಡೀ ಲಂಕೆಯನ್ನೇ ಸುಟ್ಟಿದ್ದಾರೆ. ಭೀಮಾವತಾರದಲ್ಲಿ ಅರಗಿನ ಮನೆಯನ್ನು ಸುಟ್ಟಿದ್ದಾರೆ. ಮಧ್ವಾವತಾರದಲ್ಲಿ ಪಾಷಂಡ ವಾದಿಗಳ ಯುಕ್ತ್ಯಾಭಾಸಗಳಿಂದ ಬೆಳೆದುಕೊಂಡು ವಿಷವೃಕ್ಷವನ್ನು ಸುಟ್ಟಿದ್ದಾರೆ. ಇದನ್ನೇ ತ್ರಿವಿಕ್ರಮಪಂಡಿತಾಚಾರ್ಯರು ವಾಯುಸ್ತುತಿಯಲ್ಲಿ ಸ್ತುತಿಸಿರುವರು– '......ಪ್ರಮಾಣಜ್ವಾಲಾಮಾಲಾಧರೋಽಗ್ನಿಃ ಪವನ ವಿಜಯತೇ ತೇಽವತಾರಸ್ತೃತೀಯಃ'

ಹೀಗೆ ಮೂರೂ ಅವತಾರಗಳಲ್ಲಿ ಅಗ್ನಿಯ ಸ್ವಭಾವವನ್ನು ತೋರ್ಪಡಿಸಿರುವ ಶ್ರೀಮುಖ್ಯಪ್ರಾಣರನ್ನು ಪ್ರತಿಪಾದಿಸುವ 'ಬಳಿತ್ಥಾಸೂಕ್ತ'ವನ್ನು ಸಾಯಣಭಾಷ್ಯದಲ್ಲಿ ಅಗ್ನಿಪ್ರತಿಪಾದಕವನ್ನಾಗಿ ವ್ಯಾಖ್ಯಾನಿಸಲ್ಪಟ್ಟಿದ್ದರೂ ಅದು ನಮಗೆ ಅನುಕೂಲವೆಂದೇ ಪರಿಗಣಿಸಬಹುದಾಗಿದೆ.

ಸದಾಗಮೈಕವಿಜ್ಞೇಯಮ್: ಕಿಡಿಯು ಗಾತ್ರದಲ್ಲಿ ಕಿರಿದೇ ಆಗಿರುವುದಾದರೂ ಗಾಳಿ ಹಾಕಿದಂತೆ ಹೆಚ್ಚೆಚ್ಚು ಪ್ರಜ್ವಲಿಸಬಹುದಾಗಿದೆ. ಅಂತೆಯೇ ಶ್ರೀಮದಾಚಾರ್ಯರ

ಪ್ರಕರಣಗ್ರಂಥಗಳೂ. ಇವುಗಳಲ್ಲಿ ಹೆಚ್ಚೆಚ್ಚು ಅಧ್ಯಯನ ಮಾಡಿದಂತೆ ಹೊಸ ಹೊಸ ಅರ್ಥವನ್ನು ಕಾಣಬಹುದಾಗಿದೆ.

ವಿಷ್ಣುತತ್ತ್ವನಿರ್ಣಯದ ಮಂಗಲಾಚರಣೆಯ 'ಸದಾಗಮೈಕ ವಿಜ್ಞೇಯಂ.....' ಎಂಬ ಮಾತನ್ನೇ ದೃಷ್ಟಾಂತವಾಗಿ ನೋಡಬಹುದು. ಇದಕ್ಕೆ ಪ್ರಸಿದ್ಧ ಅರ್ಥದ ಜೊತೆಗೆ, ಶ್ರೀಮದಾಚಾರ್ಯರ ವಾಙ್ಮಯದ ಮೂಲಕ ತಿಳಿಯಲು ಯೋಗ್ಯ ನಾದವನು –ಎಂಬ ಅರ್ಥವನ್ನೂ ಕಾಣಬಹುದಾಗಿದೆ. 'ಸದ್ವಾವ ಪ್ರಾಣಃ' ಎಂಬ ಪ್ರಮಾಣ ಸಾರುವಂತೆ ಪ್ರಾಣದೇವರೇ ಸತ್. ಇಂತಹ ಪ್ರಾಣದೇವರು ರಚಿಸಿರುವ ವಾಙ್ಮಯದಿಂದಲೇ ಜ್ಞೇಯನಾಗಿರುವವನು ಭಗವಂತನು. ಹಾಗೆಯೇ ಸದಾ ಗತಿಶೀಲ ನಾದ ಶ್ರೀಮುಖ್ಯಪ್ರಾಣರೇ 'ಸದಾಗಮರು'. ಇವರ ಮೂಲಕವೇ ತಿಳಿಯಲು ಯೋಗ್ಯನಾದವನು ಭಗವಂತ ಎಂಬುದಾಗಿ ಇನ್ನೊಂದು ಅರ್ಥ.

ಹೀಗೆ ಬೆಂಕಿಯ ಕಿಡಿಯಿಂದ ಅಗ್ನಿ ಪ್ರಜ್ವಲಿಸುವಂತೆ ಪ್ರಕರಣಗಳ ಒಂದೊಂದು ಮಾತೂ ಅನೇಕಾನೇಕ ಅರ್ಥಗಳ ಬೋಧಕ.

●

೪. ೧೬. ಭಗವಂತನೆಡೆಗೆ ಸಾಗಬೇಕೇ?

"ಅಮೃತಸ್ಯೈಷ ಸೇತುಃ" ಮುಕ್ತಾತ್ಮರಿಗೆ ಭಗವಂತನು ಸೇತುವೆಯಂತೆ ಆಧಾರನಾಗಿರುವನೆಂದು ಉಪನಿಷತ್ತು ಸಂದೇಶಿಸುತ್ತದೆ.

ಮುಕ್ತಾತ್ಮರಿಗಷ್ಟೇ ಅಲ್ಲ; ಮುಮುಕ್ಷುಗಳಿಗೆ ತಮ್ಮ ಗುರಿಯಾದ ಮುಕ್ತಿಯನ್ನು ಹೊಂದುವುದಕ್ಕೂ ಅವನೇ ಸೇತುವೆ. ಅಂದ ಮೇಲೆ ಅವನೆಡೆಗೆ ಮೊದಲು ಸಾಗಬೇಕು. ಅವನೆಡೆಗೆ ಸಾಗುವ ಪ್ರಯಾಣಕ್ಕೆ ಸರಿಯಾದ ಒಂದು ರಥ ಬೇಕು.

ಸಮಸ್ತಶಾಸ್ತ್ರಾರ್ಥ ನಿರ್ಣಾಯಕವೆನಿಸಿರುವ ಬ್ರಹ್ಮಸೂತ್ರವೇ ಅವನಡೆಗೆ ಸಾಗಲು ಸಮರ್ಥವಾದ ರಥ. ರಥಕ್ಕೆ ನಾಲ್ಕು ಚಕ್ರಗಳಿರುವಂತೆ ಬ್ರಹ್ಮಸೂತ್ರಕ್ಕೆ ನಾಲ್ಕು ಅಧ್ಯಾಯಗಳು. ರಥಕ್ಕೆ ಪ್ರಬಲಗಳಾದ ಕುದುರೆಗಳನ್ನು ಸಂಯೋಜಿಸಿದಾಗಷ್ಟೇ ಆ ರಥ ಮುಂದೆ ಸಾಗಬಲ್ಲದು. ಬ್ರಹ್ಮಸೂತ್ರ–ರಥವಾದರೂ ಸಾಧಕರನ್ನು, ಜಿಜ್ಞಾಸು ಗಳನ್ನು ಭಗವಂತನೆಡೆಗೆ ಸಾಗಿಸಲು ಇರುವ ಕುದುರೆಗಳೆಂದರೆ ಶ್ರೀಮದಾಚಾರ್ಯರು ಬ್ರಹ್ಮಸೂತ್ರಗಳ ಕುರಿತು ರಚಿಸಿರುವ ಸೂತ್ರಭಾಷ್ಯ ಹಾಗೂ ಅನುವ್ಯಾಖ್ಯಾನ ಗ್ರಂಥಗಳು. ಸೂತ್ರಭಾಷ್ಯ ಟೀಕಾಚಾರ್ಯರ ತತ್ತ್ವಪ್ರಕಾಶಿಕಾದಿಂದ ಕೂಡಿಯೇ ರಥದ ಕುದುರೆ ಎನಿಸಿದರೆ, 'ಅನುವ್ಯಾಖ್ಯಾನ'ವು ಶ್ರೀಮನ್ನ್ಯಾಯಸುಧಾದಿಂದ ಸಹಿತ ವಾಗಿಯೇ ಕುದುರೆ ಎನಿಸಬಲ್ಲುದು.

ಇಂತಹ ರಥವನ್ನು ಏರಿ ಸಂಚಾರ ನಡೆಸಿದಾಗಷ್ಟೇ ಖಂಡಿತಾ ಭಗವಂತನೆಡೆಗೆ ಸಾಗಬಲ್ಲೆವು.

●

೪. ೧೭. ಶ್ರೀಮದ್ಭಗವದ್ಗೀತೆಯ ಗಾಂಭೀರ್ಯ

ಶ್ರೀಮದ್ಭಗವದ್ಗೀತೆಯು ಮಹಾಭಾರತಾಂತರ್ಗತವಾದದ್ದು. ಇಡೀ ಮಹಾಭಾರತಕ್ಕೆ ಪ್ರತಿಯೊಂದು ಶ್ಲೋಕಕ್ಕೂ ಕಡಿಮೆಪಕ್ಷದಲ್ಲಿ ಹತ್ತು ಅರ್ಥಗಳಿವೆ ಎಂಬುದಾಗಿ ಮಹಾಭಾರತದ ಕರ್ತರಾದ ಶ್ರೀವೇದವ್ಯಾಸದೇವರೇ 'ದಶಾವರಾರ್ಥಂ ಸರ್ವತ್ರ' ಎಂದು ಸ್ಕಾಂದಪುರಾಣದಲ್ಲಿ ಹೇಳಿದ್ದಾರೆ. ಈ ವಿಷಯದಲ್ಲಿ ವಿಶ್ವಾಸ ಬರುವುದಕ್ಕೋಸ್ಕರವಾಗಿ ಸ್ಥಾಲೀಪುಲಾಕನ್ಯಾಯದಿಂದ ಗೀತೆಯ 'ನಾಸತೋ ವಿದ್ಯತೇ ಭಾವಃ ನಾಭಾವೋ ವಿದ್ಯತೇ ಸತಃ' ಎಂಬ ಶ್ಲೋಕಕ್ಕೆ ಶ್ರೀಮದಾಚಾರ್ಯರು ಹೇಳಿದ ಎರಡು ಅರ್ಥಗಳನ್ನು ಸೇರಿಸಿ (೧೧) ಅರ್ಥಗಳನ್ನು ಉದಾಹರಣರೂಪವಾಗಿ ಇಲ್ಲಿ ತೋರಿಸಲು ಉಪಕ್ರಮಿಸುತ್ತಿದ್ದೇವೆ.

ಒಂದನೆಯ ಅರ್ಥ

ಈ ಶ್ಲೋಕಕ್ಕೆ ಗೀತಾಭಾಷ್ಯದಲ್ಲಿ ಆಚಾರ್ಯರು ಹೇಳಿದ ಅರ್ಥವೇನೆಂದರೆ: ಅಸತಃ = ಪ್ರಕೃತಿಗೆ; ಅಭಾವೋ ನ ವಿದ್ಯತೆ = ಇಲ್ಲದ ಇರುವಿಕೆಯು ಇಲ್ಲ; ಅಂದರೆ ಪ್ರಕೃತಿಯು ಅನಾದಿನಿತ್ಯವಾದದ್ದು.

ಸತಃ–ಬ್ರಹ್ಮನಿಗೆ; ಅಭಾವೋ ನ ವಿದ್ಯತೇ = ಇಲ್ಲದೆ ಇರುವಿಕೆಯು ಇಲ್ಲ. ಅಂದರೆ ಪರಬ್ರಹ್ಮನು ಅನಾದಿ ನಿತ್ಯನಾಗಿದ್ದಾನೆ.

ಉಭಯೋರಪಿ ದೃಷ್ಟೋಂತಃ– ಈ ಎರಡೂ ಪ್ರಮೇಯಗಳು ತತ್ವದರ್ಶಿಗಳ ಪ್ರತ್ಯಕ್ಷ ಗೋಚರಗಳಾಗಿವೆ.

'ಸದಸದ್ರೂಪಯಾ ಚಾಸೌ ಗುಣಮಯ್ಯಾಗುಣೋ ವಿಭುಃ' ಎಂಬ ಭಾಗವತ ವಾಕ್ಯದ ಆಧಾರದಿಂದ 'ಅಸತ್' ಶಬ್ದಕ್ಕೆ ಪ್ರಕೃತಿ ಎಂಬ ಅರ್ಥವು ಹಾಗೆ 'ಸದೇವ ಸೌಮ್ಯ ಇದಮಗ್ರ ಆಸೀತ್' ಎಂಬ ಶ್ರುತಿಯ ಆಧಾರದಿಂದ 'ಸತ್' ಶಬ್ದಕ್ಕೆ ಪರಬ್ರಹ್ಮನೆಂದು ಅರ್ಥವು ಸಿದ್ಧವಾಗುತ್ತದೆ.

ಈ ರೀತಿಯಿಂದಾಗಿ ಪ್ರಕೃತಿಗೂ ಪರಬ್ರಹ್ಮನಿಗೂ ಅನಾದಿನಿತ್ಯತ್ವವು ಪೂರ್ವ ಗೀತಾಶ್ಲೋಕದಲ್ಲಿ ಪ್ರಸ್ತುತವಾದ ಜೀವರುಗಳ ಅನಾದಿನಿತ್ಯತ್ವದ ವಿಷಯದಲ್ಲಿ ಉದಾಹರಣರೂಪದಿಂದ ಹೇಳಲ್ಪಟ್ಟಿದೆ. ಆದ್ದರಿಂದ ಈ ಅರ್ಥವು ಪೂರ್ವಶ್ಲೋಕದಿಂದ ಸಂಗತವಾಗುತ್ತದೆ.

ಎರಡನೆಯ ಅರ್ಥ:

ಈ ಅರ್ಥದ ಮೇಲೆ ಬೌದ್ಧಾದಿ ನಾಸ್ತಿಕರು ಆಕ್ಷೇಪವನ್ನು ಮಾಡುತ್ತಾರೆ. ಅವರ ಮತದಲ್ಲಿ ಜಗತ್ತು ಹುಟ್ಟುವ ಪೂರ್ವದಲ್ಲಿ ಜಗತ್ತಿಗೆ ಕಾರಣರೂಪವಾಗಿ ಬ್ರಹ್ಮ ಪ್ರಕೃತಿ ಈ ಎರಡು ವಸ್ತುಗಳು ಅನಾದಿಯಾಗಿ ಇರುತ್ತಿದ್ದವು ಎಂದು ಒಪ್ಪುವುದಿಲ್ಲ. ಅವರು ಶೂನ್ಯದಿಂದಲೇ ಜಗತ್ತು ಹುಟ್ಟಿತು ಎಂದು ಹೇಳುತ್ತಾರೆ. ಬ್ರಹ್ಮ ಮತ್ತು ಪ್ರಕೃತಿ ಎರಡು ತತ್ವಗಳ ಆವಶ್ಯಕತೆಯೇ ಅವರ ಮತದಲ್ಲಿ ಇಲ್ಲ. ಆದ್ದರಿಂದ ಅವರು

ಬ್ರಹ್ಮ ಪ್ರಕೃತಿಗಳು ಅನಾದಿನಿತ್ಯಗಳು ಎಂದು ಹೇಳಿದ ಅರ್ಥವನ್ನು ಆಕ್ಷೇಪಿಸುತ್ತಾರೆ. ಈ ಅವರ ಆಕ್ಷೇಪವನ್ನು ಕೂಡ ಈ ಶ್ಲೋಕವು ಪರಿಹರಿಸುತ್ತದೆ. ಅದು ಹೇಗೆಂದರೆ: ಈ ಪಕ್ಷದಲ್ಲಿ 'ಅಸತಃ' ಎಂಬ ಪದವೂ 'ಸತಃ' ಎಂಬ ಪದವೂ ಪಂಚಮ್ಯಂತ ವಾದವುಗಳು. 'ವಿದ್ಯತೇ ಭಾವಃ' ಎಂಬಲ್ಲಿ 'ವಿದ್ಯತೇ ಅಭಾವಃ' ಎಂದು ಪದಚ್ಛೇದವು ಈ ಪಕ್ಷದಲ್ಲಿ ಅಲ್ಲ. 'ವಿದ್ಯತೇ ಭಾವಃ' ಎಂದು ಪದಚ್ಛೇದ ಮಾಡಬೇಕು. 'ಭಾವ' ಶಬ್ದಕ್ಕೆ ಉತ್ಪತ್ತಿ ಎಂದು ಅರ್ಥ. ತಥಾಚ ಅಸತ್ತಿನ ದೆಶೆಯಿಂದ ಸತ್ ಪದಾರ್ಥಕ್ಕೆ ಉತ್ಪತ್ತಿಯು ಕೂಡುವುದಿಲ್ಲ. ಯಾವ ಪ್ರಮಾಣದಿಂದಲೂ ಅಸತ್ತಿನಿಂದ ಸತ್ ಹುಟ್ಟುತ್ತದೆಂದು ಸಿದ್ಧವಾಗಿಲ್ಲ. ಸದ್ವಸ್ತುವಿನ ದೆಶೆಯಿಂದ ಸತ್ ಆದ ಜಗತ್ತು ಹುಟ್ಟುವುದಿಲ್ಲವೆಂದು ಹೇಳಲು ಶಕ್ಯವಿಲ್ಲ. ಲೋಕದಲ್ಲಿ ಮಣ್ಣು, ದಂಡ, ಚಕ್ರಾದಿ ಸತ್ಯಭೂತಕಾರಣಗಳಿಂದ ಘಟಾದಿ ಸತ್ ಕಾರ್ಯಗಳು ಹುಟ್ಟಿದ್ದು ಪ್ರತ್ಯಕ್ಷ ಸಿದ್ಧ ವಾಗಿದೆ. ಆದ್ದರಿಂದ ಸದ್ರೂಪನಾದ ಬ್ರಹ್ಮನಿಂದಲೂ ಹಾಗೆ ಸದ್ರೂಪವಾದ ಪ್ರಕೃತಿಯಿಂದಲೂ ಈ ಜಗತ್ತು ಹುಟ್ಟಿರುತ್ತದೆ ಎಂದು ಹೇಳುವುದೇ ಯುಕ್ತ.

ಮೂರನೆಯ ಅರ್ಥ:

ಈ ಮೊದಲು ಹೇಳಿದ ಎರಡು ಅರ್ಥಗಳಿಂದ ಬ್ರಹ್ಮನ ಅನಾದಿನಿತ್ಯತ್ವವು ಸಿದ್ಧವಾಯಿತು. ಹಾಗೇ ಬ್ರಹ್ಮನು ಇಲ್ಲದೆ ಜಗತ್ತು ಹುಟ್ಟಿತು ಎಂಬ ವಾದದ ನಿರಾಸವೂ ಮಾಡಲ್ಪಟ್ಟಿತು.

ಮೂರನೆಯ ಅರ್ಥದಿಂದ ಬ್ರಹ್ಮನೇ ಇಲ್ಲವೆಂದು ಹೇಳತಕ್ಕವರಿಗೆ ಅನರ್ಥವು ಹೇಳಲ್ಪಡುತ್ತದೆ. ತೈತ್ತಿರೀಯ ಶ್ರುತಿಯಲ್ಲಿ 'ಅಸನ್ನೇವ ಸ ಭವತಿ ಅಸದ್ಬ್ರಹ್ಮೇತಿ ವೇದ ಚೇತ್' ಎಂಬ ವಾಕ್ಯದಿಂದ ಬ್ರಹ್ಮನನ್ನು ಅಸತ್ ಎಂದು ತಿಳಿದವನು ದುಃಖಿಯೇ ಆಗುತ್ತಾನೆ ಎಂದು ಹೇಳಿರುತ್ತದೆ. ಅದೇ ಅರ್ಥವು ಈ ಗೀತಾಶ್ಲೋಕದಿಂದ ಹೇಳಲ್ಪಡುತ್ತದೆ. ಹೇಗೆಂದರೆ– 'ಅಸತಃ' ಎಂಬುದು ಭಾವಪ್ರಧಾನನಿರ್ದೇಶ ಮತ್ತು ಷಷ್ಠೀವಿಭಕ್ತ್ಯಂತವಾಗಿದೆ. ಆದ್ದರಿಂದ 'ಅಸತಃ' ಎಂಬುದಕ್ಕೆ 'ಅಸತ್ವಸ್ಯ' ಎಂದು ಅರ್ಥ. ಅಂದರೆ ದುಃಖಿತ್ವಸ್ಯ ಎಂದು ಅರ್ಥವಾಗುತ್ತದೆ. ಬ್ರಹ್ಮನು ಅಸತ್ ಎಂದು ತಿಳಿದವನಲ್ಲಿ ದುಃಖಿತ್ವದ ಅಭಾವವು ಇಲ್ಲ. ಇದೇ ತೈತ್ತರೀಯ ಶ್ರುತಿಯಲ್ಲಿರುವ 'ಅಸ್ತಿ ಬ್ರಹ್ಮೇತಿ ಚೇದ್ವೇದ ಸಂತಮೇನಂ ತತೋ ವಿದುಃ ಇತಿ' ಎಂಬ ವಾಕ್ಯದಿಂದ ಬ್ರಹ್ಮನು ಇದ್ದಾನೆಂದು ಯಾವಾತನು ತಿಳಿಯುತ್ತಾನೋ ಅವನನ್ನು ಸುಖೀ ಎಂದು ಜ್ಞಾನಿಗಳು ತಿಳಿಯುತ್ತಾರೆ ಎಂದು ಹೇಳಿರುತ್ತದೆ. ಅದೇ ಅಭಿಪ್ರಾಯವನ್ನು 'ನಾಭಾವೋ ವಿದ್ಯತೇ ಸತಃ' ಎಂಬ ಭಾಗದಿಂದ ಶ್ರೀಕೃಷ್ಣನು ಅರ್ಜುನನಿಗೆ ಹೇಳಿರುತ್ತಾನೆ. 'ಸತಃ' ಎಂಬುದು ಷಷ್ಠ್ಯಂತ ಮತ್ತು ಭಾವಪ್ರಧಾನ ನಿರ್ದೇಶವಾಗಿದೆ. 'ಸತಃ' ಎಂಬುದಕ್ಕೆ 'ಸತ್ವಸ್ಯ' ಎಂದು ಅರ್ಥ. ಅಂದರೆ ಸುಖಿತ್ವಸ್ಯ ಎಂದು ಅರ್ಥವಾಯಿತು. ಬ್ರಹ್ಮನು ಇದ್ದಾನೆ ಎಂದು ತಿಳಿಯತಕ್ಕವನಲ್ಲಿ ಸುಖಿತ್ವದ ಅಭಾವವು ಇಲ್ಲ. ಎಂದು ಒಟ್ಟಿಗೆ ಅರ್ಥವಾಯಿತು.

ನಾಲ್ಕನೇ ಅರ್ಥ:

'ಪಾಪಮೇವಾಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ' ಯುದ್ಧ ಮಾಡಿದರೆ ಪಾಪವು ಪ್ರಾಪ್ತವಾಗುತ್ತದೆ ಎಂದು ಅರ್ಜುನನು ಹೇಳಿದ್ದಾನೆ. ಈ ಅವನ ಪ್ರಶ್ನೆಗೆ ಶ್ರೀಕೃಷ್ಣನು ಉತ್ತರವನ್ನು ಕೊಡುತ್ತಿದ್ದಾನೆ. ಹೇಗೆಂದರೆ: 'ಅಸತಃ' ಅಂದರೆ ಅಸತ್ಕರ್ಮದ ದೆಶೆಯಿಂದ ಎಂದು ಅರ್ಥ. 'ಭಾವಃ' ಅಂದರೆ ಶ್ರೇಯಸ್ಸು ಎಂದು ಅರ್ಥ. ತಥಾ ಚ ಶಾಸ್ತ್ರನಿಷಿದ್ಧಕರ್ಮದಿಂದ ಶ್ರೇಯಸ್ಸು ಇಲ್ಲ ಎಂದು ಅರ್ಥವಾಯಿತು. 'ಸತಃ' ಎಂದರೆ ಸತ್ಕರ್ಮದ ದೆಸೆಯಿಂದ ಎಂದು ಅರ್ಥ. 'ಅಭಾವಃ' ಅಂದರೆ ಅಶ್ರೇಯಸ್ಸು, ಪಾಪ ಎಂದು ಅರ್ಥ. ಸತ್ಕರ್ಮದ ದೆಶೆಯಿಂದ ಪಾಪವು ಬರುವುದಿಲ್ಲ. ಪ್ರಕೃತದಲ್ಲಿ ಈ ಯುದ್ಧವು ದುಷ್ಟನಿಗ್ರಹರೂಪವಾದ್ದರಿಂದ ಭಗವದಾರಾಧನ ಬುದ್ಧಿಯಿಂದ ಈ ಯುದ್ಧವನ್ನು ಮಾಡುವುದು ಶಾಸ್ತ್ರವಿಹಿತಕರ್ಮವಾಗಿದೆ. ಇಂಥ ಸತ್ಕರ್ಮವಾದ ಯುದ್ಧದ ದೆಶೆಯಿಂದ ಪಾಪವು ಬಂದೀತು ಎಂದು ಶಂಕಿಸುವುದು ಸರಿಯಲ್ಲ. 'ಪ್ರಶಸ್ತೇ ಕರ್ಮಣಿ ಚ ತಥಾ ಸಚ್ಛಬ್ದಃ ಪಾರ್ಥ ಯುಜ್ಯತೇ' ಎಂಬ ಉತ್ತರ ಗೀತಾಶ್ಲೋಕದಿಂದ 'ಸತ್' ಶಬ್ದಕ್ಕೆ ಪ್ರಶಸ್ತಕರ್ಮ ಎಂದು ಹೇಳಿರುತ್ತದೆ. ಆದ್ದರಿಂದ 'ಅಸತ್' ಎಂಬ ಶಬ್ದಕ್ಕೆ ಅಪ್ರಶಸ್ತಕರ್ಮ, ನಿಷಿದ್ಧಕರ್ಮ ಎಂದು ಅರ್ಥವು ಸಿದ್ಧವಾಯಿತು.

ಐದನೇ ಅರ್ಥ:

ಈ ಯುದ್ಧವು ಪ್ರಶಸ್ತಕರ್ಮ ಎಂಬ ವಿಷಯದಲ್ಲಿ ಪ್ರಮಾಣವು ಇದೇ ಶ್ಲೋಕದಿಂದ ಹೇಳಲ್ಪಡುತ್ತದೆ.

ಶ್ರೀಕೃಷ್ಣಪರಮಾತ್ಮನು ಮತ್ತು ಭೀಮಸೇನದೇವರು ಧರ್ಮರಹಸ್ಯವನ್ನು ತಿಳಿದಂಥವರು. ಅವರು ಈ ಯುದ್ಧವು ಅಧರ್ಮವಾದರೆ ಇದರಲ್ಲಿ ಪ್ರವೃತ್ತಿಸಲಾರರು. ಶ್ರೀಕೃಷ್ಣನು ಸಾರಥಿಯಾಗಿ ಈ ಯುದ್ಧಕ್ಕೆ ಪ್ರೋತ್ಸಾಹವನ್ನು ಮಾಡುತ್ತಿದ್ದಾನೆ. ಭೀಮಸೇನದೇವರೂ ಯುದ್ಧಕ್ಕೇನೇ ನಿಂತಿದ್ದಾರೆ. ಆದ್ದರಿಂದ ಅವರಿಬ್ಬರೂ ಈ ಯುದ್ಧವನ್ನು ಧರ್ಮವೆಂದು ತಿಳಿದಿದ್ದಾರೆ. ಅವರಿಬ್ಬರ ತಿಳಿವಳಿಕೆಯು ಈ ಯುದ್ಧವು ಧರ್ಮವೆಂಬ ವಿಷಯದಲ್ಲಿ ಶ್ರೇಷ್ಠ ಪ್ರಮಾಣವಾಗಿರುತ್ತದೆ. ಇಲ್ಲಿ ಪ್ರತಿಪದಾರ್ಥವೇನೆಂದರೆ: 'ಅಸದೇವ ಇದಮಗ್ರ ಆಸೀತ್' ಎಂಬಲ್ಲಿ 'ಅಸತ್' ಶಬ್ದಕ್ಕೆ ಪರಬ್ರಹ್ಮ ಎಂದು ಅರ್ಥವು ಕಂಡದೆ. 'ಅಸತಃ ಸದಜಾಯತ' ಎಂಬ ಶ್ರುತಿಯಲ್ಲಿ 'ಸತ್' ಶಬ್ದಕ್ಕೆ ಮುಖ್ಯಪ್ರಾಣದೇವರು ಎಂದು ಅರ್ಥ ಕಂಡಿದೆ. ಬ್ರಹ್ಮನಿಂದ ಮುಖ್ಯಪ್ರಾಣದೇವರು ಹುಟ್ಟಿದವರು ಎಂದು ಆ ಶ್ರುತಿಯ ಅರ್ಥ. 'ಭಾವ' ಎಂಬ ಶಬ್ದಕ್ಕೆ ಜ್ಞಾನ ಎಂದು ಅರ್ಥ. 'ನಾಭಾವೋ ಅನುಪಲಬ್ಧೇಃ' ಎಂಬ ಬ್ರಹ್ಮಸೂತ್ರದಲ್ಲಿ 'ಭಾವ' ಶಬ್ದಕ್ಕೆ ಜ್ಞಾನ ಎಂಬ ಅರ್ಥವು ಕಂಡಿದೆ. ಆದ್ದರಿಂದ 'ಅಭಾವಃ' ಎಂಬುದಕ್ಕೆ ಅಜ್ಞಾನ ಎಂದು ಅರ್ಥವಾಯಿತು. ತಥಾ ಚ ಅಸತ್, ಸತ್ ಶಬ್ದವಾಚ್ಯರಾದ ಪರಬ್ರಹ್ಮರೂಪಿ ಕೃಷ್ಣ, ಮುಖ್ಯಪ್ರಾಣರೂಪಿ ಭೀಮಸೇನ ಇವರುಗಳಿಗೆ ಧರ್ಮವಿಷಯದಲ್ಲಿ ಅಜ್ಞಾನವು ಇಲ್ಲ ಎಂದು ಶ್ಲೋಕದ ಅರ್ಥವು. ಇದೇ ವಿಷಯದಲ್ಲಿ ಶ್ರೀಮದಾಚಾರ್ಯರು

ಮಹಾಭಾರತತಾತ್ಪರ್ಯನಿರ್ಣಯ ಗ್ರಂಥದಲ್ಲಿ 'ಇತಿ ಧರ್ಮರಹಸ್ಯಂ ತು ವಿತ್ತಃ ಕೃಷ್ಣವೃಕೋದರೌ' ಎಂಬುದಾಗಿ ಹೇಳಿದ್ದಾರೆ.

ಆರನೇ ಅರ್ಥ:

ಯುದ್ಧದಿಂದ ಸ್ತ್ರೀಯರು ಅನಾಥರಾಗುತ್ತಾರೆ. ಆಗ ದುಷ್ಟರು ಅವರನ್ನು ದೂಷಿಸುತ್ತಾರೆ. ಸ್ತ್ರೀಯರು ದೂಷಿತರಾದರೆ ವರ್ಣಸಂಕರವು ಆಗುತ್ತದೆ. ವರ್ಣ ಸಂಕರದಿಂದ ನರಕಪ್ರಾಪ್ತಿ ಆಗುತ್ತದೆ ಎಂದು ಅರ್ಜುನನು ಶಂಕಿಸಿದ್ದಾನೆ. ಈ ಶಂಕೆಗೆ ಶ್ರೀಕೃಷ್ಣನು ಎಲ್ಲಿಯೂ ಉತ್ತರವನ್ನು ಹೇಳಲಿಲ್ಲ ಎಂದು ಕೆಲವರ ಆಕ್ಷೇಪವಿದೆ. ಆದರೆ ಈ ಶ್ಲೋಕದಲ್ಲಿ ಪರಮಾತ್ಮನು ಉತ್ತರವನ್ನು ಕೊಟ್ಟಿದ್ದಾನೆ. ಉತ್ತರವೇನೆಂದರೆ: ಈ ಯುದ್ಧವು ದುಷ್ಟನಿಗ್ರಹರೂಪವಾದ್ದರಿಂದ ಈ ಯುದ್ಧದ ಅನಂತರ 'ಅಸತಃ ಭಾವಃ ನ ವಿದ್ಯತೇ' ದುಷ್ಟರಿಗೆ ಇರುವಿಕೆ ಇಲ್ಲ. ಯುದ್ಧಾನಂತರದಲ್ಲಿ 'ಸತಃ ಅಭಾವಃ ನ ವಿದ್ಯತೇ' ಪಾಂಡವಾದಿ ಸಜ್ಜನರಿಗೆ ಅಭಾವವು ಇಲ್ಲ. ತಥಾಚ ದುಷ್ಟರಿದ್ದರೇನೇ ಸ್ತ್ರೀಯರು ದೂಷಿತರಾಗುತ್ತಾರೆ. ಯುದ್ಧಾನಂತರದಲ್ಲಿ ದುಷ್ಟರು ಇಲ್ಲದಂತಾಗಿ ಸಜ್ಜನರು ಮಾತ್ರ ಉಳಿಯುವುದರಿಂದ ಸ್ತ್ರೀಯರು ಅನಾಥರು ಮತ್ತು ದೂಷಿತರೂ ಆಗಲು ಪ್ರಸಂಗವಿಲ್ಲ. ಆದ್ದರಿಂದ ಈ ಯುದ್ಧವು ವರ್ಣಸಂಕರದ್ವಾರಾ ನರಕಹೇತುವು ಆಗುವುದಿಲ್ಲ ಎಂದು ಅಭಿಪ್ರಾಯ.

ಏಳನೇ ಅರ್ಥ:

'ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ' ಎಂಬ ಅರ್ಜುನನ ಪ್ರಶ್ನೆಗೂ ಕೂಡ ಶ್ರೀಕೃಷ್ಣನು ಈ ಶ್ಲೋಕದಿಂದ ಉತ್ತರವನ್ನು ಕೊಡುತ್ತಾನೆ.

ಮುಕ್ತಿದೆಶೆಯಲ್ಲಿ ಮಾತ್ರ ಪೂರ್ಣವಾದ ಸುಖವು ಇರುತ್ತದೆ. ಸಂಸಾರದಲ್ಲಿ ದುಃಖ ಇಲ್ಲದೇ ಕೇವಲ ಸುಖದಿಂದಲೇ ಇರುವುದು ಎಂಬುದು ಇಲ್ಲ. ಆದ್ದರಿಂದ ಸುಖದಿಂದಲೇ ಇರಬೇಕೆಂಬ ಇಚ್ಛೆಯಿಂದ ನೀನು ಯುದ್ಧಮಾಡದೆ ಇರುವುದು ಯುಕ್ತವಲ್ಲ. ಸ್ವಧರ್ಮಾಚರಣೆಯನ್ನು ದುಃಖಕ್ಕೆ ಹೆದರಿ ಬಿಡಬಾರದು ಎಂದು ಈ ಶ್ಲೋಕದ ತಾತ್ಪರ್ಯಾರ್ಥವು. ಪದಗಳ ಅರ್ಥವೇನೆಂದರೆ ಮೂರನೇ ಅರ್ಥದಲ್ಲಿ ಹೇಳಿದ ಶಬ್ದಾರ್ಥವು ಇಲ್ಲಿ ಅಭಿಪ್ರೇತವಾಗಿದೆ. ಈ ಪಕ್ಷದಲ್ಲಿ 'ಸಂಸಾರೇ' ಎಂಬ ಶಬ್ದದ ಅಧ್ಯಾಹಾರ ಮಾಡಬೇಕು. ಸಂಸಾರದೆಶೆಯಲ್ಲಿ ಅಸತ್ವದ ಅಂದರೆ ದುಃಖಿತ್ವದ ಅಭಾವವು ಇಲ್ಲ. ಹೇಗೆ ಸಂಸಾರದಲ್ಲಿ ಸತ್ವದ, ಸುಖಿತ್ವದ ಅಭಾವವು ಇಲ್ಲವೇ ಹಾಗೆ.

ಎಂಟನೇ ಅರ್ಥ:

"ಎಲೋ! ಶ್ರೀಕೃಷ್ಣನೇ ಪುನಃ ಪುನಃ ನನಗೇನೇ ತತ್ವೋಪದೇಶ ಮಾಡುತ್ತಾ ಇದ್ದೀ. ದುರ್ಯೋಧನನಿಗೆ ನೀನು ಏಕೆ ಉಪದೇಶ ಮಾಡಬಾರದು? ಅವನಿಗೆ

ಉಪದೇಶ ಮಾಡಿ ಅವನನ್ನು ಸನ್ಮಾರ್ಗನಿರತನನ್ನಾಗಿ ಮಾಡು'' ಎಂದು ಅರ್ಜುನನು ಪ್ರಶ್ನೆ ಮಾಡಿದನು. ಆ ಪ್ರಶ್ನೆಗೂ ಈ ಶ್ಲೋಕದಿಂದಲೇ ಶ್ರೀಕೃಷ್ಣನು ಉತ್ತರ ಕೊಡುತ್ತಿದ್ದಾನೆ.

ಈ ಪಕ್ಷದಲ್ಲಿ ಭಾವ ಶಬ್ದಕ್ಕೆ ಭಕ್ತಿ ಎಂದು ಅರ್ಥ. ಸತಃ ಸಜ್ಜನನಾದ ನಿನಗೆ ಅಭಾವಃ ಅಭಕ್ತಿಯು, ನ ವಿದ್ಯತೇ ಇಲ್ಲ. ಅದರಂತೆ ಅಸತಃ ದುಷ್ಟನಾದ ದುರ್ಯೋಧನನಿಗೆ, ಭಾವಃ ಭಕ್ತಿಯು, ನ ವಿದ್ಯತೇ ಇಲ್ಲ. ತಾತ್ಪರ್ಯಾರ್ಥವೇನೆಂದರೆ: "ಎಲೋ! ಅರ್ಜುನ ನೀನು ನನ್ನ ಪರಮ ಭಕ್ತನಾದ್ದರಿಂದ ನಿನಗೆ ನಾನು ಹೇಗೆ ಉಪದೇಶ ಮಾಡುತ್ತೇನೋ ಹಾಗೆ ದುರ್ಯೋಧನನಿಗೆ ಉಪದೇಶ ಮಾಡಲಾರೆ. ಅಸತಃ ದುರ್ಯೋಧನನಿಗೆ ಭಾವಃ ಭಕ್ತಿಯು, ನ ವಿದ್ಯತೇ ಇಲ್ಲ. ಈ ಅರ್ಥವು 'ಭಕ್ತೋಽಸಿ ಮೇ ಸಖಾ ಚೇತಿ ರಹಸ್ಯಂ ಹ್ಯೇತದುತ್ತಮಂ' ಎಂಬ ಶ್ಲೋಕದಿಂದ ಸ್ಪಷ್ಟೀಕರಿಸಲ್ಪಡುತ್ತದೆ.

ಒಂಭತ್ತನೇ ಅರ್ಥ:

ಇದರ ಮೇಲೆ ಅರ್ಜುನನು ಪ್ರಶ್ನೆ ಮಾಡುತ್ತಾನೆ. ಏನೆಂದರೆ ನನ್ನನ್ನು ಭಕ್ತನನ್ನಾಗಿ ಮಾಡಿದ್ದು ನೀನೇ. ನನ್ನ ಮೇಲೆ ಕೃಪಾಮಾಡಿ ಭಕ್ತಿಯನ್ನು ಉಂಟುಮಾಡಿದಂತೆ ದುರ್ಯೋಧನನಲ್ಲಿ ನೀನು ಭಕ್ತಿಯನ್ನು ಏಕೆ ಉಂಟುಮಾಡಬಾರದು? ಎಂಬ ಪ್ರಶ್ನೆಗೂ ಈ ಶ್ಲೋಕದಿಂದಲೇ ಶ್ರೀಕೃಷ್ಣಪರಮಾತ್ಮನು ಉತ್ತರವನ್ನು ಹೇಳುತ್ತಾನೆ. ಒಂದು ಪದಾರ್ಥದ ಸೃಷ್ಟಿಯಾಗಬೇಕಾದರೆ ಆ ಸೃಷ್ಟಿಗೆ ಕರ್ತನು ಮಾತ್ರ ಇದ್ದರೆ ಸಾಲದು. ಅದಕ್ಕೆ ಉಪಾದಾನ ಕಾರಣವೂ ಬೇಕಾಗುತ್ತದೆ. ವೃಕ್ಷವು ಹುಟ್ಟುವ ಮೊದಲು ಇಡೀ ವೃಕ್ಷದ ಸ್ವರೂಪವು ಸೂಕ್ಷ್ಮರೂಪದಿಂದ ಬೀಜದಲ್ಲಿ ಇರುತ್ತದೆ. ಯಾವ ವಸ್ತುವಿಗೆ ತಾನು ಹುಟ್ಟುವ ಮೊದಲು ಸೂಕ್ಷ್ಮರೂಪದಿಂದ ಸ್ಥಿತಿಯು ಇಲ್ಲವೇ ಅದಕ್ಕೆ ಸ್ಥೂಲರೂಪದಿಂದ ಉತ್ಪತ್ತಿಯೂ ಇಲ್ಲ. ಯಾವುದು ಸೂಕ್ಷ್ಮರೂಪದಿಂದ ಇರುತ್ತದೋ ಅದಕ್ಕೆ ಸ್ಥೂಲರೂಪದಿಂದ ಉತ್ಪತ್ತಿಯ ಅಭಾವವು ಇಲ್ಲ. ಪ್ರಕೃತದಲ್ಲಿ ದುರ್ಯೋಧನನ ಸ್ವರೂಪದಲ್ಲಿ ಭಕ್ತ್ಯಾದಿ ಸದ್ಗುಣಗಳು ಸೂಕ್ಷ್ಮರೂಪದಿಂದ ಇಲ್ಲ. ಆದ್ದರಿಂದ ಅವನಲ್ಲಿ ಭಕ್ತ್ಯಾದಿ ಗುಣಗಳು ಸೃಷ್ಟಿಸಲ್ಪಡುವುದಿಲ್ಲ. ನಿನ್ನ ಸ್ವರೂಪದಲ್ಲಿ ಭಕ್ತ್ಯಾದಿ ಸದ್ಗುಣಗಳು ಸೂಕ್ಷ್ಮರೂಪದಿಂದ ಇದ್ದ ಕಾರಣ ಸ್ಥೂಲರೂಪದಿಂದ ಅದರ ಸೃಷ್ಟಿಯನ್ನು ನಾನು ಮಾಡಿದ್ದೇನೆ ಎಂದು ಶ್ರೀಕೃಷ್ಣನು ಈ ಶ್ಲೋಕದಿಂದ ಹೇಳುತ್ತಾನೆ. 'ಅಸತಃ' ಎಂಬ ಶಬ್ದಕ್ಕೆ ಸೂಕ್ಷ್ಮರೂಪದಿಂದ ಇಲ್ಲದೇ ಇದ್ದದ್ದಕ್ಕೆ ಎಂದು ಅರ್ಥ. 'ಭಾವ' ಶಬ್ದಕ್ಕೆ ಸೃಷ್ಟಿ ಎಂದು ಅರ್ಥ.

ಹತ್ತನೇ ಅರ್ಥ:

ಈ ಒಂಭತ್ತನೆ ಅರ್ಥವನ್ನೇ ರೀತ್ಯಂತರದಿಂದ ಸಮರ್ಥಿಸುತ್ತಾನೆ. ಏನೆಂದರೆ ರಾಜನು ಕಾಯಿದೆಗೆ ವಿರುದ್ಧವಾಗಿ ಹೇಗೆ ನಡೆಯುವುದಿಲ್ಲವೋ ಅದೇ ರೀತಿಯಾಗಿ ಈಶ್ವರನಾದ ನಾನೂ ಕೂಡ 'ಕಾಯಿದೆ' ಗ್ರಂಥಕ್ಕೆ ವಿರುದ್ಧವಾಗಿ ನಡೆಯುವುದಿಲ್ಲ.

ಕಾಯಿದೆ ಗ್ರಂಥವಾದ ವೇದವು ಈಶ್ವರನಾದ ನನ್ನಿಂದ ಸಜ್ಜನ ಪರಿತ್ರಾಣವನ್ನೂ ದುರ್ಜನ ವಿನಾಶವನ್ನೂ ಪ್ರತಿಪಾದಿಸುತ್ತದೆ. ಆದುದರಿಂದ ದುರ್ಜನರಾದ ದುರ್ಯೋಧನಾದಿಗಳಿಗೆ ಭಕ್ತ್ಯಾದಿಗುಣಗಳನ್ನು ನಾನು ಉಂಟುಮಾಡಿದರೆ ದುರ್ಜನರ ವಿನಾಶ ಮಾಡಿದಂತೆ ಆಗುವುದಿಲ್ಲ. ಅದಕ್ಕಾಗಿ ದುರ್ಜನರಲ್ಲಿ ನಾನು ಭಕ್ತ್ಯಾದಿಗಳನ್ನು ಉಂಟುಮಾಡುವುದಿಲ್ಲ. ಈ ಪಕ್ಷದಲ್ಲಿ ವೇದೇ ಎಂಬ ಶಬ್ದವನ್ನು ಅಧ್ಯಾಹಾರ ಮಾಡಬೇಕು. ಪ್ರತಿಪದಾರ್ಥವೇನೆಂದರೆ: ವೇದೇ ಅಸತಃ ವೇದರೂಪ ಕಾಯಿದೆ ಗ್ರಂಥದಲ್ಲಿ ಇಲ್ಲದೆ ಇದ್ದದ್ದಕ್ಕೆ, ಭಾವಃ– ಸೃಷ್ಟಿಯು, ನ ವಿದ್ಯತೇ– ಇಲ್ಲ, ಸತಃ ವೇದರೂಪ ಕಾಯಿದೆ ಗ್ರಂಥದಲ್ಲಿ ಇದ್ದದ್ದಕ್ಕೆ ಅಭಾವಃ– ಅಭಾವವು, ನ ವಿದ್ಯತೇ– ಇಲ್ಲ ಎಂದು ಅರ್ಥವು.

ಹನ್ನೊಂದನೇ ಅರ್ಥ:

ವೇದವು ಪ್ರಮಾಣವಾದ್ದರಿಂದ ವೇದಕ್ಕೆ ವಿರುದ್ಧವಾಗಿ ನಾನು ಮಾಡುವುದಿಲ್ಲ ಎಂದು ಶ್ರೀಕೃಷ್ಣನು ಇದೇ ಶ್ಲೋಕದಿಂದ ಸಮರ್ಥಿಸುತ್ತಾನೆ. ಇಲ್ಲಿ ವೇದೇ ಎಂಬ ಪದವನ್ನು ಅಧ್ಯಾಹಾರ ಮಾಡಬೇಕು. ವೇದೇ ಅಸತಃ ಭಾವೋ ನ ವಿದ್ಯತೇ, ವೇದೇ ಸತಃ ಅಭಾವೋ ನ ವಿದ್ಯತೇ. ಲೋಕದಲ್ಲಿ ಇದ್ದ ಎಲ್ಲ ಪ್ರಮೇಯಗಳು ವೇದದಲ್ಲಿ ಇವೆ. ಅಂದರೆ ವೇದವು ಅವುಗಳನ್ನೆಲ್ಲವನ್ನು ಪ್ರತಿಪಾದಿಸುತ್ತದೆ. ಇಲ್ಲದೆ ಇದ್ದ ಪ್ರಮೇಯಗಳು ವೇದದಲ್ಲಿ ಇರುವುದಿಲ್ಲ. ಅಂದರೆ ವೇದವು ಇಲ್ಲದೇ ಇದ್ದ ಪ್ರಮೇಯಗಳನ್ನು ಪ್ರತಿಪಾದಿಸುವುದಿಲ್ಲ. ಆದ್ದರಿಂದ ವೇದವು ಪ್ರಮಾಣವಾಗಿರುತ್ತದೆ ಎಂದು ಅರ್ಥ.

●

ದ್ವಾದಶಸ್ತೋತ್ರ 'ವಂ'ದ

ಪಾಪಪುರುಷಧ್ಯಾನದ ಸಂದರ್ಭದಲ್ಲಿ 'ವಂ' ಅನ್ನು ಅಮೃತ ಬೀಜವನ್ನಾಗಿ ಪರಿಗಣಿಸಲಾಗುವುದು. ಆದ್ದರಿಂದ 'ವಂ' ಅಮೃತಕ್ಕೆ ಸಂಕೇತ. ಶ್ರೀಮದಾಚಾರ್ಯರಿಂದ ರಚಿತವಾದ ದ್ವಾದಶಸ್ತೋತ್ರ 'ಅಮೃತಪ್ರದ' ಎಂದು ಸೂಚಿಸುವುದಕ್ಕಾಗಿಯೇ 'ವಂದೇ ವಂದ್ಯಂ....' ಎಂದು 'ವಂ'ನಿಂದ ಪ್ರಾರಂಭಿಸಿ 'ಆನಂದತೀರ್ಥ ಪರಾನಂದ ವರದ' 'ದ'ಕ್ಕೆ ಕೊನೆಗೊಳಿಸಲಾಗಿದೆ. ಇದರಿಂದ ದ್ವಾದಶಸ್ತೋತ್ರವು 'ವಂದ' 'ಅಮೃತಪ್ರದ' ಎಂದು ತಿಳಿಸಿದಂತಾಗುವುದು.

ವಿದ್ಯಾಭಂಡಾರ

ನಿಧಿ – ೫

ಧರ್ಮ



"ಜಗದೀಶ್ವರನಿಗೆ ಮತ್ತು ಅವನ ವಿಶೇಷ ಭಕ್ತರಾದ ಸಜ್ಜೀವರಿಗೆ ಪ್ರೀತಿಕರವಾದದ್ದು ಧರ್ಮ; ಅವರಿಗೆ ಅಪ್ರೀತಿಯನ್ನುಂಟುಮಾಡುವ ಕಾರ್ಯವು ಅಧರ್ಮ. ಶ್ರೀ ಮಧ್ವಾಚಾರ್ಯರು 'ಜಗದೀಶ್ವರನು ಪ್ರೀತನಾಗಲಿ' ಎಂದು ಉದ್ದೇಶಿಸಿಯೇ ಸಕಲ ಧರ್ಮಗಳನ್ನು ಆಚರಿಸಬೇಕು" –ಎಂದು ಎಚ್ಚರಿಸಿರುವರು.

೫. ೧. ಮಧ್ವಸಿದ್ಧಾಂತದಲ್ಲಿ ಧರ್ಮ ಅಧರ್ಮಗಳ ಸ್ವರೂಪ

ಜಗದೀಶ್ವರನಿಗೆ ಮತ್ತು ಅವನ ವಿಶೇಷ ಭಕ್ತರಾದ ಸಜ್ಜೀವರಿಗೆ ಪ್ರೀತಿಕರವಾದದ್ದು ಧರ್ಮ. ಅವರಿಗೆ ಅಪ್ರೀತಿಯನ್ನುಂಟುಮಾಡುವ ಕಾರ್ಯವು ಅಧರ್ಮ. ವೇದವಿಹಿತವಾದದ್ದು ಧರ್ಮ, ವೇದನಿಷಿದ್ಧವಾದದ್ದು ಅಧರ್ಮ ಎಂದೂ ಹೇಳುವುದು ಉಂಟು. ಸತ್ಯವನ್ನೇ ಹೇಳಬೇಕೆಂದು ವೇದ ವಿಹಿತವಾಗಿದೆ. ಆದುದರಿಂದ ಸುಳ್ಳು ಹೇಳುವುದು ಧರ್ಮವಲ್ಲ ಎಂದು ಅರ್ಥವಾಗುತ್ತದೆ. ಆದರೆ ಅಶ್ವತ್ಥಾಮಾ ಹತಃ ಎಂದು ಸುಳ್ಳು ಹೇಳುವುದೂ ಧರ್ಮ ಎಂದು ಮಹಾಭಾರತದ ಕಥೆಯಿಂದ ತಿಳಿದಿದೆ.

ಶ್ರೀಕೃಷ್ಣನಿಗೆ ಆ ರೀತಿ ಸುಳ್ಳು ಹೇಳುವುದು ಇಷ್ಟವಾಗಿತ್ತು. ಧರ್ಮರಾಜನನ್ನು ಕುರಿತು ಸುಳ್ಳು ಹೇಳಿ ಎಂದು ಶ್ರೀಕೃಷ್ಣನು ಆಜ್ಞೆ ಮಾಡಿದನು. ಧರ್ಮರಾಜನು ಆ ಸುಳ್ಳು ಮಾತನ್ನು ಹೇಳುವುದು ಧರ್ಮವಲ್ಲ ಎಂದು ತಿಳಿದು ಹಾಗೆ ಹೇಳಲಿಲ್ಲ. ಇದರಿಂದ ಧರ್ಮರಾಜನಿಗೆ ನರಕದರ್ಶನವು ಆಯಿತು. ಈ ದೃಷ್ಟಾಂತದಿಂದ ಸುಳ್ಳು ಹೇಳುವುದೂ ಧರ್ಮವೆಂದು ತಿಳಿಯುತ್ತದೆ. ಸತ್ಯವೆಂದರೆ ಸಜ್ಜನರಿಗೆ ಹಿತಕರವಾದದ್ದು ಎಂದು ಅರ್ಥ. ಸಜ್ಜನರಿಗೆ ಸುಳ್ಳು ಹೇಳಿದ್ದರಿಂದ ಹಿತವಾಗುತ್ತಿದ್ದರೆ ಸುಳ್ಳು ಹೇಳುವುದೂ ಸತ್ಯವೇ ಆಯಿತು. ಸತ್ಯ ಶಬ್ದಕ್ಕೆ ಈ ಅರ್ಥವನ್ನು ಇಟ್ಟುಕೊಂಡು ವೇದವು 'ಸತ್ಯಂ ವದ' ಎಂದು ವಿಧಿಸಿದ್ದು. ಆದುದರಿಂದ ಸಜ್ಜನರಿಗೆ ಹಿತವಾದ ಸುಳ್ಳು ಮಾತು ಕೂಡಾ ವೇದವಿಹಿತವೇ ಆಯಿತು. ಈ ರೀತಿಯಾದ ವೇದಾರ್ಥವು ಧರ್ಮರಾಜನ ಮನಸ್ಸಿನಲ್ಲಿ ಆಗ ಹೊಳೆಯಲಿಲ್ಲ. ಶ್ರೀಕೃಷ್ಣನ ಆಜ್ಞೆಯಿಂದ ಈ ರೀತಿ ಸುಳ್ಳು ಹೇಳುವುದೂ ಆ ಸಂದರ್ಭದಲ್ಲಿ ಸಜ್ಜನರಿಗೆ ಹಿತಕರವೇ ಆಗಿತ್ತು. ಸಜ್ಜನರಿಗೆ ಯಾವುದು ಹಿತಕರವೋ ಅದೇ ಜಗದೀಶ್ವರನಿಗೂ ಪ್ರಿಯವಾದದ್ದು. ಈಶ್ವರನಿಗೆ ಸ್ವಾರ್ಥವು ಸ್ವಲ್ಪವೂ ಇಲ್ಲ. ಅವು ಎಲ್ಲವನ್ನೂ ಸಜ್ಜನರ ಹಿತಕ್ಕಾಗಿ ಮಾಡುತ್ತಿದ್ದಾನೆ. ಆದುದರಿಂದ ಸಜ್ಜನರ ಹಿತವೇ ಅವನಿಗೆ ಪ್ರಿಯವಾಗುತ್ತದೆ. ಸಜ್ಜನರ ಹಿತವೇ ಸತ್ಯಂ ವದ ಎಂಬ ವೇದದಿಂದ ವಿಹಿತವಾದರೆ ಸಜ್ಜನರಿಗೆ ಪ್ರಿಯ. ಆದುದರಿಂದ ಈಶ್ವರನಿಗೂ ಪ್ರಿಯವಾದದ್ದು ಧರ್ಮ ಎಂದರೂ ವಿಮರ್ಶೆ ಮಾಡುವಾಗ ಒಂದೇ ಅರ್ಥದಲ್ಲಿ ಪರ್ಯವಸಾನವಾಗುತ್ತದೆ.

ಆದುದರಿಂದ ಸಜ್ಜನರಿಗೆ ಯಾವುದರಿಂದ ಹಿತವಾಗುತ್ತದೆ ಎಂದು ವಿಮರ್ಶೆಯನ್ನು ಮಾಡಿ ಅದೇ ಈಶ್ವರನಿಗೆ ಪ್ರಿಯವಾದದ್ದು ಎಂದು ತಿಳಿದು ಈಶ್ವರನಿಗೆ ಪ್ರೀತಿ

ಆಗಲಿ ಎಂದು ಉದ್ದೇಶಿಸಿ ಮಾಡಲ್ಪಡುವ ಸಜ್ಜನರಿಗೆ ಹಿತಕರವಾದ ಎಲ್ಲ ಕಾರ್ಯಗಳು ಧರ್ಮಗಳು ಆಗುತ್ತವೆ. ವೇದವಿಹಿತವಾದ ಧರ್ಮಗಳನ್ನು ಮಾಡುವಾಗ ಈಶ್ವರನಿಗೆ ಪ್ರೀತಿಯಾಗಲಿ ಎಂದು ಉದ್ದೇಶವನ್ನು ಮಾಡಲೇಬೇಕು. ಯಾರು ಧರ್ಮದ ಆಚರಣೆಯನ್ನು ಮಾಡುವಾಗ ಈಶ್ವರನ ಪ್ರೀತಿಯನ್ನು ಅಪೇಕ್ಷಿಸುವುದಿಲ್ಲವೋ ಅವನು ಈಶ್ವರನಲ್ಲಿ ಭಕ್ತನೇ ಆಗಲಾರನು. ಈಶ್ವರನ ಭಕ್ತರಾದವರು ತಾವು ಏನ ಮಾಡುವುದಾದರೂ ಈಶ್ವರನು ಪ್ರೀತನಾಗಲಿ ಎಂದು ಉದ್ದೇಶವನ್ನು ಮಾಡದೇ ಇರಲಾರರು.

ಆದರೆ ಶಂಕರಾಚಾರ್ಯರು ಗೀತಾಭಾಷ್ಯದಲ್ಲಿ ಈಶ್ವರನು ಪ್ರೀತನಾಗಲಿ ಎಂದು ಉದ್ದೇಶವನ್ನೂ ಮಾಡದೆ ಧರ್ಮವನ್ನು ಆಚರಿಸಬೇಕೆಂದು ಹೇಳಿದ್ದಾರೆ. ಈ ಮಾತು ಜಗದೀಶ್ವರನ ಭಕ್ತರಾದವರಿಗೆ ಯಾರಿಗೂ ತೃಪ್ತಿಕರವಾಗಲಾರದು. ಆಚಾರ್ಯ ಶ್ರೀಮಧ್ವರು ಜಗದೀಶ್ವರನು ಪ್ರೀತನಾಗಲಿ ಎಂದು ಉದ್ದೇಶಿಸಿಯೇ ಸಕಲ ಧರ್ಮಗಳನ್ನೂ ಮಾಡಬೇಕು. ಹಾಗೆ ಮಾಡದ ಧರ್ಮಗಳು ಧರ್ಮಾಭಾಸಗಳು ಎಂದು ಹೇಳಿದ್ದಾರೆ.

●

೫. ೨. ವರ್ಣಾಶ್ರಮವ್ಯವಸ್ಥೆ

ವಿಭಾಗ ನಿಮಿತ್ತ

ಬ್ರಾಹ್ಮಣಾದಿ ವಿಭಾಗವು ದೇಹನಿಮಿತ್ತಕವಾಗಿ ಮತ್ತು ಸ್ವಾಭಾವಿಕವಾಗಿ ಎಂದು ಎರಡು ಪ್ರಕಾರವಾದದ್ದು. ಬ್ರಾಹ್ಮಣಾದಿ ದೇಹಮೂಲಕವಾದ ವಿಭಾಗವನ್ನು ತಂದೆತಾಯಿಗಳ ನಿಮಿತ್ತದಿಂದ ತಿಳಿಯಬೇಕು. ಅಂದರೆ ತಂದೆತಾಯಿಗಳು ಬ್ರಾಹ್ಮಣರಾದರೆ ಮಗನ ದೇಹವು ಬ್ರಾಹ್ಮಣ ದೇಹವೆಂದು ಹೇಳಲ್ಪಡುತ್ತದೆ. ಇದೇ ರೀತಿ ಕ್ಷತ್ರಿಯಾದಿ ವಿಭಾಗಗಳು. ಈ ಬ್ರಾಹ್ಮಣಾದಿದೇಹಗಳು ಪಶ್ವಾದಿಗಳಿಗೂ ಕರ್ಮಾಧೀನವಾಗಿ ಬರಬಹುದು. ಆದ್ದರಿಂದ ಈ ವಿಭಾಗವು ಅಂದರೆ ದೇಹ ನಿಮಿತ್ತಕ ಬ್ರಾಹ್ಮಣಾದಿ ವಿಭಾಗವು ಮೋಕ್ಷ ಯೋಗ್ಯತೆ ತಿಳಿಯಲಿಕ್ಕೆ ಸಾಧನವಲ್ಲ. ಮತ್ತೊಂದು ವರ್ಣವಿಭಾಗ ಯಾವುದೆಂದರೆ ಜೀವಸ್ವರೂಪದಲ್ಲೇ ಸ್ವಾಭಾವಿಕವಾಗಿ ಇದ್ದದ್ದು. ಜೀವಸ್ವರೂಪಭೂತವಾದ ಸತ್ವಗುಣವು ಸತ್ವ, ರಜಸ್, ತಮಸ್ಸೆಂದು ಮೂರು ಪ್ರಕಾರವುಳ್ಳದ್ದು. ಅವುಗಳಲ್ಲಿ ಸತ್ವಗುಣ ಮಾತ್ರವುಳ್ಳ ಜೀವಸ್ವರೂಪವು ಬ್ರಾಹ್ಮಣ ಜೀವನೆಂದು ಕರೆಯಲ್ಪಡುತ್ತದೆ. ಸ್ವಲ್ಪ ರಜೋಗುಣದ ಅಂಶವು ಸೇರಿ ಸತ್ವಗುಣವು ಅಧಿಕವಾಗಿದ್ದರೆ ಆ ಜೀವಸ್ವರೂಪವು ಕ್ಷತ್ರಿಯನೆಂದು ಹೇಳಲ್ಪಡುತ್ತದೆ. ರಜೋಗುಣವು ಅಧಿಕವಾಗಿದ್ದರೆ ಆ ಜೀವಸ್ವರೂಪವು ವೈಶ್ಯನೆಂದು ಹೇಳಲ್ಪಡುತ್ತದೆ. ತಮೋಗುಣವು ಅಧಿಕವಾಗಿದ್ದರೆ ಆ ಜೀವಸ್ವರೂಪವು ಶೂದ್ರನೆಂದು ಹೇಳಲ್ಪಡುತ್ತದೆ. ಈ ರಜಸ್, ತಮೋಗುಣಗಳು ಸತ್ವಗುಣದ ವಿಭಾಗವಾದುದರಿಂದ ಈ ನಾಲ್ಕು

ಜೀವರೂ ಮೋಕ್ಷ ಯೋಗ್ಯರಾಗುತ್ತಾರೆ. ಶೂದ್ರ ಜೀವನಿಗೆ ಕರ್ಮಾಧೀನವಾಗಿ ಬ್ರಾಹ್ಮಣ ದೇಹ ಬರಬಹುದು. ಬ್ರಾಹ್ಮಣ ಜೀವನಿಗೆ ಕರ್ಮಾಧೀನವಾಗಿ ಶೂದ್ರ ಜನುಮ ಬರಬಹುದು. ದೇಹನಿಮಿತ್ತಕವಾಗಿ ಬ್ರಾಹ್ಮಣಾದಿಗಳು ವ್ಯತ್ಯಾಸವಾದರೂ ಸ್ವರೂಪಭೂತ ಬ್ರಾಹ್ಮಣಾದಿಗಳು ಎಂದಿಗೂ ವ್ಯತ್ಯಾಸವಾಗುವುದಿಲ್ಲ. ಆದುದ ರಿಂದಲೇ ಕೆಲವು ಸ್ಥಳಗಳಲ್ಲಿ ಬ್ರಾಹ್ಮಣ ದೇಹವನ್ನು ಹೊಂದಿರತಕ್ಕ ಶೂದ್ರಾದಿಜೀವನು ಶಮದಮಾದಿಗಳಲ್ಲಿ ಕಡಿಮೆಯಾಗಿರುತ್ತಾನೆ. ಶೂದ್ರಾದಿ ದೇಹವನ್ನು ಹೊಂದಿರತಕ್ಕ ಬ್ರಾಹ್ಮಣಜೀವನು ಶಮದಮಾದಿಗಳಿಂದ ಅಧಿಕನಾಗುತ್ತಾನೆ. ಆದುದರಿಂದ ಶೂದ್ರಾದಿ ದೇಹಧಾರಿಯಾದ ಬ್ರಾಹ್ಮಣ ಜೀವನಿಗೇನೇ ದೇಹದ ಬ್ರಾಹ್ಮಣ್ಯದೆಸೆಯಿಂದ, ಆಧಿಕ್ಯವು ತನ್ನಿಮಿತ್ತ ಅಧಿಕ ಸತ್ಕಾರವು ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ.

ಸತ್ಕಾರದಲ್ಲಿ ವ್ಯತ್ಯಾಸ ಏಕೆ?

ಒಬ್ಬನೇ ಪರಮಾತ್ಮನು ಬ್ರಾಹ್ಮಣನಲ್ಲಿಯೂ ಚಂಡಾಲನಲ್ಲಿಯೂ ಇರುತ್ತಾನೆ. ಬ್ರಾಹ್ಮಣನಿಗೆ ಸತ್ಕಾರ ಮಾಡುವುದಾದರೂ ಅವನ ಅಂತರ್ಯಾಮಿರೂಪ ಪರಮಾತ್ಮನ ದೃಷ್ಟಿಯಿಂದಲೇ. ಅದೇ ಆ ಪರಮಾತ್ಮನು ಚಂಡಾಲನಲ್ಲೂ ಇದ್ದ ಮೇಲೆ ಬ್ರಾಹ್ಮಣನಿಗೆ ಸತ್ಕಾರ ಮಾಡುವಂತೆ ಚಂಡಾಲನಿಗೆ ಮಾಡಬೇಕಲ್ಲವೆ? ಪರಮಾತ್ಮ ರೂಪದಲ್ಲಿ ವ್ಯತ್ಯಾಸವಿದೆಯೆ? ಪರಮಾತ್ಮ ಏಕರೂಪವಾದ ಮೇಲೆ ಸತ್ಕಾರದಲ್ಲಿ ವ್ಯತ್ಯಾಸ ಏಕೆ? ಎಂದು ಕೇಳಬಹುದು. ಆದರೆ ಪರಮಾತ್ಮ ಒಬ್ಬನೇ ಆದರೂ ವಿದ್ಯಾ, ವಿನಯಸಂಪನ್ನನಲ್ಲಿ ಅವನ ಸನ್ನಿಧಾನ ಹೆಚ್ಚು ಇರುತ್ತದೆ. ಬ್ರಾಹ್ಮಣನಲ್ಲಿ ಹೆಚ್ಚು ಸನ್ನಿಧಾನ ಇರಲು ಕಾರಣ ಅವನ ತಪಸ್ಸೇ ಆಗಿರುತ್ತದೆ. ಅವನಲ್ಲಿ ತಪಸ್ಸು ಇಲ್ಲದೇ ಹೋದರೆ ಚಂಡಾಲನಲ್ಲಿ ಬ್ರಾಹ್ಮಣನಿಗಿಂತಲೂ ಹೆಚ್ಚು ಭಕ್ತ್ಯಾದಿ ಗುಣಗಳಿದ್ದರೆ ಅವನಲ್ಲಿ ಪರಮಾತ್ಮನ ಸನ್ನಿಧಾನ ಹೆಚ್ಚಿದೆಯೆಂದು ತಿಳಿಯಬೇಕು.

ಸಾನ್ನಿಧ್ಯ ವಿಶೇಷಕ್ಕೆ ಕಾರಣ ಅಧಿಷ್ಠಾನ ಶಕ್ತಿ. ಇದಕ್ಕೆ ದೃಷ್ಟಾಂತವನ್ನು ಕೊಡು ವುದಾದರೆ –ಎಲೆಕ್ಟ್ರಿಕ್ ಎಲ್ಲಾ ವೈರುಗಳಲ್ಲಿ ಒಂದೇ ತರಹವಾಗಿ ಹೋಗುತ್ತಿದ್ದರೂ ವಿಶೇಷವಾದ ಬಲ್ಬುಗಳಲ್ಲಿ ಅಷ್ಟು ಪ್ರಕಾಶವು ತೋರುವುದಿಲ್ಲ. ಅಲ್ಲಿ ಬಲ್ಬಿನ ಗುಣದಿಂದ ತೇಜಸ್ಸಿನ ಪ್ರಕಾಶದ ವ್ಯತ್ಯಾಸವು ತೋರುವಂತೆ ಬ್ರಾಹ್ಮಣಾದಿಗಳಲ್ಲಿ ಸ್ವಾಭಾವಿಕವಾದ ಶಮದಮಾದಿಗಳ ವ್ಯತ್ಯಾಸದಿಂದ ಪರಮಾತ್ಮ ಸಾನ್ನಿಧ್ಯವು ಹೆಚ್ಚು ಕಡಿಮೆಯಾಗುತ್ತದೆ. ಆದುದರಿಂದ ಅವರವರ ಯೋಗ್ಯತಾನುಸಾರವಾಗಿ ಸತ್ಕಾರ ಮಾಡಬೇಕು.

ವರ್ಣಸಾಂಕರ್ಯದ ಅನರ್ಥ:

ಆಧುನಿಕ ಜನರು ವರ್ಣವಿಭಾಗವು ಕಲಹಕ್ಕೆ ಕಾರಣವಾಗಿ ಜಗತ್ತಿನ ನಾಶಕ್ಕೆ ಕಾರಣವಾಗಿದೆ; ವರ್ಣಸಾಂಕರ್ಯವೇ ಅಭ್ಯುದಯಕ್ಕೆ ಕಾರಣವೆಂದು ಹೇಳುತ್ತಿದ್ದಾರೆ. ಆದರೆ ಇವರ ವಿಚಾರವು ಬಹಳ ದುರ್ಬಲವಾದದ್ದು. ವರ್ಣವಿಭಾಗದಿಂದ ಸ್ವಲ್ಪ

ಕಲಹದ ಪ್ರಸಕ್ತಿ ಇದ್ದರೂ ಅದನ್ನು ಪರಿಹರಿಸಲಿಕ್ಕೆ ಉಪಾಯವಿದೆ. ಅದು ಹೇಗೆಂದರೆ ವರ್ಣವಿಭಾಗವು ಅವರವರ ಸ್ವಾಭಾವಿಕ ಗುಣನಿಮಿತ್ತಕವಾಗಿಯೂ ಇದೆ. ಶಮ ದಮಾದಿ ಗುಣವುಳ್ಳವನು ಬ್ರಾಹ್ಮಣ. ಶೌರ್ಯ, ಧೈರ್ಯ, ಬಾಹುಬಲವುಳ್ಳವನು ಕ್ಷತ್ರಿಯ ಇತ್ಯಾದಿ ರೀತಿಯಾಗಿ ವ್ಯವಸ್ಥೆ ಮಾಡಲಾಗಿದೆ. ಆಯಾಯ ವರ್ಣದವರು ತಮ್ಮ ಸ್ವಾಭಾವಿಕ ಗುಣಾನುಸಾರಿಯಾದ ಕರ್ಮವನ್ನು ಮಾಡುವುದು ಯೋಗ್ಯವಾಗಿದೆ. ಗುಣಗಳ ತಾರತಮ್ಯದಿಂದಾಗಿ ಉಚ್ಚನೀಚಭಾವವು ಯೋಗ್ಯವಾಗಿದೆ. ನಾನಾ ಶಿಷ್ಯರುಗಳಲ್ಲಿ ಜ್ಞಾನಾದಿ ಗುಣಗಳು ಹೆಚ್ಚಿರತಕ್ಕ ಶಿಷ್ಯನಲ್ಲಿ ಗುರುವಿಗೆ ಮಾನ್ಯತೆ ಇದ್ದಂತೆ ಶಮದಮಾದಿ ಶ್ರೇಷ್ಠಗುಣಗಳುಳ್ಳ ಬ್ರಾಹ್ಮಣನಿಗೆ ಪೂಜ್ಯತಾ ಎಂಬ ವ್ಯವಸ್ಥೆಯು ಯುಕ್ತವಾದದ್ದು. ಬ್ರಾಹ್ಮಣನಿಗಿಂತಲೂ ಶೂದ್ರನಿಗೆ ಶಮದಮಾದಿ ಗುಣಗಳು ಅಧಿಕವಾಗಿದ್ದರೆ ಬ್ರಾಹ್ಮಣನಿಗಿಂತ ಶೂದ್ರನೇ ಮಾನ್ಯನಾಗುತ್ತಾನೆಂದು ಶಾಸ್ತ್ರದ ನಿರ್ಣಯವಿದೆ. ಆದುದರಿಂದ ಈ ವ್ಯವಸ್ಥೆಯನ್ನು ಸರಿಯಾಗಿ ತಿಳಿದುಕೊಂಡ ವರು ಪರಸ್ಪರ ಕಲಹವನ್ನು ಮಾಡಲಾರರು.

ವರ್ಣವಿಭಾಗವಿಲ್ಲದೇ ವರ್ಣಸಾಂಕರ್ಯವಾದರೆ ಜಗತ್ತಿಗೆ ಬಹಳ ಅನರ್ಥ ವಿದೆ. ಏನೆಂದರೆ ವರ್ಣವಿಭಾಗವಿಲ್ಲದೆ ಇಂತಹವರು ಇಂತಹ ಕರ್ಮವನ್ನು ಮಾಡ ಬೇಕೆಂಬ ವ್ಯವಸ್ಥೆ ಇಲ್ಲದಂತಾಗಿ ಅಜ್ಞಾನಿಗಳಾದ ಬಹುಜನರು ತಮ್ಮ ಯೋಗ್ಯತೆ ಯನ್ನು ತಿಳಿಯದೇ ತಮಗೆ ಅನುಚಿತಗಳಾದ ಮೇಲ್ಮಟ್ಟದ ಕರ್ಮಗಳನ್ನು ಆರಂಭಿಸಿ ಅಧಃಪತನವಾಗುವ ಸಂಭವವಿದೆ. ಮತ್ತೆ ಮೇಲ್ಮಟ್ಟದ ಜನರ ಯೋಗ್ಯತೆಗೆ ಸರಿಯಾದ ಶಿಕ್ಷಣಾದಿಗಳು ಇಲ್ಲದಂತಾಗುವ ಸಂಭವವಿದೆ.

ಎಲ್ಲರೂ ವಿದ್ಯೆಯೇ ಶ್ರೇಷ್ಠವೆಂದು ತಿಳಿದುಕೊಂಡು ವಿದ್ಯಾಭ್ಯಾಸದಲ್ಲೇ ನಿರತರಾದಾಗ ತಮ್ಮ ತಮ್ಮ ಪೂರ್ವಪರಂಪರೆಯಿಂದ ಬಂದ ಕೃಷ್ಯಾದಿ ಕರ್ಮಗಳ ಅಭ್ಯಾಸ ತಪ್ಪಿಹೋಗಿ ಆ ಕೃಷ್ಯಾದಿ ಕರ್ಮಗಳನ್ನು ಮಾಡಲು ಅಶಕ್ತರಾಗಿ ಅದರಿಂದ ಕೃಷ್ಯಾದಿ ಕರ್ಮಗಳೇ ಲೋಪವಾಗಿ ಜಗತ್ತಿಗೆ ಬಹಳ ಅಶಾಂತತೆಯು ಬರುವ ಸಂಭವವಿದೆ, ಇತ್ಯಾದಿ ಬಹುದೋಷಗಳುಳ್ಳದ್ದು ವರ್ಣಸಾಂಕರ್ಯವು.

●

೫. ೭. ಚಾತುರ್ವರ್ಣ್ಯದಿಂದ ಸರ್ವೋದಯ

ಜಗತ್ತಿಗೆ ಹಿತವನ್ನು ಮಾಡುವ ಉದ್ದೇಶದಿಂದ ಅವತರಿಸಿದ ಪರಬ್ರಹ್ಮ ಸ್ವರೂಪಿಯಾದ ಶ್ರೀಕೃಷ್ಣಪರಮಾತ್ಮನು ಗೀತೆಯಲ್ಲಿ- 'ಚಾತುರ್ವರ್ಣ್ಯಂ ಮಯಾ ಸೃಷ್ಟಂ' ಎಂದು ಚಾತುರ್ವರ್ಣ್ಯವನ್ನು ತಾನು ಸೃಷ್ಟಿಮಾಡಿದ್ದು ಎಂದು ಹೇಳಿದ್ದಾನೆ.

ಕಲಿಯುಗದಲ್ಲಿ ಅವತರಿಸಿದ ಮತತ್ರಯಾಚಾರ್ಯರು ಈ ಚಾತುರ್ವರ್ಣ್ಯ ವನ್ನು ಜಗತ್ತಿಗೆ ಅತ್ಯಂತ ಹಿತಕರವೆಂದು ಉಪದೇಶಿಸಿದ್ದಾರೆ. ಚಾತುರ್ವರ್ಣ್ಯವು ಹಿಂದಿನ ಯುಗಗಳಲ್ಲಿ ಜಗತ್ತಿಗೆ ಹಿತಕರವಾಗಿರಲಿಕ್ಕೂ ಸಾಕು. ಆದರೆ ಈ

ಕಲಿಯುಗದಲ್ಲಿ ಅದು ಹಿತಕರವಲ್ಲ ಎದು ಕೆಲವರ ವಾದ. ಕಲಿಯುಗದಲ್ಲಿ ಅವತರಿಸಿದ ಆಚಾರ್ಯತ್ರಯರೂ ಚಾತುರ್ವರ್ಣ್ಯವನ್ನು ಆವಶ್ಯಕವೆಂದು ಸ್ಥಾಪಿಸಿದ್ದರಿಂದ ಈ ಯುಗದಲ್ಲಿಯೂ ಅದು ಆವಶ್ಯಕವೆಂದು ತಿಳಿಯುತ್ತದೆ.

ಕೆಲವರು ಈ ಚಾತುರ್ವರ್ಣ್ಯಧರ್ಮವನ್ನು ಸ್ಥಾಪಿಸಿದ ಆಚಾರ್ಯತ್ರಯರು ಮುಠ್ಠಾಳರು ಎಂದು ಅನೇಕ ಸಭೆಯಲ್ಲಿ ಹೇಳುತ್ತಿದ್ದಾರೆ. ಚಾತುರ್ವರ್ಣ್ಯಧರ್ಮದಲ್ಲಿ ಇವರು ಯಾವ ದೋಷವನ್ನು ಕಂಡಿದ್ದಾರೆಯೋ ಅದನ್ನು ವಿದ್ವತ್ಸಭೆಯಲ್ಲಿ ಧೈರ್ಯವಿದ್ದರೆ ಸಮರ್ಥಿಸಲಿ. ಮನುಷ್ಯರು ಎಲ್ಲರೂ ಸಮಾನರಾಗಿ ಇರುವಾಗ ಅವರಲ್ಲಿ ಬೇರೆ ಬೇರೆ ವರ್ಗಗಳನ್ನು ಮತ್ತು ಆ ವರ್ಗಗಳಲ್ಲಿ ಕೆಲವು ಶ್ರೇಷ್ಠ ಕೆಲವು ನಿಕೃಷ್ಟ ಎಂದು ವಿಭಜಿಸಿ ಮನುಷ್ಯರಲ್ಲಿ ಭೇದಭಾವವನ್ನುಂಟುಮಾಡಿ, ಪರಸ್ಪರ ಪ್ರೇಮದಿಂದ ಇರುವುದಕ್ಕೆ ಆತಂಕ ಮಾಡಿದ್ದಾರೆ. ಆ ಆಚಾರ್ಯತ್ರಯರು ಇದ್ದದ್ದರಿಂದ ಎಲ್ಲರೂ ಸಂಯುಕ್ತರಾಗಿ ಈ ನಮ್ಮ ರಾಷ್ಟ್ರದ ಉನ್ನತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗದೇ ಹೋಗಿದೆ. ಪರರಾಷ್ಟ್ರಗಳಲ್ಲಿ ಈ ಭೇದಭಾವವು ಇಲ್ಲವಾದ್ದರಿಂದ ಆ ರಾಷ್ಟ್ರಗಳು ಬಹಳ ಉನ್ನತಿಯನ್ನು ಹೊಂದಿದ್ದಾವೆ ಎಂದು ಈ ಚಾತುರ್ವರ್ಣ್ಯಧರ್ಮದ ಮೇಲೆ ದೋಷವನ್ನು ಆರೋಪಿಸುವುದಾದರೆ ನಾವು ಒಂದು ಪ್ರಶ್ನೆಯನ್ನು ಕೇಳುತ್ತೇವೆ. ಶಿಕ್ಷಣ ಸಂಸ್ಥೆಗಳಲ್ಲಿ ಶ್ರೇಷ್ಠ ನಿಕೃಷ್ಟಗಳಾದ ನಾನಾ ತರಗತಿಗಳನ್ನು ಮಾಡಿ ವಿದ್ಯಾರ್ಥಿಗಳನ್ನು ಬೇರೆ ಬೇರೆಯಾಗಿ ವರ್ಗೀಕರಿಸಿ ಆ ಆ ವರ್ಗಗಳನ್ನು ಆ ಆ ತರಗತಿಗಳಿಗೆ ಸೇರಿಸಿ ಶಿಕ್ಷಣವನ್ನು ಎಲ್ಲ ದೇಶಗಳಲ್ಲಿಯೂ ಮಾಡುವುದು ಕಂಡಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಭೇದಭಾವವು ಉಂಟಾಗಿ ಆ ಶಿಕ್ಷಣ ಸಂಸ್ಥೆಗೆ ಉನ್ನತಿಗೆ ಆತಂಕವಾಗಿದೆಯೋ? ಅಥವಾ ಅನುಕೂಲವಾಗಿದೆಯೋ?

ವಿದ್ಯಾರ್ಥಿಗಳ ವರ್ಗೀಕರಣ ಮತ್ತು ನಾನಾ ತರಗತಿಗಳು ವಿದ್ಯಾರ್ಥಿಗಳ ಬುದ್ಧ್ಯಾದಿಗುಣಗಳನ್ನು ಅನುಸರಿಸಿ ರಚಿತವಾಗಿದೆ. ಆದುದರಿಂದ ಅದು ಒಳ್ಳೆದೇ ಆಗಿರುತ್ತದೆ. ಹೀಗೆ ಸಮಾಧಾನವನ್ನು ಹೇಳುವುದಾದರೆ ಮನುಷ್ಯರಲ್ಲಿ ನಾನಾ ವರ್ಗೀಕರಣ ಮತ್ತು ಅದರಲ್ಲಿ ಶ್ರೇಷ್ಠ ಕನಿಷ್ಠ ಭಾವವು ಕೂಡ ಸತ್ವಾದಿ ಗುಣನಿಮಿತ್ತದಿಂದಲೇ ಮಾಡಲ್ಪಟ್ಟಿದೆ. ಇದನ್ನು–

ಬ್ರಾಹ್ಮಣಕ್ಷತ್ರಿಯ ವಿಶಾಂ ಶೂದ್ರಾಣಾಂ ಚ ಪರಂತಪ ।
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವ ಪ್ರಭವೈರ್ಗುಣೈಃ ॥

ಎಂಬ ಶ್ಲೋಕದಿಂದ ಶ್ರೀಕೃಷ್ಣಪರಮಾತ್ಮನು ಹೇಳಿದ್ದಾನೆ. ವಿದ್ಯಾರ್ಥಿವರ್ಗ ಉಪಾಧ್ಯಾಯವರ್ಗಗಳಲ್ಲಿ ಉತ್ಕೃಷ್ಟ ನಿಕೃಷ್ಟ ಭಾವವು ಇದ್ದರೂ ವಿದ್ಯಾರ್ಥಿಗಳಲ್ಲಿ ಉಪಾಧ್ಯಾಯ ವರ್ಗದವರು ವಿಶೇಷ ಪ್ರೇಮವನ್ನು ಅದರಂತೆ ವಿದ್ಯಾರ್ಥಿಗಳು ಉಪಾಧ್ಯಾಯ ವರ್ಗದಲ್ಲಿ ವಿಶೇಷ ಪ್ರೇಮವನ್ನು ಮಾಡುವಂತೆ ಈ ಚಾತುರ್ವರ್ಣ್ಯದವರು ಪರಸ್ಪರ ಪ್ರೇಮದಿಂದ ಇರಬೇಕೆಂದು ಚಾತುರ್ವರ್ಣ್ಯಧರ್ಮವನ್ನು ಹೇಳುವ ಶಾಸ್ತ್ರದಲ್ಲಿ ಹೇಳಿರುತ್ತದೆ.

ಶಿಕ್ಷಣಸಂಸ್ಥೆಗಳಲ್ಲಿ ಉಪಾಧ್ಯಾಯವರ್ಗಕ್ಕೂ ವಿದ್ಯಾರ್ಥಿವರ್ಗಕ್ಕೂ ಪರಸ್ಪರ ವೈಮನಸ್ಸು ಪರಿಹರಿಸುವುದಕ್ಕಾಗಿ ಉಪಾಧ್ಯಾಯ ವರ್ಗ ವಿದ್ಯಾರ್ಥಿವರ್ಗಗಳಲ್ಲಿ ಶ್ರೇಷ್ಠ ಕನಿಷ್ಠ ಭಾವವನ್ನು ತೆಗೆದು ಹಾಕುವುದಿಲ್ಲ. ಬೇರೆ ಬೇರೆ ಉಪಾಯಗಳಿಂದಲೇ ಅವರಲ್ಲಿ ಸಾಮರಸ್ಯವನ್ನು ಉಂಟುಮಾಡುವುದು ಕಂಡಿದೆ. ಅದರಂತೆ ಈ ಕಾಲದಲ್ಲಿ ಚಾತುರ್ವರ್ಣ್ಯದವರಲ್ಲಿ ವೈಮನಸ್ಸುವು ಕಾಣುತ್ತಿದ್ದರೆ ಅದನ್ನು ಪರಿಹರಿಸುವುದಕ್ಕಾಗಿ ಚಾತುರ್ವರ್ಣ್ಯವನ್ನೇ ನಾಶಮಾಡುವುದು ಯುಕ್ತವಲ್ಲ. ಪರಸ್ಪರ ಪ್ರೇಮವನ್ನು ಬೆಳೆಸುವುದಕ್ಕಾಗಿ ಬೇರೆ ವಿಷಯಗಳನ್ನು ಯೋಚಿಸಬೇಕು.

ರೈತರುಗಳು ಕಾಲುವೆ ನೀರನ್ನು ಮುಂದೆ ಹೋಗದಂತೆ ಮಾಡಿ ತಮ್ಮ ಗದ್ದೆಗೇನೇ ನೀರನ್ನು ಉಪಯೋಗಿಸುತ್ತಾರೆ. ಆಗ ಅವರಲ್ಲಿ ಕಲಹವು ಪ್ರತಿವರ್ಷವೂ ಆಗಿ ನ್ಯಾಯಾಸ್ಥಾನದ ತನಕ ಅದು ಹೋಗುತ್ತದೆ. ಆಗ ನ್ಯಾಯಾಧೀಶನು ಪ್ರತಿ ವರ್ಷವೂ ಇವರಲ್ಲಿ ಕಲಹವು ಉಂಟಾಗಲಿಕ್ಕೆ ಕಾರಣವಾದದ್ದು ಗದ್ದೆಗಳು ಕಾಲುವೆ ನೀರು ಆದ್ದರಿಂದ ಗದ್ದೆಗಳನ್ನು ಕಾಲುವೆಯನ್ನು ನಾಶಮಾಡಬೇಕೆಂದು ತೀರ್ಮಾನ ವನ್ನು ಮಾಡುವುದಿಲ್ಲ. ಬೇರೆ ಉಪಾಯಗಳಿಂದ ಆ ಕಲಹವನ್ನು ಶಾಂತ ಮಾಡು ತ್ತಾನೆ. ಅದರಂತೆ ಲೋಕಹಿತಕ್ಕಾಗಿ ಇರುವ ಚಾತುರ್ವರ್ಣ್ಯವನ್ನು ನಾಶಮಾಡದಂತೆ ಬೇರೆ ಉಪಾಯಗಳಿಂದ ಎಲ್ಲರೂ ಪರಸ್ಪರ ಪ್ರೇಮದಿಂದ ಇರಲಿಕ್ಕೆ ಪ್ರಯತ್ನ ಮಾಡುವುದೇ ಯುಕ್ತವಾಗುತ್ತದೆ.

ಗದ್ದೆಗಳು ಮತ್ತು ಕಾಲುವೆನೀರು ಲೋಕಕ್ಕೆ ಆವಶ್ಯಕ. ಅದರಂತೆ ಚಾತುರ್ವರ್ಣ್ಯವು ಲೋಕಕ್ಕೆ ಹೇಗೆ ಹಿತಕರ ಎಂದು ಕೇಳುವುದಾದರೆ ಮಳೆ ಬೆಳೆ ಆರೋಗ್ಯಗಳಿಗಾಗಿ ತಪಸ್ಸು, ಯಜ್ಞ, ದೇವತಾರಾಧನೆಗಳು ಆವಶ್ಯಕವೆಂದು ಗೀತೆಯಲ್ಲಿ ಹೇಳಿರುತ್ತದೆ. ತಪಸ್ಸು ಮೊದಲಾದದ್ದು ಸತ್ವಗುಣವುಳ್ಳವರಿಂದ ಹೇಗೆ ಮಾಡಲಿಕ್ಕೆ ಸುಲಭವೋ ಅಷ್ಟು ರಜೋಗುಣಾದಿಗಳು ಉಳ್ಳ ಜನಾಂಗಕ್ಕೆ ಸುಲಭವಲ್ಲ. ಶತ್ರುಗಳು ರಾಷ್ಟ್ರವನ್ನು ಪ್ರವೇಶಿಸುವಾಗ ಅವರ ವಿರುದ್ಧವಾಗಿ ಯುದ್ಧವನ್ನು ಮಾಡುವುದು ಆವಶ್ಯಕ. ಈ ಯುದ್ಧವು ರಜೋಗುಣವುಳ್ಳ ಅವರಿಗೆ ಮಾತ್ರ ಸಾಧ್ಯ. ಕೃಷಿ ವಾಣಿಜ್ಯಗಳು ಲೋಕಹಿತಕರವಾದದ್ದು. ಇದನ್ನು ಸತ್ವರಜೋಗುಣವುಳ್ಳ ಅವರಿಗೆ ಸುಲಭವಾಗುವುದಿಲ್ಲ. ಆದುದರಿಂದ ಅದನ್ನು ತಮೋಗುಣಗಳುಳ್ಳ ಅವರು ಮಾಡಿದರೆ ಒಳ್ಳೇದು. ಆದರೆ ಕೃಷಿ ವಾಣಿಜ್ಯಗಳಲ್ಲಿ ಸಂಪತ್ತು ಅಭಿವೃದ್ಧಿಯಾಗುವುದು ಎಲ್ಲರಿಗೂ ಕಾಣುತ್ತದೆಯಾದ್ದರಿಂದ ಎಲ್ಲರೂ ಕೃಷಿ ವಾಣಿಜ್ಯಗಳಲ್ಲಿಯೇ ಪ್ರವೃತ್ತಿ ಯನ್ನು ಮಾಡುವ ಸಂಭವವಿದೆ. ತಪಸ್ಸು ಯಜ್ಞ ದೇವತಾರಾಧನೆ ವಿದ್ಯಾಭ್ಯಾಸಗಳು ಕಷ್ಟಸಾಧ್ಯವಾದುದರಿಂದ ಅದರಲ್ಲಿ ಯಾರೂ ಪ್ರವೃತ್ತಿ ಮಾಡದೇ ಇರುವ ಸಂಭವವು ಇದೆ. ಯುದ್ಧವನ್ನು ಮಾಡುವುದರಲ್ಲಿಯೂ ಎಲ್ಲರೂ ಹಿಂಜರಿಯುವ ಸಂಭವವು ಇದೆ. ಹೀಗಾಗಿ ಲೋಕಹಿತಕ್ಕಾಗಿ ಆವಶ್ಯಕಗಳಾದ ತಪಸ್ಸು ಯಜ್ಞಾದಿಗಳು ಹಾಗೆ ಶತ್ರುಗಳಿಂದ ಕೂಡಿ ಯುದ್ಧ ಮಾಡಲಿಕ್ಕೆ ಯಾರೂ ಇಲ್ಲವಾದರೆ ಅದರಿಂದ ರಾಷ್ಟ್ರಕ್ಕೆ ಹಾನಿಯಾಗುವುದು. ಈಗ ಅದನ್ನು ನಾವು ಕಾಣುತ್ತೇವೆ. ಈಗ ಎಲ್ಲರೂ ವ್ಯಾಪಾರ

ಕೃಷಿ ಉದ್ಯೋಗಗಳಲ್ಲಿ ಪ್ರವೃತ್ತರಾಗುತ್ತಾರೆ. ಲೋಕಹಿತಕ್ಕಾಗಿ ತಪಸ್ಸು ಯಜ್ಞ ದೇವತಾರಾಧನೆಗಳು ಸರಿಯಾಗಿ ನಡೆಯುತ್ತ ಇಲ್ಲ. ಇದರಿಂದ ಮಳೆ ಬೆಳೆ ಸುಭಿಕ್ಷೆಗಳು ಇಲ್ಲ. ಆದುದರಿಂದ ಮನುಷ್ಯರಲ್ಲಿ ಗುಣಾನುಸಾರ ವರ್ಗೀಕರಣವನ್ನು ಮಾಡಿ ಈ ವರ್ಗದವರು ಇದೇ ಕೆಲಸವನ್ನು ಮಾಡಬೇಕು, ಬೇರೆ ಕೆಲಸಕ್ಕೆ ಹೋಗಬಾರದು ಎಂದು ನಿಯಮವನ್ನುಂಟುಮಾಡುವುದು ಆವಶ್ಯಕ. ಯಾರು ತಮಗೆ ನಿಯತವಾದ ಕೆಲಸವನ್ನು ಮಾಡುವುದಿಲ್ಲವೋ ಅವರು ಶಿಕ್ಷಾರ್ಹರು ಆಗಬೇಕು. ತಪಸ್ಸು ವಿದ್ಯೆ ಇತ್ಯಾದಿಗಳು ಕಷ್ಟಸಾಧ್ಯ. ಇಂತಹ ಕಷ್ಟ ಕೆಲಸವನ್ನೇ ಮಾಡುವವರಿಗೆ ಸಮಾಜದಲ್ಲಿ ಒಳ್ಳೆ ಸ್ಥಾನಮಾನಗಳು ಇರಬೇಕು. ಇದರಿಂದ ಅವರು ಆ ಕೆಲಸದಲ್ಲಿ ಉತ್ಸಾಹಿಗಳಾಗುತ್ತಾರೆ. ಹಾಗೆಯೇ ಯುದ್ಧವನ್ನು ಮಾಡುವವರಿಗೆ ಒಳ್ಳೆ ಆಹಾರ ವನ್ನೂ ಬೇಕಾದಷ್ಟು ಹಣವನ್ನೂ ಕೊಡಬೇಕು. ಹಾಗಿದ್ದರೆ ಯುದ್ಧ ಮಾಡುವುದಕ್ಕೆ ಕೆಲವು ವರ್ಗದವರು ಸಿದ್ಧರು ಇರುತ್ತಾರೆ. ಕೃಷಿ ವಾಣಿಜ್ಯಗಳನ್ನು ಕೆಲವು ವರ್ಗದವರಿಗೆನೇ ಮೀಸಲಾಗಿ ಇಡಬೇಕು. ಅವರು ಬೇರೆ ಕೆಲಸಕ್ಕೆ ಹೋಗಬಾರದು. ಆಗ ಅವರು ಅದನ್ನೇ ಮಾಡುತ್ತ ಅದರ ಅಭಿವೃದ್ಧಿಯನ್ನು ಮಾಡುತ್ತಾರೆ. ಈ ಎಲ್ಲ ಕೆಲಸಗಳೂ ಲೋಕಹಿತಕರವಾದ್ದರಿಂದ ಇಂತಹ ಕೆಲಸವು ದೇವರ ಸೇವೆಯೇ ಆಗಿರುತ್ತದೆ. ಇದು ದೇವರ ಸೇವೆಯೆಂಬ ಭಾವನೆಯಿಂದಲೇ ಎಲ್ಲರೂ ತಮ್ಮ ಕರ್ಮವನ್ನು ಮಾಡಿದರೆ ಅದರಿಂದಲೇ ಅವರಿಗೆಲ್ಲರಿಗೆ ಸರ್ವ ಪುರುಷಾರ್ಥ ಸಿದ್ಧಿಯಾಗುತ್ತದೆ.

ಅಧ್ಯಾತ್ಮ, ವಿದ್ಯೆ, ತಪಸ್ಸು, ಧರ್ಮಾಚರಣೆಯಲ್ಲಿ ನಿರತರಾದವರನ್ನು ಪ್ರತಿ ಹಳ್ಳಿಗಳಲ್ಲಿಯೂ ಇರುವಂತೆ ಮಾಡಿ ಅವರ ದ್ವಾರಾ ಆ ಹಳ್ಳಿಗಳಲ್ಲಿ ಕೃಷ್ಯಾದಿಗಳನ್ನು ಮಾಡಿಕೊಂಡು ಇರುವ ಜನಾಂಗಕ್ಕೆ ಧರ್ಮವಿಶ್ವಾಸ ದೇವರಲ್ಲಿ ಭಕ್ತಿ ಪರೋಪಕಾರ ಬುದ್ಧಿಗಳನ್ನುಂಟು ಮಾಡಬೇಕು.

ಈವರೆಗೆ ಚಾತುರ್ವರ್ಣ್ಯ ವಿಭಾಗವನ್ನು ಶಿಕ್ಷಣ ಸಂಸ್ಥೆಯ ದೃಷ್ಟಾಂತದಿಂದ ಉಪಪನ್ನವೆಂದು ಹೇಳಿದೆವು. ಆದರೆ ಈಗಿನ ಶಿಕ್ಷಣ ಸಂಸ್ಥೆಯಲ್ಲಿಯೂ ಗುಣನಡತೆಗೆ ಮಹತ್ವವನ್ನು ಕೊಟ್ಟು ಶಿಕ್ಷಣ ಕ್ರಮವನ್ನು ಸುಧಾರಿಸಬೇಕು. ಅದು ಹೇಗೆಂದರೆ ಶಿಕ್ಷಣ ಸಂಸ್ಥೆಗಳಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯ ವರೆಗೆ ಎಲ್ಲರಿಗೂ ಪ್ರವೇಶಕ್ಕೆ ಮುಕ್ತ ದ್ವಾರವಿರಬೇಕು. ಆ ಪರೀಕ್ಷೆಯ ವರೆಗೆ ಮಾಸ್ತರುಗಳು ವಿದ್ಯಾರ್ಥಿಗಳ ಗುಣ–ನಡತೆಗಳನ್ನು ಪರಿಶೀಲಿಸುತ್ತಿರಬೇಕು. ಪ್ರತಿವರ್ಷ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಗುಣ–ನಡತೆಯ ಬಗ್ಗೆ ಮಾಸ್ತರುಗಳು ತಮ್ಮ ಅಭಿಪ್ರಾಯವನ್ನು ಬರೆದಿಡಬೇಕು. ಯಸ್. ಯಸ್. ಎಲ್. ಸಿ. ಪರೀಕ್ಷೆಯು ಮುಗಿಯುವ ವರೆಗೂ ಯಾವ ಯಾವ ವಿದ್ಯಾರ್ಥಿಗಳು ಗುಣ ನಡತೆಗಳಲ್ಲಿಯೂ ಉತ್ತಮರೆಂದು ನಿರ್ಣೀತರಾಗುತ್ತಾರೋ ಅವರನ್ನೇ ಮೇಲಿನ ಶಿಕ್ಷಣಕ್ಕೆ ಸ್ವೀಕರಿಸಬೇಕು. ಹೀಗೆ ಇದ್ದರೇನೇ ವಿದ್ಯೆಗೆ ಬೆಲೆ ಉಳಿಯುತ್ತದೆ. ವಿದ್ಯಾವಂತರಿಂದ ಲೋಕಹಿತವಾಗುತ್ತದೆ. ಗುಣನಡತೆಗಳು ಸರಿ ಇಲ್ಲದ ವಿದ್ಯಾರ್ಥಿಗಳಿಗೂ ಉಚ್ಚ ಶಿಕ್ಷಣ ಪ್ರವೇಶ ಕೊಟ್ಟರೆ ಸರ್ಪಕ್ಕೆ ಹಾಲು ಕುಡಿಸಿದ

ಹಾಗೆ ಆಗುತ್ತದೆ. ಈಗ ವಿದ್ಯಾರ್ಥಿಗಳಿಂದ ದೇಶಕ್ಕೆ ಅಹಿತವಾಗುವುದನ್ನು ನಾವು ನೋಡುತ್ತ ಇದ್ದೇವೆ.

ಒಳ್ಳೇ ಗುಣ ನಡತೆಗಳುಳ್ಳ ವಿದ್ಯಾರ್ಥಿಗಳಿಗೆಯೇ ಉಚ್ಚ ಶಿಕ್ಷಣವನ್ನು ಕೊಟ್ಟು ಅವರೇ ಅಧಿಕಾರ ಸ್ಥಾನಕ್ಕೆ ಅಥವಾ ಅವರೇ ಎಲೆಕ್ಶನ್‌ನಲ್ಲಿ ಓಟು ಕೊಡಲಿಕ್ಕೆ ಅರ್ಹರಾದವರೆಂದು ಕಾಯಿದೆಯನ್ನು ಮಾಡಬೇಕು. ಏನೂ ತಿಳಿವಳಿಕೆ ಇಲ್ಲದ ಜನಾಂಗಕ್ಕೆ ಓಟು ಕೊಡುವ ಅಧಿಕಾರವು ಈ ವರೆಗೆ ಇರುವುದು ಕಾಣುತ್ತದೆ. ಇದರಿಂದ ದೇಶಕ್ಕೆ ಹಾನಿಯಾಗುತ್ತದೆ.

ಈ ರೀತಿ ಗುಣನಡತೆಗಳಿಗೆ ಅನುಸಾರವಾಗಿ ಮನುಷ್ಯವರ್ಗವನ್ನು ವಿಂಗಡಿಸಿ ಅವರವರ ಗುಣನಡತೆಗಳಿಗೆ ಅನುಸಾರವಾಗಿ ಅವರವರಿಗೆ ಉದ್ಯೋಗಗಳನ್ನು ಕಲ್ಪಿಸುವುದರಿಂದಲೇ ದೇಶಕ್ಕೆ ಹಿತವಾಗುತ್ತದೆ. ಈ ರೀತಿ ಮಾಡುವುದೇ ಚಾತುರ್ವಣ್ಯ ಧರ್ಮವೆನಿಸುತ್ತದೆ.

ಚಾತುರ್ವಣ್ಯಧರ್ಮವಿಲ್ಲದ ಪರರಾಷ್ಟ್ರಗಳು ಹೇಗೆ ಉನ್ನತಿಯನ್ನು ಹೊಂದಿದವು ಎಂದು ಪ್ರಶ್ನೆಯನ್ನು ಮಾಡುವುದಾದರೆ, ಪರರಾಷ್ಟ್ರಗಳಲ್ಲಿ ಜನಸಂಖ್ಯೆ ಕಡಿಮೆ, ಪ್ರಾಕೃತಿಕ ಸಂಪತ್ತು ಚೆನ್ನಾಗಿ ಇದೆ. ಎಲ್ಲರೂ ಸಂಪತ್ತಿನಿಂದ ಪೂರ್ಣರಾದ್ದರಿಂದ ಇತರರಿಗೆ ಮೋಸ ಮಾಡಿ, ಕಳವು ಮಾಡಿ, ಜೀವಿಸುವ ಪ್ರಸಂಗವು ಬರುವುದಿಲ್ಲ. ಈ ನಮ್ಮ ದೇಶದಲ್ಲಿ ಜನಸಂಖ್ಯೆಯು ಹೆಚ್ಚು ಇರುವ ಕಾರಣ ಎಷ್ಟು ಬೆಳೆಸಿದರೂ ಜೀವನಕ್ಕೆ ಅಪೂರ್ಣತೆಯೇ ಉಂಟಾಗುತ್ತದೆ. ಇದರಿಂದ ಇತರರನ್ನು ಮೋಸ ಮಾಡುವುದು, ಲಂಚ ತೆಗೆದುಕೊಳ್ಳುವುದು ಇತ್ಯಾದಿ ಭ್ರಷ್ಟಾಚಾರಗಳು ಅಧಿಕವಾಗುವುದು ಸಹಜ. ಇಂತಹ ನಮ್ಮ ದೇಶದಲ್ಲಿ ಹೆಚ್ಚು ಜನರಿಗೆ ದೇವರು ಭಕ್ತಿ ಧರ್ಮ ವಿಶ್ವಾಸ ಪರೋಪಕಾರಬುದ್ಧಿಗಳನ್ನು ಹೆಚ್ಚಿಸಿದರೆ ಮಾತ್ರ ಸುಖವು ಸಿಕ್ಕಬಹುದು. ದೇವರಲ್ಲಿ ಧರ್ಮದಲ್ಲಿ ವಿಶ್ವಾಸವಿಲ್ಲದೆ ಇದ್ದು ಸಂಪತ್ತು ಮಾತ್ರ ಅಧಿಕವಾಗಿ ಆದರೆ ಶಾಂತಿ ಸಮಾಧಾನಗಳು ಉಳಿಯಲಾರವು. ಪರರಾಷ್ಟ್ರಗಳಲ್ಲಿ ಈ ದೋಷವನ್ನು ನಾವು ನೋಡುತ್ತ ಇದ್ದೇವೆ. ಆ ಸಂಪತ್ತು ಚೆನ್ನಾಗಿ ಇದ್ದರೂ ಶಾಂತಿಸಮಾಧಾನಗಳು ಇಲ್ಲವಾದ್ದರಿಂದ ಬಹು ಜನರು ಅಲ್ಲಿ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾರೆ. ಕೆಲವರು ಆ ದೇಶಗಳನ್ನು ಬಿಟ್ಟು ಶಾಂತಿ ಸಮಾಧಾನಕ್ಕಾಗಿ ಧರ್ಮದ ತವರುಮನೆಯಾದ ನಮ್ಮ ಈ ದೇಶಕ್ಕೆ ಬಂದು ವಾಸಮಾಡುತ್ತಾರೆ.

ನಮ್ಮ ದೇಶದಲ್ಲಿ ದೇವರಲ್ಲಿ ಭಕ್ತಿಯನ್ನು ಬೆಳೆಸುವ ಕಾರ್ಯವನ್ನು ಪ್ರಧಾನವಾಗಿ ಇಟ್ಟುಕೊಳ್ಳಬೇಕು. ಇದಕ್ಕಾಗಿ ದೇವರು ಭಕ್ತಿಯುಳ್ಳ ಜನರನ್ನು ಇತರರಿಗೆ ಉಪದೇಶ ಕೊಡಲಿಕ್ಕೆ ಇಡಬೇಕು. ಇತರರನ್ನು ಭಕ್ತಿಯುಳ್ಳವರನ್ನಾಗಿ ಮಾಡುವುದಕ್ಕೆ ನಿಯಮಿಸಬೇಕು. ಇವರು ಇದೇ ಕಾರ್ಯವನ್ನು ಮಾಡಬೇಕು. ಇವರಿಗೆ ಬೇರೆ ಜೀವನಮಾರ್ಗ ಇರಬಾರದು. ಈ ರೀತಿಯಾಗಿ ಎಲ್ಲ ಜನಾಂಗದಲ್ಲಿ ದೇವರಲ್ಲಿ ಧರ್ಮದಲ್ಲಿ ವಿಶ್ವಾಸವನ್ನು ಅಭಿವೃದ್ಧಿ ಮಾಡುವ ಕಾರ್ಯವು ಚೆನ್ನಾಗಿ ನಡೆದರೆ ಮಾತ್ರ ಗೋಪ್ಯವಾಗಿ ಜನಾಂಗವು ನಡೆಸುತ್ತಿರುವ ಭ್ರಷ್ಟಾಚಾರವು

ಕಡಮೆಯಾಗಲು ಸಾಧ್ಯವಿದೆ, ವಿನಾ ಬೇರೆ ಉಪಾಯವು ಇಲ್ಲ. ಆದುದರಿಂದ ಚಾತುರ್ವರ್ಣ್ಯ ಧರ್ಮಕ್ಕೆ ಶಾಸ್ತ್ರದಲ್ಲಿ ಮಹತ್ವವನ್ನು ಕೊಟ್ಟಿದ್ದಾರೆ. ಚಾತುರ್ವರ್ಣ್ಯ ಧರ್ಮವು ರಕ್ಷಿತವಾದರೆ ಸತ್ವಗುಣವುಳ್ಳ ಜನಾಂಗವು ತಪಸ್ಸು ಮತ್ತು ಅಧ್ಯಾತ್ಮ ವಿದ್ಯೆಯಲ್ಲಿಯೇ ಇದ್ದು ಇತರ ಜನಾಂಗದಲ್ಲಿಯೂ ಉಪದೇಶ ಮಾಡಿ ಒಳ್ಳೆಯ ಗುಣನಡತೆಗಳು ಇರುವಂತೆ ಮಾಡುತ್ತದೆ. ಇದರಿಂದ ದೇಶಕ್ಕೆ ಹಿತವಾಗುತ್ತದೆ.

●

೫. ೪. ಸ್ತ್ರೀಧರ್ಮ

ಪುರಾಣದಲ್ಲಿ ಒಂದು ಕಥೆಯು ಈ ರೀತಿಯಾಗಿದೆ. ದೇವತೆಗಳು ಮತ್ತು ದೈತ್ಯರು ಕೂಡಿಕೊಂಡು ಅಮೃತಕ್ಕೋಸ್ಕರ ಕ್ಷೀರಸಮುದ್ರಮಥನ ಮಾಡಿದಾಗ ಮೊದಲು ಅಲಕ್ಷ್ಮಿಯು ಹುಟ್ಟಿದಳು. ಅನಂತರದಲ್ಲಿ ಲಕ್ಷ್ಮಿಯು ಪ್ರಾದುರ್ಭೂತ ಳಾದಳು. ಲಕ್ಷ್ಮಿಯನ್ನು ಶ್ರೀನಾರಾಯಣದೇವರು ವರಿಸಲು ಆಗ ಲಕ್ಷ್ಮಿಯು ಶ್ರೀನಾರಾಯಣದೇವರಿಗೆ ತನ್ನ ಅಕ್ಕಳಾದ ಅಲಕ್ಷ್ಮಿಯ ಮದುವೆ ಆಗಿಲ್ಲ. ಅವಳಿಗೆ ಮದುವೆಯಾದ ಮೇಲೆ ನಾನು ವರಿಸುತ್ತೇನೆ ಎಂದು ಹೇಳಿದಳು. ಆಗ ಶ್ರೀನಾರಾಯಣನು ಅಲಕ್ಷ್ಮಿಗೆ ವರನನ್ನು ಹುಡುಕಲು ಪ್ರಾರಂಭಿಸಿದನು. ಎಲ್ಲರೂ ಅವಳ ಹೆಸರನ್ನು ಕೇಳಿ ಅವಳನ್ನು ಮದುವೆಯಾಗಲು ಒಲ್ಲೆನೆಂಬುದಾಗಿ ಹೇಳಿದರು. ಕೊನೆಗೆ ಶ್ರೀನಾರಾಯಣನು ಉದ್ದಾಲಕ ಮುನಿಗಳಿಗೆ ಒತ್ತಾಯಮಾಡಿ ಅಲಕ್ಷ್ಮಿಯನ್ನು ವಿವಾಹಮಾಡಿಸಿದನು. ಉದ್ದಾಲಕರು ಹೆಂಡತಿಯನ್ನು ಕರೆದುಕೊಂಡು ತಮ್ಮ ಆಶ್ರಮಕ್ಕೆ ತೆರಳಲು, ಅದು ಸಮೀಪಿಸಿದಂತೆ ಆಶ್ರಮದಲ್ಲಿದ್ದ ಯಜ್ಞದ ಹೊಗೆಯು ಆಕಾಶದಲ್ಲಿ ಪ್ರಸರಿಸಿದ್ದು ದೂರದಿಂದ ಕಾಣುತ್ತಿತ್ತು. ವೇದಧ್ವನಿ ಇಂಪಾಗಿ ಕೇಳಿಸುತ್ತಿತ್ತು. ಅಂತಹ ಆಶ್ರಮವನ್ನು ಅಲಕ್ಷ್ಮಿಯು ದೂರದಿಂದ ನೋಡಿ ಆಶ್ರಮಕ್ಕೆ ಬರುವುದಿಲ್ಲವೆಂದು ಅವಳ ಪತಿಯಾದ ಉದ್ದಾಲಕನಿಗೆ ಹೇಳಿದಳು. ಆಗ ಉದ್ದಾಲಕರು ಅವಳಿಗೆ 'ಎಲ್ಲಿ ವಾಸಮಾಡುವಿ'ಯೆಂದು ಕೇಳಿದರು. ಆಗ ಅವಳು ಈ ರೀತಿಯಾಗಿ ಹೇಳಿದಳು–

ಯಾವ ಮನೆಯಲ್ಲಿ ನಾರಿಯು ಬೆಳಗ್ಗೆ ಪತಿಯು ಎದ್ದ ಮೇಲೆ ಸೂರ್ಯೋ ದಯದ ಅನಂತರ ಎಷ್ಟೋ ಹೊತ್ತಿನ ಮೇಲೆ ಹಾಸಿಗೆಯಿಂದ ಏಳುತ್ತಾಳೋ, ಎದ್ದಮೇಲೆ ತಲೆಕೆದರಿಕೊಂಡು ಕೂದಲುಗಳನ್ನು ಹರವಿಕೊಂಡು, ಎರಡೂ ಕೈಗಳಿಂದ ತಲೆ ತುರಿಸಿಕೊಂಡು ಮನೆಯ ಬಾಗಿಲದಲ್ಲಿ ಕುಳಿತುಕೊಂಡಿರುತ್ತಾಳೋ, ಯಾವ ಮನೆಯಲ್ಲಿ ಹಿಂದಿನ ರಾತ್ರಿಯಲ್ಲಿ ಊಟಮಾಡಿದ ಎಂಜಲು ಪತ್ರಾವಳಿ–ಮುಸುರೆಪಾತ್ರೆ–ಮನೆತುಂಬಾ ಕಸ–ಮಧ್ಯಾಹ್ನದ ವರೆಗೂ ಇರುತ್ತದೆಯೋ ಆ ನಂತರ ಕಸಗುಡಿಸಿದರೂ ಆ ಕಸವು ಮೂಲೆಮೂಲೆಯಲ್ಲಿ ರಾಶಿರಾಶಿಯಾಗಿ ಇರುತ್ತದೆಯೋ, ಯಾರ ನಾರಿಯು ತನ್ನ ಪತಿ ಅತ್ತೆ ಮಾವ ತನ್ನ ಮಕ್ಕಳೊಡನೆ ಸದಾ ಕಲಹ ಮಾಡುತ್ತಾಳೋ ಅಂತಹ ಮನೆಯಲ್ಲಿಯೇ ನಾನು ವಾಸಮಾಡಿಕೊಂಡಿರು ವೆನೆಂದು ಹೇಳಿದಳು.

ಯಾವ ಮನೆಯಲ್ಲಿ ಅರುಣೋದಯದಲ್ಲಿ ಎಲ್ಲರೂ ಎದ್ದು ಸ್ನಾನಮಾಡಿ ತಮ್ಮ ತಮ್ಮ ನಿತ್ಯಕರ್ಮಾನುಷ್ಠಾನಗಳಿಂದ ಸ್ನಾನ, ಸಂಧ್ಯಾ, ವೇದಾಧ್ಯಯನ, ಅಗ್ನಿ ಹೋತ್ರಾದಿ ಹೋಮಗಳನ್ನು ಮಾಡುತ್ತಾರೋ ಪತ್ನಿಯಾದವಳು ಎಲ್ಲರಿಗಿಂತಲೂ ಮೊದಲೇ ಎದ್ದು ಮನೆಯ ಎಲ್ಲ ಕೆಲಸಗಳನ್ನು ಮಾಡಿ, ಪತಿ ಹಾಗೂ ಹಿರಿಯರ ಸೇವೆಯನ್ನು ಭಕ್ತಿಯಿಂದ ಮಾಡುತ್ತಾಳೋ ಚಿಕ್ಕವರು ದೊಡ್ಡವರ ಆಜ್ಞೆಯಂತೆ ನಡೆಯುತ್ತಾರೋ ಅಂಥವರ ಮನೆಯಲ್ಲಿ ತಾನು ಇರುವುದಿಲ್ಲ ಎಂದು ಹೇಳಿದಳು. ಆಗ ಉದ್ದಾಲಕರು ಅವಳನ್ನು ಅಲ್ಲಿಯೇ ಬಿಟ್ಟು ತಮ್ಮ ಆಶ್ರಮಕ್ಕೆ ಹೋದರು.

ಈ ಮೇಲಿನ ಕಥೆಯಿಂದ ಸ್ತ್ರೀಧರ್ಮವು ಬಹುಮಟ್ಟಿಗೆ ಗೊತ್ತಾಗುತ್ತದೆ. ಸ್ತ್ರೀಗೆ ವಿವಾಹವೇ ಉಪನಯನ ಸಂಸ್ಕಾರಕ್ಕೆ ಸರಿಸಮಾನವಾದ್ದರಿಂದ ವಿವಾಹವು ಅವಳಿಗೆ ಯೋಗ್ಯ ಕಾಲದಲ್ಲಿ ಆಗಬೇಕು. ಅನಂತರ 'ದಂಪತ್ಯೋಃ ಸಹಾಧಿಕಾರಾತ್' ಎಂದು ಶಾಸ್ತ್ರದಲ್ಲಿ ಹೇಳಿದಂತೆ ದಂಪತಿಗಳು ಕೂಡಿಯೇ ಎಲ್ಲ ಧರ್ಮಾಚರಣೆಗಳನ್ನು ಮಾಡುವುದು ಯುಕ್ತವಾಗುತ್ತದೆ. ಪತಿಯನ್ನು ಮನೆಯಲ್ಲಿಯೇ ಬಿಟ್ಟು ತಾನೊಬ್ಬಳೇ ತೀರ್ಥಯಾತ್ರೆಗೆ ಹೊರಡುವುದು ಇತ್ಯಾದಿಗಳು ಅವಳಿಗೆ ನಿಷಿದ್ಧವು. ಏಕಾದಶಿ ಉಪವಾಸಾದಿಗಳನ್ನು ಪತಿಯು ಕಾರಣಾಂತರಗಳಿಂದ ಮಾಡದೇ ಇದ್ದರೂ ಅವನ ಆಜ್ಞೆ ಪಡೆದು ಪತ್ನಿಯು ಅವಶ್ಯವಾಗಿ ಮಾಡಬೇಕು. ದೇವರ ಪೂಜೆಯನ್ನು ಪತಿಯು ಮಾಡುವಾಗ ದೇವರ ನೈವೇದ್ಯಕ್ಕೆ ರುಚಿಕರವಾದ ಶುಚಿಯಾದ ಪಾಕಮಾಡಿ ದೇವರ ಸನ್ನಿಧಿಯಲ್ಲಿ ರಂಗವಲ್ಲಿಯಿಂದ ಅಲಂಕಾರವನ್ನು ಮಾಡಿ ಅದರ ಮೇಲೆ ನೈವೇದ್ಯ ವನ್ನು ತಂದಿಡುವುದು, ಮಂಗಳಾರತಿ ಬತ್ತಿಯನ್ನು ಮಾಡುವುದು, ಸೂರ್ಯೋ ದಯದ ಪೂರ್ವದಲ್ಲಿಯೇ ಇಡೀ ಮನೆಯನ್ನು ಕಸಗುಡಿಸಿ ಗೋಮಯದಿಂದ ಶುದ್ಧಮಾಡುವುದು, ದೇವರ ಪಾತ್ರೆಗಳನ್ನು ಸ್ವಚ್ಛವಾಗಿ ತೊಳೆಯುವುದು, ದೇವರಿಗೆ ಪುಷ್ಪಮಾಲಿಕೆಗಳನ್ನು ಮಾಡಿಕೊಡುವುದು, ದೇವರ ಮುಂದೆ ತುಪ್ಪದ ದೀಪವನ್ನಿಟ್ಟು ಶಂಖ ಊದಿ ತುಳಸೀ, ಗೋಪೂಜಾ, ದ್ವಾರಪೂಜೆಗಳನ್ನು ಮಾಡಿ ಪತಿಗೆ ಸ್ನಾನಾದಿಗಳಿಗೆ ಸಿದ್ಧತೆ ಮಾಡಬೇಕು. ದೇವರ ಪೂಜಾಸಮಯದಲ್ಲಿ ಘಂಟೆ, ತಾಳ, ಶಂಖಗಳ ಮಂಗಳ ಧ್ವನಿಯನ್ನು ಮಾಡುತ್ತಾ ದೇವರ ನಾಮಗಳನ್ನು ಹೇಳುತ್ತಾ ದೇವರ ಸನ್ನಿಧಿಯಲ್ಲಿ ನಿಂತು ದೇವರ ಪೂಜೆಯನ್ನು ಭಕ್ತಿಯಿಂದ ನೋಡಬೇಕು. ಅನಂತರದಲ್ಲಿ ದೇವರಿಗೂ ಪತಿಗೂ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಪತಿಯ ಕೈಯಿಂದ ತೀರ್ಥಪ್ರಸಾದಗಳನ್ನು ಸ್ವೀಕರಿಸಬೇಕು.

ಬೆಳಗ್ಗೆ ಕಂಠಸ್ನಾನಾನಂತರ ಸೂರ್ಯನಾರಾಯಣನಿಗೆ ಅರ್ಘ್ಯವನ್ನು ಅಮಂತ್ರಕ ವಾಗಿ ಕೊಡಬೇಕು. ಇದರಿಂದ ಅವಳಿಗೆ ಏಳು ಜನ್ಮಗಳ ಪರ್ಯಂತವಾಗಿ ವೈಧವ್ಯ ಬರುವುದಿಲ್ಲ. ಪತಿಗೆ ಮತ್ತು ಅತಿಥಿಗಳಿಗೆ ದೇವರಿಗೆ ಸಮರ್ಪಿಸಿದ ಪಾಕದಿಂದ ಭೋಜನಮಾಡಿಸಿ ಅನಂತರ ಅವರ ಪ್ರಸಾದ ಎಂದು ಭಾವಿಸಿ ತಾನು ಭೋಜನ ಮಾಡಬೇಕು.

ಪತಿಯು ಮನೆಯಲ್ಲಿ ಇಲ್ಲದಿದ್ದಾಗ ತಾನು ಹೆಚ್ಚು ಆಭರಣಗಳನ್ನು ಇಟ್ಟು ಕೊಂಡು ಅಲಂಕಾರವನ್ನು ಮಾಡಿಕೊಳ್ಳಬಾರದು. ಯಾವಾಗಲೂ ಮನೆಯ ಬಾಗಿಲಲ್ಲಿ ಕುಳಿತುಕೊಳ್ಳುವುದನ್ನು ಅದರಂತೆ ಕಿಡಕಿಗಳಿಂದ ಹೊರಗೆ ಹೋಗತಕ್ಕವರನ್ನು ನೋಡುವುದನ್ನು ತ್ಯಜಿಸಬೇಕು. ಅತ್ತೆ, ಮಾವ ಮೊದಲಾದ ಹಿರಿಯರ ಸೇವೆಯನ್ನು ಮಾಡುತ್ತಿರಬೇಕು. ಪತಿಯನ್ನು ಅಂತರ್ಯಾಮಿ ಶ್ರೀನಾರಾಯಣನ ಭಾವನೆಯಿಂದ ಪರಮಭಕ್ತಿಯಿಂದ ಸೇವೆಮಾಡಿ ಪತಿಯ ಪ್ರೀತಿಯನ್ನು ಸಂಪಾದಿಸಬೇಕು. ಹೊರತು ಔಷಧಿ, ಮಾಟಮಂತ್ರಗಳಿಂದ ಪತಿಯನ್ನು ವಶೀಕರಿಸಬಾರದು.

ಪತಿಯು ಮನೆಗೆ ಹೊರಗಿನಿಂದ ಬಂದೊಡನೆ ಆತನ ಪಾದಪ್ರಕ್ಷಾಲನೆಯನ್ನು ಮಾಡಿ ಆಸನ ಕೊಟ್ಟು ನಮಸ್ಕರಿಸಿ ಉಪಚರಿಸಬೇಕು. ಪತಿಯು ಊರಲ್ಲಿ ಇಲ್ಲದಿದ್ದಾಗ ಅಡಿಗೆ ಮಾಡಿದ್ದನ್ನು ದೇವರ ಸಮ್ಮುಖದಲ್ಲಿ ಇಟ್ಟು ಮನಸ್ಸಿನಿಂದ ದೇವರಿಗೆ ಅರ್ಪಿಸಿ ಸ್ವಲ್ಪ ಅನ್ನವನ್ನು ಅಗ್ನಿಯಲ್ಲಿ ಆಹುತಿಯಾಗಿ ಕೊಟ್ಟು ದೇವರ ಪ್ರಸಾದವೆಂದು ಭೋಜನಮಾಡಬೇಕು. ಸಾಯಂಕಾಲದಲ್ಲಿ ದೇವಾಲಯ ಮೊದಲಾದ ಪವಿತ್ರ ಸ್ಥಳಗಳಲ್ಲಿ ಪ್ರವಚನ, ಹರಿಕಥೆ, ಪುರಾಣಗಳು ಆಗುತ್ತಿದ್ದರೆ ಪತಿಯ ಆಜ್ಞೆ ಪಡೆದು ಅಲ್ಲಿಗೆ ಹೋಗಿ ಅದನ್ನು ಭಕ್ತಿಯಿಂದ ಕೇಳಬೇಕು. ವೇದಗಳನ್ನು ಶ್ರವಣ ಮಾಡಬಾರದು. ಪೌರುಷೇಯಗ್ರಂಥಗಳಾದ ಮಹಾಭಾರತಾದಿಗಳನ್ನು ಮಾತ್ರ ಕೇಳಬೇಕು. ಸಾಲಿಗ್ರಾಮದ ಸ್ಪರ್ಶವನ್ನು ಮಾಡಬಾರದು. ಪ್ರತಿಮಾಪೂಜೆ ಮಾಡ ಬಾರದು.

೫. ೫. ಕಾಲಮುಖ್ಯವೇ ಹೊರತು ಸಂಭ್ರಮವಲ್ಲ

ಉಪನಯನ ಸಂಸ್ಕಾರ ವೇದಾಧ್ಯಯನಕ್ಕಾಗಿ ಇರುವಂತಹದ್ದು 'ಅಷ್ಟವರ್ಷಂ ಬ್ರಾಹ್ಮಣಂ ಉಪನಯೀತ ತಂ ಅಧ್ಯಾಪಯೀತ' ಎಂದು ಆದೇಶಿಸಿದೆ ವೇದ. ಆದ್ದರಿಂದ ಈ ಸಂಸ್ಕಾರದ ಆಚರಣೆಗೆ ಕಾಲಕ್ಕೆ ಹೆಚ್ಚು ಮಹತ್ವ ನೀಡಬೇಕೇ ಹೊರತು ಸಂಭ್ರಮಕ್ಕಲ್ಲ.

ದಶರಥ ರಾಮ ಮೊದಲಾದ ತನ್ನ ಮಕ್ಕಳ ಉಪನಯನ ಸಂಸ್ಕಾರವನ್ನು ಆಚರಿಸುವಾಗ ಕಾಲಕ್ಕೆ ಹೆಚ್ಚು ಗಮನಕೊಟ್ಟಿದ್ದ. ಸಂಭ್ರಮಕ್ಕೆ ಮರುಳಾಗಿ ಎಲ್ಲ ರಾಜರನ್ನು ಆಹ್ವಾನಿಸ ಹೊರಟರೆ ಸಕಾಲ ತಪ್ಪಿ ಅಕಾಲವಾದೀತೆಂದು ಏನೂ ಸಂಭ್ರಮವಿಲ್ಲದೆಯೇ ಅವರ ಉಪನಯನ ಸಂಸ್ಕಾರಗಳನ್ನು ನಡೆಸಿದ್ದ. ಆದ್ದರಿಂದಲೆ ರಾಮಾಯಣದಲ್ಲಿ ಶ್ರೀರಾಮನ ಉಪನಯನ ಸಂಸ್ಕಾರದ ಉಲ್ಲೇಖವೇ ಬರುವುದಿಲ್ಲ. 'ಕೌಸಲ್ಯಾ ಸುಪ್ರಜಾರಾಮ..... ಕರ್ತವ್ಯಂ ದೈವಮಾಹ್ನಿಕಂ' –ಎಂಬ ವಿಶ್ವಾಮಿತ್ರರ ಮಾತಿನ ಪ್ರಕಾರ ಅವನಿಗೆ ಉಪನಯನವೇ ಆಗಿಲ್ಲ ಎಂದು ಹೇಳುವಂತಿಲ್ಲ. ಆದ್ದರಿಂದ ಅವಶ್ಯವಾಗಿ ಉಪನಯನ ಸಂಸ್ಕಾರ ನಡೆದಿದೆ. ಆದರೆ ಮದುವೆ

ಸಂಸ್ಕಾರದಷ್ಟು ಸಂಭ್ರಮವಿಲ್ಲದ ಪ್ರಯುಕ್ತ ಅದನ್ನು ಉಲ್ಲೇಖಿಸಲಾಗಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು.

ದಶರಥನ ಈ ಆದರ್ಶವನ್ನು ನಾವೂ ಪಾಲಿಸಬೇಕು. ಸಂಭ್ರಮದ ಸಿದ್ಧತೆಗಾಗಿ ಕಾಲದ ಅತಿಕ್ರಮವನ್ನು ನಡೆಸದೆ ಸಕಾಲದಲ್ಲೇ ಮಕ್ಕಳಿಗೆ ಉಪನಯನ ನಡೆಸಬೇಕು.

ಶೇಷ ಪ್ರಿಯನೇ? ವಾಯುವೇ?

ಭಗವಂತನು ಶೇಷನನ್ನು ಹಾಸಿಗೆಯನ್ನಾಗಿಸಿಕೊಂಡು ನಿತ್ಯ ಅವನಿಗೆ ತನ್ನ ಸಂಪರ್ಕದ ಸೌಭಾಗ್ಯವನ್ನು ಅನುಗ್ರಹಿಸಿದ್ದಾನೆ. ರಾಮಾವತಾರದಲ್ಲಿ ಶೇಷನೇ ಲಕ್ಷ್ಮಣನಾಗಿ ರಾಮನಿಗೆ ಅತ್ಯಧಿಕ ಸೇವೆ ಸಲ್ಲಿಸಿದ್ದಾನೆ. ಕೃಷ್ಣಾವತಾರದಲ್ಲಿ ಭಗವಂತನು ಶೇಷನನ್ನು ತನ್ನ ಅಣ್ಣ ಬಲರಾಮನಾಗುವಂತೆ ಅನುಗ್ರಹಿಸಿದ್ದಾನೆ. ಇವನ್ನೆಲ್ಲ ನೋಡುವಾಗ ಭಗವಂತನಿಗೆ ವಾಯುದೇವರಿಗಿಂತಲೂ ಶೇಷನೇ ಹೆಚ್ಚು ಪ್ರಿಯನೋ ಎನಿಸುವುದು ಸಹಜ.

ಆದರೆ ಭಗವಂತನು ರಾಮಾವತಾರದಲ್ಲಿ ತನಗೆ ಅತ್ಯಂತ ಪ್ರಿಯವಾದ ಹಾಗೂ ಮುಖ್ಯವಾದ ಸೀತಾ ಸಂದೇಶದ ತಲುಪಿಸುವಿಕೆಯನ್ನು ಹನುಮಂತನ ಮೂಲಕ ಮಾಡಿಸಿದ್ದಾನೆ. ಕೃಷ್ಣಾವತಾರದಲ್ಲಿ ಅತಿ ಪ್ರಬಲನಾದ ಜರಾಸಂಧನ ವಧೆಯನ್ನು ಭೀಮಸೇನನ ಮೂಲಕವೇ ನಡೆಸಿದ್ದಾನೆ. ಇದರಿಂದಾಗಿ ಅವತಾರಗಳಲ್ಲಿ ವಾಯು ದೇವರ ಬಗ್ಗೆಯೇ ಹೆಚ್ಚು ಪ್ರೀತಿಯನ್ನು ತೋರಿಸಿಕೊಟ್ಟಂತಾಗುವುದು.

ಮೂಲರೂಪದಲ್ಲಿ ಶೇಷ ಭಗವಂತನಿಗೆ ಹಾಸಿಗೆ ಆಗಿ ಅವನ ಜೊತೆಗೇ ಇದ್ದರೂ ಅವನಿಗಿಂತಲೂ ವಾಯುದೇವರೇ ಹೆಚ್ಚು ಪ್ರಿಯರೆಂಬುದು ಭವಿಷ್ಯೋತ್ತರ ಪುರಾಣದ ವೆಂಕಟೇಶ ಮಹಾತ್ಮೆಯಲ್ಲಿ ನಿರೂಪಿತವಾದಂತೆ ವಾಯು ಶೇಷರ ನಡುವೆ ನಡೆದ ಘಟನೆಯಿಂದ ಸ್ಪಷ್ಟವಾಗುವುದು.

ಸಾಕ್ಷಾತ್ತಾಗಿ ಸಮರ್ಪಿಸಲು

ವಿಶ್ವಾಮಿತ್ರರು ಕಲಿಸಿಕೊಟ್ಟ ಮಂತ್ರಗಳ ಮೂಲಕವೇ ಶ್ರೀರಾಮ ಸುಬಾಹು ಮೊದಲಾದ ರಾಕ್ಷಸರನ್ನು ಸಂಹರಿಸಿದ್ದು. ಹೀಗಿರುವಾಗ ವಿಶ್ವಾಮಿತ್ರರಿಗೇ ಮಂತ್ರಗಳ ಮೂಲಕ ರಾಕ್ಷಸರನ್ನು ಸಂಹರಿಸಬಹುದಿತ್ತು ತಾನೆ? ಅದಕ್ಕಾಗಿ ಶ್ರೀರಾಮನನ್ನು ಕರೆದೊಯ್ಯಬೇಕಿತ್ತೇ?

ಇಲ್ಲ; ವಿಶ್ವಾಮಿತ್ರರು ಯಜ್ಞರಕ್ಷಣೆಗಾಗಿ ಶ್ರೀರಾಮನನ್ನು ಕರೆದೊಯ್ದದ್ದೇ ಅಲ್ಲ. ತಾವು ನಡೆಸುವ ಯಜ್ಞವನ್ನು ಭಗವಂತನಲ್ಲಿ ಪ್ರತ್ಯಕ್ಷವಾಗಿ ಸಮರ್ಪಿಸುವುದಕ್ಕಾಗಿ ಯಷ್ಟೇ ಅವನನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಜರಾಸಂಧನ ವಧೆಯ ಸಂದರ್ಭದಲ್ಲಿ, ಭೀಮನಿಂದ ನಡೆಯುವ ಜರಾಸಂಧನ ವಧಾರೂಪವಾದ ಪೂಜೆ ಯನ್ನು ನೇರವಾಗಿ ಸ್ವೀಕರಿಸಲು ಶ್ರೀಕೃಷ್ಣನು ಅವನ ಜೊತೆಗೆ ಹೋಗಿರುವನಲ್ಲವೇ? ಅಂತೆ ವಿಶ್ವಾಮಿತ್ರರು ಶ್ರೀರಾಮನನ್ನು ತಮ್ಮ ಆಶ್ರಮಕ್ಕೆ ಕರೆದೊಯ್ದು ತಾವು

ಮಾಡಿದ ಯಜ್ಞವನ್ನು 'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ......' ಎಂದಿರುವ ಭಗವಂತನೆದುರೇ ಸಮರ್ಪಿಸಿರುವರು.

೫. ೭. ಲೌಕಿಕ ವಿದ್ಯೋಪಜೀವನವೂ ನಿಷಿದ್ಧ

ವಿದ್ಯೋಪಜೀವನವು ನಿಷಿದ್ಧ ಎಂದಾಗ ಕೆಲವರು ತಾವು ಲೌಕಿಕ ವಿದ್ಯೆಯನ್ನು ಉಪಜೀವಿಸಿಕೊಂಡಿರುವುದು; ಶಾಸ್ತ್ರದಲ್ಲಿ ನಿಷೇಧಿಸಿದ್ದು ಆಧ್ಯಾತ್ಮಿಕ ವಿದ್ಯೋಪ ಜೀವನವನ್ನಷ್ಟೇ –ಎಂದು ಸಮರ್ಥಿಸಿಕೊಳ್ಳುವುದಿದೆ.

ಆದರೆ ಶಾಸ್ತ್ರದಲ್ಲಿ ಆಧ್ಯಾತ್ಮಿಕ ವಿದ್ಯೋಪಜೀವನದಂತೆ, ಲೌಕಿಕ ವಿದ್ಯೋಪ ಜೀವನವೂ ನಿಷಿದ್ಧವಾಗಿದೆ. ವನವಾಸದ ಸಂದರ್ಭದಲ್ಲಿ ಅಜಗರ ರೂಪದಲ್ಲಿದ್ದ ನಹುಷನ ಆಕ್ರಮಣಕ್ಕೆ ಒಳಗಾದ ಭೀಮಸೇನನಿಗೆ ಆ ಅಜಗರ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿ ಬಿಡಿಸಿಕೊಳ್ಳಲು ಸಾಮರ್ಥ್ಯವಿದ್ದರೂ 'ವಿದ್ಯೋಪಜೀವನಂ ಧರ್ಮೋ ವಿಪ್ರಾಣಾಮಪಿ ನೋ ಯತಃ । ಕಿಮುತ ಕ್ಷತ್ರಿಯಸ್ಯೇತಿ' –ಬ್ರಾಹ್ಮಣರಿಗೂ ವಿದ್ಯೋಪಜೀವನ ಸಲ್ಲದೆಂದಾಗ ಕ್ಷತ್ರಿಯನಾದವನಿಗೆ ಸಲ್ಲದೆಂಬುದು ಸುತರಾಂ ಸಿದ್ಧ ಎಂಬುದಾಗಿ ಶ್ರೀಮದಾಚಾರ್ಯರು ನಿರ್ಣಯಿಸಿರುವಂತೆ, ವಿದ್ಯೋಪಜೀವನ ಅಧರ್ಮ ಎಂಬುದಕ್ಕಾಗಿಯೇ ಅವನು ಅಜಗರನ ಪ್ರಶ್ನೆಗಳಿಗೆ ಉತ್ತರಿಸಿಲ್ಲ. ಅಜಗರನ ಪ್ರಶ್ನೆಗಳಾದರೂ ಲೌಕಿಕ ವಿಷಯಕ್ಕೆ ಸಂಬಂಧಿಸಿದ್ದಾಗಿದ್ದು ಲೌಕಿಕ ವಿದ್ಯೆಯನ್ನಷ್ಟೇ ಅಪೇಕ್ಷಿಸುವವು. ಆದರೂ ಭೀಮಸೇನ ಲೌಕಿಕ ವಿದ್ಯೆಯನ್ನು ತನ್ನ ರಕ್ಷಣೆಗಾಗಿ ಉಪಯೋಗಿಸಿಕೊಳ್ಳಲು ಬಯಸಲಿಲ್ಲ –ಎಂದರೆ ಲೌಕಿಕ ವಿದ್ಯೋಪಜೀವನವೂ ನಿಷಿದ್ಧ ಎಂಬುದು ಸ್ಪಷ್ಟವಾಗುವುದು.

ಸ್ತ್ರೀಯರಿಗೊಂದು ಪಾಠ : ದ್ವೈತವನದಲ್ಲಿ ಸತ್ಯಭಾಮೆ ಮತ್ತು ದ್ರೌಪದಿಯರು 'ಸ್ತ್ರೀ' ಧರ್ಮದ ಬಗ್ಗೆ ವಿಚಾರವಿನಿಮಯ ನಡೆಸಿದರೆಂದಿದೆ. ಸ್ತ್ರೀಯರು ಒಟ್ಟಾದಾಗ ಏನೇನೋ ಹಾಳು ಹರಟೆ ಹೊಡೆಯುವುದು ಸಾಮಾನ್ಯ. ಲೌಕಿಕ ವಿಷಯದ ಬಗ್ಗೆ ಹರಟೆ ಹೊಡೆದು ಆಯುಷ್ಯ ಹಾಳುಮಾಡಿಕೊಳ್ಳುವ ಬದಲು ದ್ರೌಪದಿ–ಸತ್ಯಭಾಮೆ ಯರಂತೆ ಸ್ತ್ರೀ ಧರ್ಮಗಳ ಬಗ್ಗೆಯೇ ಹರಟೆ ಹೊಡೆಯಬೇಕು.

ಅಭೇದನಿರಾಕರಣಪೂರ್ವಕ ಭೇದೋಪದೇಶ : 'ಕರ್ಮಣ್ಯೇವಾಧಿಕಾರಸ್ತೇ.........' ಎಂಬ ಗೀತೆಯ ಶ್ಲೋಕದಲ್ಲಿ ಜೀವಾತ್ಮರು ಕರ್ಮದಲ್ಲಷ್ಟೇ ಅಧಿಕಾರಿಗಳು. ಫಲವಾದರೂ ಭಗವದಧೀನವಾದುದು ಎಂಬುದಾಗಿ ಜೀವೇಶ್ವರಭೇದದ ಧರ್ಮ ಗಳನ್ನು ಸ್ಪಷ್ಟವಾಗಿ ತಿಳಿಸಿ –'ಮಾ ಕರ್ಮಫಲಹೇತುರ್ಭೂಃ' ಕರ್ಮಫಲಕ್ಕೆ ಕಾರಣ ನಾದ ಭಗವಂತನೇ ನಾನೆಂದು ಭ್ರಮಿಸಬೇಡ ಎಂದು ಸಂದೇಶಿಸಿಲಾಗಿದೆ. ಹೀಗೆ

ಭೇದಕಧರ್ಮಗಳನ್ನು ತಿಳಿಸಿ, ಅಭೇದವನ್ನು ನಿರಾಕರಿಸಿದ್ದರಿಂದ ಅಭೇದ ನಿರಾಕರಣೆಯಲ್ಲಿ ದಾರ್ಢ್ಯವನ್ನು ತೋರಿಸಿದಂತಾಗುವುದು.

ಹೇಗೆ 'ಬಹವಃಪುರುಷಾ ಬ್ರಹ್ಮನ್ ಉತಾಹೋ ಏಕ ಏವ ತು' –ಎಂಬ ಜನಮೇಜಯನ ಪ್ರಶ್ನೆಗೆ ವೈಶಂಪಾಯನರು ಉತ್ತರಿಸುವಾಗ 'ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ವಹ' ಒಬ್ಬನೇ ಪುರುಷ ಎನ್ನುವುದನ್ನು ಜ್ಞಾನಿಗಳು ಒಪ್ಪಲಾರರು –ಎಂಬುದಾಗಿ ಐಕ್ಯವನ್ನು ನಿರಾಕರಿಸಿ, ಮುಂದೆ 'ಬಹೂನಾಂ ಪುರುಷಾಣಾಂ ಹಿ ಯಥೈಕಾ ಯೋನಿರುಚ್ಯತೇ' –ಎಂದು ಸಂದೇಶಿಸಿದ ಭೇದೋಪದೇಶದಲ್ಲಿ ದಾರ್ಢ್ಯವು ದೊರಕುವುದೋ ಹಾಗೆಯೇ.

ಅಡುಗೆಯ ಸಿದ್ಧತೆಯಲ್ಲಷ್ಟೇ ಅನಧಿಕಾರ : ಸ್ತ್ರೀಶೂದ್ರಾದಿಗಳಿಗೆ ವೇದಾಧ್ಯಯನದಲ್ಲಿ ಅಧಿಕಾರವಿಲ್ಲ. ಆದರೆ ಮೋಕ್ಷ ಪಡೆಯುವುದರಲ್ಲಿ ಅಧಿಕಾರವಿಲ್ಲ ಎಂದೇನೂ ಶಾಸ್ತ್ರ ತಿಳಿಸಿಲ್ಲ. ಒಂದುವೇಳೆ ಮೋಕ್ಷಪ್ರಾಪ್ತಿಯಲ್ಲಿ ಅವರಿಗೆ ಅಧಿಕಾರವಿಲ್ಲ ಎಂದಿದ್ದರೆ ಅವರಿಗೆ ಅನ್ಯಾಯ ಮಾಡಿದಂತಾಗುತ್ತಿತ್ತು; ಆದರೆ ವೇದಾಧ್ಯಯನದಲ್ಲಿ ಅಧಿಕಾರವನ್ನು ಒಪ್ಪದಿದ್ದರೂ ವೇದಾಧ್ಯಯನದಿಂದ ಹೊಂದಬಹುದಾದ ಮೋಕ್ಷವನ್ನು ಪಡೆಯುವುದರಲ್ಲಿ ಅಧಿಕಾರವನ್ನು ಒಪ್ಪಿಯೇ ಇರುವುದರಿಂದ ಅಡುಗೆ ಮಾಡುವುದರಲ್ಲಿ ಅಧಿಕಾರವಿಲ್ಲ ಭೋಜನದಲ್ಲಿ ಇದ್ದೇ ಇದೆ ಎಂದಂತಾಯಿತಷ್ಟೇ. ಇದೇನೂ ಅಸಮಾಧಾನಕರವಾಗಲಾರದು ತಾನೆ?

●

೫. ೮. ಮೂರ್ತಿಪೂಜೆ ವೇದಸಮ್ಮತ

ಕಾಸೀತ್ ಪ್ರಮಾ ಪ್ರತಿಮಾ, ಕಿಂ ನಿದಾನಂ, ಆಜ್ಯಂ ಕಿಮಾಸೀತ್, ಪರಿಧಿಃ ಕ ಆಸೀತ್ । ಛಂದಃ ಕಿಮಾಸೀತ್, ಪ್ರವಗಂ ಕಿಮುಕ್ಥಂ ಯದ್ದೇವಾ ದೇವಮಯಜಂತ ವಿಶ್ವೇ ॥

–ಎಂಬ ಋಗ್ವೇದದ ಹತ್ತನೇ ಮಂಡಲದ ೧೩೦ನೇ ಸೂಕ್ತದಲ್ಲಿ ದೇವತೆಗಳು ಪ್ರಾಜಾಪತ್ಯ ಯಜ್ಞವನ್ನು ಆಚರಿಸಿದರೆಂದು ಹೇಳಿದೆ. ದೇವತೆಗಳು ಸೃಷ್ಟಿಯ ಪೂರ್ವದಲ್ಲಿ ತಮಗೆ ಜಗತ್ಸರ್ಜನಶಕ್ತಿಗಾಗಿ ಈ ಪ್ರಾಜಾಪತ್ಯಯಜ್ಞವನ್ನು ಆಚರಿಸಿದರು. ಇದು ಮಾನಸಯಜ್ಞ. ಸೃಷ್ಟಿಯ ಪೂರ್ವದಲ್ಲಿ ಬಾಹ್ಯಯಜ್ಞಕ್ಕೆ ಬೇಕಾದ ಸಾಮಗ್ರಿಗಳು ಇಲ್ಲವಾದ್ದರಿಂದ ದೇವತೆಗಳು ಬಾಹ್ಯಯಜ್ಞವನ್ನು ಮಾಡಲಿಲ್ಲ. ದೇವತೆಗಳು ಬಾಹ್ಯಯಜ್ಞವನ್ನು ಏಕೆ ಮಾಡಲಿಲ್ಲ ಎಂದು ಸಮರ್ಥಿಸಲು ಮೇಲಿನ ಮಂತ್ರವು ಆಗ ಸಾಮಗ್ರಿಗಳು ಇರಲಿಲ್ಲವೆಂದು ಹೇಳುತ್ತದೆ. ಯಜ್ಞಕ್ಕೆ ಬೇಕಾದ ಸಾಮಗ್ರಿಗಳು ಯಾವುವು ಇದ್ದವು? ಎಂದು ಪ್ರಶ್ನಿಸುವುದು ಈ ಶ್ರುತಿಯ ಅಭಿಪ್ರಾಯವಲ್ಲ. ಇಲ್ಲಿ 'ಕಿಂ' ಶಬ್ದಕ್ಕೆ ಆಕ್ಷೇಪಾರ್ಥವನ್ನು ಇಟ್ಟುಕೊಳ್ಳಬೇಕು.

ಪ್ರಶ್ನಾರ್ಥವನ್ನು ಇಟ್ಟುಕೊಂಡರೆ ಮುಂದಿನ ಮಂತ್ರದಲ್ಲಿ ಉತ್ತರವು ಇರಬೇಕಾಗುತ್ತದೆ. ಆದರೆ ಅಲ್ಲಿ ಇದಕ್ಕೆ ಉತ್ತರವಿಲ್ಲ.

ಸಾಯಣಾಚಾರ್ಯರು ಈ ಮಂತ್ರ ಪ್ರಶ್ನಾರ್ಥಕವೆಂದು ವ್ಯಾಖ್ಯಾನ ಮಾಡಿದ್ದಾರೆ. ಮುಂದಿನ ಮಂತ್ರದಲ್ಲಿ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿಲ್ಲ. ಕೆಲವು ಪ್ರಶ್ನೆಗಳಿಗೆ ಮಾತ್ರ ಮುಂದಿನ ಮಂತ್ರವು ಉತ್ತರಿಸುತ್ತಿದೆ ಎಂದು ಅವರು ಬರೆದಿದ್ದಾರೆ. ಅನೇಕ ಪ್ರಶ್ನೆಗಳನ್ನು ಮಾಡಿ ಕೆಲವು ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಕೊಟ್ಟರೆ ಪೂರ್ವೋತ್ತರಮಂತ್ರಗಳು ವಿಸಂಗತವಾಗುತ್ತದೆ. ಸರಿಯಾಗಿ ಪರಿಶೀಲಿಸಿದರೆ ಕೆಲವು ಪ್ರಶ್ನೆಗಳಿಗೂ ಮುಂದಿನ ಮಂತ್ರದಲ್ಲಿ ಉತ್ತರ ಸ್ಪಷ್ಟವಾಗಿಲ್ಲ. ಮಂತ್ರಕ್ಕೆ ಲಾಕ್ಷಣಿಕ-ಅಮುಖ್ಯಾರ್ಥವನ್ನು ಇಟ್ಟುಕೊಂಡು ಸಾಯಣಾಚಾರ್ಯರು ಉತ್ತರ ಉಂಟೆಂದು ಹೇಳಿರುವುದು.

ಪೂರ್ವಮಂತ್ರದಲ್ಲಿ ದೇವತೆಗಳ ಯಜ್ಞದಲ್ಲಿ ಪ್ರತಿಮೆ ಯಾವುದು? ಎಂದಿದೆ. ಈ ಪ್ರತಿಮಾ ಶಬ್ದಕ್ಕೆ ದೇವತೆ ಎಂದು ಅರ್ಥವನ್ನು ಮಾಡಿ ಪ್ರಾಜಾಪತ್ಯ ಯಜ್ಞಕ್ಕೆ ದೇವತೆ ಯಾರು? ಎಂದು ಪ್ರಶ್ನೆ. ಅಗ್ನಿ, ಸವಿತಾ, ಇಂದ್ರ, ಬೃಹಸ್ಪತಿ ಮುಂತಾದವರು ದೇವತೆಗಳು ಎಂದು ಮುಂದಿನ ಮಂತ್ರದ ಉತ್ತರ. ಇದು ಸಾಯಣ ಭಾಷ್ಯದ ಅಭಿಪ್ರಾಯ.

ಈ ಪ್ರಶ್ನೆ ಮತ್ತು ಉತ್ತರಗಳು ಸರಿಯಲ್ಲ. ಪ್ರಾಜಾಪತ್ಯ ಯಜ್ಞವಾದುದರಿಂದ ಈ ಯಜ್ಞಕ್ಕೆ ಪ್ರಜಾಪತಿಯೇ ದೇವತೆ ಎಂಬುದು ನಿಶ್ಚಿತ. ಆದುದರಿಂದ ಈ ಯಜ್ಞಕ್ಕೆ ದೇವತೆ ಯಾರು? ಎಂಬ ಪ್ರಶ್ನೆ ಹುಟ್ಟುವುದೇ ಇಲ್ಲ. ಅಂತೆಯೇ ಅಗ್ನ್ಯಾದಿ ದೇವತೆಗಳು ಮಾಡುವ ಯಜ್ಞಕ್ಕೆ ಅಗ್ನ್ಯಾದಿಗಳೇ ದೇವತೆಗಳೆಂದು ಉತ್ತರಿಸಿದರೆ ದೇವತೆಗಳು ಯಜ್ಞದಲ್ಲಿ ತಮ್ಮನ್ನು ತಾವೇ ಪೂಜಿಸಿಕೊಂಡಂತೆ ಆಗುವುದಿಲ್ಲವೇ?

ಅಲ್ಲದೆ ಶ್ರುತಿಯಲ್ಲಿರುವ ಪ್ರತಿಮಾಶಬ್ದಕ್ಕೆ ರೂಢವಾದ ಮುಖ್ಯಾರ್ಥವನ್ನು ಬಿಟ್ಟು ದೇವತೆ ಎಂಬ ಯೌಗಿಕಾರ್ಥವನ್ನು ಮಾಡಬೇಕಾಗುವುದು. ಶಬ್ದಗಳಿಗೆ ರೂಢಾರ್ಥವು ಕೂಡದಿದ್ದರೆ ಮಾತ್ರ ಅದನ್ನು ಬಿಡುವುದು ಶಾಸ್ತ್ರಪದ್ಧತಿ. ಪ್ರಕೃತ ವೇದಮಂತ್ರದಲ್ಲಿ ಪ್ರತಿಮಾಶಬ್ದಕ್ಕೆ 'ದೇವತಾಮೂರ್ತಿ' ಎಂಬ ರೂಢಾರ್ಥವನ್ನೇ ಇಟ್ಟುಕೊಂಡರೂ ಬಾಧಕವಿಲ್ಲ.

ಯಜ್ಞವು ದೇವತಾಪೂಜಾರೂಪವಾದುದರಿಂದ ದೇವತಾಮೂರ್ತಿಯು ಯಜ್ಞದಲ್ಲಿ ಆವಶ್ಯಕ. ಆದ್ದರಿಂದಲೇ ಭಾಗವತ ಪ್ರಥಮ ಸ್ಕಂಧದಲ್ಲಿ ಶೌನಕಾದಿ ಋಷಿಗಳು ನೈಮಿಷಾರಣ್ಯದಲ್ಲಿ ಯಜ್ಞ ಮಾಡುತ್ತಾರೆಂದು ಹೇಳುವಾಗ ಆ ಅರಣ್ಯವನ್ನು ಅನಿಮಿಷ ಕ್ಷೇತ್ರವೆಂದು ವರ್ಣಿಸಲಾಗಿದೆ. ಈ ಅನಿಮಿಷ ಕ್ಷೇತ್ರ ಶಬ್ದಕ್ಕೆ ನರಸಿಂಹನೇ ಮೊದಲಾದ ದೇವತಾ ಸಾನ್ನಿಧ್ಯವುಳ್ಳ (ನರಸಿಂಹದೇವರೇ ಮೊದಲಾದ ದೇವತಾಮೂರ್ತಿಗಳಿರುವ) ಎಂದು ವ್ಯಾಖ್ಯಾನಕಾರರು ಅರ್ಥ ಮಾಡಿದ್ದಾರೆ. ಯಜ್ಞ ಸ್ಥಳದಲ್ಲಿ ದೇವತಾಮೂರ್ತಿ ಇದ್ದರೆ ಆ ಸ್ಥಳ ಯಜ್ಞಕ್ಕೆ ಪ್ರಶಸ್ತವೆಂಬ ಅಭಿಪ್ರಾಯ ವಿದ್ದುದರಿಂದಲೇ ಋಷಿಗಳು ಮಾಡುವ ಯಜ್ಞದ ಸ್ಥಳವನ್ನು ಅನಿಮಿಷ ಕ್ಷೇತ್ರ

ಶಬ್ದದಿಂದಲೇ ದೇವತಾ ಸಾನ್ನಿಧ್ಯಯುಕ್ತ ಸ್ಥಳವೆಂದು ವರ್ಣಿಸಲಾಗಿದೆ. ಇಲ್ಲವಾದರೆ ಅಲ್ಲಿ ಆ ವಿಶೇಷಣವು ವ್ಯರ್ಥವಾದೀತು.

ಆದುದರಿಂದಲೇ ವೇದಮಂತ್ರವು ಬಾಹ್ಯಯಜ್ಞದಲ್ಲಿ ಮುಖ್ಯವಾಗಿರುವ ಪ್ರತಿಮಾ (ದೇವತಾಮೂರ್ತಿ) ಜಗತ್ಸೃಷ್ಟಿಯ ಪೂರ್ವದಲ್ಲಿ ಯಾವುದು ಇತ್ತು ಎಂದು ಆಕ್ಷೇಪಿಸುತ್ತದೆ.

ಸಾಯಣಭಾಷ್ಯವು ವೇದಕ್ಕೆ ಅಪಭಾಷ್ಯವೆಂದು ಶ್ರೀ ಮಂತ್ರಾಲಯಸ್ವಾಮಿಗಳು ತತ್ವಪ್ರಕಾಶಿಕಾ ಭಾವದೀಪ ಗ್ರಂಥದಲ್ಲಿ ಬರೆದಿದ್ದಾರೆ. ಆದ್ದರಿಂದ ಪ್ರತಿಮಾ ಎಂಬ ವೈದಿಕ ಪದಕ್ಕೆ ಸಾಯಣರು ಬರೆದಿರುವ ಅರ್ಥ ಸ್ವೀಕಾರ್ಯವಲ್ಲ. ವೆಂಕಟ ಮಾಧವೀಯರೂ ವೇದಭಾಷ್ಯದಲ್ಲಿ ಪ್ರತಿಮಾ ಶಬ್ದಕ್ಕೆ ದೇವತಾ ಎಂಬ ಅರ್ಥವನ್ನು ಮಾಡಿಲ್ಲ.

ಮೂರ್ತಿಪೂಜೆಯನ್ನು ನಿಷೇಧಿಸುವ ಆರ್ಯ ಸಮಾಜದವರು ಜೀವೇಶ್ವರರಿಗೆ ಐಕ್ಯವನ್ನು ಅಂಗೀಕರಿಸುವುದಿಲ್ಲ. ಶಂಕರಾಚಾರ್ಯರು ಐಕ್ಯಪರವನ್ನಾಗಿ ಹೇಳುವ 'ತತ್ವಮಸಿ', 'ಅಹಂ ಬ್ರಹ್ಮಾಸ್ಮಿ' ಮುಂತಾದ ಮಂತ್ರಗಳು ಐಕ್ಯಪರವಲ್ಲವೆಂದು ನಿರಾಕರಿಸುತ್ತಾರೆ. ಶಂಕರಾಚಾರ್ಯರ ಅರ್ಥವನ್ನು ತಪ್ಪೆಂದು ಸ್ವೀಕರಿಸಿದವರಿಗೆ ಅವರ ಅನುಯಾಯಿಗಳಾದ ಸಾಯಣರ ಅಯುಕ್ತಾರ್ಥವನ್ನು ತ್ಯಜಿಸಲು ಏಕೆ ಹಿಂಜರಿಕೆ?

ಪ್ರತಿಮಾ ಪೂಜೆಯನ್ನು ಮಾಡಬಾರದು ಎಂದು ಋಗ್ವೇದದಲ್ಲಿ ಎಲ್ಲಿಯಾದರೂ ಸ್ಪಷ್ಟವಾಗಿ ಇದ್ದರೆ ಮೂರ್ತಿಪೂಜಾ ನಿಷೇಧಕರು ತೋರಿಸಿಕೊಡಲಿ. ಆಗ 'ಕಾಸೀತ್ ಪ್ರಮಾ ಪ್ರತಿಮಾ' ಎಂಬ ಮಂತ್ರಕ್ಕೆ ಅನ್ಯಾರ್ಥವನ್ನು ಹೇಳಲು ಅವರು ಅಧಿಕಾರಿಗಳಾದರು.

ಋಗ್ವೇದ ಪುರುಷಸೂಕ್ತದಲ್ಲಿ ಚಾತುರ್ವರ್ಣ್ಯ ವಿಭಾಗವನ್ನು ಸ್ಪಷ್ಟವಾಗಿ ಹೇಳಿದ್ದರೂ, ಅದನ್ನು ನಿಷೇಧಿಸುವ ಈ ಮೂರ್ತಿಪೂಜಾನಿಷೇಧಕರು ಸ್ಪಷ್ಟವಾಗಿ ವೇದದಲ್ಲಿ ಹೇಳಿದ ಮೂರ್ತಿಪೂಜೆಯನ್ನು ನಿಷೇಧಿಸುವುದು ಏನು ಆಶ್ಚರ್ಯ!

೫. ೯. ಪಾಂಡವರು ಸುಳ್ಳು ಹೇಳಿದುದು ಧರ್ಮ

ಕರ್ಣ ಶ್ರೀಪರಶುರಾಮರಲ್ಲಿ ತಾನು ಭಾರ್ಗವವಂಶದ ಬ್ರಾಹ್ಮಣ ಎಂದು ಸುಳ್ಳು ಹೇಳಿದುದು ಅಪರಾಧ ಎಂದು ಪರಿಗಣಿಸಲಾಗಿದೆ. ಆದ್ದರಿಂದಲೇ ಪರಶುರಾಮ ಅವನಿಗೆ ಶಾಪವನ್ನು ನೀಡಿದ್ದರು.

ಅದೇ ರೀತಿಯಾಗಿ ಪಾಂಡವರೂ ಸುಳ್ಳು ಹೇಳಿದ್ದರು. ಅವರು ಏಕಚಕ್ರಾ ನಗರದಲ್ಲಿ ತಾವು ಬ್ರಾಹ್ಮಣರೆಂದು ಹೇಳಿಕೊಂಡಿದ್ದರು. ಬ್ರಾಹ್ಮಣ ವೇಷದಲ್ಲಿಯೇ ಇದ್ದರು. ಆದರೆ ಪಾಂಡವರು ಹಾಗೆ ಸುಳ್ಳು ಹೇಳಿದುದು ತಪ್ಪು ಎಂದು ಪರಿಗಣಿಸಲ್ಪಟ್ಟಿಲ್ಲ. ಯಾಕೆ?

ಪಾಂಡವರು ಶ್ರೀ ವೇದವ್ಯಾಸರ ನಿರ್ದೇಶನಕ್ಕನುಗುಣವಾಗಿ ಸುಳ್ಳು ಹೇಳಿದವರು. 'ವಸತೇಹ ಪ್ರತೀಕ್ಷನ್ತಾ ಮಮಾಗಮನಕಾಂಕ್ಷಿಣಃ' –ಇಲ್ಲಿಯೇ ವೇಷ ಮರೆಸಿಕೊಂಡು ನಾನು ಮರಳಿ ಬರುವವರೆಗೆ ನೆಲೆಸಿರಿ. ಎಂದು ಶ್ರೀ ವೇದವ್ಯಾಸರು ಪಾಂಡವರಿಗೆ ಆದೇಶಿಸಿದರೆಂದು ಮಹಾಭಾರತದಲ್ಲಿದೆ. ಮಹಾಭಾರತತಾತ್ಪರ್ಯ ನಿರ್ಣಯದಲ್ಲಿ (೧೯–೬೬) 'ತಾನ್ ಬ್ರಾಹ್ಮಣಸ್ಯ ಚ ಗೃಹೇ ಪ್ರಣಿಧಾಯ ಕೃಷ್ಣಶಿಷ್ಯಾ ಮಮೈತ ಇತಿ ವಿಪ್ರಕುಮಾರರೂಪಾನ್' –ಬ್ರಾಹ್ಮಣವೇಷ ತೊಟ್ಟ ಪಾಂಡವರನ್ನು ಏಕಚಕ್ರಾನಗರದ ಬ್ರಾಹ್ಮಣನ ಮನೆಯಲ್ಲಿ ತನ್ನ ಶಿಷ್ಯರಿವರೆಂದು ವಸತಿಯನ್ನು ಶ್ರೀ ವೇದವ್ಯಾಸರೇ ಕಲ್ಪಿಸಿಕೊಟ್ಟರು ಎಂದು ತಿಳಿಸಲಾಗಿದೆ.

ಅಂತೂ ಆಗ ಅಲ್ಲಿ ಪಾಂಡವರು ಬ್ರಾಹ್ಮಣರೆಂದು ಸುಳ್ಳು ಹೇಳಿಕೊಂಡು ಇದ್ದುದು ಶ್ರೀ ವೇದವ್ಯಾಸರ ನಿರ್ದೇಶಾನುಸಾರವಾಗಿತ್ತು. ಆದ್ದರಿಂದಲೇ ಅದು ಅವರಿಗೆ ಸಮ್ಮತವೂ ಕೂಡಾ. ಆದುದರಿಂದ ಪಾಂಡವರ ಆ ಸುಳ್ಳು ಹೇಳುವಿಕೆ ಅಧರ್ಮ ಎನಿಸಲಿಲ್ಲ.

ಭಗವಂತನ ಆದೇಶಕ್ಕೆ, ಸೂಚನೆಗೆ, ಪ್ರೇರಣೆಗೆ ಅನುಗುಣವಾಗಿ ನಡೆದುಕೊಳ್ಳುವುದೇ ಮುಖ್ಯ ಧರ್ಮ. ಸುಳ್ಳು ಹೇಳದಿರುವುದೆಲ್ಲ ಅದಕ್ಕೆ ಪೋಷಕವಾಗಿಯಷ್ಟೇ ಧರ್ಮ ಎನಿಸುವವು. ಶ್ರೀಕೃಷ್ಣನ ಆದೇಶಾನುಸಾರವಾಗಿ ಯುಧಿಷ್ಠಿರ ಏನೂ ಸಂಕೋಚಪಡದೆ 'ಅಶ್ವತ್ಥಾಮಾ ಹತಃ' ಎಂದು ಸುಳ್ಳು ಹೇಳುವ ಬದಲು ತಾನು ಸುಳ್ಳು ಹೇಳಿದಂತಾಗುವುದಲ್ಲ! ಎಂದು ಸಂಕೋಚ ಪಡುತ್ತಲೇ 'ಅಶ್ವತ್ಥಾಮಾ ಹತಃ' ಎಂದು ಹೇಳುವುದರ ಮೂಲಕ ಶ್ರೀಕೃಷ್ಣನ ಆದೇಶದಲ್ಲಿ ಅವಿಶ್ವಾಸವನ್ನು ತಾಳಿದ್ದರಿಂದಾಗಿ ಅವನಿಗೆ ನರಕದರ್ಶನವಾಗುವಂತಾಯಿತು.

ಆದ್ದರಿಂದ ಸುಳ್ಳು ಹೇಳದಿರುವುದೇ ಮುಂತಾದ ಧರ್ಮಗಳ ಆಚರಣೆಗಿಂತಲೂ ಭಗವಂತನ ಮಾತಿನಲ್ಲಿ ವಿಶ್ವಾಸ ತಾಳುವುದು ಮುಖ್ಯವಾಗಿ ಆಚರಿಸಬೇಕಾದ ಧರ್ಮ ಎನಿಸಿದೆ.

ನ ಹ್ಯಾಜ್ಞಯಾ ವಾಸುದೇವಸ್ಯ ಕಿಂಚಿತ್ ।
ಪಾಪಂ ಭವೇತ್ ಸರ್ವವಿಧರ್ಮಿಣೋऽಪಿ ॥ — (32-109)

ಎಂದು ಶ್ರೀಮದಾಚಾರ್ಯರು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ತೀರ್ಮಾನಿಸಿರುವಂತೆ ಭಗವಂತನ ಆದೇಶ, ಸಮ್ಮತಿ ಇತ್ತೆಂದರೆ ಎಂತೆಂತಹ ಅಧರ್ಮವನ್ನೆಸಗಿದರೂ ಅದು ಅವನ ಪಾಲಿಗೆ ಪಾಪಪ್ರದವೆನಿಸುವುದಿಲ್ಲ.

ಪಾಂಡವರಾದರೂ ಶ್ರೀ ವೇದವ್ಯಾಸರ ಆಜ್ಞಾನುಸಾರವಾಗಿ ಸೂಚನಾನುಸಾರವಾಗಿ ತಾವು ಬ್ರಾಹ್ಮಣರು ಎಂದು ಸುಳ್ಳು ಹೇಳಿದುದರಿಂದ ಅದು ಅವರ ಪಾಲಿಗೆ ಪಾಪಪ್ರದವಾಗಿ ಅಪರಾಧ ಎನಿಸಲೇ ಇಲ್ಲ. ಬದಲಾಗಿ ಶ್ರೀ ವೇದವ್ಯಾಸರ ಆದೇಶವನ್ನು ಪಾಲಿಸಿದ ಪ್ರಯುಕ್ತ ಅವರಿಗೆ ಪುಣ್ಯವೇ ದೊರಕಿತು.

ಶ. ೧೦.

ಸೂಕ್ಷ್ಮಜ್ಞತೆಯನ್ನು ಮನದಟ್ಟಾಗಿಸಬೇಕು

ಪ್ರಾಚೀನರು ತಿಳಿಸಿದ ಎಲ್ಲ ಆಚಾರಗಳಿಗೆ ಕಾರಣಗಳನ್ನು ನಾವೇ ಊಹಿಸುವುದು ಕಷ್ಟ. ಅತಿಸೂಕ್ಷ್ಮಜ್ಞಾನಿಗಳಾದ ನಮ್ಮ ಪ್ರಾಚೀನರ ಉದ್ದೇಶದಲ್ಲಿ ನಾವು ಊಹಿಸುವ ಕಾರಣಗಳು ಸೇರಿದ್ದಿರಬಹುದು. ಸೇರದೇ ಇದ್ದಿರಲೂಬಹುದು. ನಮ್ಮ ಊಹೆಗೂ ನಿಲುಕದ ಹೆಚ್ಚಿನ ಕಾರಣಗಳೂ ಇರಬಹುದು. ಆದುದರಿಂದ ನಾವು ಮಾಡಬೇಕಾದ ಕೆಲಸ ಇಂದಿನ ಪೀಳಿಗೆಗೆ ನಮ್ಮ ಪ್ರಾಚೀನರು ಬಹು ಸೂಕ್ಷ್ಮಜ್ಞಾನಗಳೆಂಬುದನ್ನು ಮನವರಿಕೆ ಮಾಡಿಸುವುದಷ್ಟೇ.

ಉದಾಹರಣೆಗೆ– ಗರ್ಭದಲ್ಲಿಯೇ ಶಿಶುವಿಗೆ ತಿಳಿವಳಿಕೆ ನೀಡಬಹುದೆಂದು ಇಂದು ವಿಜ್ಞಾನಿಗಳು ಕಂಡುಹಿಡಿಯುತ್ತಿದ್ದಾರೆ. ಪ್ರಹ್ಲಾದ, ಅಭಿಮನ್ಯು ಮುಂತಾದವರಿಗೆ ಗರ್ಭದಲ್ಲಿಯೇ ಮಹಾತ್ಮರ ಉಪದೇಶ ದೊರೆತಿರುವುದರ ಉಲ್ಲೇಖ ಪುರಾಣಗಳಲ್ಲಿ ಕಂಡುಬರುತ್ತದೆ. ಉತ್ತರ ದಿಕ್ಕಿಗೆ ತಲೆಹಾಕಿ ಮಲಗಬಾರದೆಂದು ನಮ್ಮ ಹಿರಿಯರು ಎಂದೋ ಹೇಳಿದ್ದಾರೆ. ಸಸ್ಯಗಳಲ್ಲಿಯೂ ಜೀವವಿದೆ. ಸಂಗೀತದಿಂದ ಮರಬಳ್ಳಿಗಳು ಚಿಗುರುತ್ತವೆ ಎನ್ನುವ ವಿಚಾರವನ್ನೆಲ್ಲ ಪ್ರಾಚೀನರು ಎಂದೋ ಹೇಳಿದ್ದಾರೆ. ಇಂದು ವಿಜ್ಞಾನಿಗಳು ಕಂಡುಹಿಡಿಯುತ್ತಿದ್ದಾರೆ. ಈ ರೀತಿ ಪ್ರಾಚೀನರ ಸೂಕ್ಷ್ಮಜ್ಞತೆಯನ್ನು ಜನರಿಗೆ ಮನದಟ್ಟಾಗಿಸಬೇಕು.

●

ಶ. ೧೧.

ಪ್ರಾಮುಖ್ಯಕ್ಕೆ ತಕ್ಕ ಪ್ರಾಶಸ್ತ್ಯ

ಮುಖ್ಯವಾಗಿ ತತ್ತ್ವಜ್ಞಾನ ಹಾಗೂ ಭಕ್ತಿಯ ಪ್ರಚಾರಕ್ಕಾಗಿ ಅವತರಿಸಿರುವ ಶ್ರೀಮದಾಚಾರ್ಯರು ಮಾನವಜೀವನದಲ್ಲಿ ಜ್ಞಾನ–ಭಕ್ತಿಗಳಿಗೆ ಪ್ರಾಶಸ್ತ್ಯ ಕೊಡಬೇಕೆನ್ನುತ್ತಾರೆಯೇ ಹೊರತು ಲೌಕಿಕ ವ್ಯವಹಾರಗಳಿಂದ ಪೂರ್ಣ ವಿಮುಖರಾಗಬೇಕೆಂದು ಎಲ್ಲೂ ಹೇಳುತ್ತಿಲ್ಲ.

ದ್ವಾದಶಸ್ತೋತ್ರದಲ್ಲಿ 'ಕುರು' ಎಂಬುದಾಗಿ ಸ್ವವಿಹಿತ ಕರ್ಮಾನುಷ್ಠಾನಕ್ಕೆ ಆದೇಶಿಸಿದಾಕ್ಷಣ 'ಭುಂಕ್ಷ್ವ ಚ' ಎಂಬುದಾಗಿ ವಿಹಿತವಾದ, ಮಿತವಾದ ಭೋಗಕ್ಕೆ ಸಮ್ಮತಿ ನೀಡಿರುತ್ತಾರೆ.

'ನಿರ್ಯೋಗಕ್ಷೇಮ ಆತ್ಮವಾನ್' ಎಂದು ಗೀತಾಚಾರ್ಯ ಉಪದೇಶಿಸಿದ್ದಿದೆ. ಇದಕ್ಕೆ ಉಳಿದೆಲ್ಲ ವ್ಯಾಖ್ಯಾನಕಾರರು ಮೇಲ್ನೋಟಕ್ಕೆ ತೋರುವ ಅರ್ಥವನ್ನೇ, ಅಂದರೆ ಭಗವಂತನನ್ನು ಸ್ವಾಮಿಯನ್ನಾಗಿ ಸ್ವೀಕರಿಸಿ, ತಮ್ಮ ಯೋಗಕ್ಷೇಮದ ವಿಚಾರವನ್ನು ಪೂರ್ಣವಾಗಿ ಬಿಡಬೇಕು' ಎಂಬುದಾಗಿಯೇ ಹೇಳಿರುತ್ತಾರೆ. ಆದರೆ ಶಾಸ್ತ್ರವಿಹಿತವಾದ ಯೋಗಕ್ಷೇಮವೂ ಆವಶ್ಯಕ ಎಂದು ವಿವೇಚಿಸಿಕೊಂಡ ಶ್ರೀಮದಾಚಾರ್ಯರು 'ಗೀತಾತಾತ್ಪರ್ಯ'ದಲ್ಲಿ ಶಾಸ್ತ್ರಾವಿಹಿತ ಹಾಗೂ ವಿರುದ್ಧ

ಯೋಗಕ್ಷೇಮವನ್ನಷ್ಟೇ ಬಿಡಬೇಕೆಂದು ಗೀತಾಚಾರ್ಯನ ಅಭಿಪ್ರಾಯವನ್ನು ಸ್ಪಷ್ಟೀಕರಿಸಿರುತ್ತಾರೆ.

ಗೀತಾತಾತ್ಪರ್ಯದಲ್ಲೇ ಮತ್ತೊಂದೆಡೆ–

ವಿತ್ತಂ ಬಂಧುರ್ವಯಃ ಕರ್ಮ ವಿದ್ಯಾ ಚೈವ ತು ಪಂಚಮೀ ।
ಏತಾನಿ ಮಾನ್ಯಸ್ಥಾನಾನಿ ಗರೀಯೋ ಹ್ಯುತ್ತರೋತ್ತರಮ್ ॥

–ಎಂಬುದಾಗಿ ಐಶ್ವರ್ಯ, ಬಂಧುವರ್ಗ, ವಯಸ್ಸು, ಕರ್ಮಾಚರಣೆ ಹಾಗೂ ವಿದ್ಯೆ ಈ ಐದಕ್ಕೂ ಮಾನವನ ಜೀವನದಲ್ಲಿ ಮಾನ್ಯತೆಯನ್ನು ಒಪ್ಪಿಕೊಂಡ ಶ್ರೀಮದಾಚಾರ್ಯರು ಹಣ ಸಂಪಾದನೆ, ಬಂಧುವರ್ಗ ಪೋಷಣೆ, ತನ್ನ ಆಯುಷ್ಯಾಭಿವೃದ್ಧಿ ಸ್ವವಿಹಿತ ಕರ್ಮಾಚರಣೆ ಮತ್ತು ವಿದ್ಯೆಯ ಗಳಿಕೆ ಇವಿಷ್ಟಕ್ಕೂ ಮಾನವನ ಬದುಕಲ್ಲಿ ಸ್ಥಾನ ದೊರಕಬೇಕೆಂದು ಸೂಚಿಸಿರುತ್ತಾರೆ.

ಆದರೆ ಮೇಲಿನ ಮಾತಿನ ಕೊನೆಯಲ್ಲಿ ಆ ಐದು ಪದಾರ್ಥಗಳ ಪೈಕಿ ಹಿಂದಿನ ಹಿಂದಿನಕ್ಕಿಂತ ಮುಂದೆ ಮುಂದಿನ ಪದಾರ್ಥಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ನೀಡಿದ ಆದೇಶದ ಬಗ್ಗೆ ಹೆಚ್ಚು ಗಮನಹರಿಸಬೇಕು.

'ವಿನಾ ದೈನ್ಯೇನ ಜೀವನ' ನಡೆಸುವುದಕ್ಕೆ ಮೂಲಾಧಾರವಾದ ಹಣ ಆವಶ್ಯಕ. ಆ 'ಹಣ ಬಂಧುಬಳಗದವರನ್ನು ಪೋಷಿಸಲು ಅನುಕೂಲವಾಗಿರಬೇಕು. ಒಂದು ಬಳಗದವರ ಜೊತೆ ಹಂಚಿಕೊಂಡು ಅನುಭವಿಸಿದರೇನೇ ಅದರ ಪೂರ್ಣ ಮೌಲ್ಯ ದೊರಕತಕ್ಕಂತಹದ್ದು. ಆದ್ದರಿಂದ 'ಹಣಕ್ಕಿಂತ' ಬಂಧುವರ್ಗಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು, 'ಬಂಧುವರ್ಗ'ದ ಸಂಪಾದನೆಗೆ ಸಹಕಾರಿಯಾಗುವಂತೆ ಹಣವನ್ನು ಬಳಸಿಕೊಳ್ಳಬೇಕೇ ಹೊರತು 'ಹಣ' ದುರಾಶೆ ಸ್ವಾರ್ಥಾದಿಗಳನ್ನು ಬೆಳೆಸಿ ಬಂಧುವರ್ಗದಿಂದ ಪ್ರತ್ಯೇಕಿಸುವಂತಹದ್ದಾಗಿರಬಾರದು. ತನ್ನ ಸಾಧನಾನುಷ್ಠಾನಕ್ಕೆ ಮುಖ್ಯ ಕಾರಣವಾಗಿರತಕ್ಕಂತಹದ್ದು ತನ್ನ ಶರೀರ ತಾನೇ? ಬರೇ ಬಂಧುವರ್ಗದ ಪೋಷಣೆಯಲ್ಲೇ ತೊಡಗಿದವ, ತನ್ನ ಶರೀರದ ಕಡೆಗೇನೇ ಹೆಚ್ಚು ಗಮನಹರಿಸದೆ ತನ್ನ ಆಯುಷ್ಯವನ್ನೇ ಕಡಿಮೆ ಮಾಡಿಕೊಂಡು ತನಗಾಗಿ ಏನೂ ಸಾಧನೆಯನ್ನು ಮಾಡಿಕೊಳ್ಳಲಾರದವನಾದನು. ಹಾಗಾಗಬಾರದು. ಬಂಧುವರ್ಗದ ಪೋಷಣೆಗಿಂತಲೂ ತನ್ನ ಆಯುಷ್ಯ ವೃದ್ಧಿಗೆ ಹೆಚ್ಚು ಗಮನಹರಿಸಬೇಕು. ಯೋಗಾಭ್ಯಾಸ, ಪ್ರಾಣಾಯಾಮಾದಿಗಳು ಆಯುಷ್ಯವನ್ನು ವೃದ್ಧಿಸುವ ಕೆಲವು ಸಾಧನಗಳು. ಈ ಎಲ್ಲ ಸಾಧನಗಳಿಂದ ದೇಹವನ್ನು ದಷ್ಟಪುಷ್ಟವಾಗಿ ಬೆಳೆಸಿ ಆಯುಷ್ಯವನ್ನು ಅಭಿವೃದ್ಧಿಪಡಿಸಿಕೊಂಡರೇನು ಬಂತು –ಈ ಆಯುಷ್ಯವನ್ನು ಸಾರ್ಥಕಪಡಿಸಿಕೊಳ್ಳಿಲ್ಲಾಂದರೆ? ಆದ್ದರಿಂದ ಸಾಧನೆಗಳಿಂದ ಹೆಚ್ಚಿಸಿಕೊಂಡ ಆಯುಷ್ಯವನ್ನು ಸಾರ್ಥಕಪಡಿಸಿಕೊಳ್ಳಲು ಸ್ವವಿಹಿತ ಕರ್ತವ್ಯಾನುಷ್ಠಾನ ಅತ್ಯಾವಶ್ಯಕ. ಈ ಕರ್ತವ್ಯಾನುಷ್ಠಾನವೂ ಭಗವತ್ಸೇವಾರೂಪವಾಗಿ ಆಚರಿಸಿದಾಗಲೇ ಫಲಕಾರಿಯಾಗುವುದರಿಂದ (ರುದ್ರದೇವರ ನಿದರ್ಶನ) ಭಗವತ್ಸೇವಾಭಾವನೆಯನ್ನು ಒಲಿಸಿಕೊಳ್ಳುವುದಕ್ಕಾಗಿ ಬ್ರಹ್ಮವಿದ್ಯೆ, ಆಧ್ಯಾತ್ಮಿಕವಿದ್ಯೆ ಆವಶ್ಯಕ. ಹೀಗೆ ಹಿಂದಿನದರ ಸಾರ್ಥಕ್ಯ ಮುಂದಿನದ್ದನ್ನು ಅವಲಂಬಿಸಿರುವುದರಿಂದ

ಒಂದಿನದ್ದಕ್ಕಿಂತ ಮುಂದಿನದ್ದು ಶ್ರೇಷ್ಠವೆನಿಸುತ್ತದೆ. ಈ ರೀತಿಯ ತಾರತಮ್ಯದಲ್ಲಿ ದೊಡ್ಡ ಸ್ಥಾನ ಪಡೆದಿರುವಂತಹದ್ದು ಆಧ್ಯಾತ್ಮಿಕವಿದ್ಯೆ.

ಹೀಗೆ ಶ್ರೀಮದಾಚಾರ್ಯರು ಸೂಚಿಸಿರುವಂತೆ ಧನಾದಿ ಈ ಐದಕ್ಕೂ ಜೀವನದಲ್ಲಿ ಅವಕಾಶ ಇದ್ದೇ ಇರಬೇಕಾದರೂ ಅವುಗಳ ಆವಶ್ಯಕತೆಗೆ ತಕ್ಕಷ್ಟೇ ಸ್ಥಾನಮಾನ ಕೊಟ್ಟು, ಅವುಗಳೆಲ್ಲದಕ್ಕಿಂತ ಮಿಗಿಲಾದ ಸ್ಥಾನವನ್ನು ತತ್ತ್ವಜ್ಞಾನಕ್ಕೆ ಕೊಟ್ಟು ಸಾರ್ಥಕ ಬಾಳು ನಡೆಸಬೇಕೆಂಬುದಾಗಿ ನಾವು ನೀಡಬಯಸುವ ಸಂದೇಶ.

●

೫. ೧೨. ಬೇಜವಾಬ್ದಾರಿತನದ ಪ್ರತಿಕ್ರಿಯೆಯಲ್ಲ

ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಂಚನ

ಮಿಥಿಲೆ ಸುಟ್ಟರೆ ನನ್ನದೇನೂ ಸುಟ್ಟಂತಾಗುವುದಿಲ್ಲ. ಮಿಥಿಲಾನಗರದಲ್ಲಿ ಬೆಂಕಿಯ ಅನಾಹುತ ನಡೆದಿದೆ ಎಂದು ತಿಳಿಸಿದಾಗ ಪ್ರವಚನ-ಶ್ರವಣದಲ್ಲಿ ಮಗ್ನನಾದ ಮಿಥಿಲಾಧಿಪತಿ ಜನಕರಾಜ ಉದ್ಗರಿಸಿದ ಮಾತಿದು, ಅವನ ನಿರ್ಮಮತೆ ವೈರಾಗ್ಯಾದಿಗಳನ್ನು ಎತ್ತಿ ಸಾರುತ್ತಿದೆ.

ಆದರೆ ಒಬ್ಬ ಜವಾಬ್ದಾರಿಯುತ ಅಧಿಕಾರಿ ಇಷ್ಟೊಂದು ನಿರ್ಲಿಪ್ತತೆಯ ಧೋರಣೆಯನ್ನು ತಾಳಬಹುದೇ? ಜನಕಮಹಾರಾಜ ಕ್ಷತ್ರಿಯ. 'ಕ್ಷತ-ತ್ರಾಣ' ಅವನ ಪ್ರಧಾನ ಕರ್ತವ್ಯ. ಬೌದ್ಧಿಕ ಚಟುವಟಿಕೆಗಳಿಗಿಂತಲೂ ಕಾಯಕ ಚಟುವಟಿಕೆಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಬೇಕಾದ ಕರ್ಮಯೋಗ ಅವನ ಪಾಲಿಗೆ ಒದಗಿರುವ ಯೋಗ. ಅರ್ಜುನ ಕ್ಷತ್ರಿಯ ಧರ್ಮವಾದ ಯುದ್ಧದಿಂದ ಹಿಂಜರಿದಾಗ 'ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ' ಎಂಬುದಾಗಿ ಕರ್ಮಯೋಗದಿಂದ ಸಿದ್ಧಿ ಪಡೆಕೊಂಡವರಲ್ಲಿ ಅಗ್ರೇಸರನಾಗಿ ಗೀತಾಚಾರ್ಯನಿಂದ ಉದಾಹರಿಸಲ್ಪಟ್ಟವನು ಜನಕ. ಇಂತಹವನು ಅವನ ಸ್ವಾಮ್ಯಕ್ಕೊಳಗಾಗಿರುವ ಪಟ್ಟಣ ಬೆಂಕಿಗೆ ಆಹುತಿಯಾಗಿದೆ ಎಂದಾಗ ಅದರ ರಕ್ಷಣೆಗೆ ಯತ್ನಿಸುವ ಬದಲು 'ಮಿಥಿಲೆ ಸುಟ್ಟರೆ ನನ್ನದೇನೂ ಸುಟ್ಟಂತಾಗಲಿಲ್ಲ' ಎಂದು ಸುಮ್ಮನಾಗುವುದು ಉಚಿತವೇ? ರಾಜ ಇರಲಿ, ಒಬ್ಬ ಸಾಮಾನ್ಯ ಪ್ರಜೆಯಾದರೂ ಅವನ ಸ್ವಾಮ್ಯಕ್ಕೊಳಗಾದ ಮನೆ ಮೊದಲಾದವು ಯಾವುದಾದರೂ ಅನಾಹುತಕ್ಕೊಳಗಾಯಿತೆಂದರೆ ಅವನು ಅದರ ರಕ್ಷಣೆಗೆ ತೊಡಗದೆ, ಅದಕ್ಕೆ ವೇದಾಂತದ ಮುಖವಾಡವನ್ನು ಹೊದಿಸುವಿಕೆಯನ್ನು ಶಾಸ್ತ್ರ ಸಮ್ಮತಿಸುವುದೇ?

ಸಮಾಧಾನ : ಭಗವಂತನ ಸರ್ವಸ್ವಾಮಿತ್ವ, ಸರ್ವಕರ್ತೃತ್ವ ಪ್ರಜ್ಞೆಯ ಮೂಲಕಗಳಾದ ನಿರ್ಮಮ, ನಿರಹಂಕಾರ ಭಾವನೆಗಳಿಗೆ ಪ್ರಾಶಸ್ತ್ಯ ನೀಡುವ ಶಾಸ್ತ್ರ ಯಾವುದೇ ವ್ಯಕ್ತಿಯ ವೈಯಕ್ತಿಕ ಯತ್ನವನ್ನು ಎಂದೂ ಅಲ್ಲಗಳೆಯುವುದಿಲ್ಲ. ಯತ್ನರಾಹಿತ್ಯವನ್ನು ಶಾಸ್ತ್ರ ಎಂದೂ ಅನುಮೋದಿಸುವುದಿಲ್ಲ; ಸಹಿಸುವುದಿಲ್ಲ. ಪಾಠ, ಪ್ರವಚನ ಶ್ರವಣಾದಿ ಧರ್ಮಗಳು ಶ್ರೇಷ್ಠವಾದವು. ಆದರೆ ಇವುಗಳಿಗಾಗಿ ಕ್ಷತ್ರಿಯ ತನ್ನ ಪ್ರಜಾರಕ್ಷಣೆಯೇ

ಮೊದಲಾದ ಧರ್ಮಗಳಿಂದ ಹಿಂಜರಿಯಬಾರದು –'ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್'.

ಜನಕ ಮಹಾರಾಜ ಈ ಸಂದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದವನು. ತಾನು ಪಾಲಿಸಬೇಕಾದ ಕರ್ಮಯೋಗಕ್ಕೆ ಚ್ಯುತಿ ಬಾರದಂತೆ ಜ್ಞಾನಕಾರ್ಯವನ್ನು ನಡೆಸುತ್ತಿದ್ದನು. ಆದ್ದರಿಂದ ಪಾಠಪ್ರವಚನದಲ್ಲಿ ಭಾಗವಹಿಸುತ್ತಿದ್ದ ಎಂದಮಾತ್ರಕ್ಕೆ ತನ್ನ ಕ್ಷತ್ರಿಯಧರ್ಮಗಳನ್ನು ಪಾಲಿಸುತ್ತಿದ್ದಿಲ್ಲ ಎಂದು ಭಾವಿಸಬಾರದು. ರಾಜನಾದವನ ಕರ್ತವ್ಯಗಳನ್ನು ಚೆನ್ನಾಗಿ ಅರಿತಿದ್ದ ಅವನು ಪಟ್ಟಣದಲ್ಲಿ ಆಕಸ್ಮಿಕವಾಗಿ ಬೆಂಕಿಯ ಅಪಘಾತ ನಡೆಯಿತೆಂದರೆ ಅದರ ಉಪಶಮನಕ್ಕೆಂದು ಅಗ್ನಿಶಾಮಕದಳಗಳನ್ನು ನಿಯೋಜಿಸಿ ಸಾಕಷ್ಟು ಏರ್ಪಾಟನ್ನು ಆಗಾಗಲೇ ಮಾಡಿದ್ದ. ಬೆಂಕಿಯ ಅನಾಹುತ ದಿಂದಾಗಿ ರಾಜ್ಯಕ್ಕೆ, ಪ್ರಜೆಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ವ್ಯವಸ್ಥೆ ಯನ್ನು ಮಾಡಿದ್ದ.

ಆದರೆ ಇಷ್ಟೆಲ್ಲ ಯತ್ನಗಳು ನಡೆದೂ ಅಗ್ನಿಯು ಉಪಶಮನಗೊಳ್ಳಲಿಲ್ಲ ವೆಂದಾಗ, ಅದಕ್ಕಾಗಿ ಕಂಗೆಡದೆ ದೈವಸಂಕಲ್ಪವೇ ಹೀಗಿದ್ದರೆ ಇದಕ್ಕೆ ವಿರುದ್ಧವಾಗಿ ತಾನೇನು ಮಾಡಲು ಸಾಧ್ಯ? ಎಂಬುದಾಗಿ ಭಾವಿಸುತ್ತ ತನ್ನ ಸ್ವಾಮಿತ್ವಾಭಿಮಾನ ವನ್ನೆಲ್ಲ ತೊರೆದು 'ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಂಚನ' ಎಂದು ಉಸಿರಿದುದು. ಅದರಿಂದ ಇದು ಬೇಜವಾಬ್ದಾರಿತನದ ಪ್ರತಿಕ್ರಿಯೆಯಲ್ಲ. ತನ್ನ ಪಾಲಿನ ಕರ್ತವ್ಯವನ್ನೆಲ್ಲ ನಿರ್ವಹಿಸಿಯೂ ಅದರಿಂದ ಫಲ ದೊರಕದಿದ್ದಾಗ, ಫಲ ದೊರಕುವುದಕ್ಕೆ ತನ್ನ ಯತ್ನವೊಂದೇ ಸಾಲದು; ಭಗವಂತನ ಇಚ್ಛೆಯೂ ಇರಬೇಕು –ಎಂಬ ವಿವೇಕಪೂರ್ವಕವಾದ ಪ್ರತಿಕ್ರಿಯೆ. ಸಂಸಾರದಲ್ಲಿ 'ಇರಬೇಕು; ಇರದಿರಬೇಕು' ಎಂಬಂತೆ ಸಾಗಲು ಅಳವಡಿಸಿಕೊಂಡಿರುವ ಆದರ್ಶದ ಪ್ರತಿಫಲನ.

●

ವಿದ್ಯಾಭಂಡಾರ

ನಿಧಿ – ೬

ಅರ್ಥವಿವರಣೆ



"ಶ್ರೀಮದಾಚಾರ್ಯರು ಸದಾಚಾರಸ್ಮೃತಿಯಲ್ಲಿ 'ಸ್ಮೃತ್ವಾ ಹರಿಂ ಸಮುತ್ಥಾಯ....' ಎಂದು ತಿಳಿಸಿರುವಂತೆ ನಿದ್ದೆಯಿಂದ ಎಚ್ಚೆತ್ತಾಕ್ಷಣ ಮಲಗಿಕೊಂಡೇ ಶ್ರೀಹರಿಯನ್ನು ಸ್ಮರಿಸುತ್ತ ಬಳಿಕ ಏಳಬೇಕು. ಹೀಗೆ ಭಕ್ತನಾದವನು ಮಲಗಿಕೊಂಡೇ ಸ್ಮರಿಸಿದರೂ ಭಕ್ತವತ್ಸಲನಾದ ಭಗವಂತನು ಭಕ್ತನ ಆ ಸ್ಮರಣಪೂರ್ವಕವಾದ ಸ್ತುತಿಯನ್ನು ಕುಳಿತುಕೊಂಡು ಕೇಳುವನು. ಇದನ್ನೇ 'ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ.....' ಎಂಬ ಮಾತಿನಲ್ಲಿ ಹೇಳಲಾಗಿದೆ."

೬. ೧. ಮಲಗಿ ಪರಮಾದರದಿ ಪಾಡಲು....

ಶ್ರೀ ಜಗನ್ನಾಥದಾಸರ 'ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ....' ಎಂಬ ಪ್ರಸಿದ್ಧವಾದ ಪದ್ಯ ಭೀಷ್ಮ, ಶುಕ, ನಾರದ –ಮುಂತಾದ ಭಕ್ತರ ಸಾಧನೆಗೆ ಮಿಗಿಲಾಗಿ ಸ್ಪಂದಿಸುವ ಭಗವಂತನ ಭಕ್ತವಾತ್ಸಲ್ಯವನ್ನು ಸೂಚಿಸುತ್ತದೆ. ಇಷ್ಟೇ ಅಲ್ಲದೆ, ಈ ಪದ್ಯದಲ್ಲಿ ಭಗವಂತನು ಪ್ರತಿಯೊಬ್ಬ ಭಕ್ತನ ವಿಷಯದಲ್ಲಿಯೂ ವಾತ್ಸಲ್ಯಾತಿಶಯವನ್ನು ತೋರಿಸುತ್ತಿರುವುದನ್ನೂ ಅನುಸಂಧಾನಮಾಡಬಹುದಾಗಿದೆ.

ಶ್ರೀಮದಾಚಾರ್ಯರು ಸದಾಚಾರಸ್ಮೃತಿಯಲ್ಲಿ (2) ತಿಳಿಸಿರುವಂತೆ 'ಸ್ಮೃತ್ವಾ ಹರಿಂ ಸಮುತ್ಥಾಯ....' ನಿದ್ದೆಯಿಂದ ಎಚ್ಚೆತ್ತಾಕ್ಷಣ ಮಲಗಿಕೊಂಡೇ ಶ್ರೀಹರಿಯನ್ನು ಸ್ಮರಿಸುತ್ತ ಬಳಿಕ ಏಳಬೇಕು. ಹೀಗೆ ಭಕ್ತನಾದವನು ಮಲಗಿಕೊಂಡೇ ಸ್ಮರಿಸಿದರೂ ಭಕ್ತವತ್ಸಲನಾದ ಭಗವಂತನು ಭಕ್ತನ ಆ ಸ್ಮರಣಪೂರ್ವಕವಾದ ಸ್ತುತಿಯನ್ನು ಕುಳಿತುಕೊಂಡು ಕೇಳುವನು. ಇದನ್ನೇ 'ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ' ಎಂಬ ಭಾಗದಲ್ಲಿ ಹೇಳಲಾಗಿದೆ.

ಶ್ರೀಹರಿಯನ್ನು ಸ್ಮರಿಸಿಕೊಂಡೇ ಏಳಬೇಕಲ್ಲದೆ, ಎದ್ದು ಕುಳಿತುಕೊಂಡ ಮೇಲೂ ಬೇರೆ ಬೇರೆ ಸ್ತೋತ್ರಗಳನ್ನು ಪಠಿಸಿ ಅವನನ್ನು ಸ್ತುತಿಸಬೇಕು. ಹೀಗೆ ಭಕ್ತನಾದವನು ಪರಮಾದರದಿ ಬೆಳಿಗ್ಗೆ ಎದ್ದಾಕ್ಷಣ ಕುಳಿತು ಪಾಡಲು ಭಕ್ತವತ್ಸಲನಾದ ಭಗವಂತನು ನಿಂತು ಆ ಸ್ತುತಿಯನ್ನು ಕೇಳುವನು. ಇದನ್ನೇ 'ಕುಳಿತು ಪಾಡಲು ನಿಲುವ....' ಎಂದು ಉಲ್ಲೇಖಿಸಲಾಗಿದೆ.

'....ಆಸೂರ್ಯದರ್ಶನಾತ್ ತಿಷ್ಠೇತ್....' ಎಂದು ತಿಳಿಸಿರುವಂತೆ ಸೂರ್ಯದರ್ಶನದ ವರೆಗೆ ಗಾಯತ್ರೀಮಂತ್ರದಿಂದ ನಿಂತುಕೊಂಡು ಅವನನ್ನು ಸ್ತುತಿಸಲು ಸೂರ್ಯನಾರಾಯಣನು ನಲಿಯುತ್ತ ಭಕ್ತರ ಸ್ತುತಿಗೆ ಸ್ಪಂದಿಸುವನು. ಇದನ್ನೇ 'ನಿಂತರೆ ನಲಿವ....' ಎಂದು ತಿಳಿಸಲಾಗಿದೆ.

ಭಕ್ತನಾದವನು ತನ್ನ ರಕ್ಷಣೆಯೇ ಮುಂತಾದ ಉದ್ದೇಶಗಳಿಗಾಗಿ ಬೇರೆ ಬೇರೆ ಚಟುವಟಿಕೆಗಳಲ್ಲಿ ತೊಡಗುವುದೇ ಒಂದು ಬಗೆಯ ನಲಿಯುವಿಕೆ. ಇಂತಹ ನಲಿಯುವಿಕೆಯನ್ನು ನಡೆಸುವಾಗಲೂ 'ಕ್ರಿಯಾಸು ಯಸ್ತ್ವಚ್ಚರಣಾರವಿಂದಯೋರಾವಿಷ್ಟಚಿತ್ತೋ ನ ಭವಾಯ ಕಲ್ಪತೇ' –ಎಂದು ಭಾಗವತದ ಗರ್ಭಸ್ತುತಿಯಲ್ಲಿ ಸ್ತುತಿಸಿರುವಂತೆ ಭಗವಂತನ ಆರಾಧನೆ ಎಂದು ಭಾವಿಸಿ, ಅವನನ್ನು ಸ್ತುತಿಸುತ್ತ ಇದ್ದರೆ '.... ನಲಿದರೆ ಒಲಿವೆ ನಿಮಗೆಂಬ'. ಹೀಗೆ ಈ ಪದ್ಯದಲ್ಲಿ ತೋರಿಸಲಾದ ನಾಲ್ಕು ಮಜಲುಗಳನ್ನು

ನಮ್ಮ ನಮ್ಮ ದೈನಂದಿನ ಬದುಕಿಗೆ ಸಂಬಂಧಿಸಿದಂತೆಯೂ ಅನುಸಂಧಾನ ಮಾಡಬಹುದಾಗಿದೆ.

●

೬. ೨. ಅಪರೋಕ್ಷೇ ಗುರುಃ ಸ್ತುತ್ಯಃ

ಅಪರೋಕ್ಷೇ ಗುರುಃ ಸ್ತುತ್ಯಃ ಪರೋಕ್ಷೇ ಮಿತ್ರಬಾಂಧವಾಃ ।
ಕಾರ್ಯಾಂತೇ ದಾಸಭೃತ್ಯಾಶ್ಚ ಪುತ್ರಾನ್ ನೈವ ಚ ನೈವ ಚ ॥

ಗುರುಗಳ ಎದುರುಗಡೆಯೇ ಅವರನ್ನು ಸ್ತುತಿಸಬೇಕು. ಮಿತ್ರರನ್ನು, ಬಂಧುಗಳನ್ನು ಪರೋಕ್ಷದಲ್ಲಷ್ಟೇ ಸ್ತುತಿಸಬೇಕು. ಕೆಲಸ ನೆರವೇರಿದ ಬಳಿಕ ಆ ಕೆಲಸವನ್ನು ನಡೆಸಿದ ದಾಸರನ್ನಾಗಲಿ ಸೇವಕರನ್ನಾಗಲಿ ಸ್ತುತಿಸಬೇಕು. ಮಕ್ಕಳನ್ನಂತೂ ಎಂದೂ ಎಲ್ಲೂ ಖಂಡಿತಾ ಸ್ತುತಿಸಬಾರದು.

ಮೇಲಿನ ಮಾತಿನಲ್ಲಿ ಮಿತ್ರಬಂಧುಗಳನ್ನೆಲ್ಲ ಪ್ರತ್ಯಕ್ಷವಾಗಿ ಸ್ತುತಿಸಬಾರದೆಂದು ತಿಳಿಸಿ, ಗುರುಗಳನ್ನು ಮಾತ್ರ ಪ್ರತ್ಯಕ್ಷವಾಗಿ ಸ್ತುತಿಸಲು ಹೇಳಲಾಗಿದೆ. ಏಕೆ ಹೀಗೆ? ಗುರುಗಳನ್ನು ಪ್ರತ್ಯಕ್ಷವಾಗಿಯೂ ಸ್ತುತಿಸಬಹುದೆಂದು ಅನುಮತಿಯನ್ನು ಯಾಕೆ ನೀಡಲಾಗಿದೆ? ಪರಿಶೀಲಿಸಿದಾಗ ಹೀಗೊಂದು ಕಾರಣ ತೋರಿಬರುವುದು. ಗುರುಗಳೆನಿಸುವವರು ಜ್ಞಾನಿಗಳಾಗಿರುತ್ತಾರೆ. ತನ್ನಿಂದ ಯಾವುದೇ ಸಾಧನೆ ನಡೆದರೂ, ಅದರಲ್ಲಿ ಭಗವಂತನ ಹಾಗೂ ಅವನ ಪರಿವಾರದವರಾದ ತತ್ತ್ವಾಭಿಮಾನಿದೇವತೆಗಳ ಪಾತ್ರ ತುಂಬ ದೊಡ್ಡದು. ತಾನು ಬರೇ 'ನಿಮಿತ್ತಮಾತ್ರ' ಎಂಬುದನ್ನು ಚೆನ್ನಾಗಿ ವಿಶ್ಲೇಷಿಸಿಕೊಂಡು ಯಾರು ಎಷ್ಟೇ ಹೊಗಳಿದರೂ ಅದಕ್ಕಾಗಿ ಅಹಂಕಾರ ಪಡುವುದಿಲ್ಲ.

ಈ ದೃಷ್ಟಿಯಿಂದ ಜ್ಞಾನಿಗಳಾಗಿದ್ದು 'ಗುರು'ಗಳೆನಿಸಿರುವವರನ್ನು ಅವರ ಎದುರೇ ಸ್ತುತಿಸಬೇಕು 'ಅಪರೋಕ್ಷೇ ಗುರುಃ ಸ್ತುತ್ಯಃ' ಎಂದು ಬಂದಿರುವುದು.

ಈ ಮಾತಿನ ಆಂತರ್ಯವನ್ನು ಚೆನ್ನಾಗಿ ಅರಿತಿರುವ ನಾವೂ ಇದುವರೆಗೆ ನಮ್ಮ ಬಗ್ಗೆ ಹೇಳಲಾದ ಪ್ರಶಂಸೆಯ ಮಾತುಗಳೆಲ್ಲ ನಮ್ಮಿಂದ ಸಾಧನೆಗಳನ್ನು ನಡೆಸಿರುವ ಹರಿಗುರುಗಳಲ್ಲಿ ಮುಖ್ಯವಾಗಿ ಅನ್ವಯಿಸುವವುಗಳೆಂದು ಭಾವಿಸಿದ್ದೇವೆ.

●

೬. ೩. ಕೋಟಿಂ ಹಿತ್ವಾ ಹರಿಂ ಸ್ಮರೇತ್

ಶತಂ ವಿಹಾಯ ಭೋಕ್ತವ್ಯಂ ಸಹಸ್ರಂ ಜ್ಞಾನಮಾಚರೇತ್ ।
ಲಕ್ಷಂ ಪರೋಪಕಾರಾಯ ಕೋಟಿಂ ಹಿತ್ವಾ ಹರಿಂ ಸ್ಮರೇತ್ ॥

ನೂರು ಕೆಲಸಗಳಿದ್ದರೂ ಅವನ್ನೆಲ್ಲ ಬದಿಗೊತ್ತಿ ಭೋಜನವನ್ನು ಸ್ವೀಕರಿಸಬೇಕು. ಸಾವಿರ ಕೆಲಸಗಳಿದ್ದರೂ ಅವನ್ನೆಲ್ಲ ದೂರಮಾಡಿ ಧ್ಯಾನ ನಡೆಸಬೇಕು. ಲಕ್ಷ ಕೆಲಸಗಳಿದ್ದರೂ ಅವನ್ನೆಲ್ಲ ಬದಿಗೊತ್ತಿ ಪರೋಪಕಾರ ಮಾಡಬೇಕು. ಕೋಟಿ ಕೆಲಸಗಳಿದ್ದರೂ ಅವನ್ನೆಲ್ಲ ಬಿಟ್ಟು ಶ್ರೀಹರಿಯನ್ನು ಸ್ಮರಿಸಬೇಕು.

ಶತಂ ವಿಹಾಯ ಭೋಕ್ತವ್ಯಂ:

ಶರೀರ ಸುದೃಢವಾಗಿದ್ದರಷ್ಟೇ ಅಂತಹ ಶರೀರದ ಮಾಧ್ಯಮದಲ್ಲಿ ಜೀವನದ ಸಾಧನೆಗಳನ್ನು ನಡೆಸಲಾಗುವುದು. ಸರಿಯಾಗಿ ಭೋಜನವನ್ನು ಒದಗಿಸಿದರಷ್ಟೇ ಶರೀರ ಸುದೃಢವಾಗಿರಬಲ್ಲುದು. ಅದಕ್ಕಾಗಿಯೇ ನೂರು ಇತರ ಕೆಲಸಗಳಿಗಿಂತಲೂ ಭೋಜನಕ್ಕೆ ಆದ್ಯತೆ ನೀಡಬೇಕೆಂದು ತಿಳಿಸಿರುವಂತಹದ್ದು. ಯಾವ ಭೋಜನ ಇಲ್ಲದಿದ್ದರೆ ಯಾವ ನೂರು ಕೆಲಸಗಳನ್ನು ನಿರ್ವಹಿಸಲು ಸಾಧ್ಯವಿಲ್ಲವೋ ಅಂತಹ ಕೆಲಸಗಳ ನಿರ್ವಹಣೆಗಾಗಿಯೇ ಆ ಎಲ್ಲ ಕೆಲಸಗಳ ನಿರ್ವಹಣೆಗಿಂತ ಮೊದಲು ಭೋಜನವನ್ನು ನಡೆಸಬೇಕೆಂಬುದು ತಾತ್ಪರ್ಯ.

ಸಹಸ್ರಂ ಧ್ಯಾನಮಾಚರೇತ್:

ಧ್ಯಾನ ಉಳಿದ ಸಾವಿರ ಕೆಲಸಗಳಿಗಿಂತಲೂ ಪ್ರಶಸ್ತವಾದುದರಿಂದ ಅಂತಹ ಸಾವಿರ ಕೆಲಸಗಳನ್ನೂ ಬಿಟ್ಟು ಧ್ಯಾನವನ್ನು ನಡೆಸಬೇಕು. ಮುಂದೆ ಲಕ್ಷಕಾರ್ಯಗಳನ್ನು ಬಿಟ್ಟಾದರೂ ಪರೋಪಕಾರವನ್ನು ನಡೆಸಬೇಕೆಂದು ಹೇಳಿರುವುದರಿಂದ ಸಾವಿರ ಕೆಲಸಗಳನ್ನು ಬದಿಗೊತ್ತಿ ನಡೆಸಬೇಕೆಂದು ಹೇಳಿರುವ ಧ್ಯಾನ ಪರೋಪಕಾರಕ್ಕಿಂತ ಕಡಿಮೆಯದ್ದು ಎಂದಂತಾಯಿತು. ಭಗವಂತನ ಚಿಂತನಾರೂಪದ ಧ್ಯಾನವಾದರೂ ಪರೋಪಕಾರಕ್ಕಿಂತಲೂ ಎತ್ತರ ಸಾಧನೆಯಾಗಿರುವುದರಿಂದ ಪರೋಪಕಾರಕ್ಕಿಂತ ಹತ್ತುಪಟ್ಟು ಕೆಳಮಟ್ಟದ ಸಾಧನೆಯಾಗಿ ಉಲ್ಲೇಖಿಸಲ್ಪಟ್ಟ ಧ್ಯಾನ ಎಂದರೆ ತನ್ನ ದೋಷದೌರ್ಬಲ್ಯಗಳ ಚಿಂತನೆ. ಇಂತಹ ಚಿಂತನೆಯಿಂದ ತನ್ನ ಇತಿಮಿತಿಗಳನ್ನು ಮನವರಿಕೆ ಮಾಡಿಕೊಳ್ಳಲು ಅನುಕೂಲವಾಗುವುದು. ಅಹಂಕಾರ ತೊಲಗಿ ಪುನೀತನಾಗಿ ಕಾರ್ಯಗಳನ್ನು ಸಾಧನೆಗಳನ್ನು ನಡೆಸುವಂತಾಗುವುದು. ಅದರಿಂದಾಗಿ ಆ ಕಾರ್ಯಗಳ ಸಾಧನೆ ಸಾರ್ಥಕವಾಗುವುದು. ಅದಕ್ಕಾಗಿಯೇ 'ಸಹಸ್ರಂ ಧ್ಯಾನಮಾಚರೇತ್' ಎಂದು ಬಂದಿರುವುದು.

ಲಕ್ಷಂ ಪರೋಪಕಾರಾಯ:

'ವಿಷ್ಣೋಃ ಗೃಹತ್ವಾದ್ಭೂತಾನಾಂ ದಯಾ ಕಾರ್ಯಾ ವಿಜಾನತಾ' ಎಂದಿರುವಂತೆ ಎಲ್ಲ ವ್ಯಕ್ತಿಗಳಲ್ಲಿ ಭಗವಂತನು ಪ್ರೇರಕನಾಗಿ ನೆಲೆಸಿರುವನು ಎಂಬ ಅನುಸಂಧಾನದೊಂದಿಗೆ ನಡೆಸುವ ಪರೋಪಕಾರ ಭಗವದಾರಾಧನೆಯಲ್ಲಿ ಪರ್ಯವಸಾನಗೊಳ್ಳುವುದು. ಅದಕ್ಕಾಗಿಯೇ ಲಕ್ಷ ಕಾರ್ಯಗಳನ್ನಾದರೂ ತ್ಯಜಿಸಿ ಈ ಅನುಸಂಧಾನಪೂರ್ವಕವಾಗಿ ಪರೋಪಕಾರವನ್ನು ನಡೆಸಬೇಕು ಎಂದಿರುವುದು.

ಕೋಟಿಂ ಹಿತ್ವಾ ಹರಿಂ ಸ್ಮರೇತ್:

ಬದುಕಿನ ಸಾಧನೆಗಳಲ್ಲಿ ಹರಿಸ್ಮರಣೆಗೆ ಅತ್ಯಂತ ಮಹತ್ವವಿದೆ. ಯಾಕೆಂದರೆ –

ಸ್ಮರ್ತವ್ಯಃ ಸತತಂ ವಿಷ್ಣುಃ ವಿಸ್ಮರ್ತವ್ಯೋ ನ ಜಾತುಚಿತ್ ।
ಸರ್ವೇ ವಿಧಿನಿಷೇಧಾಃ ಸ್ಯುರೇತಯೋರೇವ ಕಿಂಕರಾಃ ॥

ಎಂದಿರುವಂತೆ ಉಳಿದೆಲ್ಲ ಶಾಸ್ತ್ರೀಯ ವಿಧಿಗಳು ಶ್ರೀವಿಷ್ಣುಸ್ಮರಣೆಗೇ ಪೋಷಕಗಳಾಗಿದ್ದು, ಅಂತಹ ವಿಷ್ಣುಸ್ಮರಣೆಗೆ ಕಿಂಕರಗಳಂತೆ ಇರುವವು. ಆದ್ದರಿಂದಲೇ ಇತರ ಕೋಟಿಕಾರ್ಯಗಳಿದ್ದರೂ ಅವನ್ನೆಲ್ಲ ಬದಿಗೊತ್ತಿ ಶ್ರೀಹರಿಯ ಸ್ಮರಣೆ ನಡೆಸಬೇಕು 'ಕೋಟಿಂ ಹಿತ್ವಾ ಹರಿಂ ಸ್ಮರೇತ್' ಎಂದು ವಿಧಿಸಲಾಗಿದೆ.

ಹೀಗೆ ಜೀವನದಲ್ಲಿ ಯಾವ ಯಾವ ಚಟುವಟಿಕೆಗೆ ಎಷ್ಟೆಷ್ಟು ಮಹತ್ವಸಲ್ಲಬೇಕೆಂಬುದನ್ನು ಈ ಪದ್ಯ ಚೆನ್ನಾಗಿ ನಿರೂಪಿಸುತ್ತಿದೆ.

●

೬. ೪. ಸುರೇಶಕಾಂಕ್ಷಾ

ಶಾಪಗ್ರಸ್ತಳಾಗಿ ಶಿಲೆಯಂತಿದ್ದ ಅಹಲ್ಯೆಯನ್ನು ನಾರೀರೂಪ ಹೊಂದುವಂತೆ ಶ್ರೀರಾಮ ಅನುಗ್ರಹಿಸಿದುದರ ಉದ್ದೇಶಗಳಲ್ಲಿ ಒಂದು– 'ಸುರೇಶಕಾಂಕ್ಷಾ' ಎಂದು ಶ್ರೀಮದಾಚಾರ್ಯರು ತಿಳಿಸಿರುವರು (ಮ. ಭಾ. ತಾ. ನಿ. ೯–೪–೧೧)

ಶ್ರೀ ವಾದಿರಾಜಸ್ವಾಮಿಗಳು ತಮ್ಮ ಭಾವಪ್ರಕಾಶಿಕಾದಲ್ಲಿ ಇದರ ಆಶಯವನ್ನು ಹೀಗೆ ವಿವರಿಸಿರುವರು –ದೇವೇಂದ್ರನ ಪಾಪ ಹಾಗೂ ಅಯಶಸ್ಸು ಇವುಗಳ ಪರಿಹಾರದ ಅಪೇಕ್ಷೆಯಿಂದ ಶ್ರೀರಾಮಚಂದ್ರ ಅಹಲ್ಯೆಯನ್ನು ಉದ್ಧಾರಮಾಡಿದ.

ಸುರೇಶಪಾಪಾಯಶಃಪರಿಹಾರಕಾಂಕ್ಷಯಾ ಇತ್ಯರ್ಥಃ

ಅಪರೋಕ್ಷಜ್ಞಾನಿಯಾದ ದೇವೇಂದ್ರನಿಗೆ ಪಾಪವಾದರೂ ಹೇಗೆ ಬಂದೀತು? ಎಂಬುದನ್ನೂ ಪರಿಶೀಲಿಸಿದ ವಾದಿರಾಜತೀರ್ಥರು 'ನಿರ್ನಿಮಿತ್ತವಾಗಿ ಅಹಲ್ಯೆ ಶಿಲೆಯಾಗುವುದಕ್ಕೆ ಪ್ರಯೋಜಕನಾದ ಪ್ರಯುಕ್ತ ದೇವೇಂದ್ರನಿಗೆ 'ವೈಷ್ಣವದ್ವೇಷ ಪ್ರಯುಕ್ತ ಪಾಪದ ಲೇಪ ಇದ್ದೇ ಇದೆ' ಎಂದು ಸಮರ್ಥಿಸಿರುವರು.

ಆದರೆ ಶ್ರೀಮದಾಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ (೨–೨೪) 'ತಸ್ಯ ಲೋಮಾಪಿ ನ ಮೀಯತೇ' ಎಂಬ ಶ್ರುತಿಯನ್ನು ಉದಾಹರಿಸಿ ಅಹಲ್ಯಾಗಮನ ಪ್ರಯುಕ್ತ ದೇವೇಂದ್ರನಿಗೆ ಏನೂ ದೋಷ ಬಂದಿಲ್ಲ ಎಂದು ಸಿದ್ಧಾಂತಿಸಿರುವರು. ವಾದಿರಾಜತೀರ್ಥರು ಭಾವಪ್ರಕಾಶಿಕಾದಲ್ಲಿ ಹೇಳಿದಂತೆ ವೈಷ್ಣವದ್ವೇಷಪ್ರಯುಕ್ತ ದೇವೇಂದ್ರನಿಗೆ ಪಾಪ ಬಂದಿದ್ದರೆ ಆಚಾರ್ಯರ 'ತಸ್ಯ ಲೋಮಾಪಿ ನ ಮೀಯತೇ' ಎಂಬ ಶ್ರುತಿಪೂರ್ವಕವಾದ ಸಂದೇಶ ವಿರುದ್ಧವೆನಿಸುವುದಿಲ್ಲವೇ?

ನಮಗೆ ಈ ವಿರೋಧವನ್ನು ಹೀಗೆ ಪರಿಹರಿಸಬಹುದೆನಿಸುತ್ತದೆ– ಆಚಾರ್ಯರು ಸಿದ್ಧಾಂತಿಸಿರುವಂತೆ ದೇವೇಂದ್ರನಿಗೆ ಅಹಲ್ಯಾಗಮನಪ್ರಯುಕ್ತ ಪಾಪದ ಲೇಪ ಇಲ್ಲವೇ ಇಲ್ಲ. ಆದರೆ ಸಾಮಾನ್ಯರ ದೃಷ್ಟಿಯಲ್ಲಿ ದೇವೇಂದ್ರ ಈ ರೀತಿಯಾಗಿ ನಡೆದುಕೊಂಡದ್ದರಿಂದ ಅವನಲ್ಲಿ ಪಾಪದ ಆರೋಪಕ್ಕೆ ಅವಕಾಶವಿದೆ. ಅಪರೋಕ್ಷ ಜ್ಞಾನಿಗೆ ಪಾಪದ ಲೇಪ ಇಲ್ಲ ಎಂದು ತಿಳಿದಿದ್ದರೂ 'ವೈಷ್ಣವದ್ವೇಷ' ದೊಡ್ಡ ಅಪರಾಧವಾಗಿರುವುದರಿಂದ, ಅಂತಹ 'ವೈಷ್ಣವದ್ವೇಷ'ಪ್ರಯುಕ್ತ ದೇವೇಂದ್ರ ನಲ್ಲಿ ಪಾಪದ ಆರೋಪವನ್ನು ಮಾಡುವ ಅವಕಾಶ ಇದೆ. ಇದರ ಪರಿಹಾರಕ್ಕಾಗಿ ಶ್ರೀರಾಮಚಂದ್ರ ಅಹಲ್ಯೆಗೆ ನೈಜರೂಪ ಕೊಟ್ಟ ಎಂಬುದಾಗಿ. ಆದುದರಿಂದ 'ಭಾವ ಪ್ರಕಾಶಿಕಾ'ದ ಪಾಪಪರಿಹಾರ ಎಂಬುದಕ್ಕೆ 'ಪಾಪಾರೋಪಪರಿಹಾರ' ಎಂಬ ಅಭಿಪ್ರಾಯವನ್ನಿಟ್ಟುಕೊಳ್ಳಬೇಕು.

●

೭. ೫. ಅವ್ಯಕ್ತಶಬ್ದದ ಸಮನ್ವಯ

'ತತ್ತು ಸಮನ್ವಯಾತ್' –ಎಂಬ ಬ್ರಹ್ಮಸೂತ್ರದಲ್ಲಿ ವೇದದ ಸಕಲ ಶಬ್ದಗಳೂ ಭಗವಂತನನ್ನು ಪ್ರತಿಪಾದಿಸುತ್ತಿವೆ ಎಂದು ಸಿದ್ಧಾಂತಿಸಲಾಗಿದೆ.

ಆದರೆ '......ಅವ್ಯಕ್ತಾತ್ ಪುರುಷಃ ಪರಃ' ಎಂಬ ಕಾಠಕೋಪನಿಷತ್ತಿನ ಅವ್ಯಕ್ತ ಶಬ್ದದಿಂದ ಪ್ರಕೃತಿ ವಾಚ್ಯಳಾಗಬೇಕೇ ಹೊರತು ಭಗವಂತನು ವಾಚ್ಯನಾಗಲಾರ. ಏಕೆಂದರೆ ಅಲ್ಲಿ 'ಅವ್ಯಕ್ತಾತ್' ಎಂಬುದಾಗಿ ಪಂಚಮೀ ವಿಭಕ್ತಿಯಿಂದ ಅವ್ಯಕ್ತ ಶಬ್ದವಾಚ್ಯವಾದುದಕ್ಕೆ ಪುರುಷಶಬ್ದವಾಚ್ಯನ ದೆಸೆಯಿಂದ ಅವರತ್ವವನ್ನು ಅಂದರೆ ಅಪಕರ್ಷಾವಧಿತ್ವವನ್ನು ಹೇಳಲಾಗುವುದು. ಒಂದುವೇಳೆ ಅವ್ಯಕ್ತಶಬ್ದದಿಂದ ಭಗವಂತನು ವಾಚ್ಯನಾಗುವುದಾದರೆ ಅವನಿಗೆ ಪುರುಷಶಬ್ದವಾಚ್ಯನಾದ ತನ್ನಿಂದ ಅವರತ್ವವನ್ನು ಹೇಳಬೇಕಾದೀತು! ಅದು ಕೂಡುವುದಿಲ್ಲ ತಾನೇ? ಆದ್ದರಿಂದ ಅಲ್ಲಿ ಅವ್ಯಕ್ತಶಬ್ದದಿಂದ ಪ್ರಕೃತಿಯನ್ನೇ ಇಟ್ಟುಕೊಂಡು, ಆಕೆಗೆ ಪುರುಷಶಬ್ದವಾಚ್ಯನ ದೆಸೆಯಿಂದ ಅವರತ್ವವನ್ನೇ ಹೇಳಬೇಕು. ಹೀಗಿರುವಾಗ ಅಲ್ಲಿಯ ಅವ್ಯಕ್ತಶಬ್ದವಾಚ್ಯತ್ವ ಭಗವಂತನಿಗೆ ಕೂಡುವುದಿಲ್ಲ ತಾನೇ?

ಹೀಗೆ ಬರಬಹುದಾದ ಸಂದೇಹವನ್ನು 'ಆನುಮಾನಿಕಮಪ್ಯೇಕೇಷಾಂ....' ಎಂಬ ಬ್ರಹ್ಮಸೂತ್ರದಲ್ಲಿ (1-4-1) 'ಶರೀರರೂಪಕವಿನ್ಯಸ್ತಗೃಹೀತೇಃ...' –ಭಗವಂತನ ಶರೀರ ದಂತಿರುವ ಪ್ರಕೃತಿಯಲ್ಲಿರುವ ಅವ್ಯಕ್ತಶಬ್ದವಾಚ್ಯನಾದ ಭಗವಂತನನ್ನು ಕಾಠಕೋಪ ನಿಷತ್ತಿನ ಅವ್ಯಕ್ತಶಬ್ದದಿಂದ ಸ್ವೀಕರಿಸಬೇಕೆಂದು ಸಿದ್ಧಾಂತಿಸುವುದರ ಮೂಲಕ ಪರಿಹರಿಸಲಾಗಿದೆ.

'ಅವ್ಯಕ್ತಾತ್ ಪುರುಷಃ ಪರಃ' -ಎಂಬಲ್ಲಿಯ ಅವ್ಯಕ್ತ ಶಬ್ದದಿಂದ ಮುಖ್ಯವಾಗಿ ಪ್ರಕೃತಿಯಲ್ಲಿರುವ ಭಗವಂತನನ್ನೂ ಅಮುಖ್ಯವಾಗಿ ಆ ಭಗವದ್ರೂಪಕ್ಕೆ ಪ್ರತೀಕಳಾದ ಪ್ರಕೃತಿಯನ್ನೂ ಇಟ್ಟುಕೊಳ್ಳಬೇಕು.

ಆಗ 'ಅವ್ಯಕ್ತಾತ್ ಪುರುಷಃ ಪರಃ' -ಎಂಬ ವಾಕ್ಯದ ಒಟ್ಟು ಅರ್ಥ ಹೀಗೆ ಫಲಿಸುವುದು -ಅವ್ಯಕ್ತ ಶಬ್ದಕ್ಕೆ ಪ್ರಕೃತಿ ಎಂದೂ ಪ್ರಕೃತಿಯಲ್ಲಿರುವ ಭಗವದ್ರೂಪವೆಂದೂ ಅರ್ಥ. ಪಂಚಮೀ ವಿಭಕ್ತಿಗೆ ಅಪಕರ್ಷಾವಧಿತ್ವರೂಪವಾದ ಅವರತ್ವ ಎಂದರ್ಥ. ಅಂತಹ ಅವರತ್ವದಲ್ಲಿ ಗೌಣವಾಗಿ ಅವ್ಯಕ್ತ ಶಬ್ದವಾಚ್ಯಳಾದ ಪ್ರಕೃತಿಗೆ ಸ್ವರೂಪಸಂಬಂಧದಿಂದಲೂ ಮುಖ್ಯವಾಗಿ ಅವ್ಯಕ್ತ ಶಬ್ದವಾಚ್ಯನಾದ ಭಗವಂತನಿಗೆ ಸ್ವಾಮಿತ್ವಸಂಬಂಧದಿಂದಲೂ ಅನ್ವಯ. 'ಸ್ವಾಮಿತಾಸಂಬಂಧೇನ ಪ್ರಕೃತ್ಯಂತರ್ಯಾಮಿನಿಷ್ಠಂ, ಸ್ವರೂಪಸಂಬಂಧೇನ ಪ್ರಕೃತಿನಿಷ್ಠಂ ಯತ್ ಅಪಕರ್ಷಾವಧಿತ್ವರೂಪಂ ಅವರತ್ವಂ ತನ್ನಿರೂಪಕಃ ಪರಃ ಪುರುಷಃ' -ಇದು ಒಟ್ಟು ವಾಕ್ಯದ ಅರ್ಥ. ಪ್ರಕೃತ್ಯಂತರ್ಯಾಮಿಯ ಒಡೆತನಕ್ಕೆ ಸೇರಿರುವ, ಪ್ರಕೃತಿಯಲ್ಲಿರುವ ಅಪಕರ್ಷಾವಧಿತ್ವರೂಪವಾದ ಅವರತ್ವಕ್ಕೆ ಮೇಲಿನ ಗಡು ಆದವನು ಶ್ರೀಹರಿ ಎಂಬುದಾಗಿ.

●

೬. ೬. ಕ್ರಿಮಿರಿವ ಅಲ್ಲ ಕ್ರಮುರಿವ

ವಾಯುಸ್ತುತಿಯ 'ದೇಹಾದುತ್ಕ್ರಾಮಿತಾನಾಂ....' ಎಂಬ ಶ್ಲೋಕದಲ್ಲಿ (24) ಸೌಗಂಧಿಕ ಪುಷ್ಪಗಳ ಸ್ವೀಕಾರದ ಪ್ರಸಂಗದಲ್ಲಿ ಭೀಮಸೇನನ ಗದಾಘಾತಕ್ಕೊಳಗಾಗಿ ಮೃತರಾದ ಕ್ರೋಧವಶ ಅಸುರರ ಮುಂದಾಳು ಮಣಿಮಂತ ಸಿಟ್ಟಿನಿಂದ ಸೇಡಿಗಾಗಿ ಭೂಮಿಯಲ್ಲಿ ಹುಟ್ಟಿ ಬಂದು ಕೆಟ್ಟ ಶಾಸ್ತ್ರವನ್ನು ರಚಿಸಿದನೆಂದು ತಿಳಿಸುವಾಗ 'ಕ್ರಿಮಿರಿವ' ದುಷ್ಟಕೀಟದಂತೆ ಎಂದು ಅವನಿಗೊಂದು ದೃಷ್ಟಾಂತವನ್ನು ನೀಡಲಾಗಿದೆ.

ಮಣಿಮಂತನಿಗೆ ದುಷ್ಟ ಕೀಟದ ದೃಷ್ಟಾಂತ ದುಷ್ಟತನದ ಅಂಶದಲ್ಲಿ ಎಂದು ಹೇಳಬೇಕಷ್ಟೇ. ದುಷ್ಟತನವನ್ನು ಎಸಗುವಾಲ್ಲಾಗಲೀ ಸೇಡನ್ನು ತೀರಿಸಿಕೊಳ್ಳುವಾಗಲೀ ಚೇಳೇ ಮುಂತಾದ ಯಾವುದೇ ಕ್ರಿಮಿಯ ಅಸಾಧಾರಣ ಸ್ವಭಾವ ಉಲ್ಲೇಖವಾದುದಿಲ್ಲ. ಆದುದರಿಂದ 'ಕವಿಕುಲತಿಲಕ'ರಾದ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರಿಂದ ಅಂತಹ ಸಪ್ಪೆಯಾದ ದೃಷ್ಟಾಂತ ನೀಡಲಾಗಿದೆ ಎಂಬುದು ಔಚಿತ್ಯಪೂರ್ಣವೆನಿಸದು. ಆದುದರಿಂದ ಆ ದೃಷ್ಟಾಂತದ ಬದಲಿಗೆ 'ಕ್ರಮುರಿವ' ಎಂಬ ದೃಷ್ಟಾಂತದ ಪಾಠವೇ ಇದ್ದಿರಬೇಕೆಂದು ಊಹಿಸಬಹುದಾಗಿದೆ.

ಶ್ರೀಮದಾಚಾರ್ಯರು ತಮ್ಮ ಭಾಗವತತಾತ್ಪರ್ಯದಲ್ಲಿ (5-6-11) 'ಬ್ರಾಹ್ಮ'ದ ಮೂಲಕ 'ಕ್ರಮು' ಎಂಬ ಒಬ್ಬ ದುಷ್ಟನನ್ನು ಹೀಗೆ ಪರಿಚಯಿಸಿ ಕೊಟ್ಟಿರುವರು-

...........ತಾಂ ತು ಶುಶ್ರಾವಾರ್ಹೋ ದುರಾತ್ಮವಾನ್ ।
ಪೂರ್ವಂ ತು ಪೌಂಡ್ರಕೋ ನಾಮ ವಾಸುದೇವಃ ಸುದುರ್ಮತಿಃ ।

ಜಾತಿಸ್ಮರೋ ದ್ವಿಧಾ ಶಾಸ್ತ್ರಂ ಪಾಷಂಡಂ ನಿರ್ಮಮೇ ನೃಪಃ ।
ಏಕಂ ತು ವಾಸುದೇವಾಖ್ಯಂ ವಾಸುದೇವೋಽಹಮಿತ್ಯಪಿ ।

ಕುತ್ಸಿತಂ ವಾಸುದೇವತ್ವಪ್ರತಿಪಾದಕಮಾತ್ಮನಃ ।
ಲೋಕಾರ್ಥೇ ಚಾಪರಮಿತಿ ಚಕಾರಾಽರ್ಹತನಾಮಕಮ್ ।

ತತ್ಪ್ರಶಿಷ್ಯಃ ಕ್ರಮುರ್ನಾಮ ನ ಜಾನಂಸ್ತನ್ಮತಂ ಪರಮ್ ।
ವಾಸುದೇವಾತ್ಮತಾಂ ಸರ್ವಜೀವಾನಾಮವದತ್ ಕುಧೀಃ ।

ಕ್ರಮ್ವಾಖ್ಯಂ ಶಾಸ್ತ್ರಮಕರೋದಭೇದಪ್ರತಿಪಾದಕಮ್ ।
ಕುಶಾಸ್ತ್ರಂ ಸರ್ವವೇದಾನಾಂ ವಿರುದ್ಧಂ ತಾಮಸಾಲಯಮ್ ।

ತದ್ದೃಷ್ಟ್ವಾಽದ್ಯಾಪಿ ವರ್ತಂತೇ ವರ್ತಿಷ್ಯಂತಿ ತಥಾ ಕಲೌ ।
ಅಶೌಚಾ ಅವ್ರತಾಚಾರಾ ವಾಸುದೇವೋಽಹಮಿತ್ಯಪಿ ॥

ಋಷಭರೂಪಿ ಪರಮಾತ್ಮನು 'ತಾನು ವಾಸುದೇವ' ಎಂದು ತನ್ನ ಬಗ್ಗೆ ಹೇಳಿಕೊಳ್ಳುತ್ತಿದ್ದುದನ್ನು 'ಅರ್ಹ' ಎಂಬ ಮತ್ತೊಂದು ಹೆಸರುಳ್ಳ 'ಅರ್ಹತ' ಎಂಬ ಅವಿವೇಕಿ ರಾಜನು ಕೇಳಿದ್ದನು. ಹಿಂದಿನ ಜನ್ಮದಲ್ಲಿ ಪೌಂಡ್ರಕ ವಾಸುದೇವನಾಗಿದ್ದ ಅವನು ತನ್ನ 'ವಾಸುದೇವತ್ವ'ವನ್ನು ಸ್ಮರಿಸಿಕೊಂಡು ಎರಡು ಶಾಸ್ತ್ರಗಳನ್ನು ಮಾಡಿದನು. ಅವುಗಳಲ್ಲಿ ಒಂದು ತನಗೆ ವಾಸುದೇವತ್ವವನ್ನು ಪ್ರತಿಪಾದಿಸುವ 'ವಾಸುದೇವ' ಎಂದೇ ಹೆಸರುಳ್ಳ ಶಾಸ್ತ್ರ. ಮತ್ತೊಂದು ಲೋಕಕ್ಕಾಗಿ ಆರ್ಹತ ಮತವನ್ನು ಪ್ರತಿಪಾದಿಸುವ 'ಆರ್ಹತ' ಎಂಬ ಹೆಸರುಳ್ಳ ಶಾಸ್ತ್ರ. 'ಎಲ್ಲರೂ ತನ್ನನ್ನು ವಾಸುದೇವ' ಎಂದು ಉಪಾಸಿಸುವಂತಾಗಲಿ ಎಂಬ ದುರ್ಬುದ್ಧಿಯಿಂದ ವಾಸುದೇವ ಶಾಸ್ತ್ರವನ್ನು ರಚಿಸಿರುವ ಆರ್ಹತರಾಜನ ಅಂತರ್ಯವನ್ನು ತಿಳಿಯದೆ, ಅವನ ಪ್ರಶಿಷ್ಯನಾದ 'ಕ್ರಮು' ಎಂಬ ದುಷ್ಟ ಎಲ್ಲ ಜೀವರಿಗೂ ವಾಸುದೇವತ್ವವನ್ನು ಪ್ರತಿಪಾದಿಸಿದನು. ಹೀಗೆ ಅಭೇದಪ್ರತಿಪಾದಕನಾದ 'ಕ್ರಮು' ಎಂಬ ಶಾಸ್ತ್ರವನ್ನೇ ರಚಿಸಿದನು. ಎಲ್ಲ ದೇವತೆಗಳಿಗೆ ವಿರುದ್ಧವಾದ, ತಾಮಸರಿಗೆ ಆಧಾರವಾದ ಆ ಶಾಸ್ತ್ರದ ಸ್ಫೂರ್ತಿಗೊಳಗಾದವರು ಕಲಿಯುಗದಲ್ಲಿಯೂ ಇರುವರು.

ಹೀಗೆ 'ಬ್ರಾಹ್ಮ'ದ ಮೂಲಕ ಶ್ರೀಮದಾಚಾರ್ಯರು ಪರಿಚಯಿಸಿಕೊಟ್ಟಿರುವ 'ಕ್ರಮು' ವೇದಶಾಸ್ತ್ರಕ್ಕೆ ವಿರುದ್ಧವಾದ, ಅದ್ವೈತಶಾಸ್ತ್ರವನ್ನು ನಿರ್ಮಾಣ ಮಾಡಿದವ ನಾದುದರಿಂದ ಅಂತಹವನ ದೃಷ್ಟಾಂತ ಮಣಿಮಂತನಿಗೆ ಚೆನ್ನಾಗಿ ಹೊಂದುವುದು.

'ಚಕ್ರಪಾಣಿ'ಯ ಗುಣಗಣವಿರಹವನ್ನೂ ಅವನಿಗೆ ಸರ್ವಜೀವಾಭೇದವನ್ನೂ ಸಾರುವ 'ಕಷ್ಟಸಾಧ್ಯ' ಪ್ರಣಯನರೂಪವಾದ ಅಸಾಧಾರಣ ಧರ್ಮವೇ ದೃಷ್ಟಾಂತ ದಾರ್ಷ್ಟಾಂತಿಕಗಳಲ್ಲಿಯ ಸಾಮಾನ್ಯಧರ್ಮ ಎಂದು ಹೇಳಬಹುದಾಗಿದೆ. ಅರ್ಹತನ ಪ್ರಶಿಷ್ಯ ಕ್ರಮು ಹೇಗೆ ಅದ್ವೈತಪ್ರತಿಪಾದಕವಾದ ದುಷ್ಟ ಶಾಸ್ತ್ರವನ್ನು ರಚಿಸಿದ್ದನೋ ಅದರಂತೆಯೇ ಅದ್ವೈತಪ್ರತಿಪಾದಕ ದುಷ್ಟ ಶಾಸ್ತ್ರವನ್ನು ಮಣಿಮಂತನು ರಚಿಸಿದ

ನೆಂದು ಅದ್ವೈತಶಾಸ್ತ್ರಕ್ಕೆ ಕ್ರಮುನಿರ್ಮಿತ ಅದ್ವೈತಪ್ರತಿಪಾದಕ 'ಕ್ರಮುಶಾಸ್ತ್ರ'ದ ಹಿನ್ನೆಲೆಯನ್ನೂ ಧ್ವನಿಸಿದಂತಾಗುವುದು. ಆದ್ದರಿಂದ ವಾಯುಸ್ತುತಿಯಲ್ಲಿ 'ಕ್ರಿಮಿರಿವ ಮಣಿಮಾನ್' ಎನ್ನುವ ಬದಲು 'ಕ್ರಮುರಿವ ಮಣಿಯಾನ್' ಎಂದು ಪಠಿಸುವುದೇ ಸಮುಚಿತವೆನಿಸಬಲ್ಲದು.

(ವಿಮರ್ಶೆಯಲ್ಲಿ, ಪಾಠಾಂತರಶೋಧನೆಯಲ್ಲಿ ಪ್ರಸಿದ್ಧರಾಗಿದ್ದ ಕಾಣಿಯೂರು ಮಠದ ಶ್ರೀ ವಿದ್ಯಾಸಮುದ್ರತೀರ್ಥರೂ 'ಕ್ರಮುರಿವ' ಎಂಬ ಪಾಠವನ್ನು ಸೂಚಿಸಿದ್ದರು.)

●

೮. ೭. ಆನಂದತೀರ್ಥವರದೇ....

ಶ್ರೀ ವಾದಿರಾಜರು, ತೀರ್ಥಪ್ರಬಂಧದಲ್ಲಿ 'ಆನಂದತೀರ್ಥವರದೇ ದಾನವಾರಣ್ಯಪಾವಕೇ' ಎಂಬುದಾಗಿ ಶ್ರೀ ವೇಂಕಟೇಶ್ವರನಿಗೆ ಎರಡು ವಿಶೇಷಣಗಳನ್ನು ಕೊಟ್ಟು ಸ್ತುತಿಸಿರುವರು.

ಆದರೆ ವೇಂಕಟೇಶನು ಆನಂದತೀರ್ಥರಿಗೆ ವರವನ್ನು ಅನುಗ್ರಹಿಸಿದುದರ ಕುರಿತಾಗಲೀ ಯಾವುದೇ ದಾನವನನ್ನು ಸಂಹರಿಸಿದ ಕುರಿತಾಗಲೀ ಯಾವುದೇ ದಾಖಲೆ ಇಲ್ಲ. ಆದ್ದರಿಂದ ಈ ಎರಡು ವಿಶೇಷಣಗಳನ್ನು ಹೀಗೆ ಸಮನ್ವಯಿಸಿ ವ್ಯಾಖ್ಯಾನಿಸಬಹುದು–

ಮುಖ್ಯವಾಗಿ ಸತ್ಸಿದ್ಧಾಂತದ ಪ್ರಚಾರಕ್ಕಾಗಿಯೇ ಅವತರಿಸಿರುವ ಶ್ರೀಮದಾಚಾರ್ಯರು ಪ್ರಮುಖವಾಗಿ ಬೋಧಿಸಿರುವ ತತ್ತ್ವಗಳೆಂದರೆ –ಶ್ರೀಹರಿ ಸರ್ವೋತ್ತಮತ್ವ, ವಾಯುಜೀವೋತ್ತಮತ್ವ ಹಾಗೂ ಸರ್ವೋತ್ತಮನಾದ ಶ್ರೀಹರಿ ನಿರಾಕಾರನಾಗಿರದೆ ಚಿದಾನಂದಾತ್ಮಕವಾದ ದಿವ್ಯ ವಿಗ್ರಹದಿಂದ ಕೂಡಿರುವನು ಎಂಬುದಾಗಿ.

ಶ್ರೀಮದಾಚಾರ್ಯರು ಸಾರಿರುವ ಈ ಮೂರು ತತ್ತ್ವಗಳನ್ನೂ ಶ್ರೀವೇಂಕಟೇಶನು ಸೂಚ್ಯವಾಗಿ ಸಾಧಿಸಿ ತೋರಿಸುತ್ತಿರುವನು. ತ್ರಿಮೂರ್ತಿಗಳಲ್ಲಿ ಯಾರು ಶ್ರೇಷ್ಠರೆಂಬ ಪರೀಕ್ಷೆಗೆ ತೊಡಗಿದ ಭೃಗುವಿನಿಂದ ಒದೆಸಿಕೊಳ್ಳಲ್ಪಟ್ಟ ಶ್ರೀಹರಿ, ಆದ್ದರಿಂದಲೇ ವೇಂಕಟಗಿರಿಯ ಮೇಲೆ ಬಂದು ನಿಂತಿದ್ದು, ತಾನು ಭೃಗುವಿನ ಪರೀಕ್ಷೆಯಲ್ಲಿ ತೇರ್ಗಡೆಯಾದವನೆಂಬುದನ್ನು ಸೂಚಿಸುತ್ತ ಆ ಪ್ರಯುಕ್ತ ತಾನು ಸರ್ವೋತ್ತಮನಾದನೆಂಬುದನ್ನು ಸೂಚ್ಯವಾಗಿ ಸಂದೇಶಿಸುತ್ತಿರುವನು.

ಶ್ರೀವೇಂಕಟೇಶನ ಆಖ್ಯಾಯಿಕೆಯಲ್ಲೇ ವಾಯುದೇವರ ಹಾಗೂ ಶೇಷನ ನಡುವೆ ನಡೆದ ವಿವಾದ ಪ್ರಸ್ತಾಪಿಸಲ್ಪಟ್ಟಿದ್ದು, ತನ್ನ ಬೆರಳಿನ ಕಂಪನ ಮಾತ್ರದಿಂದ ಶೇಷನು ಸುತ್ತಿಕೊಂಡಿದ್ದ ಪರ್ವತ ಎಲ್ಲೋ ಬೀಳುವಂತೆ ಮಾಡಿರುವ ವಾಯುದೇವರೇ ಇತರ ಜೀವಾತ್ಮರಿಗಿಂತೆಲ್ಲ ಶ್ರೇಷ್ಠರೆಂಬುದನ್ನು ಸೂಚ್ಯವಾಗಿ

ನಿರ್ಣಯಿಸಲಾಗಿದೆ. ಹೀಗೆ ಶ್ರೀವೇಂಕಟೇಶ ತನ್ನಆಖ್ಯಾಯಿಕೆಯ ಮೂಲಕ ವಾಯು-ಜೀವೋತ್ತಮತ್ವವನ್ನೂ ಸಂದೇಶಿಸುತ್ತಿರುವನು.

'ಶಿಲಾಮಯವಾದ ಸುಂದರ ಪ್ರತಿಮಾ ರೂಪದಲ್ಲಿರುವ ಶ್ರೀವೇಂಕಟೇಶ ತಾನು ಯಾವಾಗಲೂ, ಇದೇ ರೀತಿಯಾಗಿ ಜ್ಞಾನಾನಂದಾತ್ಮಕವಾದ ಆಕಾರವನ್ನು ಹೊಂದಿಯೇ ಇರುವವನು -ಎಂಬುದಾಗಿ ತನ್ನ ಸಾಕಾರತ್ವ ಗುಣವನ್ನೂ ಸೂಚ್ಯವಾಗಿ ಸಂದೇಶಿಸುತ್ತಿರುವನು.

ಹೀಗೆ ಶ್ರೀಮದಾಚಾರ್ಯರು ಸಾಧಿಸಿದ ಮೂರು ತತ್ವಗಳನ್ನೂ ಶ್ರೀವೇಂಕಟೇಶನು ಸೂಚ್ಯವಾಗಿ ಸಮರ್ಥಿಸುತ್ತ ಅವರ ಇಷ್ಟವನ್ನು ನೆರವೇರಿಸುವ ಪ್ರಯುಕ್ತ ವೇಂಕಟೇಶನನ್ನು 'ಆನಂದತೀರ್ಥವರದೇ' ಎಂಬ ವಿಶೇಷಣದಿಂದ ಸ್ತುತಿಸಲಾಗಿದೆ.

ಅಂತೆಯೇ ವೇಂಕಟೇಶ ಯಾವುದೇ ದಾನವನನ್ನೂ ಸಂಹರಿಸದಿದ್ದರೂ ಶ್ರೀಮದಾನಂದತೀರ್ಥರ ಪ್ರಮುಖ ತತ್ವಗಳನ್ನು ಪ್ರಚುರಪಡಿಸುತ್ತ ಮಿಥ್ಯಾಜ್ಞಾನಿಗಳೆಂಬ ದಾನವರನ್ನು ಮೌನವಾಗಿ ನಿರಾಕರಿಸುತ್ತಿರುವ ಪ್ರಯುಕ್ತ ಶ್ರೀವೇಂಕಟೇಶನನ್ನು 'ದಾನವಾರಣ್ಯಪಾವಕೇ' ಎಂಬ ವಿಶೇಷಣದಿಂದ ಸ್ತುತಿಸಲಾಗಿದೆ.

●

೬. ೮. ದಕ್ಷನೇತ್ರದ ಔಚಿತ್ಯ

ನಖಸ್ತುತಿಯ ಎರಡನೇ ಶ್ಲೋಕದಲ್ಲಿ 'ಯದ್ರೋಷೋತ್ಕರದಕ್ಷನೇತ್ರ....' ಎಂಬುದಾಗಿ ಶ್ರೀನರಸಿಂಹದೇವರ ಬಲ(ದಕ್ಷ)ಗಣ್ಣ ತುದಿಯಿಂದ ಏಳುವ ಕಿಡಿಯಿಂದ ಚತುರ್ಮುಖಾದಿಗಳು ಭಸ್ಮರಾಗುವರೆಂಬುದಾಗಿ ವರ್ಣಿಸಲಾಗಿದೆ.

ನರಸಿಂಹದೇವರ ಸಾಮರ್ಥ್ಯಾತಿಶಯವನ್ನು ತೋರಿಸಲು ಹೊರಟ ಈ ಶ್ಲೋಕದಲ್ಲಿ 'ದಕ್ಷನೇತ್ರ' ಎಂಬುದಾಗಿ ಅವರ ಬಲಗಣ್ಣನ್ನು ತೆಗೆದುಕೊಳ್ಳುವ ಬದಲು 'ವಾಮನೇತ್ರ' ಎಂಬುದಾಗಿ ಎಡಗಣ್ಣನ್ನು ತೆಗೆದುಕೊಂಡಿದ್ದಲ್ಲಿ, 'ಎಡಗಣ್ಣೇ ಇಷ್ಟು ಸಾಮರ್ಥ್ಯೋಪೇತವಾಗಿರುವಾಗ ಬಲಗಣ್ಣು ಇನ್ನೆಷ್ಟು ಪ್ರಭಾವಶಾಲಿಲಿಯಾಗಿದ್ದಿರಬೇಕು!' ಎಂಬುದಾಗಿ ಇನ್ನೂ ಹೆಚ್ಚು ಸಾಮರ್ಥ್ಯವನ್ನು ತೋರಿಸಿದಂತಾಗುವುದು. ಶ್ರೀರಾಮನು ಶಿವಧನುಸ್ಸನ್ನು ಅನಾಯಾಸವಾಗಿ ಎಡಗೈಯಿಂದ ಎತ್ತಿ ಮುರಿದನು. (.....ತದ್ವಾಮಕರೇಣ ರಾಘವಃ ಸಲೀಲಮುದ್ಧೃತ್ಯ ಹಸನ್ನಪೂರಯತ್) ಎಂದು ವರ್ಣಿತವಾಗಿಲ್ಲವೇ? ಅಂತೆ.

ಆದ್ದರಿಂದ 'ದಕ್ಷನೇತ್ರ' ಎಂದುಪಯೋಗಿಸುವುದರ ಬದಲು 'ವಾಮನೇತ್ರ' ಎಂದೇ ಪ್ರಯೋಗಿಸಿದ್ದರೆ ಹೆಚ್ಚು ಉಚಿತ ಎನಿಸುತ್ತಿತ್ತಲ್ಲವೇ?

ಸಮಾಧಾನ:

ಪರಮಾತ್ಮನ ಅವಯವಗಳೆಲ್ಲ ಅವನಿಗಿಂತ ಅತ್ಯಂತಾಭಿನ್ನಗಳಾಗಿರುವ ಪ್ರಯುಕ್ತ ಅವುಗಳಲ್ಲಿ ಪರಸ್ಪರ ವ್ಯತ್ಯಾಸವಿಲ್ಲ. 'ನೇಹ ನಾನಾಸ್ತಿ ಕಿಂಚನ' ಪ್ರತಿಯೊಂದು ಅವಯವವೂ ಸಕಲ ಸಾಮರ್ಥ್ಯೋಪೇತವಾಗಿದೆ. ಆದರೆ ಒಂದೊಂದು ಅವಯವದಲ್ಲಿ ಒಂದೊಂದು ಶಕ್ತಿ, ಗುಣಗಳು, ವಿಶೇಷವಾಗಿ ಅಭಿವ್ಯಕ್ತವಾಗುವುವು. ಒಂದೊಂದು ಅವಯವದಿಂದ ಒಂದೊಂದು ವಿಶೇಷವಾದ ಕಾರ್ಯ ನಡೆಯುವುದು. ಹೇಗೆ ಪರಮಾತ್ಮನ ಸಕಲರೂಪಗಳೂ ಅವನಿಗಿಂತ ಅತ್ಯಂತಾಭಿನ್ನಗಳಾಗಿದ್ದು, ಅವುಗಳಲ್ಲಿ ಪರಸ್ಪರ ಭೇದ ವ್ಯತ್ಯಾಸಗಳಿಲ್ಲದಿದ್ದರೂ, ಒಂದೊಂದು ರೂಪದಲ್ಲಿ ಒಂದೊಂದು ಗುಣ, ಶಕ್ತಿಗಳು ವಿಶೇಷವಾಗಿ ಅಭಿವ್ಯಕ್ತವಾಗುವವು. ಒಂದೊಂದು ರೂಪದಿಂದ ಒಂದೊಂದು ಕಾರ್ಯ ವಿಶೇಷವಾಗಿ ನಡೆಯುವುದು. ರಾಮಕೃಷ್ಣಾವತಾರಗಳಲ್ಲಿ ಬಲ ಕಾರ್ಯ ನಡೆದಿದ್ದರೆ, ವೇದ ವ್ಯಾಸಾವತಾರದಲ್ಲಿ ಜ್ಞಾನಕಾರ್ಯವಷ್ಟೇ ವಿಶೇಷವಾಗಿ ನಡೆದಿರುವುದು. ಹಾಗೆಯೇ ಅವಯವಗಳಲ್ಲೂ.

ಅದ್ದರಿಂದ ಪ್ರಕೃತ ನರಸಿಂಹದೇವರ ಬಲಗಣ್ಣಲ್ಲಿ ಎಡಗಣ್ಣಿಗಿಂತ ಹೆಚ್ಚು ಸಾಮರ್ಥ್ಯ ಅಭಿವ್ಯಕ್ತವಾಗಿರುವುದು. ಬಲಗಣ್ಣು ತೀಕ್ಷ್ಣ ಕಿರಣದ ಸೂರ್ಯನ ಹುಟ್ಟುಸ್ಥಾನವಾಗಿದ್ದರೆ, ಎಡಗಣ್ಣು ಶೀತಕಿರಣದ ಚಂದ್ರನ ಹುಟ್ಟುಸ್ಥಾನ. ತೀಕ್ಷ್ಣ ಕಿರಣದ ಸೂರ್ಯನ ಹುಟ್ಟಿಗೆ ಕಾರಣವಾದ ಬಲಗಣ್ಣಿನಿಂದ ಹುಟ್ಟಿದ ಬೆಂಕಿಯೂ ಹೆಚ್ಚು ತೇಜಸ್ವಿ. ಚಂದ್ರ ಹುಟ್ಟಿದ ಎಡಗಣ್ಣಿನಿಂದ ಹೊರಟ ಬೆಂಕಿ ಅಷ್ಟು ತೇಜಸ್ವಿಯಾಗಿರಲಾರದು. ಅದರ ಕಿಡಿ ಚತುರ್ಮುಖಾದಿಗಳನ್ನು ಭಸ್ಮೀಕರಿಸದು.

ಈ ಅಭಿಪ್ರಾಯದಿಂದಲೇ ಶ್ರೀಮದಾಚಾರ್ಯರು ನಖಸ್ತುತಿಯಲ್ಲಿ 'ವಾಮನೇತ್ರ' ಎನ್ನದೆ 'ದಕ್ಷನೇತ್ರ' ಎಂಬುದಾಗಿ ಉದ್ದೇಶಪೂರ್ವಕವಾಗಿಯೇ ಉಲ್ಲೇಖಿಸಿ, ಈ ತತ್ತ್ವವನ್ನು ಸೂಚ್ಯವಾಗಿ ಸಂದೇಶಿಸಿರುವರು.

●

೬. ೯. ಐದು ವ್ಯಕ್ತಿಗಳ ವಂದನೆ

ವಾಯುಸ್ತುತಿಯ 'ವಂದೇ ತಂ ತ್ವಾ....' ಎಂಬ 40ನೇ ಪದ್ಯದಲ್ಲಿ ಮೇಲ್ನೋಟಕ್ಕೆ ಕಾಣುವಂತೆ ಆನಂದತೀರ್ಥರ ವಂದನೆಯಷ್ಟೇ ಮಾಡಲ್ಪಟ್ಟಿರುವುದಲ್ಲ. ನಾಲ್ಕು ಬಾರಿ 'ವಂದೇ' ಎಂಬ ಶಬ್ದವನ್ನು ಬಳಸುವ ಮೂಲಕ ನಾಲ್ಕು ವ್ಯಕ್ತಿಗಳಿಗೆ, ಇಷ್ಟೇ ಅಲ್ಲದೆ 'ವಂದೇಽಹಂ ದೇವ' –ಎಂಬ ಭಾಗವನ್ನು ಆವೃತ್ತಿಮಾಡಿ ಇಬ್ಬರಿಗೆ ಎಂದಿಟ್ಟುಕೊಂಡು ಒಟ್ಟಿಗೆ ಐದು ವ್ಯಕ್ತಿಗಳಿಗೆ ಇಲ್ಲಿ ವಂದನೆ ಸಲ್ಲಿಸಲಾಗಿದೆ ಎಂದು ಸೂಚಿತವಾಗಿದೆ. ಶ್ರೀ ವೇದವ್ಯಾಸರು, ಮುಖ್ಯಪ್ರಾಣ ಹಾಗೂ ಅವನ ಮೂರು ಅವತಾರಗಳೇ ಆ ಐದು ವ್ಯಕ್ತಿಗಳು.

ಒಂದೆ 'ಅಸ್ತವ್ಯಸ್ತಂ.....' ಎಂಬ ಶ್ಲೋಕದಲ್ಲಿ ಶ್ರೀ ವೇದವ್ಯಾಸರ 'ಪೀಠೇ ರತ್ನೋಪಕ್ಲೃಪ್ತೇ.....' ಎಂಬ ಶ್ಲೋಕದಲ್ಲಿ ಶ್ರೀ ಮುಖ್ಯಪ್ರಾಣನ, 'ವಂದೇಽಹಂ ತಂ ಹನೂಮಾನ್....' ಇತ್ಯಾದಿ ಐದು ಪದ್ಯಗಳಲ್ಲಿ ಹನೂಮಂತನ, 'ಜಘ್ನೇ ನಿಘ್ನೇನ ವಿಘ್ನೋ....' ಇತ್ಯಾದಿ ಐದು ಪದ್ಯಗಳಲ್ಲಿ ಭೀಮಸೇನನ, 'ತದ್‌ದುಷ್ಪ್ರೇಕ್ಷಾನು ಸಾರಾತ್...' ಇತ್ಯಾದಿ ಐದು ಪದ್ಯಗಳಲ್ಲಿ ಶ್ರೀಮಧ್ವಾಚಾರ್ಯರ ಸ್ತುತಿ ನಡೆಸ ಲಾಗಿದ್ದು, ಹೀಗೆ ಬೇರೆ ಬೇರೆಯಾಗಿ ಸ್ತುತಿಸಲಾದ ಈ ಐದೂ ವ್ಯಕ್ತಿಗಳ ವಂದನೆಯನ್ನು ಉಪಸಂಹಾರ ರೂಪದಲ್ಲಿ 'ವಂದೇ ತಂ ತ್ವಾ....' ಎಂಬ ಪದ್ಯದಲ್ಲಿ ಒಟ್ಟಿಗೆ ನಡೆಸಲಾಗಿದೆ ಎಂಬುದು ಔಚಿತ್ಯಪೂರ್ಣ ಎನಿಸಬಲ್ಲದು. 'ವಂದೇ' ಎಂದು ನಾಲ್ಕು ಬಾರಿ ಪ್ರಯೋಗಿಸಲ್ಪಟ್ಟ ಕ್ರಿಯಾಪದದ ಸಮೀಪದಲ್ಲಿ ಬಳಸಲಾದ ವಿಶೇಷಣಗಳನ್ನು ಗಮನಿಸಿದರೂ ಆ ಐದು ವ್ಯಕ್ತಿಗಳ ವಂದನೆಯು ಅಭಿಪ್ರೇತವೆಂದು ತಿಳಿದುಬರುವುದು.

ಮಹಾಭಾರತಾದಿಗಳ ಮೂಲಕ ತತ್ತ್ವವನ್ನು ಬೆಳಗಿಸಿದ (ದೇವಯತಿ ದ್ಯೋತಯತೀತಿ) ಶ್ರೀ ವೇದವ್ಯಾಸರು 'ದೇವ' ಶಬ್ದದಿಂದ ಮುಖ್ಯವಾಚ್ಯರಾದರೆ, ಅವರ 'ಪ್ರತಿಬಿಂಬ'ರಾಗಿರುವ ಮುಖ್ಯಪ್ರಾಣದೇವರು ತತ್ತ್ವಜ್ಞಾನಾಭಿಮಾನಿಗಳಾಗಿದ್ದು ಅಧಿಕಾರಿಗಳಲ್ಲಿ ತತ್ತ್ವವನ್ನು ಬೆಳಗಿಸುವ ಮೂಲಕ ಗೌಣವಾಗಿ 'ದೇವ' ಎನಿಸುವವರು. ಇವರಿಬ್ಬರನ್ನೂ ದೇವ ಶಬ್ದದಿಂದ ಸಂಬೋಧನೆ ಮಾಡಿ 'ವಂದೇಽಹಂ ದೇವಭಕ್ತ್ಯಾ...' ಎಂಬ ನಾಲ್ಕನೇ ಪಾದದಲ್ಲಿ ಶ್ರೀ ವೇದವ್ಯಾಸರಿಗೂ, ಶ್ರೀಮುಖ್ಯಪ್ರಾಣದೇವರಿಗೂ ವಂದನೆಯನ್ನು ಸಲ್ಲಿಸಲಾಗಿದೆ.

ಹನೂಮಂತ ಬಳಿತ್ಥಾಸೂಕ್ತದಲ್ಲಿ '....ಮತಿರ್ಋತಸ್ಯ....' ಎಂದು ಮತಿ ಶಬ್ದ ದಿಂದಲೇ ಉಲ್ಲೇಖಿಸಲ್ಪಟ್ಟವನು. ಈ ಮತಿ ಶಬ್ದದ ವಿವರಣೆಯನ್ನೇ 'ವಾಯುಸ್ತುತಿ' ಯಲ್ಲಿ 'ಸುಪೂರ್ಣಪ್ರಮತಿಂ' ಅತ್ಯಧಿಕವಾದ ಭಗವದ್ವಿಷಯಕ ಜ್ಞಾನವನ್ನು ಹೊಂದಿರುವವನೆಂದು ವಿವರಿಸಲಾಗಿದೆ. ಆದುದರಿಂದ 'ವಂದೇ ತಂ ತ್ವಾ ಸುಪೂರ್ಣಪ್ರಮತಿಮನುದಿನಾಸೇವಿತಂ ದೇವವೃಂದೈಃ' ಎಂಬ ಮೊದಲ ಪಾದ ವಾಯುದೇವನ ಮೊದಲ ಅವತಾರ ಹನೂಮಂತನ ವಂದನೆಯನ್ನು ತಿಳಿಸುತ್ತಿದೆ.

'....ನಿತ್ಯ ಆಶಯೇ ದ್ವಿತೀಯಮಾ ಸಪ್ತಶಿವಾಸು ಮಾತೃಷು' ಎಂಬುದಾಗಿ ಬಳಿತ್ಥಾಸೂಕ್ತದಲ್ಲಿ ವಾಯುದೇವನ ಎರಡನೇ ಅವತಾರ ಭೀಮಸೇನ ಏಳು ವೈದಿಕ ವಿದ್ಯೆಗಳಲ್ಲೂ ಯಾವಾಗಲೂ ಪವಡಿಸಿರುವವನು ಅಂದರೆ ಮಗ್ನವಾಗಿರುವವನು ಎಂದು ತಿಳಿಸಲಾಗಿದೆ.

'ವಂದೇ ವಂದಾರುಮೀಶೇ ಶ್ರಿಯ ಉತ ನಿಯತಂ' ಎಂಬ ಎರಡನೇ ಪಾದದಲ್ಲಿ ಭೀಮಸೇನನ ಈ ಗುಣವನ್ನೇ ಉಲ್ಲೇಖಿಸಿ ಅವನಿಗೆ ವಂದನೆಯನ್ನು ಸಲ್ಲಿಸಲಾಗಿದೆ. ಅನುವ್ಯಾಖ್ಯಾನದ '....ವಂದ್ಯಂ ಸದಾ ಪ್ರಿಯತಮಂ....' ಎಂಬಲ್ಲಿಯ 'ವಂದ್ಯ' ಶಬ್ದವನ್ನು ವ್ಯಾಖ್ಯಾನಿಸುತ್ತ ಶ್ರೀ ಜಯತೀರ್ಥರು 'ಮನೋವೃತ್ತೇಸ್ತತ್ಪ್ರಣ ವತಾ ಹಿ ವಂದನಮ್' –ಮನಸ್ಸನ್ನು ಭಗವಂತನಲ್ಲೇ ನೆಲೆಗೊಳಿಸುವುದು ವಂದನ

ಎನಿಸುವುದೆಂದು ತಿಳಿಸಿ ಶ್ರವಣ, ಮನನ, ನಿದಿಧ್ಯಾಸನ ರೂಪವಾದ ಜಿಜ್ಞಾಸೆ ಅಂತಹ ವಂದನವಿಶೇಷ (ಜಿಜ್ಞಾಸಾಪಿ ತದ್ವಿಶೇಷ ಏವ) ಎಂದಿರುವರು. ಆದುದರಿಂದ ಇಂತಹ ಶ್ರವಣಾದಿ ಜಿಜ್ಞಾಸೆಯನ್ನು ಏಳು ವಿದ್ಯೆಗಳಲ್ಲಿ ಭೀಮಸೇನ ನಡೆಸುತ್ತಿರುವ ನೆಂಬುದನ್ನು 'ಆಶಯೇ ಸಪ್ತಶಿವಾಸು ಮಾತೃಷು' ಎಂಬ ಬಳಿತ್ಥಾಸೂಕ್ತದಲ್ಲಿ ಹೇಳಿದ್ದು, ಅದನ್ನೇ ಅಂತಹ ವಿದ್ಯೆಗಳಿಂದ ಪ್ರತಿಪಾದ್ಯನಾದ ಭಗವಂತನ ಹಾಗೂ ಲಕ್ಷ್ಮೀದೇವಿಯ ವಿಷಯದಲ್ಲಿ ಶ್ರವಣಾದಿ ವಂದನವನ್ನು ನಿಯತವಾಗಿ ಸ್ವಾಭಾವಿಕವಾಗಿ ನಡೆಸುತ್ತಿರುವನೆಂದು 'ವಂದೇ ವಂದಾರು ಮೀಶೇ ಶ್ರಿಯ ಉತ ನಿಯತಂ....' ಎಂದು ವಿವರಿಸಲಾಗಿದೆ.

'.....ಶ್ರೀಮದಾನಂದತೀರ್ಥಮ್ । ವಂದೇ ಮಂದಾಕಿನೀಸತ್ಸರಿದಮಲಜಲಾ ಸೇಕಸಾಧಿಕ್ಯಸಂಗಂ....' ಎಂಬ ಭಾಗದಲ್ಲಿ ಬಳಿತ್ಥಾಸೂಕ್ತದ 'ಆವಿದ್ ಯವಿಷ್ಠೋ ಅಭವದ್ ಘೃಣಾ ಶುಚಿಃ' ವಿಶೇಷಣದ ವಿವರಣೆಯನ್ನು ನೀಡಿ ಶ್ರೀಮದಾನಂದ ತೀರ್ಥರಿಗೆ ವಂದನೆಯನ್ನು ಸಲ್ಲಿಸಲಾಗಿದೆ. ಗಂಗಾಜಲದ ಸಂಪರ್ಕಕ್ಕಿಂತಲೂ ಅಧಿಕ ಪಾವಿತ್ರ್ಯವನ್ನು ನೀಡಬಲ್ಲ ಸಂಗವುಳ್ಳವರೆಂಬಷ್ಟೂ 'ಶುಚಿ'ಪವಿತ್ರರಾಗಿರುವವರು ಶ್ರೀಮದಾನಂದತೀರ್ಥರು ಎಂಬುದಾಗಿ. ಅಂತಹ ಆನಂದತೀರ್ಥರಿಗೆ ವಂದನೆಯನ್ನು ಸಲ್ಲಿಸಲಾಗಿದೆ.

ಹೀಗೆ ಅರ್ಥಾನುಸಂಧಾನವನ್ನು ತಂದುಕೊಂಡು ಈ ಶ್ಲೋಕವನ್ನು ಪಠಿಸಿದಲ್ಲಿ ಏಕ ಕಾಲದಲ್ಲಿ ಐದು ವ್ಯಕ್ತಿಗಳ ಸ್ತುತಿ ಹಾಗೂ ವಂದನೆಯನ್ನು ನಡೆಸಿದಂತಾಗುವುದು.

●

೬. ೧೦. ಭೀತರಂತೆ ಹೊರತು ಭೀತರಲ್ಲ

'ಭೀಷಾಸ್ಮಾದ್ವಾತಃ ಪವತೇ ಭೀಷೋದೇತಿ ಸೂರ್ಯಃ ಭೀಷಾಸ್ಮಾದಗ್ನಿ ಶ್ಚೇಂದ್ರಶ್ಚ ಮೃತ್ಯುರ್ಧಾವತಿ ಪಂಚಮ ಇತಿ' ಎಂಬುದಾಗಿ ಉಪನಿಷತ್ತಿನಲ್ಲಿ ವಾಯು, ಸೂರ್ಯ, ಅಗ್ನಿ, ಇಂದ್ರ, ಯಮ –ಮುಂತಾದ ದೇವತೆಗಳು ಭಗವಂತನ ಭಯ ಕ್ಕೊಳಗಾಗಿ ಗಾಳಿ ಬೀಸುವುದೇ ಮುಂತಾದ ತಮ್ಮ ತಮ್ಮ ಕರ್ತವ್ಯವನ್ನು ನಿಷ್ಠೆ ಯಿಂದ, ನಿಯತವಾಗಿ ನಡೆಸುವರೆಂದು ಸಂದೇಶಿಸಲಾಗಿದೆ.

ಭಗವಂತ ಭಕ್ತವತ್ಸಲ. ಭಕ್ತರ ಪಾಲಿಗೆ ದಯಾಸಮುದ್ರ. ವಾಯು, ಸೂರ್ಯ ಮುಂತಾದ ದೇವತೆಗಳು ಭಗವದ್ ಭಕ್ತರು. ಭಕ್ತವತ್ಸಲನಾದ ಭಗವಂತ ತಮ್ಮ ಬಗ್ಗೆ ಎಷ್ಟು ದಯಾಲು ಆಗಿರುವನೆಂಬುದನ್ನೂ ಚೆನ್ನಾಗಿ ಅರಿತಿರುವವರು. ಇಂತಹವರು ಗಾಳಿ ಬೀಸುವುದೇ ಮುಂತಾದ ತಮ್ಮ ಕರ್ತವ್ಯಗಳನ್ನು '.....ತತ್ಪೂಜಾ ಕರ್ಮ ಚಾಖಿಲಮ್' ಎಂದಿರುವಂತೆ ಭಗವದಾರಾಧನಾರೂಪದಿಂದ ಸಂತೋಷದಿಂದ ನಿರ್ವ ಹಿಸುವರು. ಹೊರತು ಅಭಕ್ತರಂತೆ ಭಗವಂತನ ವಿಷಯದಲ್ಲಿ ಭಯಪಡುವುದಿಲ್ಲ.

ಹೀಗಿರುವಾಗ ಉಪನಿಷತ್ತುಗಳಲ್ಲಿ ದೇವತೆಗಳು ಭಗವಂತನಿಗೆ ಭಯಪಟ್ಟು ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವರೆಂದು ಹೇಗೆ ಹೇಳಲಾಗಿದೆ? ಎಂಬ ಸಂದೇಹ ಸಹಜ.

ಆದರೆ ಉಪನಿಷತ್ತುಗಳ ಮಾನ ಅಭಿಪ್ರಾಯ– ದೇವತೆಗಳು ಭಗವಂತನ ಭಯಕ್ಕೆ ಒಳಗಾದವರಂತೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವರೆಂಬುದೇ ಹೊರತು ನಿಜವಾಗಿಯೂ ಭಯಕ್ಕೊಳಪಟ್ಟು ನಡೆದುಕೊಳ್ಳುವರೆಂಬುದಲ್ಲ. ಭಯಗ್ರಸ್ತನಾದ ವ್ಯಕ್ತಿ ತುಂಬ ವಿನೀತನಾಗಿ ನಡೆದುಕೊಳ್ಳುವನು. ದೇವತೆಗಳೂ ಭಗವಂತನ ವಿಷಯ ದಲ್ಲಿ ತುಂಬ ಸಲುಗೆಗೆ ಒಳಗಾಗಿದ್ದರೂ, ಆ ಸಲುಗೆಯನ್ನು ದುರುಪಯೋಗಪಡಿಸಿ ಕೊಳ್ಳುವುದಿಲ್ಲ. ಅವನ ಪಾರಮ್ಯವನ್ನು ಅನುಸಂಧಾನಮಾಡುತ್ತ ಅದಕ್ಕನುಗುಣವಾಗಿ ತುಂಬ ವಿನಯದಿಂದ ನಡೆದುಕೊಳ್ಳುವರು. ಇದನ್ನೇ ಭಯಗ್ರಸ್ತರಾದವರಂತೆ ನಡೆದು ಕೊಳ್ಳುವರೆಂದು ಸಂದೇಶಿಸಲಾಗಿದೆ. ಭಯಗ್ರಸ್ತರಾಗದ ವ್ಯಕ್ತಿಗಳನ್ನು ಭಯಗ್ರಸ್ತರಾಗಿ ನಡೆದುಕೊಳ್ಳುವರೆಂದು ಹೇಳಿದ ಮಾತುಗಳಿಂದ ಭಯಗ್ರಸ್ತರಂತೆ ನಡೆದುಕೊಳ್ಳುವ ರೆಂಬ ಅರ್ಥವೇ ಹೊರಡುವುದು ತಾನೇ?

●

೬. ೧೧. ಗದಾಧಾರಣೆಯ ಉಲ್ಲೇಖದ ಔಚಿತ್ಯ

ವಾಯುಸ್ತುತಿಯ 'ಉದ್ಯದ್ ವಿದ್ಯುತ್ ಪ್ರಚಂಡಾಂ....' ಎಂದು ಪ್ರಾರಂಭ ವಾಗುವ ಐದನೇ ಪದ್ಯದಲ್ಲಿ '....ಅಯಮಿಹ ಸುಮತಿಂ ವಾಯುದೇವೋ ವಿದಧ್ಯಾತ್' ವಾಯುದೇವನು ಒಳ್ಳೆಯ ಜ್ಞಾನವನ್ನು ಅನುಗ್ರಹಿಸಲಿ ಎಂದು ಮುಖ್ಯವಾಗಿ ಪ್ರಾರ್ಥಿಸಲಾಗಿದೆ.

ಈ ಪದ್ಯದ ಪೂರ್ವಾರ್ಧದಲ್ಲಿ '....ಬಿಭ್ರದ್ ಭೀಮೋ ಭುಜೇ.... ವೀರ್ಯೋದ್ಧಾರ್ಯಾಂ ಗದಾಗ್ರ್ಯಾಂ...' ಎಂಬುದಾಗಿ ಭೀಮಸೇನ ಶ್ರೇಷ್ಠ ಗದೆಯನ್ನು ಧರಿಸಿರುವುದನ್ನು ಪ್ರಸ್ತಾವಿಸಲಾಗಿದೆ. ಹೀಗೆ ಭೀಮಸೇನಾವತಾರದಲ್ಲಿ ಶ್ರೇಷ್ಠ ಗದೆಯನ್ನು ಧರಿಸಿರುವ ವಿಚಾರ– ವಾಯುದೇವನಲ್ಲಿ ಸುಮತಿಯನ್ನು ನೀಡಲು ಸಲ್ಲಿಸಲಾಗುವ ಉತ್ತರಾರ್ಧದ ಪ್ರಾರ್ಥನೆಗೆ ಹೇಗೆ ಪೂರಕವಾಗುವುದು? ಗದಾಧಾರಣೆಯ ಬದಲು ಮಧ್ವಾವತಾರದಲ್ಲಿ ಶಾಸ್ತ್ರಧಾರಣೆ ವಿಚಾರವಾಗಿದ್ದರೆ ಉತ್ತರಾರ್ಧದ ಪ್ರಾರ್ಥನೆಗೆ ಪೋಷಕವೆನಿಸುತ್ತಿತ್ತು ತಾನೇ?– ಎಂಬುದಾಗಿ ಎನಿಸುವುದು ಸಹಜ.

ಆದರೆ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ಉದ್ದೇಶಪೂರ್ವಕವಾಗಿಯೇ ಉತ್ತರಾರ್ಧದ ಪ್ರಾರ್ಥನೆಗೆ ಪೂರಕವಾಗುವಂತೆಯೇ ಪೂರ್ವಾರ್ಧದಲ್ಲಿ ಗದಾಧಾರಿ ಭೀಮನನ್ನು ಪ್ರಸ್ತಾವಿಸಿದ್ದು. 'ಅಜ್ಞಾನಾದಿಸ್ವರೂಪಸ್ತು ಕಲಿರ್ದುರ್ಯೋಧನಃ ಸ್ಮೃತಃ' ಎಂದು ಶ್ರೀಮದಾಚಾರ್ಯರು ಮಹಾಭಾರತತಾತ್ಪರ್ಯನಿರ್ಣಯದಲ್ಲಿ

ತಿಳಿಸಿರುವಂತೆ ಅಜ್ಞಾನ, ಭ್ರಮೆ, ಪ್ರಮಾದಿಗಳಿಗೆ ಅಭಿಮಾನಿಯಾಗಿ ದೇಹದಲ್ಲಿರುವ ಕಲಿಯೇ ದುರ್ಯೋಧನ. ವಾಯುದೇವ ನಮಗೆ ಸುಮತಿಯನ್ನು ಅನುಗ್ರಹಿಸಬೇಕೆಂದರೆ ನಮ್ಮಲ್ಲಿರುವ ಅಜ್ಞಾನ, ಭ್ರಮೆ, ಪ್ರಮಾದಾದಿಗಳನ್ನು ತೊಲಗಿಸಬೇಕು. ಅಂತಹ ಅಜ್ಞಾನಾದಿಗಳಿಗೆ ಅಭಿಮಾನಿಯಾದ ಕಲಿಯನ್ನು ನಿಗ್ರಹಿಸುವುದರಿಂದ, ಅವನಿಂದ ಅಭಿಮನ್ಯಮಾನಗಳಾದ ಅಜ್ಞಾನಾದಿಗಳನ್ನು ತೊಲಗಿಸಬಹುದು. ವಾಯುದೇವ ತನ್ನ ಭೀಮಾವತಾರದಲ್ಲಿ ಗದೆಯ ಮೂಲಕ ಅಂತಹ ಕಲಿಯ ಸ್ವರೂಪಿ ದುರ್ಯೋಧನನನ್ನು ಸದೆಬಡಿದವನು. ಆದ್ದರಿಂದ ವಾಯುದೇವ ತನ್ನ ಭೀಮಾವತಾರದಲ್ಲಿ ಗದಾಧಾರಿಯಾಗಿ ನಡೆಸಿದ ಕಲಿಸ್ವರೂಪಿ ದುರ್ಯೋಧನನ ನಿಗ್ರಹವನ್ನು ಅನುಸಂಧಾನಮಾಡುತ್ತ ನಮ್ಮ ದೇಹದಲ್ಲೂ ನೆಲೆಸಿರುವ ಅಂತಹ ಕಲಿಯನ್ನು ನಿಗ್ರಹಿಸಿ, ಅವನಿಂದ ಅಭಿಮಾನ್ಯಮಾನಗಳಾದ ಅಜ್ಞಾನಾದಿಗಳನ್ನು ದೂರಮಾಡಿ, ಸಜ್ಞಾನವನ್ನು ಅನುಗ್ರಹಿಸಲು ಪ್ರಾರ್ಥಿಸಲಾಗುವುದು. ಹೀಗೆ ವಾಯುಸ್ತುತಿಯ ಈ ಪದ್ಯದ ಪೂರ್ವಾರ್ಧದ ಹಾಗೂ ಉತ್ತರಾರ್ಧದ ವಿಚಾರಣೆಗಳು ಪರಸ್ಪರ ಸಂಗತಗಳಾಗಿಯೇ ಇವೆ.

ವಿದ್ಯಾಭಂಡಾರ

ನಿಧಿ – ೭

ಸ್ವಮತವಿಮರ್ಶೆ



"ದೈಹಿಕವಾಗಿಯಾಗಲೀ ವಾಚಿಕವಾಗಿಯಾಗಲೀ ಮಾನಸಿಕವಾಗಿಯಾಗಲೀ ನಮ್ಮಿಂದ ನಡೆಯುವ ಕ್ರಿಯೆಗಳಿಗೆಲ್ಲ ಸ್ವತಂತ್ರಕರ್ತೃ ಭಗವಂತನೇ ಆಗಿರುವನೆಂದು ಭಾವಿಸಿ ಅವೆಲ್ಲವುಗಳನ್ನು ಅವನಿಗೆ ಸಮರ್ಪಿಸುವುದೇ ಕ್ರಿಯಾದ್ವೈತವೆನಿಸುವುದು. ತಾನು ಹಾಗೂ ತನ್ನ ಬಂಧುಗಳೆಲ್ಲ ಭಗವದಧೀನರೆಂಬ ವಿವೇಚನೆ ದ್ರವ್ಯಾದ್ವೈತವೆನಿಸಿದೆ. ಭಗವದ್ಗೀತೆ ವರ್ಣಿಸುತ್ತಿರುವ ಅದ್ವೈತವೆಂದರೆ ಇಂತಹ ಕ್ರಿಯಾದ್ವೈತ ಹಾಗೂ ದ್ರವ್ಯಾದ್ವೈತ."

೭. ೧. ರಾಜಸೂಯಯಾಗದ ನಿರ್ಣಯ

ರಾಜಸೂಯಯಾಗವನ್ನು ಆಚರಿಸಲು ನಿರ್ಧರಿಸಿದ ಧರ್ಮರಾಜನಿಗೆ ಶ್ರೀಕೃಷ್ಣನು ಅದನ್ನು ಅವಶ್ಯ ಕರ್ತವ್ಯವೆಂದು ಪ್ರತಿಪಾದಿಸಿದನು. ಅದರೊಂದಿಗೆ 'ಜರಾಸಂಧನಂತಹ ವೀರಾಗ್ರಣಿಯನ್ನು ಮಣಿಸುವುದು ಕಷ್ಟ. ಅವನನ್ನು ಸಂಹರಿಸದೆ ರಾಜಸೂಯಯಾಗ ಮಾಡುವುದೆಂತು?' ಎಂದು ಹೇಳುವನು.

ಈ ಸಂದರ್ಭದಲ್ಲಿ ಶ್ರೀಕೃಷ್ಣನೇ ಜರಾಸಂಧನಿಗೆ ಚಂಡಕೌಶಿಕಮುನಿಯ ವರದಿಂದ ಬ್ರಹ್ಮ, ಈಶರ ವರಗಳಿಂದ ಬಂದಿರುವ ಅಪಾರವಾದ ಬಲ, ಬಲರಾಮನಿಂದಲೂ ಅವಧ್ಯತ್ವ ಅಜೇಯತ್ವಗಳನ್ನು ತಿಳಿಸುವುದರ ಜೊತೆಯಲ್ಲಿ, ಅವನಿಗಿರುವ ಅತಿಥಿಸತ್ಕಾರದ ಶ್ರದ್ಧೆ, ಬ್ರಾಹ್ಮಣರಲ್ಲಿಯ ಗೌರವ, ಪ್ರಜೆಗಳನ್ನು ಸುಖಪಡಿಸುವ ಉತ್ತಮ ಆಡಳಿತ ಮುಂತದ ಮಹಿಮೆಗಳನ್ನು ವರ್ಣಿಸುವನು. ವ್ಯಾಸರು ಭಗವಂತನ ಮಹಿಮೆಯನ್ನು ಹೇಳುವುದನ್ನು ಬಿಟ್ಟು ಈ ಜರಾಸಂಧನ ಮಹಿಮೆಯನ್ನೇಕೆ ವಿಸ್ತಾರವಾಗಿ ತಿಳಿಸಬೇಕಿತ್ತು? ಎಂಬ ಸಂದೇಹ ಬರುತ್ತದೆ. ಅದಕ್ಕೆ ಸಮಾಧಾನ ಹೀಗಿದೆ –ಬಲರಾಮನಿಂದಲೂ ಜರಾಸಂಧನು ಅವಧ್ಯ ಎಂದು ಹೇಳಿದ ಶ್ರೀಕೃಷ್ಣ ಮುಂದೆ ಭೀಮನಿಂದ ಜರಾಸಂಧನ ಸಂಹಾರವನ್ನು ಮಾಡಿಸಿರುವನು. ಒಬ್ಬನನ್ನು ಕೊಲ್ಲಲು ಅವನಿಗಿಂತ ನೂರುಪಟ್ಟು ಬಲವಿರಬೇಕು. ಶೇಷಾವತಾರಿಯಾದ ಬಲರಾಮನಿಂದಲೂ ಅವಧ್ಯನಾದ ಜರಾಸಂಧನನ್ನು ಭೀಮನು ಸಂಹರಿಸಿದನೆಂದರೆ ಭೀಮನು ಶೇಷದೇವರಿಗಿಂತಲೂ ಬಲಜ್ಯೇಷ್ಠ ಎಂದು ಸ್ಫುಟವಾಯಿತು. ಕ್ಷತ್ರಿಯ ದೇವತೆಗಳಲ್ಲಿ ಯಾರು ಸಹಜಬಲಜ್ಯೇಷ್ಠರೋ ಅವರೇ ಅತ್ಯುತ್ತಮರು. ಬಾಹುವಿನಿಂದಲೆ ಜರಾಸಂಧನನ್ನು ಪುಡಿಗೈದು ಭೀಮನು ಅತ್ಯಧಿಕವಾದ ಸಹಜಬಲವುಳ್ಳವನು, ಆದ್ದರಿಂದಲೇ ಜೀವೋತ್ತಮನು ಎಂದು ಸಿದ್ಧವಾಯಿತು. ಶ್ರೀಕೃಷ್ಣನು ಹೇಳಿದ ಜರಾಸಂಧನ ಮಹಿಮಾವರ್ಣನೆಯ ತಾತ್ಪರ್ಯ ವಾಯುಜೀವೋತ್ತಮತ್ವವನ್ನು ತಿಳಿಸುವುದೇ ಆಗಿದೆ.

●

೭. ೨. ಸಾರ್ವಜನಿಕಸಭೆಗಳಲ್ಲಿ ತತ್ವಜ್ಞಾನಪ್ರಚಾರ

ಸಾರ್ವಜನಿಕ ಸಭೆ, ಸಮ್ಮೇಳನಗಳಲ್ಲಿ ತತ್ವಜ್ಞಾನವನ್ನು ಕುರಿತು ಉಪನ್ಯಾಸಾದಿ ದ್ವಾರಾ ಪ್ರಚಾರ ಮಾಡುವುದು ಶಾಸ್ತ್ರವಿರುದ್ಧ.

ವಿದ್ಯಾ ಹ ವೈ ಬ್ರಾಹ್ಮಣಮಾಜಗಾಮ ಗೋಪಾಯ ಮಾಂ ಶೇವಧಿಷ್ಟೇಹಮಸ್ಮಿ

ಓಂ ಅನಾವಿಷ್ಕುರ್ವನ್ ಅನ್ವಯಾತ್ ಓಂ

ಇತಿ ಗುಹ್ಯತಮಂ ಶಾಸ್ತ್ರಂ ಇದಮುಕ್ತಂ ಮಯಾನಘ ॥

ಇತ್ಯಾದಿ ಶ್ರುತಿ-ಸೂತ್ರ-ಗೀತೆಗಳು ತತ್ವವನ್ನು ಬಹಿರಂಗವಾಗಿ ಹೇಳಬಾರದು ಎಂಬ ಮಾತನ್ನು ಪುಷ್ಟೀಕರಿಸುತ್ತವೆ. ಅಲ್ಲದೇ, ಸರ್ಪಕ್ಕೆ ಕುಡಿಸಿದ ಹಾಲು ವಿಷವಾಗಿ ಪರಿಣಮಿಸಿ ಜನರಿಗೆ ಬಾಧೆ ಉಂಟಾಗುವಂತೆ ತತ್ವಜ್ಞಾನ ಬಹಿರಂಗವಾಗಿ ಉಪದೇಶ ಮಾಡಲ್ಪಟ್ಟರೆ ಜನರಿಗೆ ಬಾಧೆ ಉಂಟಾಗುವಂಥೆ ತತ್ವಜ್ಞಾನ ಬಹಿರಂಗವಾಗಿ ಉಪದೇಶ ಮಾಡಲ್ಪಟ್ಟರೆ ಸಜ್ಜನರಿಗೆ ಬಾಧೆ ತರುವ ಸಂಭವವಿದೆ. ಆದುದರಿಂದ ಬಹಿರಂಗ ಉಪದೇಶವು ನಿಷಿದ್ಧವಾಗಿರುತ್ತದೆ. ಮತ್ತು ಸಭೆಯಲ್ಲಿ ಸ್ತ್ರೀಯರೂ ಇರುತ್ತಾರೆ. ಅವರು ತತ್ತ್ವಜ್ಞಾನಕ್ಕೆ ಯೋಗ್ಯರಾದರೂ-

ಸ್ತ್ರೀಶೂದ್ರಬ್ರಹ್ಮಬಂಧೂನಾಂ ತ್ರಯೀ ನ ಶ್ರುತಿಗೋಚರಾ

ಮೊದಲಾದ ವಾಕ್ಯಗಳಿಂದ ಅವರಿಗೆ ವೇದಾಧಿಕಾರವು ನಿಷಿದ್ಧವಾಗಿದೆ. ಹೀಗಿರುವಾಗ ಸ್ತ್ರೀಯರೂ ಇರತಕ್ಕ ಸಭೆಯಲ್ಲಿ 'ತತ್ವಮಸಿ, ಅಹಂ ಬ್ರಹ್ಮಾಸ್ಮಿ' ಇತ್ಯಾದಿ ಶ್ರುತಿಗಳ ಅರ್ಥ ವಿಚಾರಾತ್ಮಕ ಉಪನ್ಯಾಸ ಮಾಡುವುದು ಸರಿಯಲ್ಲ.

ಈ ಆಕ್ಷೇಪಕ್ಕೆ ಈ ರೀತಿಯಾಗಿ ಸಮಾಧಾನವಿದೆ-

ಬಹಿರಂಗವಾಗಿ ತತ್ವಜ್ಞಾನ ಪ್ರಸಾರಮಾಡದೇ ಇದ್ದರೆ ಜಗತ್ತಿನಲ್ಲಿಯ ಯೋಗ್ಯ ಜೀವಿಗಳಿಗೆ ತತ್ವದ ಅರಿವು ಹೇಗೆ ಆಗಬೇಕು? ಆದುದರಿಂದ ಮುಮುಕ್ಷು ಜೀವಿಗಳ ಉದ್ಧಾರಕ್ಕಾಗಿ ಬಹಿರಂಗವಾಗಿ ಪ್ರಚಾರ ಮಾಡಬೇಕು. ಶ್ರೀಮದಾಚಾರ್ಯರೂ-

ಭೂಯೋಬೋಧಸ್ತತೋ ಭೂಯೋ ವ್ಯಾಚಖ್ಯೌ ಭಾಷ್ಯಮದ್ಭುತಮ್ ।

ಗ್ರಾಮೇ ಗ್ರಾಮೀಣಸಾಮಾನ್ಯೇ ವಸನ್ ತತ್ರಾಮರಾಲಯೇ ॥

ಎಂಬುದಾಗಿ ಹೇಳಿದಂತೆ ಬಹಿರಂಗ ಸಭೆಯಲ್ಲಿ ತಾವು ರಚಿಸಿದ ಭಾಷ್ಯದ ಪ್ರವಚನ ಮಾಡಿದ್ದಾರೆ. ಬ್ರಹ್ಮದೇವರು ಕೂಡ ಇಂದ್ರ, ವಿರೋಚನ ಇವರಿಬ್ಬರಿಗೆ ತತ್ವೋಪದೇಶ ಮಾಡಿದ್ದು ಉಪನಿಷತ್ತಿನಲ್ಲಿ ಬಂದಿದೆ. ಅದರಲ್ಲಿ ವಿರೋಚನನು ದೈತ್ಯನಾದ್ದರಿಂದ ತತ್ವಜ್ಞಾನಕ್ಕೆ ಅಯೋಗ್ಯನಾಗಿದ್ದಾನೆ. ಶ್ರೀಕೃಷ್ಣನು ಕೌರವ-ಪಾಂಡವರ ಸಂಧಾನಕ್ಕೋಸ್ಕರ ಹಸ್ತಿನಾವತಿಗೆ ಹೋಗಿ ಅಯೋಗ್ಯರಾದ ಕೌರವರು ಇರುವ ಸಭೆಯಲ್ಲಿ ಅನೇಕ ತತ್ವಗಳನ್ನು ಉಪದೇಶ ಮಾಡಿದ್ದಾನೆ. ಪುರಂದರದಾಸರೇ ಮೊದಲಾದ ಮಹನೀಯರು ಪ್ರಾಕೃತ ಭಾಷೆಯಲ್ಲಿ ಪದಗಳನ್ನು ರಚಿಸಿ ಸಾರ್ವಜನಿಕವಾಗಿ ತತ್ವಪ್ರಚಾರ ಮಾಡಿದ್ದಾರೆ. ಆದುದರಿಂದ ಬಹಿರಂಗವಾಗಿ ಉಪದೇಶ ಮಾಡುವುದು ನಿಷಿದ್ಧವಾಗಲಾರದು.

ಇನ್ನು ಮಠ ದೇವಾಲಯಗಳಲ್ಲಿ, ಪೂಜಾಕಾಲದಲ್ಲಿ, ಬೀದಿಗಳಲ್ಲಿ ಉತ್ಸವಾದಿ ಹೊರಡುವಾಗ ಉಚ್ಚಧ್ವನಿಯಿಂದ ವೇದಪಾರಾಯಣ ಮಾಡುವುದು ಶಾಸ್ತ್ರಸಮ್ಮತವಾದುದು. ಅದು ರೂಢಿಯಲ್ಲಿಯೂ ಬಂದಿದೆ. ಮನೆಯಲ್ಲಿ ಮಕ್ಕಳಿಗೆ ತಂದೆಯು ಉಪನಯನವಾದ ಅನಂತರ ವೇದಗಳನ್ನು ಅಧ್ಯಯನ ಮಾಡಿಸುವಾಗಲೂ

ಮನೆಯಲ್ಲಿರತಕ್ಕ ಸ್ತ್ರೀಯರೂ ವೇದಾಧಿಕಾರ ಇಲ್ಲದೇ ಇದ್ದರೂ ಅವುಗಳನ್ನು ಕೇಳುತ್ತಾರೆ. ಆದುದರಿಂದ ಸ್ತ್ರೀಯರ ಕಿವಿಗೆ ಶ್ರುತಿಯು ಕೇಳಿಸಬಾರದೆಂಬುದು ಅಸಾಧ್ಯವಾದುದು.

ಸ್ತ್ರೀಯರಿಗೆ ಸಂಸ್ಕೃತ ಭಾಷೆ ಕಲಿಯುವುದು ನಿಷಿದ್ಧವಲ್ಲ. ಆದುದರಿಂದ ಸಂಸ್ಕೃತ ಕಲಿತಿದ್ದರೆ ಮೇಲೆ ಹೇಳಿದ ಸಂದರ್ಭಗಳಲ್ಲಿ ವೇದವಾಕ್ಯಗಳು ಕಿವಿಗೆ ಬೀಳುವಾಗ 'ತತ್ವಮಸಿ' ಅಹಂ ಬ್ರಹ್ಮಾಸ್ಮಿ' ಮುಂತಾದ ಶ್ರುತಿಗಳಿಂದ ಅವರಿಗೆ ವಿಪರೀತಜ್ಞಾನ ಬರುವ ಪ್ರಸಂಗವೂ ಇರುವುದು. ಅದರ ನಿವಾರಣೆ ಮಾಡದೇ ಅವರಿಗೆ ಪೌರುಷೇಯ ಗ್ರಂಥಗಳಿಂದ ತತ್ವಜ್ಞಾನ ಬರಲಾರದು. ತತ್ವಜ್ಞಾನವಿಲ್ಲದುದರಿಂದ ಮೋಕ್ಷವು ಪ್ರಾಪ್ತವಾಗದೇ ಹೋಗಬಹುದು. ಆದುದರಿಂದ ಅವರ ವಿಪರೀತಜ್ಞಾನ ನಿವಾರಣೆಗಾಗಿ ಸ್ತ್ರೀಯರೂ ಇರತಕ್ಕ ಸಭೆಯಲ್ಲಿ 'ತತ್ವಮಸಿ, ಅಹಂ ಬ್ರಹ್ಮಾಸ್ಮಿ' ಇತ್ಯಾದಿ ಶ್ರುತ್ಯರ್ಥವಿಚಾರ ಉಪನ್ಯಾಸ ಮಾಡುವುದು ಅಗತ್ಯವಾದುದು.

ಹೀಗಿರುವಾಗ ಸರ್ವಸಾಧಾರಣವಾಗಿ ತತ್ವಜ್ಞಾನ ಪ್ರಸಾರ ಮಾಡಬಾರದು, ಸ್ತ್ರೀಯರಿಗೆ ವೇದ ಕೇಳಿಸಬಾರದು ಎಂಬ ನಿಷೇಧ ವಚನಗಳಿಗೆ ಏನು ಅಭಿಪ್ರಾಯ ವೆಂಬುದನ್ನು ವಿಚಾರ ಮಾಡಬೇಕು. ಈ ಕೆಳಗಿನ ಉದಾಹರಣೆಯಿಂದ ಇದರ ಅಭಿಪ್ರಾಯವನ್ನು ನಾವು ತಿಳಿಯಬಹುದು.

ಪುರಾತನ ಕಾಲದಲ್ಲಿ ವರುಣದೇವನು ತನ್ನ ಮಗಳಾದ ಲಕ್ಷ್ಮೀದೇವಿಗೆ ಸ್ವಯಂ ವರ ಮಾಡಿದನು. ಹಾಗೆಯೇ ಜನಕರಾಜನು ತನ್ನ ಮಗಳಾದ ಲಕ್ಷ್ಮೀರೂಪಳಾದ ಸೀತೆಗೆ ಸ್ವಯಂವರ ಮಾಡಿದನು. ಕುಂಡಿನ ದೇಶದ ರಾಜನಾದ ಭೀಷ್ಮಕನು ತನ್ನ ಮಗಳಾದ ಲಕ್ಷ್ಮೀರೂಪಳಾದ ರುಕ್ಮಿಣಿಗೆ ಸ್ವಯಂವರ ಮಾಡಿದನು. ಆದರೆ ಶ್ರೀಕೃಷ್ಣ ಪರಮಾತ್ಮನು ಭೀಷ್ಮಕ ರಾಜನಿಗೆ ರುಕ್ಮಿಣೀಸ್ವಯಂವರ ಮಾಡಿದರೆ ಅಧೋಗತಿ ಯಾದೀತೆಂದು ಬೋಧಿಸಿದ್ದಾನೆ. ವರುಣನು ಮತ್ತು ಜನಕರಾಜನು ಸ್ವಯಂವರವನ್ನು ಮಾಡಿದರೂ ಅವರಿಗೆ ಪರಮಾತ್ಮನು ಈ ರೀತಿಯಾಗಿ ಬೋಧಿಸಲಿಲ್ಲ. ಹಾಗಾದರೆ ಭೀಷ್ಮಕ ರಾಜನು ಸ್ವಯಂವರ ಮಾಡಿದ್ದರಲ್ಲಿ ತಪ್ಪು ಏನಾಯಿತೆಂದು ಪರಿಶೀಲಿಸಿದರೆ ಶ್ರೀಮದಾಚಾರ್ಯರು ನಿರ್ಣಯಗ್ರಂಥದಲ್ಲಿ ಈ ರೀತಿಯಾಗಿ ಉತ್ತರವನ್ನು ಹೇಳಿದ್ದಾರೆ. ವರುಣನಿಗೆ ಮತ್ತು ಜನಕರಾಜನಿಗೆ ಸ್ವಯಂವರ ಮಾಡುವ ಕಾಲಕ್ಕೆ ಶ್ರೀಲಕ್ಷ್ಮೀದೇವಿಯು ಶ್ರೀನಾರಾಯಣನನ್ನೇ ಹಾಗೂ ಸೀತಾದೇವಿಯು ಶ್ರೀರಾಮ ಚಂದ್ರನನ್ನೇ ವರಿಸಬೇಕೆಂಬ ಬಲವಾದ ಇಚ್ಛೆ ಇದ್ದಿತಲ್ಲದೇ ಖಚಿತವಾಗಿ ಅವಳು ಅವರನ್ನೇ ವರಿಸುತ್ತಾಳೆಂಬ ವಿಶ್ವಾಸವಿತ್ತು. ಆದುದರಿಂದ ವರುಣನಿಗೆ ಹಾಗೂ ಜನಕರಾಜನಿಗೆ ದೋಷ ಬರಲಿಲ್ಲ. ಆದರೆ ಭೀಷ್ಮಕ ರಾಜನಿಗೆ ಮಾತ್ರ ರುಕ್ಮಿಣೀ ದೇವಿಯು ಶ್ರೀಕೃಷ್ಣನನ್ನೇ ವರಿಸಬೇಕೆಂಬ ಗಾಢವಾದ ಉದ್ದೇಶವು ಇರಲಿಲ್ಲ. ಅದು ಅವನ ಅಪರಾಧವಾಯಿತು. ಆದುದರಿಂದ ಶ್ರೀಕೃಷ್ಣಪರಮಾತ್ಮನು ಅವನಿಗೆ ಹಾಗೆ ಮಾಡಬಾರದೆಂದು ಉಪದೇಶ ಮಾಡಿದನು.

ಪ್ರಕೃತದಲ್ಲಿ 'ಯಾ ದೇವೀ ಸರ್ವಭೂತೇಷು ವಿದ್ಯಾರೂಪೇಣ ಸಂಸ್ಥಿತಾ' ಎಂದು ಲಕ್ಷ್ಮೀದೇವಿಯು ವಿದ್ಯಾಭಿಮಾನಿನಿಯಾದ್ದರಿಂದ ವಿದ್ಯಾರೂಪಳೆಂದು ಹೇಳಲ್ಪಟ್ಟಿದ್ದಾಳೆ. ಆದುದರಿಂದ ವಿದ್ಯಾಭಿಮಾನಿದೇವತೆಯಾದ ಲಕ್ಷ್ಮೀದೇವಿಯ ಸ್ವಯಂವರ ವಿಷಯದಲ್ಲಿ ಶ್ರೀಮದಾಚಾರ್ಯರು ಹೇಳಿದ ನಿರ್ಣಯವನ್ನೇ ವಿದ್ಯಾಪ್ರಚಾರ ಮಾಡುವ ವಿಷಯದಲ್ಲಿಯೂ ಇಟ್ಟುಕೊಳ್ಳಬಹುದು. ಬಹಿರಂಗವಾದ ವಿದ್ಯಾಪ್ರಚಾರವೂ ಕನ್ಯೆಯ ಸ್ವಯಂವರವೂ ಒಂದೇ ರೀತಿಯಾಗಿದೆ. ಲಕ್ಷ್ಮಿಗೆ ಸ್ವಯಂವರ ಮಾಡಿದರೂ ಇವಳು ಸಾಕ್ಷಾತ್ ಶ್ರೀನಾರಾಯಣನಿಗೆ ಯೋಗ್ಯಳು, ಅವನನ್ನೇ ಇವಳು ಸ್ವೀಕರಿಸಲಿ ಎಂಬ ಉದ್ದೇಶದಿಂದ ಸ್ವಯಂವರ ಮಾಡಿದುದರಿಂದ ಹೇಗೆ ದೋಷ ಬರಲಿಲ್ಲವೋ ಅದೇ ರೀತಿಯಾಗಿ ಬಹಿರಂಗವಾಗಿ ವಿದ್ಯಾಪ್ರಚಾರ ಮಾಡುವಾಗ ಈ ವಿದ್ಯೆಯು ಸಾತ್ವಿಕ ಜೀವಿಗಳಿಗೆ ಮಾತ್ರವೇ ಯೋಗ್ಯ. ಅವರು ಮಾತ್ರವೇ ಇದನ್ನು ಹೊಂದಲಿ ಎಂಬ ಉದ್ದೇಶವನ್ನಿಟ್ಟುಕೊಳ್ಳಬೇಕು. ಆಗ ದೋಷವು ಬರುವುದಿಲ್ಲ. ಯಾರು ಬೇಕಾದರೂ ಈ ವಿದ್ಯೆಯನ್ನು ಹೊಂದಲಿ ಎಂಬ ಉದ್ದೇಶದಿಂದ ಪ್ರಚಾರ ಮಾಡಿದರೆ ಭೀಷ್ಮಕರಾಜನು ಮಾಡಿದ ಸ್ವಯಂವರದಂತೆ ತಪ್ಪಾಗುವುದು.

ಈ ತರಹದ ಉದ್ದೇಶಮಾತ್ರದಿಂದ ಏನಾಗುತ್ತದೆ? ಒಂದು ಸಭೆಯಲ್ಲಿ ಕೆಲವರನ್ನೇ ಲಕ್ಷ್ಯವಾಗಿಟ್ಟುಕೊಂಡು ನಿಂದೆ ಮಾಡಿದರೂ ಆ ನಿಂದೆಯು ಆ ಸಭೆಯಲ್ಲಿರತಕ್ಕ ಇತರರಿಗೂ ಅನ್ವಯಿಸುವ ಹಾಗೆ ಇದ್ದರೆ ಇತರರಿಗೂ ಸಿಟ್ಟು ಬರುವಂತೆ ಯೋಗ್ಯಜೀವರನ್ನು ಮಾತ್ರ ಉದ್ದೇಶಿಸಿ ಬಹಿರಂಗವಾಗಿ ಉಪದೇಶ ಮಾಡಿದರೂ ಅಯೋಗ್ಯ ಜೀವಿಗಳಿಗೂ ತತ್ವಜ್ಞಾನ ಬರುವ ಪ್ರಸಂಗವಿದೆ. ಆದುದರಿಂದ ಉದ್ದೇಶಮಾತ್ರದಿಂದ ಏನೂ ವಿಶೇಷವಿಲ್ಲವೆಂದು ಶಂಕೆ ಬರಬಹುದು. ಅದಕ್ಕೆ ಈ ರೀತಿ ಸಮಾಧಾನವಿದೆ–

ಉಪದೇಶ ಕೊಡತಕ್ಕ ಗುರುಗಳು ಶಿಷ್ಯನ ಸೇವೆಯಿಂದ ಪ್ರಸನ್ನರಾಗಿ ಅವನಿಗೆ ತತ್ವಜ್ಞಾನ ಬರಲಿ ಎಂದು ಅನುಗ್ರಹಪೂರ್ವಕ ಉಪದೇಶ ಮಾಡಿದರೆ ಮಾತ್ರ ಆ ಶಿಷ್ಯನಿಗೆ ತತ್ವಜ್ಞಾನ ಬರುತ್ತದೆ. ಇಲ್ಲವಾದರೆ ತತ್ವಜ್ಞಾನವು ಬರುವುದಿಲ್ಲ. ಅನುಗ್ರಹವಿಲ್ಲದೇ ಉಪದೇಶ ಮಾಡಿದರೂ ಜ್ಞಾನವು ಬರಲಾರದು ಎಂದು 'ಓಂ ಪ್ರದಾನದೇವ ತದುಕ್ತಮ್ ಓಂ' ಎಂಬ ಸೂತ್ರದಲ್ಲಿ ನಿರ್ಣಯ ಮಾಡಿದ್ದಾರೆ.

ಆದುದರಿಂದ ಚತುರ್ಮುಖ ಬ್ರಹ್ಮದೇವರು ಇಂದ್ರದೇವರಿಗೆ ಹಾಗೂ ವಿರೋಚನ ಎಂಬ ದೈತ್ಯನಿಗೆ ಒಂದೇ ಸಲ ಒಟ್ಟಿಗೆ ಉಪದೇಶ ಕೊಟ್ಟರೂ ವಿರೋಚನನಿಗೆ ತತ್ವಜ್ಞಾನ ಬರಲಿ ಎಂಬ ಉದ್ದೇಶರೂಪವಾದ ಅನುಗ್ರಹವಿಲ್ಲದ ಕಾರಣ ಅವನಿಗೆ ತತ್ವಜ್ಞಾನವು ಬರಲಿಲ್ಲ. ಇಂದ್ರದೇವರ ಮೇಲೆ ಅನುಗ್ರಹವಿದ್ದ ಕಾರಣ ಅವರಿಗೆ ತತ್ವಜ್ಞಾನವು ಬಂದಿತು ಎಂದು ಉಪನಿಷತ್ತಿನಲ್ಲಿ ಹೇಳಿದ್ದಾರೆ.

ಆದುದರಿಂದ ಉಪದೇಶ ಮಾಡುವಾಗ ಎಲ್ಲರಿಗೂ ತತ್ವಜ್ಞಾನವಾಗಲಿ ಎಂಬ ಉದ್ದೇಶದಿಂದ ಬಹಿರಂಗವಾಗಿ ತತ್ವಜ್ಞಾನಪ್ರಚಾರ ಮಾಡಬಾರದು. ಯೋಗ್ಯ

ಜೀವಿಗಳಿಗೆ ಮಾತ್ರ ತತ್ವಜ್ಞಾನವಾಗಲಿ ಎಂಬ ಉದ್ದೇಶದಿಂದ ಬಹಿರಂಗವಾಗಿಯೂ ತತ್ವಜ್ಞಾನ ಉಪದೇಶ ಮಾಡುವುದು ಯುಕ್ತವಾದುದೆಂದು ಸಿದ್ಧವಾಗುತ್ತದೆ.

ಸ್ತ್ರೀಯರಿಗೆ ಶ್ರುತಿಯಲ್ಲಿ ಕೇಳಿಸಲೇ ಬಾರದೆಂದು ಹಿಂದೆ ವಿವರಿಸಿದ ಪ್ರಕಾರ ಅಸಾಧ್ಯವಾದುದರಿಂದ ಶ್ರುತಿಯನ್ನು ಅವರಿಗೆ ಕೇಳಿಸಬಾರದೆಂಬ ಶಾಸ್ತ್ರವಚನಕ್ಕೆ ಅಭಿಪ್ರಾಯವನ್ನು ಬೇರೆ ಹೇಳಬೇಕು. ಅದೇನೆಂದರೆ ಸಂಸ್ಕೃತ ಬಲ್ಲವರಾದ ಸ್ತ್ರೀಯರಿಗೆ ತತ್ವಮಸಿ ಇತ್ಯಾದಿಗಳಿಂದ ವಿಪರೀತಜ್ಞಾನ ಬಂದಿದ್ದರೆ ಆ ವಿಪರೀತ ಜ್ಞಾನ ನಿರಾಸಾರ್ಥಕವಾಗಿ ಶ್ರುತ್ಯರ್ಥವಿಚಾರಾತ್ಮಕ ಉಪನ್ಯಾಸಗಳನ್ನು ಅವರನ್ನು ಕುರಿತು ಮಾಡಬಹುದಾದರೂ ಅವರಿಗೆ ತತ್ವಜ್ಞಾನಜನಕವಾದ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ವೇದವನ್ನು ಹೇಳಬಾರದು. ಅವರಿಗೆ ತತ್ವಜ್ಞಾನವಾಗುವುದಕ್ಕೋಸ್ಕರ ಕೇವಲ ಭಾರತಾದಿ ಗ್ರಂಥಗಳನ್ನೇ ಹೇಳಬೇಕು ಎಂಬ ಅಭಿಪ್ರಾಯ ಸೂಕ್ತವಾಗುತ್ತದೆ.

೭. ೪. ಮಧ್ವವಿಲಾಸ ಯಾರ ಕೃತಿ?

ಶ್ರೀಮದಾನಂದತೀರ್ಥ ಚರಿತ್ರೆಯ ಕುರಿತು ಅಧಿಕೃತವಾಗಿ ಹೊರಟ ಕೃತಿ 'ಶ್ರೀ ಸುಮಧ್ವವಿಜಯ'. ಶ್ರೀಮದಾಚಾರ್ಯರ ಅತ್ಯಂತ ಪ್ರೀತ್ಯಾಸ್ಪದರಾದ ಸಾಕ್ಷಾಚ್ಛಿಷ್ಯರಲ್ಲಿ ಒಬ್ಬರಾದ ತ್ರಿವಿಕ್ರಮಪಂಡಿತಾಚಾರ್ಯರ ಸುಪುತ್ರರಾದ ನಾರಾಯಣಪಂಡಿತಾಚಾರ್ಯರಿಂದ ರಚಿತವಾದ ಕೃತಿ ಇದು ಎಂಬುದು ಗಮನಾರ್ಹ. ನಾರಾಯಣ ಪಂಡಿತಾಚಾರ್ಯರಿಗೆ ಶ್ರೀಮದಾಚಾರ್ಯರ ನೇರ ಸಂಪರ್ಕ ಬಹಳಷ್ಟು ದೊರೆತಿದ್ದಿರಲಿಕ್ಕಿಲ್ಲ. ಆದರೆ ಶ್ರೀಮದಾಚಾರ್ಯರನ್ನು ಹತ್ತಿರದಲ್ಲಿ ಕಂಡಿದ್ದ, ಅವರ ಜೊತೆ ಸಾಕ್ಷಾತ್ ಸಂಪರ್ಕ ಪಡೆದಿದ್ದ, ಅವರ ವಿಶೇಷಾನುಗ್ರಹಕ್ಕೆ ಪಾತ್ರರಾಗಿದ್ದ ಅನೇಕ ಶಿಷ್ಯರ, ಅನುಯಾಯಿಗಳ, ಅಭಿಮಾನಿಗಳ ಸಂಪರ್ಕವನ್ನು ನಾರಾಯಣಪಂಡಿತಾಚಾರ್ಯರು ಹೊಂದಿದ್ದರು. ಅವರಲ್ಲೆಲ್ಲ ವಿಚಾರಿಸಿ ದೃಢಪಡಿಸಿಕೊಂಡ ಮೇಲೆ, ಅದರ ಆಧಾರದಲ್ಲಿ ಶ್ರೀಸುಮಧ್ವವಿಜಯವನ್ನು ರಚಿಸಿರುವುದಾಗಿ ನಾರಾಯಣ ಪಂಡಿತಾಚಾರ್ಯರು ತಮ್ಮ ಸುಮಧ್ವವಿಜಯಕ್ಕೆ ಬರೆದ 'ಭಾವಪ್ರಕಾಶಿಕಾ' –ಎಂಬ ಟಿಪ್ಪಣಿಯಲ್ಲಿ ಹೇಳಿಕೊಂಡಿರುವರು 'ಪ್ರಾಯೇಣ ನೈಕಮಾತ್ರೋಕ್ತಾಃ ಕಥಿತಾ ಇಹ ಸರ್ವಶಃ । ದ್ವಯೋರ್ವಕ್ತ್ರೋರ್ವಿರೋಧೇ ತು ಸ್ವೀಕೃತಾ ಪ್ರಬಲಸ್ಯ ಗೀಃ ॥ –ಯಾರೋ ಒಬ್ಬ ಹೇಳಿದಾಕ್ಷಣ ಅದನ್ನು ಇಲ್ಲಿ ಉಲ್ಲೇಖಿಸಿಲ್ಲ. ಅನೇಕ ಪುರುಷರು ನಾವು ಕಂಡಿದ್ದೇವೆ ಎಂದು ನಿಶ್ಚಿತವಾಗಿ ಹೇಳಿದ್ದನ್ನಷ್ಟೆ ಇಲ್ಲಿ ನಮೂದಿಸಲಾಗಿದೆ. ಇಬ್ಬರ ಹೇಳಿಕೆಗಳಲ್ಲಿ ಪರಸ್ಪರ ವಿರೋಧ ಬಂದಾಗ ಅವರೀರ್ವರಲ್ಲಿ ಹೆಚ್ಚು ಪ್ರಾಮಾಣಿಕನ ಮಾತನ್ನೇ ಸ್ವೀಕರಿಸಲಾಗಿದೆ.

ಇದರಿಂದಾಗಿ ಶ್ರೀಮದಾಚಾರ್ಯರ ಸಕಾಲೀನ ಪುರುಷರ ಹೇಳಿಕೆಗಳಿಗನುಗುಣವಾಗಿ ಸುಮಧ್ವವಿಜಯ ರಚಿತವಾಗಿದೆ ಎಂದು ಸ್ಪಷ್ಟವಾಗುವುದು. ಇದಕ್ಕೆ ಬದಲಾಗಿ ಸುಮಧ್ವವಿಜಯದ ರಚನೆಗೆ ಬೇರೊಂದು ಕೃತಿಯೇ ಮುಂತಾದ ಬೇರೆ ಯಾವುದಾದರೂ ಆಧಾರವಿದ್ದಿದ್ದಲ್ಲಿ ಅದನ್ನು ನಾರಾಯಣಪಂಡಿತಾಚಾರ್ಯರು ಅವಶ್ಯವಾಗಿ ಉಲ್ಲೇಖಿಸುತ್ತಿದ್ದರು. ಅವರಿಗೆ ಶ್ರೀಮದಾಚಾರ್ಯರ ಚರಿತ್ರೆಯನ್ನು ಪ್ರಾಮಾಣಿಕವಾಗಿ ಮಂಡಿಸುವುದರಲ್ಲಿ ಹಾಗೂ ತಾವು ಮಂಡಿಸಿದ ಚರಿತ್ರೆಯ ಬಗ್ಗೆ ಪ್ರಾಮಾಣಿಕತೆಯ ನಿಶ್ಚಯವನ್ನುಂಟುಮಾಡುವುದರಲ್ಲಿ ಹೆಚ್ಚು ಒಲವೇ ಹೊರತು ತಮ್ಮ ರಚನೆ ಅಪೂರ್ವವೆಂದು ಹೇಳಿಕೊಳ್ಳುವುದರಲ್ಲಿ ಅಭಿಪ್ರಾಯವಿಲ್ಲ ಎಂಬುದನ್ನು ಭಾವಪ್ರಕಾಶಿಕಾದ ಅವರ ಮೇಲಿನ ಮಾತು ಸ್ಪಷ್ಟೀಕರಿಸಬಲ್ಲುದು. ಸುಮಧ್ವವಿಜಯದ ಹತ್ತನೇ ಸರ್ಗದಲ್ಲಿ ಆಚಾರ್ಯರ ಶಿಷ್ಯರೊಬ್ಬರು ಜನರೆದುರು ತನ್ನ ಗುರುಗಳ ಚರಿತ್ರೆಯನ್ನು ಕಾವ್ಯದಂತೆ ತಿಳಿಸಿದರೆಂದು, ಪ್ರಸ್ತಾವಿಸಿ ದಶಮತಿಶಿಷ್ಯಃ ಕಶ್ಚಿಚ್ಚುಭಜನತಾಯೈ । ಕುತೂಹಲನತಾಯೈ ವಿವಿಧಸುವೃತ್ತಂ ವಾಕ್ಯಂ ಕಾವ್ಯಮಿವೋಚೇ ಸನಾಯಕಸ್ತವಕಮ್' -ಅದರ ಆಧಾರದ ಮೇಲೆ ಅಥವಾ ಅದೇ ಆನುಪೂರ್ವಿಯಲ್ಲಿ ಆ ಎಲ್ಲ ಘಟನೆಗಳನ್ನು ತಾವು ಹೇಳಿಕೊಂಡಿರುವುದನ್ನು ಉಲ್ಲೇಖಿಸಿರುವುದು ಈ ನಿಟ್ಟಿನಲ್ಲಿ ಅವರ ಪ್ರಾಮಾಣಿಕತೆಯನ್ನು ದೃಢಪಡಿಸುವುದು.

ಶ್ರೀಮದಾಚಾರ್ಯರ ಚರಿತ್ರೆಗೆ ಸಂಬಂಧಿಸಿದ ಸಕಲ ಮಾಧ್ವರಿಗೂ ಪರಿಚಿತವಾದ ಏಕೈಕಗ್ರಂಥ ಶ್ರೀ ಸುಮಧ್ವವಿಜಯ. ಆದರೆ ಇತ್ತೀಚೆಗೆ ಶ್ರೀ ಮಧ್ವವಿಲಾಸ ಎಂಬ ಹೊಸ ಗ್ರಂಥವೊಂದು ಪ್ರಚಾರಕ್ಕೆ ಬಂದಿದೆ. ಇದನ್ನು ಆಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ಸತ್ಯತೀರ್ಥರು ಬರೆದರೆನ್ನಲಾಗುತ್ತಿದೆ. ಅದು ನಿಜವೇ ಆಗಿದ್ದರೆ ಶ್ರೀ ಸುಮಧ್ವವಿಜಯಕ್ಕಿಂತಲೂ ಹೆಚ್ಚಿನ ಪ್ರಾಶಸ್ತ್ಯ ಅದಕ್ಕೆ ದೊರೆಯಬೇಕು. ಆದರೆ ಇಂತಹ ಚರಿತ್ರೆಯ ಗ್ರಂಥವೊಂದಿರುತ್ತಿದ್ದರೆ ಶ್ರೀ ನಾರಾಯಣಪಂಡಿತಾಚಾರ್ಯರು ತಮ್ಮ ಶ್ರೀಸುಮಧ್ವವಿಜಯಕ್ಕೆ ಅದನ್ನು ಆಧಾರವನ್ನಾಗಿ ಉಲ್ಲೇಖಿಸುತ್ತಿದ್ದರು. ಅವರು ಹಾಗೆ ಮಾಡದಿರುವುದರಿಂದ ಅದು ಆ ಮೇಲೆ ಸತ್ಯತೀರ್ಥರ ಹೆಸರಿನಲ್ಲಿ ಸೃಷ್ಟಿಯಾದ ಒಂದು ಕೃತಿಯೆಂಬುದು ಸ್ಪಷ್ಟ.

●

೭. ೫. ಸುಮಧ್ವವಿಜಯದಲ್ಲಿ ಮೋಕ್ಷಸುಖದ ವರ್ಣನೆ

ಬೇರೆ ಬೇರೆ ಬಗೆಯ ಸಾಂಸಾರಿಕ ಸುಖಭೋಗಗಳಲ್ಲಿ ಮುಳುಗಿದ ಸಾತ್ವಿಕ ಜೀವರು ಮೋಕ್ಷ ಪುರುಷಾರ್ಥಕ್ಕಾಗಿ ಯತ್ನಿಸಬೇಕೆಂದರೆ, ಮೋಕ್ಷಪುರುಷಾರ್ಥಕ್ಕೆ ಮುಖ್ಯ ಸಾಧನವಾದ ಶ್ರೀಮದಾಚಾರ್ಯರ ಶಾಸ್ತ್ರದ ಶ್ರವಣ ಮನನಾದಿಗಳಲ್ಲಿ ತೊಡಗಬೇಕೆಂದರೆ ಮೋಕ್ಷದಲ್ಲಿಯೂ ಸಂಸಾರದಲ್ಲಿ ಅನುಭವಿಸುತ್ತಿರುವಂತೆಯೇ ಸುಖ ಭೋಗಗಳಿವೆ ಎಂದು ಮನದಟ್ಟಾಗಬೇಕು. 'ಯಂ ಯಂ ಸುಖೀ

ಕಾಮಯತೇಽರ್ಥಮತ್ರ ಸಂಕಲ್ಪಮಾತ್ರಾತ್ ಸಕಲೋಽಪಿ ಸ ಸ್ಯಾತ್' –ಮುಕ್ತಿಯಲ್ಲಿ ಯಾವುದನ್ನು ಬಯಸುವನೋ ಅವೆಲ್ಲವನ್ನು ಸಂಕಲ್ಪಮಾತ್ರದಿಂದ ಹೊಂದುವನೆಂಬುದಾಗಿ ಸ್ಥೂಲವಾಗಿ ತಿಳಿಸಿದರೆ ಸಾಲದು. ಸಾಂಸಾರಿಕ ಸುಖಭೋಗಗಳಿಗೆ ಸದೃಶಗಳಾದ ಭೋಗಗಳು ಅಲ್ಲಿವೆ ಎಂದು ನಿರ್ದಿಷ್ಟವಾಗಿ ನಿರೂಪಿಸಬೇಕಾಗುತ್ತದೆ. ಅದಕ್ಕಾಗಿಯೇ ತ್ರಿವಿಕ್ರಮಪಂಡಿತಾಚಾರ್ಯರು ಮಂತ್ರತುಲ್ಯವಾದ ವಾಯುಸ್ತುತಿಯಲ್ಲೂ 'ಯೇಽಮುಂ ಭಾವಂ ಭಜಂತೇ.....' ಇತ್ಯಾದಿ ಪದ್ಯಗಳಲ್ಲಿ ಮುಕ್ತಿಯ ಸುಖಭೋಗಗಳನ್ನು ವರ್ಣಿಸಿದ್ದಿದೆ. ಅದರಂತೆ ನಾರಾಯಣಪಂಡಿತಾಚಾರ್ಯರೂ ಸುಮಧ್ವವಿಜಯದ ಹನ್ನೊಂದನೆಯ ಸರ್ಗದಲ್ಲಿ ಮೋಕ್ಷಸುಖ ಭೋಗವನ್ನು ವರ್ಣಿಸಿರುವರು. ಜೊತೆಗೆ ಸಾಂಸಾರಿಕ ಸುಖಭೋಗಗಳಲ್ಲಿರುವ ಲೋಪದೋಷಗಳು ಅಲ್ಲಿ ಇಲ್ಲ ಎಂದು ಸೂಚಿಸುವುದಕ್ಕೂ ಮರೆತಿಲ್ಲ. 'ಸುರಭಿತ್ವಮೇವ ಬಹಿರಂತರಪಿ....' '....ವಿರಹ ವ್ಯಥಾಽಪಿ ನ ವಧೂವರಯೋಃ' ಇತ್ಯಾದಿ ಮಾತುಗಳಲ್ಲಿ ಮುಕ್ತಿ ಸುಖಭೋಗಗಳಲ್ಲಿಯ ವೈಶಿಷ್ಟ್ಯವನ್ನು ಅಲ್ಲಲ್ಲಿ ಸ್ಪಷ್ಟೀಕರಿಸಲಾಗಿದೆ.

ನಾರಾಯಣಪಂಡಿತಾಚಾರ್ಯರೂ ಈ ಸರ್ಗದ ಕೊನೆಯ ಪದ್ಯದಲ್ಲಿ ಆಚಾರ್ಯರ ಸೂತ್ರಭಾಷ್ಯದ ಶ್ರವಣಾದಿಗಳನ್ನು ನಡೆಸಿದ ಸಾಧಕರು ಹಿಂದೆ ತಿಳಿಸಿದ ಮುಕ್ತಿಸುಖ ಭೋಗಕ್ಕೆ ಯೋಗ್ಯರಾಗುವರೆಂದು ನಿರೂಪಿಸುವುದರ ಮೂಲಕ ಈ ಸರ್ಗದಲ್ಲಿ ನಡೆಸಿರುವ ಮೋಕ್ಷಸುಖಭೋಗದ ವರ್ಣನೆಗೆ ಆಚಾರ್ಯರ ಸೂತ್ರಭಾಷ್ಯ ಮುಂತಾದ ಶಾಸ್ತ್ರಗಳ ಅಧ್ಯಯನಾದಿಗಳಲ್ಲಿ ತೀವ್ರ ಪ್ರವೃತ್ತಿಯನ್ನುಂಟುಮಾಡುವುದೇ ಆಗಿದೆ ಎಂದು ಸೂಚಿಸಿರುವರು –ಮಹಾನಂದತೀರ್ಥಸ್ಯ ಯೇ ಭಾಷ್ಯಭಾವಂ ಮನೋವಾಗ್ಭಿರಾವರ್ತಯಂತೇ ಸ್ವಶಕ್ತ್ಯಾ । ಸುರಾದ್ಯಾ ನರಾಂತಾ ಮುಕುಂದಪ್ರಸಾದಾದಿಮಂ ಮೋಕ್ಷಮೇತೇ ಭಜಂತೇ ಸದೇತಿ'

ಈ ನಿಟ್ಟಿನಲ್ಲಿ ಪರಿಶೀಲಿಸಿದಾಗ ಸುಮಧ್ವವಿಜಯದ ಹನ್ನೊಂದನೇ ಸರ್ಗದಲ್ಲಿ ಬರುವ ವರ್ಣನೆಗಳು ಸಾಧಕನಿಗೂ ಉಪಯುಕ್ತವೆಂದು ಸ್ಪಷ್ಟವಾಗದಿರದು.

●

೭. ೬. ಪುರಾಣಾದಿಗಳ ಪುನಾರಚನೆಯ ಉದ್ದೇಶ

ವೇದಗಳು ಅಪೌರುಷೇಯ. ಸರ್ವಜ್ಞನಾದ, ನಿತ್ಯನಾದ ಭಗವಂತನ ಬುದ್ಧಿಯಲ್ಲಿ ಯಾವಾಗಲೂ ಉಪಸ್ಥಿತಗಳಾಗಿರುವ ಅವುಗಳನ್ನು ಕಲ್ಪಕಲ್ಪದಲ್ಲಿ ಪುನಃ ರಚನೆಮಾಡುವ ಆವಶ್ಯಕತೆ ಇಲ್ಲ. ಬುದ್ಧಿಯಲ್ಲಿ ಇರುವವುಗಳನ್ನೇ ಚತುರ್ಮುಖನಿಗೆ ಉಪದೇಶಿಸಿದರಾಯಿತು. ಭಗವಂತನು ಹಾಗೆಯೇ ಮಾಡುವನು. ಆದುದರಿಂದ ಭಗವಂತನನ್ನು ಒಪ್ಪಿ, ಅವನು ಸರ್ವಜ್ಞನೆಂದೂ ನಿತ್ಯನೆಂದೂ ಒಪ್ಪುವವರು ವೇದಾಪೌರುಷೇಯತ್ವವನ್ನು ಒಪ್ಪಿಕೊಳ್ಳಲೇಬೇಕಾಗುವುದು.

ಆದರೆ ಈ ರೀತಿಯಾಗಿ ವೇದಗಳಿಗೆ ಹೇಗೋ ಹಾಗೆಯೇ ಪುರಾಣಗಳಿಗೂ ಇತಿಹಾಸಗಳಿಗೂ ಅಪೌರುಷೇಯತ್ವವನ್ನು ಒಪ್ಪಿಕೊಳ್ಳಬೇಕಾಗುವ ಪ್ರಸಂಗವು ಬರುವುದು. ಯಾಕೆಂದರೆ ಸರ್ವಜ್ಞನಾದ, ನಿತ್ಯನಾದ ಭಗವಂತನ ಬುದ್ಧಿಯಲ್ಲಿ ವೇದಗಳು ಹೇಗೋ ಹಾಗೆಯೇ ಪುರಾಣಗಳೂ ಇತಿಹಾಸಗಳೂ ಉಪಸ್ಥಿತಗಳಾಗಿರುವುದರಿಂದ ಅವುಗಳನ್ನು ಪುನಃ ರಚನೆ ಮಾಡಬೇಕಾದದ್ದಿಲ್ಲ. ವೇದವನ್ನು ಹೇಗೋ ಹಾಗೆಯೇ ಮೊದಲೇ ಇರುವವುಗಳನ್ನೇ ಪ್ರಕಟನೆಗೆ ತಂದರಾಯಿತು.

ಈ ಹಿನ್ನೆಲೆಯಲ್ಲಿಯೇ ಶ್ರೀ ವಾದಿರಾಜಸ್ವಾಮಿಗಳೂ ಯುಕ್ತಿಮಲ್ಲಿಕಾ ಗ್ರಂಥದಲ್ಲಿ ಸರ್ವಜ್ಞನಾದ ನಿತ್ಯನಾದ ಭಗವಂತನನ್ನು ಒಪ್ಪುವವರಿಗೆ ವೇದಾಪೌರುಷೇಯತ್ವವನ್ನು ಸಮರ್ಥಿಸುವುದು ಅತ್ಯಂತ ಸುಲಭ. ಆದರೆ ಪುರಾಣಗಳಿಗೆ, ಇತಿಹಾಸಗಳಿಗೆ ಪೌರುಷೇಯತ್ವವನ್ನು ಸಾಧಿಸುವುದೇ ಕಷ್ಟಸಾಧ್ಯ ಎಂದು ನಿರೂಪಿಸಿರುವರು.

ಶ್ರೀವಿಷ್ಣು ತತ್ವನಿರ್ಣಯ ಟೀಕೆಯಲ್ಲಿ ಶ್ರೀ ಜಯತೀರ್ಥರು ಪುರಾಣಗಳ ಪುನಾರಚನೆಗೆ ಪರಪ್ರಯೋಜನಗಳು ಸೂಕ್ಷ್ಮಗಳಾದುದರಿಂದ ನಾವು ಉತ್ಪ್ರೇಕ್ಷಿಸಲಾರೆವು ಎಂದು ತಿಳಿಸಿರುವರು –'ಪರಪ್ರಯೋಜನಾನಿ ತು ಸೂಕ್ಷ್ಮಾಣ್ಯುತ್ಪ್ರೇಕ್ಷಿತುಂ ವಯಂ ನ ಪ್ರಭವಾಮಃ'.

ಹರಿಗುರುಗಳ ಅನುಗ್ರಹದಿಂದ ನಾವು ಪುರಾಣ ಇತಿಹಾಸಗಳ ಪುನಾರಚನೆಗೆ ಹೀಗೊಂದು ಪ್ರಯೋಜನವನ್ನು ಊಹಿಸಿರುವೆವು–

ಬ್ರಹ್ಮಸೂತ್ರದ ಸ್ಮೃತ್ಯಧಿಕರಣದಲ್ಲಿ ಪಾಶುಪತಾದಿ ಸ್ಮೃತಿಗಳಿಗೆ ರುದ್ರಾದಿ ಸರ್ವಜ್ಞಪ್ರಣೀತತ್ವ ಪ್ರಯುಕ್ತ ಪ್ರಾಮಾಣ್ಯವನ್ನು ಒಪ್ಪಬೇಕಾಗಿದ್ದು ಅಂತಹ ಸ್ಮೃತಿಗಳಿಗೆ ವಿರುದ್ಧವಾಗಿ ಪ್ರತಿಪಾದಿಸುವ ವೇದಗಳಿಗೆ ಅಪ್ರಾಮಾಣ್ಯ ಬಂದೀತೆಂದು ಆಶಂಕಿಸಿ, ಪಂಚರಾತ್ರಾದಿ ವೈಷ್ಣವಸ್ಮೃತಿಗಳು ಸರ್ವಜ್ಞತಮರಾದ ಶ್ರೀವಿಷ್ಣ್ವಾದಿಗಳಿಂದ ರಚಿತಗಳಾಗಿದ್ದು, ಪರಮ ಪ್ರಮಾಣಗಳೆನಿಸಿರುವ ಇವುಗಳಿಗೆ ವಿರುದ್ಧಗಳಾದ ಪಾಶುಪತಾದಿಗಳು ಅಪ್ರಾಮಾಣಿಗಳು; ವೈಷ್ಣವಸ್ಮೃತಿಗಳಿಗೆ ಸಂವಾದಿಗಳಾದ ವೇದಗಳು ಪ್ರಮಾಣಗಳೇ ಎಂದು ಸಮರ್ಥಿಸಲಾಗುವುದು. ಹೀಗೆ ಇಲ್ಲಿ ಪಂಚರಾತ್ರವೇ ಮುಂತಾದ ವೈಷ್ಣವಸ್ಮೃತಿಗಳಿಗೆ ಪರಮ ಪ್ರಾಮಾಣ್ಯವನ್ನು ಸಮರ್ಥಿಸುವುದು, ಅವುಗಳು ಸರ್ವಜ್ಞತಮರಾದ ಶ್ರೀವಿಷ್ಣು, ವೇದವ್ಯಾಸಾದಿಗಳಿಂದ ರಚಿತಗಳಾಗಿವೆ ಎಂದಿಟ್ಟುಕೊಂಡೇ. ಒಂದುವೇಳೆ ಅವುಗಳೂ ವೇದದಂತೆ ಅಪೌರುಷೇಯಗಳಾಗಿದ್ದರೆ ಅವುಗಳಿಗೆ ಈ ವಿಧವಾಗಿ ಪರಮಪ್ರಾಮಾಣ್ಯದ ಸಮರ್ಥನೆ ಸಾಧ್ಯವಾಗುತ್ತಿದ್ದಿಲ್ಲ ತಾನೇ?

●

೭. ೭. ವರ್ಣಸಾಂಕರ್ಯದ ಆಕ್ಷೇಪಕ್ಕೆ ಸಮಾಧಾನ

ವರ್ಣಸಾಂಕರ್ಯದ ತಡೆಯಲ್ಲಿ ತಾತ್ಪರ್ಯ

ಅರ್ಜುನನು ಯುದ್ಧದ ಅನಿಷ್ಟಗಳನ್ನೆಲ್ಲ ಉಲ್ಲೇಖಿಸುತ್ತ 'ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ' –ಎಂಬುದಾಗಿ ಯುದ್ಧವು ಪರೋಕ್ಷವಾಗಿ ವರ್ಣಸಾಂಕರ್ಯಕ್ಕೆ ಕಾರಣವಾಗಿ ನರಕಾದ್ಯನರ್ಥಗಳನ್ನು ಉಂಟುಮಾಡುವುದೆಂದು ತಿಳಿಸಿರುವನು. ಶ್ರೀಕೃಷ್ಣನು ಮುಂದೆ ಗೀತೆಯ ಯಾವುದೇ ಭಾಗದಲ್ಲಿ ಈ ವಾದವನ್ನು ಪ್ರಸ್ತಾಪಿಸಿ ವರ್ಣಸಾಂಕರ್ಯವನ್ನು ನಿರಾಕರಿಸಿದಂತಿಲ್ಲ. ಆದ್ದರಿಂದ ವರ್ಣಸಾಂಕರ್ಯ ಮಹಾದೋಷವೆಂಬುದಾಗಿ ಶ್ರೀಕೃಷ್ಣನು ಬಗೆದಿಲ್ಲ ಎಂದು ಭ್ರಮಿಸಬಾರದು.

ಚತುರ್ವರ್ಣಗಳನ್ನು ತಾನೇ ಸೃಷ್ಟಿಸಿರುವವನೆನ್ನುವ ಶ್ರೀಕೃಷ್ಣನು ಅಂತಹ ವರ್ಣಸಾಂಕರ್ಯ ಪ್ರಜೆಗಳಲ್ಲಿ ಆಗಬಾರದೆಂಬ ದೃಷ್ಟಿಯಿಂದಲೇ 'ಲೋಕ ಸಂಗ್ರಹ' ರೂಪದಲ್ಲಿ ತಾನು ಕರ್ಮಗಳನ್ನು ಆಚರಿಸುತ್ತಿರುವುದಾಗಿ ಸಂದೇಶಿಸಿರುವನು –'ಸಂಕರಸ್ಯ ಚ ಕರ್ತಾ ಸ್ಯಾಮ್....' ಇಂತಹ ವರ್ಣಸಾಂಕರ್ಯ ಪರೋಕ್ಷವಾಗಿ ಪ್ರಜೆಗಳ ನಾಶಕ್ಕೆ ಕಾರಣವಾದುದೆಂಬುದಾಗಿಯೂ ಸೂಚ್ಯವಾಗಿ ಎಚ್ಚರಿಸಿರುವನು '.....ಉಪಹನ್ಯಾಮಿಮಾಃ ಪ್ರಜಾಃ' ಇದರಿಂದ ಸ್ಪಷ್ಟವಾಗುವುದು, ವರ್ಣಸಾಂಕರ್ಯ ವಾಗಬಾರದೆಂಬುದರ ಬಗ್ಗೆ ಶ್ರೀಕೃಷ್ಣನಿಗೆ ಎಷ್ಟು ತಾತ್ಪರ್ಯವಿದೆ! ಎಂದು.

ಅರ್ಜುನನ ಆಕ್ಷೇಪಕ್ಕೆ ಸಮಾಧಾನ

ಶ್ರೀಕೃಷ್ಣನಿಗೆ ವರ್ಣಸಾಂಕರ್ಯವು ಅಸಮ್ಮತವಾಗಿದ್ದರೆ, ಅರ್ಜುನನ ವರ್ಣಸಾಂಕರ್ಯದ ಕುರಿತಾದ ಆಕ್ಷೇಪವನ್ನು ಸಮಾಧಾನಿಸಬೇಕಿತ್ತಲ್ಲವೇ? ಹೌದು ಸಮಾಧಾನಿಸಿದ್ದಾನೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ದುಷ್ಟನಿಗ್ರಹಾತ್ಮಕ ಯುದ್ಧವನ್ನು ಮಾಡಬೇಕೆಂದು ಸಂದೇಶಿಸಿರುವನೇ ಹೊರತು ಯುದ್ಧವೆಲ್ಲ ಧರ್ಮವೆಂದಲ್ಲ. ಇದನ್ನು ಶ್ರೀಮದಾಚಾರ್ಯರು ಗೀತಾತಾತ್ಪರ್ಯದಲ್ಲಿ ಸ್ಪಷ್ಟವಾಗಿ ತೋರಿಸಿಕೊಟ್ಟಿರುವರು. ಹೀಗೆ ಶ್ರೀಕೃಷ್ಣನು ಸಂದೇಶಿಸಿದ ದುಷ್ಟನಿಗ್ರಹಾತ್ಮಕ ಯುದ್ಧ ನಡೆಯಿತೆಂದರೆ, ದುಷ್ಟರೆಲ್ಲ ನಶಿಸುವರು. ಸ್ತ್ರೀಯರನ್ನು ಕೆಡಿಸಬಲ್ಲ ದುಷ್ಟರು ನಶಿಸಿದರೆಂದರೆ ಸ್ತ್ರೀಯರು ಕೆಡಲು ಅವಕಾಶವಿಲ್ಲ, ಆ ಮೂಲಕ ವರ್ಣಸಾಂಕರ್ಯಕ್ಕೆ ಎಡೆ ಇಲ್ಲ. ಈ ಅಭಿಪ್ರಾಯದಿಂದಲೇ ಶ್ರೀಕೃಷ್ಣ ಅದನ್ನು ಪ್ರತ್ಯೇಕವಾಗಿ ಸಮಾಧಾನಿಸಿಲ್ಲ. ಈ ರೀತಿಯಾಗಿ ಶ್ರೀಕೃಷ್ಣನ ಅಭಿಪ್ರಾಯವನ್ನು ಸ್ಪಷ್ಟೀಕರಿಸಿ, ಅರ್ಜುನನ ಆಕ್ಷೇಪಕ್ಕೂ ಸಮಾಧಾನ ದೊರಕುವಂತೆ ಮಾಡಿದ ಕೀರ್ತಿ ಶ್ರೀಮದಾಚಾರ್ಯರಿಗೆ ಸಲ್ಲಬೇಕು.

ಎಂತಹ ಪರಿತ್ರಾಣ? ಎಂತಹ ವಿನಾಶ?

ಸಾಧುಗಳ ಪರಿತ್ರಾಣ ಹಾಗೂ ದುಷ್ಟರ ವಿನಾಶ –ಇವು ತನ್ನ ಅವತಾರದ ಉದ್ದೇಶಗಳೆಂದು ಶ್ರೀಕೃಷ್ಣನು ಹೇಳಿಕೊಂಡಿರುವನು. ಆದರೆ ಶ್ರೀಕೃಷ್ಣನು ಸಾಧುಗಳಾದ

ಯಾದವರೇ ಮೊದಲಾದವರೂ ನಶಿಸುವಂತೆ ಮಾಡಿದ್ದಿದೆ. ದುಷ್ಟರೆಲ್ಲರನ್ನು ಕೊಂದದ್ದಿಲ್ಲ. ಹೀಗಾಗಿ ಅವನ ಪ್ರತಿಜ್ಞೆ ನಡೆದಂತಾಯಿತೇ? ಎಂಬ ಸಂದೇಹ ಸಹಜ.

ಭಗವಂತನು ಉದ್ದೇಶಿಸಿರುವುದು ಸಾಧುಗಳ ಪರಿತ್ರಾಣವೇ ಹೊರತು ತ್ರಾಣ ಮಾತ್ರವಲ್ಲ. ಪರಿತ್ರಾಣವೆಂದರೆ ಪರಿತಃ ಸರ್ವಾತ್ಮನಾ ತ್ರಾಣ –ರಕ್ಷಣೆ. ಸಜ್ಜನರಿಗೆ ಅವರ ಯೋಗ್ಯತಾನುಸಾರವಾಗಿ ಸದ್ಗತಿ ದೊರಕಿಸಿದಾಗಷ್ಟೇ ಇಂತಹ ಪರಿತ್ರಾಣ ವಾದಂತಾಗುವುದು. ಇದನ್ನು ಸಾಧಿಸಿಕೊಡುವವನು ಭಗವಂತನು. ದೇವತೆಗಳಿಗೆ ಮುಕ್ತಿ ದೊರಕುವಂತೆ ಮಾಡುವುದರಿಂದಲೇ ಭಗವಂತನು ದೇವತೆಗಳನ್ನು ಸೃಷ್ಟಿಸಿದನು –ಸೃಷ್ಟುತ್ವಂ ದೇವಾನಾಂ ಮುಕ್ತಿಸೃಷ್ಟುತ್ವಮುಚ್ಯತೇ ಎಂಬ ವ್ಯವಹಾರ ವಿರುವಂತೆಯೇ ಈ ವ್ಯವಹಾರವೂ ಹಾಗೆಯೇ. ಭಗವಂತನು ಉದ್ದೇಶಿಸಿರುವುದು ದುಷ್ಟರ ವಿನಾಶವನ್ನೇ ಹೊರತು ಬರೇ ನಾಶವನ್ನಲ್ಲ. ವಿನಾಶವೆಂದರೆ ವಿಶೇಷವಾದ ನಾಶ. ದುಷ್ಟರು ತಮ್ಮ ಯೋಗ್ಯತೆಗೆ ಅನುಗುಣವಾಗಿ ದುರ್ಗತಿಯನ್ನು ಪಡೆದಾಗಷ್ಟೇ ಅವರ ವಿನಾಶವಾದಂತಾಗುವುದು. ಇದನ್ನು ಭಗವಂತನು ನಡೆಸಿಕೊಡುವನು. ಭಗವಂತನು ದೈತ್ಯರಿಗೆ ತಮಸ್ಸು ದೊರಕುವಂತೆ ಮಾಡುವುದರಿಂದಲೇ ದೈತ್ಯರನ್ನು ಕೊಲ್ಲುವನು. ಅಥ ಚ ದೈತ್ಯಹತಿಸ್ತಮಸಿ ಸ್ಥಿರಾ ನಿತ್ಯಸಂಸ್ಥಿತಿರೇವ ನ ಚಾನ್ಯಥಾ –ಎಂಬ ವ್ಯವಹಾರವಿರುವಂತೆಯೇ ಈ ವ್ಯವಹಾರವೂ.

ಹೀಗೆ ಭಗವಂತನು ಪ್ರತಿಜ್ಞೆ ಮಾಡಿರುವ ಸಾಧುರಕ್ಷಣೆ ಹಾಗೂ ದುಷ್ಟ ವಿನಾಶವೆಂದರೆ ಶಾಶ್ವತವಾದದ್ದೇ ಹೊರತು ತಾತ್ಕಾಲಿಕವಾದದ್ದಲ್ಲ ಎಂಬ ಸಮಾಧಾನ ಜೀವತ್ರೈವಿಧ್ಯವನ್ನು ಒಪ್ಪುವ ಶ್ರೀಮದಾಚಾರ್ಯರ ಸಿದ್ಧಾಂತದ ಪ್ರಕಾರ ಕೊಡುವುದೇ ಹೊರತು ಎಲ್ಲರೂ ಬ್ರಹ್ಮಸ್ವರೂಪರೆಂಬುವ ಅದ್ವೈತಮತ ಪ್ರಕಾರ ಹೊಂದಲಾರದು. ಅವರ ಪ್ರಕಾರ ಶ್ರೀಕೃಷ್ಣನ ಈ ಮಾತನ್ನು ಕೂಡಿಸಲು ಬರಲಾರದು!

●

೭. ೮. ಹಿಂದೂಸಮಾಜಕ್ಕೆ ಶ್ರೀಮಧ್ವರ ಕೊಡುಗೆ

ಹಿಂದುಗಳಿಗೆ ರಾಮಾಯಣ ಮಹಾಭಾರತಗಳೆಂದರೆ ಪರಮಪೂಜ್ಯ ಗ್ರಂಥ ಗಳು. ಅಲ್ಲಿ ವರ್ಣಿಸಲ್ಪಟ್ಟ ಸಂಸ್ಕೃತಿಯೇ ಹಿಂದೂ ಸಂಸ್ಕೃತಿ. ಇಂತಹ ರಾಮಾಯಣ ಮಹಾಭಾರತಗಳನ್ನೂ ಕಲ್ಪಿತಗಳಾದ ಕಟ್ಟುಕಥೆಗಳೆಂದು ಕೆಲವರು ತಿರಸ್ಕರಿಸುವುದಿದೆ. ಅವುಗಳ ಬಗ್ಗೆ ಅಪಹಾಸ್ಯ ಮಾಡುವುದಿದೆ. ಅಂತಹವರು ತಮ್ಮ ವಾದಕ್ಕೆ ಬೆಂಬಲ ವಾಗಿ ಮೇಲ್ನೋಟಕ್ಕೆ ತೋರುವ ಕೆಲವು ಅನುಪಪತ್ತಿಗಳನ್ನು ಉಲ್ಲೇಖಿಸುವರು. ಅವುಗಳನ್ನು ಪರಿಹರಿಸದ ಹೊರತು ಅವರ ವಾದ ಅಸಂಬದ್ಧವೆಂದು ತಳ್ಳಿಹಾಕು ವಂತಿಲ್ಲ.

ಹೀಗೆ ಮೇಲ್ನೋಟಕ್ಕೆ ಕಾಣಬಹುದಾದ ಅನುಪಪತ್ತಿಗಳ ಪರಿಹಾರಕ್ಕೆ ಯತ್ನಿಸಿದ ಆಚಾರ್ಯರು ಶ್ರೀಮಧ್ವಾಚಾರ್ಯರು. ಅವರು ಅದಕ್ಕಾಗಿಯೇ 'ಶ್ರೀಮನ್ಮಹಾಭಾರತ

ತಾತ್ಪರ್ಯನಿರ್ಣಯ' ಎಂಬ ವಿಮರ್ಶಾತ್ಮಕ ಗ್ರಂಥವನ್ನು ರಚಿಸಿ ಅದರಲ್ಲಿ ರಾಮಾಯಣ-ಮಹಾಭಾರತಗಳ ಮೇಲೆ ಬರಬಹುದಾದ ಅನಪಪತ್ತಿಗಳನ್ನು ಪರಿಹರಿಸಿದ್ದಾರೆ. ಅವರು ರಾಮಾಯಣ ಹಾಗೂ ಮಹಾಭಾರತ ಕಥೆಗಳ ಕುರಿತು ಮಾಡಿರುವ ಸಿದ್ಧಾಂತಗಳ ಕುರಿತು ಸ್ವಲ್ಪವೂ ಸಂದೇಹ ಪಡಬೇಕಾಗಿಲ್ಲ. ಯಾಕೆಂದರೆ ಹನುಮದವತಾರ ಹಾಗೂ ಭೀಮಸೇನಾವತಾರ ಅವರದ್ದೇ ಅವತಾರಗಳಾಗಿದ್ದು, ಹನುಮದವತಾರದಲ್ಲಿ ರಾಮಾಯಣ ಸಂದರ್ಭವನ್ನೂ, ಭೀಮಸೇನಾವತಾರದಲ್ಲಿ ಮಹಾಭಾರತ ಸಂದರ್ಭವನ್ನೂ ಪ್ರತ್ಯಕ್ಷವಾಗಿ ಕಂಡ ಮಹಾತ್ಮರು ಅವರು. ತಾವು ವಾಯುದೇವರ ಅವತಾರವೆಂದು ಅವರೇ ಹೇಳಿಕೊಂಡಿರುವುದರಿಂದ ಅದರಲ್ಲಿ ಹೇಗೆ ವಿಶ್ವಾಸ ತಾಳಬಹುದೆಂದು ಸಂದೇಹಿಸಲು ಅವಕಾಶವಿಲ್ಲ. ಒಂದು ಕಾಲದಲ್ಲಿ ಪರಮತದ ದಿಗ್ದಂತಿಗಳೆಂದು ಪ್ರಸಿದ್ಧರಾಗಿದ್ದು ಬಳಿಕ ಶ್ರೀಮದಾಚಾರ್ಯರ ಶಿಷ್ಯರಾದ ತ್ರಿವಿಕ್ರಮಪಂಡಿತಾಚಾರ್ಯರು, ಸ್ವರ್ಣಕಾರನು ತಿಕ್ಕಿನೋಡಿ ಚಿನ್ನದ ಸ್ವರೂಪವನ್ನು ಖಾತ್ರಿಪಡಿಸಿಕೊಳ್ಳುವಂತೆ ಶ್ರೀ ಮಧ್ವಾಚಾರ್ಯರ ವ್ಯಕ್ತಿತ್ವವನ್ನು ಚೆನ್ನಾಗಿ ವಿಶ್ಲೇಷಿಸಿ ಕೊಂಡಿರುತ್ತಾರೆ. ದೇವಶ್ರೇಷ್ಠರ ಲಕ್ಷಣಗಳನ್ನು ಶ್ರೀ ಮಧ್ವಾಚಾರ್ಯರಲ್ಲಿ ನಾನು ಸಾಕ್ಷಾತ್ತಾಗಿ ಕಂಡಿದ್ದೇನೆ -'ಪ್ರತ್ಯಕ್ಷಂ ಚೈತಲ್ಲಕ್ಷಣಂ ಭಾಷ್ಯಕಾರೇ' ಎಂದು ಸಾರಿದ್ದಾರೆ. ಆದ್ದರಿಂದ ಶ್ರೀ ಮಧ್ವರು ದೇವಶ್ರೇಷ್ಠ ಶ್ರೀಮುಖ್ಯಪ್ರಾಣರೆಂಬುದರಲ್ಲಿ ಸಂದೇಹಕ್ಕೆ ಅವಕಾಶವಿಲ್ಲ. ಇಂತಹವರು ತಮ್ಮ ಪೂರ್ವರೂಪಗಳಿಂದ ಪ್ರತ್ಯಕ್ಷವಾಗಿ ಕಂಡಿದ್ದನ್ನೇ ಗ್ರಂಥದಲ್ಲಿ ನಿರೂಪಿಸಿರುವುದರಿಂದ, ಆ ಗ್ರಂಥ ಸರ್ವಮಾನ್ಯವಾಗಲೇ ಬೇಕು.

ಹೀಗೆ ಪರಮ ಪ್ರಮಾಣವೆನಿಸಿರುವ 'ಮಹಾಭಾರತ ತಾತ್ಪರ್ಯನಿರ್ಣಯ' ಗ್ರಂಥವನ್ನು ರಚಿಸಿ, ಆ ಮೂಲಕ ರಾಮಾಯಣ ಮಹಾಭಾರತಗಳ ಮೇಲೆ ಬರ ಬಹುದಾದ ಅನುಪಪತ್ತಿಗಳನ್ನೆಲ್ಲ ಪರಿಹರಿಸಿರುವ ಶ್ರೀ ಮಧ್ವಾಚಾರ್ಯರ ಕೊಡುಗೆ ಬರೇ ಮಾಧ್ವರಿಗಷ್ಟೇ ಅಲ್ಲದೆ ಸಮಗ್ರ ಹಿಂದೂಸಮಾಜಕ್ಕೆಯೇ ಸಲ್ಲಿಸಿದ ಕೊಡುಗೆ ಎನಿಸಿದೆ.

●

೭. ೯. ಸೀತಾಪರಿತ್ಯಾಗ ಯಾವಾಗ?

ಶ್ರೀರಾಮನು ಕೆಲವು ದುಷ್ಟ ಪ್ರಜೆಗಳ ಅಪವಾದವನ್ನು ತಪ್ಪಿಸಲು ಸೀತಾದೇವಿಯನ್ನು ಅರಣ್ಯಕ್ಕೆ ಕಳುಹಿಸಿದನೆಂಬುದು ರಾಮಾಯಣದಲ್ಲಿ ಬರುವ ವಿಚಾರ.

ಯಾವಾಗ?

ವಾಲ್ಮೀಕಿ ರಾಮಾಯಣದ ಪ್ರಕಾರ ಸೀತಾದೇವಿ ಗರ್ಭಿಣಿಯಾಗಿರುವಾಗಲೇ ಈ ಅಪವಾದ ಹೊರಸಿದ್ದು. ಆಗಲೇ ಶ್ರೀರಾಮನು ಸೀತಾದೇವಿಯನ್ನು ಅರಣ್ಯಕ್ಕೆ ಕಳುಹಿಸುವನು. ಆದರೆ ಶ್ರೀಮದಾಚಾರ್ಯರ ಪ್ರಕಾರ ಸೀತಾದೇವಿ ಲವಕುಶರನ್ನು ಹೆತ್ತಮೇಲೆ ಆಕೆಯನ್ನು ಅರಣ್ಯಕ್ಕೆ ಕಳುಹಿಸಿದುದು. ಮಹಾಭಾರತ ತಾತ್ಪರ್ಯ

ನಿರ್ಣಯದಲ್ಲಿ ಮೂಲರಾಮಾಯಣವನ್ನು ಆಧರಿಸಿ ರಾಮಾಯಣವನ್ನು ನಿರೂಪಿಸುವ ಶ್ರೀಮದಾಚಾರ್ಯರು ಸೀತಾದೇವಿಯ ಮೂಲಕ ಕುಶಲವರ ಜನನವಾಯಿತೆಂಬ ವಿಚಾರವನ್ನು ತಿಳಿಸಿ, ಮತ್ತೆ ಸೀತೆಯ ಬಗ್ಗೆ ಅಪವಾದ ಹೊರಿಸಿರುವ ವಿಚಾರವನ್ನು ಪ್ರಸ್ತಾವಿಸಿರುವರು. ಆದುದರಿಂದ ಕುಶಲವರನ್ನು ಪಡೆದ ಬಳಿಕ ಸೀತೆಯನ್ನು ಪರಿತ್ಯಜಿಸಲಾಯಿತೆಂಬುದು ಶ್ರೀಮದಾಚಾರ್ಯರ ಅಭಿಪ್ರಾಯ. ಹಾಗಾದರೆ ಸೀತೆಯ ಪರಿತ್ಯಾಗ ಗರ್ಭಿಣಿಯಾಗಿರುವಾಗಲೋ? ಮಕ್ಕಳನ್ನು ಹೆತ್ತಮೇಲೆಯೋ? ಎಂಬ ಸಂದೇಹಕ್ಕೆ ಅವಕಾಶವಿದೆ.

ಧರ್ಮಶಾಸ್ತ್ರ ವಿರೋಧ:

'ಅರಕ್ಷಣಾತ್ ದೂಷಿತಾಯಾ ನ ತ್ಯಾಗಾಚ್ಚ ಶುಭಂ ಭವೇತ್' (ಮ. ಭಾ. ತಾ. ನಿ. 21-373) ಎಂಬುದಾಗಿ ಧರ್ಮಶಾಸ್ತ್ರ ಸಾರುವಂತೆ ದೂಷಿತೆಯಾಗಿರುವ ಸ್ತ್ರೀಯನ್ನೂ ತ್ಯಜಿಸುವುದು ತಪ್ಪು. ಹೀಗಿರುವಾಗ ವಾಲ್ಮೀಕಿ ರಾಮಾಯಣ ಪ್ರತಿಪಾದಿಸುವಂತೆ ದೂಷಣೆಯ ಅಪವಾದಕ್ಕಾಗಿ ಗರ್ಭಿಣಿಯಾದ ಸೀತಾದೇವಿಯನ್ನು ಶ್ರೀರಾಮನು ಅರಣ್ಯದಲ್ಲಿ ಬಿಟ್ಟುಬಿಟ್ಟನೆಂದರೆ ಅದು ಅಧರ್ಮವೆನಿಸುವುದು. ಧಾರ್ಮಿಕನಾದ, ಧರ್ಮಜ್ಞನಾದ ಶ್ರೀರಾಮನಿಂದ ಇಂತಹ ಅಧಾರ್ಮಿಕ ಚಟುವಟಿಕೆಗಳನ್ನು ನಿರೀಕ್ಷಿಸುವಂತಿಲ್ಲ. ಶ್ರೀಮದಾಚಾರ್ಯರು ಪ್ರತಿಪಾದಿಸಿದಂತೆ ಮಕ್ಕಳನ್ನು ಪಡೆದ ಸೀತಾದೇವಿಯನ್ನು ಕಾಡಿಗೆ ಕಳುಹಿಸಿದನೆಂದರೆ ಅದು ಅಧಾರ್ಮಿಕವೆನಿಸದು. 'ವಾರ್ಧಕ್ಯೇ ಪುತ್ರರಕ್ಷಾ ಸ್ಯಾತ್....' ಎಂದು ಧರ್ಮಶಾಸ್ತ್ರ ಸಾರುವಂತೆ ಮಕ್ಕಳನ್ನು ಪಡೆದ ಸ್ತ್ರೀಯರನ್ನು ರಕ್ಷಿಸುವ ಹೊಣೆಗಾರಿಕೆ ಮಕ್ಕಳ ಮೇಲೆ ಇರುವುದು. ಅದರಂತೆ ಶ್ರೀರಾಮ, ಸೀತೆಯ ರಕ್ಷಣೆಯನ್ನು ಮಕ್ಕಳಾದ ಕುಶಲವರ ಮೇಲೆ ಹೊರಿಸಿ, ಅವರ ಜೊತೆಗೆ ಆಕೆಯನ್ನು ಅರಣ್ಯಕ್ಕೆ ಕಳುಹಿಸಿರುವನು. ಆದುದರಿಂದ ಆಕೆಯನ್ನು ಪೂರ್ಣವಾಗಿ ಪರಿತ್ಯಜಿಸಿದಂತಾಗಲಿಲ್ಲ. ಹೀಗಾಗಿ 'ಅರಕ್ಷಣಾದ್ದೂಷಿತಾಯಾಃ ನ ತ್ಯಾಗಾಚ್ಚ ಶುಭಂ ಭವೇತ್' ಎಂಬ ಧರ್ಮಶಾಸ್ತ್ರವನ್ನು ಶ್ರೀರಾಮಚಂದ್ರ ಮೀರಿದಂತಾಗಲಿಲ್ಲ.

ಅಪ್ರಮಾಣವಲ್ಲ:

ಹಾಗಾದರೆ ಗರ್ಭಿಣಿ ಸೀತೆಯ ಪರಿತ್ಯಾಗವೆಂದು ಪ್ರತಿಪಾದಿಸುವ ವಾಲ್ಮೀಕಿ ರಾಮಾಯಣವನ್ನು ಹೇಗೆ ಕೂಡಿಸಬೇಕು? ಋಷಿಗಳಾಗಿರುವ ವಾಲ್ಮೀಕಿಗಳಿಂದ ರಚಿತವಾದ ರಾಮಾಯಣವನ್ನು ಅಪ್ರಮಾಣವೆನ್ನುವಂತಿಲ್ಲ. 'ವಾಲ್ಮೀಕೇರ್ಗಾಃ ಪುನೀಯಾನ್ನಃ' ಎಂಬುದಾಗಿ ನಾರಾಯಣಪಂಡಿತಾಚಾರ್ಯರು ವಾಲ್ಮೀಕಿ ರಾಮಾಯಣದ ಮಾತುಗಳು ತನ್ನನ್ನು ಪವಿತ್ರೀಕರಿಸಲೆಂದು ಹಾರೈಸುತ್ತ, ಆ ಮಾತುಗಳಲ್ಲಿ ಪವಿತ್ರೀಕರಿಸುವ ಸಾಮರ್ಥ್ಯವಿದೆ ಎಂದು ಸೂಚಿಸಿರುತ್ತಾರೆ. ಶ್ರೀರಾಮನಲ್ಲಿ ಚೆನ್ನಾಗಿ ಭಕ್ತಿಭಾವ ಉಂಟಾಗುವಂತೆ ರಚಿತವಾದ ವಾಲ್ಮೀಕಿ ರಾಮಾಯಣದಲ್ಲಿ ಅಲ್ಲಲ್ಲಿ ಒಂದೊಂದು ಸಂದಿಗ್ಧ ಮಾತುಗಳಿರಬಹುದು. ಅವುಗಳನ್ನು ಸಿದ್ಧಾಂತಕ್ಕೆ ಅನುಗುಣ

ವಾಗಿ ಹೊಂದಿಸಿಕೊಳ್ಳಬೇಕಷ್ಟೇ. ಪ್ರಕೃತ ಶ್ರೀರಾಮನು ಸೀತೆಯನ್ನು ಗರ್ಭಿಣಿಯಾಗಿದ್ದಾಗ ತ್ಯಜಿಸಿದನೆಂಬ ವಿಚಾರವನ್ನು ಹೇಗೆ ಹೊಂದಿಸಿಕೊಳ್ಳಬಹುದು? ಶ್ರೀಮದಾಚಾರ್ಯರು 'ಬಹು ಕಲ್ಪಾನುಸಾರೇಣ ಮಯೇಯಂ ಸತ್ಕಥೋದಿತಾ' ಎಂದಿರುವುದರಿಂದ ಅವರ ಪ್ರತಿಪಾದನೆ ಅನೇಕ ಕಲ್ಪಗಳಲ್ಲಿ ನಡೆದ ರಾಮಾಯಣಕ್ಕೆ ಅನುಗುಣವಾದದ್ದು. ವಾಲ್ಮೀಕಿ ರಾಮಾಯಣದಲ್ಲಾದರೂ ಯಾವುದೋ ಒಂದು ಕಲ್ಪದಲ್ಲಿ ನಡೆದ ರಾಮಾಯಣದ ನಿರೂಪಣೆ ಇದೆ. ಆದುದರಿಂದ ಪರಸ್ಪರ ವಿರೋಧವಿಲ್ಲ ಎಂದು ಹೇಳುವಂತಿಲ್ಲ. ಯಾವುದೇ ಒಂದು ಕಲ್ಪದಲ್ಲಾದರೂ ಶ್ರೀರಾಮನು ಗರ್ಭಿಣಿಯಾದ ಸೀತೆಯನ್ನು ಕಾಡಿಗೆ ಕಳುಹಿಸಿದನೆಂದರೆ ಹಿಂದೆ ಉದಾಹರಿಸಿದ ಧರ್ಮಶಾಸ್ತ್ರದ ವಿರೋಧ ಬಂದೇ ಬರುವುದು ತಾನೇ?

ಸ್ವಪ್ನ ಘಟನೆ:

ಈ ಕುರಿತು ವಿಮರ್ಶೆ ನಡೆಯಬೇಕಾಗಿದೆ. ಪ್ರಕೃತ ನಮಗೆ (ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರು) ಹೀಗೊಂದು ಸಮಾಧಾನ ತೋಚುತ್ತಿದೆ. ದ್ರೌಪದಿಯ ಶಿಶುಗಳನ್ನು ಕೊಂದ ಅಶ್ವತ್ಥಾಮಾಚಾರ್ಯರನ್ನು ಭೀಮಸೇನ ಹಿಡಿದು ತಂದಿರುವುದಾಗಿ ಮಹಾಭಾರತದಲ್ಲಿದ್ದರೆ, ಭಾಗವತದಲ್ಲಿ ಅರ್ಜುನನು ಅಶ್ವತ್ಥಾಮಾಚಾರ್ಯರನ್ನು ಬಂಧಿಸಿರುವುದಾಗಿಯೂ ದ್ರೌಪದದೇವಿಯ ಪ್ರಾರ್ಥನೆ ಮೇರೆಗೆ ಅವರನ್ನು ಬಿಡುಗಡೆಗೊಳಿಸಿರುವುದಾಗಿಯೂ ಬಂದಿದೆ. ಮಹಾಭಾರತದ ನಿರೂಪಣೆಯಂತೆ ಭೀಮಸೇನನೇ ಅಶ್ವತ್ಥಾಮಾಚಾರ್ಯರನ್ನು ಬಂಧಿಸಿ ತಂದಿರುವುದಾದರೂ ಭಾಗವತದಲ್ಲಿ ಅಶ್ವತ್ಥಾಮಾಚಾರ್ಯರಿಗೆ ಹಿಂದಿನ ರಾತ್ರಿ ಕಂಡ ಸ್ವಪ್ನವನ್ನಷ್ಟೇ ನಿರೂಪಿಸಲಾಗಿದೆ. ಸ್ವಪ್ನದಲ್ಲಿ ಅರ್ಜುನನೇ ಬಂಧಿಸಿದಂತೆಯೂ ದ್ರೌಪದಿಯ ಕೇಳಿಕೆಗೆ ಅನುಗುಣವಾಗಿ ವಿಮೋಚಿಸಿದಂತೆಯೂ ಕಂಡದ್ದರಿಂದ, ಸ್ವಾಪ್ನಪದಾರ್ಥವೂ ವಾಸನಾಮಯವಾಗಿದ್ದು ಸತ್ಯವೇ ಆಗಿರುವುದರಿಂದ ಅದನ್ನು ವರ್ಣಿಸಲಾಗಿದೆ ಎಂಬುದಾಗಿ ಶ್ರೀಮದಾಚಾರ್ಯರು ಸ್ಕಾಂದಪುರಾಣದ ಮೂಲಕ ನಿರ್ಣಯಿಸಿರುವರು.

ಅಂತೆಯೇ ವಾಲ್ಮೀಕೀ ರಾಮಾಯಣದಲ್ಲೂ ಲಕ್ಷ್ಮಣ ಕಂಡ ಸ್ವಪ್ನವನ್ನಷ್ಟೇ ನಿರೂಪಿಸಿರಬಹುದು. ಗರ್ಭಿಣಿಯಾದ ಸೀತೆಯನ್ನು ಶ್ರೀರಾಮನು ತನ್ಮೂಲಕ ಕಾಡಿಗೆ ಕಳುಹಿಸಿದನೆಂದು ಲಕ್ಷ್ಮಣ ತನ್ನ ಸ್ವಪ್ನದಲ್ಲಿ ಕಂಡಿರಬಹುದಾದದ್ದನ್ನು ಶ್ರೀ ವಾಲ್ಮೀಕಿ ವರ್ಣಿಸಿರುವರೆಂದರೆ ಪರಸ್ಪರ ವಿರೋಧ ಬರಲಾರದು.

●

೭. ೧೦. ವೇದೈಶ್ಚ ಸರ್ವೈರಹಮೇವ ವೇದ್ಯಃ

ಶ್ರೀಕೃಷ್ಣ ಸರ್ವೋತ್ತಮ ಎನ್ನುತ್ತೇವೆ. ಹಾಗಾದರೆ ವೇದದಲ್ಲಿ ಎಲ್ಲೂ ಆ ಹೆಸರಿನ ಉಲ್ಲೇಖ ಯಾಕೆ ಕಂಡುಬರುವುದಿಲ್ಲ? ಅಗ್ನಿ, ವಾಯು, ಇಂದ್ರಾದಿಗಳ ಉಲ್ಲೇಖ ವೇದದಲ್ಲಿ ಇರುವುದೇ ಹೊರತು ಶ್ರೀಕೃಷ್ಣನ ಪ್ರಸ್ತಾವವಿಲ್ಲ ತಾನೇ? ಎಂದು ಕೆಲವರು ಆಕ್ಷೇಪಿಸುವುದುಂಟು.

ಆದರೆ ಶಾಸ್ತ್ರವನ್ನು ಚೆನ್ನಾಗಿ ವಿಶ್ಲೇಷಿಸಿಕೊಂಡೆವೆಂದರೆ ಶ್ರೀಕೃಷ್ಣನು ಸಕಲ ವೇದಗಳಲ್ಲೂ ಪ್ರತಿಪಾದ್ಯನಾಗಿರುವನೆಂಬುದು ಸ್ಪಷ್ಟವಾಗದಿರದು.

'ಓಂಕಾರೇಣೈವ ಸರ್ವಾ ವಾಕ್ ಸಂತೃಣ್ಣಾ' ಎಂದಿರುವಂತೆ 'ಓಂ' ಎನಿಸುವ ಪ್ರಣವವು ಸಕಲ ವೇದಗಳಿಗೂ ಮೂಲವಾದುದು. ವ್ಯಾಖ್ಯೇಯವಾದುದು. ಇಂಥಹ ಓಂಕಾರವು ಅಕಾರ, ಉಕಾರ, ಮಕಾರ, ನಾದ, ಬಿಂದು, ಕಲಾ, ಶಾಂತ, ಅತಿಶಾಂತ –ಹೀಗೆ ಎಂಟು ಅಕ್ಷರಗಳಿಂದೊಡಗೂಡಿದ್ದು, ಅವುಗಳಲ್ಲಿ ಪ್ರತಿಯೊಂದು ಅಕ್ಷರವೂ ಭಗವಂತನ ಒಂದೊಂದು ರೂಪವನ್ನು ಪ್ರತಿಪಾದಿಸುತ್ತಿದೆ. 'ಕೃಷ್ಣೋ ರಾಮೋ ನೃಸಿಂಹಶ್ಚ ವರಾಹೋ ವಿಷ್ಣುರೇವ ಚ । ಪರಂಜ್ಯೋತಿಃ ಪರಂ ಬ್ರಹ್ಮ ವಾಸುದೇವ ಇತಿ ಕ್ರಮಾತ್ । ಅಕಾರಾದೇಸ್ತಥಾ ಶಾಂತಾತಿಶಾಂತಾಂ ತಸ್ಯ ದೇವತಾಃ' ಎಂದು ಯತಿಪ್ರಣವಕಲ್ಪದಲ್ಲಿ ನಿರೂಪಿಸಿದಂತೆ ಓಂಕಾರದ ಮೊದಲ ಅಕ್ಷರವಾದ ಅಕಾರ ದಿಂದ ಪ್ರತಿಪಾದ್ಯ ಶ್ರೀಕೃಷ್ಣನೇ. ಆದ್ದರಿಂದ ಇಂತಹ ಓಂಕಾರದಿಂದ ಅಭಿವ್ಯಕ್ತಗಳಾದ ಹಾಗೂ ಓಂಕಾರದ ವ್ಯಾಖ್ಯಾನರೂಪಗಳಾದ ವೇದಗಳಲ್ಲೂ ಶ್ರೀಕೃಷ್ಣನು ಪ್ರತಿಪಾದ್ಯ ನಾಗಿರುವನೆಂಬುದನ್ನು ಒಪ್ಪಲೇಬೇಕು.

ಹಾಗೆಯೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು 'ವೇದೈಶ್ಚ ಸರ್ವೈರಹಮೇವ ವೇದ್ಯಃ' –ಸಕಲ ವೇದಗಳಿಂದಲೂ ನಾನೇ (ಶ್ರೀಕೃಷ್ಣನೇ) ಮುಖ್ಯವಾಗಿ ತಿಳಿಯಲ್ಪಡುವವ ನೆಂಬುದಾಗಿ ಸಂದೇಶಿಸಿರುವನು.

ಭಾಗವತದಲ್ಲೂ ಉದ್ಧವನಿಗೆ ಶ್ರೀಕೃಷ್ಣನು 'ಮಾಂ ವಿಧತ್ತೇಽಭಿಧತ್ತೇ ಮಾಂ ವಿಕಲ್ಪ್ಯಾಽಪೋಹ್ಯ.....' ಎಂಬುದಾಗಿ ವೇದದ ವಿಧಾನಭಾಗ, ನಿಷೇಧಭಾಗ, ವಿಕಲ್ಪಭಾಗ ಹಾಗೂ ಅಪೋಹಭಾಗಗಳಲ್ಲಿ ನಾನೇ (ಶ್ರೀಕೃಷ್ಣನೇ) ಪ್ರತಿಪಾದ್ಯ ನಾಗಿರುವೆನೆಂಬುದಾಗಿ ಸಂದೇಶಿಸಿರುವನು.

ಆದ್ದರಿಂದ ಸಕಲ ವೇದಗಳೂ ಶ್ರೀಕೃಷ್ಣನನ್ನೇ ಪ್ರತಿಪಾದಿಸುತ್ತಿವೆ. 'ಯೋ ದೇವಾನಾಂ ನಾಮಧಾ ಏಕ ಏವ' ಎಂಬ ಶ್ರುತಿಯು ಪ್ರತಿಪಾದಿಸುತ್ತಿರುವಂತೆ ಅಗ್ನಿ, ವಾಯು, ಇಂದ್ರ, ವರುಣ ಮೊದಲಾದ ಹೆಸರುಗಳೆಲ್ಲ ಮುಖ್ಯವಾಗಿ ಶ್ರೀಕೃಷ್ಣನಿಗೇ ಸೇರಿರುವ ಪ್ರಯುಕ್ತ ಆ ಹೆಸರುಗಳೂ ಶ್ರೀಕೃಷ್ಣನನ್ನೇ ಸಾರುತ್ತಿವೆ ಎಂಬುದು ಗಮನಾರ್ಹವಾದುದು.

●

೭. ೧೧. ಗೋಬ್ರಾಹ್ಮಣ ಹಿತಾಯ ಚ

ಬ್ರಾಹ್ಮಣಸ್ಯ ಚ ದೇಹೋಽಯಂ ಕ್ಷುದ್ರಕಾಮಾಯ ನೇಷ್ಯತೇ ।
ಕೃಚ್ಛ್ರಾಯ ತಪಸೇ ಚೈವ ಪ್ರೇತ್ಯಾನಂತ ಸುಖಾಯ ಚ ॥

ಬ್ರಾಹ್ಮಣನ ಈ ದೇಹ ಕ್ಷುದ್ರವಾದ ಲೌಕಿಕ ಭೋಗಭಾಗ್ಯಗಳಿಗಾಗಿ ಇರಬಾರದು. ಕಷ್ಟವಾದ ತಪಸ್ಸಿಗಾಗಿ ಅವನ ದೇಹ ಮೀಸಲಾಗಿರಬೇಕು. ತಪಸ್ಸು ಎಂದರೆ ಸ್ವಾಧ್ಯಾಯ ಮತ್ತು ಪ್ರವಚನ. ಅಂದರೆ ಸಚ್ಛಾಸ್ತ್ರಗಳ ಅಧ್ಯಯನ ಮತ್ತು ಅಧ್ಯಾಪನ. ಇವೆರಡೇ ಬ್ರಾಹ್ಮಣಧರ್ಮ. ಇದಿಷ್ಟನ್ನೇ ಮಾಡುತ್ತಿದ್ದರೆ ಈ ಕಾಲದಲ್ಲಿ ದೇಹಧಾರಣೆ ಹೇಗೆ ಸಾಧ್ಯ? ಅಂದರೆ– ಇದರಿಂದ ದೇಹಧಾರಣೆ ಅಸಾಧ್ಯವಲ್ಲ. ಅಂತಹ ನಿಷ್ಠಬ್ರಾಹ್ಮಣನನ್ನು ಸಮಾಜ ಖಂಡಿತಾ ಬಿಟ್ಟುಕೊಡಲಾರದು. ಆದರೆ ಬ್ರಾಹ್ಮಣ ದೇಹ ಕಷ್ಟಕ್ಕಾಗಿಯೇ ಇದೆ. ಹಿಂದೆ ದ್ರೋಣಾಚಾರ್ಯರು ಕ್ಷತ್ರಿಯ ಕುಮಾರರಿಗೆ ಶಸ್ತ್ರವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದರೂ ತಮ್ಮ ದೇಹಧಾರಣೆಗಾಗಿ ಇನ್ನೊಬ್ಬರಿಗೆ ಕೈಯೊಡ್ಡದೆ ಕ್ಲಿಷ್ಟವಾದ ಶಿಲೋಂಛವೃತ್ತಿಯನ್ನೇ ಕೈಗೊಂಡಿದ್ದರು. ಅಂದರೆ ಧಾನ್ಯವನ್ನು ಒಯ್ದ ಮೇಲೆ ಗದ್ದೆಯಲ್ಲಿ ಬಿದ್ದ ಧಾನ್ಯಕಣಗಳನ್ನು ಸಂಗ್ರಹಿಸಿ, ಹಿಟ್ಟು ಬೀಸಿ ಬೀಸುಕಲ್ಲಿನಲ್ಲಿ ಅಂಟಿಕೊಂಡ ಹಿಟ್ಟನ್ನು ಕಲೆ ಹಾಕಿ ದೇಹಧಾರಣೆ ಮಾಡಿದರು. ಹೀಗೆ ತಮ್ಮ ಧರ್ಮದ ರಕ್ಷಣೆಗಾಗಿ ಬ್ರಾಹ್ಮಣರು ಕಷ್ಟಪಟ್ಟರೆ ಮಾತ್ರ 'ಪ್ರೇತ್ಯ ಅನಂತಸುಖ' ದೊರೆಯುತ್ತದೆ.

ಗೋಬ್ರಾಹ್ಮಣ ಹಿತಾಯ ಚ :

ಶ್ರೀಕೃಷ್ಣ ಲೋಕೋದ್ಧಾರಕ್ಕೆ ಅವತರಿಸಿದ್ದರೂ ಅವನನ್ನು 'ಗೋ ಬ್ರಾಹ್ಮಣ ಹಿತ' ಎಂದು ವಿಶೇಷವಾಗಿ ಕರೆಯಲಾಯಿತು. ಅಂದರೆ ದೇಶದಲ್ಲಿ ಗೋವು ಮತ್ತು ಬ್ರಾಹ್ಮಣರು ನಿರಾತಂಕವಾಗಿ ಸ್ವಧರ್ಮನಿಷ್ಠರಾಗಿದ್ದರೆ ದೇಶ ಸುಭಿಕ್ಷೆಯಿಂದ ಕೂಡಿರುತ್ತದೆ. ಕಾಲಕ್ಕೆ ಸರಿಯಾಗಿ ಮಳೆ ಬರುತ್ತದೆ. 'ಯಜ್ಞಾತ್ ಭವತಿ ಪರ್ಜನ್ಯಃ' ಸಸ್ಯವೃದ್ಧಿಗೆ ಕಾರಣವಾದ ಮಳೆ ಸರಿಯಾಗಿ ಬರಬೇಕಾದರೆ ಯಜ್ಞ ಕಾರಣ. ಸದ್‌ಬ್ರಾಹ್ಮಣರು ಮಾಡಿದ ಯಜ್ಞ ಎಂದೂ ನಿಷ್ಫಲವಾಗುವುದಿಲ್ಲ. ಹಿಂದೆ ಪಾಂಡವರು ದ್ರೌಪದೀಸಹಿತರಾಗಿ ಅರಗಿನ ಮನೆಯಲ್ಲಿ ಸುಟ್ಟರು ಎಂದು ಕೇಳಿದಾಗ ದ್ರುಪದರಾಜನು ಅದನ್ನು ನಂಬಲೇ ಇಲ್ಲ. ಯಾಜೋಪಯಾಜರಂಥ ಕರ್ಮಠ ಬ್ರಾಹ್ಮಣರು ಮಾಡಿದ ಯಜ್ಞದಿಂದ ಸಮುದ್ಭೂತಳಾದ ಯಾಜ್ಞಸೇನಿಗೆ ಖಂಡಿತಾ ಅಂತಹ ಆಪತ್ತು ಬರಲಾರದು ಎಂದು ದೃಢವಾದ ನಂಬಿಕೆಯಿತ್ತು ಅವನಿಗೆ. ಅದರಂತೆ ಅದು ಸತ್ಯವೂ ಆಯಿತು. ಆದ್ದರಿಂದ ಬ್ರಾಹ್ಮಣರು ಸ್ವಧರ್ಮನಿಷ್ಠರಾಗಿ ಯಜ್ಞಯಾಗಾದಿಗಳನ್ನು ಮಾಡುತ್ತಲಿದ್ದರೆ ದೇಶ ಸುಭಿಕ್ಷೆಯಿಂದ ಕೂಡಿರುತ್ತದೆ. ಯಜ್ಞಕ್ಕೆ ಆಹುತಿರೂಪವಾಗಿ ಬೇಕಾದ ವಸ್ತು ಘೃತ. ಅದಕ್ಕಾಗಿ ಹಸುಗಳು ಬೇಕು. ಹೀಗೆ ಹಸು, ಸದ್‌ಬ್ರಾಹ್ಮಣರು ಇವೆರಡಿದ್ದರೆ ಎಲ್ಲವೂ, ಎಲ್ಲರೂ ಸಮೃದ್ಧರಾಗಿ ದ್ದಂತೆ. ಆದ್ದರಿಂದ ಶ್ರೀಕೃಷ್ಣ ಗೋಬ್ರಾಹ್ಮಣರಿಗೆ ಹಿತವನ್ನು ಬಯಸಿದ್ದ.

೭. ೧೨. ದಕ್ಷಿಣಾಭಿಃ ಸಾಕಮ್

ಹರಿವಂಶದ ಧನ್ಯಾಶ್ಚರ್ಯ ಪ್ರಕರಣದಲ್ಲಿ ಬಂದಿರುವಂತೆ ನಾರದರು ಕೂರ್ಮಾದಿಗಳಲ್ಲಿಗೆ ಕ್ರಮವಾಗಿ ಹೋಗಿ 'ಧನ್ಯೋऽಸಿ ಆಶ್ಚರ್ಯೋऽಸಿ' ಎಂದಾಗ ಅವರ್ಯಾರೂ ಈ ಮಾತಿನ ವ್ಯಕ್ತಿತ್ವವನ್ನು ತಮ್ಮಲ್ಲಿ ಒಪ್ಪಿಕೊಳ್ಳದೆ, ತಮಗಿಂತ ಉತ್ತಮರಾದವರನ್ನು ತೋರಿಸಿಕೊಡಲು ಕೊನೆಗೆ ಯಜ್ಞಾದೇವಿಯಲ್ಲಿ ಈ ಮಾತನ್ನು ಹೇಳಲು ಅವಳೂ ಭಗವಂತನೇ ಈ ಮಾತಿಗೆ ಯೋಗ್ಯನೆಂದು ತೋರಿಸಿಕೊಡಲು ಅದರಂತೆ ನಾರದರು ರೈವತಪರ್ವತದಲ್ಲಿರುವ ಶ್ರೀಕೃಷ್ಣನಲ್ಲಿಗೆ ಬಂದು ಈ ಮಾತನ್ನು ಹೇಳಿದಾಗ ಅವನು ಉತ್ತರಿಸಿದುದು –'ದಕ್ಷಿಣಾಭಿಃ ಸಾಕಮ್' ಈ ಮಾತಿನ ಮೇಲ್ನೋಟದ ಅರ್ಥ ದಕ್ಷಿಣಾದೇವಿಯಿಂದ ಕೂಡಿದಾಗಷ್ಟೇ ನಾನು [ಶ್ರೀಕೃಷ್ಣ] ಧನ್ಯ, ಆಶ್ಚರ್ಯ ಅರ್ಥಾತ್ ಸರ್ವೋತ್ತಮ. ಆದರೆ ಶ್ರೀಕೃಷ್ಣ ಸಹಜವಾಗಿ ಉತ್ತಮನಾಗಿರುವವನು. ಆದ್ದರಿಂದ ಅವನು ಉತ್ತಮನೆನಿಸಲು ದಕ್ಷಿಣಾದೇವಿಯ ಕೂಡಿಕೆ ಬೇಕೆ?

ಆದುದರಿಂದ ಈ ಮಾತಿಗೆ ಮೇಲ್ನೋಟದ ಅರ್ಥವಲ್ಲ. ಶ್ರೀಮದಾಚಾರ್ಯರು ಮಹಾಭಾರತತಾತ್ಪರ್ಯನಿರ್ಣಯದಲ್ಲಿ (20-64-77) ಈ ಮಾತಿನ ಎರಡು ಅಭಿಪ್ರಾಯಗಳನ್ನು ಸ್ಪಷ್ಟೀಕರಿಸಿದ್ದಾರೆ– ಯಜ್ಞ ಹೆಸರಿನ ಲಕ್ಷ್ಮೀದೇವಿಯ ಸೂಚನೆ ಯಂತೆ, ಅವಳ ಬಳಿಕ ನನ್ನಲ್ಲಿ (ಶ್ರೀಕೃಷ್ಣನಲ್ಲಿ) 'ನೀನು ಧನ್ಯನಾಗಿರುವಿ' ಎಂದ ನೀನು (ನಾರದರು) ನಾನು ಯಜ್ಞಳಿಗಿಂತಷ್ಟೇ ಉತ್ತಮ ಎಂದು ಭಾವಿಸಬಹುದು. ಆದರೆ ಅವಳಿಂದಷ್ಟೇ ನಾನು ಉತ್ತಮನಾಗಿರುವುದಲ್ಲ. 'ದಕ್ಷಿಣಾ' ಅನಿಸುವ ಲಕ್ಷ್ಮೀದೇವಿಯ ರೂಪಗಳಿಂದ ಕೂಡಿದ ಯಜ್ಞದೇವಿಗಿಂತಲೂ ಉತ್ತಮನಾಗಿರುವೆನು. ಯಜ್ಞ ಹೆಸರಿನ ರೂಪಗಳೂ ಲಕ್ಷ್ಮೀದೇವಿಯ ರೂಪಗಳೇ. ಶ್ರೀಹರಿಯ ಎದೆಯನ್ನಾಶ್ರಯಿಸಿರುವವಳು ದಕ್ಷಿಣಾದೇವಿ. ಭಗವಂತನ ಹೆಚ್ಚು ಸನ್ನಿಧಾನವುಳ್ಳ ಈಕೆಯಿಂದೊಡಗೂಡಿದಾಗಷ್ಟೆ ಶ್ರೀಹರಿಯು ಉತ್ತಮನಾಗುವನೆಂಬ ಭಾವನೆಗೆ ಹೆಚ್ಚು ಅವಕಾಶವಿರುವುದರಿಂದ ಶ್ರೀಕೃಷ್ಣನು ಅದನ್ನು ಅಲ್ಲಗಳೆಯುವುದಕ್ಕಾಗಿ ಆಕೆಯಿಂದೊಡಗೂಡಿದ ಯಜ್ಞೆಗಿಂತಲೂ ತಾನು ಉತ್ತಮ ಎಂದು ಸ್ಪಷ್ಟೀಕರಿಸಿರುವನು. ಶ್ರೀಮದಾಚಾರ್ಯರು '...ಸ ಚಾಹ ನ ಕೇವಲಂ....' ಇತ್ಯಾದಿ ಮಾತುಗಳಲ್ಲಿ ಈ ಅಭಿಪ್ರಾಯವನ್ನು ತೋರಿಸಿರುವರು.

ಮಧ್ಯದಲ್ಲಿ '..........ಯದಾ ತು ಸಾ...........' ಇಲ್ಲಿಂದ '............ಸ್ಯಾಮರ್ಧ ನಾರಾಯಣಾಖ್ಯಃ । ತದಾ.........' ಈ ಮಾತು ಲಕ್ಷ್ಮೀದೇವಿಯ ದಕ್ಷಿಣ ಎಂಬ ಹೆಸರಿನ ಔಚಿತ್ಯವನ್ನೂ ತಾನು ಅರ್ಧನಾರಾಯಣ ಎನಿಸುವ ಬಗೆಯನ್ನೂ ಹೇಳಹೊರಟದ್ದಷ್ಟೇ ಹೊರತು 'ದಕ್ಷಿಣಾಭಿಃ ಸಾಕಮ್' ಎಂಬ ಮಾತಿನ ಅಭಿಪ್ರಾಯನಿರೂಪಣೆಗೆ ಹೊರಟಿದ್ದಲ್ಲ.

ದಕ್ಷಿಣಾದೇವಿಯಿಂದ ಕೂಡಿರುವ ಕೂರ್ಮ ಮೊದಲಾದವನ್ನೆಲ್ಲ ಒಳಗೊಂಡ ಜಗತ್ತಿಗಿಂತೆಲ್ಲ ತಾನು ಉತ್ತಮನಾಗಿರುವೆನೆಂಬುದು ಶ್ರೀಕೃಷ್ಣನ ಮತ್ತೊಂದು ಅಭಿಪ್ರಾಯ. (ತಾಭಿಶ್ಚೈತಾಭಿರ್ದಕ್ಷಿಣಾಭಿಸ್ಸಮೇತಾದ್ವರಿಷ್ಠೋऽಹಂ ಜಗತಸ್ಸರ್ವದೈವ)

ಈ ಎರಡು ಅರ್ಥಗಳಲ್ಲೂ ತಾನು ಸರ್ವೋತ್ತಮನಾದರೆ ತನ್ನ ಬಳಿಕ ದಕ್ಷಿಣಾ ದೇವಿ ಸರ್ವೋತ್ತಮಳೆಂದು ತಿಳಿಸಿಕೊಡುವುದೂ ಶ್ರೀಕೃಷ್ಣನ ಆಶಯ. [....ಅನ್ಯೋತ್ತಮತ್ವಂ ದಕ್ಷಿಣಾನಾಂ ಚ ಶಶ್ವತ್....] ಸಹಯುಕ್ತೇಽಪ್ರಧಾನೇ' ಎಂಬ ಸೂತ್ರದಂತೆ 'ಅಪ್ರಧಾನ ಉತ್ತಮತ್ವ'ವನ್ನಿಟ್ಟುಕೊಂಡು 'ದಕ್ಷಿಣಾಭಿಃ' ಎಂಬುದಾಗಿ ತೃತೀಯಾ ವಿಭಕ್ತಿಯನ್ನು ಬಳಸಲಾಗಿದೆ ತಾನೆ?

●

೭. ೧೩. ಗೀತೆ ವರ್ಷಿಸುವ ಅದ್ವೈತಾಮೃತ

ಭಗವದ್ಗೀತೆ ಪಠನದ ಮೊದಲು ಪಠಿಸಲಾಗುವ ಧ್ಯಾನಶ್ಲೋಕಗಳಲ್ಲಿ 'ಪಾರ್ಥಾಯ ಪ್ರತಿಬೋಧಿತಾಂ....' ಎಂಬ ಶ್ಲೋಕವೂ ಒಂದಾಗಿದ್ದು, ಇದರಲ್ಲಿ ಭಗವದ್ಗೀತೆ ಅದ್ವೈತಾಮೃತದ ಮಳೆಗರೆಯುತ್ತಿದೆ –'ಅದ್ವೈತಾಮೃತವರ್ಷಿಣೀಂ' ಎಂಬ ಮಾತೊಂದಿದೆ. ಈ ಶ್ಲೋಕದ ಪ್ರಾಮಾಣ್ಯವೇ ವಿಚಾರಾರ್ಹವಾದುದು.

ಇರಲಿ, ಇದು ಪ್ರಮಾಣವೆಂದೇ ಇಟ್ಟುಕೊಂಡರೂ ಇಲ್ಲಿ ಗೀತೆಯನ್ನು ಎಂತಹ ಅದ್ವೈತಾಮೃತದ ಮಳೆಗರೆಯುವುದನ್ನಾಗಿ ಉಲ್ಲೇಖಿಸಲಾಗಿದೆ ಎಂಬುದನ್ನು ಚೆನ್ನಾಗಿ ವಿಶ್ಲೇಷಿಸಿಕೊಳ್ಳಬೇಕಾಗಿದೆ. ಗೀತೆಯಲ್ಲಿ ಎಂತಹ ಅದ್ವೈತಾಮೃತ ತುಂಬಿ ತುಳುಕುತ್ತಿದೆಯೋ, ಎಂತಹ ಅದ್ವೈತಾಮೃತವನ್ನು ಸುರಿಸಿದರೆ ಅದರ ಪ್ರವೃತ್ತಿ, ಉದ್ದೇಶಾದಿಗಳು ಸಿದ್ಧಿಸಬಲ್ಲವೋ ಅಂತಹ ಅದ್ವೈತಾಮೃತದ ವರ್ಷಣವೇ ಅಲ್ಲಿ ವರ್ಣಿಸಲ್ಪಟ್ಟಿದ್ದಿರಬೇಕಲ್ಲವೇ?

ಅದ್ವೈತವಾದಿಗಳು ಮಂಡಿಸುವ ಅದ್ವೈತತತ್ತ್ವ ಗೀತೆಯ ಯಾವೊಂದು ಶ್ಲೋಕದಲ್ಲೂ ಪ್ರಸ್ತಾವಿಸಲ್ಪಡದ ಪ್ರಯುಕ್ತ ಗೀತೆಯಲ್ಲಿ ವರ್ಣಿಸಲ್ಪಡುತ್ತಿರುವ ಅದ್ವೈತಾಮೃತವೆಂದರೆ ಆ ಅದ್ವೈತಾಮೃತವೆನ್ನುವಂತಿಲ್ಲ.

ಅಲ್ಲದೆ, ಆ ಅದ್ವೈತವೇ ಗೀತಾಪ್ರತಿಪಾದ್ಯವೆಂದಿಟ್ಟುಕೊಂಡಲ್ಲಿ ಗೀತೋಪದೇಶ ದಿಂದಾಗಿ ಆ ಅದ್ವೈತಾಮೃತವನ್ನು ಸಂಪಡಿಸಿಕೊಂಡ ಅರ್ಜುನನು ಯುದ್ಧೋನ್ಮುಖ ನಾದನೆಂಬುದು ಕೂಡಲಾರದು.

ಅರ್ಜುನನು ಯುದ್ಧದಿಂದ ಹಿಂಜರಿಯಲು ಮುಖ್ಯ ಕಾರಣ ಭೀಷ್ಮಾದಿಗಳ ಕುರಿತಾದ ಬಂಧು ವ್ಯಾಮೋಹ. ಇಂತಹ ಅರ್ಜುನನಿಗೆ ಭೀಷ್ಮಾದಿಗಳಲ್ಲಷ್ಟೇ ಅಲ್ಲದೆ ರಣರಂಗದಲ್ಲಿ ಸೇರಿದವರಲ್ಲೆಲ್ಲ ಆತ್ಮೈಕ್ಯದ ಭಾವನೆ ಬಲಿಯಿತೆಂದರೆ, ಅದರಿಂದಾಗಿ ಅವರಲ್ಲೆಲ್ಲ ಆತ್ಮೀಯತೆ ಬೆಳೆದು, ದೃಢವಾಗಿ ಅವರ ಹಿಂಸೆಗೆ ಕಾರಣವಾದ ಯುದ್ಧದಲ್ಲಿ ಅವನು ಹೇಗೆ ತಾನೇ ತೊಡಗಿಯಾನು? ಅದ್ವೈತವಾದ ಸಾರುವಂತೆ ಯುದ್ಧವೆಲ್ಲ ವ್ಯಾವಹಾರಿಕವಾದಲ್ಲಿ, ಅದರ ವ್ಯಾವಹಾರಿಕತೆಯನ್ನು ವಿವೇಚಿಸಿಕೊಂಡ ವನು ಅಂತಹ ಯುದ್ಧದಲ್ಲಿ ಹೇಗೆ ಪಾಲ್ಗೊಂಡಾನು? ವೇದಿಕೆಯ ಮೇಲೆ ನಾಟಕದ ಅಂಗವಾಗಿ ನಡೆಯುತ್ತಿರುವ ವ್ಯಕ್ತಿಗಳೀರ್ವರ ನಡುವಿನ ಕಾದಾಟ ಬರೇ

ನಾಟಕೀಯವೇ ಹೊರತು ನೈಜವಲ್ಲ ಎಂದರಿತ ನಾವು, ಆ ಕಾದಾಟದಲ್ಲಿ ಭಾಗವಹಿಸುವೆವೇ?

ಬದಲಾಗಿ, ಅರ್ಜುನ ಮೊದಲು ಯುದ್ಧದಿಂದ ಹಿಮ್ಮುಖನಾಗಲು ಅದ್ವೈತ ಭ್ರಮೆಯೇ ಕಾರಣವೆಂಬುದು ಗಮನಾರ್ಹ. ಭಗವಂತನು ಸ್ವತಂತ್ರಕರ್ತಾರನಾಗಿ ನಡೆಸುವ ಯುದ್ಧವನ್ನು ಅರ್ಜುನನು ತಾನೇ ಸ್ವತಂತ್ರನಾಗಿ ನಡೆಸುವುದೆಂದು ಭ್ರಮಿಸಿದ್ದರಿಂದ ತಾನೇ ಅವನಿಗೆ ಪಾಪದ ಭೀತಿ ಕಾಡಿತು? ಭಗವಂತನ ಅಸಾಧಾರಣ ಧರ್ಮವಾದ ಸ್ವತಂತ್ರ ಕರ್ತೃತ್ವವನ್ನು ತನ್ನಲ್ಲಿ ಆರೋಪಿಸಿಕೊಳ್ಳುವುದೆಂದರೆ ತಾನೇ ಭಗವಂತನೆಂದು ಭ್ರಮಿಸುವುದಕ್ಕಿಂತೇನೂ ಕಡಿಮೆಯಲ್ಲ; ಹೀಗೆ ಅರ್ಜುನನಲ್ಲಿ ಸಹಜವಾಗಿಯೇ ಬೇರೂರಿರುವ ಅದ್ವೈತಜ್ಞಾನಕ್ಕಾಗಿ ಗೀತೋಪದೇಶದ ಆವಶ್ಯಕತೆಯೇ ಇಲ್ಲವೆಂದಾದೀತು! ಆದ್ದರಿಂದ ಭಗವದ್ಗೀತೆ ಸಾರುತ್ತಿರುವ ಅದ್ವೈತವೆಂದರೆ ಅದ್ವೈತವಾದಿಗಳು ಪ್ರತಿಪಾದಿಸಿರುವ ಅದ್ವೈತವಲ್ಲ; ಮತ್ತೆ ನಾರದರು ಯುಧಿಷ್ಠಿರನಿಗೆ ಉಪದೇಶಿಸಿದರೆಂದು ಭಾಗವತ ಸಪ್ತಮಸ್ಕಂಧದ ಕೊನೆಯ ಅಧ್ಯಾಯದಲ್ಲಿ (62-65) ಉಲ್ಲೇಖಿಸಲಾದ ಭಾವಾದ್ವೈತ, ದ್ರವ್ಯಾದ್ವೈತ ಹಾಗೂ ಕ್ರಿಯಾದ್ವೈತವೆಂಬ ಅದ್ವೈತತ್ರಯದಲ್ಲಿಯ ದ್ರವ್ಯಾದ್ವೈತ ಹಾಗೂ ಕ್ರಿಯಾದ್ವೈತ.

ದೈಹಿಕವಾಗಿಯಾಗಲೀ ವಾಚಿಕವಾಗಿಯಾಗಲೀ ಮಾನಸಿಕವಾಗಿಯಾಗಲೀ ನಮ್ಮಿಂದ ನಡೆಯುವ ಕ್ರಿಯೆಗಳಿಗೆಲ್ಲ ಸ್ವತಂತ್ರಕರ್ತೃ ಭಗವಂತನೇ ಆಗಿರುವನೆಂದು ಭಾವಿಸಿ ಅವೆಲ್ಲವುಗಳನ್ನು ಅವನಿಗೆ ಸಮರ್ಪಿಸುವುದೇ ಕ್ರಿಯಾದ್ವೈತವೆನಿಸಿದೆ.

ತಾನು ಹಾಗೂ ತನ್ನ ಬಂಧುಗಳೆಲ್ಲ ಭಗವದಧೀನರೆಂಬ ವಿವೇಚನೆ ದ್ರವ್ಯಾದ್ವೈತವೆನಿಸಿದೆ.

ಭಗವದ್ಗೀತೆಯಲ್ಲಿ ಅಲ್ಲಲ್ಲಿ ಈ ಅದ್ವೈತಗಳ ಪ್ರಸ್ತಾಪ ಬರುವುದು. ಅದ್ವೈತವಾದಿಗಳ ಅದ್ವೈತ ಅರ್ಜುನನ ನಿಷ್ಕ್ರಿಯತೆಯ ಪ್ರವೃತ್ತಿಯನ್ನು ಇನ್ನಷ್ಟು ಉಲ್ಬಣಿಸುವ ವಿಷದಂತಿದ್ದರೆ ಈ ಅದ್ವೈತಗಳು ಅರ್ಜುನನ ಸಂದೇಹ ರೋಗವನ್ನು ಬೇರುಸಹಿತವಾಗಿ ಕಿತ್ತೆಸೆಯಬಲ್ಲ ಅಮೃತವೇ ಆಗಿವೆ.

ಅರ್ಜುನನು ಯುದ್ಧದಿಂದ ಹಿಂಜರಿಯಲು ಪ್ರಧಾನ ಕಾರಣ ಬಂಧು ವ್ಯಾಮೋಹವಾದರೆ ಅಪ್ರಧಾನ ಕಾರಣ ಪಾಪದ ಭೀತಿ. ಇವುಗಳಲ್ಲಿ ಬಂಧು ವ್ಯಾಮೋಹವನ್ನು 'ದ್ರವ್ಯಾದ್ವೈತ'ವು ಕರಗಿಸುವುದು, ಪಾಪದ ಭೀತಿಯನ್ನು 'ಕ್ರಿಯಾದ್ವೈತ'ವು ಹೋಗಲಾಡಿಸುವುದು.

●

ವಿದ್ಯಾಭಂಡಾರ

ನಿಧಿ – ೮

ಪರಮತವಿಮರ್ಶೆ



"ಕಾವಲುಗಾರನಾಗಿ ಇದ್ದ ಒಬ್ಬನು ಕಳ್ಳರು ಪ್ರವೇಶಿಸಿದರೂ ಕಳ್ಳರ ದ್ವೇಷ ಮಾಡಬಾರದು ಎಂಬ ದೃಷ್ಟಿಯಿಂದ ತನ್ನ ಒಡೆಯನಿಗೆ ತಿಳಿಸದೇ ಇದ್ದರೆ, ವಿರೋಧಿಸದೇ ಇದ್ದರೆ ಹೇಗೆ ತಪ್ಪಾಗುವುದೋ ಹಾಗೆ ಪೀಠಸ್ಥರು ತಮಗೆ 'ಮತದ್ವೇಷ ಮಾಡುವವರು' ಎಂಬ ಅಪಕೀರ್ತಿ ಬರುವುದು ಎಂಬ ಹೆದರಿಕೆಯಿಂದ ಮತದ ತತ್ವಗಳ ವಿಮರ್ಶೆ ಮಾಡದಿರುವುದು ಅಪರಾಧವಾಗುವುದು."

೮. ೧. ಶರೀರೇಂದ್ರಿಯಗಳೇ ಆತ್ಮನಲ್ಲ

ಆತ್ಮನು ಅವಿನಾಶಿ. ಶರೀರೇಂದ್ರಿಯಗಳು ನಶ್ವರ. ಆದ್ದರಿಂದ ಆತ್ಮನು ಬೇರೆಯೆ. ನಾಸ್ತಿಕರು ಇದನ್ನು ಒಪ್ಪುವುದಿಲ್ಲ. ಈ ವಿವಾದದಿಂದಾಗಿ ಸಂಶಯ ಬಂದರೆ ಅದಕ್ಕೆ ಪರಿಹಾರ ಹೇಗೆ–

ಜ್ಞಾನವು ಉತ್ಪತ್ತಿಯಾಗುವುದು ಹೇಗೆ? ಅದು ಎಲ್ಲಿ ಇರುತ್ತದೆ? ನಾಸ್ತಿಕರು ಹೇಳುತ್ತಾರೆ, ಶರೀರೇಂದ್ರಿಯಗಳ ಸಮುದಾಯದಲ್ಲಿ ಜ್ಞಾನವು ಹುಟ್ಟಿ ಅಲ್ಲಿಯೇ ಇರುತ್ತದೆ ಎಂದು. ಆದರೆ ಪಾಂಚಭೌತಿಕವಾದ ಈ ಶರೀರ ಇಂದ್ರಿಯಗಳೆಲ್ಲ ಜಡ. ಅವುಗಳಲ್ಲಿ ಜ್ಞಾನವಿರಲು ಶಕ್ಯವೇ ಇಲ್ಲ. ಪಂಚಭೂತಗಳಲ್ಲಿ ಇಲ್ಲದ ಜ್ಞಾನ ಆ ಪಂಚಭೂತಗಳಿಂದಲೆ ಹುಟ್ಟಿದ ಶರೀರೇಂದ್ರಿಯಗಳಲ್ಲಿ ಹೇಗೆ ಇದ್ದೀತು? ಪಂಚಭೂತ ಗಳಲ್ಲಿ ಪ್ರತ್ಯೇಕವಾಗಿ ಜ್ಞಾನವಿಲ್ಲದಿದ್ದರೂ ಅವುಗಳ ಮೇಲನವಾದಾಗ ಜ್ಞಾನ ಹುಟ್ಟಬಹುದು ಎನ್ನುವುದು ಸರಿಯಲ್ಲ. ಒಬ್ಬ ಕುರುಡನು ಮಾರ್ಗದಲ್ಲಿ ಹೇಗೆ ನಡೆಯಲಾರನೋ ಹಾಗೆಯೆ ನಾಲ್ಕೈದು ಮಂದಿ ಕುರುಡರು ಸೇರಿದರೂ ನಡೆಯಲಾರರು. ಕಣ್ಣುಳ್ಳವನು ಒಬ್ಬ ಸಹಾಯಕನಿದ್ದರೆ ನಡೆಯಬಲ್ಲರು. ಹಾಗೆಯೆ ಜ್ಞಾನವಿಲ್ಲದ ಜಡವಾದ ಪಾಂಚಭೌತಿಕ ಶರೀರ, ಇಂದ್ರಿಯಗಳು ಒಬ್ಬ ಆತ್ಮನ ಸಂಪರ್ಕ ಹೊಂದಿದಾಗ ಜ್ಞಾನ ಉಂಟುಮಾಡಬಹುದು. ಸ್ವತಃ ಅಲ್ಲ. ಆತ್ಮನ ಸಂಪರ್ಕದಿಂದ ಜ್ಞಾನ ಉಂಟಾಯಿತೆಂದರೆ ಜ್ಞಾನ ಆತ್ಮನ ಗುಣವೆಂದ ಹಾಗಾಯಿತು. ನೀರು ಸಾಮಾನ್ಯವಾಗಿ ವಾಸನೆ ಇಲ್ಲದ ಪದಾರ್ಥ. ಒಂದು ಕಡೆ ನೀರು ಪರಿಮಳಯುಕ್ತವಾಗಿ ಕಂಡರೆ ಆ ನೀರಿಗೆ ಸುಗಂಧದ್ರವ್ಯದ ಸಂಪರ್ಕವಾಗಿದೆ ಎಂದು ನಾವು ಊಹಿಸುತ್ತೇವೆ. ಹಾಗೆಯೇ ಜಡವಾದ ಶರೀರ ಇಂದ್ರಿಯಗಳಲ್ಲಿ ಜ್ಞಾನಕಾರ್ಯ ಕಂಡುಬರುವುದು ಜ್ಞಾನವುಳ್ಳ ಆತ್ಮನ ಸಂಬಂಧಪ್ರಯುಕ್ತವೆನ್ನಲು ಅಡ್ಡಿಯಿಲ್ಲ.

ವೀಳ್ಯದೆಲೆ, ಅಡಿಕೆ, ಸುಣ್ಣಗಳು ಸೇರಿದಾಗ ಕೆಂಪುಬಣ್ಣ ಉಂಟಾಗುವಂತೆ ಪಂಚಭೂತಗಳಲ್ಲಿ ಪ್ರತ್ಯೇಕವಾಗಿ ಜ್ಞಾನವಿಲ್ಲದಿದ್ದರೂ ಅವು ಒಟ್ಟು ಸೇರಿ ಶರೀರ ಇಂದ್ರಿಯಗಳೆನಿಸಿದಾಗ ಜ್ಞಾನವೇಕೆ ಹುಟ್ಟಬಾರದು? ಜ್ಞಾನವುಳ್ಳ ಆತ್ಮ ಎಂಬ ವಸ್ತು ಬೇರೆಯೆ ಇದೆ ಎಂದೇಕೆ ಕಲ್ಪಿಸಬೇಕು? ಅದು ವ್ಯರ್ಥವಲ್ಲವೆ? ಎಂಬ ಆಕ್ಷೇಪವೂ ಸರಿಯಲ್ಲ. ಎಲೆ ಅಡಿಕೆ ಸುಣ್ಣಗಳ ಸಮುದಾಯದಲ್ಲಿ ಉಂಟಾದ ಕೆಂಪುಬಣ್ಣ ಹಾಗೆಯೇ ಇರುತ್ತದೆ, ನಾಶವಾಗುವುದಿಲ್ಲ. ಶರೀರ ಇಂದ್ರಿಯಗಳ ಸಮುದಾಯದಲ್ಲಿ ಉಂಟಾದ ಜ್ಞಾನ ನಿದ್ದೆ ಮೂರ್ಛೆ ಮರಣಗಳಲ್ಲಿ ನಾಶಹೊಂದುತ್ತದೆ. ಇದಕ್ಕೆ ಏನು

ಕಾರಣ? ಮೃತಶರೀರದಲ್ಲಿ ಪ್ರಾಣವಾಯು ಸಂಚಾರವಿಲ್ಲ. ನಿದ್ದೆ ಮೂರ್ಛೆಗಳಲ್ಲಿ ಇಂದ್ರಿಯಗಳು ಉಪರತವಾಗಿವೆ ಎಂದು ಕಾರಣ ಹೇಳುವುದಾದರೆ ಪ್ರಾಣಸಂಚಾರ ವಿರುವಾಗ, ಇಂದ್ರಿಯಗಳೂ ಸರಿಯಾಗಿ ಇರುವಾಗ ಉತ್ಪನ್ನವಾದ ಜ್ಞಾನವು ಮರಣಾದಿ ಅವಸ್ಥೆಗಳಲ್ಲಿಯೂ ಹಾಗೇ ಇರಬಹುದಲ್ಲವೆ?

ಆತ್ಮನು ಬೇರೆಯೆ ಇದ್ದಾನೆ ಎಂಬ ಪಕ್ಷದಲ್ಲಿ ಮೃತಶರೀರದಿಂದ ಆತ್ಮ ತೊಲಗಿದ್ದಾನೆ. ನಿದ್ರಾದಿ ಕಾಲದಲ್ಲಿ ಆತ್ಮನಿದ್ದರೂ ಇಂದ್ರಿಯಗಳು ಉಪರತವಾಗಿವೆ. ಆತ್ಮನು ಇದ್ದು ಇಂದ್ರಿಯಗಳೂ ಸರಿಯಾಗಿಯೇ ಇದ್ದಾಗ ಉತ್ಪನ್ನವಾದ ಜ್ಞಾನವು ನಿದ್ರಾದಿ ಕಾಲದಲ್ಲಿ ಏಕೆ ಉಳಿಯುವುದಿಲ್ಲವೆಂದರೆ ಆಗ ಆತ್ಮ ಮನಸ್ಸುಗಳಿಗೆ ಸಂಬಂಧವಿರುವುದಿಲ್ಲ. ಸಂಬಂಧವಿರುವಷ್ಟು ಕಾಲ ಮಾತ್ರ ಅದರಿಂದ ಹುಟ್ಟಿದ ಜ್ಞಾನವಿರುತ್ತದೆ. ಬಟ್ಟೆಯು ನೂಲಿನ ಎಳೆಗಳ ಪರಸ್ಪರ ಸಂಬಂಧವಿರುವಷ್ಟು ಕಾಲ ಮಾತ್ರ ಅಸ್ತಿತ್ವದಲ್ಲಿರುತ್ತದೆ. ಆ ಸಂಬಂಧ ಬಿಟ್ಟುಹೋದಾಗ ಬಟ್ಟೆ ಇರುವುದಿಲ್ಲ. ಹಾಗೆಯೇ ನಿದ್ರಾದಿ ಕಾಲದಲ್ಲಿ ಆತ್ಮಮನಃಸಂಯೋಗವಿಲ್ಲದಿರುವುದರಿಂದ ಜ್ಞಾನವೂ ಇರುವುದಿಲ್ಲ. ಹಿಂದೆ ಉಂಟಾದ ಜ್ಞಾನ ನಾಶವಾಗಿರುತ್ತದೆ. ಬೇರೆ ಜ್ಞಾನ ಉತ್ಪತ್ತಿ ಆಗುತ್ತಿರುವುದಿಲ್ಲ. ಜ್ಞಾನ ಉಂಟಾಗಬೇಕಾದರೆ ಆತ್ಮನಿಗೂ ಮನಸ್ಸಿಗೂ ಸಂಬಂಧ ವಾಗಲೇ ಬೇಕು.

ಇಲ್ಲಿ ನಾಸ್ತಿಕರು ವಾದಿಸಬಹುದು, 'ಜ್ಞಾನ ಉಂಟಾಗಬೇಕಾದರೆ ಪ್ರಾಣ ವಾಯುವಿಗೂ ಅನುಪರತ ಅಂದರೆ ಉಪರತವಲ್ಲದ ಇಂದ್ರಿಯಗಳಿಗೂ ಸಂಬಂಧ ವಾಗಬೇಕು ಎಂದು ನಾವು ಹೇಳುತ್ತೇವೆ. ನಿದ್ರಾದಿ ಕಾಲದಲ್ಲಿ ಈ ಸಂಬಂಧ ವಿರುವುದಿಲ್ಲ. ಏಕೆಂದರೆ ನಿದ್ದೆ ಹಾಗೂ ಮೂರ್ಛಾವಸ್ಥೆಗಳಲ್ಲಿ ಇಂದ್ರಿಯಗಳು ಉಪರತವಾಗಿರುತ್ತವೆ. ಮರಣಾವಸ್ಥೆಯಲ್ಲಿ ಪ್ರಾಣವಾಯು ಇರುವುದಿಲ್ಲ. ಆದ್ದರಿಂದ ಜ್ಞಾನ ಉತ್ಪತ್ತಿಯಾಗುವುದಿಲ್ಲ. ಹಿಂದೆ ಉತ್ಪನ್ನವಾದ ಜ್ಞಾನವೂ ಪ್ರಾಣವಾಯು ಇಂದ್ರಿಯಸಂಬಂಧವಿರುವಷ್ಟು ಕಾಲ ಮಾತ್ರ ಇರುವುದರಿಂದ ನಿದ್ರಾದಿಕಾಲದಲ್ಲಿ ನಾಶವಾಗುತ್ತದೆ ಎಂದು. ಆದರೆ ಒಂದೆರಡು ನೂಲಿನ ಎಳೆಗಳು ಬಿಟ್ಟು ಹೋದರೂ ಬಟ್ಟೆ ಇರುತ್ತದೆ. ಹಾಗೆಯೇ ಪ್ರಾಣವಾಯುವು ಇಂದ್ರಿಯಗಳ ಸಮುದಾಯದಲ್ಲಿ ಸೇರಿದ ಒಂದೆರಡು ಇಂದ್ರಿಯಗಳು ನಷ್ಟವಾದರೂ ಜ್ಞಾನ ಉಂಟಾಗುವುದು ಕಂಡಿರುವುದರಿಂದ ಪ್ರಾಣವಾಯು ತೊಲಗಿದರೂ ಜ್ಞಾನ ಉಂಟಾಗಬೇಕಾಯಿತು. ಪ್ರಾಣವಾಯು ಇಂದ್ರಿಯ ಸಂಯೋಗ ತಪ್ಪಿ ಹೋದರೂ ಜ್ಞಾನವಿರಬೇಕಾದೀತು. ಏಕೆಂದರೆ ಸಮುದಾಯದಲ್ಲಿ ಸೇರಿದ ಅನೇಕ ಇಂದ್ರಿಯಗಳೂ ಶರೀರವೂ ಹಾಗೇ ಇದೆ. ಆಸ್ತಿಕರ ಪಕ್ಷದಲ್ಲಿ ಆತ್ಮಮನಃಸಂಯೋಗದಿಂದ ಜ್ಞಾನ ಉತ್ಪನ್ನವಾಗಿದ್ದು ಆತ್ಮನಲ್ಲಿ ಇರುತ್ತದೆ. ಯಾವುದಾದರೊಂದು ಸಮುದಾಯದಲ್ಲಿ ಅಲ್ಲ. ಆದ್ದರಿಂದ ನಾಸ್ತಿಕರ ವಾದದಲ್ಲಿ ಉಂಟಾಗುವ ಸಮಸ್ಯೆ ಆಸ್ತಿಕರಿಗೆ ಬಾಧಕವಾಗುವುದಿಲ್ಲ.

೮. ೨. ಬ್ರಹ್ಮಜಿಜ್ಞಾಸೆಗೆ ಅಧಿಕಾರ

'ಅಥಾತೋ ಬ್ರಹ್ಮ ಜಿಜ್ಞಾಸಾ' ಎಂಬ ಮೊದಲ ಬ್ರಹ್ಮಸೂತ್ರದಲ್ಲಿ ಅಥ ಶಬ್ದದಿಂದ ಬ್ರಹ್ಮಜಿಜ್ಞಾಸೆಗೆ ಅಧಿಕಾರವನ್ನು ಸೂಚಿಸಲಾಗಿದೆ. ಅಧಿಕಾರ ಪ್ರಾಪ್ತ್ಯ ಅನಂತರ ಬ್ರಹ್ಮಜಿಜ್ಞಾಸೆಯನ್ನು ನಡೆಸಬೇಕೆಂಬುದಾಗಿ. ಅದ್ವೈತಮತದ ಪ್ರಕಾರ ವಾಗಲೀ ವಿಶಿಷ್ಟಾದ್ವೈತದ ಪ್ರಕಾರವಾಗಲಿ ಬ್ರಹ್ಮಜಿಜ್ಞಾಸೆಗೆ ಅಧಿಕಾರವೇ ಕೂಡಲಾಗದು. ಅದ್ವೈತಮತದಲ್ಲಿ ಅಥ ಶಬ್ದದ ಅರ್ಥವಾಗಿ ಮುಮುಕ್ಷುತ್ವ ಹಾಗೂ ವೈರಾಗ್ಯವನ್ನು ಬ್ರಹ್ಮಜಿಜ್ಞಾಸೆಗೆ ಅಧಿಕಾರವಾಗಿ ಹೇಳಲಾಗಿದೆ. ಆದರೆ ಅವರ ಪ್ರಕಾರ ಈ ಎರಡು ಧರ್ಮಗಳೂ ಪರಸ್ಪರ ವಿರುದ್ಧಗಳಾಗುವವು, ಮುಮುಕ್ಷುತ್ವ ಅಂದರೆ ಮುಕ್ತಿಯ ಇಚ್ಛೆ ಎಂದರ್ಥ. ಮುಕ್ತಿ ಎಂದರೆ ಆತ್ಮಸ್ವರೂಪಸುಖಾನುಭವ. ಇದರ ಇಚ್ಛೆಯೇ ಮುಮುಕ್ಷುತ್ವ ಎನಿಸಿದೆ. ವೈರಾಗ್ಯ ಎಂದರೆ ವಿಷಯಸುಖದ ಇಚ್ಛೆಯ ತ್ಯಾಗ. ವಿಷಯಸುಖವಾದರೂ ಆತ್ಮಸ್ವರೂಪಸುಖವೇ ಎಂಬುದಾಗಿ ವಿವರಣಕಾರ ಒಪ್ಪಿಕೊಂಡಿರುವನು. ಆದ್ದರಿಂದ ಮುಮುಕ್ಷುತ್ವ ಎಂದರೆ ಆತ್ಮಸ್ವರೂಪಾತ್ಮಕಸುಖದ ಇಚ್ಛೆಯಾದರೆ, ವೈರಾಗ್ಯವೆಂದರೆ ಸ್ವರೂಪ ಸುಖೇಚ್ಛೆಯ ತ್ಯಾಗ. ಹೀಗೆ ಇವೆರಡೂ ಪರಸ್ಪರವಾಗಿ ವಿರುದ್ಧಗಳೆಂದ ಮೇಲೆ ಎರಡೂ ಒಮ್ಮೆಗೇ ಸಿದ್ಧಿಸುವುದು ಹೇಗೆ?

ವಿಷಯಸುಖ ಆತ್ಮಸ್ವರೂಪ ಸುಖವೇ ಆಗಿರುವುದಾದರೂ ಅದು ಅಲ್ಪವಾದ ಸುಖ. ಮುಕ್ತಿಯಾದರೂ ಅಧಿಕವಾದ ಆತ್ಮಸ್ವರೂಪಸುಖ. ಆದ್ದರಿಂದ ಮಹಾ ಸುಖಕ್ಕಾಗಿ ಅಲ್ಪಸುಖಸ್ವರೂಪವಾದ ವಿಷಯಸುಖದಲ್ಲಿ ಇಚ್ಛಾತ್ಯಾಗ ಕೂಡಬಹುದು ತಾನೆ? –ಎಂಬ ಸಮರ್ಥನೆಯೂ ಅದ್ವೈತಿಗಳ ಪ್ರಕಾರ ಕೂಡಲಾರದು. ಅವರು ಆತ್ಮನನ್ನು ಅಖಂಡವೆಂದು ಒಪ್ಪುವವರು. ಅಂದಮೇಲೆ ಅಂತಹ ಆತ್ಮಸ್ವರೂಪಾತ್ಮಕ ಸುಖದಲ್ಲಿ ಸ್ವಲ್ಪ ಹೆಚ್ಚು –ಎಂಬ ಪ್ರಮಾಣ ತಾರತಮ್ಯವನ್ನು ಕೂಡಿಸುವುದಾದರೂ ಹೇಗೆ?

ಆದ್ದರಿಂದ ಅದ್ವೈತಿಗಳ ಪ್ರಕಾರ ಮುಮುಕ್ಷುತ್ವ ಹಾಗೂ ವೈರಾಗ್ಯ ಒಬ್ಬ ವ್ಯಕ್ತಿಯಲ್ಲಿ ಒಂದೇ ಕಾಲದಲ್ಲಿ ಕೂಡದ ಪ್ರಯುಕ್ತ ಆತ್ಮಜಿಜ್ಞಾಸೆಗೆ ಅಧಿಕಾರಿ ಇಲ್ಲ.

ಹೀಗೆಯೇ ರಾಮಾನುಜಮತದಲ್ಲೂ 'ಕರ್ಮ ವಿಚಾರಾನಂತರಂ' ಎಂಬುದಾಗಿ ಅಥ ಶಬ್ದಾರ್ಥ ನಿರೂಪಿಸುವ ಅವರ ಪ್ರಕಾರ ಕರ್ಮವಿಚಾರವೇ ಬ್ರಹ್ಮಜಿಜ್ಞಾಸೆಗೆ ಅಧಿಕಾರ. ಪೂರ್ವಮೀಮಾಂಸಾಶಾಸ್ತ್ರದಲ್ಲಿ ಕರ್ಮಗಳಿಗೂ ಅಲ್ಲಲ್ಲಿ ಅಕ್ಷಯಫಲವನ್ನು ಹೇಳಲ್ಪಡುವುದರಿಂದ, ಕರ್ಮಫಲ ಅಶಾಶ್ವತ, ಅಸಾರ –ಎಂದೆಲ್ಲ ವಿಚಾರ ಮಾಡುವ ವರೆಗೆ ಬ್ರಹ್ಮಜಿಜ್ಞಾಸಾದಲ್ಲಿ ಪ್ರವೃತ್ತಿಯು ಕೂಡಲಾರದು. ಆದ್ದರಿಂದ ಕರ್ಮ ಮೀಮಾಂಸಾದ ಬಳಿಕ ಬ್ರಹ್ಮಜಿಜ್ಞಾಸಾದಲ್ಲಿ ಅಧಿಕಾರ ಎಂಬುದು ಅವರ ಅಭಿಪ್ರಾಯ.

ಆದರೆ ಕರ್ಮಮೀಮಾಂಸಾ ಯಾವುದರ ಮೂಲಕ ನಡೆಸಬೇಕು? ಜೈಮಿನೀಯ ಸೂತ್ರಗಳಿಂದಷ್ಟೇ ಜ್ಞಾನ ಬರಲು ಸಾಧ್ಯವಿಲ್ಲ. ಯಾವುದಾದರೂ ಭಾಷ್ಯವನ್ನು

ಅವಲಂಬಿಸಬೇಕು. ಆದರೆ ಜೈಮಿನೀಯಸೂತ್ರಗಳ ಮೇಲೆ ಹೊರಟ ಪ್ರಭಾಕರ ಭಾಷ್ಯವಾಗಲೀ, ಭಾಟ್ಟ ಭಾಷ್ಯವಾಗಲೀ ಸೂತ್ರಗಳಿಗೆ ಅನನುಗುಣಗಳಾಗಿದ್ದು ಸೂತ್ರಗಳ ಅಭಿಪ್ರಾಯವನ್ನು ಸರಿಯಾಗಿ ಹೇಳುತ್ತಿಲ್ಲ –ಎಂಬುದಾಗಿ ಅವರೇ ಆದ್ಯ ಸೂತ್ರದ ಭಾಷ್ಯದಲ್ಲಿ ಸೂಚಿಸಿದ್ದಾರೆ. ಹೀಗಿರುವಾಗ ಆ ಭಾಷ್ಯವನ್ನು ಅವಲಂಬಿಸಿ ಕರ್ಮಸೂತ್ರಗಳನ್ನು ತಿಳಿದುಕೊಳ್ಳುವಂತಿಲ್ಲ. ಆದ್ದರಿಂದ ಕರ್ಮಸೂತ್ರಗಳ ಮೂಲಕ ಕರ್ಮವಿಚಾರ ನಡೆಸಲೇ ಆಗುವುದಿಲ್ಲ. ಕರ್ಮವಿಚಾರಾನಂತರದಲ್ಲಿ ತೊಡಗಬೇಕಾದ ಬ್ರಹ್ಮಮೀಮಾಂಸಾದಲ್ಲಿ ಹೇಗೆ ತಾನೇ ಪ್ರವೃತ್ತಿ ಕೂಡೀತು?

ಹೀಗೆ ಈ ಎರಡು ಮತಗಳ ಪ್ರಕಾರವೂ ಬ್ರಹ್ಮಜಿಜ್ಞಾಸೆಗೆ ಅಧಿಕಾರವೇ ಕೂಡಲಾರದು. ಶ್ರೀಮದಾಚಾರ್ಯರಾದರೂ ಪ್ರಮಾಣಪೂರ್ವಕವಾಗಿ ಬ್ರಹ್ಮ ಜಿಜ್ಞಾಸೆಗೆ ಹೇಳುವ ಜಾತಿಕೃತ ಅಧಿಕಾರದಲ್ಲಾಗಲೀ ಗುಣಕೃತ ಅಧಿಕಾರದಲ್ಲಾಗಲೀ ಯಾವುದೇ ಅನುಪಪತ್ತಿ ಇಲ್ಲದಿರುವುದರಿಂದ ಮಧ್ವಸಿದ್ಧಾಂತಾವಲಂಬಿಗಳಷ್ಟೇ ಬ್ರಹ್ಮಜಿಜ್ಞಾಸೆಗೆ ಅಧಿಕಾರಿಗಳೆಂದು ಸಿದ್ಧಿಸುವುದು.

●

೮. ೩. ಗೀತೆಯು ಅಭೇದವನ್ನು ಹೇಳುತ್ತದೆಯೋ?

ಪೂರ್ವಪಕ್ಷ: 'ತತ್ತ್ವಮಸಿ' ಎಂಬ ಉಪನಿಷತ್ತಿನಲ್ಲಿ ಹೇಳಿದ ಜೀವ ಮತ್ತು ಈಶ್ವರರಿಗೆ ಐಕ್ಯವನ್ನು ಹದಿನೆಂಟು ಅಧ್ಯಾಯದ ಭಗವದ್ಗೀತೆ ವಿವರಿಸುತ್ತದೆ. ಗೀತೆಯ ಮೊದಲ ಆರು ಅಧ್ಯಾಯಗಳು ಉಪನಿಷತ್ತಿನ 'ತತ್' ಪದದ ಅರ್ಥವಾದ ಬ್ರಹ್ಮನನ್ನೂ ಮುಂದಿನ ಆರು ಅಧ್ಯಾಯಗಳು 'ತ್ವಂ' ಪದದ ಅರ್ಥವಾದ ಜೀವಾತ್ಮನನ್ನೂ ವಿವರಿಸಿ ಕೊನೆಯ ಆರು ಅಧ್ಯಾಯಗಳು 'ಅಸಿ' ಪದದ ಅರ್ಥವಾದ ಐಕ್ಯವನ್ನು ಹೇಳುತ್ತದೆ. ಹದಿಮೂರನೇ ಅಧ್ಯಾಯ ಆರಂಭದಲ್ಲಿ ಕ್ಷೇತ್ರಜ್ಞನಾದ ಬ್ರಹ್ಮನಿಗೂ ಜೀವಾತ್ಮನಿಗೂ ಐಕ್ಯದ ಪೀಠಿಕೆಯನ್ನು ಹಾಕಿದೆ.

ಸಿದ್ಧಾಂತ: 'ತತ್ತ್ವಮಸಿ' ಎಂಬ ಶ್ರುತಿವಾಕ್ಯವು ಐಕ್ಯವನ್ನು ಹೇಳುತ್ತಿದ್ದರೆ ತಾನೆ ಗೀತೆ ಅದನ್ನು ವಿವರಿಸುವುದು. ಆದರೆ 'ತತ್ತ್ವಮಸಿ' ವಾಕ್ಯವು ಐಕ್ಯವನ್ನು ಹೇಳುತ್ತಲೇ ಇಲ್ಲ. ಅಲ್ಲಿ 'ತತ್' ಎಂಬ ಶಬ್ದಕ್ಕೆ 'ಬ್ರಹ್ಮನಿಂದ, ಬ್ರಹ್ಮನಲ್ಲಿ, ಬ್ರಹ್ಮನ' ಎಂದು ಅರ್ಥ. ಆದ್ದರಿಂದ 'ನೀನು ಬ್ರಹ್ಮನಿಂದ ಹುಟ್ಟಿರುವಿ, ಅವನಲ್ಲಿ ಆಶ್ರಯಿಸಿರುವಿ, ಅವನ ದಾಸನಾಗಿರುವಿ' ಎಂದೇ ಅರ್ಥ. ಅದನ್ನೇ ಉಪನಿಷತ್ತು 'ಸನ್ಮೂಲಾಃ, ಸೋಮ್ಯ, ಇಮಾಃ ಪ್ರಜಾಃ, ಸದಾಯತನಾಃ, ಸತ್ಪ್ರತಿಷ್ಠಾಃ' ಎಂದು ವಿವರಿಸಿದೆ.

ಹದಿಮೂರನೆಯ ಅಧ್ಯಾಯವು ಐಕ್ಯದ ಪೀಠಿಕೆಯನ್ನು ಹಾಕುತ್ತಿದ್ದರೆ ಮುಂದೆ ಅದನ್ನು ಸಮರ್ಥಿಸಲು 'ಜಗತ್ತು ಅಸತ್ಯ, ಬ್ರಹ್ಮ ನಿರ್ಗುಣ, ಅದ್ವೈತಜ್ಞಾನವೇ ಮೋಕ್ಷಸಾಧನ' ಮುಂತಾದ ಜೀವೇಶ್ವರೈಕ್ಯಕ್ಕೆ ಉಪಯುಕ್ತವಾದ ಮಾಹಿತಿಗಳನ್ನು

ಸೀಡಬೇಕಿತ್ತು. ಆದರೆ ಇದೊಂದೂ ಗೀತೆಯ ಕೊನೆಯ ಆರು ಅಧ್ಯಾಯಗಳಲ್ಲಿ ಕಾಣುತ್ತಿಲ್ಲ. ಅದಕ್ಕೆ ವಿರುದ್ಧವಾಗಿ ಅದ್ವೈತವನ್ನು ನಿರಾಕರಿಸುವ, ದ್ವೈತವನ್ನು ಸಮರ್ಥಿಸುವ ವಾಕ್ಯಗಳೇ ಇವೆ.

ಅಸತ್ಯಂ ಅಪ್ರತಿಷ್ಠಂ ತೇ ಜಗದಾಹುರನೀಶ್ವರಮ್ ॥ ಈ ಗೀತಾವಾಕ್ಯದಲ್ಲಿ ಜಗತ್ತನ್ನು ಅಸತ್ಯ, ಅನೀಶ್ವರ ಎಂದು ಹೇಳುವವರನ್ನು 'ಕ್ಷಯಾಯ ಜಗತೋಽಖಿಲಾಃ' ಜನರನ್ನು ತಪ್ಪು ದಾರಿಗೆ ಎಳೆಯುವವರು ಎಂದು ನಿವೇದಿಸಲಾಗಿದೆ.

ಪೂರ್ವಪಕ್ಷ: ಮೇಲಿನ ಗೀತಾವಾಕ್ಯ 'ಜಗತ್ತಿಗೆ ಈಶ್ವರನಿಲ್ಲ, ಅದು ಅಸತ್ಯ' ಎಂದು ಹೇಳುವವರನ್ನು ದೂಷಿಸುತ್ತದೆ. ಹಾಗೆ ಹೇಳುವವರು ಬೌದ್ಧರು, ಅದ್ವೈತ ವಾದಿಗಳಲ್ಲ. ಅದ್ವೈತವಾದ ದೇವರನ್ನು ಜಗತ್ತಿನ ಒಡೆಯ ಎಂದೊಪ್ಪಿ ಜಗತ್ತು ಸತ್ಯವೂ ಅಲ್ಲದ ಅಸತ್ಯವೂ ಅಲ್ಲದ ವಸ್ತು ಎನ್ನುತ್ತದೆ. ಆದ್ದರಿಂದ ಅದ್ವೈತ ವಾದವನ್ನು ಈ ವಾಕ್ಯ ನಿರಾಕರಿಸುತ್ತಿರುವುದು ಹೇಗೆ?

ಸಿದ್ಧಾಂತ: ಜಗತ್ತು ಅಸತ್ಯ ಎಂಬ ವಾದ ಮಾಡುವವರು 'ಯಜಂತೇ ನಾಮ ಯಜ್ಞೈಸ್ತೇ' –ಯಜ್ಞಯಾಗಗಳನ್ನು ಮಾಡುತ್ತಾರೆ ಎನ್ನಲಾಗಿದೆ. ಬೌದ್ಧರು ಯಜ್ಞಗಳನ್ನು ಮಾಡುತ್ತಾರೆಯೇ? ಆದ್ದರಿಂದ ಯಜ್ಞಗಳನ್ನು ಮಾಡುವವರಾಗಿ ಈ ವಾದವನ್ನು ಮಂಡಿಸುವವರು ಅದ್ವೈತವಾದಿಗಳೇ, ಬೌದ್ಧರಲ್ಲ. ಜಗತ್ತು ಅಸತ್ಯವಾದ ಮೊಲದ ಕೋಡಿನಂತಲ್ಲ ಎಂದು ಎಲ್ಲರೂ ತಿಳಿದೇ ಇದ್ದಾರೆ. ಅದನ್ನು ಅದ್ವೈತವಾದ ಹೇಳಬೇಕಾದ್ದಿಲ್ಲ. ನಾವು ತಿಳಿದಿರುವಂತೆ ಇದು 'ಸತ್ಯವಲ್ಲ' ಎಂದಿಷ್ಟೇ ಅದ್ವೈತವಾದ ಹೇಳಿದರೆ ಸಾಕು. 'ಸತ್ಯವಲ್ಲ' ಎಂದರೆ 'ಅಸತ್ಯ–ಸುಳ್ಳು' ಎಂದು ಹೇಳಿದಂತೆಯೇ. ಆದ್ದರಿಂದ ಅದ್ವೈತವಾದ ಪರ್ಯಾಯವಾಗಿ 'ಜಗತ್ತು ಅಸತ್ಯ' ಎನ್ನುತ್ತದೆ. ಅದ್ವೈತ ಸಿದ್ಧಾಂತ ಜೀವರು ಅನೇಕರೆಂದು ಹೇಳುತ್ತಿದ್ದರೂ ಅದು ಮಂದಮತಿಗಳನ್ನು ತೃಪ್ತಿಪಡಿಸುವುದಕ್ಕಾಗಿ ಮಾತ್ರ. 'ಜೀವನೊಬ್ಬನೇ' ಎಂಬುದೇ ಅದರ ಮುಖ್ಯ ಸಿದ್ಧಾಂತ. ಇದರಂತೆ ಮೋಹಕವಾದ 'ಅವಿದ್ಯಾ ತತ್ವ' ಒಂದೇ ಆದ್ದರಿಂದ ಅದಕ್ಕೆ ಆಶ್ರಯನಾದ ಆ ಚೇತನ ಜೀವನೇ ಆದ. ಇನ್ನು ಈಶ್ವರನೆಲ್ಲಿಂದ ಬರಬೇಕು. ಹೀಗೆ ಅದ್ವೈತವಾದ ಅನೀಶ್ವರವಾದದಲ್ಲೇ ಪರ್ಯವಸಾನಗೊಳ್ಳುತ್ತದೆ. ಇದರಂತೆ 'ಈಶ್ವರೋಽಹಂ ಅಹಂ ಭೋಗೀ' ಇತ್ಯಾದಿ ಗೀತಾವಾಕ್ಯವು 'ಈಶ್ವರನೇ ನಾನು' ಎಂಬ ವಾದವನ್ನು ನಿರಾಕರಿಸುತ್ತಿದೆ. ಶಾಂಕರಭಾಷ್ಯವು 'ಮನ್ಮಯಾಃ' ಎಂಬ ಗೀತೆಯ ಶಬ್ದಕ್ಕೆ 'ಈಶ್ವರಾಭೇದದರ್ಶಿನಃ' ಎಂದು ಅರ್ಥವನ್ನು ಮಾಡಿದೆ. ಇದರಿಂದ ಅದ್ವೈತವಾದವು ಈಶ್ವರಾಭೇದವನ್ನು ಹೇಳುತ್ತದೆ ಎಂದು ತಿಳಿಯುತ್ತದೆ. ಹೀಗೆ ಭಗವದ್ಗೀತೆ ಅನೇಕ ಕಡೆ ಅದ್ವೈತವನ್ನು ಅಲ್ಲಗಳೆಯುತ್ತಿದೆ.

ಭೇದವಾದವನ್ನು ಸಮರ್ಥಿಸುತ್ತಲೂ ಇದೆ.

'ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।'

'ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।'

ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಭಾರತ ।
ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ॥

ಎಂಬೀ ಮುಂತಾದ ಗೀತಾವಾಕ್ಯ ಜೀವ ಕ್ಷರ ನಿಯಮ್ಯ, ಈಶ್ವರ ಪುರುಷೋತ್ತಮ ನಿಯಾಮಕ ಎಂದು ಜೀವೇಶಭೇದವನ್ನೇ ಸ್ಪಷ್ಟವಾಗಿ ಹೇಳುತ್ತಿದೆ. ಆದ್ದರಿಂದ ಗೀತೆಗೆ ಅದ್ವೈತದ ಅಭಿಪ್ರಾಯವಿಲ್ಲ.

●

೮. ೪. ಶಾಸ್ತ್ರಗಳು ದ್ವೈತವನ್ನೇ ಹೇಳುತ್ತವೆ

'ಏಕಮೇವ ಅದ್ವಿತೀಯಂ', 'ನೇಹ ನಾನಾಸ್ತಿ ಕಿಂಚನ', 'ಅಯಂ ಆತ್ಮಾ ಬ್ರಹ್ಮ', 'ಅಹಂ ಬ್ರಹ್ಮಾಸ್ಮಿ', 'ತತ್ತ್ವಮಸಿ' –ಮುಂತಾದ ಶ್ರುತಿವಾಕ್ಯಗಳು ಸ್ಪಷ್ಟವಾಗಿ ಜೀವಬ್ರಹ್ಮೈಕ್ಯವನ್ನು, ಜಗತ್ತಿನ ಮಿಥ್ಯಾತ್ವವನ್ನು ತಿಳಿಸುತ್ತಿರುವಾಗ ಅದ್ವೈತತತ್ವವು ಶ್ರುತಿಗಳಿಗೆ ಅಸಮ್ಮತವೆನಿಸುವುದು ಹೇಗೆ? ಈ ಜಿಜ್ಞಾಸೆ ಎಲ್ಲರಿಗೂ ಸಹಜವಾಗಿ ಮೂಡುತ್ತದೆ. ಆದರೆ ಗೀತೆಯಲ್ಲಿ ಶ್ರೀಕೃಷ್ಣನ ಉಪದೇಶ ಹೀಗಿದೆ–

ಅಸತ್ಯಂ ಅಪ್ರತಿಷ್ಠಂ ತೇ ಜಗದಾಹುರನೀಶ್ವರಮ್ ।
ಅಪರಸ್ಪರಸಂಭೂತಂ ಕಿಮನ್ಯತ್ ಕಾಮಹೈತುಕಮ್ ॥
ಈಶ್ವರೋಽಹಂ ಅಹಂ ಭೋಗೀ.... ॥

ಜಗತ್ತು ಅಸತ್ಯ, ತಾನೇ ಈಶ್ವರ ಎನ್ನುವುದು ತಾಮಸಸ್ವಭಾವ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ತತ್ವರಹಸ್ಯವನ್ನು ತಿಳಿಸಿ ನಮ್ಮ ತಾಮಸಸ್ವಭಾವವನ್ನು ದೂರಮಾಡಲು ಹೊರಟ ಉಪನಿಷತ್ತು, ಗೀತೆ ತಿಳಿಸಿದ ಈ ತಾಮಸಸಿದ್ಧಾಂತವನ್ನು ಮಂಡಿಸೀತೆ?

ಗೀತೆಯು 'ಜಗತ್ತಿನಲ್ಲಿ ಈಶನೇ ಇಲ್ಲ' ಎಂಬ ಸಿದ್ಧಾಂತವನ್ನಷ್ಟೇ ನಿಂದಿಸಿದೆ. ಆದರೆ ಅದ್ವೈತಸಿದ್ಧಾಂತ ಹೀಗೆ ಹೇಳುವುದಿಲ್ಲ. ಅದು ಈಶ್ವರನ ಆರಾಧನೆಯನ್ನು ವಿಧಿಸುತ್ತದೆ. ಆದ್ದರಿಂದ ಗೀತೆ ಹೇಳಿದ ನಿರಾಕರಣೆ ಶೂನ್ಯವಾದಿಗಳಾದ ಬೌದ್ಧರಿಗಷ್ಟೇ ಅನ್ವಯಿಸುತ್ತದೆ. ಅದ್ವೈತಾನುಯಾಯಿಗಳಿಗಲ್ಲ.

ಮೇಲಿನ ಈ ಆಕ್ಷೇಪಕ್ಕೆ ಹೀಗೆ ಉತ್ತರಿಸಬೇಕು –ಅದ್ವೈತಸಿದ್ಧಾಂತವು ಈಶ್ವರನು ಇದ್ದಾನೆ ಎಂದು ಹೇಳುವಂತೆ 'ಪುಣ್ಯ, ಪಾಪ ಮೊದಲಾದ ಅತೀಂದ್ರಿಯ ಪದಾರ್ಥಗಳೂ ಇವೆ' ಎಂದು ಹೇಳುತ್ತದೆ. ಜೊತೆಗೆ 'ಬ್ರಹ್ಮನನ್ನು ಬಿಟ್ಟು ಉಳಿದುದೆಲ್ಲ ವ್ಯಾವಹಾರಿಕ, ಪಾರಮಾರ್ಥಿಕವಲ್ಲ' ಎಂದೂ ಸಾರುತ್ತದೆ. ಆದ್ದರಿಂದ ಬ್ರಹ್ಮನಲ್ಲದ ಪುಣ್ಯಾಪಾಪಾದಿ ತತ್ವಗಳು ಇದ್ದರೂ ಅವು ವ್ಯಾವಹಾರಿಕವಾದ್ದರಿಂದ 'ಏಕಮೇವ ಅದ್ವಿತೀಯಂ' –ಬ್ರಹ್ಮವೊಂದೇ ತತ್ವ– ಎಂದು ಪ್ರತಿಪಾದಿಸಲಾಗುತ್ತದೆ. ಅದರಂತೆ ನಿರ್ಗುಣನಾದ ಬ್ರಹ್ಮನಿಗಿಂತ ಭಿನ್ನನಾದ ಈಶ್ವರ ಸಗುಣನಾದ್ದರಿಂದ

ಅವನೂ ವ್ಯಾವಹಾರಿಕ. ವ್ಯಾವಹಾರಿಕವಾದ ಅಂತಹ ಈಶ್ವರ ಇದ್ದರೂ 'ಜಗತ್ತು ಅನೀಶ್ವರವೇ ಆಗಿದೆ' ಎಂಬ ಸಿದ್ಧಾಂತ ಅದ್ವೈತವಾದಕ್ಕೇನೂ ವಿರೋಧವಿಲ್ಲ. ಹೀಗೆ ಗೀತೆ ಹೇಳಿದ ಅಸಮ್ಮತಿ ಅದ್ವೈತವಾದಕ್ಕೂ ತಗಲುತ್ತದೆ.

ಅದ್ವೈತವಾದವು 'ಅಹಂ ಬ್ರಹ್ಮಾಸ್ಮಿ' ಎಂದು ಪ್ರತಿಪಾದಿಸುತ್ತದೆಯೇ ಹೊರತು 'ಈಶ್ವರೋऽಹಂ' ಎನ್ನುವುದಿಲ್ಲ. ಏಕೆಂದರೆ ಈಶ್ವರನೂ ಜೀವನಂತೆ ಸಗುಣವಾದ ವ್ಯಾವಹಾರಿಕವಾದ ತತ್ವ. ಅದರೊಂದಿಗೆ ಜೀವೈಕ್ಯವಿಲ್ಲ. ನಿರ್ಗುಣಬ್ರಹ್ಮನೊಂದಿಗೆ ಮಾತ್ರ ಐಕ್ಯವನ್ನು ಅದ್ವೈತಸಿದ್ಧಾಂತ ಪ್ರತಿಪಾದಿಸಿದೆ. ಆದ್ದರಿಂದ 'ಈಶ್ವರೋऽಹಂ ಅಹಂ ಭೋಗೀ' ಎಂದು ಗೀತೆಯಲ್ಲಿ ಅನುವಾದಿಸಿ ಅಲ್ಲಗಳೆದ ಮತ ಅದ್ವೈತಮತವಲ್ಲ. ಈ ಪ್ರಶ್ನೆಯೂ ಸರಿಯಲ್ಲ. ಶಂಕರಸಿದ್ಧಾಂತ 'ಈಶ್ವರೋऽಹಂ' ಎಂದೂ ಹೇಳುತ್ತದೆ. 'ಮನ್ಮಯಾಃ ಮಾಮುಪಾಶ್ರಿತಾಃ' ಎಂಬ ಶ್ಲೋಕವನ್ನು ವ್ಯಾಖ್ಯಾನಿಸುವಾಗ ಶಂಕರಾಚಾರ್ಯರು 'ಮನ್ಮಯಾಃ' ಎಂಬ ಪದಕ್ಕೆ 'ಈಶ್ವರಾಭೇದದರ್ಶಿನಃ' ಎಂದು ಅರ್ಥ ಹೇಳಿದ್ದಾರೆ.

ಹೀಗೆ ಗೀತಾಚಾರ್ಯನು ಅದ್ವೈತವನ್ನು ಅಲ್ಲಗಳೆಯುತ್ತಾನೆ. ಆದ್ದರಿಂದ ಅದ್ವೈತಪರವಾಗಿ ತೋರುವ ಉಪನಿಷದ್ವಾಕ್ಯಗಳಿಗೆ ಶ್ರೀ ಮಧ್ವಾಚಾರ್ಯರು ಹೇಳಿದ ಇತಿಹಾಸ ಪುರಾಣಗಳಿಗೆ ಸಮ್ಮತವಾದ ಅರ್ಥವನ್ನೇ ಹೇಳಬೇಕು. ವೇದಗಳಿಗೆ ಅರ್ಥವನ್ನು ಮಾಡುವಾಗ ಇತಿಹಾಸ ಪುರಾಣಗಳ ಸಹಕಾರ ಅಗತ್ಯವೆಂದು 'ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್' ಎಂಬ ಭಾರತವಚನ ತಿಳಿಸುತ್ತದೆ.

ಅದ್ವೈತಸಿದ್ಧಾಂತದಂತೆ ಅದ್ವೈತದ ಮುಖ್ಯ ತತ್ವವಾದ ಜೀವಬ್ರಹ್ಮೈಕ್ಯವು ಬ್ರಹ್ಮಸ್ವರೂಪವೇ ಆಗಿದೆ. ಅದು ಬ್ರಹ್ಮಸ್ವರೂಪವಲ್ಲವೆಂದಾದರೆ ಜಗತ್ತಿನಂತೆ ಅದೂ ಸುಳ್ಳಾಗುತ್ತದೆ. ಬ್ರಹ್ಮ 'ಅವಾಚ್ಯಂ ಸರ್ವಶಬ್ದೈಶ್ಚ' ವೇದದ ಯಾವ ಶಬ್ದಗಳಿಗೂ ಮುಖ್ಯಾರ್ಥವಲ್ಲ. ಅಮುಖ್ಯಾರ್ಥ. ಆದ್ದರಿಂದ ಅವನ ಸ್ವರೂಪವಾದ ಐಕ್ಯವು 'ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ' ಎನ್ನುವುದು ಅದ್ವೈತವಾದಕ್ಕೆ ವಿರುದ್ಧವಾಗುತ್ತದೆ.

•

೮. ೫. ಆಚಾರ್ಯತ್ರಯರ ದೃಷ್ಟಿಯಲ್ಲಿ ಗೀತೆಯ ಸಾರಸರ್ವಸ್ವ

ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ।
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋऽಕ್ಷರ ಉಚ್ಯತೇ ॥

ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥

ಯಸ್ಮಾತ್ ಕ್ಷರಮತೀತೋಽಹಂ ಅಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥

ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮ್ ।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ॥

ಶ್ರೀಮದ್ಭಗವದ್ಗೀತೆಯ ೧೫ನೇ ಅಧ್ಯಾಯದ ಈ ನಾಲ್ಕು ಶ್ಲೋಕಗಳ ಬಗ್ಗೆ ತಮ್ಮ ಗೀತಾಭಾಷ್ಯದಲ್ಲಿ ಬರೆಯುತ್ತ ಶಂಕರಾಚಾರ್ಯರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ: "ಶ್ರೀಮದ್ಭಗವದ್ಗೀತೆಯ ಸಂಪೂರ್ಣ ಸಾರಸರ್ವಸ್ವವು ಈ ಶ್ಲೋಕಗಳಲ್ಲಿ ಅಡಗಿದೆಯಷ್ಟೇ ಅಲ್ಲ ಸಮಸ್ತ ಶಾಸ್ತ್ರಸಾರವೂ ಇದೇ ಆಗಿದೆ" ಎಂದು ಹೀಗೆ ಹೇಳಿದ್ದಾರೆ.

ನ ಕೇವಲಂ ಸರ್ವೋ ಹಿ ಗೀತಾಶಾಸ್ತ್ರಾರ್ಥಃ ।
ಇಹ ಪರಿಸಮಾಪ್ತಃ ಕಿಂತು ಸಕಲಶಾಸ್ತ್ರಾರ್ಥಶ್ಚ ॥

ಶ್ರೀಮದಾನಂದತೀರ್ಥರೂ ಸಹ ತಮ್ಮ ಪ್ರತಿಯೊಂದು ಗ್ರಂಥಗಳಲ್ಲಿ ಪ್ರಾಯಃ ಈ ನಾಲ್ಕು ಶ್ಲೋಕಗಳನ್ನು ಉದಾಹರಿಸಿದ್ದು ನೋಡಿದರೆ ಈ ಶ್ಲೋಕಗಳು ಅತ್ಯಂತ ಮಹತ್ವಪೂರ್ಣವಾದವುಗಳೆಂದು ತಿಳಿದುಬರುತ್ತದೆ.

ರಾಮಾನುಜಾಚಾರ್ಯರಿಗೂ ಈ ವಿಷಯದಲ್ಲಿ ಬೇರೆ ಅಭಿಪ್ರಾಯವಿಲ್ಲ.

ಈಗ ನಾವು ಮತತ್ರಯಪ್ರವರ್ತಕರಾದ ಈ ಆಚಾರ್ಯರು ಈ ಶ್ಲೋಕಗಳಲ್ಲಿ ಯಾವ ಅರ್ಥವನ್ನು ಕಂಡುಕೊಂಡು ತಮ್ಮ ಭಾಷ್ಯಗಳಲ್ಲಿ ಏನು ಏನು ಬರೆದಿದ್ದಾರೆ ಎಂಬುದನ್ನು ತಿಳಿದುಕೊಂಡು ಅದರ ಬಗ್ಗೆ ವಿಮರ್ಶೆ ಮಾಡೋಣ.

ಶ್ರೀಮನ್ಮಧ್ವಾಚಾರ್ಯರು ತಮ್ಮ ಭಾಷ್ಯದಲ್ಲಿ ಹೀಗೆ ಹೇಳುತ್ತಾರೆ:

ಲೋಕೇ = ಈ ಅಸ್ವತಂತ್ರ ಜಗತ್ತಿನಲ್ಲಿ, ಎರಡು ವಿಧವಾದ ಪುರುಷ(ಚೇತನ)ರಿದ್ದಾರೆ. ಅವರಿಗೆ 'ಕ್ಷರ' ಮತ್ತು 'ಅಕ್ಷರ'ಪುರುಷರೆಂದು ಹೆಸರು. ಯಾರ ದೇಹಕ್ಕೆ ನಾಶವಿದೆಯೋ ಅವರು ಕ್ಷರಪುರುಷರು (ಬ್ರಹ್ಮಾದಿ ಸಕಲಚೇತನರು). ಯಾರ ದೇಹಕ್ಕೆ ನಾಶ ವಿಕಾರವೆಂದಿಗೂ ಇಲ್ಲವೋ ಅವರು ಅಕ್ಷರರು (ಶ್ರೀಲಕ್ಷ್ಮೀದೇವಿಯು). ಪರಮಾತ್ಮನಾದರೋ ಈ ಎರಡು ವಿಧ ಪುರುಷರಿಂದ ಬೇರೆಯೇ ಇದ್ದು ಅವರಿಗಿಂತ ಉತ್ತಮನೂ ಆದ್ದರಿಂದ ವೇದಶಾಸ್ತ್ರಗಳಲ್ಲಿ 'ಪರಮಾತ್ಮಾ' ಎಂದು ಹೇಳಲ್ಪಟ್ಟಿದ್ದಾನೆ. ಈ ಕಾರಣದಿಂದಲೇ ಪೌರುಷೇಯವಾದ ಭಾರತಾದಿಗಳಲ್ಲಿ ಮತ್ತು ಅಪೌರುಷೇಯವಾದ ವೇದಗಳಲ್ಲಿ ಶ್ರೀಕೃಷ್ಣಪರಮಾತ್ಮನು 'ಪುರುಷೋತ್ತಮ'ನೆಂದು ಪ್ರಸಿದ್ಧನಾಗಿದ್ದಾನೆ. ಇವನು ಈ ಲೋಕತ್ರಯದಲ್ಲಿ ಪ್ರವೇಶವನ್ನು ಮಾಡಿ ಒಳ ಹೊರಗೂ ಇದ್ದು ಆಧಾರ ಮತ್ತು ಪ್ರೇರಕನಾಗಿ ಪೋಷಣ ಮಾಡುವುದರಿಂದಲೇ ಉತ್ತಮನಾಗಿದ್ದಾನೆ. ಈ ರೀತಿಯಾಗಿ ಪರಮಾತ್ಮನನ್ನು ತಿಳಿದ ಮಾನವನು ಸರ್ವಶಾಸ್ತ್ರಾರ್ಥವನ್ನು ತಿಳಿದವನು. ಅವನ ಸರಿಯಾದ ಮಹಿಮೆಯನ್ನು ಅರಿತುದರಿಂದಲೇ ಅವನನ್ನು ಸರ್ವ

ಪ್ರಕಾರದಿಂದಲೂ ಭಜಿಸುತ್ತಾನೆ. ಇಂಥ ಭಗವದ್ಭಕ್ತನು ಅಪರೋಕ್ಷಜ್ಞಾನಿಯಾಗಿ ಅನಂತರ ಕೃತಕೃತ್ಯ(ಮುಕ್ತ)ನಾಗುತ್ತಾನೆ.

ಶ್ರೀ ರಾಮಾನುಜಾಚಾರ್ಯರು ಈ ಎಲ್ಲ ಶ್ಲೋಕಗಳಿಗೆ ಶ್ರೀ ಮನ್ಮಧ್ವಾಚಾರ್ಯರಂತೆಯೇ ಅರ್ಥ ಹೇಳಿದರೂ ಒಂದೆರಡು ಪದಗಳಿಗೆ ಬೇರೆ ಅರ್ಥ ಹೇಳುತ್ತಾರೆ. ಅದು ಹೀಗೆ –ಇಲ್ಲಿರುವ 'ಕ್ಷರಪುರುಷ' ಶಬ್ದಕ್ಕೆ ದೇಹನಾಶವುಳ್ಳ ಸಂಸಾರಿ ಜೀವರೆಂದೂ 'ಅಕ್ಷರಪುರುಷ' ಶಬ್ದಕ್ಕೆ ದೇಹನಾಶರಹಿತವಾದ ಮುಕ್ತಜೀವರೆಂದೂ ಹೇಳುತ್ತಾರೆ.

ಶಂಕರಾಚಾರ್ಯರ ಅರ್ಥ

ಶಂಕರಾಚಾರ್ಯರು 'ಕ್ಷರ' ಎಂದರೆ ನಾಶಶೀಲವಾದ ಪಂಚಭೂತಗಳೆಂದೂ 'ಅಕ್ಷರ' ಎಂದರೆ ಅವಿದ್ಯೆಯೆಂದೂ ಅರ್ಥ ಬರೆದಿದ್ದಾರೆ. ಮತ್ತು ಇಲ್ಲಿಯ ಪುರುಷೋತ್ತಮ ಶಬ್ದದಿಂದ 'ನಿರ್ಗುಣಬ್ರಹ್ಮ'ನು ಅಭಿಪ್ರೇತನು ಎಂದು ತಮ್ಮ ಅಭಿಪ್ರಾಯ ನಿರೂಪಿಸಿದ್ದಾರೆ.

ಈ ಆಚಾರ್ಯತ್ರಯರು ಈ ಶ್ಲೋಕಗಳಿಗೆ ಬರೆದ ಭಾಷೆಗಳ ವಿಮರ್ಶೆ

ಶ್ರೀ ಮಧ್ವಾಚಾರ್ಯರು 'ಅಕ್ಷರಪುರುಷ' ಶಬ್ದಕ್ಕೆ 'ಲಕ್ಷ್ಮೀದೇವಿ' ಎಂದು ಅರ್ಥಮಾಡಿದ್ದು, ಸರಿಯಾಗಿಲ್ಲ ಎಂದು ಕೆಲವರ ಆಕ್ಷೇಪ. ಯಾಕೆಂದರೆ 'ಪುರುಷ' ಶಬ್ದವು ಸ್ತ್ರೀಯರಲ್ಲಿ ರೂಢವಾಗಿಲ್ಲವೆಂದು ಇವರ ವಾದ. ಆದರೆ ಇವರ ಆಕ್ಷೇಪದಲ್ಲಿ ಹುರುಳಿಲ್ಲ. ಯಾಕೆಂದರೆ 'ಪುರುಷ' ಶಬ್ದಕ್ಕೆ ಇಲ್ಲಿ 'ಚೇತನ'ವೆಂದು ಅರ್ಥ. ಲಕ್ಷ್ಮೀದೇವಿಯು ಚೇತನಳಾದ್ದರಿಂದ ಅವಳು ಪುರುಷ ಶಬ್ದವಾಚ್ಯಳಾಗಲು ಏನು ಅಭ್ಯಂತರವಿದೆ? 'ಪುರುಷ' ಶಬ್ದಕ್ಕೆ ಚೇತನ ಎಂಬ ಅರ್ಥವು ಲಾಕ್ಷಣಿಕವೇ ಆದರೂ ಹಾಗೆ ಅಮುಖ್ಯಾರ್ಥ ಇಟ್ಟುಕೊಳ್ಳದೇ ಇಲ್ಲಿ ಬೇರೆ ಮಾರ್ಗವಿಲ್ಲ. ಯಾಕೆಂದರೆ ಶ್ರೀಹರಿಗೆ ಇಲ್ಲಿ ಪುರುಷೋತ್ತಮತ್ವವನ್ನು ಹೇಳಲು ಹೊರಟಿದ್ದಾರೆ. ಸ್ತ್ರೀ ಮತ್ತು ಪುರುಷ ರೂಪರಾದ ಉಭಯ ವಿಧ ಜೀವಕ್ಕಿಂತಲೂ ಉತ್ತಮತ್ವವನ್ನು ಹೇಳುವುದೇ ಗೀತೆಯ ತಾತ್ಪರ್ಯವಾಗಿದೆ. ಕೇವಲ ಗಂಡುಜೀವರಿಂದ ಉತ್ತಮತ್ವವನ್ನು ಶ್ರೀಹರಿಗೆ ಹೇಳಲು ಇಲ್ಲಿ ಹೊರಟಿಲ್ಲವಾದ್ದರಿಂದ 'ಪುರುಷ' ಶಬ್ದಕ್ಕೆ ಚೇತನವೆಂದು ಅರ್ಥ ಮಾಡಲೇಬೇಕಲ್ಲವೇ? ಇದರ ಮೇಲೆ ಕೆಲವರು ಹೀಗೆ ಆಕ್ಷೇಪಿಸುವುದುಂಟು– ಜೀವರಲ್ಲಿ ಗಂಡು ಹೆಣ್ಣು ಎಂಬ ವಿಭಾಗವೆಲ್ಲಿದೆ! ಈ ಭೌತಿಕದೇಹದಲ್ಲಿ ಮಾತ್ರ ಗಂಡುಹೆಣ್ಣು ಎಂಬ ವಿಭಾಗವಿಲ್ಲವೇ? ಆದ್ದರಿಂದ ಸ್ತ್ರೀ ಮತ್ತು ಪುರುಷ ಜೀವರ ಸಂಗ್ರಹಕ್ಕಾಗಿ 'ಪುರುಷ' ಶಬ್ದಕ್ಕೆ ಚೇತನನೆಂದು ಅರ್ಥ ಮಾಡುವ ಅಗತ್ಯವೇ ಇಲ್ಲ ಎಂದು. ಹೀಗೆ ಶಂಕಿಸುವುದೂ ಸರಿಯಲ್ಲ. ಯಾಕೆಂದರೆ ಮೋಕ್ಷಾವಸ್ಥೆಯಲ್ಲಿ ಪ್ರಾಕೃತ ದೇಹನಾಶವಾದಾಗಲೂ 'ಜಕ್ಷನ್ ಕ್ರೀಡನ್ ರಮಾಮಣಃ ಸ್ತ್ರೀಭಿರ್ವಾಯಾನೈರ್ವಾ' ಎಂದು ಸ್ತ್ರೀ ಪುರುಷರ ವಿಭಾಗವು ಶ್ರುತಿಸಿದ್ಧವಾಗಿರುವುದರಿಂದ ಸ್ವಾಭಾವಿಕವಾದ ಸ್ತ್ರೀ ಪುರುಷ ವಿಭಾಗವು ಇದೆ ಎಂದು ಒಪ್ಪಬೇಕಾಗುವುದು. ಹಾಗೆಯೇ ಕ್ಷರ ಶಬ್ದಕ್ಕೆ

ನಾಶವಾಗುವ ಜಡಗಳು ಅಕ್ಷರ ಶಬ್ದಕ್ಕೆ ನಾಶವಾಗದ ಜಡಗಳು ಎಂದು ಲಾಕ್ಷಣಿಕಾರ್ಥವೆಂದು ಒಪ್ಪದೇ ಮಾರ್ಗವಿಲ್ಲ. ಯಾಕೆಂದರೆ, 'ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ' ಎಂಬಲ್ಲಿ ಲೋಕತ್ರಯಧಾರಕನಾದ್ದರಿಂದ ಶ್ರೀಹರಿಯು ಪುರುಷೋತ್ತಮನಾಗಿದ್ದಾನೆಂದು ಹೇಳುತ್ತಾರೆ. ಲೋಕತ್ರಯ ಶಬ್ದದಿಂದ 'ಜಡ ಮತ್ತು ಚೇತನ'ವೆರಡೂ ಸಂಗ್ರಹವಾಗುವುದರಿಂದ ಜಡಚೇತನರೂಪ ಸರ್ವವಸ್ತೂತ್ತಮತ್ವವೇ' 'ಪುರುಷೋತ್ತಮ' ಶಬ್ದಾರ್ಥವೆಂದು ತಿಳಿದುಬರುತ್ತದೆ. ಇಂಥ ಪುರುಷೋತ್ತಮತ್ವದ ಸಿದ್ಧಿಗಾಗಿ ಜಡಗಳನ್ನು ಲಕ್ಷಣಯಾ ಇಟ್ಟುಕೊಳ್ಳಬೇಕಾಗುತ್ತದೆ. ಈ ರೀತಿ ಶ್ರೀ ಮಧ್ವಾಚಾರ್ಯರು ಹೇಳುವ ಅರ್ಥವು ಅಮುಖ್ಯಾರ್ಥವಾಗಿದ್ದರೂ ಆ ಅರ್ಥವು ಅತ್ಯಂತ ಆವಶ್ಯಕ ಮತ್ತು ಸಂಗತವಾದ್ದರಿಂದ ಯಾವ ದೋಷವೂ ಇಲ್ಲಿ ಇಲ್ಲ.

ರಾಮಾನುಜಾಚಾರ್ಯರಂತೆ ಅರ್ಥ ಹೇಳಿದರೆ ಬಹು ದೋಷಗಳು

'ಅಕ್ಷರ ಪುರುಷ' ಶಬ್ದಕ್ಕೆ 'ಮುಕ್ತ ಜೀವರು' ಎಂದು ರಾಮಾನುಜಾಚಾರ್ಯರು ಅರ್ಥ ಮಾಡಿದ್ದಾರೆ. ಇದು ಸರಿಯಲ್ಲ. ಯಾಕೆಂದರೆ ಮುಕ್ತಜೀವರ ಸಂಖ್ಯೆ ಬಹಳ ಇದೆ. ಸಂಸಾರಿ ಜೀವರು ಬಹುಸಂಖ್ಯರಾದ್ದರಿಂದ ಅವರನ್ನು 'ಕ್ಷರಃ ಸರ್ವಾಣಿ ಭೂತಾನಿ' ಎಂದು ಬಹುವಚನದಿಂದ ಹೇಳಿದಂತೆ 'ಕೂಟಸ್ಥೋ ಅಕ್ಷರಃ' ಎಂದು ಏಕವಚನ ಪ್ರಯೋಗ ಮಾಡದೇ 'ಕೂಟಸ್ಥಾಃ ಅಕ್ಷರಾಃ' ಎಂದು ಬಹುವಚನ ಪ್ರಯೋಗಿಸಬೇಕಾಗಿತ್ತು. ಮುಕ್ತ ಸಮುದಾಯ ಒಂದೇ ಆದ್ದರಿಂದ ಸಮುದಾಯೈಕ ವಚನವನ್ನು ಇಲ್ಲಿ ಪ್ರಯೋಗಿಸಿದ್ದು ಎಂದು ಹೇಳಿದರೆ ಅದು ಲಾಕ್ಷಣಿಕವಾದ ಅಮುಖ್ಯಾರ್ಥ ಹೇಳಿದಂತಾಯಿತು. ಮುಖ್ಯವಾದ ಬಹುವಚನ ಪ್ರಯೋಗ ಮಾಡುವುದನ್ನು ಬಿಟ್ಟು ಅಮುಖ್ಯ ಪ್ರಯೋಗ ಮಾಡುವ ಅಗತ್ಯವೇನು? ಎಂಬ ಆಕ್ಷೇಪವು ಬಂದೇ ಬರುತ್ತದೆ. ಮುಕ್ತರಲ್ಲಿ ಏಕಾಭಿಪ್ರಾಯವಿರುವುದನ್ನು ಸೂಚಿಸಲು ಏಕವಚನ ಪ್ರಯೋಗ ಮತ್ತು ಸಂಸಾರಿಗಳಲ್ಲಿ ಮತ್ಯೈಕ್ಯವಿಲ್ಲವೆಂಬುದನ್ನು ಸೂಚಿಸಲು ಬಹುವಚನ ಪ್ರಯೋಗವೆಂದು ಸಮಾಧಾನ ಹೇಳಿದರೆ ಈ ಸಮಾಧಾನವು ಕೂಡುವುದಿಲ್ಲ. ಯಾಕೆಂದರೆ ಈ ಸಮಾಧಾನವು ಕೂಟಸ್ಥ ಶಬ್ದದಿಂದಲೇ ಸಿಗುವುದರಿಂದ ಏಕವಚನದಿಂದ ತಿಳಿಸುವುದು ವ್ಯರ್ಥವೇ. ಅದು ಹೇಗೆಂದರೆ ಮುಕ್ತರಲ್ಲಿ ಪರಸ್ಪರ ವಿಭಿನ್ನ ಮತಗಳು ಇರುವುದಾದರೆ ಆ ವಿರುದ್ಧ ಮತಗಳು ಎಲ್ಲವೂ ಯಥಾರ್ಥವಾಗಲು ಶಕ್ಯವಿಲ್ಲವಾದ್ದರಿಂದ ಅವರಲ್ಲಿ ಕೆಲವರಲ್ಲಿ ಅಯಥಾರ್ಥಮತಿಯು ಇದೆ ಎಂದು ಹೇಳಬೇಕಾಯಿತು. ಮುಕ್ತರಲ್ಲಿ ಸ್ವಾಭಾವಿಕವಾಗಿ ಅಯಥಾರ್ಥಮತಿಯು ಇಲ್ಲವಾದ್ದರಿಂದ ಔಪಾಧಿಕವಾದದ್ದೇ ಅದು ಎಂದು ಹೇಳಲೇಬೇಕು. ಸ್ವಾಭಾವಿಕವಾಗಿ ಸದ್ಗುಣಿ ಪುರುಷನಿಗೆ ದುಷ್ಟ ಪುರುಷ ಸಂಸರ್ಗದಿಂದ ತಾತ್ಕಾಲಿಕವಾಗಿ ತೋರುವ ದುಷ್ಟ ಗುಣಗಳು ಅವನ ಸ್ವಾಭಾವವಾಗದೆ ಕೇವಲ ವಿಕಾರವಾಗಿ ಇರುವಂತೆ ಅಸ್ವಾಭಾವಿಕ ಅಯಥಾರ್ಥಮತಿಯು ವಿಕಾರವೆಂದೇ ಹೇಳಬೇಕಾಗುವುದು. ಇಂಥ ಯಾವ

ವಿಕಾರವೂ ಮುಕ್ತನಲ್ಲಿ ಇಲ್ಲವೆಂದು ಕೂಟಸ್ಥ ಶಬ್ದದಿಂದಲೇ ಹೇಳಿದ್ದರಿಂದ ಪುನಃ ಅದನ್ನು ತಿಳಿಸಲಿಕ್ಕೆ ಏಕವಚನವು ಅನಾವಶ್ಯಕವಾಗುವುದು.

ಮತ್ತು 'ಕೂಟಸ್ಥ' ಶಬ್ದಕ್ಕೂ 'ಮುಕ್ತ'ರೆಂಬ ಅರ್ಥವು ಮುಖ್ಯಾರ್ಥವಾಗಲಾರದು. ಯಾಕೆಂದರೆ ಕೂಟಸ್ಥ ಶಬ್ದಕ್ಕೆ ಆಕಾಶದಂತೆ ಸದಾ ನಿರ್ವಿಕಾರವಾಗಿ ಇರುವವರು ಎಂಬ ಅರ್ಥವೇ ಮುಖ್ಯಾರ್ಥವಾಗುವುದು. ಮುಕ್ತರು ಸದಾ ನಿರ್ವಿಕಾರರಾಗಿ ಎಲ್ಲಿದ್ದಾರೆ? ಕೆಲವು ಕಾಲ ಸಂಸಾರಬಂಧನದಲ್ಲಿದ್ದವರೇ ಅನಂತರ ಮುಕ್ತರಾದ್ದರಿಂದ ಸದಾ ನಿರ್ವಿಕಾರತ್ವ 'ತ್ರೈಕಾಲಿಕ ನಿರ್ವಿಕಾರತ್ವ' ರೂಪ ಮುಖ್ಯ ಅರ್ಥ ಕೊಡುವ ಕೂಟಸ್ಥ ಶಬ್ದವು ಇವರಲ್ಲಿ ಅಮುಖ್ಯವೇ ಆಗುವುದಿಲ್ಲವೇ? ಮತ್ತು ಲಕ್ಷ್ಮೀದೇವಿಯು ನಿತ್ಯಮುಕ್ತಳಾದ್ದರಿಂದ ಕೂಟಸ್ಥಶಬ್ದಕ್ಕೆ ಹೇಗೆ ಮುಖ್ಯಾರ್ಥಳಾಗುವಳೋ ಹಾಗೆ ಮುಕ್ತರು ಆಗಲಾರರಾದ್ದರಿಂದ ಕೂಟಸ್ಥಶಬ್ದಕ್ಕೆ 'ಅಸ್ವಾರಸ್ಯ'ವೆಂಬ ಮತ್ತೊಂದು ದೋಷವು ಇವರ ಮತದಲ್ಲಿ ಬರುವುದು.

ಕ್ಷರಾಕ್ಷರಪುರುಷ ಪದಗಳಿಂದ ಸಂಸಾರಿ ಮತ್ತು ಮುಕ್ತರನ್ನು ಮಾತ್ರ ಇಟ್ಟುಕೊಂಡರೆ ಲಕ್ಷ್ಮೀದೇವಿಯು ಇವುಗಳಿಂದ ಹೇಳಲ್ಪಡಲಿಲ್ಲವಾದ್ದರಿಂದ ಪರಮಾತ್ಮನು ಸಂಸಾರಿ ಮತ್ತು ಮುಕ್ತರಿಗಿಂತ ಮಾತ್ರ ಉತ್ತಮನೆಂದು ಹೇಳಿದಂತಾಯಿತೇ ಹೊರತು ಸರ್ವೋತ್ತಮ (ಮುಕ್ತಾಮುಕ್ತ ಜೀವರ ಮತ್ತು ಲಕ್ಷ್ಮೀಗಿಂತಲೂ ಉತ್ತಮನಾದವನೇ) ಪರಮಾತ್ಮನೆಂಬ ಅರ್ಥವು ಬರುವುದಿಲ್ಲ ವೆಂಬುದು ಮತ್ತೊಂದು ದೋಷ.

ಅಕ್ಷರಪುರುಷ ಪದದಿಂದ ಮುಕ್ತರೆಂಬ ಅರ್ಥವನ್ನು ಇಟ್ಟುಕೊಂಡಂತೆ ಲಕ್ಷ್ಮೀದೇವಿಯನ್ನು ಸಹ ಇಟ್ಟುಕೊಳ್ಳುತ್ತೇವೆ. ಎಂದರೆ ಈ ಅಂಶದಲ್ಲಿ ಮಧ್ವಭಾಷ್ಯದ ಅರ್ಥವು ರಾಮಾನುಜರಿಗೆ ಸಮ್ಮತವೇ ಆದಂತಾಯಿತು. ಆಚಾರ್ಯದ್ವಯರಿಗೆ ಸಮ್ಮತವಾದ ಅರ್ಥವು ಮಧ್ವಭಾಷ್ಯದ್ದಾದ್ದರಿಂದ ಇದಕ್ಕೆ ವಿಶೇಷ ಗೌರವವೇ ಪ್ರಾಪ್ತವಾಯಿತು.

ಶ್ರೀ ಮಧ್ವಭಾಷ್ಯದಲ್ಲಿ 'ಅಕ್ಷರ' ಪದದಿಂದ ಲಕ್ಷ್ಮೀದೇವಿಯನ್ನು ಮಾತ್ರ ಹೇಳುವುದರಿಂದ 'ಮುಕ್ತ'ರೆಂಬ ಅರ್ಥವನ್ನು ಹೇಳದಿರುವುದರಿಂದ ಪುರುಷೋತ್ತಮತ್ವದಲ್ಲಿ ಮುಕ್ತೋತ್ತಮತ್ವವು ಸೇರಲಿಲ್ಲವಲ್ಲ ಎಂದು ರಾಮಾನುಜರು ಶ್ರೀ ಮಧ್ವಭಾಷ್ಯದ ಮೇಲೆ ಆಕ್ಷೇಪಿಸಬಹುದು. ಆಗ ನಾವು ಅವರಿಗೆ ಪ್ರತಿಯಾಗಿ ಹೀಗೆ ಕೇಳಬೇಕು. 'ನಿತ್ಯ ನರಕ ವಾಸಿಗಳ ಸಂಗ್ರಹವನ್ನು ಪುರುಷ ಶಬ್ದದಿಂದ ನೀವು ಸಹ ಮಾಡಲಿಲ್ಲವಾದ್ದರಿಂದ ಪುರುಷೋತ್ತಮತ್ವವು ನಿಮ್ಮ ಮತದಲ್ಲಿಯಾದರೂ ಹೇಗೆ? ಎಂದು. ನಿತ್ಯ ನರಕಕ್ಕೆ ಹೋಗುವವರೇ ಇಲ್ಲ. ಎಲ್ಲರೂ ಮುಕ್ತಿಯೋಗ್ಯರೇ ಎಂದು ರಾಮಾನುಜೀಯರು ಉತ್ತರ ಕೊಟ್ಟರೆ ಅವರನ್ನು ಪುನಃ ಹೀಗೆ ಕೇಳಬೇಕು. 'ಮೂಢಾ ಜನ್ಮನಿ ಜನ್ಮನಿ ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ' ಎಂದು ನಿತ್ಯನರಕವನ್ನು ಹೇಳುವ ಗೀತೆಗೆ ಏನು ಅರ್ಥ ಮಾಡುವಿರಿ? ಎಂದು. ಈ ಶ್ಲೋಕವನ್ನು ಅರ್ಥಮಾಡುವಾಗ ರಾಮಾನುಜಭಾಷ್ಯದಲ್ಲಿ ನಿತ್ಯನರಕಪರವಾಗಿಯೇ ಹೇಳಿರುವುದರಿಂದ ಅವರು ಇಲ್ಲಿ ಮೂಕರಾಗಬೇಕಾಗುತ್ತದೆ.

ರಾಮಾನುಜೀಯರು ಕೂಡ ಗೀತೆಯಲ್ಲಿ ಹೇಳಿದಂತೆ ನರಕವಾಸಿಗಳನ್ನು ಒಪ್ಪಿ ಅವರು ಸಂಸಾರದಲ್ಲಿದ್ದಾಗ ದೇಹನಾಶ ಉಳ್ಳವರಾದ್ದರಿಂದ 'ಕ್ಷರ' ಪದದಿಂದಲೇ ಸಂಗೃಹೀತರಾಗುತ್ತಾರೆ ಎಂದು ಹೇಳಿದರೆ ಆಗ ನಾವು ಅವರಿಗೆ ಈ ಯುಕ್ತಿಯಿಂದಲೇ ಉತ್ತರ ಹೀಗೆ ಕೊಡಬೇಕು- ಸರಿ, ಮುಕ್ತರು ಕೂಡ ಸಂಸಾರಿಯಾಗಿದ್ದಾಗ ದೇಹ ನಾಶವುಳ್ಳವರಾದ್ದರಿಂದ 'ಕ್ಷರಪುರುಷ' ಶಬ್ದದಿಂದಲೇ ಸಂಗೃಹೀತರಾಗುತ್ತಾರೆ ಎಂದು. ನಿತ್ಯನಾರಕಿಗಳನ್ನು ಕ್ಷರಪುರುಷ ಶಬ್ದದಿಂದ ಸಂಗ್ರಹ ಮಾಡಿದಂತೆ ಅದೇ ನ್ಯಾಯದಿಂದ ಮುಕ್ತರನ್ನು ಅಕ್ಷರಪುರುಷ ಶಬ್ದದಿಂದ ಹೇಳುವುದು ಅಯುಕ್ತವಾಗುತ್ತದೆ. ಆದ್ದರಿಂದ ಅಲ್ಲಿರುವ ಅಕ್ಷರಪುರುಷ ಶಬ್ದವು ಲಕ್ಷ್ಮೀದೇವಿಯನ್ನೇ ಹೇಳುತ್ತದೆಂದು ಹೇಳಬೇಕು.

ಅಂತೂ ಮಧ್ವಮತಕ್ಕೆ ಬರದೇ ಕೇವಲ ರಾಮಾನುಜ ಮತಕ್ಕೆ ಬರತಕ್ಕ ದೋಷಗಳು ಮೂರು-

೧. 'ಕೂಟಸ್ಥೋ ಅಕ್ಷರಃ' ಎಂಬಲ್ಲಿಯ ಏಕವಚನವು ಕೂಡದಿರುವುದು.

೨. ಕೂಟಸ್ಥ ಶಬ್ದಕ್ಕೆ ಅಸ್ವಾರಸ್ಯ.

೩. ಪುರುಷೋತ್ತಮತ್ವದಲ್ಲಿ ಲಕ್ಷ್ಮೀದೇವಿಗಿಂತ ಉತ್ತಮತ್ವಕ್ಕೆ ಅಸಂಗ್ರಹ.

ಮಧ್ಯಭಾಷ್ಯದಲ್ಲಿ ಪುರುಷ ಮತ್ತು ಕ್ಷರಾಕ್ಷರ ಶಬ್ದಗಳಿಗೆ ಮಾಡಿದ ಅಮುಖ್ಯಾರ್ಥವು ರಾಮಾನುಜೀಯರಿಗೂ ಸಮವೇ ಆದ್ದರಿಂದ ಅವರು ಅದನ್ನು ದೋಷವೆಂದು ಹೇಳುವಂತಿಲ್ಲ. ಯಾಕೆಂದರೆ ರಾಮಾನುಜಾಚಾರ್ಯರು ಪುರುಷೋತ್ತಮತ್ವದಲ್ಲಿ ಜಡೋತ್ತಮತ್ವವನ್ನು ಮತ್ತು ಸ್ತ್ರೀ ಪುರುಷಸಾಧಾರಣವಾಗಿ ಚೇತನ ಸಾಮಾನ್ಯರಿಂದ ಉತ್ತಮತ್ವವನ್ನು ಹೇಳತಕ್ಕವರಾದ್ದರಿಂದ ಮಧ್ವಭಾಷ್ಯದಲ್ಲಿ ಹೇಳಿದ ಪುರುಷಾದಿ ಶಬ್ದಗಳ ಅಮುಖ್ಯಾರ್ಥಗಳು ಅವರಿಗೂ ಸಮ್ಮತವಾಗಲೇಬೇಕಲ್ಲವೇ.

ಮತ್ತು ಗೀತೆಯಲ್ಲಿ- 'ಪರಮಾತ್ಮೇತ್ಯುದಾಹೃತಃ' ಎಂಬಲ್ಲಿಯ 'ಪರಮಾತ್ಮ' ಶಬ್ದವೂ 'ಪುರುಷೋತ್ತಮ' ಶಬ್ದವೂ ಏಕಾರ್ಥಕವೆಂದು ಹೇಳಿದ್ದರಿಂದ 'ಪುರುಷ' ಶಬ್ದಕ್ಕೆ 'ಆತ್ಮಾ' ಎಂದು ಶ್ರೀ ಮಧ್ವಾಚಾರ್ಯರು ಹೇಳಿದ ಅರ್ಥವು ಗೀತೆಗೆ ಸಮ್ಮತವಾದ್ದರಿಂದ ಎಲ್ಲರೂ ಆ ಅರ್ಥವನ್ನು ಒಪ್ಪದೇ ಗತ್ಯಂತರವಿಲ್ಲ.

ಈ ವಿಷಯದ ಶಂಕರಭಾಷ್ಯದ ವಿಮರ್ಶೆ:

'ಕ್ಷರ'ಪುರುಷ ಶಬ್ದಕ್ಕೆ ಜಡ ಭೂತಗಳು 'ಅಕ್ಷರ'ಪುರುಷ ಶಬ್ದಕ್ಕೆ 'ಅವಿದ್ಯೆ' ಎಂದು ಶಂಕರಭಾಷ್ಯದಲ್ಲಿ ಅರ್ಥ ಹೇಳಿದ್ದು ಅನೇಕರ ಅನೇಕ ಆಕ್ಷೇಪಕ್ಕೆ ಗುರಿಯಾಗಿದೆ. ಅದು ಹೀಗೆ-

ಆಕ್ಷೇಪ- ೧ 'ಪುರುಷ' ಶಬ್ದಕ್ಕೆ ಜಡವಸ್ತುವು ಮುಖ್ಯಾರ್ಥವಲ್ಲದಿದ್ದರೂ ಜಡ ವಸ್ತುವು ಪುರುಷನಿಗೆ ಉಪಾಧಿಯಾದ್ದರಿಂದ 'ಪುರುಷ' ಶಬ್ದದಿಂದ ಅಮುಖ್ಯವಾಗಿ ಹೇಳಲ್ಪಡುತ್ತದೆ. ಅವಿದ್ಯೆಯು ಕೂಡ ಪುರುಷನಿಗೆ ಉಪಾಧಿಯಾದರೆ ಅಮುಖ್ಯವಾಗಿ ಪುರುಷಶಬ್ದದಿಂದಲೇ ಹೇಳಲ್ಪಡುತ್ತದೆಂದು ಅದ್ವೈತಿಗಳು ಹೇಳುತ್ತಾರೆ. ಆದರೆ ಇದು

ಸರಿಯಲ್ಲ. ಯಾಕೆಂದರೆ ಪುರುಷ ಶಬ್ದಕ್ಕೆ ಮುಖ್ಯಾರ್ಥವನ್ನೇ ಇಟ್ಟುಕೊಂಡು ಸರಿಯಾಗಿ ಅರ್ಥ ಹೇಳಲು ಬರುವಾಗ ಅಮುಖ್ಯಾರ್ಥಕ್ಕೆ ಶರಣು ಹೋಗುವುದು ಸರ್ವಥಾ ತಪ್ಪು.

ಆಕ್ಷೇಪ– ೨ ಒಂದೇ ಪ್ರಕರಣದಲ್ಲಿ ಅನೇಕ ಸಲ ಬರುವ ಶಬ್ದಕ್ಕೆ ಏಕಾರ್ಥವನ್ನೇ ಹೇಳಬೇಕೆಂಬುದು ಸರ್ವಸಮ್ಮತ ಸಿದ್ಧಾಂತವು. ಹೀಗಿರುವಾಗ ಶಂಕರಾಚಾರ್ಯರು ಈ ನಿಯಮವನ್ನು ಈ ಸಂದರ್ಭದಲ್ಲಿ ಉಲ್ಲಂಘಿಸಿ ಮಹದನ್ಯಾಯವನ್ನು ಮಾಡಿದ್ದಾರೆ. ಅದು ಹೇಗೆಂದರೆ– 'ಪುರುಷೌ' ಎಂಬಲ್ಲಿ ಪುರುಷಶಬ್ದಕ್ಕೆ 'ಪುರುಷೋಪಾಧಿ' ಎಂದು ಅರ್ಥಮಾಡಿ ಅದೇ ಪ್ರಕರಣದಲ್ಲಿ 'ಉತ್ತಮಃ ಪುರುಷಸ್ತ್ವನ್ಯಃ' ಎಂಬಲ್ಲಿಯ ಪುರುಷ ಪದಕ್ಕೆ ಮೊದಲಿನ ಅರ್ಥವನ್ನು ಬಿಟ್ಟು 'ಆತ್ಮಾ' ಎಂದು ಅರ್ಥಮಾಡುವುದು ಸರ್ವಾಂಗೀಕೃತ ನ್ಯಾಯಬಾಹಿರವಲ್ಲವೇ?

ಆಕ್ಷೇಪ– ೩ ಲೋಕದಲ್ಲಿ 'ಪರಮ ಧಾರ್ಮಿಕ' 'ಪರಮ ಧನಿಕ' ಎಂಬ ಶಬ್ದಗಳಿಗೆ ತಜ್ಞರು ಮಾಡುವ ಅರ್ಥವು ಯಾವುದು? ಇತರ ಧಾರ್ಮಿಕರಿಗಿಂತ ಇವನು ಶ್ರೇಷ್ಠನು. ಇತರ ಧನಿಕರಿಗಿಂತ ಇವನು ಶ್ರೇಷ್ಠನು ಎಂದಲ್ಲವೇ? ಆದರೆ ಶಂಕರಾಚಾರ್ಯರ ಹಾದಿಯೇ ಬೇರೆ. ಯಾಕೆಂದರೆ 'ಉತ್ತಮ ಪುರುಷಃ' ಎಂಬಲ್ಲಿ ಇತರ ಪುರುಷರಿಗಿಂತಲೂ ಇವನು ಉತ್ತಮನು ಎಂಬ ಸರಿಯಾದ ಸರ್ವಸಮ್ಮತವಾದ ಅರ್ಥವನ್ನು ಬಿಟ್ಟುಕೊಟ್ಟು ಪುರುಷರ ಉಪಾಧಿಗಳಿಗಿಂತ ಪುರುಷನಾದ ಈಶ್ವರನು ಶ್ರೇಷ್ಠನು ಎಂದು ಅರ್ಥವನ್ನು ಶಂಕರಾಚಾರ್ಯರು ಹೇಳಿದ್ದು ಪರಮ ಧಾರ್ಮಿಕ ಇತ್ಯಾದಿ ಶಬ್ದಗಳಿಗೆ ಎಲ್ಲ ಧಾರ್ಮಿಕರಿಗಿಂತ ಉತ್ತಮ ಎಂದು ಅರ್ಥ ಮಾಡದೆ ಧಾರ್ಮಿಕರಿಗೆ ಉಪಾಧಿಯಾಗಿರುವ ಅವರ ಮನೆಗಿಂತ ಅವರು ಶ್ರೇಷ್ಠರು ಎಂದು ಅರ್ಥವನ್ನು ಹೇಳುವುದಕ್ಕೆ ಸಮಾನವಾಗುವುದು.

ಆಕ್ಷೇಪ– ೪ ಈಶ್ವರನೆಂಬ ಪುರುಷನಿಗೆ ಮಾಯೆ ಎಂಬ ಉಪಾಧಿ ಇದೆ, ಎಂದು ಅದ್ವೈತಿಗಳು ಹೇಳುತ್ತಾರೆ. ಅಂತೂ ಅವರ ಮತದಂತೆ ಪುರುಷೋಪಾಧಿಗಳು ಮೂರು ಎಂದಾಯಿತು. ೧) ಜಡಭೂತಗಳು ೨) ಅವಿದ್ಯಾ ೩) ಮಾಯಾ –ಹೀಗಿರುವಾಗ ಗೀತೆಯಲ್ಲಿ 'ದ್ವಾವಿಮೌ ಪುರುಷೌ' ಎಂದು ಎರಡೇ ಉಪಾಧಿ ಹೇಳಿದ್ದು ಹೇಗೆ? 'ಅವಿದ್ಯಾ' ಮತ್ತು 'ಮಾಯಾ' ಎಂಬವು ಅಜ್ಞಾನದ ಎರಡು ಅವಸ್ಥಾವಿಶೇಷಗಳಾದ್ದರಿಂದ ಅವುಗಳನ್ನು ಪ್ರತ್ಯೇಕವಾಗಿ ಹೇಳಲಿಲ್ಲ ಎಂದು ಅವರು ಸಮಾಧಾನ ಇಲ್ಲಿ ಹೇಳಿದರೆ ನಾವು ಪುನಃ ಅವರನ್ನು ಪ್ರಶ್ನಿಸಬೇಕು. ಸರಿ, ಹಾಗಾದರೆ ನಿಮ್ಮ ಮತಪ್ರಕಾರ ಎಲ್ಲ ಜಡ ಭೂತಗಳೂ ಅವಿದ್ಯಾಮಯವಾದ್ದರಿಂದ ಅವುಗಳನ್ನು ಅವಿದ್ಯಾದಿಂದ ಬೇರೆಯಾಗಿ ವಿವಕ್ಷೆ ಮಾಡಿದುದು ಹೇಗೆ? ಎಂದು.

ಆಕ್ಷೇಪ– ೫ ಅವಿದ್ಯೆಗೆ ಬ್ರಹ್ಮಜ್ಞಾನದಿಂದ ನಾಶವು ಅದ್ವೈತಮತದಲ್ಲಿಯೇ ಹೇಳಲ್ಪಟ್ಟಿದೆ. ಅಂದಮೇಲೆ ಅದು ಅಕ್ಷರ ಶಬ್ದವಾಚ್ಯವು ಹೇಗೆ ಆಗುವುದು.

ಲೋಕದಲ್ಲಿ ಒಂದು ವಸ್ತುವಿನಲ್ಲಿರುವ ಗುಣಗಳಿಗಿಂತ ಮತ್ತೊಂದು ವಸ್ತುವಿನಲ್ಲಿ ಅಧಿಕ ಗುಣಗಳಿದ್ದರೆ ಆ ವಸ್ತುವಿಗಿಂತ ಮತ್ತೊಂದು ವಸ್ತುವು ಉತ್ತಮವಾದದ್ದೆಂದು ಹೇಳುವರು. ಈ ನಿಯಮದಂತೆ ಬ್ರಹ್ಮನಿಗೆ ಪುರುಷೋತ್ತಮತ್ವವನ್ನು ಹೇಳಲು ಹೊರಟ ಈ ಗೀತೆಯು 'ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ' ಎಂದು ಲೋಕತ್ರಯಾಧಾರಕತ್ವವೇ ಮೊದಲಾದ ಗುಣಗಳನ್ನು ಹೇಳಿ ಈ ಪ್ರಕರಣ ದಲ್ಲಿ ಯಾವ ಗುಣವೂ ಇಲ್ಲದ ಬ್ರಹ್ಮನು ಪುರುಷೋತ್ತಮನೆಂದು ಹೇಳಿರುತ್ತದೆ ಎಂದು ಹೇಳುವುದು ಅತಿ ಸೋಜಿಗದ ವಿಷಯ.

ಆಕ್ಷೇಪ– ೬ ಶಂಕರ ಭಾಷ್ಯದಲ್ಲಿ ಇದು ಬರೇ ಸಕಲ ಗೀತೆಯ ಸಾರ ಅಲ್ಲ, ಸಕಲ ಶಾಸ್ತ್ರಸಾರವೂ ಆಗಿದೆ ಎಂದು ಹೇಳಿದ್ದಾರೆ. ಶಂಕರ ಮತದ ಪ್ರಕಾರ ಪ್ರಪಂಚ ಮಿಥ್ಯಾತ್ವ ಮತ್ತು ಜೀವ ಬ್ರಹ್ಮೈಕ್ಯವು ಸಕಲ ಶಾಸ್ತ್ರಸಾರವಾದ್ದರಿಂದ ಗೀತೆಯ ಈ ಪ್ರಕರಣದಲ್ಲಿಯೂ ಐಕ್ಯವನ್ನೂ ವಿಶ್ವಮಿಥ್ಯಾತ್ವವನ್ನೂ ಹೇಳಿದರೇ ಸಕಲ ಶಾಸ್ತ್ರಸಾರ ಹೇಳಿದಂತಾಗುತ್ತದೆ. ಆದರೆ ಇಲ್ಲಿ ಈ ವಿಷಯದ ಪ್ರಸ್ತಾವವೇ ಇಲ್ಲ. ಅಂದಮೇಲೆ ಇಲ್ಲಿ ಸರ್ವಶಾಸ್ತ್ರಾರ್ಥವು ಹೇಗೆ ಹೇಳಲ್ಪಟ್ಟಿದೆ? ಇದು ಸರ್ವಶಾಸ್ತ್ರದ ಸಾರವಾದರೂ ಹೇಗಾಗುವುದು?

ಈ ಪ್ರಕರಣದಲ್ಲಿ 'ಸರ್ವಭಾವೇನ' ಎಂಬ ಶಬ್ದವಿದೆ. ಈ ಶಬ್ದವು ಸರ್ವೈಕ್ಯವನ್ನು ಹೇಳುತ್ತದೆ ಎಂದು ಕೆಲವರು ಹೇಳುತ್ತಾರೆ. ಇದು ಸರಿಯಲ್ಲ. ಯಾಕೆಂದರೆ ಸರ್ವಭಾವೇನ ಎಂಬ ಶಬ್ದಕ್ಕೆ ಸರ್ವಪ್ರಕಾರದಿಂದ ಎಂದು ಅರ್ಥವು. ಸ್ವಾಮಿತ್ವ, ಗುರುತ್ವ, ಸುಹೃತ್ವ, ಬಂಧುತ್ವ, ಮಾತೃತ್ವ, ಪಿತೃತ್ವ, ಗುರುತ್ವ –ಮುಂತಾದವುಗಳೇ ಆ ಪ್ರಕಾರಗಳು. 'ಭಜತಿ ಮಾಂ ಸರ್ವಭಾವೇನ ಭಾರತ' ಎಂದರೆ ಈ ಪ್ರಕಾರಗಳಿಂದ ನನ್ನ ಮಹಿಮೆ ತಿಳಿದವನು ನನ್ನನ್ನು ಭಜಿಸುತ್ತಾನೆ ಎಂದು ಅರ್ಥವು. ಶ್ರೀಕೃಷ್ಣನ ಭಜನ ಮಾಡುವುದು ಸ್ವಾಮಿತ್ವಾದಿ ಭಾವದಿಂದಲೇ ಹೊರತು ಸರ್ವೈಕ್ಯಭಾವದಿಂದಲ್ಲ. ಸರ್ವೈಕ್ಯಭಾವದಿಂದ ಭಜನೆಯು ಶಕ್ಯವೂ ಅಲ್ಲ.

●

೮. ೬. ಮಾಯಾಮಾತ್ರಮಿದಂ ದ್ವೈತಂ

ಮಾಂಡೂಕೋಪನಿಷತ್ತಿನಲ್ಲಿ

> ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ ।
> ವಿಕಲ್ಪೋ ವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್ ॥

ಎಂಬುದಾಗಿ ಮೇಲ್ನೋಟಕ್ಕೆ ದ್ವೈತವನ್ನು ನಿರಾಕರಿಸಿ ಅದ್ವೈತವನ್ನು ಪ್ರತಿಪಾದಿಸು ತ್ತಿರುವಂತೆ ಕಾಣುವುದು.

ಆದರೆ ಈ ವಾಕ್ಯದಲ್ಲಿ ಅದ್ವೈತವನ್ನು ನಿರಾಕರಿಸಿ ದ್ವೈತವನ್ನೇ ಸಮರ್ಥಿಸ ಲಾಗಿದೆ ಎಂಬುದಾಗಿ ಪರಿಶೀಲಿಸಿದರೆ ಸ್ಪಷ್ಟವಾಗದಿರದು. ಮಾಯಾವಾದಿಗಳು

ಹೇಳುವಂತೆ 'ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ' ಎಂಬ ವಾಕ್ಯಖಂಡವು 'ಪ್ರತ್ಯಕ್ಷಸಿದ್ಧವಾದ ದ್ವೈತ ಅವಿದ್ಯಾಕಲ್ಪಿತ, ಅದ್ವೈತವೇ ಪಾರಮಾರ್ಥಿಕ' ಎಂಬ ಅರ್ಥವನ್ನು ಹೇಳುತ್ತಿದೆ ಎಂದಿಟ್ಟುಕೊಂಡರೂ, ಉಪನಿಷತ್ತು ಆ ವಿಚಾರವನ್ನು ಅನುವಾದಮಾಡಿ, 'ವಿಕಲ್ಪೋ ವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್' ಭೇದವು ಒಂದು ವೇಳೆ ಅವಿದ್ಯಾಕಲ್ಪಿತವಾಗಿದ್ದರೆ ಜ್ಞಾನಬಾಧ್ಯವಾಗ ಬೇಕಿತ್ತು. ಆದರೆ ಎಂದೂ ಹಾಗಾಗದ ಪ್ರಯುಕ್ತ ಅದು ಅವಿದ್ಯಾಕಲ್ಪಿತವಲ್ಲ; ಸ್ವಾಭಾವಿಕವಾಗಿಯೇ ಇರುವಂತಹದ್ದು –ಎಂದು ಮಾಯಾವಾದಿಗಳ ವಾದವನ್ನು ನಿರಾಕರಿಸಲಾಗುವುದು. ಛಾಂದೋಗ್ಯೋಪನಿಷತ್ತಿನಲ್ಲಿ 'ತದ್ಧೈಕ ಆಹುರಸತಃ ಸದಜಾಯತ...' ಎಂದು ಶೂನ್ಯವಾದಿಗಳ ವಾದವನ್ನು ಅನುವಾದಿಸಿ, ನಿರಾಕರಿಸಿರು ವಂತೆ 'ಮಾಯಾಮಾತ್ರಂ....' ಇತ್ಯಾದಿ ವಾಕ್ಯ ಅನುವಾದಕ ಎಂಬುದಕ್ಕೆ ಯಾವುದೇ ಶಬ್ದದ ಗುರುತು ಇಲ್ಲ ಹೌದು. ಆದರೂ ಮಾಯಾವಾದಿಗಳು 'ದ್ವಾ ಸುಪರ್ಣಾ ಸಯುಜಾ....' ಎಂಬ ಮಾತಲ್ಲಿ ಅನುವಾದದ ಸೂಚನೆಗಳು ಯಾವುದೇ ಇಲ್ಲದಿದ್ದರೂ, 'ತತ್ತ್ವಮಸಿ' ಎಂಬಲ್ಲಿ ಭೇದದ ನಿರಾಕರಣೆಗಾಗಿ 'ದ್ವಾ ಸುಪರ್ಣಾ....' ಇತ್ಯಾದಿ ಮಾತಿನಲ್ಲಿ ಭೇದವನ್ನು ಅನುವಾದಿಸಲಾಗುವುದೆಂದು ಹೇಗೆ ಒಪ್ಪುವರೋ ಹಾಗೆಯೇ 'ಮಾಯಾ ಮಾತ್ರಂ....' ಮಾತು ಮಾಯಾವಾದಿಗಳ ವಾದವನ್ನು ಅನುವಾದಿಸುವುದಕ್ಕಾಗಿಯಷ್ಟೇ ಹೊರಟಿದೆ ಎಂದು ವ್ಯಾಖ್ಯಾನಿಸಿಕೊಳ್ಳಬಹುದಾಗಿದೆ.

●

೮. ೭. ದ್ವೈತವಾದದಲ್ಲಿ ವಿಷ್ಣುಸರ್ವೋತ್ತಮತ್ವ

ಭಗವಂತ ಸರ್ವೋತ್ತಮ, ಸ್ವತಂತ್ರ. ಇದು ಶ್ರುತಿ–ಸ್ಮೃತಿ ಸಿದ್ಧವಾದ ತತ್ತ್ವ. ಹೀಗೆಂದು ತಮ್ಮ ಮತದ ಗಟ್ಟಿ ತಳಪಾಯದ ಮೇಲೆ ಈ ತತ್ತ್ವಸೌಧವನ್ನು ನಿಲ್ಲಿಸಿದವರು ಆಚಾರ್ಯಮಧ್ವರೊಬ್ಬರೇ. ರಾಮಾನುಜೀಯ ಮತದಲ್ಲೂ ಭಗವಂತ ಸರ್ವೋತ್ತಮ, ಸ್ವತಂತ್ರನೆಂದು ಕೊಂಡಾಡುವುದು ತೋರಿಕೆಗೆ ಮಾತ್ರ. ಅವರ ಮತದ ಅಂತರ್ಯದ ಅನೇಕ ಅಸ್ವಾರಸ್ಯಗಳು, ಈ ತತ್ವಕ್ಕೆ ಪ್ರತಿಗಾಮಿಯಾಗುತ್ತವೆ. ಕೆಲವನ್ನು ಇಲ್ಲಿ ಕಾಣಬಹುದು.

ಒಂದು: ಅವರ ಮತದಂತೆ ಮುಕ್ತಿಯಲ್ಲಿ, ಆನಂದಸಾಮ್ಯ. ಅಲ್ಲಿ ತರತಮ ಭಾವವೇ ಇಲ್ಲ. ಅದಕ್ಕೆ ಅವರು ನೀಡುವ ಕಾರಣವಿಷ್ಟೇ –ಮೋಕ್ಷದಲ್ಲೂ ಈ ಲೋಕ ದಂತೆ ತಾರತಮ್ಯವಿದ್ದರೆ, ಮುಕ್ತಜೀವರಲ್ಲಿ ಅಸಮತೆಯಿಂದ ಪರಸ್ಪರ ದ್ವೇಷಾಸೂಯೆ ಗಳು ಉಂಟಾಗಬಹುದಲ್ಲವೇ? ಆದ್ದರಿಂದ ಸಾಮ್ಯವನ್ನು ಅಂಗೀಕರಿಸಿದರೆ, ಈ ಅನುಪಪತ್ತಿ ಇಲ್ಲ. ಈ ವಿಚಾರಕ್ಕೆ 'ಪರಮಂ ಸಾಮ್ಯಮುಪೈತಿ' ಎಂಬ ಶ್ರುತಿಯೂ ಸಂವಾದಿ ಎಂದು ಅವರ ವಾದಸರಣಿ. ಆದರೆ, ಹೀಗೆ ಮುಕ್ತಿಯಲ್ಲಿ ಸಕಲ ಚೇತನರಿಗೂ ಸಾಮ್ಯವನ್ನು ಒಪ್ಪಿದರೆ, ಭಗವಂತನ ಪಾರಮ್ಯಕ್ಕೆ ಚ್ಯುತಿ ಬರುವುದನ್ನು ತಪ್ಪಿಸಲು ಸಾಧ್ಯವೇ ಇಲ್ಲ. ಅದಕ್ಕೆಂದೇ ಶ್ರೀಮದಾಚಾರ್ಯರೂ ಈ ಹುರುಳಿಲ್ಲದ

ವಾದವನ್ನು ತಳ್ಳಿಹಾಕಿ 'ಮೋಕ್ಷದಲ್ಲೂ ತಾರತಮ್ಯವನ್ನು ಅಗತ್ಯವಾಗಿ ಒಪ್ಪಲೇಬೇಕು. ತಾರತಮ್ಯ ಜೀವನ ಸ್ವಭಾವಸಿದ್ಧ ಗುಣ ಎಂದೇ ಪ್ರತಿಪಾದಿಸಿದ್ದಾರೆ. ಮುಕ್ತಿಯಲ್ಲಿ ತಾರತಮ್ಯವಿದ್ದಲ್ಲಿ ಮುಕ್ತಚೇತನರಲ್ಲಿ ಪರಸ್ಪರ ದ್ವೇಷಾಸೂಯೆಗಳು ಉಂಟಾದಾವು! ಎಂಬ ಅವರ ಆಪತ್ತಿಗೆ ಪ್ರತಿಯಾಗಿ ಆಪತ್ತಿಯೂ ಇಲ್ಲದೇನಿಲ್ಲ. ಅಲ್ಲಿ ತಾರತಮ್ಯ ವಿಲ್ಲದೇ ಹೋದರೂ ಪರಸ್ಪರ ದ್ವೇಷಾಸೂಯೆ ತಪ್ಪಿದ್ದಲ್ಲ. ಮುಕ್ತಿಗಿಂತ ಮೊದಲು ಸಂಸಾರದಲ್ಲಿ ಹಿರಿಯರೆನಿಸಿದವರಿಗೆ ಅವರಿಗಿಂತ ಅವರರಾದವರೂ ಸಾಧನೆಯಲ್ಲಿ ಅಲ್ಪರಾದವರೂ ಮುಕ್ತಿಯಲ್ಲಿ ಸಾಮ್ಯವನ್ನು ಪಡೆದಾಗ, ದ್ವೇಷಾಸೂಯೆಗಳು ಉಂಟಾಗಲಾರವೇನು? ಎಂಬ ಮರುಪ್ರಶ್ನೆ ಅವರ ಪಾಲಿಗೆ ಬ್ರಹ್ಮಾಸ್ತ್ರ.

ಎರಡು: ಆಸ್ತಿಕರೆನಿಸಿದವರು ಸಾಮಾನ್ಯವಾಗಿ ಎದುರಿಸಬೇಕಾದ ಪ್ರಶ್ನೆ- ಭಗವಂತ ಪಕ್ಷಪಾತ ಮಾಡುತ್ತಾನಲ್ಲವೇ? ಇಲ್ಲದಿದ್ದರೆ, ಈ ಪ್ರಪಂಚದಲ್ಲಿ ಒಬ್ಬನಿಗೆ ಸುಖ. ಮತ್ತೊಬ್ಬನಿಗೆ ದುಃಖ; ಒಬ್ಬನಿಗೆ ಸಿರಿ, ಇನ್ನೊಬ್ಬನಿಗೆ ಬಡತನ ಎಂದೆಲ್ಲ ವೈಷಮ್ಯವೇಕೆ? ಇದಕ್ಕೆ ರಾಮಾನುಜರು ಉತ್ತರ ಕೊಡಲೆತ್ನಿಸಿ ವಿಫಲರಾಗಿದ್ದಾರೆ. ಅವರ ಅಭಿಪ್ರಾಯ ಹೀಗಿದೆ- "ಜೀವರ ಪೂರ್ವಜನ್ಮಕೃತಕೃತ್ಯಗಳಿಗನುಸಾರವಾಗಿ ಫಲವನ್ನು ಭಗವಂತ ಕೊಡುವುದರಿಂದ ಸುಖ ದುಃಖಗಳ ವಿಚಾರದಲ್ಲಿ ಜೀವನ ಪೂರ್ವಕೃತ ಪುಣ್ಯಪಾಪಗಳೇ ಕಾರಣ ಹೊರತು, ಇದರಲ್ಲಿ ಭಗವಂತನ ಯಾವುದೇ ಕೈವಾಡವಿಲ್ಲ. ಈ ಪುಣ್ಯಪಾಪ ಕೃತ್ಯಗಳಿಗೂ ಭಗವಂತನೇ ಪ್ರೇರಕನೆಂದ ಮೇಲೆ ಅವನೇ ಹೊಣೆಯಲ್ಲವೇ? ಖಂಡಿತ ಅಲ್ಲ. ಎಲ್ಲ ಕೃತ್ಯಗಳಿಗೂ ಭಗವಂತ ಪ್ರೇರಕ ನಾದರೂ ಅವರವರ ಪ್ರಾಕೃತ ಕರ್ಮಾನುಸಾರವಾಗಿಯೇ ಅವನು ಪ್ರೇರಿಸುತ್ತಾನೆ. ಜೀವ ಪ್ರಪ್ರಥಮ ಬಾರಿಗೆ ಈ ಭವಕ್ಕೆ ಬಂದಾಗ ಅವನ ಯಾವುದೇ ಕ್ರಿಯೆಗೂ ಭಗವಂತ ಪ್ರೇರಕನಲ್ಲ. ಜೀವನ ಪ್ರಥಮ ಪ್ರವೃತ್ತಿಗನುಗುಣವಾಗಿ ಮುಂದೆ ಭಗವಂತ ಸತ್ಕರ್ಮ-ದುಷ್ಕರ್ಮಗಳನ್ನು ಮಾಡುವಂತೆ, ಅದರ ಫಲ ಅನುಭವಿಸುವಂತೆ ಪ್ರೇರಿಸುತ್ತಾನೆ" ಎಂದು. ಇಲ್ಲಿ ನಾವು ಸುಲಭವಾಗಿ ಅವರ ಸ್ಖಾಲಿತ್ಯವನ್ನು ಗುರುತಿಸ ಬಹುದು. ಜೀವನ ಪ್ರಥಮ ಪ್ರವೃತ್ತಿಯಲ್ಲಿ ಭಗವಂತ ಪ್ರೇರಕನಲ್ಲ ಎಂದರೆ, ಸರ್ವಕಾಲದಲ್ಲೂ-ಸರ್ವರಿಗೂ-ಸರ್ವರೀತಿಯಿಂದಲೂ-ಸರ್ವಕ್ಕೂ ಪ್ರೇರಕನಾಗಿದ್ದಾನೆ ಆ ಪರಮಾತ್ಮ ಎಂಬ ತತ್ತ್ವಕ್ಕೆ ಭಂಗ ಬರಲಿಲ್ಲವೇ! ಈ ವಿಚಾರದಲ್ಲಿ ಶ್ರೀ ಮಧ್ವಾ ಚಾರ್ಯರ ಪರಿಹಾರಕ್ರಮ ಅಪೂರ್ವ. ಆಚಾರ್ಯರ ಮುಖ್ಯ ತತ್ತ್ವ ಪ್ರತಿಯೊಬ್ಬ ಜೀವರ ಯೋಗ್ಯತೆ, ಸ್ವಭಾವ ವಿಲಕ್ಷಣ. ಜೀವರಲ್ಲಿ ತ್ರೈವಿಧ್ಯವಿದೆ. ಸಾತ್ವಿಕ ಜೀವರು ಸತ್ಕರ್ಮ ಮಾಡಿದರೆ, ತಾಮಸ ಜೀವರು ದುಷ್ಕರ್ಮ ಮಾಡುತ್ತಾರೆ. ರಾಜಸ ಜೀವರು ಎರಡೂ ವಿಧದ ಕರ್ಮಗಳನ್ನು ಮಾಡುತ್ತಾರೆ. ಭಗವಂತ ಜೀವರ ಸ್ವಭಾವದ ವಿಷಯದಲ್ಲಿ ಸ್ವೇಚ್ಛೆಯಿಂದಲೇ ತಟಸ್ಥ. ಅವರವರ ಸ್ವಭಾವಕ್ಕನುಗುಣವಾಗಿ ಭಗವಂತ ಕರ್ಮ ಮಾಡಲು ನಿಯಮಿಸುತ್ತಾನೆ; ಹಾಗೆಯೇ ಫಲ ನೀಡುತ್ತಾನೆ. ಇದರಿಂದ ಅವನಿಗೇನೂ ಪ್ರಯೋಜನವಿಲ್ಲ. ಎಲ್ಲ ಸೃಷ್ಟ್ಯಾದಿ ಕರ್ಮಗಳು ಅವನ ಆನಂದೋ ದ್ರೇಕದಿಂದ ಸಹಜವಾಗಿ, ಅನಾಯಾಸವಾಗಿ, ಪ್ರಯತ್ನವಿಲ್ಲದೇ ಉಂಟಾದ ಕ್ರಿಯೆ ಗಳು. ಈ ತೆರನಾದ ಸಿದ್ಧಾಂತದಲ್ಲಿ ಯಾವ ದೋಷವಿದೆ?

ಮೂರು: ರಾಮಾನುಜೀಯ ಮತದಲ್ಲಿ ಪರಮಾತ್ಮನ ಅವತಾರಗಳಲ್ಲಿ ಅವನಿಗೆ ಪ್ರಾಕೃತದೇಹದ ಸಂಪರ್ಕವನ್ನೂ ಅಂಗೀಕರಿಸಿದ್ದಲ್ಲದೇ, ಅವನು ಅವನ ಗುಣಗಳು ಬೇರೆ ಬೇರೆ ಎಂದು ಒಪ್ಪುತ್ತಾರೆ. ಇದೊಂದು ಭಗವಂತನ ವಿಷಯದಲ್ಲಿ ಅವರು ಬಗೆದ ಅಪಚಾರ. ಈ ಭೂಮಿಯಲ್ಲಿ ಅವತರಿಸಲು ಅವನಿಗೆ ಪ್ರಾಕೃತ ದೇಹದ ಅಪೇಕ್ಷೆ ಇದ್ದಲ್ಲಿ, ಅವನಿಗೆ ಅಸ್ವಾತಂತ್ರ್ಯವನ್ನೂ ಪರೋಕ್ಷವಾಗಿ ಹೇಳಿದಂತಾಗ ಲಿಲ್ಲವೇ? ಅವನಿಗೆ ಹಾಗೂ ಅವನ ಗುಣಗಳಿಗೆ ಭೇದವಿದೆಯೆಂದಾದರೆ, ಅವನನ್ನು ಸ್ವತಂತ್ರ ಎಂದು ಕರೆಯುವುದು ಅದೆಷ್ಟು ಉಚಿತ? ಲೋಕದಲ್ಲಿ ಒಬ್ಬ ವ್ಯಕ್ತಿಗೆ ಮಹತ್ತ್ವ ಬರುವುದು ಧನ-ಕನಕ-ವಿದ್ಯೆ ಇತ್ಯಾದಿಗಳಿಂದ. ಆ ಧನಾದಿಗಳೆಲ್ಲ ವ್ಯಕ್ತಿಗಿಂತ ವ್ಯಕ್ತಿಗೆ ತೀರ ವಿಭಿನ್ನ. ಆ ಧನಾದಿಗಳನ್ನು ಆಶ್ರಯಿಸಿ ಪ್ರಯೋಜನ ಪಡೆದಿದ್ದರಿಂದ ನಾವೆಲ್ಲ ಅಸ್ವತಂತ್ರರೆನಿಸಿದ್ದೇವೆ. ಅದೇ ರೀತಿಯಾಗಿ ಭಗವಂತನಿಗಿಂತ ಭಿನ್ನವಾದ ಅವನು ಗುಣಗಳಿಂದ ಅವನ ಮಹತ್ವವನ್ನು ಪಡೆದಿದ್ದಾದರೆ ಸ್ವಾನ್ಯ ವಸ್ತುವನ್ನು ಆಕ್ಷೇಪಿಸಿರುವುದರಿಂದ ಅವನು ಸ್ವತಂತ್ರ ಹೇಗಾಗಲು ಸಾಧ್ಯ?

ಈ ವಿಷಯದಲ್ಲಿ ಶ್ರೀಮದಾನಂದತೀರ್ಥಭಗವತ್ಪಾದರ ಸಿದ್ಧಾಂತ ಔಚಿತ್ಯ ಪೂರ್ಣವಾಗಿದೆ. ಭಗವಂತನಿಗೆ ಪ್ರಾಕೃತದೇಹದ ಸಂಬಂಧವೇ ಇಲ್ಲ. ಅವನ ಯಾವ ಅವತಾರಗಳಿಗೂ ಅವನಿಗೂ ಅವನ ಗುಣಗಳಿಗೂ ಭೇದವೇ ಇಲ್ಲ. ಹೀಗಾಗಿ ಅವನು ತನ್ನನ್ನು ಹೊರತು ಮತ್ತಾರನ್ನೂ ಯಾವ ಪ್ರಯೋಜನಕ್ಕಾಗಿಯೂ ಅಪೇಕ್ಷಿಸುವುದಿಲ್ಲ. ಆದ್ದರಿಂದಲೇ ಅವನು ಸ್ವತಂತ್ರ.

ಈಗ ವಿಚಾರ ಮಾಡಿ: ಯಾವ ಸಿದ್ಧಾಂತ ಶ್ರುತಿ-ಸ್ಮೃತಿ ಸಿದ್ಧ? ಯಾರ ಮತ ಭಗವಂತನ ಗುಣಗಾನ ಮಾಡುತ್ತದೆ? ಶ್ರೀಮದಾನಂದತೀರ್ಥಭಗವತ್ಪಾದರ ಮತವಲ್ಲದೇ ಇನ್ನಾವ ಮತ ಸಿದ್ಧಾಂತಪದವಿಗೇರಲು ಸಾಧ್ಯ?!!

●

೮. ೮. ಕಾಂಸ್ಯಪಾತ್ರಭೋಜಿನ್ಯಾಯ

ಗುರುಶಿಷ್ಯರಿಬ್ಬರೂ ಮನೆಗೆ ಬಂದಿರುವರು. ಇಬ್ಬರಿಗೂ ಭೋಜನ ಹಾಕ ಬೇಕಾಗಿದೆ. ಆದರೆ ಊಟಮಾಡಲು ಬೇಕಾದ ಕಾಂಸ್ಯಪಾತ್ರ- ಕಂಚಿನ ಬಟ್ಟಲು ಒಂದೇ ಇರುವುದು. ಒಬ್ಬನಿಗಷ್ಟೇ ಆ ಬಟ್ಟಲಲ್ಲಿ ಭೋಜನವನ್ನು ನೀಡಬಹುದು. ಶಿಷ್ಯನಿಗಿಂತಲೂ ಗುರುವೇ ಹಿರಿಯನಾದುದರಿಂದ ಆ ಕಾಂಸ್ಯಪಾತ್ರವನ್ನು ಗುರುವಿಗೇ ನೀಡಲಾಗುವುದು. ಆದರೆ ಗುರುವು ಅದನ್ನು ತನ್ನ ಶಿಷ್ಯನಿಗೆ ನೀಡುವನು. ಶಿಷ್ಯನು ಕಾಂಸ್ಯಪಾತ್ರದಲ್ಲಿ ಅಲ್ಲದೆ ಬೇರೆ ಯಾವುದೇ ಪಾತ್ರದಲ್ಲಿ ಊಟಮಾಡುವುದಿಲ್ಲ ಎಂದು ಕೈಗೊಂಡಿದ್ದ ನಿಯಮವನ್ನು ಬಲ್ಲವನಾಗಿದ್ದನು ಗುರುವು. ಹೀಗೆ ಶಿಷ್ಯನಿಗೆ ನಿಯಮವಿದ್ದುದರಿಂದ ಕಾಂಸ್ಯಪಾತ್ರವಲ್ಲದಿದ್ದರೆ ಅವನು ಊಟವನ್ನೇ ಮಾಡುವುದಿಲ್ಲ. ತನಗಾದರೂ ಹಾಗೆ ನಿಯಮವಿಲ್ಲ. ತಾನು ಬೇರೆ ಲೋಹದ ಪಾತ್ರದಲ್ಲೂ ಅಥವಾ

ಎಲೆಯಲ್ಲೂ ಊಟಮಾಡಬಹುದಾಗಿದೆ —ಎಂದು ವಿವೇಚಿಸಿಕೊಂಡ ಗುರುವು ಅಳವಡಿಸಿಕೊಂಡ ಹೊಂದಾಣಿಕೆಯಿಂದಾಗಿ ಗುರುಶಿಷ್ಯರಿಬ್ಬರಿಗೂ ಭೋಜನ ನಡೆದಂತಾಗುವುದು.

'ಕಾಂಸ್ಯಪಾತ್ರಭೋಜಿನ್ಯಾಯ' —ಎಂದು ಪ್ರಸಿದ್ಧವಾಗಿರುವ ಈ ನ್ಯಾಯವನ್ನು ತತ್ತ್ವಜ್ಞಾನದ ಪ್ರಚಾರದ ವಿಷಯದಲ್ಲೂ ಅಳವಡಿಸಿಕೊಳ್ಳಬೇಕು. ಹಾಗಾದರೆ ದ್ವೈತಾದ್ವೈತ ತತ್ತ್ವಗಳ ಪ್ರಚಾರದಿಂದ ಸಮಾಜದ ಏಕತೆಗೆ ಭಂಗ ಬರುವುದೆಂಬ ಕೆಲವರ ಆಪಾದನೆಯನ್ನು ತಪ್ಪಿಸಬಹುದಾಗಿದೆ. ಶಿಷ್ಯನು ತಾನು ಕಾಂಸ್ಯಪಾತ್ರದಲ್ಲೇ ಊಟಮಾಡುವುದೆಂಬುದಾಗಿ ನಿಯಮವನ್ನು ತೊಟ್ಟಿದ್ದಂತೆ, ದ್ವೈತಮತೀಯರಿಗೆ ದ್ವೈತವನ್ನೇ ಉಪಾಸಿಸಬೇಕು. ಪ್ರಚಾರಮಾಡಬೇಕು, ಅದ್ವೈತ ಉಪಾಸನೆ ಹಾಗೂ ಪ್ರಚಾರದಿಂದ ಮಹಾ ಅನರ್ಥವಿದೆ ಎಂಬ ಕಟ್ಟುಪಾಡು ಇದೆ. ದ್ವೈತ ಸಿದ್ಧಾಂತದಲ್ಲಿ ಇದನ್ನು ಒತ್ತಿ ಪ್ರತಿಪಾದಿಸಲಾಗಿದೆ. ಆದರೆ ಅದ್ವೈತಿಗಳಿಗೆ ಅದ್ವೈತವನ್ನೇ ಉಪಾಸಿಸಬೇಕು, ಪ್ರಚಾರ ಮಾಡಬೇಕು ಎಂಬ ನಿಯಮವಿಲ್ಲ. ಅದ್ವೈತಸಿದ್ಧಾಂತದಲ್ಲಿ ದ್ವೈತೋಪಾಸನೆಯಿಂದಲೂ, ಸಗುಣೋಪಾಸನೆಯಿಂದಲೂ ಪುರುಷಾರ್ಥಪ್ರಾಪ್ತಿಯಾಗುವುದೆಂದು ಒಪ್ಪಿಕೊಳ್ಳಲಾಗಿದೆ. ಆದುದರಿಂದ ಗುರುವು ತನಗೆ ವಿಶೇಷನಿಯಮವಿಲ್ಲವೆಂದು ಶಿಷ್ಯನಿಗೆ ಕಾಂಸ್ಯಪಾತ್ರವನ್ನು ಕೊಟ್ಟು ಹೊಂದಾಣಿಕೆ ನಡೆಸಿದಂತೆ, ಅದ್ವೈತಿಗಳು ಅದ್ವೈತೋಪಾಸನೆಯನ್ನೂ ಅದ್ವೈತಪ್ರಚಾರವನ್ನೂ ಬಿಟ್ಟು ದ್ವೈತಿಗಳ ಜೊತೆಗೆ ಹೊಂದಾಣಿಕೆ ನಡೆಸಿಕೊಳ್ಳಬೇಕು. ಅವರಂತೆಯೇ ದ್ವೈತೋಪಾಸನೆ ಹಾಗೂ ದ್ವೈತದ ಪ್ರಚಾರಗಳನ್ನೇ ನಡೆಸಬೇಕು. ಹೀಗಾದರೆ ಎಲ್ಲರೂ ದ್ವೈತೋಪಾಸಕರೇ, ದ್ವೈತಪ್ರಚಾರಕರೇ ಆಗುವ ಪ್ರಯುಕ್ತ ಪರಸ್ಪರ ವೈಮನಸ್ಯಕ್ಕೆ ನಿಮಿತ್ತವಿಲ್ಲದಂತಾಗಿ ಸಮಾಜದ ಏಕತೆಯನ್ನು ಸಾಧಿಸಿದಂತಾಗುವುದು.

ಸಮಾಜದಲ್ಲಿ ಏಕತೆಯನ್ನು ಸಾಧಿಸಬೇಕು. ಆದುದರಿಂದ ಅದಕ್ಕೆ ಬಾಧಕವಾದ ದ್ವೈತಪ್ರಚಾರವನ್ನು ನಡೆಸಬಾರದು ಎಂದು ಅಪೇಕ್ಷಿಸುವ ಸಮಾಜದಸುಧಾರಕರಲ್ಲಿ ನಮ್ಮ ಸಲಹೆ, ಸೂಚನೆ ಇದಾಗಿದೆ.

●

೮. ೯. ಅನುಕೂಲತ್ವಪ್ರಕಾರಕಜ್ಞಾನವೇ ಆನಂದವಲ್ಲ

ರಾಮಾನುಜೀಯ ಮತದಲ್ಲಿ 'ನಿರಂಜನಃ ಪರಮಂ ಸಾಮ್ಯಮುಪೈತಿ' ಎಂಬ ಪ್ರಮಾಣಾನುಸಾರವಾಗಿ ಮುಕ್ತಾತ್ಮ ಪರಮಾತ್ಮರಿಗೆ ಸಾಮ್ಯವನ್ನು ಹೇಳಲಾಗುವುದೇನೋ ನಿಜ. ಆದರೆ ಎಲ್ಲ ಧರ್ಮಗಳಲ್ಲೂ ಮುಕ್ತಾತ್ಮಪರಮಾತ್ಮರಿಗೆ ಸಾಮ್ಯವನ್ನು ಪ್ರತಿಪಾದಿಸಲಾಗಿದೆ ಎಂದು ಭಾವಿಸಬಾರದು. ಸ್ವಾತಂತ್ರ್ಯಾದಿಧರ್ಮಗಳ ವಿಷಯದಲ್ಲಿ ಮುಕ್ತಾತ್ಮ–ಪರಮಾತ್ಮರಿಗೆ ವೈಷಮ್ಯವನ್ನೇ ಹೇಳಲಾಗುವ ರಾಮಾನುಜೀಯಮತದ ಪ್ರಕಾರ ಆನಂದದ ವಿಷಯದಲ್ಲಿ ಮಾತ್ರ ಸಾಮ್ಯವನ್ನು ಒಪ್ಪಿರುವಂತಹದ್ದು. ಶ್ರುತಿಯಲ್ಲಿ 'ಪರಮಂ ಸಾಮ್ಯಮುಪೈತಿ' ಎಂಬುದಾಗಿ ಸಾಮಾನ್ಯವಾಗಿ ಸಾಮ್ಯ

ಪ್ರತಿಪಾದಿಸಲ್ಪಟ್ಟಿದ್ದರೂ 'ತದಾ ವಿದ್ವಾನ್' ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ' ಎಂದು ವಿದ್ವಾನ್ ಶಬ್ದದ ಸಮಭಿವ್ಯಾಹಾರ ಇರುವುದರಿಂದ, ಆ ಶ್ರುತಿಯಲ್ಲಿ ಆನಂದದ ವಿಷಯದಲ್ಲಷ್ಟೇ ಸಾಮ್ಯವನ್ನು ಹೇಳಲಾಗಿದೆ ಎಂದು ಸಂಕೋಚ ಮಾಡಬಹುದಾಗಿದೆ, 'ವಿದ್ವಾನ್' ಎಂಬುದಕ್ಕೆ 'ಜ್ಞಾನೀ' ಎಂದರ್ಥ. ಇಂತಹ 'ಜ್ಞಾನೀ' ಪದಾರ್ಥದಲ್ಲಿ ಘಟಕವಾದ ಜ್ಞಾನವೇ ಆನಂದ. ಅನುಕೂಲತ್ವಪ್ರಕಾರಕಜ್ಞಾನವನ್ನೇ ಆನಂದ ಎಂಬುದಾಗಿ ರಾಮಾನುಜೀಯ ಮತದಲ್ಲಿ ಒಪ್ಪಲಾಗಿದೆ. ಆದ್ದರಿಂದ ಶ್ರುತಿಯು 'ವಿದ್ವಾನ್' ಶಬ್ದದಿಂದ ಆನಂದವು ಪ್ರಸ್ತಾವಿಸಲ್ಪಟ್ಟಿದ್ದು ಅಂತಹ ಆನಂದದ ವಿಷಯದಲ್ಲಷ್ಟೇ ಮುಕ್ತಾತ್ಮ-ಪರಮಾತ್ಮರಿಗೆ ಪರಮಸಾಮ್ಯವನ್ನು ಶ್ರುತಿಯಲ್ಲಿ ಹೇಳಲಾಗಿದೆಯೇ ಹೊರತು ಇತರ ಗುಣಗಳ ವಿಷಯದಲ್ಲೂ ಮುಕ್ತಾತ್ಮ-ಪರಮಾತ್ಮರಿಗೆ ಸಾಮ್ಯ ಹೇಳಲ್ಪಟ್ಟಿದೆ ಎಂಬುದು ರಾಮಾನುಜೀಯಮತಕ್ಕೆ ಸಮ್ಮತವಾದುದಲ್ಲ.

ರಾಮಾನುಜೀಯಮತದ ಈ ಅಭಿಪ್ರಾಯ ಯುಕ್ತವಾದುದಲ್ಲ. ಶ್ರುತಿ ಸಾಮಾನ್ಯವಾಗಿ 'ಪರಮಂ ಸಾಮ್ಯಮುಪೈತಿ' ಎಂದು ಸಾರುತ್ತಿದ್ದರೂ, ಆನಂದದ ವಿಷಯದಲ್ಲಿ ಮಾತ್ರ ಅಲ್ಲಿ ಸಾಮ್ಯವು ಹೇಳಲ್ಪಟ್ಟಿದೆ ಎಂಬ ಸಂಕೋಚಕ್ಕೆ ವಿನಿಗಮಕವಿಲ್ಲ. 'ವಿದ್ವಾನ್' ಶಬ್ದದ ಸಮಭಿವ್ಯಾಹಾರವಿರುವಂತೆ 'ನಿರಂಜನಃ' ಇತ್ಯಾದಿ ಶಬ್ದಗಳ ಸಮಭಿವ್ಯಾಹಾರವೂ ಇರುವುದರಿಂದ ಆನಂದದ ವಿಷಯದಲ್ಲಷ್ಟೇ ಸಾಮ್ಯ ಹೇಳಲಾಗಿದೆ, ನಿರಂಜನತ್ವಾದಿಧರ್ಮಗಳಲ್ಲಿ ಸಾಮ್ಯ ಹೇಳಲಾಗಿಲ್ಲ -ಎಂಬ ಸಂಕೋಚಕ್ಕೆ ವಿನಿಗಮಕವೇನಿದೆ?

ಅಲ್ಲದೆ, ಆನಂದದ ವಿಷಯದಲ್ಲಷ್ಟೇ ಮುಕ್ತಾತ್ಮ-ಪರಮಾತ್ಮರಿಗೆ ಸಾಮ್ಯವನ್ನು ಹೇಳಿದರೂ ಮುಕ್ತಾತ್ಮ ಉಳಿದ ಗುಣಗಳಿಂದಲೂ ಪರಮಾತ್ಮನಂತೆಯೇ ಪೂರ್ಣನಾಗಿದ್ದು ಎಲ್ಲ ಗುಣಗಳಿಂದಲೂ ಭಗವಂತನಿಗೆ ಸದೃಶನಾಗಿದ್ದಾನೆಂದು ಅನಿವಾರ್ಯವಾಗಿ ಒಪ್ಪಲೇಬೇಕಾಗುವುದು. ಛಾಂದೋಗ್ಯೋಪನಿಷತ್ತು 'ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ' -ಯಾರು ಗುಣಪೂರ್ಣನೋ ಅವನಷ್ಟೇ ಸುಖಪೂರ್ಣನಾಗಬಲ್ಲ ಎಂದು ಸಂದೇಶಿಸಿದೆ. ಆದ್ದರಿಂದ ಮುಕ್ತಾತ್ಮನು ಪರಮಾತ್ಮನಂತೆ ಸುಖಪೂರ್ಣನಾಗಬೇಕೆಂದರೆ ಗುಣಪೂರ್ಣನೂ ಆಗಿರಬೇಕು. ಹೀಗೆ ಸುಖದ ವಿಷಯದಲ್ಲಿ ಮುಕ್ತಾತ್ಮ ಪರಮಾತ್ಮನಿಗೆ ಸಮಾನ ಎನ್ನುವ ರಾಮಾನುಕೀಯ ಮತದಲ್ಲಿ ಪರಮಾತ್ಮನಂತೆ ಸುಖಪೂರ್ಣನಾದ ಮುಕ್ತಾತ್ಮನು ಪರಮಾತ್ಮನಂತೆ ಗುಣಪೂರ್ಣನೂ ಆಗಿರುವನೆಂದು ಒಪ್ಪಲೇ ಬೇಕಾಗುವುದು.

ಅಲ್ಲದೆ, 'ಅನುಕೂಲತ್ವಪ್ರಕಾರಕ ಜ್ಞಾನವೇ ಆನಂದ' ಎಂಬುದು ರಾಮಾನುಜೀಯಮತದ ಪ್ರಕ್ರಿಯೆಯಷ್ಟೇ. ಇದರ ಬಗ್ಗೆ ಶ್ರುತಿ, ಸ್ಮೃತಿ ರೂಪವಾದ ಪ್ರಮಾಣವಾಗಲೀ ಕೋಶ, ವ್ಯಾಕರಣಾದಿಗಳಾಗಲೀ ಇಲ್ಲದೆ ಇದನ್ನು ಯಾಕೆ ಒಪ್ಪಬೇಕು?

'ಸುಖ ಎಂಬುದು ಅಂತಃಕರಣದ ಅತಿರಿಕ್ತವೃತ್ತಿ' ಎಂಬುದಾಗಿ ಒಪ್ಪುವ ಬದಲು 'ಅನುಕೂಲತ್ವಪ್ರಕಾರಕಜ್ಞಾನವೇ ಆನಂದ' ಎಂದು ಒಪ್ಪಿದರೆ ಲಾಘವ. ಇಲ್ಲಿ

'ಅನುಕೂಲತ್ವ' ಎಂದರೆ ಸುಖಸಾಧನಗಳಲ್ಲಿರುವ ಅತಿಶಯವಿಶೇಷ–ಸುಖಸಾಧನತಾವಚ್ಛೇದಕೀಭೂತಧರ್ಮ. ಈ ಧರ್ಮವು ಧರ್ಮಿಸ್ವರೂಪವೇ ಆಗಿದ್ದು, ಧರ್ಮಕ್ಕಿಂತ ಅಭಿನ್ನವಾಗಿರುವ ಪ್ರಯುಕ್ತ ಧರ್ಮಿಗಿಂತ ಬೇರೆ ಧರ್ಮವನ್ನು ಒಪ್ಪುವ ಆವಶ್ಯಕತೆ ಇಲ್ಲ. ಹೀಗೆ ಲಾಘವರೂಪ ಯುಕ್ತಿಯಿಂದಾಗಿ ಸುಖವನ್ನು ಜ್ಞಾನಸ್ವರೂಪವೇ ಆಗಿದೆ ಎಂದು ಒಪ್ಪಬಾರದೇಕೆ?'' ಎಂಬುದಾಗಿ ಸಮರ್ಥಿಸುವಂತಿಲ್ಲ. ಸುಖಸಾಧನಗಳಲ್ಲಿರುವ ಅನುಕೂಲತ್ವಧರ್ಮವು ವ್ಯಕ್ತಿವ್ಯಕ್ತಿಗೆ ಕಾಲಕಾಲಕ್ಕೆ ಬದಲಾಗುವುದರಿಂದ ಧರ್ಮಿಗಿಂತ ಅಭಿನ್ನವಾಗಲಾರದು. 'ಖಂಡಿತೇ ಭೇದ ಐಕ್ಯಂ ಚ....' ಎಂಬುದಾಗಿ ಧರ್ಮಿ ಇರುವವರೆಗೆ ಇರಲಾರದ ಧರ್ಮಿ–ಧರ್ಮಗಳ ನಡುವೆ ಭೇದಾಭೇದಗಳನ್ನು ಒಪ್ಪಬೇಕೆಂದು ಸಂದೇಶಿಸಲಾಗಿದೆ. ಆದುದರಿಂದ ಸುಖ ಎಂಬ ಅತಿರಿಕ್ತ ಪದಾರ್ಥ ಬೇಡ ಎಂಬವರೂ ಕೂಡ 'ಅನುಕೂಲತ್ವ' ರೂಪವಾದ ಹೊಸ ಧರ್ಮವನ್ನು ಅನಿವಾರ್ಯವಾಗಿ ಒಪ್ಪಬೇಕಾಗುವುದು. ಆದ್ದರಿಂದ ಸುಖವನ್ನು ಅತಿರಿಕ್ತಪದಾರ್ಥವಾಗಿ ಒಪ್ಪದ ಮಾತ್ರಕ್ಕೆ ಲಾಘವವಿಲ್ಲ.

ಅಲ್ಲದೆ, ಪ್ರಮಾಣವಿಲ್ಲದ ಪದಾರ್ಥವನ್ನು ಒಪ್ಪುವಾಗ ಗೌರವಲಾಘವ ಯುಕ್ತಿಗಳಿಗೆ ಅವಕಾಶವಿದೆಯಾದರೂ, ಪ್ರಮಾಣಸಿದ್ಧ ವಸ್ತುಗಳನ್ನು ಒಪ್ಪಲು ಗೌರವವು ದೋಷವೆನಿಸದು. ಈ ಸಭೆಯಲ್ಲಿ ಇಷ್ಟು ಜನ ಸೇರಿದ್ದಾರೆಂದರೆ ಗೌರವ ಎಂದು ಇಲ್ಲಿ ಒಬ್ಬನೇ ಇರುವುದೆಂದು ಹೇಳಿದರಾದೀತೇ?

ಹಾಗೆಯೇ ಪ್ರತಿಯೊಬ್ಬನ ಅನುಭವವು ಅನುಕೂಲತ್ವಪ್ರಕಾರಕಜ್ಞಾನಕ್ಕಿಂತ ಅತಿರಿಕ್ತವಾದ ಆನಂದವನ್ನು ಸಾರುತ್ತಿದೆ. 'ಇದಂ ಗೃಹಂ ಮಮ ಅನುಕೂಲಂ'; 'ಇದಂ ಭೋಜನಂ ಮಮ ಅನುಕೂಲಂ' –ಈ ಮನೆ ನನಗೆ ಅನುಕೂಲ; ಈ ಭೋಜನ ನನಗೆ ಅನುಕೂಲ –ಎಂಬುದಾಗಿ ಅನುಕೂಲತ್ವಪ್ರಕಾರಕಜ್ಞಾನವೇ ಆನಂದವಲ್ಲ. ಈ ಜ್ಞಾನ ಬಂದ ಬಳಿಕ ಅನುಕೂಲವೆನಿಸಿದ ಮನೆಯಲ್ಲಿ ವಾಸಿಸಿದ ಅನಂತರ, ಭೋಜನವನ್ನು ಉಂಡ ಅನಂತರ ಉಂಟಾಗುವಂತಹದ್ದೇ ಆನಂದ.

ಈ ರೀತಿಯಾಗಿ ಸ್ಪಷ್ಟವಾಗಿ ಅನುಕೂಲತ್ವಪ್ರಕಾರಕಜ್ಞಾನಕ್ಕಿಂತ ಬೇರೆಯಾದುದು ಆನಂದ ಎಂಬುದಾಗಿ ಅನುಭವಸಿದ್ಧವಾಗಿರುವಾಗ, ಅನುಭವಕ್ಕೆ ವಿರುದ್ಧವಾಗಿ ಜ್ಞಾನವೇ ಆನಂದ ಎನ್ನಲಾಗದು.

ಆದ್ದರಿಂದ 'ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ' ಎಂಬ ಶ್ರುತಿಯಲ್ಲಿ 'ವಿದ್ವಾನ್' ಶಬ್ದದಿಂದ ಜ್ಞಾನರೂಪವಾದ ಆನಂದ ಪ್ರಸ್ತುತವಾಗಿದ್ದು, ಅಂತಹ ಆನಂದದ ವಿಷಯದಲ್ಲಷ್ಟೇ ಮುಕ್ತಾತ್ಮ–ಪರಮಾತ್ಮರಿಗೆ ಸಾಮ್ಯವನ್ನು ಹೇಳಲಾಗಿದೆ ಎಂದು ವ್ಯಾಖ್ಯಾನಿಸವುದು ಯುಕ್ತವಲ್ಲ.

●

ೞ. ೧೦.

ಅವ್ಯುತ್ಪನ್ನ ಪುರಾಣಿಕನಂತೆ

ಸಂಸ್ಕೃತವನ್ನಾಗಲೀ ಪುರಾಣವನ್ನಾಗಲೀ ಏನೂ ಅರಿಯದ ಒಬ್ಬ ಪುರಾಣಿಕರು. ಅವರ ಶ್ರೋತೃವರ್ಗದಲ್ಲೂ ಯಾರೂ ಏನೂ ಅರಿಯರು. ಆದ್ದರಿಂದಲೇ ಪುರಾಣಿಕರು ಏನನ್ನೇ ಹೇಳಿದರೂ ಶ್ರದ್ಧೆಯಿಂದ ಅದನ್ನು ಅವರು ಕೇಳುವರು. ಸಂಧ್ಯಾವಂದನೆಯಲ್ಲೋ ಪೂಜಾಪದ್ಧತಿಯಲ್ಲೋ ಬರುವ ಯಾವುದೋ ಶ್ಲೋಕವನ್ನು ಪಠಿಸಿ ಅದರದ್ದೆ ಅಭಿಪ್ರಾಯವೆಂಬಂತೆ ಪುರಾಣಕಥೆಯನ್ನೋ ಇತಿಹಾಸದ ಘಟನೆಯನ್ನೋ ನಿರೂಪಿಸುವ ಪದ್ಧತಿ ಆ ಪುರಾಣಿಕರದು.

ಅದೊಂದು ದಿನ ಆ ಸಭೆಯಲ್ಲಿ ಅಕಸ್ಮಾತ್ತಾಗಿ ಸಂಸ್ಕೃತ ತಜ್ಞರೊಬ್ಬರು ಹಾಜರಿದ್ದರು. ಪುರಾಣಿಕರು ತಮ್ಮ ಮಾಮೂಲಿ ಪದ್ಧತಿಯಂತೆ 'ಶುಕ್ಲಾಂಬರಧರಂ ವಿಷ್ಣುಂ....' ಎಂಬ ಶ್ಲೋಕವನ್ನು ಪಠಿಸಿ, ಆ ಶ್ಲೋಕದ್ದೇ ಅಭಿಪ್ರಾಯವೆಂಬಂತೆ ಶ್ರೀಕೃಷ್ಣನು ಸ್ವರ್ಗಕ್ಕೆ ಹೋಗಿ ಅಲ್ಲಿ ಇಂದ್ರನ ಜೊತೆ ಕಾದಾಡಿ ಪಾರಿಜಾತವೃಕ್ಷವನ್ನು ಧರೆಗೆ ತಂದ ಕಥೆಯನ್ನು ನಿರೂಪಿಸುವರು. ಸಂಸ್ಕೃತಜ್ಞರಿಗೆ ಆಶ್ಚರ್ಯ. ಅವರು ಪುರಾಣಿಕರಲ್ಲಿಗೆ ಬಂದು ಈ ಕಥೆ ಈ ಶ್ಲೋಕದಿಂದ ಹೇಗೆ ತಾನೆ ಹೊರಡುತ್ತೆ ಎಂದು ವಿಚಾರಿಸುವರು. ಪುರಾಣಿಕರು ತಮ್ಮ ದೊಡ್ಡ ಧ್ವನಿಯಿಂದ ಕಿರುಚಿಕೊಳ್ಳುವರು– "ಎಲ್ಲರೂ ಕೇಳಿ! ಶ್ರೀಕೃಷ್ಣ ಸ್ವರ್ಗಕ್ಕೆ ಹೋಗಲಿಲ್ಲವೇ? ಪಾರಿಜಾತವನ್ನು ಅಪಹರಿಸಿಲ್ಲವೇ? ಇವರು ಅದನ್ನು ಅಲ್ಲಗಳೆಯುತ್ತಿದ್ದಾರೆ!" ಹೀಗೆ ಕಿರುಚಿಕೊಂಡು ಆ ಸಂಸ್ಕೃತಜ್ಞರೇ 'ಏನೂ ಅರಿಯದವರು' ಎಂಬಂತೆ ಆ ಸಭೆಯಲ್ಲಿ ಮಾಡಿಬಿಟ್ಟರು.

ಶಂಕರಾಚಾರ್ಯರು ಗೀತೆಯ 'ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪ ಜುಹ್ವತಿ' –ಎಂಬ ಮಾತು ಬ್ರಹ್ಮಜ್ಞಾನಿಗಳ ಯಜ್ಞದ ಕ್ರಮವನ್ನು ಹೇಳಹೊರಟ ದ್ದೆಂದು ಹೇಳಿ– ಸೋಪಾಧಿಕ ಆತ್ಮನು ನಿರುಪಾಧಿಕನಾದ ಪರಬ್ರಹ್ಮನ ಸ್ವರೂಪದಿಂದ ಐಕ್ಯವನ್ನು ಕಂಡುಕೊಳ್ಳುವುದೇ ಅವರು ಅವನಲ್ಲಿ ಮಾಡುವ ಹೋಮವೆನಿಸಿದೆ. 'ಸೋಪಾಧಿಕಸ್ಯಾತ್ಮನೋ ನಿರುಪಾಧಿಕೇನ ಪರಬ್ರಹ್ಮಸ್ವರೂಪೇಣೈಕ್ಯದರ್ಶನಂ ಸ ತಸ್ಮಿನ್ ಹೋಮಸ್ತಂ ಕುರ್ವಂತಿ' –ಎಂದು ವ್ಯಾಖ್ಯಾನಿಸಿರುವರು. ಇದನ್ನು ನೋಡುವಾಗ ನಮಗೆ ಶುಕ್ಲಾಂಬರಧರಂ ಶ್ಲೋಕಕ್ಕೆ ಕೃಷ್ಣಕಥೆಯನ್ನು ಹೇಳಿದ ಆ ಅವ್ಯುತ್ಪನ್ನ ಪುರಾಣಿಕರ ನೆನಪು ಬರುವುದು. 'ಬ್ರಹ್ಮಾಗ್ನಾವಪರೇ' ಇತ್ಯಾದಿ ಮಾತಿನ ಯಾವುದೇ ಶಬ್ದದಿಂದಲೂ ಈ ಅರ್ಥ ಹೊರಡಲು ಸಾಧ್ಯವಿಲ್ಲ. ಹೀಗಿದ್ದರೂ ಶಂಕರಾಚಾರ್ಯರು ತಮ್ಮ ಮತೀಯ ತತ್ತ್ವವನ್ನು ಅಲ್ಲಿ ಹೊದಿಸಿರುವುದು; ಅದೇ ಸರಿ ಎಂದು ಬಾಯಿ ಮೇಲು ಮಾಡುತ್ತಿರುವ ಅವರ ಅನುಯಾಯಿಗಳ ಆರ್ಭಟ, ಅದರಿಂದಾಗಿ ವಂಚಿತರಾದ ಅವರ ಅಭಿಮಾನಿಗಳು ಆ ಅವ್ಯುತ್ಪನ್ನ ಪುರಾಣಿಕರನ್ನೂ ಆ ಶ್ರೋತೃವರ್ಗವನ್ನೂ ಚೆನ್ನಾಗಿ ಜ್ಞಾಪಿಸಿ ಕೊಡುವರು.

●

೮. ೧೧. ಸಮಸ್ತ ದೋಷಗಳ ಆರೋಪ

ಒಬ್ಬ ಕುರುಡ ಭಿಕ್ಷುಕ. ಕಷ್ಟಪಟ್ಟು ತಪಸ್ಸನ್ನಾಚರಿಸಿ ದೇವರನ್ನು ಒಲಿಸಿಕೊಂಡ. ಅವನಿಗೆ ಒಲಿದ ದೇವರು ಒಂದು ವರವನ್ನಷ್ಟೇ ಕೇಳಲು ಅವಕಾಶವನ್ನು ನೀಡುವನು. ಬೇರೆ ಬೇರೆ ವರವನ್ನು ಬೇಡಬೇಕೆಂದು ಬಯಸಿದ್ದ ಆ ಭಿಕ್ಷುಕ ಯೋಚಿಸಲು ಪ್ರಾರಂಭಿಸುವನು. ದೃಷ್ಟಿ ಬರಲೆಂದು ಕೇಳಿಕೊಂಡರೆ ಕುರುಡುತನವಷ್ಟೇ ಹೋದೀತು. ಭಿಕ್ಷುಕವೃತ್ತಿ ತೊಲಗಲೆಂದು ವಿನಂತಿಸಿಕೊಂಡರೆ ಶ್ರೀಮಂತನಾಗಬಹುದಷ್ಟೆ. ಸಂತಾನ ಬೇಕೆಂದರೆ ದೃಷ್ಟಿಯಾಗಲೀ ಶ್ರೀಮಂತಿಕೆಯಾಗಲೀ ಸಿದ್ಧಿಸಲಾರದು. ಹೀಗೆ ಯಾವೊಂದು ವರವನ್ನು ಕೇಳಿಕೊಂಡರೂ ಅಪೇಕ್ಷಿತ ಸೌಭಾಗ್ಯಗಳನ್ನೆಲ್ಲ ಪಡೆಯಲಾಗದು.

ಹೀಗೆ ತುಂಬ ವಿವೇಚಿಸಿಕೊಂಡ ಆ ಭಿಕ್ಷುಕ ತಾನು ಬಯಸುವ ಸೌಭಾಗ್ಯವನ್ನು ಒಂದೇ ವರದಲ್ಲಿ ಅಡಕವಾಗುವಂತೆ ವರವೊಂದನ್ನು ಕೇಳಿಕೊಳ್ಳುವನು- "ನನ್ನ ಮೊಮ್ಮಗ ಚಿನ್ನದ ಪಲ್ಲಕ್ಕಿಯಲ್ಲಿ ಮೆರವಣಿಗೆ ಹೋಗುತ್ತಿರುವುದನ್ನು ನಾನು ಕಾಣುವಂತಾಗಬೇಕು" ಎಂಬುದಾಗಿ. ಇದು ಮೇಲ್ನೋಟಕ್ಕೆ ಒಂದೇ ವರ ಆದರೂ ಇದರಲ್ಲಿ ಮೊಮ್ಮಗನನ್ನು ಪಡೆಯಲು ಬೇಕಾದ ಸಂತಾನಸೌಭಾಗ್ಯ ಚಿನ್ನದ ಪಲ್ಲಕ್ಕಿಯಲ್ಲಿ ಮೊಮ್ಮಗನ ಮೆರವಣಿಗೆ ನಡೆಯಬೇಕೆಂದರೆ ಮೊಮ್ಮಗನ ವರೆಗೂ ಅಳಿಯದಷ್ಟು ಶ್ರೀಮಂತಿಕೆ, ತತ್ಪ್ರಯುಕ್ತ ಗೌರವ, ಅದನ್ನು ಕಾಣಬೇಕೆಂದರೆ ತನಗೆ ದೃಷ್ಟಿ ಹಾಗೂ ಅದುವರೆಗೆ ಆಯುರಾರೋಗ್ಯ –ಹೀಗೆ ಅವನ ಬೇಡಿಕೆಗಳೆಲ್ಲ ಅದರಲ್ಲಿ ಸೇರಿಕೊಂಡಿವೆ.

ಅಂತೆಯೇ ಸಮಸ್ತ ದೋಷದೂರನಾದ ಭಗವಂತನಲ್ಲಿ ಸಮಸ್ತ ದೋಷಗಳನ್ನೂ ಆರೋಪಿಸಿ, ಒಂದೇ ಮಾತಿನಲ್ಲಿ ದೂಷಿಸಬೇಕೆಂದರೆ –ಅವನು ಸಕಲ ಜೀವಾತ್ಮರ ತಾದಾತ್ಮ್ಯವನ್ನು ಹೊಂದಿರುವನು ಎಂದರಾಯಿತು. ಸಕಲ ಜೀವಾತ್ಮರಲ್ಲಿ –ಮೂರ್ಖ, ವಂಚಕ, ಕಳ್ಳ, ಜಾರ, ಕೊಲೆಗಾರ, ಲೋಭಿ, ಮತ್ಸರಿ, ಉನ್ಮತ್ತ, ಕೋಪಿಷ್ಠ, ದುಃಖಿ, ರೋಗಿ –ಹೀಗೆ ಬೇರೆ ಬೇರೆ ದೋಷದೂಷಿತರಾದವರು ನಮ್ಮ ಅನುಭವಕ್ಕೆ ಗೋಚರಿಸುವರು. ಅಂತವರೆಲ್ಲರ ತಾದಾತ್ಮ್ಯ ಭಗವಂತನಲ್ಲಿದೆ ಎಂದರೆ ಅವನು ಮೂರ್ಖ, ಕಳ್ಳ, ವಂಚಕ, ಜಾರ ಎಂದೆಲ್ಲ ಹೇಳಿದಂತೆಯೇ. ಪ್ರತ್ಯೇಕವಾಗಿ ಬೇರೆ ಬೇರೆ ದೋಷಗಳನ್ನು ಅವನಲ್ಲಿ ಹೇಳುವ ಆವಶ್ಯಕತೆಯಿಲ್ಲ.

ಹೀಗೆ ಬ್ರಹ್ಮನಲ್ಲಿ ಸಕಲ ಜೀವಾತ್ಮರ ತಾದಾತ್ಮ್ಯನಿರೂಪಣೆ ಎಂದರೆ ಅವನಲ್ಲಿ ಸಕಲದೋಷಗಳ ಆರೋಪಣೆ ಎಂದೇ ಅರ್ಥವಾಗುವುದು.

●

೮. ೧೨. ಶ್ರೀ ಆದ್ಯ ಶಂಕರಾಚಾರ್ಯರಿಂದಲೇ ಅದ್ವೈತ ಖಂಡನೆ

('ಶ್ರೀ ಆದ್ಯ ಶಂಕರಾಚಾರ್ಯರಿಂದಲೇ ಅದ್ವೈತವಾದ ಖಂಡನೆ' ಎಂಬ ಶಿರೋನಾಮದಿಂದ ಅಲಂಕೃತವಾದ ಈ ಚಿಕ್ಕ ಹೊತ್ತಿಗೆಯನ್ನು ನೋಡಿ ಬಹುಜನರು ಕುಚೋದ್ಯ ಮಾಡುವ ಸಂಭವವಿದೆ. ಕೆಲವರು ಇದು ಅಪಹಾಸಕ್ಕಾಗಿ ಬರೆದದ್ದು ಎಂದು; ಇನ್ನು ಕೆಲವರು ಇದು ವಿನೋದಕ್ಕಾಗಿ ಬರೆದದ್ದು ಎಂದು ಹೇಳುವ ಪ್ರಸಂಗವೂ ಉಂಟು. ಆದರೆ ವಾಸ್ತವಿಕವಾಗಿ ಹಾಗೆ ಬರೆದ ಲೇಖವಿದಲ್ಲ. ತತ್ವವಿಚಾರವನ್ನು ತಿಳಿಸಲೆಂದೇ ಇದನ್ನು ಬರೆದದ್ದು. ಇಲ್ಲಿ ಬಳಸಿದ ಸರಣಿ, ನಮ್ಮ ಮುಖ್ಯ ವಿದ್ಯಾಗುರುಗಳಾದ, ಪ್ರಾತಃಸ್ಮರಣೀಯರದ, ಪರಮಪೂಜ್ಯರಾದ, ಪ್ರತಿವಾದಿ ಕಂಠೀರವರೆನಿಸಿ ದಿಗಂತಪ್ರಶಂಸಿತರಾದ ಶ್ರೀ ೧೦೮ ಶ್ರೀಮತ್ ಸತ್ಯಧ್ಯಾನ ತೀರ್ಥ ಶ್ರೀಪಾದಂಗಳವರ ಉಪದೇಶಾನುಸಾರ ಮತ್ತು ಪಾದ್ಮಪುರಾಣದ ಆಧಾರದ ಮೇಲೆ ಬರೆದದ್ದಾಗಿದೆ. ಆದ್ದರಿಂದ ತತ್ವಬುಭುತ್ಸುಗಳು ಆದರದಿಂದ ಇದನ್ನು ಕಾಣುವರೆಂದು ನಂಬಿದ್ದೇವೆ.)

ಶ್ರೀ ಆದ್ಯ ಶಂಕರಾಚಾರ್ಯರು 'ಉಪದೇಶ ಸಹಸ್ರೀ' ಎಂಬ ಗ್ರಂಥವನ್ನು ರಚಿಸಿದ್ದು ಎಲ್ಲರಿಗೂ ತಿಳಿದ ವಿಷಯ. ಆ ಗ್ರಂಥದಲ್ಲಿ 'ಪದ್ಯ ಪ್ರಬಂಧ' ಎಂಬ ಒಂದು ಭಾಗವಿದೆ. ಆ ಭಾಗದಲ್ಲಿ–

ಅಹಂ ಬ್ರಹ್ಮಾಸ್ಮಿ ಕರ್ತಾ ಚ ಭೋಕ್ತಾ ಚಾಸ್ಮೀತಿ ಯೇ ವಿದುಃ ।
ತೇ ನಷ್ಟಾಃ ಜ್ಞಾನಕರ್ಮಭ್ಯಾಂ ನಾಸ್ತಿಕಾಃ ಸ್ಯುರ್ನ ಸಂಶಯಃ ॥

ಎಂದು ಒಂದು ಶ್ಲೋಕವಿದೆ. ಇದರ ಅರ್ಥವೇನೆಂದರೆ "ನಾನು ಬ್ರಹ್ಮನಾಗಿದ್ದೇನಲ್ಲದೇ ನಾನು ಕರ್ತೃವೂ ಭೋಕ್ತೃವೂ ಆಗಿದ್ದೇನೆ ಎಂದು ಯಾರು ತಿಳಿಯುತ್ತಾರೋ ಅವರು ಜ್ಞಾನ ಮತ್ತು ಕರ್ಮಗಳಿಂದ ಭ್ರಷ್ಟರೂ ನಾಸ್ತಿಕರೂ ಆಗುತ್ತಾರೆ. ಈ ವಿಷಯದಲ್ಲಿ ಸಂಶಯವೇ ಇಲ್ಲ" ಈ ರೀತಿ ಶ್ರೀ ಶಂಕರಾಚಾರ್ಯರು ಸ್ಪಷ್ಟವಾಗಿ ಇಲ್ಲಿ ಹೇಳಿದ್ದರಿಂದ ಅದ್ವೈತವಾದವು ಅವರಿಗೆ ಇಷ್ಟವಲ್ಲ. ಅವರೇ ಅದನ್ನು ಖಂಡಿಸಿದ್ದಾರೆ ಎಂದು ಸಿದ್ಧವಾಗುತ್ತದೆ. ಆದರೆ ಆ ಶ್ಲೋಕದ ವ್ಯಾಖ್ಯಾನಕಾರರು 'ಕರ್ತೃತ್ವಭೋಕ್ತೃತ್ವಜ್ಞಾನ' ಸಹಿತವಾಗಿರತಕ್ಕ 'ಅಹಂ ಬ್ರಹ್ಮಾಸ್ಮಿ' ಎಂಬ ಜ್ಞಾನವನ್ನು ಶ್ರೀ ಶಂಕರಾಚಾರ್ಯರು ನಿಷೇಧಿಸಿಲ್ಲ ಎಂದು ಬರೆದಿದ್ದಾರೆ. ಈ ವ್ಯಾಖ್ಯಾನಕಾರರ ಅಭಿಪ್ರಾಯವೇನೆಂದರೆ ಕರ್ತೃತ್ವ ಭೋಕ್ತೃತ್ವಗಳು ಮಿಥ್ಯಾ ಅಂದರೆ ಸುಳ್ಳಾಗಿದೆ, ಜೀವಬ್ರಹ್ಮೈಕ್ಯ ಮಾತ್ರ ಸತ್ಯವಾಗಿದೆ. ಆದರಿಂದ 'ಅಹಂ ಬ್ರಹ್ಮಾಸ್ಮಿ" ಎಂಬ ಜ್ಞಾನವು ಮಿಥ್ಯಾಭೂತವಾದ ಕರ್ತೃತ್ವಜ್ಞಾನ ಸಹಿತವಾಗಬಾರದು ಎಂದು. ಆದರೆ ಶ್ರೀ ಶಂಕರಾಚಾರ್ಯರ ಅಭಿಪ್ರಾಯ ಹೀಗಿಲ್ಲವೆಂದು ಅವರ ಸೂತ್ರಭಾಷ್ಯದಿಂದಲೇ ತಿಳಿದುಬರುತ್ತದೆ. ಶ್ರೀ ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ–

ಭೋಗೇನ ತು ಇತರೇ ಕ್ಷಪಯಿತ್ವಾ ಅಥ ಸಂಪತ್ಸ್ಯತೇ ।

ಎಂಬ ಸೂತ್ರಕ್ಕೆ ಭಾಷ್ಯ ಬರೆಯುವಾಗ –ಬ್ರಹ್ಮಸಾಕ್ಷಾತ್ಕಾರವಾದವರಿಗೂ ಪ್ರಾರಬ್ಧ ಕರ್ಮ ಭೋಕ್ತೃತ್ವವಿದೆ ಎಂದು ಹೇಳಿದ್ದಾರೆ. ಭೋಕ್ತೃತ್ವ ಮಿಥ್ಯಾ ಆದರೆ ಬ್ರಹ್ಮ ಸಾಕ್ಷಾತ್ಕಾರದಿಂದ ಬಾಧ್ಯವಾಗಬೇಕು. ಬ್ರಹ್ಮಸಾಕ್ಷಾತ್ಕಾರವಾದನಂತರವೂ 'ಭೋಕ್ತೃತ್ವ' ವಿದೆ ಎಂದರೆ ಅದು ಬ್ರಹ್ಮಸಾಕ್ಷಾತ್ಕಾರದಿಂದ ಬಾಧ್ಯವಲ್ಲ ಎಂದು ಒಪ್ಪಿಕೊಂಡಂತಾ ಯಿತು. ಹಾಗಾದರೆ ಅದು ಸತ್ಯವೆಂದು ಹೇಳಿದಂತಾಯಿತು ಮತ್ತು–

ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್

ಎಂಬ ಗೀತಾಶ್ಲೋಕಕ್ಕೆ ವ್ಯಾಖ್ಯಾನ ಮಾಡುವಾಗ ಪ್ರತಿಯೊಬ್ಬರೂ ಪ್ರತಿ ಕ್ಷಣದಲ್ಲಿಯೂ ಏನಾದರೂ ಒಂದು ಕರ್ಮವನ್ನು ಮಾಡುತ್ತಲೇ ಇರುತ್ತಾರೆ ಎಂದು ಶ್ರೀ ಶಂಕರಾಚಾರ್ಯರು ಹೇಳಿರುವುದರಿಂದ ಅಪರೋಕ್ಷಜ್ಞಾನಿಗಳಿಗೂ ಕರ್ತೃತ್ವವಿದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಇದರಿಂದ ಅಪರೋಕ್ಷಜ್ಞಾನದಿಂದ ಕರ್ತೃತ್ವವು ಬಾಧ್ಯವಾಗುವುದಿಲ್ಲ ಎಂದಂತಾಯಿತು. ಆದ್ದರಿಂದ ಅದೂ ಕೂಡ ಸತ್ಯವೆಂದು ಶ್ರೀ ಶಂಕರರು ಒಪ್ಪಿದಂತಾಯಿತು.

ಶ್ರೀ ಶಂಕರಾಚಾರ್ಯರಿಗೆ ಬ್ರಹ್ಮಸಾಕ್ಷಾತ್ಕಾರವಾಗಿದೆ ಎಂದು ಎಲ್ಲ ಅದ್ವೈತಿ ಗಳೂ ಒಪ್ಪುತ್ತಾರೆ. ಅದೇ ಶಂಕರಾಚಾರ್ಯರಿಗೆ ಸೂತ್ರಭಾಷ್ಯಕರ್ತೃತ್ವವನ್ನೂ ಒಪ್ಪುತ್ತಾರೆ. ಇದಲ್ಲದೆ ಶ್ರೀ ಶಂಕರಾಚಾರ್ಯರು ಕೂಡ 'ತಾವು ಸೂತ್ರಭಾಷ್ಯ ಕರ್ತೃಗಳು ಮತ್ತು ಬ್ರಹ್ಮಸಾಕ್ಷಾತ್ಕಾರ ಉಳ್ಳವರು' ಎಂದು ತಿಳಿದುಕೊಂಡಿದ್ದಾರೆ. ಅಂದಮೇಲೆ ಅವರಿಗೆ ಪ್ರಾಪ್ತವಾದ ಬ್ರಹ್ಮಜ್ಞಾನದಿಂದ ಅವರಲ್ಲಿಯ ಸೂತ್ರಭಾಷ್ಯ ಕರ್ತೃತ್ವವು ನಾಶ(ಬಾಧ್ಯ)ವಾಗಿಲ್ಲವೆಂದಂತಾಯಿತು. ಅಂದರೆ ಇದು ಸತ್ಯವಾಯಿತು.

ಇದೇ ರೀತಿ ಪ್ರಪಂಚಮಿಥ್ಯಾತ್ವವನ್ನು ಕೂಡ ಶ್ರೀ ಶಂಕರಾಚಾರ್ಯರು ಖಂಡಿಸಿ ದ್ದಾರೆ. 'ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್' ಎಂಬ ಸೂತ್ರವ್ಯಾಖ್ಯಾನ ಸಮಯದಲ್ಲಿ 'ನೈವಂ ಜಾಗರಿತೋಪಲಬ್ಧಂ ಸ್ತಂಭಾದಿಕಂ ವಸ್ತು ಕಸ್ಯಾಂಚಿದಪಿ ಅವಸ್ಥಾಯಾಂ ಬಾಧ್ಯಂ ದೃಷ್ಟಂ' ಜಾಗ್ರತಾವಸ್ಥೆಯಲ್ಲಿ ತೋರತಕ್ಕ ಈ ಪ್ರಪಂಚವು ಯಾವ ಅವಸ್ಥೆಯಲ್ಲೂ ಬಾಧ್ಯವಾಗಿ ಕಂಡಿಲ್ಲ ಎಂದು ತ್ರೈಕಾಲಿಕ ಅಬಾಧ್ಯತ್ವವನ್ನು ಪ್ರಪಂಚಕ್ಕೆ ಹೇಳಿ ಪ್ರಪಂಚವು ಪಾರಮಾರ್ಥಿಕಸತ್ಯವೆಂದು ಹೇಳಿದ್ದಾರೆ. ಮತ್ತು ಬ್ರಹ್ಮ ಸಾಕ್ಷಾತ್ಕಾರವಾದ ಅನಂತರವೂ ಪ್ರಾರಬ್ಧಕರ್ಮವಿದ್ದ ಮೇಲೆ ತನ್ಮೂಲಕ ಶರೀರ, ಶರೀರಕ್ಕೆ ಕಾರಣವಾದ ಪಂಚಮಹಾಭೂತಗಳು ಸಹ ಇರುತ್ತವೆಂದಂ ತಾಯಿತು, ಬ್ರಹ್ಮಸಾಕ್ಷಾತ್ಕಾರವಾದ ಮೇಲೂ ಇರತಕ್ಕ ಕರ್ಮ, ಶರೀರ, ಪಂಚಭೂತಗಳು ಬ್ರಹ್ಮಸಾಕ್ಷಾತ್ಕಾರದಿಂದ ಬಾಧ್ಯವಾಗಿಲ್ಲ. ಆದ್ದರಿಂದ ಅವು ಪಾರಮಾರ್ಥಿಕ ವೆಂದಂತಾಯಿತು.

ಸಾಧಾರಣ ಬ್ರಹ್ಮಸಾಕ್ಷಾತ್ಕಾರದಿಂದ ಪ್ರಪಂಚವು ಬಾಧ್ಯವಾಗುವುದಿಲ್ಲ. ಆದರೆ ಪರಿಪಕ್ವ ಬ್ರಹ್ಮಜ್ಞಾನ ಮಾತ್ರ ಪ್ರಪಂಚಕ್ಕೆ ಬಾಧಕವಾಗುತ್ತದೆ ಎಂದು ಶ್ರೀ ಶಂಕರಾಚಾರ್ಯರ ಅಭಿಪ್ರಾಯ ಎಂದು ಅದ್ವೈತಿಗಳು ಹೇಳಿದರೆ ಶ್ರೀ ಶಂಕರಾಚಾರ್ಯರೇ ಅದನ್ನು ನಿರಾಕರಿಸುತ್ತಾರೆ. ಅದ್ವೈತವಾದದ ಪ್ರಕಾರ ಬ್ರಹ್ಮನು

ನಿರ್ಗುಣನು, ನಿರಾಕಾರನು, ಸರ್ವಥಾ ಅಜ್ಞೇಯನು, ಆದ್ದರಿಂದ ಬ್ರಹ್ಮಜ್ಞಾನವೇ ಇಲ್ಲ ಎಂದು ಅದ್ವೈತಿಗಳು ಹೇಳುವ ಕಾರಣ ಪರಿಪಕ್ವ ಬ್ರಹ್ಮಜ್ಞಾನದಿಂದ ಪ್ರಪಂಚಕ್ಕೆ ಬಾಧವನ್ನು ಹೇಳುವುದು ನನ್ನ ತಾಯಿಯು ಬಂಜೆಯು ಎಂಬಂತೆ ವ್ಯಾಹೃತ ವಾಗುತ್ತದೆ ಎಂದು ಶ್ರೀ ಶಂಕರಾಚಾರ್ಯರ ಅಭಿಪ್ರಾಯ. ಆದ್ದರಿಂದಲೇ 'ಸ್ತಂಭಾದಿಕಂ ವಸ್ತು ನ ಕಸ್ಯಾಂಚಿದಪಿ ಅವಸ್ಥಾಯಾಂ ಬಾಧ್ಯತೇ' ಅಂದರೆ ಯಾವ ಅವಸ್ಥೆಯಲ್ಲೂ ಪ್ರಪಂಚಕ್ಕೆ ಬಾಧೆಯಿಲ್ಲ ಎಂದೇ ಶ್ರೀ ಶಂಕರಾಚಾರ್ಯರು ಹೇಳಿದರು. ಇನ್ನು ಶ್ರೀ ಶಂಕರಾಚಾರ್ಯರ ಭಾಷ್ಯದಲ್ಲಿ ಅದ್ವೈತವನ್ನು ಪ್ರತಿಪಾದಿಸಿದಂತೆ ತೋರಿದರೂ ಅವರಿಗೆ ಅದ್ವೈತ ಪ್ರತಿಪಾದನೆಯಲ್ಲಿ ತಾತ್ಪರ್ಯವಿಲ್ಲ. ಪ್ರತ್ಯುತ ಅದ್ವೈತಖಂಡನದಲ್ಲಿಯೇ ತಾತ್ಪರ್ಯವಿದೆ. ಆದ್ದರಿಂದ ಮೊದಲು ಅದ್ವೈತವನ್ನು ಅನುವಾದ ಮಾಡಿದ್ದಾರೆ ಎಂದೇ ಹೇಳಬೇಕು. ವೇದಗಳಲ್ಲಿರತಕ್ಕ ದ್ವೈತವಾಕ್ಯಗಳನ್ನು ಅದ್ವೈತಿಗಳು ಅನುವಾದಕಗಳಾದ್ದರಿಂದ ಅವುಗಳಿಗೆ ದ್ವೈತದಲ್ಲಿ ತಾತ್ಪರ್ಯ ವಿಲ್ಲವೆಂದು ಹೇಗೆ ಹೇಳುತ್ತಾರೆ ಹಾಗೆಯೇ ಇಲ್ಲಿಯೂ ಅದ್ವೈತ ವಾಕ್ಯಗಳಿಗೆ ಅದ್ವೈತ ಹೇಳುವಲ್ಲಿ ತಾತ್ಪರ್ಯವಿಲ್ಲವೆಂದು ಹೇಳಲೇಬೇಕು. ಈ ವಿಷಯದಲ್ಲಿ ಅನೇಕ ಆಧಾರಗಳು ಉಂಟು.

ಆಧಾರಗಳು

1. ಶ್ರೀ ಶಂಕರಾಚಾರ್ಯರು ಬರೆದ ಸೂತ್ರ ಭಾಷ್ಯಕ್ಕೆ ಪಂಚಪಾದಿಕೆ ಎಂಬ ಒಂದು ವ್ಯಾಖ್ಯಾನವಿದೆ. ಈ ಪಂಚಪಾದಿಕೆಯ ಮಂಗಳಾಚರಣ ಶ್ಲೋಕದಲ್ಲಿ 'ನಮಾಮ್ಯಭೋಗಿ ಪರಿವಾರಸಂಪದಂ ನಿರಸ್ತಭೂತಿಂ.... ।' ಎಂದು ಇದೆ. ಇಲ್ಲಿ ನಿರಸ್ತಭೂತಿಂ ಎಂಬ ಶಬ್ದದಿಂದ ಶ್ರೀ ಶಂಕರಾಚಾರ್ಯರು ಭಸ್ಮಧಾರಣ ಮಾಡುತ್ತಿರಲಿಲ್ಲವೆಂದು ಹೇಳಿದ್ದಾರೆ. ಈ ಶ್ಲೋಕವ್ಯಾಖ್ಯಾನಕಾರರೂ ಕೂಡ ಶ್ರೀ ಶಂಕರಾಚಾರ್ಯರು ಭಸ್ಮಧಾರಣ ಮಾಡುತ್ತಿರಲಿಲ್ಲ ಎಂದೇ ಬರೆದಿದ್ದಾರೆ. ಆದರೆ ಈಗ ಶ್ರೀ ಶಂಕರಾಚಾರ್ಯರ ಚಿತ್ರವನ್ನು ನೋಡಿದರೆ, ಚಿತ್ರಕಾರರು ಶಂಕರರಿಗೆ ಭಸ್ಮಧಾರಣ ಮಾಡಿಸಿದ್ದಾರೆ. ಶ್ರೀ ಶಂಕರಾಚಾರ್ಯರ ನಾಲ್ಕು ಜನ ಸಾಕ್ಷಾತ್ ಶಿಷ್ಯರಲ್ಲಿ ಶ್ರೀ ಪದ್ಮಪಾದರೆಂಬವರೊಬ್ಬರು. ಅವರು ಪ್ರತ್ಯಕ್ಷವಾಗಿ ಶ್ರೀ ಶಂಕರಾಚಾರ್ಯರನ್ನು ನೋಡಿ ಬರೆದ ಶ್ರೀ ಶಂಕರರ ಸಾಕ್ಷಾತ್ ಶಿಷ್ಯರಾದ ಇವರ ಮಾತು ಪ್ರಾಮಾಣಿಕವಾಗಿದೆಯಲ್ಲದೆ ನಂಬಲರ್ಹವಾಗಿದೆ. ಇದರ ಮೇಲಿಂದ ತಿಳಿದು ಬರುವುದೇನೆಂದರೆ ಶ್ರೀ ಶಂಕರಾಚಾರ್ಯರು ಅದ್ವೈತಿಗಳೇ ಅಲ್ಲ ಎಂದು.
2. 'ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ' ಎಂಬ ಉಪನಿಷದ್ವಾಕ್ಯವು ಅದ್ವೈತ ಪ್ರತಿಪಾದಕವೆಂಬಂತೆ ತೋರಿದರೂ ಎಲ್ಲ ಅದ್ವೈತಿಗಳು ಈ ವಾಕ್ಯವು ಅದ್ವೈತ ಪ್ರತಿಪಾದಕವೆಂದು ಹೇಳುತ್ತಿದ್ದರೂ ಶ್ರೀ ಶಂಕರಾಚಾರ್ಯರು ಮಾತ್ರ ತಮ್ಮ ಉಪನಿಷದ್ಭಾಷ್ಯದಲ್ಲಿ ದ್ವೈತಪರವಾಗಿ ಅರ್ಥ ಬರೆದಿದ್ದಾರೆ. ಅದು ಹೇಗೆಂದರೆ ಈ ವಾಕ್ಯದ ಹಿಂದಿನ ವಾಕ್ಯ ಯಾವುದೆಂದರೆ

'ಪರಾತ್ಪರಂ ಪುರುಷಂ ಉಪೈತಿ ದಿವ್ಯಂ' ಎಂಬುದು. ಈ ವಾಕ್ಯಕ್ಕೆ ಶ್ರೀ ಶಂಕರಾಚಾರ್ಯರು ಬ್ರಹ್ಮಜ್ಞಾನಿಯಾದವನು ಪರಬ್ರಹ್ಮನ ಸಮೀಪಕ್ಕೆ ಹೋಗುತ್ತಾನೆ ಎಂದು ಹೇಳಿ ಅನಂತರ 'ಶ್ರೇಯಾಂಸಿ ಬಹುವಿಘ್ನಾನಿ' ಎಂದರೆ ಶ್ರೇಯಸ್ಸುಗಳಿಗೆ ಬಹಳ ವಿಘ್ನಗಳಿರುತ್ತವೆ ಎಂಬ ನ್ಯಾಯದಿಂದ ಪರಬ್ರಹ್ಮಜ್ಞಾನಿಯಾದರೂ ಅವನಿಗೆ ಏನಾದರೂ ವಿಘ್ನ ಬಂದು ಪರಬ್ರಹ್ಮ ಸಮೀಪ ಪ್ರಾಪ್ತಿಯಾಗದೇ ಹೋದೀತು ಎಂಬ ಶಂಕೆ ಮಾಡಿಕೊಂಡು ಈ ಶಂಕಾನಿವಾರಣೆಗಾಗಿ 'ಪರಮಂ ಬ್ರಹ್ಮ ವೇದ' ಎಂಬ ವಾಕ್ಯವು ಹೊರಟಿದೆ ಎಂದು ಬರೆದಿದ್ದಾರೆ. ಇದರಿಂದ ತಿಳಿದುಬರುವುದೇನೆಂದರೆ ಹಿಂದಿನ ಶಂಕೆಗೆ ಇದು ಉತ್ತರವಾಗಬೇಕಾದರೆ ಈ ವಾಕ್ಯದಲ್ಲಿ 'ಭವತಿ' ಎಂಬ ಕ್ರಿಯಾಪದ ದಲ್ಲಿರುವ 'ಭೂ' ಎಂಬ ಧಾತುವಿಗೆ 'ಪ್ರಾಪ್ತಿ' ಎಂಬ ಅರ್ಥವನ್ನು 'ಭೂ ಪ್ರಾಪ್ತೌ' ಎಂಬ ಆಧಾರದಿಂದ ಇಟ್ಟುಕೊಂಡಿದ್ದಾರೆ. ಆದ್ದರಿಂದಲೇ 'ಬ್ರಹ್ಮೈವ ಭವತಿ' ಎಂಬ ವಾಕ್ಯಕ್ಕೆ 'ಬ್ರಹ್ಮ ಭವತ್ಯೇವ' ಅಂದರೆ 'ಬ್ರಹ್ಮ ಪ್ರಾಪ್ನೋತ್ಯೇವ' ಎಂದು ವ್ಯಾಖ್ಯಾನ ಮಾಡಿದ್ದಾರೆ. ಪರಬ್ರಹ್ಮಜ್ಞಾನಿಯು ಪರಬ್ರಹ್ಮನ ಸಮೀಪವನ್ನು ಹೊಂದಿಯೇ ತೀರುತ್ತಾನೆ ಎಂದೇ ಶ್ರೀ ಶಂಕರಾಚಾರ್ಯರ ಅಭಿಪ್ರಾಯ.

3. 'ಅಹಂ ಬ್ರಹ್ಮಾಸ್ಮಿ' ಎಂಬ ಶ್ರುತಿಗೆ 'ನಾನು ವೇದಾಧ್ಯಯನ ಮಾಡುತ್ತೇನೆ' ಎಂದು ಅರ್ಥ ಮಾಡಬೇಕೆಂದು ಶ್ರೀ ಶಂಕರಾಚಾರ್ಯರೇ ಸೂಚಿಸಿದ್ದಾರೆ. ಅದು ಹೇಗೆಂದರೆ ತಂದೆಯು ಸಾಯುವ ಕಾಲಕ್ಕೆ ಮಗನಿಗೆ ಉಪದೇಶ ಕೊಡತಕ್ಕ ಕ್ರಮವು ಉಪನಿಷತ್ತಿನಲ್ಲಿ ಬಂದಿದೆ. 'ತ್ವಂ ಬ್ರಹ್ಮ ತ್ವಂ ಯಜ್ಞಃ ತ್ವಂ ಲೋಕಃ' ಇದರ ಅರ್ಥವೇನೆಂದರೆ ನೀನು ಬ್ರಹ್ಮ ಎಂದರೆ ವೇದಾಧ್ಯಯನ ಮಾಡಬೇಕು. ಯಜ್ಞ ಮಾಡಬೇಕು, ಉತ್ತಮ ಲೋಕವನ್ನು ಹೊಂದಬೇಕು ಎಂದು. ಇದಕ್ಕೆ ಮಗನು ಈ ರೀತಿ ಪ್ರತ್ಯುತ್ತರ ಕೊಡಬೇಕು –'ಅಹಂ ಬ್ರಹ್ಮ ಅಹಂ ಯಜ್ಞಃ ಅಹಂ ಲೋಕಃ' ಎಂದು. ಇದರ ಅರ್ಥ 'ನಾನು ವೇದಾಧ್ಯಯನ ಮಾಡುತ್ತೇನೆ, ನಾನು ಯಜ್ಞ ಮಾಡುತ್ತೇನೆ, ನಾನು ಉತ್ತಮ ಲೋಕವನ್ನು ಹೊಂದುತ್ತೇನೆ' ಎಂದು ಮಾಡಬೇಕೆಂದು ಬರೆದಿದ್ದಾರೆ. ಆದ್ದರಿಂದ 'ಅಹಂ ಬ್ರಹ್ಮಾಸ್ಮಿ' ಎಂಬ ವಾಕ್ಯಕ್ಕೂ ಇದೇ ಅರ್ಥವನ್ನು ಮಾಡಬೇಕೆಂದೂ, ಅದೇ ಯೋಗ್ಯವೆಂದೂ ಅವರೇ ಸೂಚಿಸಿದ್ದಾರೆ.

4. 'ತತ್ತ್ವಮಸಿ' ಎಂಬಲ್ಲಿಯೂ ಶ್ರೀ ಶಂಕರಾಚಾರ್ಯರು 'ತತ್ವಂ ಅಸಿ' ಎಂದು ಪದಚ್ಛೇದ ಮಾಡಿ ಎಲೈ ಶ್ವೇತಕೇತುವೇ ನೀನೂ ಒಂದು 'ತತ್ತ್ವ' ಎಂದು ಹೇಳಿ ಪರತತ್ವ ಮತ್ತು ಅಪರತತ್ತ್ವಗಳಲ್ಲಿ ಪರಮಾತ್ಮನು ಪರತತ್ವನಾಗಿದ್ದಾನೆ. ನೀನು ಅಪರತತ್ತ್ವವಾಗಿದ್ದಿ ಎಂಬ ಅಭಿಪ್ರಾಯದ ಅರ್ಥಾಂತರ ಮಾಡಿದ್ದಾರೆ.

5. 'ಏಕಮೇವಾದ್ವಿತೀಯಂ ಬ್ರಹ್ಮ' ಎಂಬ ಶ್ರುತಿಗೂ 'ಸ್ವಕಾರ್ಯಪತಿತಂ ಅನ್ಯತ್ ನಾಸ್ತಿ ಸ್ವಪ್ರತಿದ್ವಂದ್ವಿಭೂತಂ ದ್ವಿತೀಯಂ ನಾಸ್ತಿ' ಎಂದು ಪ್ರಪಂಚ

ಸೃಷ್ಟಿಯ ಮೊದಲು 'ತನ್ನಿಂದ ಮುಂದೆ ಸೃಷ್ಟಿಸಲ್ಪಡುವ ಯಾವ ಪದಾರ್ಥವೂ ಇದ್ದಿಲ್ಲ. ಮತ್ತು ತನಗೆ ಪ್ರತಿದ್ವಂದಿಯಾದದ್ದು ಯಾವುದೂ ಇದ್ದಿಲ್ಲ' ಎಂದು ಅರ್ಥ ಬರೆದಿದ್ದಾರೆ. ಇದರಿಂದ ಅನಾದಿಗಳಾದ ಪ್ರಕೃತಿ, ಕಾಲ, ಪುರುಷ, ವೇದಗಳು ಇದ್ದವೆಂದೂ ಮತ್ತು ತನಗೆ ವಿರೋಧಿಯಲ್ಲದ ವಸ್ತುಗಳು ಇದ್ದವೆಂದೂ ಅವರ ಅಭಿಪ್ರಾಯ. ಈ ರೀತಿ ಅದ್ವೈತ ಪ್ರತಿಪಾದಕವೆಂದು ತೋರುವ ಶ್ರುತಿಗಳಿಗೆ ದ್ವೈತಕ್ಕೆ ಅನುಗುಣವಾದ ಅರ್ಥಾಂತರ ಹೇಳಿದ್ದರಿಂದ ಅದ್ವೈತಗಳಿಗೆ ಅದ್ವೈತಸಾಧಕ ನಿರವಕಾಶ ಪ್ರಮಾಣಗಳೇ ಇಲ್ಲವೆಂದು ತಿಳಿಸಿದ್ದಾರೆ.

6. 'ಅನಾವೃತ್ತಿಃ ಶಬ್ದಾತ್ ಅನಾವೃತ್ತಿಃ ಶಬ್ದಾತ್' ಎಂಬ ಬ್ರಹ್ಮಸೂತ್ರದ ಕೊನೆಯ ಸೂತ್ರದ ವ್ಯಾಖ್ಯಾನ ಸಮಯದಲ್ಲಿ ದ್ವೈತಜ್ಞಾನವೇ ಪುನರಾವೃತ್ತಿ ವರ್ಜಿತವಾದ ಮೋಕ್ಷವನ್ನು ಕೊಡಿಸುತ್ತದೆ ಎಂದು ಶ್ರೀ ಶಂಕರಾಚಾರ್ಯರು ಹೇಳಿದ್ದಾರೆ. ಒಂದುವೇಳೆ ಜೀವೇಶ್ವರ ಭೇದವು ಮಿಥ್ಯಾ ಎಂದು ಅವರ ಅಭಿಪ್ರಾಯವಾಗಿದ್ದರೆ ಭೇದಜ್ಞಾನವು ಮೋಕ್ಷ ಸಾಧನವೆಂದು ಅವರು ಹೇಳುತ್ತಿದ್ದಿಲ್ಲ. ಬ್ರಹ್ಮಸೂತ್ರಗಳ ಉಪಸಂಹಾರದಲ್ಲಿ ದ್ವೈತಜ್ಞಾನಕ್ಕೇನೇ ಮೋಕ್ಷರೂಪ ಮಹಾಫಲವನ್ನು ಹೇಳಿರುತ್ತಾರೆಂದು ಒಪ್ಪಿದ ಶ್ರೀ ಶಂಕರಾಚಾರ್ಯರ ಅಭಿಪ್ರಾಯವೇನೆಂದರೆ 'ಉಪಸಂಹಾರಸೂತ್ರಕ್ಕೆ ಅನುಸಾರವಾಗಿ ಎಲ್ಲ ಸೂತ್ರಗಳೂ ದ್ವೈತವನ್ನೇ ಹೇಳುತ್ತದೆ' ಎಂದು.

7. 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' ಎಂಬ ಗೀತಾವಾಕ್ಯಕ್ಕೆ ಅದ್ವೈತಿಗಳು ಹೀಗೆ ಅರ್ಥ ಹೇಳುತ್ತಾರೆ, 'ಶ್ರೀಕೃಷ್ಣನೇ ಇಲ್ಲಿ ಜೀವನು ಮತ್ತು ನಾನು ಒಂದು ಎಂದು ಹೇಳಿದ್ದಾನೆ' ಎಂದು. ಅಂದರೆ ಇಲ್ಲಿ ಇರುವ ಕ್ಷೇತ್ರಜ್ಞ ಎಂಬ ಶಬ್ದಕ್ಕೆ 'ಜೀವ' ಎಂಬ ಅರ್ಥವನ್ನು ಅವರು ಇಟ್ಟುಕೊಂಡಿದ್ದಾರೆ. ಇದೇ ಶ್ರೀ ಗೀತೆಯ ಸಾರ ಎಂದೂ ಅವರು ಹೇಳುತ್ತಾರೆ. ಆದರೆ ಶ್ರೀ ಆದ್ಯ ಶಂಕರಾಚಾರ್ಯರು ಮಾತ್ರ ಈ ಶ್ಲೋಕದಲ್ಲಿರತಕ್ಕ ಕ್ಷೇತ್ರಜ್ಞ ಶಬ್ದಕ್ಕೆ ಜೀವನೆಂದು ಅರ್ಥ ಮಾಡದೇ ಪರಬ್ರಹ್ಮನೆಂದೇ ಅರ್ಥ ಮಾಡುತ್ತಾರಲ್ಲದೇ ಶ್ರೀಕೃಷ್ಣನು ತಾನು ಕ್ಷೇತ್ರಜ್ಞನು ಅಂದರೆ ಪರಬ್ರಹ್ಮನು ಎಂದು ಹೇಳಿಕೊಂಡಿದ್ದಾನೆ ಎಂದು ಅರ್ಥ ಬರೆದಿದ್ದಾರೆ.

8. 'ದ್ವಾವಿಮೌ ಪುರುಷೌ ಲೋಕೇ' ಎಂಬ ಗೀತಾಭಾಷ್ಯದಲ್ಲಿ ಶ್ರೀ ಶಂಕರಾಚಾರ್ಯರು ಶ್ರೀಕೃಷ್ಣನೇ ಸರ್ವೋತ್ತಮನೆಂದು ಹೇಳಿದ್ದಾರಲ್ಲದೇ ವೇದಾದಿ ಸಕಲ ಶಾಸ್ತ್ರದ ಸಾರವೂ ಇದೇ ಎಂದು ಬರೆದಿದ್ದಾರೆ.

9. 'ಮಯಿ ಸರ್ವಾಣಿ ಕರ್ಮಾಣಿ ಸನ್ನ್ಯಸ್ಯಾಧ್ಯಾತ್ಮಚೇತಸಾ' ಎಂಬಲ್ಲಿ ಅಧ್ಯಾತ್ಮ ಚೇತಸಾ ಎಂದರೆ ಅಧ್ಯಾತ್ಮಜ್ಞಾನವೆಂದು ಹೇಳಿ ಅಧ್ಯಾತ್ಮಜ್ಞಾನವೆಂದರೆ ಪರಮಾತ್ಮನು ಸ್ವಾಮಿ, ಜೀವನು ಅವನ ಭೃತ್ಯನು ಎನ್ನುವುದೇ ಆಗಿದೆ ಎಂದು ಅರ್ಥ ಬರೆದಿದ್ದಾರೆ. ತಥಾಚ 'ಅಧ್ಯಾತ್ಮವಿದ್ಯಾ ವಿದ್ಯಾನಾಂ'

ಎಂಬಲ್ಲಿ ಅಧ್ಯಾತ್ಮವಿದ್ಯೆಯು ಎಲ್ಲ ವಿದ್ಯೆಗಳಲ್ಲಿ ಶ್ರೇಷ್ಠ ಎಂದು ಹೇಳಿದ್ದರಿಂದ ಶ್ರೀ ಶಂಕರಾಚಾರ್ಯರ ಅಭಿಪ್ರಾಯ ಎಲ್ಲ ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆ ಅಂದರೆ ದ್ವೈತವಿದ್ಯೆಯೇ ಶ್ರೇಷ್ಠವೆಂದು ಆಯಿತು.

ಆದುದರಿಂದ ಅದ್ವೈತಪರವಿದ್ದಂತೆ ಶ್ರೀ ಶಾಂಕರ ಭಾಷ್ಯವು ಹಲವು ಕಡೆಗಳಲ್ಲಿ ತೋರಿದರೂ, ಭಾಮತಿಕಾರರೇ ಮೊದಲಾದ ವ್ಯಾಖ್ಯಾನಕಾರರು ಅದ್ವೈತಪರವಾಗಿ ವ್ಯಾಖ್ಯಾನ ಮಾಡಿದರೂ ಶ್ರೀ ಶಂಕರಾಚಾರ್ಯರ ಅಭಿಪ್ರಾಯ ಮಾತ್ರ ಹಾಗಿರುವುದಿಲ್ಲ. ಇದಲ್ಲದೇ ಶ್ರೀ ಶಾಂಕರಭಾಷ್ಯಕ್ಕೆ ಕನ್ನಡ ಭಾಷಾಂತರ ಮಾಡಿದ ಹೊಳೇ ನರಸಿಂಹಪುರದ ಸ್ವಾಮಿಗಳವರೂ "ಶ್ರೀ ಭಾಮತಿಕಾರರೇ ಮೊದಲಾದ ವ್ಯಾಖ್ಯಾನಕಾರರು ಶ್ರೀ ಶಂಕರಾಚಾರ್ಯರ ಅಭಿಪ್ರಾಯಕ್ಕೆ ವಿರುದ್ಧವಾಗಿ ಅವರ ಭಾಷ್ಯಕ್ಕೆ ವ್ಯಾಖ್ಯಾನ ಮಾಡಿದ್ದಾರೆಂದು" ಹೇಳಿದ್ದಾರೆ. ಆದುದರಿಂದ ಶ್ರೀ ಶಾಂಕರಭಾಷ್ಯವು ಅದ್ವೈತಪರವೇ ಅಲ್ಲ ಅದ್ವೈತವನ್ನು ಅನುವಾದ ಮಾಡಿ ಅದ್ವೈತ ಖಂಡನಕ್ಕೆ ಹೊರಟದ್ದು ಎಂದು ನಮ್ಮ ಅಭಿಪ್ರಾಯ.

●

೮. ೧೩. ಚಾರ್ವಾಕಮತ ಖಂಡನೆ

ದೇವರ ಅಸ್ತಿತ್ವದ ನಂಬಿಕೆ ಮತ್ತು ಧರ್ಮನಿಷ್ಠೆಯನ್ನು ಪ್ರಜೆಗಳಲ್ಲಿ ಬೆಳೆಸುವ ಕಾರ್ಯವನ್ನು ಸರಕಾರವು ಪ್ರಜೆಗಳ ರಕ್ಷಣೆಯ ಅಂಗವಾಗಿಟ್ಟುಕೊಳ್ಳುವುದು ಅವಶ್ಯಕವಾದದ್ದು. ಸರ್ಕಾರದ ಭಯದಿಂದ ಪ್ರಜೆಗಳು ಬಹಿರ್ದೃಷ್ಟಿಗೆ ಮಾತ್ರ ಸರಿಯಾಗಿ ಇರಬಹುದು. ರಹಸ್ಯದಲ್ಲಿ ಸ್ವಾರ್ಥಸಾಧನೆಗೋಸ್ಕರ ಪರದ್ರೋಹ, ಹಿಂಸೆ, ವಂಚನೆಗಳನ್ನು ಮಾಡುತ್ತಲೇ ಇರಬಹುದು. ರಹಸ್ಯದಲ್ಲಿ ಮಾಡತಕ್ಕ ಘೋರ ಕೃತ್ಯಗಳನ್ನು ತಡೆಯಬೇಕಾದರೆ ಧರ್ಮದ ವಿಶ್ವಾಸವನ್ನು ಪ್ರಜೆಗಳಲ್ಲಿ ಬೆಳೆಸುವ ಕಾರ್ಯ ಕೈಗೊಳ್ಳುವುದು ಹೊರತಾಗಿ ಬೇರೆ ಉಪಾಯವಿಲ್ಲ. ಧರ್ಮ ಮತ್ತು ದೇವರಲ್ಲಿ ವಿಶ್ವಾಸ ಬೆಳೆದಂತೆ ಸರ್ಕಾರಕ್ಕೆ ಪ್ರಜೆಗಳ ರಕ್ಷಣಾಭಾರವು ಕಡಮೆ ಆಗುತ್ತಾ ಬರುತ್ತದೆ. 'ಧರ್ಮಣೈವ ಪ್ರಜಾಃ ಸರ್ವಾಃ ರಕ್ಷಂತಿ ಸ್ಮ ಪರಸ್ಪರಂ' ಎಂಬ ಮಹಾಭಾರತ ವಚನದಂತೆ ಸೃಷ್ಟ್ಯಾದಿಯಲ್ಲಿ ರಾಜದಂಡ ಇಲ್ಲದೆ ಧರ್ಮದ ಬಲದಿಂದ ಪ್ರಜೆಗಳು ತಾವೆ ತಮ್ಮನ್ನು ರಕ್ಷಣೆಮಾಡಿಕೊಳ್ಳುತ್ತಿದ್ದರು. ಇದೇ ನಿಜವಾದ ಸ್ವಾತಂತ್ರ್ಯ ಸುಖವು. ಈಗ ನಮ್ಮದು ಸ್ವತಂತ್ರ ರಾಜ್ಯವೆಂದು ಹೇಳುತ್ತಿರುವವರಾದರೂ ನಮ್ಮ ಮೇಲೆ ಪೊಲೀಸರು ಕಾಯ್ದುಕೊಂಡು ಇರುವುದು ಬಹಳ ಶೋಚನೀಯ ಪರಿಸ್ಥಿತಿಯಾಗಿದೆ. ಹಿಂದಿನ ಕಾಲದ ನಾಸ್ತಿಕ ಚಾರ್ವಾಕರ ದೆಶೆಯಿಂದಲೂ ಈಗಿನವರ ನಾಸ್ತಿಕತೆಯು ಪ್ರಬಲವಾಗಿರುತ್ತದೆ ಎಂದು ಹೇಳಬೇಕಾಗಿದೆ– ಏಕೆಂದರೆ ಹಿಂದಿನ ಕಾಲದ ನಾಸ್ತಿಕ ಚಾರ್ವಾಕನು 'ಋಣಂ ಕೃತ್ವಾ ಘೃತಂ ಪಿಬೇತ್' –ಅಂದರೆ ಸಾಲವನ್ನು ಮಾಡುವುದರಲ್ಲಿ ಹೆದರದೆ ಯಥೇಷ್ಟ ವಿಷಯಭೋಗ ಮಾಡಬೇಕೆಂದು

ಹೇಳಿದನು. ಆದರೆ ಈಗ ಅದಕ್ಕೂ ಹೆಚ್ಚಾಗಿ 'ಚೌರ್ಯಂ ಕೃತ್ವಾ ಸುರಾಂ ಪಿಬೇತ್' ಅಂದರೆ ಸುಳ್ಳು ಮೋಸಮಾಡಿ ಸುರಾಪಾನ ಮಾಡಬೇಕು ಎಂಬುವವರೆಗೆ ಬಂದಿದೆ. ಇದು ಇನ್ನೂ ಹೆಚ್ಚುಕಡೆ ಬೆಳೆಯುವುದರಲ್ಲಿದೆ. ಇದರ ಪರಿಣಾಮವಾಗಿ ಪ್ರಜೆಗಳ ನಾಶ ಹಾಗೇ ಸರಕಾರದ ನಾಶವಾಗುವ ಲಕ್ಷಣವು ಸದ್ಯದಲ್ಲಿಯೇ ಕಾಣುತ್ತದೆ. ಆದುದರಿಂದ ಸರ್ಕಾರವು ಬೇಗನೆ ಎಲ್ಲರೂ ಸ್ವಧರ್ಮನಿಷ್ಠರಾಗಬೇಕೆಂದು ಘೋಷಣೆ ಮಾಡಿ ಸ್ಕೂಲು ಕಾಲೇಜುಗಳಲ್ಲಿ ಅವರವರ ಧರ್ಮಬೋಧನೆಗೆ ವ್ಯವಸ್ಥೆ ಮಾಡಬೇಕು. ಪ್ರಜೆಗಳು ತಮ್ಮ ಮಕ್ಕಳಿಗೆ ಧರ್ಮನಿಷ್ಠೆ ಬರುವಂತೆ ಪ್ರಯತ್ನ ಮಾಡಬೇಕು.

ಧರ್ಮಾತೀತ ರಷ್ಯಾದಲ್ಲಿ ಸ್ಟಾಲಿನ್ ಪಕ್ಷದವರು ಸ್ವಾರ್ಥ ಸಾಧನೆಗೋಸ್ಕರ ವಿರುದ್ಧ ಪಾರ್ಟಿಯನ್ನು ನಾಶಮಾಡಿದ್ದು ನೋಡುತ್ತೇವೆ ಮತ್ತು ಧರ್ಮಾತೀತ ರಾಷ್ಟ್ರದಲ್ಲಿ ಮನಸ್ಸಿಗೆ ಶಾಂತಿಯಿಲ್ಲ. ಸಂಸಾರದ ನಾನಾ ಅಸಹ್ಯ ದುಃಖ ಬಂದಾಗ ಈಶ್ವರನ ಆನಂದಮಯ ರೂಪವನ್ನು ಧ್ಯಾನಮಾಡಿದರೆ ಮಕ್ಕಳು ವಿಪರೀತ ಅಳುವಾಗ ತಾಯಿಯು ಮಗುವಿಗೆ 'ಸಿಹಿತಿಂಡಿಯನ್ನು ತಿನ್ನಿಸಿದರೆ ಆ ಮಗುವು ಸಮಾಧಾನದಿಂದ ಇರುವಂತೆ ನಮ್ಮ ಪ್ರಾಚೀನರು ಸಮಾಧಾನ ಶಾಂತಿಯನ್ನು ಹೊಂದುತ್ತಾ ಇದ್ದರು. ಈಗ ಎಲ್ಲಾ ಕಡೆ ದೈವೀಭಾವನೆ ಕಡಿಮೆ ಆದ ಹಾಗೆಲ್ಲಾ ಸಂಸಾರದ ದುಃಖಗಳನ್ನು ಪರಿಹರಿಸಿಕೊಳ್ಳಲಿಕ್ಕೆ ಸಾಧ್ಯವಾಗದೆ ಆತ್ಮಹತ್ಯೆ ಮಾಡಿ ಕೊಳ್ಳುವುದು ಕಂಡುಬರುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ಜನತೆಯ ಮುಂದೆ ಶಾಸ್ತ್ರದ ಸದುಪದೇಶವನ್ನು ನಮಗೆ ತಿಳಿದ ಮಟ್ಟಿಗೆ ಇಡುವುದು ಆದ್ಯ ಕರ್ತವ್ಯ ವಾಗಿರುತ್ತದೆ.

ಲೋಕದಲ್ಲಿ ಜನರು ತಮ್ಮ ಹಿತವನ್ನು ಬಯಸಿದರೂ ಅದನ್ನು ಸಾಧಿಸಲಿಕ್ಕೆ ಶಕ್ತರಾಗುವುದಿಲ್ಲ. ಅಹಿತವನ್ನು ಬೇಡವೆಂದು ತೋರಿದರೂ ಮಾಡಿಕೊಳ್ಳುತ್ತಿದ್ದಾರೆ. ಇದು ತಮಗೆ ಇರುವ ಅಸ್ವಾತಂತ್ರ್ಯದ ಲಕ್ಷಣವಾಗಿರುತ್ತದೆ. ಇದನ್ನು ಪ್ರತಿಕ್ಷಣದಲ್ಲಿಯೂ ಅನುಭವಿಸುತ್ತಾ ಇದ್ದರೂ ತಾವು ಸ್ವತಂತ್ರರಾಗಿದ್ದೇವೆ ಎಂದು ಭ್ರಮಿಸಿಕೊಳ್ಳುತ್ತಾರೆ. ಇದು ಈಶ್ವರನ ಮಾಯೆ ಅಲ್ಲವೆ? ಮತ್ತು ಪರರಿಗೆ ಹಿತವನ್ನು ಬೋಧಿಸುತ್ತಾರೆ. ತಾವು ತಮ್ಮ ತಮ್ಮ ಕರ್ತವ್ಯದಲ್ಲಿ ಮುಗ್ಧರಾಗಿರುತ್ತಾರೆ. ಇದರಿಂದಲೇ ನಾವು ಈಶ್ವರನ ಅಧೀನರೆಂದು ವಿವೇಕಿಗಳು ತಿಳಿಯಲು ಅವಕಾಶವಿದೆ. ಸ್ಕೂಲು ಕಾಲೇಜುಗಳಲ್ಲಿ ಒಬ್ಬ ಗುರುವಿನಿಂದ ಒಂದೇ ವಿದ್ಯಾಭ್ಯಾಸ ಮಾಡತಕ್ಕವರು ಒಂದೊಂದು ತರದ ಬುದ್ಧಿವಿಕಾಸವನ್ನು ಹೊಂದುತ್ತಾರೆ. ಇದು ಅವರವರ ಕರ್ಮಾನುಸಾರ ಬುದ್ಧಿಪ್ರೇರಕನಾದ ಈಶ್ವರನ ಶಕ್ತಿ ಅಲ್ಲವೇ? ಒಂದು ರೋಗವು ಅನೇಕ ದೇಹಗಳಿಗೆ ಬಂದಾಗ ಒಂದೇ ಔಷಧಿಯು ಒಬ್ಬೊಬ್ಬರಿಗೆ ಒಂದೊಂದು ತರದ ಫಲವನ್ನು ಕೊಡುತ್ತದೆ. ಇದು ಅವರವರ ಕರ್ಮಕ್ಕೆ ಅನುಸಾರ ಫಲ ಕೊಡತಕ್ಕ ಈಶ್ವರನ ವ್ಯಾಪಾರವಷ್ಟೆ? ಗೋಮಯಾದಿಗಳಿಂದಲೇ ಮಾತಾಪಿತೃಗಳು ಇಲ್ಲದೆ [illegible] ಮೊದಲಾದ ನಾನಾ ಪ್ರಾಣಿಗಳು ಹುಟ್ಟುತ್ತವೆ. ಗೋವುಗಳು ತೃಣಗಳನ್ನು

ಭಕ್ಷಿಸಿದರೆ ಅದರ ಕೆಲವು ಭಾಗ ಕ್ಷೀರವಾಗುತ್ತಗೆ. ಕೆಲವು ಭಾಗ ರಕ್ತವಾಗುತ್ತದೆ. ಕೆಲವು ಬೀಜಗಳು ಅಂಕುರವಾಗಿ ಶಾಖೋಪಶಾಖೆಗಳಿಂದ ಕೂಡಿದ ದೊಡ್ಡ ದೊಡ್ಡ ಮರಗಳು ಆಗುತ್ತವೆ. ಅದೇ ಭೂಮಿಯಲ್ಲಿ ಒಳ್ಳೆ ಬೀಜವನ್ನು ಬಿತ್ತಿ ನೀರು ಹಾಕಿ ಏನೂ ಮಾಡಿದರೂ ಮೊಳಕೆಯೇ ಬರುವುದಿಲ್ಲ. ಹಾಗೆ ರಜಸ್ವಲೆಯಾದ ಸ್ತ್ರೀಯರಲ್ಲಿ ರೇತಸ್ಸೇಕ ಮಾಡಿದಲ್ಲಿ ಒಮ್ಮೆ ಗರ್ಭ ಉತ್ಪತ್ತಿ ಆಗುತ್ತದೆ. ಒಮ್ಮೆ ಆಗುವುದಿಲ್ಲ. ಶುಕ್ಲಶೋಣಿತಗಳು ಸೇರಿದಾಗ ಕರಚರಣಾದಿ ಆಕಾರವು ನಮ್ಮ ಪ್ರಯತ್ನವಿಲ್ಲದೆ ಆಗುತ್ತದೆ. ಹಾಗೆ ಒಮ್ಮೆ ಗಂಡು ಒಮ್ಮೆ ಹೆಣ್ಣು ಒಮ್ಮೆ ನಪುಂಸಕವಾಗಿ ಹುಟ್ಟುತ್ತದೆ. ಭಕ್ಷಣ ಇಲ್ಲದೆ ಗರ್ಭದಲ್ಲಿ ಮಗುವಿನ ಶರೀರ ಬೆಳೆಯುತ್ತದೆ. ಶ್ವಾಸೋಚ್ಛ್ವಾಸಕ್ಕೆ ಗರ್ಭದಲ್ಲಿ ತಡೆ ಇದ್ದರೂ ಮಗು ಬೆಳೆಯುತ್ತದೆ. ಮೃದುವಾದ ಗರ್ಭವು ತಾಯಿಯ ಜಠರಾಗ್ನಿಯ ದಾಹದಿಂದ ಪೀಡಿತವಾಗಿದ್ದರೂ ಅಧೋಮುಖವಾಗಿದ್ದರೂ ಬದುಕುತ್ತದೆ. ಗರ್ಭವು ಅಪಕ್ವವಾದರೂ ಒಮ್ಮೊಮ್ಮೆ ಕೆಳಗೆ ಬೀಳುತ್ತದೆ. ಒಮ್ಮೊಮ್ಮೆ ಪಕ್ವವಾದರೂ ಬೀಳುವುದಿಲ್ಲ. ಮಗುವು ಋಜುಮಾರ್ಗದಿಂದ ಗರ್ಭದಿಂದ ಹೊರಗೆ ಬರುವುದುಂಟು. ಅಡ್ಡಮಾರ್ಗದಿಂದ ಬರುವುದೂ ಉಂಟು. ಗರ್ಭದಿಂದ ಹೊರಗೆ ನಮ್ಮ ಇಚ್ಛೆಯಿಂದ ಬರುವುದಿಲ್ಲ. ಮಗುವು ಹುಟ್ಟಿದ ಗತಿಗೆ ತಾಯಿಯ ಸ್ತನ್ಯಪಾನ ಮಾಡುತ್ತದೆ. ಸ್ತನ್ಯಕ್ಕೋಸ್ಕರ ಅಳುತ್ತದೆ. ಇದೆಲ್ಲಾ ಅವರವರ ಕರ್ಮಾನುಸಾರ ಮಾಡುವ ಈಶ್ವರ ವ್ಯಾಪಾರವಲ್ಲದೆ ಬೇರೆ ಕಾರಣವನ್ನು ಹೇಳಲು ಶಕ್ಯವಾಗುವುದಿಲ್ಲ. ಪಂಚಭೂತಗಳ ಸ್ವಭಾವದಿಂದಲೇ ಆಗುವುದಾದರೆ ಎಲ್ಲಾ ಕಡೆ ಒಂದೇ ತರಹವಾಗಬೇಕಲ್ಲವೇ? ಒಂದೊಂದು ಜಾತಿಯ ವೃಕ್ಷಗಳಲ್ಲಿ ನಾನಾ ತರದ ಎಲೆಗಳು, ಪುಷ್ಪಗಳು, ನಾನಾ ಬಣ್ಣಗಳು, ನಾನಾ ರಸಗಂಧಗಳು ಕಾಣುತ್ತವೆ. ಪ್ರಾಣಿಗಳು ಬಹು ವಿಚಿತ್ರಗಳಾಗಿವೆ. ಇಂಥಾ ಬಹು ವಿಚಿತ್ರ ಜಗತ್ತನ್ನು ಬಹುಪ್ರಕಾರ ಮಾಡತಕ್ಕ ಈಶ್ವರನು ಅನಂತಶಕ್ತಿ ಮತ್ತು ಅನಂತಗುಣವುಳ್ಳವನು ಎಂದು ಸಿದ್ಧವಾಗುತ್ತದೆ.

ವಿಜ್ಞಾನಿಗಳು ಕೆಲವರು ಪ್ರತಿಯೊಂದು ಕಾರ್ಯಕ್ಕೂ ಕಾರಣವನ್ನು ಹುಡುಕಿದರೂ ಅದರ ಮೂಲ ಕಾರಣವನ್ನು ಕಂಡಿಹಿಡಿಯಲು ಸಮರ್ಥರಾಗುವುದಿಲ್ಲ. ಹಂಸಪಕ್ಷಿಯು ಹಾಲು ನೀರು ಬೆರೆಸಿ ಇಟ್ಟಾಗ ನೀರನ್ನು ಬಿಟ್ಟು ಹಾಲನ್ನು ಬೇರೆ ಮಾಡಿ ಕುಡಿಯುತ್ತದೆ. ಕಾಗೆಗೆ ಅದು ಸಾಧ್ಯವಾಗುವುದಿಲ್ಲ. ಅದು ಏನು ಕಾರಣ ಎಂದು ಕೇಳಿದರೆ ವಿಜ್ಞಾನಿಯು ಹೇಳುತ್ತಾನೆ –ಹಂಸಪಕ್ಷಿಯ ಕೊಕ್ಕಿನಲ್ಲಿ ಲವಣ ರಸವುಳ್ಳ ಮಾಂಸಖಂಡ ಇದೆ. ಕಾಗೆಯ ಕೊಕ್ಕಿನಲ್ಲಿ ಅದು ಇಲ್ಲ ಎಂದು. ಈ ಕಾರಣವನ್ನು ಹೇಳಿದಾಗ ಅದರ ಮೇಲೆ ಕಾಗೆಯ ಕೊಕ್ಕಿನಲ್ಲಿ ಆ ಮಾಂಸಖಂಡವು ಏಕೆ ಸೃಷ್ಟಿಯಾಗಲಿಲ್ಲ ಎಂದು ಕೇಳಿದರೆ ನಿರುತ್ತರನಾಗುತ್ತಾನೆ. ಆದುದರಿಂದ ದೃಷ್ಟ ಕಾರಣಕ್ಕೆ ಅದೃಷ್ಟಕಾರಣವು ಇರಲೇಬೇಕು. ಆ ಅದೃಷ್ಟ ಕಾರಣಕ್ಕೆ ಬೇರೆ ಒಂದು ಅದೃಷ್ಟ ಕಾರಣ ಹೀಗೆ ಪರ್ಯವಸಾನ ಇಲ್ಲದೆ ಅನಂತ ಕಾರಣವನ್ನು ಒಪ್ಪಿದರೆ ಅನವಸ್ಥಾ ಅಥವಾ ಗೌರವದೋಷವು ಪ್ರಾಪ್ತವಾಗುತ್ತದೆ. ಆದುದರಿಂದ ಈ ದೃಷ್ಟಕಾರ್ಯಕ್ಕೆ ಕಾರಣವಾದದ್ದು ಅದೃಷ್ಟವಾದ ಅನಾದಿಯಾದ ವಸ್ತುವು ಇದೆ. ಅದಕ್ಕೆ ಇನ್ನೊಂದು ಕಾರಣ ಬೇಡವೆಂದೇ ಕಲ್ಪಿಸುವುದು ಯೋಗ್ಯವಾಗುತ್ತದೆ. ಆ

ಅನಾದಿಯಾದ ಕಾರಣವು ಚೇತನವೆಂದರೆ ಈಶ್ವರನು ಇದ್ದಾನೆಂದು ಒಪ್ಪಿದಂತಾಯಿತು. ಅದು ಅಚೇತನವೆಂದರೆ ಅದರಿಂದ ಯಾವಾಗ ಈ ಸೃಷ್ಟಿಯಾಯಿತೋ ಅದಕ್ಕಿಂತ ಮೊದಲು ಈ ಜಗತ್ತನ್ನು ಏಕೆ ಅದು ಸೃಷ್ಟಿಮಾಡಲಿಲ್ಲ? ಅದಕ್ಕೆ ಸಹಕಾರಿ ಇದ್ದಿಲ್ಲ ಎಂದರೆ ಆ ಸಹಕಾರಿಯು ಯಾವುದರಿಂದ ಹುಟ್ಟಬೇಕು. ಅದು ಬೇರೆ ಕಾರಣದಿಂದ ಎಂದರೆ ಅದು ಮತ್ತೊಂದು ಕಾರಣದಿಂದ ಈ ರೀತಿ ಅನಂತ ಕಾರಣಗಳನ್ನು ಒಪ್ಪಿದ್ದರಿಂದ ಗೌರವ ದೋಷವು ಪ್ರಾಪ್ತವಾಗುತ್ತದೆ. ಆ ಸಹಕಾರಿಯೂ ಅನಾದಿ ಎಂದು ಹೇಳಿದರೆ, ಸಹಕಾರಿಯೂ ಅನಾದಿಯಾಗಿರುವಾಗ ಮೊದಲೇ ಜಗಸ್ಸೃಷ್ಟಿಯು ಏಕೆ ಆಗಲಿಲ್ಲ? ಅನಾದಿ ಚೇತನನಾದ ಈಶ್ವರನು ಇದ್ದಾನೆಂದರೆ ಅವನಿಗೆ ಯಾವಾಗ ಜಗಸ್ಸೃಷ್ಟಿ ಮಾಡಬೇಕೆಂದು ಇಚ್ಛೆ ಇದೆಯೋ ಆವಾಗ ಜಗಸ್ಸೃಷ್ಟಿಯು ಆಯಿತು ಎಂದು ಸಮಾಧಾನ ಹೇಳಬಹುದು. ಅದಕ್ಕೋಸ್ಕರ ಚೇತನನಾದ ಈಶ್ವರನನ್ನು ಒಪ್ಪಬೇಕು ಮತ್ತು ಈ ಗಡಿಗೆ ಎಂಬ ಕಾರ್ಯ ಹುಟ್ಟಬೇಕಾದರೆ ಮಣ್ಣು ಬೇಕು. ಅದಕ್ಕೆ ಪರಿಣಾಮಿಕಾರಣ ಎಂದು ಹೆಸರು. ಆ ಮಣ್ಣಿನ ಪರಿಣಾಮಕ್ಕೆ ಒಬ್ಬ ಕರ್ತಾ ಚೇತನ ಬೇಕು. ಹಾಗೆ ಈ ಜಗತ್ತು ಸೃಷ್ಟಿಯಾಗಬೇಕಾದರೆ, ಗಡಿಗೆಗೆ ಮಣ್ಣಿನ ಸ್ಥಾನದಲ್ಲಿ ಪ್ರಕೃತಿಯು ಇದೆ. ಆದರೂ ಕರ್ತೃಭೂತನಾದ ಈಶ್ವರನು ಗಡಿಗೆಗೆ ಕುಲಾಲನಂತೆ ಬೇಕಾಗುತ್ತದೆ.

ನದಿಯ ಆಚೆ ಈಚೆ ದಡಗಳು ತನ್ನಷ್ಟಕ್ಕೆ ಒರಿದು ಬೀಳುತ್ತವೆ. ಅದಕ್ಕೆ ಒಬ್ಬ ಕರ್ತೃ ಇಲ್ಲ. ಅದರಂತೆ ಈ ಜಗತ್ತಿಗೆ ಕರ್ತನಾದ ಈಶ್ವರನು ಬೇಡವೆಂದರೆ ಈ ಜಗತ್ತು ಉಂಟಾಗಲಿಕ್ಕೆ ಪರಿಣಾಮ ಕಾರಣವು ಬೇಡ. ಏಕೆಂದರೆ ಬೀಜಹಾಕದೆ ಅರಣ್ಯಗಳಲ್ಲಿ ಮಾವಿನ ಮರಗಳು ಆಗುತ್ತವೆ. ಅಲ್ಲಿ ಬೀಜವೆಂಬುವ ಪರಿಣಾಮಿ ಕಾರಣ ಕಂಡಿಲ್ಲ. ಅದರಂತೆ ಈ ಜಗತ್ತಿಗೂ ಪರಿಣಾಮಿಕಾರಣ ಇಲ್ಲದಿದ್ದರೆ ಏನಾಗುತ್ತದೆ? ಅಲ್ಲಿ ಎಲ್ಲಿಂದೋ ಗಾಳಿಗೆ ಮಾವಿನ ಬೀಜ ಬಂದು ಬಿದ್ದಿರಬೇಕು ಎಂದು ಕಲ್ಪಿಸುವುದಾದರೆ, ಅಂದರೆ ಅಲ್ಲಿ ಬೀಜ ಪ್ರತ್ಯಕ್ಷ ಪ್ರಮಾಣದಿಂದ ಸಿದ್ಧವಾಗದೇ ಇದ್ದರೂ ಗಡಿಗೆಗೆ ಪರಿಣಾಮಿಕಾರಣ ಬೇಕಾದ್ದರಿಂದ ಎಲ್ಲಾ ಕಾರ್ಯಕ್ಕೂ ಮಣ್ಣಿನಂತೆ ಪರಿಣಾಮಿಕಾರಣ ಇರಲೇಬೇಕೆಂದು ನಿಯಮ ಇಟ್ಟು ಕೊಂಡು ಬೀಜರೂಪ ಪರಿಣಾಮಿ ಕಾರಣವನ್ನು ಕಲ್ಪಿಸುವುದಾದರೆ, ಗಡಿಗೆಗೆ ಕರ್ತಾ ಇರುವುದು ಕಂಡಿದೆ. ಆದ್ದರಿಂದ ಅರಣ್ಯದಲ್ಲಿ ಹುಟ್ಟಿದ ಮಾವಿನಮರಕ್ಕೆ ಹಾಗೇ ನದೀದಡ ಬೀಳುವುದಕ್ಕೆ ಒಬ್ಬ ಕರ್ತಾ ಇದ್ದಾನೆಂದು ಕಲ್ಪಿಸಬಹುದು. ಅವನೇ ಈಶ್ವರನು, ಮತ್ತು ಲೋಕದಲ್ಲಿ ಮೋಟಾರ್ ಸ್ಟಾರ್ಟ್ ಆದಮೇಲೆ ಸುವ್ಯವಸ್ಥೆಯಿಂದ ರಸ್ತೆಯಲ್ಲಿಯೇ ಮೋಟಾರು ಹೋಗಬೇಕಾದರೆ, ಅದರಲ್ಲಿ ಒಳಗೆ ಡ್ರೈವರು ಕುಳಿತು ಕಾರ್ಯಮಾಡಬೇಕು. ಡ್ರೈವರು ಮೋಟಾರಿನೊಳಗೆ ಇಲ್ಲವಾದರೆ, ಮೋಟಾರು ಅವ್ಯವಸ್ಥಿತವಾಗಿ ಹೋಗಿ ಅನರ್ಥಮಾಡುತ್ತದೆ. ಹಾಗೆ ಜಗತ್ತಿನಲ್ಲಿ ಸೂರ್ಯ ಚಂದ್ರಾದಿಗಳ ಉದಯಗತಿಗಳೇ ಮೊದಲಾದ ಕಾರ್ಯಗಳು ಸುವ್ಯವಸ್ಥಿತಗಳಾಗಿ ಯಾವಾಗಲೂ ಆಗುತ್ತಾ ಇವೆ. ಇದು ಕೇವಲ ಅಚೇತನವಾದ ಪ್ರಕೃತಿಯ ಕಾರ್ಯವೆಂದರೆ, ಇಷ್ಟು ಸುವ್ಯವಸ್ಥಿತವಾಗದೇ ಹೋಗಬೇಕಾಗಿತ್ತು. ಆದುದರಿಂದ

ಪ್ರಕೃತಿಯ ಒಳಗೆ ಈಶ್ವರನು ಮೋಟಾರಿನ ಒಳಗೆ ಡ್ರೈವರು ಇದ್ದಂತೆ ಸುವ್ಯವಸ್ಥಿತಿಯನ್ನು ಮಾಡತಕ್ಕವನಾಗಿ ಇದ್ದಾನೆಂದು ತಿಳಿಯುತ್ತದೆ.

೮. ೧೪. ಅದ್ವೈತಮತದಲ್ಲಿರುವ ಪರಸ್ಪರ ವಿರೋಧಗಳು

1. ಬ್ರಹ್ಮನು ಜ್ಞಾನರೂಪನು, ಆದರೆ ಆ ಜ್ಞಾನಕ್ಕೂ ಘಟಾದಿ ಜಡಪದಾರ್ಥಗಳಿಗೂ ಏನೂ ವ್ಯತ್ಯಾಸವಿಲ್ಲ; ಘಟಾದಿಗಳು ಹೇಗೆ ಯಾವುದನ್ನೂ ವಿಷಯೀಕರಿಸುವುದಿಲ್ಲವೋ ಹಾಗೆ ಬ್ರಹ್ಮರೂಪ ಜ್ಞಾನವು ಏನನ್ನೂ ವಿಷಯೀಕರಿಸಿಸುವುದಿಲ್ಲ ಎಂದು ಅದ್ವೈತಿಗಳು ಅಂಗೀಕರಿಸುತ್ತಾರೆ. ಆದರೆ ಇವರ ಈ ಹೇಳಿಕೆಯು ತೀರಾ ವಿರುದ್ಧವಾಗುತ್ತದೆ. ಈತನು ಮನುಷ್ಯನು ನಡೆಯುತ್ತಾನೆ, ನೋಡುತ್ತಾನೆ, ಕೇಳುತ್ತಾನೆ. ಆದರೆ ಇವನಿಗೆ ಕಾಲಿಲ್ಲ ಕಣ್ಣಿಲ್ಲ ಕಿವಿಯಿಲ್ಲ ಎಂಬಂತೆ.
2. ಬ್ರಹ್ಮನು ಜ್ಞಾನರೂಪನು, ಅವನಲ್ಲಿ ಅಜ್ಞಾನವಿದೆ ಎಂಬ ಇವರ ಹೇಳಿಕೆಯೂ ವಿರುದ್ಧವಾಗಿದೆ. ಸೂರ್ಯನು ಪ್ರಕಾಶರೂಪನು ಅವನಲ್ಲಿ ಕತ್ತಲೆ ಇದೆ ಎಂಬಂತೆ.
3. ಬ್ರಹ್ಮನು ಸತ್ ಎಂದು ಅದ್ವೈತಿಗಳು ಹೇಳುತ್ತಾರೆ. ಆದರೆ ಅವನಲ್ಲಿ 'ಸತ್ವ' ಎಂಬ ಧರ್ಮ ಮಾತ್ರ ಇಲ್ಲವೆನ್ನುತ್ತಾರೆ. ಯಾಕೆಂದರೆ ಸತ್ವರೂಪಧರ್ಮವನ್ನು ಬ್ರಹ್ಮನಲ್ಲಿ ಒಪ್ಪಿದರೆ ಬ್ರಹ್ಮನು ನಿರ್ಧರ್ಮಕನು ಎಂಬ ಅವರ ಪರಮ ಸಿದ್ಧಾಂತವೇ ಹಾಳಾಗುವುದಿಲ್ಲವೇ? ಆದರೆ ಈ ಇವರ ಹೇಳಿಕೆಯು "ಇವನು ಬ್ರಾಹ್ಮಣನೇನೋ ನಿಜ, ಆದರೆ ಇವನಲ್ಲಿ ಬ್ರಾಹ್ಮಣ್ಯವಿಲ್ಲ. ಇವನು ಧನಿಕನೇನೋ ನಿಜ, ಧನ ಮಾತ್ರ ಇವನಲ್ಲಿಲ್ಲ" ಎಂಬಂತೆ ಆಗುತ್ತದೆ.
4. ಬ್ರಹ್ಮನು ಸತ್ ಆಗಿದ್ದಾನೆ. ಆದರೆ ಅವನಲ್ಲಿ (ಅದ್ವೈತಮತ ಪ್ರಕಾರ) ಅಸತ್ತಿನ ದೆಸೆಯಿಂದ ಭೇದವಿಲ್ಲವೆನ್ನುತ್ತಾರೆ. ಇದು ನನ್ನ ತಾಯಿಯು ಬಂಜೆ ಎಂದು ಹೇಳಿದಂತಾಗುತ್ತದೆ.
5. ಬ್ರಹ್ಮನು ಸರ್ವವ್ಯಾಪಕನು, ಆದರೆ ಅವನು ವ್ಯಾಪಿಸಿರುವಂಥ 'ಸರ್ವ' ಎಂಬುದು ಮಿಥ್ಯಾ ಅಂದರೆ ಇಲ್ಲ ಎಂದು ಹೇಳುತ್ತಾರೆ. ಇದು 'ಇವನು ಮಹಾರಾಜನು, ಆದರೆ ಇವನಿಗೆ ಆಳಲ್ಪಡುವ ಸ್ಥಳ ಮಾತ್ರ ಗೋಷ್ಪಾದದಷ್ಟೂ ಇಲ್ಲ' ಎಂಬ ಹೇಳಿಕೆಗೆ ಸರಿಹೋಗುತ್ತದೆ.
6. ಬ್ರಹ್ಮನು ಎಂದು ಅವರು ಯಾವುದನ್ನು ಕರೆಯುತ್ತಾರೆಯೋ ಅದಕ್ಕೂ ಬ್ರಹ್ಮ ಎಂಬ ಶಬ್ದಕ್ಕೂ ಯಾವ ಸಂಬಂಧವೂ ಇಲ್ಲ ಎನ್ನುತ್ತಾರೆ. ಯಾಕೆಂದರೆ, ಬ್ರಹ್ಮನು 'ಅಸಂಗ'ನೆಂಬ ತಮ್ಮ ಸಿದ್ಧಾಂತ ರಕ್ಷಿಸಬೇಕಲ್ಲವೇ?
7. ಅದ್ವೈತಿಗಳ ವಿಚಾರ ಸರಣಿಯ ಇನ್ನೊಂದು ಚಮತ್ಕಾರವಿಲ್ಲಿದೆ. ಪ್ರಮಾಣಗಳಿಗೆ ಯಾವುದು ವಿಷಯವಲ್ಲವೋ ಅಂದರೆ ಪ್ರತ್ಯಕ್ಷ, ಅನುಮಾನ,

ಆಗಮಗಳೆಂಬ ಪ್ರಮಾಣಗಳಿಂದ ಯಾವುದು ತಿಳಿಯುವುದಿಲ್ಲವೋ ಅಂಥ ಬ್ರಹ್ಮನು ಸತ್ಯ ಎಂದು ಅನ್ನುತ್ತಾರೆ. ಪ್ರಮಾಣಗಳಿಂದ ಸಿದ್ಧವಾದ ಈ ಜಗತ್ತು ಇವರಿಗೆ ಮಿಥ್ಯೆಯಾಗಿದೆ.

8. ಪ್ರಮಾಣಾಂತರದಿಂದ ಸಿದ್ಧವಾಗುವ ಕಾರಣ ಶಾಸ್ತ್ರವು ಬ್ರಹ್ಮನನ್ನು ಅನುವಾದಮಾಡಿ ನಿಷೇಧಿಸುವುದಿಲ್ಲವೆನ್ನುವ ಅದ್ವೈತಿಗಳು ಇತರ ಪ್ರಮಾಣಗಳಿಂದ ಸಿದ್ಧವಾಗದ ಧರ್ಮಾದಿಗಳನ್ನು ಮಾತ್ರ ಶಾಸ್ತ್ರವು ಅನುವಾದಮಾಡಿ ನಿಷೇಧಿಸುವುದೆಂದು ಹೇಗೆ ಅನ್ನುತ್ತಾರೆ? ಇದು ಪಕ್ಷಪಾತ ಅಲ್ಲವೇ?

9. ಅದ್ವೈತಿಗಳು ವಿಶ್ವವು ಮಿಥ್ಯಾ ಎಂದು ಹೇಳುತ್ತಾರೆ. ಈ ಮಿಥ್ಯಾತ್ವವೂ ಸುಳ್ಳು ಅನ್ನುತ್ತಾರೆ. ವಿಶ್ವದಲ್ಲಿಯ ಮಿಥ್ಯಾತ್ವವು ಸುಳ್ಳಾದರೆ ವಿಶ್ವಕ್ಕೆ ಸತ್ಯತ್ವ ಇರಬೇಕಲ್ಲವೇ, ಅದೂ ಇಲ್ಲ ಎನ್ನುತ್ತಾರೆ. ಎಂಥ ವಿಚಿತ್ರವಾದವಿದು!

10. ನಾನೇ ರಾಜನೆಂದು ಹೇಳುವವರಿಗೆ ಕಾರಾಗೃಹ ವಾಸವಾಗುವದಂತೆ. ಆದರೆ ನಾನೇ ಬ್ರಹ್ಮನೆಂದು ಹೇಳುವವರಿಗೆ ಮಾತ್ರ ಮುಕ್ತಿಯಂತೆ. ಈಶ್ವರನು ನಮ್ಮಿಂದ ಕಲ್ಪಿತನು. ವಾಸ್ತವಿಕ ಈಶ್ವರನು ಇಲ್ಲ ಎಂದು ಹೇಳುವ ಅದ್ವೈತಿಗಳು ನಾಸ್ತಿಕರಲ್ಲ. ಆದರೆ ಚಾರ್ವಾಕರು ಈಶ್ವರನಿಲ್ಲವೆಂದು ಹೇಳಿದರೆ ಅವರನ್ನು ನಾಸ್ತಿಕರೆಂದು ಇವರು ನಿಂದಿಸುತ್ತಾರೆ!

11. ದೇವರಲ್ಲಿ ಮಾಹಾತ್ಮ್ಯಗಳಾವುವೂ ಇಲ್ಲ. ಎಲ್ಲವು ಮಿಥ್ಯಾ. ಆದರೆ ಹೀಗೆ ಹೇಳುವ ಇವರೇ ದೇವರಲ್ಲಿ ಭಕ್ತಿ ಮಾಡುತ್ತಾರೆ. ಯಾವ ಮಹಿಮೆ ಇಲ್ಲದವನಲ್ಲಿ ಭಕ್ತಿ ಹೇಗೆ ಬರುತ್ತದೆಂಬ ವಿಷಯ ಇವರಲ್ಲಿಯೇ ಕಲಿಯಬೇಕು.

12. ಅದ್ವೈತಮತದಲ್ಲಿ ತತ್ತ್ವವು ಸರ್ವಥಾ ಅಜ್ಞೇಯವಾದರೂ ಅದ್ವೈತಿಗಳು ಮಾತ್ರ ತತ್ತ್ವಜ್ಞಾನಿಗಳೇ!

13. ವೇದಗಳು ಅತತ್ತ್ವಾವೇದಕಗಳಾದರೂ ಪ್ರಮಾಣಗಳೆಂದೇ ಇವರ ಮತ.

14. ಕಬ್ಬಿಣದಲ್ಲಿ ಬೆಳ್ಳಿಯ ಭ್ರಮೆಯು ಬರುವುದಿಲ್ಲ. ಯಾಕೆಂದರೆ ಸಾದೃಶ್ಯವಿಲ್ಲದಿರುವುದರಿಂದ. ಆದರೆ ಪ್ರಪಂಚದ ಸಾದೃಶ್ಯವಿಲ್ಲದಿದ್ದರೂ ಬ್ರಹ್ಮನಲ್ಲಿ ಪ್ರಪಂಚಭ್ರಮೆ ಬರುತ್ತದೆ!

●

